THE

KARNATAKA GRANTHAMALA

SERIES No. 82.

ರಾಯಾಶ್ವರುವಿಜಯು.

(೧ ನೆಯ ಭಾಗ)

MYSORE.

THE G. T. A. PRESS,

1919.

ಪೀಠಿಕೆ

ಈ ಕಾದಂಬರಿಯು ಆಂಧ್ರಭಾಷೆಯಲ್ಲಿ ರಚಿತವಾಗಿರುವ "ರಾಯಚೂರುಯುದ್ಧವು" ಎಂಬ ಗ್ರಂಥದ ಪರಿವರ್ತನವು. ಮ|| ರಾ|| ಕೇತವರಪು ವೆಂಕಟಶಾಸ್ತ್ರಿಗಳವರು ಈ ಮೂಲಗ್ರಂಥವನ್ನು ವಿರಚಿಸಿ ಮದರಾಸಿನಲ್ಲಿರುವ ವಿಜ್ಞಾನಚಂದ್ರಿಕಾಮಂಡಲಿಯವರಿಗೆ ಒಪ್ಪಿಸಲು, ಅವರು ಅದನ್ನು ಪರಿಗ್ರಹಿಸಿ ತಮ್ಮ ಮಂಡಲಿಯಿಂದ ಪ್ರಕಟಿಸಿದರು. ಕನ್ನಡದಲ್ಲಿ ರಚಿತವಾಗಿರುವ ಅನೇಕ ಕಾದಂಬರಿಗಳು ತೆಲುಗಿಗೆ ಪರಿವರ್ತಿತವಾಗಿರುವಂತೆಯೇ, ತೆಲುಗಿನಲ್ಲಿ ರಚಿತವಾಗಿರುವ ಕೆಲವು ದೊಡ್ಡ ಕಾದಂಬರಿಗಳನ್ನು ಕನ್ನಡಕ್ಕೆ ಪರಿವರ್ತನಮಾಡುವುದೂ ಒಳ್ಳೆಯದೆಂದು ಭಾವಿಸಿ, ನಾನು "ರಾಯಚೂರುಯುದ್ಧ"ವನ್ನು ಕನ್ನಡಕ್ಕೆ ಪರಿವರ್ತಿಸಲು ಅನುಮತಿಯನ್ನು ಕೇಳಿಕೊಳ್ಳಲಾಗಿ ಮಂಡಲಿಯವರು ಘನೌದಾರ್ಯದಿಂದ ತಮ್ಮ ಮಂಡಲಿಯ ಕಾದಂಬರಿಗಳನ್ನು ಪರಿವರ್ತಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅನುಗ್ರಹಿಸಿದರು. ಇದಕ್ಕಾಗಿ ವಿಜ್ಞಾನಚಂದ್ರಿಕಾಮಂಡಲಿಯವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಪರಿವರ್ತನದಲ್ಲಿ ಮೂಲವನ್ನೇ ಬಹಳಮಟ್ಟಿಗೆ ಅನುಸರಿಸಲಾಗಿದೆ. ಆದರೂ ಅಲ್ಲಲ್ಲಿ ಕೆಲವು ಭೇದಗಳು ಕಂಡುಬರುವುವು; ವರ್ಣನೆಯು ಬಹಳ ವಿಸ್ತಾರವಾಗಿದ್ದ ಒಂದೆರಡು ಕಡೆಗಳಲ್ಲಿ ಸ್ವಲ್ಪಮಟ್ಟಿಗೆ ಸಂಕ್ಷೇಪಿಸಿದೆ; ವರ್ಣನೆಯು ಸಂಕ್ಷಿಪ್ತವಾಗಿದ್ದ ಮತ್ತೆ ಕೆಲವುಕಡೆ ಸ್ವಲ್ಪಹೆಚ್ಚಾಗಿ ವರ್ಣನಾಭಾಗವನ್ನು ಸೇರಿಸಿದೆ; ಅನೇಕ ಪ್ರಕರಣಗಳ ಆದಿಭಾಗದಲ್ಲಿ ಸಂದರ್ಭೋಚಿತವಾದ ಶ್ಲೋಕಗಳನ್ನು ಹೊಸದಾಗಿ ಸೇರಿಸಿದೆ. ಈ ಅಲ್ಪಸ್ವಲ್ಪ ವ್ಯತ್ಯಾಸಗಳಿಂದ ಕಥಾಭಾಗವು ಸ್ವಲ್ಪವೂ ವ್ಯತ್ಯಾಸವಾಗಿಲ್ಲವೆಂದು ಹೇಳ

ಬಹುದು. ಈ ಗ್ರಂಥದಲ್ಲಿ ರಾಯಚೂರುದುರ್ಗವನ್ನು ಜಯಿಸಿ ಹಿಡಿದುಕೊಂಡ ವೃತ್ತಾಂತವು ಆಮೂಲಾಗ್ರವಾಗಿ ವರ್ಣಿತವಾಗಿರುವುದರಿಂದ ಈ ಗ್ರಂಥಕ್ಕೆ "ರಾಯಚೂರುವಿಜಯ" ವೆಂದು ಹೆಸರನ್ನಿಟ್ಟಿರುವುದು.

ಕರ್ನಾಟಕಭಾಷೆಯಲ್ಲಿ ಕಾದಂಬರಿಗಳು ನೂರಾರು ಹುಟ್ಟುತ್ತಿರುವ ಈ ಕಾಲದಲ್ಲಿ ಇದೊಂದು ಪುಸ್ತಕದ ಅವಶ್ಯಕತೆಯೇನಿತ್ತೆಂದು ಪೂರ್ವಪಕ್ಷವೊಂದು ಹುಟ್ಟಬಹುದು. ಕಾದಂಬರಿಗಳೇನೋ ಕನ್ನಡದಲ್ಲಿ ಅನೇಕವಾಗಿವೆ ಮತ್ತೆ ಮತ್ತೆಯೂ ಹುಟ್ಟುತ್ತಲೂ ಇವೆ. ಆದರೆ ಭಾಷೆಯಲ್ಲಿ ಗೊತ್ತುಗೊತ್ತು ಕಾದಂಬರಿಗಳು ವಿರಳವೆನ್ನಬಹುದು; ಚರಿತ್ರವಿಷಯಕವಾದ ಗೊತ್ತು ಕಾದಂಬರಿಗಳು ಇನ್ನೂ ಸ್ವಲ್ಪವೇ, ಪ್ರಸಿದ್ಧವಾದ ವಿಜಯನಗರಸಾಮ್ರಾಜ್ಯವನ್ನು ಕುರಿತ ಕಾದಂಬರಿಗಳಂತೂ ಮತ್ತೂ ಕಡಿಮೆ. ಆದುದರಿಂದ ಇಂತಹ ಒಂದು ಗ್ರಂಥವು ಕನ್ನಡದಲ್ಲಿ ರಚಿತವಾದರೆ ಭಾಷೆಗೆ ಹೊರೆಯಾಗಲಾರದೆಂದು ಭಾವಿಸಿ, ಈ ಗ್ರಂಥವನ್ನು ಪ್ರಚುರಪಡಿಸಲಾಗಿದೆ.

ಈ ಗ್ರಂಥವನ್ನು "ಕರ್ಣಾಟಕಗ್ರಂಥಮಾಲೆ" ಯಲ್ಲಿ ಪ್ರಚುರಪಡಿಸಲು ಸಹಾಯಸಂಪತ್ತಿಗಳನ್ನು ಒದಗಿಸಿಕೊಟ್ಟ ಮ|| ರಾ|| ಬಸ್ತಿ ಸುಬ್ಬರಾವ್, ಬಿ. ಎ. ಅವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ

ಇತಿ

ಮೈಸೂರು,
೧-೩-೧೯೨೧.

ಸಜ್ಜನವಿಧೇಯ,
ಬಿ. ಕೃಷ್ಣಪ್ಪ, ಎಂ. ಎ.

ವಿಷಯಸೂಚಿಕೆ

ಪ್ರಥಮಭಾಗ

ದ್ವಿತೀಯಭಾಗ

ರಾಯಚೂರುವಿಜಯ

ಮೊದಲನೆಯ ಭಾಗ

—⋙❋⋘—

ಮೊದಲನೆಯ ಪ್ರಕರಣ

ಒಬ್ಬ ಪೂತವಧುಗುಣ.

ವನೇ ರಣೇ ಶತ್ರುಜಲಾಗ್ನಿಮಧ್ಯೇ | ಮಹಾರ್ಣವೇ ಪರ್ವತಮಸ್ತಕೇ ವಾ ||
ಸುಪ್ತಂ ಪ್ರಮತ್ತಂ ವಿಷಮಸ್ಥಿತಂ ವಾ | ರಕ್ಷಂತಿ ಪುಣ್ಯಾನಿ ಪುರಾಕೃತಾನಿ ||

ಭರ್ತೃಹರಿ

ಕ್ರಿಸ್ತಶಕದ ೧೫೨೦ನೆಯ ವರುಷದಲ್ಲಿ ಮೊದಲನೆಯ ತಿಂಗಳು ಕಳೆದು ಎರಡನೆಯದು ಪ್ರಾರಂಭವಾಗಿದ್ದಿತು. ಚಾಂದ್ರಮಾನರೀತಿಯಿಂದ ಆಗ ಮಾಘಮಾಸವು. ಸಮಶೀತೋಷ್ಣವಾದ ವಾಯುಗುಣವುಳ್ಳದರಿಂದ ಆ ಕಾಲವು ಜನರಿಗೆ ಅತ್ಯಂತಸುಖದಾಯಕವಾಗಿದ್ದಿತು. ದಿನಮಣಿಯು ಆಕಾಶ ಮಧ್ಯವನ್ನು ಅಲಂಕರಿಸಿದಾಗ ಬಿಸಿಲಿನ ತಾಪದಿಂದ ಪಾಂಥನಿಚಯವು ಬಳಲುತ್ತಿದ್ದರೂ, ಆಗಾಗ ಮೆಲ್ಲಮೆಲ್ಲಗೆ ಸುಳಿದೋರುತ್ತಿದ್ದ ಕಿರುಗಾಳಿಯು ಅವರ ಬಳಲಿಕೆಯನ್ನು ಕಡಿಮೆಮಾಡುತ್ತಿದ್ದಿತು. ಗ್ರೀಷ್ಮಶೀತಕಾಲಗಳಲ್ಲಂತಲ್ಲದೆ, ಎಲ್ಲಿ ಮಲಗಿಕೊಂಡರೂ ಪ್ರಾಣಿಗಳಿಗೆ ಸುಖನಿದ್ರೆಯು ಬರುತ್ತಿದ್ದಿತು. ಕೃಷೀವಲರು ಶರತ್ಕಾಲದಲ್ಲಿ ಕೊಯ್ದು ಮೆದೆಹಾಕಿದ್ದ ಬೆಳೆಗಳನ್ನು ತುಳಿಸಿ ಧಾನ್ಯಗಳನ್ನು ತಮ್ಮತಮ್ಮ ಮನೆಗಳಿಗೆ ತಂದುಕೊಳ್ಳುತ್ತಿದ್ದರು. ಹೀಗೆ ಮನೆಯನ್ನು ಸೇರಿದ ಧಾನ್ಯಾದಿಗಳನ್ನು ಕಂಡು ಸಂತೋಷಭರಿತಾಂತರಂಗರಾದ ಕರ್ಷಕಸ್ತ್ರೀಯರು ತಮಗೆ ಆಭರಣಾದಿಗಳನ್ನು ತಂದುಕೊಡಬೇಕೆಂದು

ತಮ್ಮ ತಮ್ಮ ಪತಿಗಳನ್ನು ಪೀಡಿಸುತ್ತಿದ್ದರು. ಮಾಘಾದಿಪಂಚಕವೆಲ್ಲವೂ ಶುಭಕಾರ್ಯಗಳಿಗೆ ಪ್ರಶಸ್ತವಾಗಿದ್ದರೂ, ಜಲಾದಿಸಮೃದ್ಧಿಯು ವಿಶೇಷವಾಗಿರುವ ಶಿಶಿರಋತುವಿನಲ್ಲಿಯೇ ಅವುಗಳನ್ನು ನಡೆಯಿಸಬೇಕೆಂದು ಕೆಲವರು ಗೃಹಸ್ಥರು ಹವಣಿಸಿಕೊಳ್ಳುತ್ತಿದ್ದರು. ಉನ್ನತಪದವಿಯನ್ನನುಭವಿಸಿ ಕಾಲಕ್ರಮದಲ್ಲಿ ಧನಾದಿಗಳನ್ನು ಕಳೆದುಕೊಂಡಿದ್ದ ಮತ್ತೆ ಕೆಲವರು ಗೃಹಸ್ಥರು ತಮ್ಮ ಹಿಂದಣ ಘನತೆಯನ್ನು ಬಿಡಲಾರದೆ ತಮ್ಮ ಮಕ್ಕಳುಗಳ ಮದುವೆಗಳನ್ನು ಮಹಾವೈಭವದಿಂದ ನೆರವೇರಿಸಲೆಣಿಸಿ, ಪಿತ್ರಾರ್ಜಿತವಾದ ತಮ್ಮ ಹೊಲಗದ್ದೆಗಳನ್ನು ಮಾರಲು ವರ್ತಕರ ಬಳಿಗೆ ಸುತ್ತುತ್ತಿದ್ದರು.

ಇಂತಹ ಮಾಘಮಾಸದಲ್ಲಿ, ಒಂದು ದಿನ ಸಾಯಂಕಾಲ ಮೂವರು ಪುರುಷರು ತುಂಗಭದ್ರಾತೀರದಲ್ಲಿದ್ದ ದಾರಿಯಲ್ಲಿ ನಿಂತುಕೊಂಡು ಮಾತನಾಡಿಕೊಳ್ಳುತ್ತಿದ್ದರು. ಆ ಮಾರ್ಗದ ಉಭಯಪಾರ್ಶ್ವಗಳಲ್ಲಿಯೂ ಮರಗಳು ನಿಬಿಡವಾಗಿ ಬೆಳೆದಿದ್ದುವು. ದಿಗಂತದವರೆಗೂ ವ್ಯಾಪಿಸಿದ್ದ ಕತ್ತಲೆಯ ದೆಸೆಯಿಂದ ಆ ದಾರಿಯು ಮತ್ತಷ್ಟು ಗಾಢಾಂಧಕಾರಮಯವಾಗಿದ್ದಿತು. ಇವರು ಮೂವರೂ ದೃಢತರಗಾತ್ರರಾಗಿ ಯುದ್ಧದಲ್ಲಿ ನಿಪುಣರಾಗಿದ್ದರು. ಪ್ರತಿಯೊಬ್ಬನ ಕೈಯಲ್ಲಿಯೂ ಒಂದೊಂದು ಕತ್ತಿಯಿದ್ದಿತು. ಇವರಲ್ಲಿ ಒಬ್ಬನ ಹೆಸರು ಪ್ರತಾಪರಾಯ; ಇನ್ನೊಬ್ಬನ ಹೆಸರು ಪ್ರಹರೇಶ್ವರಪಾತ್ರ; ಉಳಿದವನ ಹೆಸರು ರುದ್ರದೇವ. ಇವರ ಹೆಸರನ್ನು ನೋಡಿದರೆ ಇವರು ಉನ್ನತಕುಲಸಂಭೂತರೆಂದು ತೋರುತ್ತಿದ್ದಿತು. ಆದರೆ ಇವರ ಪ್ರವರ್ತನವು ಇಂತಹುದೆಂದು ತಿಳಿಯುವುದು ಕಷ್ಟವಾಗಿದ್ದಿತು. ಅಂತಹ ಸಮಯದಲ್ಲಿ, ಅಂತಹ ವಿಷಮಮಾರ್ಗದಲ್ಲಿ, ಕತ್ತಿಗಳನ್ನು ಹಿಡಿದು ಗುಟ್ಟಾಗಿ ಮಾತನಾಡಿಕೊಳ್ಳುತ್ತಿದ್ದುದನ್ನು ನೋಡಿದರೆ, ಇವರು ಕಳ್ಳರೋ ರಾಜದ್ರೋಹಿಗಳೋ ಆಗಿರಬೇಕೆಂಬ ಊಹೆ ಹುಟ್ಟುತ್ತಿದ್ದಿತು. ಮುಂದೆ ಹೇಳುವ ಮೇರೆಗೆ ಇವರು ಸಂಭಾಷಣೆಯನ್ನು ಮಾಡಿಕೊಳ್ಳುತ್ತಿದ್ದರು:—

ಪ್ರಹರೇ—“ಮಿತ್ರನೇ! ವಿಜಯನಗರರಾಜ್ಯಕ್ಕೆ ಮಂತ್ರಿಯಾದ ತಿಮ್ಮರಸನು ಮಹಾಬುದ್ಧಿಶಾಲಿ; ರಾಜ್ಯತಂತ್ರದಲ್ಲಿ ಆತನನ್ನು ಮೀರಿಸುವವರು ಮತ್ತೊಬ್ಬರಿಲ್ಲ, ಆತನನ್ನು ನೀನು ಬಲ್ಲೆಯಾ?”

ಪ್ರತಾಪ—“ಪ್ರಹರೇಶ್ವರಪಾತ್ರಾ! ನಾನು ಈ ಪ್ರಾಂತಕ್ಕೆ ಹೊಸ

ಖನು. ಆದುದರಿಂದ ನನಗೆ ಆತನ ಚರಿತ್ರೆಯು ಸ್ವಲ್ಪವೂ ಗೊತ್ತಿಲ್ಲ. ಆದರೂ ಆತನು ಬಹಳ ದೊಡ್ಡಮನುಷ್ಯನೆಂದು ಕೇಳಿರುವೆನು."

ಪ್ರಹರೀ—"ಕೃಷ್ಣದೇವರಾಯರಿಗೆ ಪ್ರಧಾನಮಂತ್ರಿಯಾದ ಆತನು ಅಪ್ರತಿಮಪ್ರತಿಭಾಶಾಲಿಯಾಗಿರುವನೆಂದು ಮಾತ್ರವಲ್ಲದೆ, ನಿರುಪಮಾನ ಪ್ರತಾಪವಂತನೆಂತಲೂ ಹೇಳಬಹುದು. ಕೃಷ್ಣರಾಯರ ಪರಾಕ್ರಮಕ್ಕೆ ಆತನ ಪ್ರತಿಭಾವಿಶೇಷವು ಸಹಾಯವಾಗುವುದರಿಂದಲೇ ಆ ಸಾರ್ವಭೌಮರಿಗೆ ಅಸಂಖ್ಯಾತವಿಜಯಗಳು ಉಂಟಾಗುತ್ತಲಿರುವುವು. ದೇಹಬಲಕ್ಕೆ ಸಹಾಯವಾಗಿ ಬುದ್ಧಿಬಲವೂ ಒದಗಿತೆಂದರೆ ಬಂಗಾರಕ್ಕೆ ಪರಿಮಳವುಂಟಾದಂತಲ್ಲವೆ ? ರುದ್ರದೇವಾ ! ಇದಕ್ಕೆ ನೀನೇನು ಹೇಳುವೆ ?"

ರುದ್ರ—"ನೀನು ಹೇಳುವುದು ಸತ್ಯವೆಂದು ನಾನೂ ಹೇಳಬಲ್ಲೆನು. ಅದೃಷ್ಟವೆಂದರೆ ಆತನದೇ ಸರಿ! ಮೊದಲು ಆತನು ಕಡುಬಡವನಾಗಿದ್ದು ಗುತ್ತಿ, ಚಂದ್ರಗಿರಿ ಮೊದಲಾದ ದುರ್ಗಗಳಲ್ಲಿ ಮಾಧುಕರವೃತ್ತಿಯಿಂದ ಜೀವಿಸುತ್ತ ಓದಿಕೊಂಡು, ವಿದ್ವಾಂಸನಾಗಿ, ತದ್ದುರ್ಗಾಧೀಶ್ವರರನ್ನಾಶ್ರಯಿಸಿ ತನ್ನ ಪ್ರತಿಭಾವಿಶೇಷದಿಂದ ಅವರನ್ನು ಸಂತೋಷಗೊಳಿಸಿ ಇಷ್ಟರವನಾದ ನಂತೆ! ಅದೃಷ್ಟವು ಆತನನ್ನು ಎಲ್ಲಿಂದ ಎಲ್ಲಿಗೆ ತಂದಿರುವುದೋ ನೋಡು."

ಪ್ರಹರೀ—"ಆತನ ಹೆಸರು ಬಹಳ ಕಾಲದಿಂದಲೂ ಕೇಳಬರುತ್ತಿದೆ. ಎಷ್ಟುದಿವಸದಿಂದ ಆತನು ಮಂತ್ರಿಪದವಿಯನ್ನು ವಹಿಸಿರುವನು ?"

ರುದ್ರ—"ನರಸರಾಯರ ಕಾಲದಲ್ಲಿ ಆತನು ಮಂತ್ರಿಪದಾಧಿಷ್ಠಿತನಾದನು. ಈವರೆಗೆ ಇಬ್ಬರು ರಾಜರುಗಳನ್ನು ನೋಡಿದುದಾಯಿತು. ಇನ್ನೆಷ್ಟು ಮಂದಿಯನ್ನು ನೋಡುವನೋ ?"

ಪ್ರತಾಪ—"ಇನ್ನು ಯಾರನ್ನೂ ನೋಡಲಾರನು; ಒಂದುವೇಳೆ ನೋಡಿದರೂ ಪ್ರೇತರಾಜನನ್ನು ಮಾತ್ರ ನೋಡಬಹುದು. ಮಹಾಬುದ್ಧಿಶಾಲಿಯಾದ ರಾಮಯಮಂತ್ರಿಯು ಆತನೊಡನೆ ಯಾವಾಗ ವಿರೋಧವನ್ನು ತಾಳಿದನೋ ಆಗಲೇ ಅವನ ಅವತಾರವು ಪೂರ್ತಿಯಾಯಿತೆಂದು ನಿಶ್ಚಯಿಸಬಹುದು. ರಾಮಯಮಂತ್ರಿಯು ಸಾಮಾನ್ಯನಲ್ಲ ! ಆಕಳಿಸಿದಮಾತ್ರಕ್ಕೆ ಹೊಟ್ಟೆಯೊಳಗೆ ಅಡಗಿರುವ ಕರುಳುಗಳೆಲ್ಲವನ್ನೂ ಶೋಧಿಸತಕ್ಕ ಶಕ್ತಿಯುಳ್ಳವನು. ಆತನ ಇದಿರಿಗೆ ಯಾರ ಆಟವೂ ನಡೆಯಲಾರದು. ರಾಮಯನ ಉಪಾಯಗಳನ್ನು ಭೇದಿಸುವ ಶಕ್ತಿಯುಳ್ಳವನು ಮತ್ತೊಬ್ಬನಿಲ್ಲ."

ಪ್ರಹರೀ—"ಹಾಗೆನ್ನಬೇಡ. ತಿಮ್ಮರಸನೂ ಸಾಮಾನ್ಯಪುರುಷನಲ್ಲ. ರಾಮಯಮಂತ್ರಿಯ ತಂತ್ರಗಳಿಗೆ ಪ್ರತಿತಂತ್ರಗಳನ್ನು ಏರ್ಪಡಿಸುವುದಾದ ಬಲ್ಲವನು ಆತನೊಬ್ಬನೇ. ಆ ದಿನ ರಾಮಯಮಂತ್ರಿಯು ಆತನನ್ನು ಹೇಗೆ ಹೊಗಳಿದನೋ ನೀನೇ ಜ್ಞಾಪಿಸಿಕೊ."

ರುದ್ರ—"ಅದು ಕೃತಯುಗದ ಮಾತು. ತಿಮ್ಮರಸನು ವೃದ್ಧನಾಗುತ್ತಿರುವನು. ಹಿಂದಣ ಪ್ರತಿಭಾವಿಶೇಷವು ಆತನಿಗೆ ಈಗ ಎಲ್ಲಿಂದ ಬಂದೀತು? ಮಾಗುವುದಕ್ಕೆ ಬಂದಿರುವ ಮರವು ಫಲಿಸುವುದುಂಟೆ?"

ಪ್ರಹರೀ—"ಹಾಗಲ್ಲ. ನಿನ್ನ ಊಹೆ ತಪ್ಪು. ಲೋಕದಲ್ಲಿ ಮಿಕ್ಕವರಿಗೆ ಮುಪ್ಪಿನಲ್ಲಿ ಪ್ರತಿಭೆಯು ಮಸುಳಬಹುದು. ಆ ಮಂತ್ರಿಗೆ ವಯಸ್ಸಾದಷ್ಟೂ ಲೋಕಾನುಭವವು ವೃದ್ಧಿಯಾಗಿ ಪ್ರತಿಭೆಯು ಇಮ್ಮಡಿಸುತ್ತಿರುವುದು."

ಪ್ರತಾಪ—"ಆ ರಾಜಮಂತ್ರಿಗಳ ದೆಸೆಯಿಂದ ಅನೇಕವಂಶಗಳು ಕ್ಷಯಿಸುತ್ತಿವೆ. ಅವರನ್ನು ಧ್ವಂಸಮಾಡುವರಾರೂ ಪ್ರಪಂಚದಲ್ಲಿ ಹುಟ್ಟದೆ ಇರುವರಲ್ಲಾ!"

ಪ್ರಹರೀ—"ಅದಕ್ಕೇನು? ನಾವು ಇಲ್ಲಿಗೆ ಬಂದ ಉದ್ದೇಶವನ್ನು ಕುರಿತು ಆಲೋಚಿಸಿ. ಆ ದುರಾತ್ಮನು ಈ ದಾರಿಯಲ್ಲಿಯೇ ಬರುವನೆಂಬ ನಂಬಿಕೆಯು ನಿಮಗಿರುವುದೇ?"

ರುದ್ರ—"ಇಲ್ಲದೆ ಏನು? ಅವನು ತಪ್ಪದೆ ಈ ದಾರಿಯಲ್ಲಿಯೇ ಬರುವನು. ಇದಕ್ಕೆ ಸಂಶಯವಿಲ್ಲ. ಇಲ್ಲಿ ಮರಗಳು ದಟ್ಟವಾಗಿ ಬೆಳೆದುಕೊಂಡಿರುವುದರಿಂದ ನಾವು ಇಲ್ಲಿರುವುದು ಯಾರಿಗೂ ತಿಳಿಯಲಾರದು. ಆದುದರಿಂದ ಈ ಸ್ಥಳವೇ ನಮಗೆ ಅನುಕೂಲವಾದುದು. ಅವನು ಈ ದಾರಿಯಲ್ಲಿ ಹೋಗುತ್ತಿರುವಾಗ ಅವನನ್ನು ಕೊನೆಗಾಣಿಸಿ ಈ ಮರಗಳ ಗುಂಪಿನೊಳಗೆ ಹೊಕ್ಕು ತಪ್ಪಿಸಿಕೊಳ್ಳಬಹುದು. ಹೀಗೆ ಮಾಡಿದುದೇ ಆದರೆ ನಮ್ಮನ್ನು ಬ್ರಹ್ಮದೇವನಾದರೂ ಕಂಡುಹಿಡಿಯಲಾರನು."

ಪ್ರಹರೀ—"ನೀನೆಂದಹಾಗೆಯೇ ಈ ಸ್ಥಳವು ನಮಗೆ ಅನುಕೂಲವಾಗಿರುವುದು. ತಿಮ್ಮರಸನು ಪರಾಕ್ರಮದಲ್ಲಿ ಅಸಮಾನನು. ಹಿಂದೆ ಅವನು ಈ ಮಾರ್ಗದಲ್ಲಿ ಹೋದಾಗ ಅವನ ಕೈಯಲ್ಲಿ ನಿಸ್ತುಲನಿಸ್ತ್ರಿಂಶವೊಂದಿದ್ದಿತು. ಇಷ್ಟೇ ಅಲ್ಲದೆ ಅವನು ಯುದ್ಧಕಲೆಯಲ್ಲಿ ನಿಸ್ಸೀಮನಂತೆ! ತಾನೇ ಸೇನಾಧಿ

ಪತ್ಯವನ್ನು ವಹಿಸಿ ಆತನು ಅನೇಕ ದುರ್ಗಗಳನ್ನು ಸ್ವಾಧೀನಪಡಿಸಿಕೊಂಡಿರುವನಂತೆ! ತ್ವರೆಪಟ್ಟು ಕೆಲಸ ಕೆಡಿಸಿಕೊಂಡುದೇ ಆದರೆ, ಆತನೇ ನಮ್ಮನ್ನು ಯಮಸದನಕ್ಕೆ ಅಟ್ಟುವನು. ಆದುದರಿಂದ ಪ್ರಮತ್ತರಾಗಿದ್ದುಕೊಂಡು ಕೆಲಸವನ್ನು ಕೆಡಿಸಿಕೊಳ್ಳಬಾರದು.''

ಪ್ರತಾಪ—''ಏಕೆ ಸುಮ್ಮನೆ ಹುಚ್ಚುಮಾತುಗಳನ್ನಾಡುವೆ? ನಮ್ಮ ಏಟು ತಗುಲಿದಮೇಲೆ ಅವನು ಬದುಕುವುದೆಲ್ಲಿ? ವಿಜಯನಗರರಾಜ್ಯಕ್ಕೆ ಆಧಾರಸ್ತಂಭದಂತಿರುವ ಇವನನ್ನು ಕಡೆಗಾಣಿಸಿದರೆ ವಿಜಯನಗರರಾಜ್ಯವು ತಾನಾಗಿಯೇ ನಾಶವಾಗುವುದು. ತಾಯಿಬೇರನ್ನು ಕಿತ್ತೆಸೆಯಲು ಮರವು ತಾನಾಗಿಯೇ ಒಣಗಿಬೀಳುವುದು. ನಾವು ಅವನನ್ನು ಹತಮಾಡಿದುದೇ ಆದರೆ ಜನರಿಗೆಲ್ಲಾ ಉಪಕಾರ ಮಾಡಿದಂತಾಗುವುದು. ನಾವು ಅಕಸ್ಮಾತ್ತಾಗಿ ನುಗ್ಗಿ ಅವನನ್ನು ಮುಗಿಸಿಕೊಂಡರೆ ಅವನ ಅವತಾರವು ಪೂರ್ತಿಯಾದಂತೆಯೇ ಸರಿ. ಇದಕ್ಕೆ ಸಂದೇಹವೇನೂ ಇಲ್ಲ.''

[illegible]—''ಅವನನ್ನು ಕೊಲ್ಲುವುದಕ್ಕೆ ಇಷ್ಟು ಆಲೋಚನೆಯೇಕೆ? ಅವನು ಅಸಹಾಯನಾಗಿ ಬರುವನು. ನಾವು ಹಿಂದುಗಡೆಯಿಂದ ನಿಶ್ಶಬ್ದವಾಗಿ ಹೋಗಿ, ಅವನು ಕುಳಿತಿರುವ ಕುದುರೆಯ ಕಾಲುಗಳನ್ನು ಕಡಿದು ಬಿಟ್ಟರೆ ಕುದುರೆಯೊಡನೆ ಅವನೂ ಭೂಮಿಮೇಲೆ ಬೀಳುವನು. ಆಗ ನಾವು ಅವನ ಮೇಲೆ ನುಗ್ಗಿ ಅವನನ್ನು ಸಂಹರಿಸಿಹಾಕಬಹುದು. ಈ ಹೊತ್ತಿಗೆ ಅವನಿಗೂ ಈ ಲೋಕಕ್ಕೂ ಇರುವ ಋಣಾನುಬಂಧವು ಮುಗಿದಂತೆಯೇ..... ಹುಷ್! ನಿಶ್ಶಬ್ದವಾಗಿರಿ. ಯಾರೋ ಬರುತ್ತಿರುವಹಾಗಿದೆ!''

ಕೂಡಲೆ ಅವರೆಲ್ಲರೂ ನಿಶ್ಶಬ್ದರಾದರು. ಆಗ ಒಬ್ಬ ಪುರುಷನು ಒಂದು ತುರಗಶ್ರೇಷ್ಠವನ್ನೇರಿ ವಿಜಯನಗರಾಭಿಮುಖವಾಗಿ ಹೋಗುತ್ತಿದ್ದನು. ಆತನು ಧರಿಸಿದ್ದ ವಸ್ತ್ರಾಭರಣಗಳನ್ನು ನೋಡಿದರೆ ಅಸಾಧಾರಣಪುರುಷನಂತೆ ಕಾಣುತ್ತಿದ್ದನು. ಆತನು ಧರಿಸಿದ್ದ ಚಿಹ್ನೆಗಳಿಂದ ಉನ್ನತಾಧಿಕಾರಿಯಾಗಿದ್ದನೆಂದೂ ತೋರುತ್ತಿದ್ದನು. ತಲೆಯ ಮೇಲಿದ್ದ ಶಿರಸ್ತ್ರಾಣದಲ್ಲಿ ಆತನ ತಲೆಯ ಕೂದಲು ಸೇರಿಹೋಗಿದ್ದುದರಿಂದ ಆತನ ವಯಸ್ಸು ಇಷ್ಟೆಂದು ನಿರ್ಧರಿಸಲು ಆಗುತ್ತಿರಲಿಲ್ಲ; ಆದರೆ ಮುಖದಲ್ಲಿ ಮೂಡಿದ್ದ ಸುಕ್ಕುಗಳಿಂದ ಆತನು ತನ್ನ ಜೀವಿತದ ಚರಮಾವಸ್ಥೆಯಲ್ಲಿದ್ದನೆಂದು ಊಹಿಸಬಹುದಾಗಿದ್ದಿತು.

ಆದರೂ ಆತನ ಮೈಕಟ್ಟು ಬಲವಾಗಿಯೇ ಇದ್ದಿತು. ಮೊದಲು ಅನೇಕ ಸೇವಕಪರೀತನಾಗಿ ಹೊರಟಿದ್ದರೂ, ಈ ಸಮಯದಲ್ಲಿ ಆತನು ಏಕಾಂಗಿಯಾಗಿ ಬರುತ್ತಿದ್ದನು. ಆ ದಿನ ಕೃಷ್ಣಪಕ್ಷದ ಚೌತಿಯಾಗಿದ್ದುದರಿಂದ ಇನ್ನೂ ಚಂದ್ರೋದಯವಾಗಿರಲಿಲ್ಲ. ಆ ಮಾರ್ಗದ ಉಭಯಪಾರ್ಶ್ವಗಳಲ್ಲಿಯೂ ಸಣ್ಣಸಣ್ಣ ಗುಡ್ಡಗಳೂ ದಟ್ಟವಾದ ಮುಳ್ಳುಗಿಡಗಳೂ ಇದ್ದುದರಿಂದ ಅಪರಿಚಿತರಾದ ಪ್ರಯಾಣಿಕರಿಗೆ ದಾರಿಯು ಭಯಂಕರವಾಗಿದ್ದಿತು. ಆದರೆ ಆ ಪುರುಷನು ಅದೇ ದಾರಿಯಲ್ಲಿ ಅನೇಕವೇಳೆ ಸಂಚರಿಸಿದ್ದುದರಿಂದ ಈಗ ನಿರ್ಭಯವಾಗಿ ಹೋಗುತ್ತಿದ್ದನು. ಇದೂ ಅಲ್ಲದೆ ಪ್ರಯಾಣಿಕರಿಗೆ ಆ ಮಾರ್ಗದಲ್ಲಿ ಚೋರರದೆಸೆಯಿಂದಾಗಲಿ, ರಾಜದ್ರೋಹಿಗಳ ದೆಸೆಯಿಂದಾಗಲಿ, ಕ್ರೂರಮೃಗಗಳಿಂದಾಗಲಿ, ಯಾವಾಗಲೂ ಯಾವಬಗೆಯ ಬಾಧೆಯೂ ಆಗಿರಲಿಲ್ಲವಾದಕಾರಣ ಜನರು ಅರ್ಧರಾತ್ರಿಯಲ್ಲಾದರೂ ಆ ಮಾರ್ಗದಲ್ಲಿ ಒಂಟಿಯಾಗಿಯೇ ನಿರ್ಭಯದಿಂದ ತಿರುಗುತ್ತಲಿದ್ದರು. ಹೀಗೆ ಮಾರ್ಗವು ನಿರಪಾಯಕರವಾಗಿದ್ದುದರಿಂದ ಆ ಪುರುಷನು ತಾನು ಹತ್ತಿದ್ದ ಕುದುರೆಯನ್ನು ವಿವಿಧಗತಿಗಳಿಂದ ನಡೆಯಿಸಿಕೊಂಡುಹೋಗುತ್ತಿದ್ದನು. ಆತನು ಹೀಗೆ ಹೋಗುತ್ತಿರಲು [illegible] ಮೂವರೂ ಅವನನ್ನೇ ಅನುಸರಿಸಿಕೊಂಡು ಬರುತ್ತಿದ್ದರು. ಆ ಪುರುಷನು ಅನ್ಯಮನಸ್ಕನಾಗಿದ್ದುದರಿಂದ ಅವರನ್ನು ನೋಡಲೇ ಇಲ್ಲವೋ, ಅಥವಾ ನೋಡಿದ್ದರೂ, ಪ್ರಯಾಣಿಕರಿರಬಹುದೆಂದು ಭಾವಿಸಿದ್ದನೋ—ಅಂತು ಆ ಪುರುಷನು ಆ ಮೂವರನ್ನು ಕಂಡು ಭಯಪಟ್ಟಂತೆ ತೋರುತ್ತಿರಲಿಲ್ಲ. ಆತನು ಸ್ವಲ್ಪದೂರ ಹೋಗುವುದರೊಳಗಾಗಿ ಆ ಮೂವರೂ ಅವನಮೇಲೆ ನುಗ್ಗಿ ಅವರಲ್ಲಿ ಒಬ್ಬನು ಆತನು ಏರಿದ್ದ [illegible] ಕಾಲಿಗೆ ಗುರಿಕಟ್ಟಿ ತನ್ನ ನಿಶಾತನಿಸ್ತ್ರಿಂಶದಿಂದ ಹೊಡೆದನು. ಆದರೆ ಗುರಿಯು ಕೊಂಚ ತಪ್ಪಿದುದರಿಂದ ಕುದುರೆಗೆ ಸ್ವಲ್ಪ ಮಟ್ಟಿಗೆ ಗಾಯವಾಗಿ, ಅದು ಜೋರಾಗಿ ಓಡಲಾರಂಭಿಸಿತು. ಕುದುರೆಯು ಹೀಗೆ ಓಡತೊಡಗಿದಕೂಡಲೆ ಆ ಪುರುಷನಿಗೆ ಎಚ್ಚರವಾಗಿ ಅದನ್ನು ನಿಲ್ಲಿಸಿ ಹಿಂದಿರುಗಿ ನೋಡಿದನು. ಇಷ್ಟರಲ್ಲಿ ಆ ಮೂವರೂ ನುಗ್ಗಿ ಬಂದು ಕುದುರೆಯ ಕಾಲುಗಳನ್ನು ಕ್ಷಣಮಾತ್ರದಲ್ಲಿ ಕಡಿದು ಕೆಡವಿದರು. ಕೂಡಲೆ ಆ ಪುರುಷನು ಕೆಳಕ್ಕೆ ಧುಮಿಕಿ ತನ್ನ ಕತ್ತಿಯನ್ನು ಒರೆಗಳೆದು ಆ ಘಾತುಕ

ರನ್ನು ಇದಿರಿಸಿದನು. ವಯಸ್ಸು ಮೀರಿದವನಾಗಿದ್ದರೂ ಆತನು ಘಾತುಕರ ಪ್ರಹಾರಗಳನ್ನು ಲೀಲಾಜಾಲದಿಂದ ತಪ್ಪಿಸಿಕೊಳ್ಳುತ್ತಾ ಅವರಲ್ಲಿ ಒಬ್ಬನ ಭುಜದಮೇಲೆ ಹೊಡೆದನು. ಆ ವೃದ್ಧನ ಪರಾಕ್ರಮವನ್ನು ಕಂಡು ಅವರು ಮನಸ್ಸಿನಲ್ಲಿಯೇ ಮೆಚ್ಚಿ ಇನ್ನು ತಡೆದರೆ ಕೆಲಸಕೆಡುವುದೆಂದು ಹೆದರಿ ಅವರಲ್ಲಿ ಒಬ್ಬನು ತನ್ನ ಶಕ್ತಿಯೆಲ್ಲವನ್ನೂ ಉಪಯೋಗಿಸಿ ಬಲವಾಗಿ ಹೊಡೆದನು. ಈ ಹೊಡೆತದ ರಭಸಕ್ಕೆ ಆ ಪುರುಷನ ಕೈಯಲ್ಲಿದ್ದ ಖಡ್ಗವು ಕತ್ತರಿಸಿ ಹೋಗಿ, ಅವನ ಬಲಮುಂಗೈಗೂ ಸ್ವಲ್ಪ ಏಟು ತಗುಲಿತು. ಆತನು ಮತ್ತೊಂದು ಆಯುಧವನ್ನು ತೆಗೆದುಕೊಳ್ಳುವಷ್ಟರೊಳಗಾಗಿ ಒಬ್ಬನು ಹಿಂದಿನಿಂದ ಬಂದು ಅವನನ್ನು ಹಿಡಿದು ಕೆಳಕ್ಕೆ ಕೆಡವಿದನು. ಕೂಡಲೆ ಮತ್ತೊಬ್ಬನು ಬಂದು ಆತನ ಕಾಲುಗಳನ್ನು ಅಮುಕಿಹಿಡಿದುಕೊಂಡನು. ಆ ಪುರುಷನಾದರೋ, ಅವರ ಪಟ್ಟುಗಳನ್ನು ತಪ್ಪಿಸಿಕೊಳ್ಳಬೇಕೆಂದು ತನ್ನ ಶಕ್ತಿಯೆಲ್ಲವನ್ನೂ ಪ್ರಯೋಗಿಸಿದನು. ಆದರೆ ಅದೆಲ್ಲವೂ ವ್ಯರ್ಥವಾಯಿತು. ಅಷ್ಟರಲ್ಲಿ ಮೂರನೆಯವನು ಬಂದು ಕತ್ತಿಯನ್ನು ಎತ್ತಿ ಆ ಪುರುಷನನ್ನು ಕೊಲ್ಲಲು ಸಿದ್ಧನಾದನು.

ಇದನ್ನು ನೋಡಿ ಆತನು—"ನೀವು ವೀರರಂತೆ ಕಾದುತ್ತಿರುವಿರಿ. ಆದರೂ ನಿರಾಯುಧನನ್ನು ಕೊಲ್ಲುವುದು ಕ್ಷಾತ್ರಧರ್ಮವಲ್ಲವೆಂಬುದನ್ನು ನೀವು ಮರೆತಿರುವುದು ಶೋಚನೀಯವಲ್ಲವೆ? ನಿಷ್ಕಾರಣವಾಗಿ ನನ್ನನ್ನು ಏಕೆ ಕೊಲ್ಲುವಿರಿ? ಧನಾಪೇಕ್ಷೆಯಿಂದ ಹೀಗೆ ಮಾಡುತ್ತಿರುವುದಾದರೆ ನನ್ನ ಆಭರಣಗಳನ್ನು ಕೊಡುವೆನು; ತೆಗೆದುಕೊಳ್ಳಿ. ನನ್ನ ಬಲವನ್ನು ಪರೀಕ್ಷಿಸಬೇಕೆಂದಿರುವಿರಾದರೆ ನನಗೊಂದು ಖಡ್ಗವನ್ನು ಕೊಟ್ಟು ನಿಮ್ಮಲ್ಲಿ ಯಾರಾದರೊಬ್ಬರು ಯುದ್ಧಕ್ಕೆ ನಿಂತು ನೋಡಿ" ಎಂದು ಧೈರ್ಯಯುಕ್ತವಾಗಿ ಮಾತಾಡಿದನು.

ಅಷ್ಟರಲ್ಲಿ ಅವರಲ್ಲೊಬ್ಬನು—"ಇವನು ಪ್ರಸಂಗದಲ್ಲಿ ಕಾಲವನ್ನು ಕಳೆಯುತ್ತಿರುವನು. ಹೀಗೆ ಮಾಡುತ್ತಿದ್ದರೆ ಯಾರಾದರೂ ಮಾರ್ಗಸ್ಥರು ಬಂದು ಸಹಾಯಮಾಡುವರೆಂಬುದೇ ಇವನ ಉದ್ದೇಶವು. ನೀನು ಇನ್ನು ತಡೆಯದೆ ಇವನ ತಲೆಯನ್ನು ತೆಗೆದುಹಾಕು; ಇಲ್ಲದಿದ್ದರೆ ನೀನು ಬಂದು ಇವನನ್ನು ಹಿಡಿದುಕೋ; ನಾನೇ ನಿಶ್ಶಂಕೆಯಿಂದ ಆ ಕೆಲಸವನ್ನು ಮಾಡುವೆನು" ಎಂದು ದೃಢಮನಸ್ಸಿನಿಂದ ಹೇಳಿದನು.

ಆಗ ರುದ್ರದೇವನು ಅವರನ್ನು ನೋಡಿ—“ನಾನು ವೀರವಂಶದಲ್ಲಿ ಹುಟ್ಟಿ ಇಂತಹ ಹೇಡಿಕೆಲಸವನ್ನು ಮಾಡಲಾರೆನು. ನಿರಾಯುಧನನ್ನು ಕೊಲ್ಲುವುದಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ. ಆದುದರಿಂದ ಇವನನ್ನು ಹಿಡಿದುಕೊಂಡು ಹೋಗುವುದೇ ಒಳ್ಳೆಯದೆಂದು ನನಗೆ ತೋರುತ್ತದೆ” ಎಂದನು.

“ನಿನ್ನ ವೀರಧರ್ಮಕ್ಕೆ ಬೆಂಕಿಹಾಕಿ ಸುಡಲಿ! ಇಂತಹವನು ಏಕೆ ಈ ಕಾರ್ಯಕ್ಕೆ ಕೈಹಾಕಿದೆ? ಇವನನ್ನು ಈಗ ಜೀವಸಹಿತವಾಗಿ ಬಿಟ್ಟರೆ ಅಪಾಯವು ತಪ್ಪದು. ನಿನಗೆ ಅಂತಹ ಸಂಕೋಚವಿದ್ದರೆ ತಡೆಯದೆ ಇತ್ತ ಬಾ. ಇವನಿಗೆ ಎಷ್ಟುಮಾತ್ರಕ್ಕೂ ದಯೆತೋರಿಸಬಾರದು. ನೀನು ಬಂದು ಇವನನ್ನು ಹಿಡಿದುಕೊಂಡರೆ ಇವನ ತಲೆಯನ್ನು ಒಂದೇ ಏಟಿಗೆ ಹಾರಿಸಿ ನನ್ನ ಹಗೆಯನ್ನು ತೀರಿಸಿಕೊಳ್ಳುವೆನು. ಬಾ, ಬೇಗಬಾ” ಎಂದು ಪ್ರಹರೇಶ್ವರಪಾತ್ರನು ಗರ್ಜಿಸಿದನು.

ಈ ಮಾತುಗಳನ್ನು ಕೇಳಿ ರುದ್ರದೇವನು ತಾನೇ ಆ ಕೆಲಸವನ್ನು ಮಾಡಬೇಕೆಂದು ಎದೆಯನ್ನು ಕಲ್ಲುಮಾಡಿಕೊಂಡು, ಆ ಪುರುಷನು ಏನನ್ನೋ ಪ್ರಾರ್ಥಿಸಿಕೊಳ್ಳುತ್ತಿದ್ದರೂ ಕೇಳದೆ, ಅವನ ತಲೆಯನ್ನು ಕತ್ತರಿಸಲುದ್ಯುಕ್ತನಾಗುತ್ತಿದ್ದನು.

ಅಷ್ಟರಲ್ಲಿ—“ಎಲೈ ಕ್ರೂರಕರ್ಮಿಗಳಿರಾ! ನಿಲ್ಲಿ! ನಿಲ್ಲಿ! ನೀವು ಶೂರರಾದರೆ ಪರಾಕ್ರಮದಿಂದ ಯುದ್ಧಕ್ಕೆ ನಿಲ್ಲಿ; ಒಳ್ಳೆಯರಾದರೆ ಅವರನ್ನು ಹಾಗೆಯೇ ಬಿಟ್ಟು ಕಾಲಿಗೆ ಬುದ್ಧಿಹೇಳಿ. ಇಲ್ಲವಾದರೆ ನಿಮ್ಮನ್ನು ಈಗಲೇ ಯಮನ ಮನೆಗೆ ಬಡಿದಟ್ಟುವೆನು” ಎಂಬುದಾಗಿ ಹೇಳುತ್ತ ಒಬ್ಬ ಪುರುಷನು ಕಾಣಿಸಿಕೊಂಡನು. ಹೀಗೆ ಅಕಸ್ಮಾತ್ತಾಗಿ ಬಂದ ಆ ಪುರುಷನನ್ನು ಕಂಡ ಆ ಮೂವರೂ ಬೆರಗಾಗಿ ನಿಂತುಬಿಟ್ಟರು. ಕ್ಷಣಮಾತ್ರದಲ್ಲಿ ಆ ಪುರುಷನು ಕತ್ತಿಯನ್ನು ಬೀಸುವುದರಲ್ಲಿದ್ದ ರುದ್ರದೇವನ ಕೈಗೆ ಬಂದು ಏಟನ್ನು ಹಾಕಿ ಅವನನ್ನು ಬಲವಾಗಿ ಹಿಂದಕ್ಕೆ ತಳ್ಳಿದನು. ಇದರ ರಭಸಕ್ಕೆ ರುದ್ರದೇವನು ನೆಲದಮೇಲೆ ಕುಕ್ಕರಿಸಿ, ಒಂದು ಕ್ಷಣದಲ್ಲಿ ಚೇತರಿಸಿಕೊಂಡು ನೂತನವ್ಯಕ್ತಿಯಮೇಲೆ ನುಗ್ಗಿಬಂದನು. ಇಷ್ಟರೊಳಗಾಗಿ ಆ ನೂತನಪುರುಷನು ಉಳಿದ ಇಬ್ಬರ ಗರ್ವವೂ ಅಡಗುವಂತೆ ಬಲವಾಗಿ

ಹೊಡೆದನು. ರುದ್ರದೇವನು ಏಟನ್ನು ಸಹಿಸಿಕೊಂಡು ನುಗ್ಗಿದ್ದಂತೆಯೇ ಅವರಿಬ್ಬರೂ ತಮ್ಮ ಆಯುಧಗಳನ್ನು ಹಿಡಿದು ಅವನ ಮೇಲೆ ಏಕಕಾಲದಲ್ಲಿ ನುಗ್ಗಿ ಬಂದರು. ಇಷ್ಟರೊಳಗಾಗಿ, ನೆಲದಮೇಲೆ ಬಿದ್ದಿದ್ದ ವೃದ್ಧನು ತಟ್ಟನೆ ಎದ್ದು ನೂತನಪುರುಷನ ಸಹಾಯಕ್ಕಾಗಿ ಬಂದು, ಆ ಮೂವರು ಘಾತುಕರಲ್ಲಿ ಒಬ್ಬನೊಡನೆ ಯುದ್ಧಮಾಡುತ್ತ ನಿಂತನು. ಆ ವೀರಪುರುಷನ ಇದಿರಿಗೆ ಬಂದ ಇಬ್ಬರು ಘಾತುಕರ ಆಟವು ನಡೆಯಲಾರದೆ ಸ್ವಲ್ಪ ಹೊತ್ತಿನಲ್ಲಿಯೇ ಅವರಿಬ್ಬರೂ ತಮ್ಮ ಕಾಲಿಗೆ ಬುದ್ಧಿಹೇಳಿದರು. ಬಳಿಕ ಆ ಪುರುಷನು ವೃದ್ಧನೊಡನೆ ಹೋರಾಡುತ್ತಿದ್ದ ರುದ್ರದೇವನ ಮೇಲೆ ನುಗ್ಗಿ ಅವನನ್ನೂ ಸ್ವಲ್ಪಕಾಲದಲ್ಲಿಯೇ ಪಲಾಯಿತನನ್ನಾಗಿ ಮಾಡಿದನು. ಹೀಗೆ ಚೋರರನ್ನು ಬಡಿದಟ್ಟಿ ಬರುತ್ತಿದ್ದ ಆ ವೀರಪುರುಷನನ್ನು ಇದಿರುಗೊಂಡು ಆನಂದಕೃತಜ್ಞತೆಗಳೊಡನೆ ಅವನನ್ನು ಆಲಿಂಗಿಸಿ "ವೀರಾಗ್ರೇಸರನೇ! ಇಷ್ಟು ಪರೋಪಕಾರಶೀಲತೆಯನ್ನೂ ಇಷ್ಟು ಪ್ರತಾಪವನ್ನೂ ಪಡೆದಿರುವ ನೀನು ಯಾರು? ಎಲ್ಲಿಗೆ ಹೋಗುತ್ತಿದ್ದು ನನ್ನ ಪಾಲಿನ ಭಾಗ್ಯದೇವತೆಯೋ ಎಂಬಂತೆ ಇಲ್ಲಿಗೆ ಬಂದೆ? ಪ್ರಾಣದಾನವನ್ನು ಮಾಡಿ ಪುಣ್ಯವನ್ನು ಕಟ್ಟಿಕೊಂಡ ನಿನ್ನ ವೃತ್ತಾಂತವನ್ನು ಸಾದ್ಯಂತವಾಗಿ ಹೇಳಿ ನನಗೆ ಕರ್ಣಾನಂದವನ್ನು ಉಂಟುಮಾಡು" ಎಂದು ಅತ್ಯಾದರದಿಂದ ಕೇಳಿಕೊಂಡನು.

"ಸ್ವಾಮಿ! ನಿಮ್ಮ ಗಾಯಗಳಿಂದ ರಕ್ತಧಾರೆಯು ಬಹಳವಾಗಿ ಹರಿಯುತ್ತಿರುವುದು; ಕೂಡಲೆ ಅದಕ್ಕೆ ತಕ್ಕ ಔಷಧವನ್ನು ಹಾಕಿ ಕಟ್ಟದಿದ್ದರೆ ರಕ್ತನಾಶದಿಂದ ಅಪಾಯವಾಗುವುದು. ಆದುದರಿಂದ ನಾವು ಇಲ್ಲಿ ಸಾವಕಾಶಮಾಡದೆ ಪುರವನ್ನು ಸೇರುವುದು ಒಳ್ಳೆಯದು. ನಿಮಗೆ ಸ್ವಲ್ಪ ಗುಣವಾದ ಬಳಿಕ ನನ್ನ ವೃತ್ತಾಂತವನ್ನು ತಿಳಿಸುವೆನು" ಎಂದು ಆ ವೀರನು ತ್ವರೆಪಡಿಸಿದನು.

"ವೀರೋತ್ತಮನೇ! ನೀನು ಹೇಳಿದಂತೆಯೇ ಮಾಡೋಣ. ನೀನು ಹೀಗೆಯೇ ಬಂದು ನನ್ನ ಮನೆಯಲ್ಲಿ ಎರಡುದಿನವಾದರೂ ಇದ್ದು ನನ್ನ ಕೃತಜ್ಞತಾಪೂರ್ವಕವಾದ ಅತಿಥಿಸತ್ಕಾರವನ್ನು ಸ್ವೀಕರಿಸಿ ನನ್ನನ್ನು ಆನಂದಗೊಳಿಸಬೇಕು" ಎಂದು ಹೇಳಿ, ಆ ವೀರನೊಡನೆ ಪುರಾಭಿಮುಖನಾಗಿ ಹೊರಟನು.

ಆ ವೀರನು ಆತನ ಜೊತೆಯಲ್ಲಿ ಹೋಗುತ್ತಾ, ಆತನನ್ನು ವಿಜಯ ನಗರದಲ್ಲಿದ್ದ ಒಬ್ಬನೊಬ್ಬ ಧನಿಕನೆಂದು ಭಾವಿಸಿ " ಮಹನೀಯರೇ ! ನಿಮ್ಮನ್ನು ಅಡ್ಡಹಾಕಿದವರು ಸಾಮಾನ್ಯರಾದ ಚೋರರಲ್ಲ. ಅವರ ಪರಾಕ್ರಮವನ್ನು ನೋಡಿದರೆ ಅವರು ಮಹಾವೀರರಂತೆ ತೋರುವರು. ನೀವು ಏನಾದರೂ ಅಪಚಾರವನ್ನು ಮಾಡಿರುವುದರಿಂದ ಅವರು ಅದನ್ನು ಸಹಿಸಲಾರದೆ ಮುಯ್ಯಿತೀರಿಸಿಕೊಳ್ಳಬೇಕೆಂದು ಹೀಗೆ ಮಾಡಿರಬಹುದು. ಈ ರಾಜ್ಯವನ್ನು ಆಳತಕ್ಕ ಚಕ್ರವರ್ತಿಯವರು ಧರ್ಮಪಾಲನನಿರತರೆಂತಲೂ, ಅವರ ಅಮಾತ್ಯಶ್ರೇಷ್ಠರು ಮಹಾಪ್ರತಿಭಾಶಾಲಿಗಳೆಂತಲೂ ಕೇಳಿರುವೆನು. ಹೀಗಿರಲು ಈ ಪುರಕ್ಕೆ ಸಮೀಪದಲ್ಲಿಯೇ, ಇನ್ನೂ ರಾತ್ರಿಯಾಗುವುದಕ್ಕೆ ಮುಂಚೆಯೇ, ಇಂತಹ ಘೋರಕೃತ್ಯಗಳು ನಡೆಯುತ್ತಿರುವುದು ಬಹಳ ಆಶ್ಚರ್ಯಕರವಾದುದು. ಇಂತಹ ದುಷ್ಟರನ್ನು ನಿಗ್ರಹಿಸಿ ಸಾಧುಜನರನ್ನು ರಕ್ಷಿಸುವುದು ರಾಜರಾದವರಿಗೆ ವಿಹಿತವಲ್ಲವೆ ? " ಎಂದನು.

" ವೀರಶ್ರೇಷ್ಠನೇ ! ನೀನು ಹೇಳುವುದು ಸತ್ಯವೇ. ಆ ರಾಜಮಂತ್ರಿಗಳು ನೀನು ಹೇಳುವಂತೆಯೇ ಸದ್ಗುಣವಂತರೂ ಹೌದು, ಪ್ರಜಾನುರಂಜಕರೂ ಹೌದು. ಸೂರ್ಯಬಿಂಬವು ಸುಜನಸ್ತೋತ್ರಪಾತ್ರವಾಗಿದ್ದರೂ ಅದನ್ನು ದ್ವೇಷಿಸತಕ್ಕಪ್ರಾಣಿಗಳು ಪ್ರಪಂಚದಲ್ಲಿ ಎಷ್ಟುತಾನೇ ಇಲ್ಲ ? ಆ ರಾಜಮಂತ್ರಿಗಳ ರಾಜ್ಯಪರಿಪಾಲನವು ಪ್ರಜಾನುರಂಜಕವಾಗಿದ್ದರೂ ಕೆಲವರ ದ್ವೇಷಕ್ಕೆ ಗುರಿಯಾಗಿರುವುದು. ಆ ರಾಜಮಂತ್ರಿಗಳ ಪರಿಪಾಲನವೆಂಬ ಸೂರ್ಯಮಂಡಲವು ಪ್ರಕಾಶಿಸುತ್ತಿರುವ ರಾಷ್ಟ್ರದಲ್ಲಿ ರಾಜದ್ರೋಹವೆಂಬ ಧ್ವಾಂತಗಳು ಇವೆಯೆಂದು ಎಂದಿಗೂ ಯಾರೂ ನಂಬಿರಲಿಲ್ಲ. ಇನ್ನು ಮುಂದೆ ಅವರು ಇಂತಹ ದುರ್ನೀತರನ್ನು ಕ್ಷಣಮಾತ್ರದಲ್ಲಿ ಅಡಗಿಸುವರು " ಎಂದು ಮಾತನಾಡುತ್ತಾ ಸ್ವಲ್ಪದೂರ ನಡೆದು, ಕಣ್ಣಿಗೆ ಹಬ್ಬವಾಗಿ ಇದಿರಿಗೆ ಕಾಣಿಸುತ್ತಿದ್ದ ವಿಜಯನಗರವನ್ನು ಪ್ರವೇಶಿಸಿದರು.

ಎರಡನೆಯ ಪ್ರಕರಣ

ವಿಜಯನಗರ

ಸಾ ರಮ್ಯಾ ನಗರೀ ಮಹಾನ್ ಸ ನೃಪತಿಃ ಸಾಮಂತ ಚಕ್ರಂ ಚ ತತ್ |
ಪಾರ್ಶ್ವೇ ತಸ್ಯ ಚ ಸಾ ವಿದಗ್ಧಪರಿಷತ್ ತಾಶ್ಚಂದ್ರಬಿಂಬಾನನಾಃ |
ಉದ್ವೃತ್ತಃ ಸ ಚ ರಾಜಪುತ್ರನಿವಹಃ ತೇ ವಂದಿನಃ ತಾಃ ಕಥಾಃ |
ಸರ್ವಂ ಯಸ್ಯ ವಶಾದಗಾತ್ ಸ್ಮೃತಿಪಥಂ ಕಾಲಾಯ ತಸ್ಮೈ ನಮಃ ||

ಭರ್ತೃಹರಿಃ

ದಕ್ಷಿಣಹಿಂದೂಸ್ಥಾನದ ಮುಖ್ಯನದಿಗಳಲ್ಲಿ ತುಂಗಭದ್ರೆಯೂ ಒಂದೆಂದು ಧಾರಾಳವಾಗಿ ಹೇಳಬಹುದು. ತುಂಗ, ಭದ್ರ ಎಂಬ ನದಿಗಳೆರಡೂ ಪಶ್ಚಿಮ ಘಟ್ಟಗಳಲ್ಲಿ ಉತ್ಪತ್ತಿಯಾಗಿ, ಸ್ವಲ್ಪ ದೂರ ಹರಿದು ಒಂದಾಗಿ ತುಂಗಭದ್ರೆ ಎಂಬ ಹೆಸರನ್ನು ಹೊಂದಿ, ಬಳಿಕ ಈಶಾನ್ಯಾಭಿಮುಖವಾಗಿ ಪ್ರವಹಿಸಿ ಕೃಷ್ಣಾನದಿಯೊಡನೆ ಸಂಗಮವಾಗುವುವು. ಈ ತುಂಗಭದ್ರಾತೀರದಲ್ಲಿರುವ ಪಟ್ಟಣಗಳಲ್ಲೆಲ್ಲಾ ವಿಜಯನಗರವು ಈ ಕಥಾರಂಭಕಾಲದಲ್ಲಿ ಅತ್ಯಂತ ಪ್ರಮುಖವಾದುದಾಗಿದ್ದಿತು. ಈಗಲಾದರೋ ಈ ಮಹಾನಗರದ ವೈಭವಕ್ಕೆ ಕಿಂಚಿನ್ಮಾತ್ರನಿದರ್ಶನವಾಗಿ ಭಗ್ನಾವಶಿಷ್ಟವಾದ ಪುರಪ್ರಾಕಾರಗಳೂ ಛಿನ್ನಭಿನ್ನಗಳಾದ ದೇವತಾಯತನಗಳೂ ಉಳಿದುಕೊಂಡಿವೆ. ಕ್ರಿ. ಶ. ೧೪ನೆಯ ಶತಮಾನದ ಮಧ್ಯದಿಂದ ೧೫೬೫ರ ವರೆಗೂ ಈ ಪಟ್ಟಣದ ಅಟ್ಟಹಾಸಕ್ಕೆ ಎಣೆಯೇ ಇರಲಿಲ್ಲ. ಆ ಕಾಲದಲ್ಲಿ ಈ ಪಟ್ಟಣದ ಪ್ರಖ್ಯಾತಿಯು ಪೌರಸ್ತ್ಯದೇಶಗಳಲ್ಲಿ ಮಾತ್ರವಲ್ಲದೆ ಪಾಶ್ಚಾತ್ಯರಾಜ್ಯಗಳಲ್ಲಿಯೂ ವ್ಯಾಪಿಸಿದ್ದಿತು. ಯಾವ ಮಹಾತ್ಮರು ತಮ್ಮ ಧೀನೌಕಾಸಹಾಯದಿಂದ ವಿದ್ಯಾಸಾಗರವನ್ನು ದಾಟಿದ್ದರೋ, ಯಾವ ಮಹಾಯತಿಶ್ರೇಷ್ಠರು ನಿಜಧರ್ಮಾನುರಕ್ತಿಯಲ್ಲಿಯೂ, ಸ್ವದೇಶಭಕ್ತಿಯಲ್ಲಿಯೂ, ವೈರಾಗ್ಯಸಂಪತ್ತಿಯಲ್ಲಿಯೂ ರಾಜ್ಯಸ್ಥಾಪನಾದಿರಾಜಕೀಯವ್ಯವಹಾರಗಳಲ್ಲಿಯೂ ನಿರುಪಮಾನರೆಂದು ಹೆಸರುವಾಸಿಯಾಗಿದ್ದರೋ, ಯಾವ ಪರೋಪಕಾರಿಗಳ ಪ್ರಯತ್ನಗಳಿಂದ ದುರ್ಗಮವಾದ ವೇದಾಂತಾದಿಶಾಸ್ತ್ರಗಳು ಸುಗಮವಾದುವೋ, ಅಂತಹ ವಿದ್ಯಾರಣ್ಯರೆಂಬ ಮಹನೀಯರ

ಉ.ಸ.೧೩೩೬ ಕಾಲವಾಗಿ ಈ ಪುರವು ಹರಿಹರರಾಯರಿಂದ ನಿರ್ಮಿತವಾಯಿತು. ಈ ಉತ್ಕರ್ಷ ಕಾಲದಲ್ಲಿ ವಿಜಯನಗರವು ಇಪ್ಪತ್ತೈದು ಮೈಲುಗಳ ಸುತ್ತಳತೆಯನ್ನು ಹೊಂದಿತ್ತು. ಈ ಮಹಾನಗರದ ಸುತ್ತಲೂ ಬೆಟ್ಟಗಳು ಆವರಿಸಿಕೊಂಡಿದ್ದುವು. ಈ ಬೆಟ್ಟಗಳ ನಡುವೆ ತಗ್ಗಾದ ಪ್ರದೇಶಗಳಲ್ಲಿ ಬಲಿಷ್ಠವಾದ ಗೋಡೆಗಳನ್ನು ಕಟ್ಟಿದ್ದರು. ಪುರಕ್ಕೆ ಹೋಗುವ ಕೆಲವು ಗುಪ್ತಮಾರ್ಗಗಳು ಈ ಬೆಟ್ಟಗಳ ನಡುವೆ ಅಡಗಿದ್ದುವು. ಇವುಗಳ ಮೂಲಕವಲ್ಲದೆ ಬೇರೆ ಯಾವ ದಾರಿಯಿಂದಲೂ ಪಟ್ಟಣವನ್ನು ಪ್ರವೇಶಿಸಲಾಗುತ್ತಿರಲಿಲ್ಲ. ಈ ಪಟ್ಟಣದ ಬಾಗಿಲುಗಳು ಪುರನಿವಾಸಿಗಳ ಗಮನಾಗಮನಗಳಿಗೆ ಅನುಕೂಲವಾಗಿದ್ದರೂ ಅಹಿತಜನಸಮೂಹಕ್ಕೆ ಪ್ರವೇಶಿಸಲು ದುಸ್ಸಾಧ್ಯವಾಗಿದ್ದುವು.

ಈ ಪುರಕ್ಕೆ ಸುತ್ತಲೂ ಏಳು ಕೋಟೆಗಳು ಇದ್ದುವು. ಅವುಗಳಲ್ಲಿ ಮೊದಲು ಮೂರು ಪ್ರಾಕಾರಗಳಲ್ಲಿ ಕರ್ಷಕಪ್ರತತಿಯು ವಾಸವಾಗಿದ್ದಿತು. ಇಲ್ಲಿ ತೋಟಗಳೂ ಪುಷ್ಪೋದ್ಯಾನಗಳೂ ಕಣ್ಗೊಳಿಸುತ್ತಿದ್ದುವು. ಈ ದುರ್ಗಕ್ಕೆ ನೈಋತ್ಯದಿಕ್ಕಿನಲ್ಲಿ ನಾಲ್ಕು ಚದರಮೈಲುಗಳ ಅಗಲವಿದ್ದ ನಿರ್ಮಲಜಲಪೂರಿತವಾದ ತಟಾಕವೊಂದು ನೇತ್ರಾನಂದಕರವಾಗಿದ್ದಿತು. ಕೃಷೀವಲರು ಆ ತಟಾಕದಿಂದಲೇ ತಮ್ಮ ತೋಟಗಳಿಗೆ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಅಲ್ಲಿಂದ ಮುಂದೆ ಏಳನೆಯ ಪ್ರಾಕಾರದವರೆಗೂ ಸಾಮಾನ್ಯಜನರ ಮಂದಿರಗಳೂ, ಅಂಗಡಿಗಳೂ, ದೇವಾಲಯಗಳೂ ತುಂಬಿದ್ದುವು. ಏಳನೆಯ ಪ್ರಾಕಾರದಲ್ಲಿ ರಾಜರ ಆಸ್ಥಾನಮಂದಿರವೂ, ಸೌಂದರ್ಯನಿಧಿಗಳಾದ ಉನ್ನತಸೌಧಾವಳಿಗಳೂ, ಮಂತ್ರಿಗಳ ಪ್ರಾಸಾದಗಳೂ, ಸೇನಾನಾಯಕರ ಭವನಗಳೂ, ಟಂಕಸಾಲೆಯೂ ಕಣ್ಗೊಳಿಸುತ್ತಿದ್ದುವು. ಮೊದಲುಮೂರು ಪ್ರಾಕಾರಗಳಂತೆಯೇ ಉಳಿದವುಗಳಲ್ಲೂ ಕಲ್ಲಿನ ಕಾಲುವೆಗಳ ಮೂಲಕ ನಿರ್ಮಲಜಲವು ಸಮೃದ್ಧಿಯಾಗಿ ಪ್ರವಹಿಸುತ್ತಿದ್ದಿತು. ಈ ಪುರದಲ್ಲಿದ್ದ ಅನೇಕ ದೇವಾಲಯಗಳಲ್ಲಿ ವಿಟ್ಠಲಸ್ವಾಮಿಯ ದೇವಸ್ಥಾನವೂ ಪಂಪಾಪತಿಸ್ವಾಮಿಯದೂ ಪ್ರಸಿದ್ಧವಾಗಿದ್ದುವು. ಈ ಮಹಾನಗರವು ತನ್ನ ಸುತ್ತಣ ಪ್ರಾಂತಗಳ ಬೇರೆಬೇರೆ ಪಟ್ಟಣಗಳಂತೆ ಕಾಣಿಸಿಕೊಳ್ಳುತ್ತಾ ಹಲವು ಲಕ್ಷ ಪ್ರಜೆಗಳಿಗೆ ಆವಾಸಸ್ಥಾನವಾಗಿದ್ದಿತು. ಈ ನಿವಾಸಿಗಳಲ್ಲಿ ಒಂದು ಲಕ್ಷ ಜನರು ಸೈನಿಕರೇ ಆಗಿದ್ದರು.

ಹಿಂದಣ ಪ್ರ[illegible]ಣದಲ್ಲಿ ನ[illegible]ಗೆ ಪರಿಚಿ[illegible] ಇಬ್ಬರು ಪುರುಷರೂ ಆ ಪುರದ ಪ್ರಥಮಪ್ರಾಕಾರದ ಬಳಿ [illegible]ನ್ನು ಸ[illegible]ದರು. ಇಷ್ಟುಹೊತ್ತಿಗೆ ಗಾಯದ ಬಾಧೆ[illegible] ಹೆಚ್ಚಾದುದರಿಂದಲೂ [illegible]ಷವಾಗಿ ರಕ್ತಪಾತವಾಗಿದ್ದುದರಿಂದಲೂ ವೃದ್ಧನಿಗೆ [illegible]ಂದಕ್ಕೆ [illegible] ಇಡಲಾಗಲಿಲ್ಲ. ಆಗ ಆತನು ದ್ವಾರಪಾಲರೊಬ್ಬನನ್ನು ಕರೆದು [illegible] ಹೇಳಲು, ಸ್ವಲ್ಪ ಹೊತ್ತಿನಲ್ಲಿಯೇ [illegible] ಹೂ[illegible] ಬಂಡಿಯೊಂದು ಅವರ ಬಳಿಗೆ ಬಂದಿತು. ಆಗ ಆತನು ಆ ನೂತನ [illegible]ಷನೊಡನೆ ಗಾಡಿಯಲ್ಲಿ ಕುಳಿತು ಪಟ್ಟಣದ [illegible] ಭಾಗವನ್ನು ಕುರಿತು [illegible]ನು. ನೂತನ ಪುರುಷನು ಆ ಮಹಾನಗ[illegible] ಸೌಂದರ್ಯವನ್ನು ನೋ[illegible]ತ್ತಾ ವೃದ್ಧಪುರುಷನು ಮುಂದಾಗಬಹುದೇ[illegible] ಅನೇಕವಿಧವಾಗಿ ಊ[illegible]ಕೊಳ್ಳುತ್ತಾ ಹೋಗುತಿಸನು. ಈ ಸಮಯಕ್ಕೆ [illegible]ಪ್ರಸಂಬದ್ರ ಪೂರ್ವದಿ[illegible]ನಲ್ಲಿ ತಲೆದೋರಿ ತನ್ನ ಆಹ್ಲಾದಕರವಾದ [illegible]ನೇತ್ರ[illegible]ಹದಲ್ಲಿ [illegible]ಲವನ್ನು ಮುಳುಗಿಸಿ ಅದಕ್ಕೆ ಬಂದು ಆ [illegible] ಶೋಭೆಯನ್ನು [illegible] ಮಾಡುತ್ತಿದ್ದಿತು. ಆ ಬೆಳುದಿಂಗಳಲ್ಲಿ ನ[illegible]ನಸರ್ಪ್ರ[illegible] ದೀಪ[illegible]ಳಂತೆ ಕಾಣಿಸುತ್ತಿದ್ದ ಹುಲ್ಲಿನ ಬಣಬೆಗಳೂ, ನಾನಾವಿಧ ಪುಷ್ಪಸ[illegible]ವ್ಯವಾದ ಪ್ರಮದವನಗಳೂ, ಧಾನ್ಯಗಳನ್ನು ತುಳಿಸುತ್ತಾ ಸಂತೋಷ[illegible] ಪದಗಳನ್ನು ಹೇಳಿಕೊಳ್ಳುತ್ತಿದ್ದ ಕ[illegible] ಕಸಿಬರುಗಳೂ ಆ [illegible] ಪುರುಷನಿಗೆ ಅನಿರ್ವಾನಂದವನ್ನುಂಟುಮಾ[illegible]ತ್ತಿದ್ದುವು. ಸ್ವಲ್ಪ [illegible]ಳಗಾಗಿ ಆ ಪುರುಷರಿಬ್ಬರೂ ಪಳನೆಯ ಪ್ರಾಕಾರವನ್ನು ದಾಟಿ [illegible] ಬೀದಿಗೆ ಬಂದರು.

ಆ ಬೀದಿಯ ಉಭಯಪಾರ್ಶ್ವಗಳಲ್ಲಿ[illegible] ಸುಂದರಮಂದಿರಗಳೂ, ಉನ್ನತಸೌಧಗಳೂ ಬೆಳುದಿಂಗಳಲ್ಲಿ ನೇತ್ರ[illegible]ರವಾಗಿ ಕಾಣ್ಣೊಳಿಸುತ್ತಿದ್ದುವು. ಆ [illegible]ಮಲ್ಲಿ ಉನ್ನತವಾದ [illegible]ನವೊಂದಿದ್ದಿತು. ಆಗಕ್ಕೆ ಗುಂಪುಗುಂಪಾಗಿ ಜನರು ಬಂದು ಅಲ್ಲಿ[illegible] ಸಂಕೀರ್ತನಸ್ವಾಮಿಯನ್ನು ಸಂದರ್ಶಿಸಿ [illegible]ಸ್ತೋತ್ರಪಾಠಗಳನ್ನು ಮಾ[illegible]ಕೊಳ್ಳುತ್ತಾ ತಮ್ಮತಮ್ಮ ಮನೆಗಳಿಗೆ ಹೋ[illegible]ದ್ದುದು [illegible] ಬಿದ್ದಿತು. ಆ ಜನರ ಪ್ರವರ್ತನೆಗಳನ್ನೂ ಆ ನಗರದಲ್ಲಿದ್ದ ಅತ್ಯ[illegible]ವಾದ ವಸ್ತುಗಳನ್ನೂ, ಅಂಗಡಿಗಳ ಸಾಲುಗಳನ್ನೂ ನೋಡುತ್ತಾ ಆ [illegible] ಪುರುಷನು ಹೋಗು

ತ್ತಿದ್ದನು. ಆ ವೃದ್ಧಪುರುಷನಿಗಾದರೋ ಆ ಪಟ್ಟಣವೂ ಅಲ್ಲಿಯ ವಿಷಯಗಳೂ ಚಿರಕಾಲದಿಂದಲೂ ಪರಿಚಿತವಾಗಿದ್ದುದರಿಂದ ಆತನು ಮತ್ತೆ ಯಾವುದೋ ಒಂದು ವಿಷಯವನ್ನು ಕುರಿತು ಆಲೋಚಿಸಿಕೊಳ್ಳುತ್ತಿದ್ದನು. ಇವರು ಹೀಗೆ ಸ್ವಲ್ಪ ದೂರ ಹೋಗುವುದರೊಳಗಾಗಿ ಸುಧಾಧವಳಿತವಾದ ಉತ್ತುಂಗಪ್ರಾಸಾದವೊಂದು ದೀಪಪ್ರಭಾಜಾಲದಿಂದ ಪರಿಶೋಭಿಸುತ್ತಿದ್ದುದು ಕಂಡುಬಂದಿತು. ಅದನ್ನು ನೋಡಿದ ಕೂಡಲೆ ಆ ಅದ್ವಿತೀಯಭವನವು ಸಾರ್ವಭೌಮರ ನಿವಾಸಸ್ಥಾನವೇ ಆಗಿರಬೇಕೆಂದು ತಿಳಿಯುತ್ತಿದ್ದಿತು. ಇಲ್ಲಿಂದ ಮುಂದೆ ಅನತಿದೂರದಲ್ಲಿ ರಾಜಮಂದಿರಕ್ಕಿಂತಲೂ ಸ್ವಲ್ಪ ತಗ್ಗಾಗಿಯೂ ಬಹುಪರಿಜನಾವೃತವಾಗಿಯೂ ದೀಪಾವಳೀವಿರಾಜಿತವಾಗಿಯೂ ಇದ್ದ ಮತ್ತೊಂದು ಶ್ರೇಷ್ಠಭವನವು ದೃಷ್ಟಿಗೋಚರವಾಯಿತು. ಅವರ ಗಾಡಿಯು ಈ ಭವನದ ಮುಂದೆ ಬಂದು ನಿಲ್ಲಲು, ಕೈದೀಪಗಳನ್ನು ಹಿಡಿದಿದ್ದ ಪರಿಚಾರಕರು ಇದಿರುಬಂದು ಸಿದ್ಧರಾದರು. ವೃದ್ಧಪುರುಷನು ಗಾಡಿಯನ್ನು ಇಳಿದು ಬರುತ್ತಿರಲು ಆತನನ್ನು ಸಂದರ್ಶಿಸಬೇಕೆಂದು ಬಂದಿದ್ದ ಅನೇಕರು ದೊಡ್ಡಮನುಷ್ಯರೂ ಉನ್ನತೋದ್ಯೋಗಿಗಳೂ ಕಾಣಿಸಿಕೊಂಡು ಆತನಿಗೆ ನಮಸ್ಕಾರಮಾಡಿದರು. ಆದರೆ ಆತನು ಹಿಂದಿನಂತೆ ಈಗ ಮಾತನಾಡದಿದ್ದುದಕ್ಕೆ ಕಾರಣವೇನೋ ಇರಬೇಕೆಂದು ಅವರೆಲ್ಲರೂ ಅನೇಕ ವಿಧವಾಗಿ ಊಹಿಸಿಕೊಳ್ಳುತ್ತಿದ್ದರು. ಅಷ್ಟರಲ್ಲಿ ಸೇವಕರ ಕರದೀಪಗಳ ಬೆಳಕಿನಲ್ಲಿ ಆತನ ಉಡುಪುಗಳ ಮೇಲೆ ರಕ್ತಕಲೆಗಳು ಕಾಣಬಂದುದರಿಂದ ಅವರ ಆಶ್ಚರ್ಯವೂ ಕುತೂಹಲವೂ ಮತ್ತಷ್ಟು ಹೆಚ್ಚಿದುವು. ಆದರೂ ಏನು ಕಾರಣವೆಂದು ಆತನನ್ನು ವಿಚಾರಿಸಲು ಯಾರಿಗೂ ಧೈರ್ಯವಿರಲಿಲ್ಲ. ಅಲ್ಲಿಗೆ ಬಂದು ಕಾದುಕೊಂಡಿದ್ದ ದೊಡ್ಡಮನುಷ್ಯರುಗಳು ಆಡಿಕೊಳ್ಳುತ್ತಿದ್ದ ಸಂಭಾಷಣೆಯಿಂದಲೂ ಅವರು ಆತನಿಗೆ ತೋರಿಸುತ್ತಿದ್ದ ಅಸಾಧಾರಣಗೌರವದಿಂದಲೂ ಆ ವೃದ್ಧಪುರುಷನು ರಾಯರ ಮಂತ್ರಿಯಾಗಿರಬೇಕೆಂದು ಭಾವಿಸಿ, ಯುವಕನು, ತನ್ನ ಹಿಂದಣ ಅಭಿಪ್ರಾಯವನ್ನು ಬದಲಾಯಿಸಿಕೊಂಡು, ತಾನು ಆ ರಾಜಮಂತ್ರಿಗಳ ರಾಜ್ಯಪರಿಪಾಲನಕ್ರಮವನ್ನು ಕುರಿತು ಹೇಳಿದ್ದ ಮಾತುಗಳಿಗಾಗಿ ಮನಸ್ಸಿನಲ್ಲಿಯೇ ಪಶ್ಚಾತ್ತಾಪಪಟ್ಟುಕೊಳ್ಳಲಾರಂಭಿಸಿದನು. ಇಪ್ಪತ್ತು ವರುಷ ವಯಸ್ಸಿನವನಾಗಿಯೂ, ಉನ್ನ

ತಾಕಾರನಾಗಿಯೂ, ಭಯಂಕರಗಾಯಧಾರಿಯಾಗಿಯೂ, ರಕ್ತಸಿಕ್ತವಾದ ಉಡುಪುಗಳನ್ನು ಧರಿಸಿಯೂ ಇದ್ದ ಆ ಯುವಕನನ್ನು ಮಂತ್ರಿಪುಂಗವನು ತನ್ನೊಡನೆ ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಗೌರವದಿಂದ ಕಾಣುತ್ತಿದ್ದುದರಿಂದ ಅಲ್ಲಿ ಬಂದು ಸೇರಿದ್ದ ಆಗಂತುಕರೆಲ್ಲರಿಗೂ ಮತ್ತಷ್ಟು ಆಶ್ಚರ್ಯವಾಯಿತು. ಆತನ ವೃತ್ತಾಂತವನ್ನು ತಿಳಿದುಕೊಳ್ಳಬೇಕೆಂದು ಬಹಳವಾಗಿ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಮಂತ್ರಿಶ್ರೇಷ್ಠನು ತನ್ನನ್ನು ಕಾಣಬೇಕೆಂದು ಬಂದಿದ್ದ ಆಗಂತುಕರೊಡನೆ ಆ ಮಂದಿರದೊಳಕ್ಕೆ ಹೋಗಿ ಒಂದು ವಿಶಾಲಮಂಟಪವನ್ನು ಪ್ರವೇಶಿಸಿದನು. ಈ ಮಂಟಪವು ಉನ್ನತಾಸನವಿರಾಜಿತವಾಗಿಯೂ ವಿಚಿತ್ರವಸ್ತುಸಂದೋಹರಂಜಿತವಾಗಿಯೂ ನೇತ್ರಾನಂದವನ್ನುಂಟುಮಾಡುತ್ತಿದ್ದಿತು. ಮಂತ್ರಿವರನು ಈ ಮಂಟಪದಲ್ಲಿಯೇ ರಾಜಕೀಯವ್ಯವಹಾರವನ್ನು ನಡೆಯಿಸುತ್ತಿದ್ದನು.

ತಿಮ್ಮರಸಮಂತ್ರಿಯು ಈ ಮಂಟಪವನ್ನು ಪ್ರವೇಶಿಸಿದ ಕೂಡಲೆ ಒಬ್ಬ ಪರಿಚಾರಕನು ಸ್ವರ್ಣಶೋಭಿತವಾದ ವಸ್ತ್ರಗಳನ್ನು ತಂದುಕೊಟ್ಟನು. ಆತನು ಅವನ್ನು ಧರಿಸಿ ಆಸನಾಸೀನನಾಗಲು ಉಳಿದವರೂ ಒಂದೊಂದು ಪೀಠದ ಮೇಲೆ ಕುಳಿತುಕೊಂಡರು. ಆಗ ಆ ಮಂತ್ರಿಯು ನೂತನ ಪುರುಷನನ್ನು ಒಂದು ಉಪಗೃಹದಲ್ಲಿ ಇಳಿಸಬೇಕೆಂದು ಪರಿಚಾರಕರಿಗೆ ಆಜ್ಞಾಪಿಸಲು, ಅವರು ಆತನನ್ನು ಕರೆದುಕೊಂಡು ಹೋದರು. ಎರಡು ಮೂರು ಗಾಯಗಳಿಂದ ಇನ್ನೂ ರಕ್ತವು ಸೋರುತ್ತಿದ್ದುದರಿಂದ ಸ್ವಲ್ಪ ಹೊತ್ತಿನಲ್ಲಿಯೇ, ಮಂತ್ರಿಶ್ರೇಷ್ಠನು ಹೊಸದಾಗಿ ಧರಿಸಿದ್ದ ಉಡುಪುಗಳೂ ರಕ್ತಸಿಕ್ತವಾದುವು. ಅಷ್ಟರಲ್ಲಿ ಪರಿಚಾರಕಸಹಿತನಾಗಿ ಬಂದಿದ್ದ ವೈದ್ಯನೊಬ್ಬನು, ಆ ಗಾಯಗಳಿಗೆ ಪಟ್ಟಿಗಳನ್ನು ಕಟ್ಟಿ ಒಂದು ಪಕ್ಕದಲ್ಲಿ ನಿಂತುಕೊಂಡಿದ್ದನು. ಜನಾನುರಾಗಿಯಾಗಿದ್ದ ತಿಮ್ಮರಸಮಂತ್ರಿಗೆ ಹೀಗೆ ಅಪಕಾರವನ್ನು ಮಾಡಿದವರು ಯಾರಿರಬಹುದೆಂದು ಸದಸ್ಯರು ಅನೇಕವಿಧವಾಗಿ ಊಹಿಸತೊಡಗಿದರು. ಯಾರೋ ಘಾತುಕರಿಂದ ಮಂತ್ರಿಗೆ ಗಾಯವಾಗಿರುವುದೆಂದು ಪಟ್ಟಣದಲ್ಲೆಲ್ಲಾ ವೃತ್ತಾಂತವು ಕ್ಷಣಮಾತ್ರದಲ್ಲಿ ಹಬ್ಬಿಕೊಂಡುದರಿಂದ ನಗರವಾಸಿಗಳು ತಂಡತಂಡವಾಗಿ ಬಂದು ತಿಮ್ಮಮಂತ್ರಿಯನ್ನು ನೋಡಿಕೊಂಡು ಹೋಗುತ್ತಿದ್ದರು. ರಾಜಕೀಯವ್ಯಕ್ತಿ-

ಗಳಲ್ಲಿ ಧರ್ಮಮಾರ್ಗದಲ್ಲಿ ನಡೆಸುತ್ತಿರುವ ಪ್ರಜಾನುರಂಜಕನಾಗಿದ್ದ ತಮ್ಮ ಮಂತ್ರಿಶ್ರೇಷ್ಠನಿಗೆ ಇಷ್ಟು ಭಯಂಕರವಾಗಿ ಗಾಸಿಮಾಡಿದ ದುರಾತ್ಮರು ಯಾರೋ ಎಂದು ಅವರು ಬಹಳವಾಗಿ ವ್ಯಸನಪಟ್ಟುಕೊಂಡರು. ರಾಮರಾಜ್ಯದಂತಿದ್ದ ರಾಜರ ಚಕ್ರಾಧಿಪತ್ಯದಲ್ಲಿ ಇಂತಹ ಕ್ರೂರಕರ್ಮಪರರು ಇರುವರಲ್ಲಾ ಎಂದು ಅವರು ಬಹಳವಾಗಿ ಚಿಂತಿಸಿದರು. ಬುದ್ಧಿಬಲದಲ್ಲಿಯೂ ದೇಹಬಲದಲ್ಲಿಯೂ ಸಿಂಹಸಮಾನಶಕ್ತಿಯನ್ನು ಹೊಂದಿದ್ದ ಆ ಮಂತ್ರಿಶ್ರೇಷ್ಠನಮೇಲೆ ಬಿದ್ದು ಆ ದುರಾತ್ಮರು ಅಂತಹ ಕೃತ್ಯವನ್ನು ಮಾಡಿದರು. ಸೃಗಾಲಗಳು ಸಿಂಹದ ಘಟಾಸಮೂಹವನ್ನು ಕೀಳಲು ಸಾಹಸಪಟ್ಟಂತೆ ಆಗಿದೆಯಲ್ಲಾ ಎಂದು ಪ್ರಜೆಗಳು ಆಶ್ಚರ್ಯಮಗ್ನರಾದರು. ಆದರೆ ಮಂತ್ರಿಗೆ ಅಂತಹ ದುರವಸ್ಥೆಯನ್ನುಂಟುಮಾಡಿದ ದುರಾತ್ಮನನ್ನು ಕುರಿತು ಹೀಗೆ ಕಠೋರ ಮಾತನಾಡಿಕೊಂಡುದರಿಂದ ಕೋಲಾಹಲವೆದ್ದುದು ಮಾತ್ರ ಪ್ರತಿಕ್ಷಣನವಾಯಿತು. ಎಷ್ಟು ಮಂದಿ ಪ್ರಯತ್ನಿಸಿದರೂ ಈ ಕೋಲಾಹಲಧ್ವನಿಯನ್ನು ಅಡಗಿಸಲು ಸಾಧ್ಯವಾಗಲಿಲ್ಲ. ಮಂತ್ರಿಯು ಈ ಕಲಕಲವನ್ನು ಸಹಿಸಲಾರದಾಗಿದ್ದರೂ ತನ್ನ ಮೇಲಣ ಪ್ರೀತಿಯಿಂದ ಇಷ್ಟೊಂದು ಚಿಂತಿಸುತ್ತಿದ್ದ ಪ್ರಜೆಗಳ ವಿಷಯದಲ್ಲಿ ಸ್ವಲ್ಪವಾದರೂ ಕಠಿನತೆಯನ್ನು ತೋರಿಸಬಯಸಲ್ಲದೆ ಸುಮ್ಮನಿದ್ದು ಕೆಲವು ನಿಮಿಷಗಳ ಮೇಲೆ ಪ್ರಜೆಗಳನ್ನು ಕುರಿತು ಮೃದು ಮಧುರವಚನಗಳಿಂದ ಈ ಮೇರೆಗೆ ಹೇಳಿದನು:—

"ಸಜ್ಜನರೇ ಹಿತೈಷಿಗಳೇ! ನೀವು ನನಗೆ ಸಂಭವಿಸಿದ ಆಪತ್ತಿಗೆ ಕಾರಣವೇನಾಗಿರಬಹುದೆಂಬುದನ್ನು ತಿಳಿದುಕೊಳ್ಳಬೇಕೆಂದು ಕುತೂಹಲರಾಗಿರುವಿರಿ. ಕೆಲವರು ರಾತ್ರಿ ಕಳ್ಳರು ನನಗೆ ಅಪಾಯವನ್ನುಂಟುಮಾಡಿದರು. ನನ್ನೊಡನೆ ಬಂದ ನನ್ನ ಮಿತ್ರಪುರುಷನು ಆ ಸಮಯಕ್ಕೆ ಬಂದು ಸಹಾಯ ಮಾಡದಿದ್ದರೆ ನಾನು ಈ ಸ್ಥಿತಿಯಲ್ಲಿ ನಿಮ್ಮನ್ನು ನೋಡಲಾಗುತ್ತಿರಲಿಲ್ಲ. ನನಗೆ ಪ್ರಾಪ್ತವಾದ ಆಪತ್ತಿಗೆ ನೀವು ಮನಸ್ಸಿನಲ್ಲಿ ಮರುಗಿ ನನ್ನ ಯೋಗಕ್ಷೇಮವನ್ನು ವಿಚಾರಿಸಲು ಬಂದು ನನ್ನಲ್ಲಿರುವ ಪ್ರೀತಿಯನ್ನು ತೋರ್ಪಡಿಸಿದುದಾಗಿ ಬಹಳ ಸಂತೋಷವಾಯಿತು. ದೈವಾನುಗ್ರಹದಿಂದ ಬದುಕಿಕೊಂಡೆನು. ಆದುದರಿಂದ ನೀವು ನಿಶ್ಚಿಂತೆಯಿಂದ ನಿಮ್ಮ ಮನೆಗಳಿಗೆ ತೆರಳಬಹುದು."

ಅದನ್ನು ಕೇಳಿ, ನೋಡಲು ಬಂದಿದ್ದ ಜನರೆಲ್ಲರೂ ಪರಿಪರಿಯಾಗಿ ಸಂಭಾಷಿಸಿಕೊಳ್ಳುತ್ತಾ, ಮಂತ್ರಿಶ್ರೇಷ್ಠರಿಗೆ ಚಿರಾಯುವಾಗಿ ಆರೋಗ್ಯ ಭಾಗ್ಯವು ಉಂಟಾಗಲಿ ಎಂದು ಮನಸ್ಸಿನಲ್ಲಿಯೇ ಭಗವಂತನನ್ನು ಪ್ರಾರ್ಥಿ ಸುತ್ತಾ, ತಮ್ಮ ಮಂತ್ರಿಶ್ರೇಷ್ಠರನ್ನು ರಕ್ಷಿಸಿದ ಆ ನೂತನಪುರುಷನನ್ನು ಕೊಂಡಾಡುತ್ತಾ, ತಮ್ಮ ತಮ್ಮ ಮನೆಗಳಿಗೆ ಹೋದರು.

ಇಷ್ಟರೊಳಗೆ ಆ ಮಂತ್ರಿಭವನದಲ್ಲಿ ಪಾದುಕೆಗಳ "ಟಕ ಟಕ" ಶಬ್ದವೊಂದು ಕೇಳಬಂದಿತು. ಈ ಶಬ್ದಕ್ಕೆ ಕಾರಣರಾದವರು ಯಾರಾಗಿರ ಬಹುದೆಂದು ಊಹಿಸುತ್ತಿರುವಲ್ಲಿ ಒಬ್ಬರು ಪುರುಷಶ್ರೇಷ್ಠರು ಆ ಮಂಡಪಾ ಭಿಮುಖವಾಗಿ ಬರುತ್ತಿದ್ದುದು ಕಾಣಬಂದಿತು. ಅವರು ದೀರ್ಘ ಕಾಯರಾಗಿದ್ದರು. ವಯಸ್ಸಿನಲ್ಲಿ ಸುಮಾರು ನಲವತ್ತೊಂದು ನಲವತ್ತೆ ರಡು ವರುಷದವರಂತೆ ತೋರುತ್ತಿದ್ದರು. ಆದರೂ ಅವರ ವಯಸ್ಸು ಅಷ್ಟಾ ಗಿರಲಿಲ್ಲ. ಅವರ ಕಣ್ಣುಗಳು ವಿಸ್ತಾರವಾಗಿಯೂ ಜನವಶೀಕರಣಪ್ರಭಾವ ಯುತಗಳಾಗಿಯೂ ಇದ್ದುವು. ಅವರ ಬಾಹುಗಳು ದೀರ್ಘವಾಗಿಯೂ ಮಾಂಸಲವಾಗಿಯೂ ಪರವೀರಭಯಂಕರಗಳಾಗಿಯೂ ಇದ್ದುವು. ಸಕಲ ಅವಯವಗಳೂ ಸೌಷ್ಠವಸಮೇತವಾಗಿಯೂ ಸೌಂದರ್ಯರಸಪೂರ್ಣವಾಗಿ ಯೂ ತೋರುತ್ತಿದ್ದುವು.

ಆ ಮಹಾಪುರುಷರು ವಿಜಯನಗರಸಾಮ್ರಾಜ್ಯಲಕ್ಷ್ಮೀಧರರಾದ ಶ್ರೀ ಕೃಷ್ಣದೇವರಾಯರೇ. ಅವರ ಅತುಲಿತವಾದ ಪಾಂಡಿತ್ಯವೂ ಪರಾಕ್ರಮವೂ ಕವಿಕುಲದಿಂದಲೂ ಮಹಾವೀರಪ್ರಕರದಿಂದಲೂ ಸಂಸ್ತವನೀಯನಾಗಿದ್ದುವು. ಭೀಕರಸಂಗ್ರಾಮದಲ್ಲಿ ಅವರು ಎಷ್ಟು ಭಯಂಕರರಾಗಿದ್ದರೋ, ರಣೇತರ ಸಮಯದಲ್ಲಿ ಅಷ್ಟು ಶಾಂತರಾಗಿ ತೋರುತ್ತಿದ್ದರು. ಆಪತ್ಕಾಲದಲ್ಲಿ ಅವರಿಗೆ ಎಷ್ಟು ಧೈರ್ಯವಿದ್ದಿತೋ ಸಂಪತ್ತಿನಲ್ಲಿ ಅಷ್ಟು ಸಹನವಿದ್ದಿತು. ಪರಸ್ತ್ರೀಯ ರಲ್ಲಿ ಸೋದರೀಭಾವವೂ, ಪ್ರಜೆಗಳಲ್ಲಿ ಪುತ್ರನಿರ್ವಿಶೇಷವಾದ ಪ್ರೀತಿಯೂ, ದೀನಾನಾಥವಿಪನ್ನರಲ್ಲಿ ಕರುಣೆಯೂ ಆಶ್ರಿತಜನರಲ್ಲಿ ವಾತ್ಸಲ್ಯವೂ ಅವರಿಗೆ ಸಹಜವಾಗಿದ್ದುವು. ಆ ಮಹಾತ್ಮರ ವಾಗ್ಝರಿಯು ಗಂಗಾಪ್ರವಾಹದಂತೆ ನಿರರ್ಗಳವಾಗಿ ಪ್ರವಹಿಸಿ ಅವರ ಅಪಾರಪಾಂಡಿತ್ಯವನ್ನು ಪ್ರಕಟಿಸುತ್ತಿದ್ದಿತು. ಆ ವಿದ್ವತ್ಪ್ರಭುಗಳು ಸ್ವಯಂ ಗ್ರಂಥರಚನೆಯನ್ನು ಮಾಡುತ್ತಿದ್ದುದಲ್ಲದೆ

ಅನೇಕವುಂದಿ ಕವಿಪ್ರವರರಿಂದ ದೇಶಭಾಷೆಗಳಲ್ಲಿ ಅನೇಕಕಾವ್ಯಗಳನ್ನು ಬರೆಯಿಸಿ ಭಾಷಾಪೋಷಣೆಯನ್ನು ಮಾಡಿ ವಿಖ್ಯಾತರಾಗಿದ್ದರು. ಅನೇಕ ಭಾಷೆಗಳು ಬರುತ್ತಿದ್ದರೂ ಅವರಿಗೆ ಆಂಧ್ರಭಾಷೆಯಲ್ಲಿ ಬಹಳ ಆದರ ವಿದ್ದಿತು. ಆಂಧ್ರಭಾಷೆಯಲ್ಲಿರುವ "ಆಮುಕ್ತಮಾಲ್ಯದ" ವೆಂಬ ಗ್ರಂಥ ವನ್ನು ರಚಿಸಿದವರು ಈ ಮಹಾತ್ಮರೇ. ಈ ಗ್ರಂಥವನ್ನು ಓದಿದವರು ಗ್ರಂಥಕರ್ತರ ಸರಸಕವಿತಾರಚನೆಯನ್ನು ನೋಡಿ ತಲೆದೂಗದೆ ಇರಲಾರರು. ಆಂಧ್ರಭಾಷಾಭಿಮಾನಶಾಲಿಗಳಾದ ಇವರು ಈ ಗ್ರಂಥದಲ್ಲಿ "ದೇಶಭಾಷ ಲಂದು ತೆನುಗು ಲೆಸ್ಸ" (ಅಂದರೆ "ದೇಶಭಾಷೆಗಳಲ್ಲಿ ತೆನುಗು ಸೊಗಸು") ಎಂದು ಹೇಳಿರುವರು ಈ ಮಹನೀಯರ ಕಾಲದಲ್ಲಿ ಆಂಧ್ರಭಾಷಾನಟಿ ಯು ಮನೋಹರಗ್ರಂಥಕುಸುಮಾಂಜಲಿಯಾಗಿ ವಿಸ್ತಾರವಾದ ವಿಜಯನ ಗರದ ಸಾಮ್ರಾಜ್ಯದ ಚತುರ್ದಿಕ್ಕುಗಳಲ್ಲಿಯೂ ನೃತ್ಯಮಾಡಿದಳು. ಭೋಜ ಮಹಾರಾಜನ ಕಾಲದಲ್ಲಿ ಸಂಸ್ಕೃತ ಭಾಷೆಯು ಪ್ರವರ್ಧಿಸಿದಂತೆಯೇ ಈ ಮಹಾತ್ಮರ ಕಾಲದಲ್ಲಿ ಆಂಧ್ರಭಾಷೆಯು ಅತ್ಯಂತ ಅಭಿವೃದ್ಧಿಯನ್ನು ಹೊಂದಿತು. ಆದುದರಿಂದ ಈ ಮಹಾರಾಜರವರಿಗೆ "ಆಂಧ್ರಭೋಜ" ಎಂಬ ಬಿರುದು ಬಂದಿರುವುದು.

ಚಕ್ರವರ್ತಿಯು ಮಂತ್ರಿಯ ಸದನವನ್ನು ಪ್ರವೇಶಿಸಿದ ಕೂಡಲೆ ಅಲ್ಲಿದ್ದವರೆಲ್ಲರೂ ಎದ್ದು ನಿಂತು ನಮಸ್ಕಾರಮಾಡಿದರು. ಅವರು ಅಮಾ ತ್ಯಶ್ರೇಷ್ಠನಿಗೆ ವಂದನವನ್ನು ಮಾಡಿ ಪ್ರತಿವಂದನವನ್ನು ಸ್ವೀಕರಿಸಿ, ಅಲ್ಲಿದ್ದ ವರಿಗೆ ಕುಳ್ಳಿರುವಂತೆ ನಿಯಮಿಸಿ ತಾವೂ ಉಚಿತಸನಾಸೀನರಾದರು. ನಿರುಪ ಮಮಾನ ಗುಣಗಣಾಶ್ರಯರೂ, ಸಾಮ್ರಾಜ್ಯವಿಭವೋಪೇತರೂ ಆದ ಕೃಷ್ಣ ದೇವರಾಯರಂತಹ ಮಹಾರಾಜರು ತಮ್ಮ ಬಳಿಯ ಅಧಿಕಾರಿಯು ಗಾಯಪ ಡೆದ ಮಾತ್ರಕ್ಕೇ ಅಂತಹ ನಿವಾಸಮಯದಲ್ಲಿ ಸ್ವಯಂ ಸಂದರ್ಶಿಸಲ ಬಂದುದು ಉಚಿತವೆ? ಎಂದು ಪಾಠಕಮಹಾಶಯರಲ್ಲಿ ಕೆಲವರಿಗೆ ಸಂಶಯ ವುಂಟಾಗಬಹುದು ಕೃಷ್ಣದೇವರಾಯರ ಮತ್ತು ತಿಮ್ಮರಸರ ಚರಿತ್ರವನ್ನು ತಿಳಿದಿರುವವರಿಗೆ ಅಂತಹ ಸಂದೇಹಗಳು ದೂರಾಪಾಸ್ತವಾಗುವುವೆಂದು ನಮ್ಮ ಅಭಿಪ್ರಾಯವಾಗಿರುವುದು. ಕೃಷ್ಣದೇವರಾಯರು ಆ ಮಂತ್ರಿಶ್ರೇ ಷ್ಠನನ್ನು ಪಿತೃಸದೃಶನನ್ನಾಗಿ ಭಾವಿಸಿದ್ದರು. ಎಷ್ಟು ಕಾಲದಲ್ಲಿ ಮಾತ್ರವೇ

ಅಲ್ಲದೆ ನರಸರಾಜ ವೀರನರಸಿಂಹರಾಯರ ಕಾಲದಲ್ಲಿಯೂ ತಿಮ್ಮರಸನು ತನ್ನ ಶೇಮುಷೀವಿಶೇಷದಿಂದ ವಿಜಯನಗರಸಾಮ್ರಾಜ್ಯವನ್ನು ದಿನದಿನಕ್ಕೂ ಅಭಿವೃದ್ಧಿಪಡಿಸಿದ್ದನು. ಕೃಷ್ಣದೇವರಾಯರನ್ನು ಬಂದೆರಡುವೇಳೆ ಮಹಾ ಪಾಯಗಳಿಂದ ಸಂರಕ್ಷಿಸಿದ್ದುದರಿಂದ, ಈ ಮಂತ್ರಿಶ್ರೇಷ್ಠನ ವಿಷಯದಲ್ಲಿ ಅವರಿಗೆ ಪಿತೃಭಾವನೆಯು ಹುಟ್ಟಿದ್ದುದು ಸಹಜವಲ್ಲವೆಂದು ಹೇಳುವ ವರು ಯಾರು ? ಕೃಷ್ಣದೇವಮಹಾರಾಯರವರಿಗೆ ಬಲತಾಯಿಯಾದ ತಿಪ್ಪಾಂ ಬಿಕೆಯು ತನ್ನ ಕುಮಾರನಾದ ವೀರನರಸಿಂಹರಾಜನಿಗೆ ಸಾಮ್ರಾಜ್ಯವನ್ನು ನಿರಾತಂಕವಾಗಿ ಮಾಡಿಸಿಕೊಡಬೇಕೆಂದು ಯೋಚಿಸಿ ಕೃಷ್ಣದೇವರಾಯ ರನ್ನು ಕೊಲ್ಲಿಸಬೇಕೆಂದು ಗುಪ್ತವಾಗಿ ಪ್ರಯತ್ನ ಮಾಡಿದ್ದಳು. ವೀರನರ ಸಿಂಹರಾಜನ ಅಂತ್ಯಕಾಲದಲ್ಲಿ ಅವನು ತನ್ನ ಕುಮಾರನಾದ ತಿಮ್ಮರಾಜನಿಗೆ ರಾಜ್ಯವನ್ನು ಕೊಡಬೇಕೆಂದೂ ಕೃಷ್ಣದೇವರಾಯರ ಕಣ್ಣನ್ನು ಕೀಳಸಬೇ ಕೆಂದೂ ಒಳಸಂಚು ನಡೆಯಿಸಿದ್ದನು. ಈ ಎರಡು ಗಂಡಾಂತರಗಳಿಂದಲೂ ಕೃಷ್ಣದೇವರಾಯರನ್ನು ತನ್ನಬುದ್ಧಿಚಾತುರ್ಯದಿಂದ ಸುಲಭವಾಗಿ ಸಂರಕ್ಷಿಸಿ ದಾತನು ಈ ತಿಮ್ಮರಸ ಮಂತ್ರಿಶ್ರೇಷ್ಠನೇ. ಇದೂ ಅಲ್ಲದೆ ಕೃಷ್ಣದೇವರಾಯ ರಿಗೆ ಪಟ್ಟಾಭಿಷೇಕವಾದ ಸಮಯದಲ್ಲಿಯೂ ಈ ಮಂತ್ರಿಪ್ರವರನಿಂದ ಬಹಳ ವಾಗಿ ಸಹಾಯವೊದಗಿದ್ದಿತು. ಹೀಗೆ ತಮ್ಮ ಪ್ರಾಣವನ್ನು ಕಾಪಾಡಿ, ಮರಣಕ್ಕಿಂತಲೂ ಘೋರವಾದ ಅಂಧತ್ವವನ್ನು ತಪ್ಪಿಸಿ, ರಾಜ್ಯಾಭಿಷೇಕವನ್ನು ಮಾಡಿಸಿದ್ದ ಆ ಮಹಾತ್ಮನಲ್ಲಿ ಕೃಷ್ಣದೇವರಾಯರಿಗೆ ಎಷ್ಟು ಪ್ರೇಮವೂ, ಎಷ್ಟು ಗೌರವವೂ, ಎಷ್ಟು ಭಕ್ತಿಯೂ ಇದ್ದುವೋ ಯಾರುತಾನೇ ಹೇಳ ಬಲ್ಲರು ? ರಾಜಸಾಮಾನ್ಯರಲ್ಲಿ ಕಾಣುವ ಕೃತಘ್ನತೆಯು ಆ ರಾಜಶ್ರೇಷ್ಠ ರಲ್ಲಿ ಎಷ್ಟು ಮಾತ್ರಕ್ಕೂ ಇಲ್ಲದಿಲ್ಲವಾದುದರಿಂದ ಆ ಮಂತ್ರಿಪುಂಗವನಿಗೆ ಅವರು ತಮ್ಮ ಯಾವಜ್ಜೀವವೂ ಅತ್ಯಂತ ಗೌರವವನ್ನು ತೋರಿಸುತ್ತಿದ್ದರು. ಇಷ್ಟೇ ಅಲ್ಲದೆ ಅವರು ತಿಮ್ಮರಸನನ್ನು ಪ್ರೀತಿಯಿಂದ "ಅಪ್ಪಾಜಿ" ಎಂದು ಸಂಬೋಧಿಸುತ್ತಿದ್ದರಂತೆ. ತಮಗೆ ಇಷ್ಟು ಉಪಕಾರಗಳನ್ನು ಮಾಡಿದ್ದ ತಮ್ಮ ಮಂತ್ರಿಪ್ರವರನಿಗೆ ಸಂಭವಿಸಿದ್ದ ಆಪತ್ತನ್ನು ಕೇಳಿ ಅವರು ವಿಚಾರ ಪರೀತಸ್ವಾಂತರಾಗಿ ಅಗಲೇ ಯೋಗಕ್ಷೇಮವನ್ನು ವಿಚಾರಿಸಲು ಬಂದುದು ಎಷ್ಟು ಮಾತ್ರಕ್ಕೂ ಆಶ್ಚರ್ಯಕರವಾಗಿರಲಾರದು.

ಮೇಲೆ ಹೇಳಿದಂತೆ ಸರ್ವರೂ ತಮ್ಮತಮ್ಮ ಪೀಠಗಳಲ್ಲಿ ಕುಳಿತು ಕೊಂಡಕೂಡಲೆ, ರಾಯರು ಮಂತ್ರಿಯನ್ನು ಕುರಿತು—" ಅಪ್ಪಾಜೀ ! ಕಾಲ ವೆಷ್ಟು ವಿಪರೀತವಾಗಿರುವುದು! ಅಸಂಭಾವಿತವಾದ ಈ ಕೃತ್ಯವು ಈಹೊತ್ತು ಸಂಭವಿಸಿದುದು ಹೇಗೆ ? ನ್ಯಾಯಯುಕ್ತವಾಗಿಯೂ, ಪ್ರಜಾನುರಂಜಕ ವಾಗಿಯೂ ಪರಿಪಾಲಿತವಾದ ಈ ನನ್ನ ರಾಜ್ಯದಲ್ಲಿಯೂ ಇಂತಹ ಕ್ರೂರ ಕರ್ಮಿಗಳು ಇರುವರೇ ! ಧೀಬಲದಲ್ಲಿಯೂ ದೇಹಬಲದಲ್ಲಿಯೂ ಅಸದೃಶ ವಾದ ನಿಮ್ಮ ವಿಷಯದಲ್ಲಿಯೂ ದುಷ್ಟಕರ್ಮಿಗಳು ಎಂತಹ ನಿರ್ದಯಕೃತ್ಯ ವನ್ನು ಆಚರಿಸಿರುವರು ! ದರ್ಶನಮಾತ್ರದಿಂದಲೇ ಮತ್ತಗಜಗಳಿಗೂ ಸಹ ಕಂಪನವನ್ನುಂಟುಮಾಡುವ ಸಿಂಹವನ್ನು ಸೃಗಾಲಗಳು ಸುತ್ತಿಕೊಂಡು ಅದರ ಕೇಸರವನ್ನು ಕೀಳಲು ಹವಣಿಸುವುದೆಂದರೆ ಅತ್ಯದ್ಭುತವಾಗಿರುವುದು ", ಎಂದು ಹೇಳಿದರು.

" ರಾಜೇಂದ್ರರೇ ! ತಾವು ಏಕೆ ಹೀಗೆ ಚಿಂತಿಸುವಿರಿ ? ತಮ್ಮ ಆಳಿಕೆ ಯಲ್ಲಿ ಕುಂದುಕೊರತೆಗಳು ಸ್ವಲ್ಪವಾದರೂ ಇಲ್ಲದೇ ಇದ್ದರೂ, ನಿರ್ದುಷ್ಟ ವಸ್ತುಗಳಲ್ಲಿ ಕೂಡ ದೋಷಗಳನ್ನು ಕಲ್ಪಿಸುವ ಕುತ್ಸಿತಸ್ವಭಾವದವರಾದ ಅಲ್ಪರು ಪ್ರಪಂಚದಲ್ಲಿ ಹಲವರಿರುವರು. ಲೋಕಕ್ಕೆ ಆನಂದದಾಯಕ ನಾದ ಚಂದ್ರನ ಕಾಂತಿಯಲ್ಲಿಯೂ ಕೂಡ ದೋಷಗಳನ್ನು ಕಲ್ಪಿಸಿ ಚಂದ್ರಿಕೆಯನ್ನು ನಿಂದಿಸುವ ವಸ್ತುಗಳು ಎಷ್ಟು ಇಲ್ಲ ? ತಾವು ಅಪ್ಪಣೆ ಕೊಡಿಸಿದಂತೆಯೇ ಈ ದಿನ ಸಿಂಹವು ಸೃಗಾಲಗಳಿಂದ ಅಪಾಯಕ್ಕೆ ಒಳ ಗಾಗಬೇಕಾಯಿತು. ಸಿಂಹವು ಸಮರ್ಥವಾದುದರಿಂದ ಇತರ ಯಾವ ಮೃಗಗಳೂ ತನಗೆ ಅಪಾಯವನ್ನುಂಟುಮಾಡಲಾರವೆಂದು ಅದು ನಿರ್ಭ ಯವಾಗಿ ಬರುತ್ತಿರಲು, ಕೆಲವು ಸೃಗಾಲಗಳು ಸಿಂಹವನ್ನು ಸುತ್ತಿಕೊಂಡು ಕಡಿಯಲಾರಂಭಿಸಿದುವು. ಆಗ ಸಿಂಹವು ತನ್ನ ಖರತರನಖರದಿಂದ ಅವು ಗಳನ್ನು ವಿದಾರಣಮಾಡತೊಡಗಿತು. ಆದರೆ ದೈವವಶದಿಂದ ನಖರಗಳು ಮುರಿದುಬೀಳಲು ಅದು ತನ್ನ ದಂತಗಳಿಂದಲೇ ಬವರಿಕೆಡವಲಾರಂಭಿಸಿತು. ದೈವೇಚ್ಛೆಯು ಪ್ರತಿಕೂಲವಾಗಿರಲು ದಂತಗಳೂ ಉದುರಿಹೋದುವು. ಈ ವಿಷಮಸ್ಥಿತಿಯಲ್ಲಿ ಸಿಂಹವು ಎಷ್ಟೇ ಬಲಿಷ್ಠವಾಗಿದ್ದರೂ ಪ್ರಯೋಜನ ವೇನು ? ಸಾಧನರಹಿತವಾದಾಗ ಕ್ಷುದ್ರಮೃಗಗಳೂ ಕೂಡ ಸಿಂಹರಾಜನಿಗೆ

ಏನು ಬೇಕಾದರೂ ಮಾಡಬಹುದಲ್ಲವೆ? ಅವು ಸಿಂಹದ ಕೇಸರಗಳನ್ನು ಹಿಡಿದು ತೂಗಾಡಿದರೂ ತೂಗಾಡಬಹುದು; ಅಥವಾ ಅದನ್ನು ಕೊಂದರೂ ಕೊಂದುಬಿಡಬಹುದು. "ಕೈದು ಇಲ್ಲದವನನ್ನು ಕರು ಬೆದರಿಸಿತು." ಎಂಬ ಸಾಮತಿಯನ್ನು ತಾವು ಕೇಳಿ ಇರುವಿರಲ್ಲವೆ? ಎಂದು ದುರವಸ್ಥಾದ್ಯೋತಕವಾದ ದೃಷ್ಟಿಯಿಂದಲೂ ಧ್ವನಿಯಿಂದಲೂ ಭೂಪಾಲರಿಗೆ ತಿಮ್ಮರಸನು ಹೇಳಿದನು.

ಕೃ. ದೇ. ರಾ.—"ಏನು! ಏನು! ಕೊಂದರೂ ಕೊಲ್ಲಬಲ್ಲುವೆ? ಅವಕ್ಕೆ ಅಂತಹ ಸಾಮರ್ಥ್ಯವೆಲ್ಲಿಯದು? ಹಿಂಸೆ ಮಾಡಬೇಕೆಂದು ಮಾತ್ರವೇ ಅವುಗಳ ಉದ್ದೇಶವಾಗಿದ್ದಿರಬೇಕು; ಅವುಗಳಿಗೆ ಮತ್ತೊಂದು ಅಭಿಲಾಷೆ ಇದ್ದಿರಲಾರದು"

ತಿಮ್ಮ—"ಮಹಾಸ್ವಾಮಿ! ತಾವು ಹಾಗೆ ಊಹಿಸಲಾಗದು. ಸಾಮರ್ಥ್ಯವಿಲ್ಲದುದರಿಂದ ಕೊಲ್ಲಲಾರವೆಂದು ಅಲ್ಲವೇ ಹೇಳೋಣವಾಗಬಹುದು. ಅಲ್ಪಜಂತುಗಳಾದ ಇರುವೆಗಳು ಬಲಿಷ್ಠವಾದ ಸರ್ಪವನ್ನು ಸಹ ಬಗ್ಗಿಸಿ ಬಿಡಬಲ್ಲುವಲ್ಲವೇ? ಕುಟಿಲಸ್ವಭಾವವುಳ್ಳ ಆ ಸೃಗಾಲಗಳು ಸಿಂಹವನ್ನು ಕೊಂದುಬಿಡಬೇಕೆಂದೇ ಬಂದುವು. ಆದರೆ ಕಾರ್ಯವು ಅನ್ಯಥಾ ಸಂಭವಿಸಿತು."

ಕೃ. ದೇ. ರಾ.—"ಅಪ್ಪಾಜೀ! ಅವಕ್ಕೆ ಸಿಂಹವನ್ನು ಕೊಲ್ಲುವಂತಹ ಸಾಮರ್ಥ್ಯವೂ ಕೊಲ್ಲಬೇಕೆಂಬ ಅಭಿಲಾಷೆಯೂ ಇದ್ದಪಕ್ಷದಲ್ಲಿ ಸಿಂಹವು ಬದುಕಿಬಂದುದು ಹೇಗೆ?"

ತಿಮ್ಮ—"ಮಹಾರಾಜರೇ! ಅಂತಹ ವಿಷಮಸ್ಥಿತಿಗೆ ಸಿಕ್ಕಿದ್ದ ಸಿಂಹವು ಸತ್ತುಹೋಗಬೇಕಾಗಿದ್ದರೂ, ಬೇರೊಂದು ಪುರುಷಸಿಂಹವು ಸುಸಮಯದಲ್ಲಿ ಸಹಾಯಕ್ಕೆ ಬಂದು ಆ ಕ್ಷುದ್ರಮೃಗಗಳನ್ನು ಗಾಸಿಮಾಡಿ ಓಡಿಸಿಬಿಟ್ಟಿತು."

ಕೃ. ದೇ. ರಾ—"ಏನು! ಏನು! ಮತ್ತೊಂದು ಪುರುಷಸಿಂಹವು ಬಂದು ಕಾಪಾಡಿತೆ? ಅದು ಈ ಪ್ರಾಂತದಲ್ಲಿಯೇ ಇರುವಂತಹುದೋ? ಅದು ಈಗ ಎಲ್ಲಿ ವಿಶ್ರಮಿಸಿಕೊಳ್ಳುತ್ತಿರುವುದು?

ತಿಮ್ಮ—"ಧರಣೀಶ್ವರರೇ! ಅದು ಈ ಪ್ರಾಂತದ್ದು ಅಲ್ಲ. ಅದು ತನ್ನ ಪರಾಕ್ರಮಪ್ರಕಟನಾರ್ಥವಾಗಿ ದೂರವಾದರೂ ಈ ಪ್ರಾಂತಕ್ಕೆ ಬಂದಿರು

ವಂತೆ ತೋರುವುದು. ನನ್ನ ಭಾಗದ ದೇವರಂತೆ ಸಮಯದಲ್ಲಿ ಕಾಣಿಸಿಕೊಂಡು ನನಗೆ ಮಹೋಪಕಾರವನ್ನು ಮಾಡಿದ ಅದನ್ನು ಕೂಡಲೆ ಹೋಗಗೊಡುವೆನೆ? ಪ್ರಸ್ತುತಸಮಯದಲ್ಲಿ ಅದು ಇಲ್ಲಿಯೇ ವಿಶ್ರಮಿಸಿಕೊಳ್ಳುತ್ತಿರುವುದು. ಇಷ್ಟರಲ್ಲಿಯೇ ಅದನ್ನು ತಮ್ಮ ಬಳಿಗೆ ಕಳುಹಿಸಿಕೊಡುವೆನು."

ಕೃ. ದೇ. ರಾ.—"ಅಪ್ಪಾಜೀ! ಮುಖ್ಯಕಾರ್ಯವನ್ನು ಮಾಡಿದರಿ. ಪರೋಪಕಾರಶೀಲವಾದ ಈ ಪುರುಷಸಿಂಹವನ್ನು ನೋಡಬೇಕೆಂದು ನನ್ನ ಮನಸ್ಸು ಬಹಳವಾಗಿ ಕುತೂಹಲಪಡುತ್ತಿರುವುದು. ತಪ್ಪದೆ ಅದನ್ನು ನನ್ನ ಬಳಿಗೆ ಕಳುಹಿಸಿಕೊಡಿ" ಎಂದು ಆಮಂತ್ರಣವನ್ನು ಹೇಳಿ, ಸೇವಕಕದಂಬಪರಿವೇಷ್ಟಿತರಾಗಿ ಅವರು ತಮ್ಮ ನಿವಾಸಸ್ಥಾನವನ್ನು ಕುರಿತು ತೆರಳಿದರು.

ಮೂರನೆಯ ಪ್ರಕರಣ.

ಪರಾಕ್ರಮಪರೀಕ್ಷೆ.

ಸಂಗ್ರಾಮೇಷು ಭಟೇಂದ್ರಾಣಾಂ | ಕವೀನಾಂ ಕವಿಮಂಡಲೇ ||
ದೀಪ್ತಿರ್ವಾ ದೀಪ್ತಿಹಾನಿರ್ವಾ | ಮುಹೂರ್ತಾದೇವ ಜಾಯತೇ ||

ಒಂದಾನೊಂದುದಿನ ವಿಜಯನಗರದ ರಾಜಬೀದಿಯಲ್ಲಿದ್ದ ಒಂದು ಮರದಕೆಳಗೆ ಜನಸಮೂಹವು ಕೂಡಿದ್ದಿತು. ಅದರಲ್ಲಿ ಬಾಲಕರು ಮಾತ್ರವಲ್ಲದೆ ದೊಡ್ಡವರೂ ಸೇರಿದ್ದರು. ಅವರೆಲ್ಲರೂ ಒಂದೊಂದುಸಾರಿ ಚಪ್ಪಾಳೆ ಬಡಿಯುತ್ತಾ, ಆಗಾಗ ಅಟ್ಟಹಾಸಧ್ವನಿಗಳಿಂದ ದಿಗಂತಗಳನ್ನು ಶಬ್ದಮಯವನ್ನಾಗಿ ಮಾಡುತ್ತಾ ಇದ್ದರು. ಬಾಲಕರು ಸಂಭ್ರಮದಿಂದ ಅತ್ತಿತ್ತ ಓಡಾಡುತ್ತಿದ್ದರು. ಇವರಿಗೆ ಅಷ್ಟು ವಿನೋದವನ್ನುಂಟುಮಾಡುತ್ತಿದ್ದವನು ಒಬ್ಬ ಹುಚ್ಚನು. ಅವನ ಚೇಷ್ಟೆಗಳನ್ನು ನೋಡಿದರೆ ಜನರು ಅವನನ್ನು ಹುಚ್ಚನೆಂದು ಭಾವಿಸಬಹುದಾಗಿದ್ದರೂ, ಅವನ ಆಕಾರ ಲಕ್ಷಣಗಳನ್ನು ನೋಡಿದರೆ ಆತನನ್ನು ಒಬ್ಬ ಮಹಾಪುರುಷನೆಂದು ಭಾವಿಸುವಂತಿದ್ದಿತು. ಆ ಉನ್ಮತ್ತನು ಒಂದು ಮರದ ಕೆಳಗೆ ಕುಳಿತುಕೊಂಡು ವಿನೋದಕರವಾಗಿ ಪದ

ಗಳನ್ನು ಹೇಳಿಕೊಳ್ಳುತ್ತಿದ್ದನು. ಜನರು ತನ್ನ ಸುತ್ತಲೂ ಮುತ್ತಿಕೊಳ್ಳುತ್ತಿರಲು, ಅವನು ತಾನು ಕುಳಿತಿದ್ದ ಸ್ಥಳವನ್ನು ಬಿಟ್ಟು ಹೊರಡಲುದ್ಯುಕ್ತನಾದನು. ಆಗ ದೊಡ್ಡವರು ಅವನನ್ನು ಬಿಟ್ಟು ತಮ್ಮತಮ್ಮ ಕೆಲಸಗಳನ್ನು ಕುರಿತು ಹೊರಟರು. ಬಾಲಕರು ಅವನನ್ನು ಬಿಡದೆ, ಚಪ್ಪಾಳೆ ಹೊಡೆಯುತ್ತಾ ಅವನ ಹಿಂದೆಹಿಂದೆಯೇ ಹೋದರು. ಹೀಗೆ ಸ್ವಲ್ಪದೂರ ಹೋಗುವುದರೊಳಗಾಗಿ, ನೂರಾರು ಜನ ಬಾಲಕರು ಹುಚ್ಚನಸುತ್ತಲೂ ಬಂದುಸೇರಿ ಕೋಲಾಹಲವನ್ನು ಮತ್ತೂ ಹೆಚ್ಚಿಸಿದರು. ಹೀಗೆ ಹೋಗುತ್ತಿದ್ದಾಗ, ದಾರಿಯಲ್ಲಿ ಬಿದ್ದಿದ್ದ ಮಡಕೆಯ ಚೂರೊಂದು ಹುಚ್ಚನ ಕಣ್ಣಿಗೆ ಗೋಚರವಾಯಿತು. ಆಗ ಹುಚ್ಚನು ಅದನ್ನು ತಲೆಯಮೇಲೆ ಇಟ್ಟುಕೊಂಡು ಪಕಪಕನೆ ನಗಲು, ಈ ಚೇಷ್ಟೆಯನ್ನು ಕಂಡ ಬಾಲಕರು ಗೊಳ್ಳೆಂದು ನಕ್ಕರು. ಬಾಲಕರು ನಕ್ಕಷ್ಟೂ ಹುಚ್ಚನು ತನ್ನ ಚೇಷ್ಟೆಗಳನ್ನು ಹೆಚ್ಚಿಸಿದನು. ಹುಚ್ಚನ ಚೇಷ್ಟೆಗಳು ಹೆಚ್ಚಿದಷ್ಟೂ ಬಾಲಕರ ನಗುವೂ ವೃದ್ಧಿಯಾಗುತ್ತಲೇ ಹೋಗುತ್ತಿದ್ದಿತು.

ಮತ್ತೆ ಸ್ವಲ್ಪದೂರ ಹೋಗುವುದರೊಳಗಾಗಿ ಬಂದುಕಡೆ ತಂದು ಸುರಿದಿದ್ದ ಬಿಳಿಯ ಬೂದಿಯನ್ನು ಹುಚ್ಚನು ಕಂಡು ಅವನ್ನು ತೆಗೆದುಕೊಂಡು "ತ್ರಿಯಂಬಕಂ ಯಜಾಮಹೇ" ಎಂಬ ಮಂತ್ರವನ್ನು ಹೇಳುತ್ತಾ ಮೈಗೆಲ್ಲಾ ಬಳಿದುಕೊಂಡನು. ಮೊದಲೇ ಹುಚ್ಚ; ಈಗ ಅವನು ಮತ್ತೂ ವಿಕೃತಾಂಗನಾದನು. ಇದರಿಂದ ಬಾಲಕರಿಗೆ ಮತ್ತೂ ವಿನೋದ ಹೆಚ್ಚಿ "ನಿನ್ನ ಜನಿವಾರವೆಲ್ಲಿ ?" ಎಂದು ಅವನನ್ನು ಗೇಲಿಮಾಡಿದರು. ಹುಚ್ಚನಿಗೆ ಮತ್ತೂ ಉತ್ಸಾಹ ಹೆಚ್ಚಿ, ದಾರಿಯಲ್ಲಿ ಬಿದ್ದಿದ್ದ ಬಟ್ಟೆಯನ್ನು ಸಣ್ಣಗೆ ಹರಿದು ಅದರ ಚಿಂದಿಗಳಿಂದ ಯಜ್ಞೋಪವೀತವನ್ನು ಮಾಡಿ ಸಮಂತ್ರಕವಾಗಿ ಹಾಕಿಕೊಂಡು ಹುಡುಗರ ಕಡೆಗೆ ನೋಡಿ ಪಕಪಕನೆ ನಕ್ಕನು. ಇದಕ್ಕೆ ಪೂರ್ವದಲ್ಲಿ ಹುಚ್ಚನ ಜಾತಿಯು ಇಂತಹುದೆಂದು ತಿಳಿಯಲಸಾಧ್ಯವಾಗಿದ್ದಿತು; ಆದರೆ ಅವನು ಹೇಳಿಕೊಂಡ ಮಂತ್ರಗಳಿಂದಲೂ, ಮಂತ್ರಗಳ ಸ್ಪಷ್ಟೋಚ್ಚಾರಣೆಯಿಂದಲೂ ಬ್ರಾಹ್ಮಣನೆಂದು ನಿಶ್ಚಯಿಸಬಹುದಾಗಿದ್ದಿತು.

ಹುಚ್ಚನು ಜನರನ್ನು ಬಾಧಿಸದಿದ್ದುದರಿಂದ ಹುಡುಗರು ನಿರ್ಭೀತರಾಗಿ ಅವನನ್ನು ಗೇಲಿಮಾಡುತ್ತಿದ್ದರು. ಅವನು ಸ್ವೇಚ್ಛೆಯಾಗಿ ತಿರುಗಾಡ

ಲಿಕ್ಕೆ ರಾಜಭಟರು ಅಡ್ಡಿಮಾಡುತ್ತಿರಲಿಲ್ಲ. ಆದ್ದರಿಂದ ಅವನು ಪ್ರತಿದಿನವೂ ಅರುಣೋದಯಕಾಲದಲ್ಲಿ ಎದ್ದು ಮಧ್ಯಾಹ್ನದವರೆಗೂ ಬೀದಿಬೀದಿಗಳಲ್ಲಿ ಅಲೆಯುತ್ತಾ ಧರ್ಮಾತ್ಮರು ಕೊಟ್ಟ ಅನ್ನವನ್ನು ತೆಗೆದುಕೊಂಡು, ಅದನ್ನು ತಾನು ತಿನ್ನದೆ ಕೆಲವುವೇಳೆ ಬೀದಿಯಲ್ಲಿದ್ದ ನಾಯಿಗಳಿಗೆ ಹಾಕುತ್ತಲೂ, ಮತ್ತೆ ಕೆಲವುವೇಳೆ ಕಾಗೆಗಳಿಗೆ ಎರಚುತ್ತಲೂ ಇದ್ದನು. ಈ ಚೇಷ್ಟೆಗಳನ್ನು ಕಂಡು ಹುಡುಗರು "ಹುಚ್ಚ! ಮರುಳ!" ಎಂದು ಬಗೆಬಗೆಯಾಗಿ ಕೂಗಿಕೊಳ್ಳುತ್ತಾ ಅವನ ಹಿಂದೆ ಸುತ್ತುತ್ತಿದ್ದರು. ತುಂಟರಾದ ಕೆಲವರು ಹುಡುಗರು ಅವನ ಕಿವಿಯನ್ನು ಹಿಡಿದುಕೊಂಡು ಅಲ್ಲಾಡಿಸುತ್ತಿದ್ದರೂ ಅವನು ಸ್ವಲ್ಪವಾದರೂ ಕೋಪಿಸಿಕೊಳ್ಳದೆ ಇರುತ್ತಿದ್ದನು. ಕೆಲವರು ಬಾಲಕರು ಪರಿಹಾಸಾರ್ಥವಾಗಿ ಅವನ ಕಡೆಗೆ ಎಸೆದ ಕಲ್ಲುಗಳ ಪೆಟ್ಟನ್ನು ತಡೆಯಲಾರದೆ, ಅವನು ಆ ಬಾಲಕರನ್ನು ತರುಬಿಕೊಂಡು ಹೋಗುತ್ತಿದ್ದನು. ಅವನ ರಭಸವನ್ನು ಕಂಡರೆ, ಅಪರಾಧಿಗಳನ್ನು ಹಿಡಿದುಕೊಂಡು ಅವನು ಅಪ್ಪಚ್ಚಿ ಮಾಡಿಬಿಡುವನೋ ಎಂಬಂತೆ ತೋರುತ್ತಿದ್ದರೂ, ಓಡಿ ಹೋಗುವುದಕ್ಕೆ ಸಾಮರ್ಥ್ಯವಿಲ್ಲದೆ ಹಿಂದೆಬಿದ್ದು, ಕಡೆಗೆ ತನ್ನ ಕೈಗೆ ಸಿಕ್ಕಿಹೋದ ದುರ್ಬಲರಾದ ಬಾಲಕರನ್ನು ತನ್ನ ಹೆಗಲಮೇಲೆ ಕುಳ್ಳಿರಿಸಿಕೊಂಡು ಸ್ವಲ್ಪದೂರ ಕರೆದುಕೊಂಡು ಹೋಗಿ ಅಲ್ಲಿ ಅವರನ್ನು ಇಳಿಸಿ ಸುಮ್ಮನೆ ಬಿಟ್ಟುಬಿಡುತ್ತಿದ್ದನು. ಈ ಗುಟ್ಟನ್ನು ಕಂಡುಕೊಂಡಿದ್ದ ಕೆಲವರು ಪಟಿಂಗಹುಡುಗರು ಆತನಮೇಲೆ ಈ ನೆವದಿಂದ ಸವಾರಿಮಾಡುತ್ತಿದ್ದರು.

ಹುಡುಗರು ತನ್ನನ್ನು ಎಷ್ಟು ಬಾಧಿಸಿದರೂ ಕೋಪಿಸಿಕೊಳ್ಳದೆ, ಆ ಹುಚ್ಚನು ವಿಕಟಹಾಸವನ್ನು ಮಾಡುತ್ತಿದ್ದನೇ ಹೊರತು, ಅವರಲ್ಲಿ ಯಾರಿಗೂ ಯಾವಬಗೆಯ ಕೇಡನ್ನಾದರೂ ಮಾಡುತ್ತಿರಲಿಲ್ಲ. ಆ ದಿನ ಉನ್ಮತ್ತನು ಈ ಮೇರೆಗೆ ಸುತ್ತುತ್ತಾ ಒಂದು ದೊಡ್ಡಬಯಲಿನ ಕಡೆಗೆ ಹೋದನು. ಅದರ ಮಧ್ಯದಲ್ಲಿ ಹಲವರು ಸುತ್ತಲೂ ಗುಂಪುಕಟ್ಟಿಕೊಂಡು ನಿಂತಿದ್ದರು. ಮತ್ತೂ ಮತ್ತೂ ಅನೇಕರು ಅಲ್ಲಿಗೆ ಹೋಗುತ್ತಿದ್ದರೇ ಹೊರತು, ಆ ಸ್ಥಳದಿಂದ ಹಿಂದಿರುಗಿ ಒಬ್ಬರೂ ಬರುತ್ತಿರಲಿಲ್ಲವಾದುದರಿಂದ ಅಲ್ಲಿ ನಡೆಯುತ್ತಿದ್ದ ಕಾರ್ಯವು ಇನ್ನೂ ಮುಗಿದಿರಲಿಲ್ಲವೆಂದು ಕಂಡುಬರುತ್ತಿದ್ದಿತು. ತತ್ಪುರನಿವಾಸಿಗಳು ಮಾತ್ರವಲ್ಲದೆ ಗ್ರಾಮಾಂತರಗಳ ಜನರೂ ಆ ವಿಶೇಷವನ್ನು

ನೋಡಲು ಅಲ್ಲಿಗೆ ಬರುತ್ತಿದ್ದರು. ಕೆಲವರು ವೀರರು ಖರತರಖಡ್ಗಗಳನ್ನು ಧರಿಸಿ ಮಹೋತ್ಸಾಹಭರಿತಾಂತರಂಗರಾಗಿ ಹೋಗುತ್ತಿದ್ದರು. ಅವರ ದೃಢತರ ಶರೀರಗಳನ್ನು ನೋಡಿದ ಮಾತ್ರದಿಂದಲೇ ಅವರು ಮಹಾಬಲಶಾಲಿಗಳಾಗಿದ್ದರೆಂದು ಊಹಿಸಬಹುದಾಗಿದ್ದಿತು. ಆ ಹುಚ್ಚನು ಹೀಗೆ ಹೋಗುತ್ತಿದ್ದ ವೀರರಲ್ಲಿ ಒಬ್ಬನನ್ನು ಕಣ್ಮರೆಯಾಗಗೊಡದಂತೆ ಹಿಂಬಾಲಿಸಿಕೊಂಡು ಹೋಗುತ್ತಿದ್ದನು. ಬಾಲಕರೂ ಸಹ ಹುಚ್ಚನನ್ನು ಅನುಸರಿಸಿಕೊಂಡೇ ಹೋಗುತ್ತಿದ್ದರು. ಹೀಗೆ ಹುಚ್ಚನೂ ಅವನನ್ನು ಮುಸುರಿಕೊಂಡಿದ್ದ ಹುಡುಗರೂ ತನ್ನ ಹಿಂದೆಹಿಂದೆಯೇ ಬರುತ್ತಿದ್ದರೂ, ಆ ವೀರಪುರುಷನು ಅತ್ತಿತ್ತ ನೋಡದೆ ಹೋಗಿ ಜನರ ಗುಂಪನ್ನು ಸೇರಿದನು. ಆ ಗುಂಪಿನೊಳಗಡೆ ಕೆಲವರು ಆಯುಧಧಾರಿಗಳಾದ ವೀರರು ನಿಂತಿದ್ದರು. ಜನರ ಗುಂಪು ಒಳನುಗ್ಗದಂತೆ ಅದನ್ನು ತಡೆದುನಿಲ್ಲಿಸುವುದಕ್ಕಾಗಿ ಕೆಲವರು ರಾಜಭಟರು ನೋಡಿಕೊಳ್ಳುತ್ತಿದ್ದರು. ಹಿಂದೆ ನಿಂತಿದ್ದವರಿಗೆ ಒಳಗಣ ಸಮಾಚಾರಗಳು ಗೊತ್ತಾಗದಿದ್ದುದರಿಂದ ಅವರು ಸಮೀಪದಲ್ಲಿದ್ದ ಗಿಡಮರಗಳನ್ನು ಹತ್ತಿ ನೋಡುತ್ತಿದ್ದರು. ಮೇಲೆಹೇಳಿದ ವೀರಪುರುಷನು ಒಳಗಿದ್ದ ವೀರರಂತೆಯೇ ಸುಸಜ್ಜಿತನಾಗಿ ಬಂದಿದ್ದರೂ, ಒಳಗಣ ಸಮಾಚಾರಗಳನ್ನು ತಿಳಿದುಕೊಂಡ ಹೊರತು ಆ ಗುಂಪಿನೊಳಕ್ಕೆ ಪ್ರವೇಶಿಸಲು ಇಷ್ಟಪಡದೆ ಹೊರಪಕ್ಕದಲ್ಲಿಯೇ ನಿಂತುಕೊಂಡಿದ್ದನು. ಸಾಧಾರಣಜನರಿಗಿಂತಲೂ ಆತನು ದೀರ್ಘಕಾಯನಾಗಿದ್ದುದರಿಂದ, ಒಳಗೆ ನಡೆಯುತ್ತಿದ್ದ ಕಾರ್ಯಗಳೆಲ್ಲವೂ ನಿಂತಿದ್ದ ಸ್ಥಳದಿಂದಲೇ ಆತನಿಗೆ ಸುಲಭವಾಗಿ ಕಾಣುತ್ತಿದ್ದುವು. ಇಷ್ಟರಲ್ಲಿ ಆ ಹುಚ್ಚನೂ ಅದೇ ಸ್ಥಳವನ್ನು ಸಮೀಪಿಸಿ ಹುಚ್ಚುಹುಚ್ಚಾಗಿ ಹರಟೆಹೊಡೆಯುತ್ತಾ ಆ ಗುಂಪಿನೊಳಕ್ಕೆ ನುಗ್ಗಿದನು. ಅವನನ್ನು ಒಬ್ಬರಾದರೂ ತಡೆಯಲಿಲ್ಲ. ಅಲ್ಲಿದ್ದವರನ್ನು ಕುರಿತು ಆ ವೀರನು ಅಲ್ಲಿ ನಡೆಯುವ ಸಂಗತಿಯೇನೆಂದು ವಿಚಾರಿಸಲು "ವೀರರ ಬಲಾಬಲಗಳನ್ನೂ, ಆಯುಧವಿದ್ಯಾಚಾತುರ್ಯವನ್ನೂ ಚೆನ್ನಾಗಿ ಪರೀಕ್ಷಿಸಿ ಕೃಷ್ಣದೇವರಾಯರು ಅವರವರ ಯೋಗ್ಯತೆಗೆ ತಕ್ಕಂತೆ ಬಹುಮಾನಗಳನ್ನು ದಯಪಾಲಿಸುವರು" ಎಂದು ಅವರು ತಿಳಿಸಿದರು.

ಇದನ್ನು ಕೇಳಿ ಆ ನೂತನಪುರುಷನು ಅತ್ಯಾನಂದವನ್ನು ಹೊಂದಿ ತನಗೆ ತಕ್ಕ ಸಮಯವು ಲಭಿಸಿತೆಂದು ನೆನೆಸಿ ತಾನೂ ಆ ವೀರರೊಡನೆ

ಸೇರಬೇಕೆಂದು ನಿರ್ಧರಿಸಿ ಅತ್ತಕಡೆಯೇ ನೋಡುತ್ತಿದ್ದನು. ಅಷ್ಟರಲ್ಲಿ ಮಂಗಳವಾದ್ಯಘೋಷವು ಕೇಳಬಂದಿತು. ಜನರು ಇದನ್ನು ಕೇಳಿ ಅದೇನಿರಬಹುದೆಂದು ತರ್ಕವಿತರ್ಕಗಳನ್ನು ಮಾಡಿಕೊಳ್ಳುತ್ತಾ, ಕುತೂಹ ಲಿತಾಂತರಂಗರಾಗಿ ನೋಡುತ್ತಿದ್ದರು. ಆಗ ರಾಜಾಧಿರಾಜರಾದ ಶ್ರೀಕೃಷ್ಣ ದೇವರಾಯರು ತುರಗಶ್ರೇಷ್ಠಗಳನ್ನು ಹೂಡಿದ್ದ ಒಂದು ರಥದಲ್ಲಿ ಕುಳಿತು ಕತಿಪಯಸೇವಕಪರೀತರಾಗಿ ಅಲ್ಲಿಗೆ ಬಿಜಮಾಡಿ ತಮಗಾಗಿ ಏರ್ಪಡಿಸಿದ್ದ ಉನ್ನತಾಸನವನ್ನಲಂಕರಿಸಿದರು.

ಬಳಿಕ ಆ ದಿನದ ಕಾರ್ಯಗಳು ಉಪಕ್ರಮವಾದುವು. ಮೊದಲು, ಪರೀಕ್ಷಾರ್ಥವಾಗಿ ಬಂದಿದ್ದವರು ತಮ್ಮ ಖಡ್ಗಗಳನ್ನು ಹಿಡಿದು ಸಾಧಕ ಮಾಡಿದರು. ಆದರೆ ಹೀಗೆ ಸಾಧಕಮಾಡುವುದರಲ್ಲಿ ಒಂದು ಚಮತ್ಕಾರವಿ ದ್ದಿತು. ಜನರು ತಮ್ಮಮೇಲೆ ಎಸೆಯುತ್ತಿದ್ದ ಕಲ್ಲುಗಳನ್ನು ಮೇಲೆ ಬೀಳಿಸಿ ಕೊಳ್ಳದಂತೆ ಸಾಧಕಮಾಡುತ್ತಿದ್ದವರು ಕತ್ತಿಗಳನ್ನು ತಿರುಗಿಸಬೇಕಾಗಿ ದ್ದಿತು. ಅವರಲ್ಲಿ ಯಾರು ಈ ಕಟ್ಟಿಗೆ ತಪ್ಪದಂತೆ ಸಾಧಕ ಮಾಡಬಲ್ಲವ ರಾಗಿದ್ದರೋ ಅವರೇ ಜಯಶಾಲಿಗಳೆಂದು ನಿರ್ಣಯವಾಗುತ್ತಿದ್ದಿತು. ಇದ ರಲ್ಲಿ ಉತ್ತೀರ್ಣರಾದವರು ಬಳಿಕ ಬಿಲ್ಲುಬಾಣಗಳನ್ನು ಹಿಡಿದು ಒಂದು ಲಕ್ಷ್ಯವನ್ನು ಭೇದಿಸಬೇಕಾಗಿದ್ದಿತು. ಇದರಲ್ಲಿ ಅನೇಕರು ಪರಾಜಿತರಾ ದರು. ಮೊದಲನೆಯ ಪಂಥದಲ್ಲಿ ಗೆದ್ದವನು ಇದರಲ್ಲಿಯೂ ವಿಜಯಿ ಯಾದನು. ಇದಾದ ಬಳಿಕ ಕಾಯಶಕ್ತಿಯ ಪರೀಕ್ಷೆಗಾಗಿ ನಿಯಾಮಕವಾ ಗಿದ್ದಮಲ್ಲಯುದ್ಧಗಳು ಮಹಾರಾಜರ ಅನುಮತಿಯಂತೆ ಪ್ರಾರಂಭವಾದುವು. ಕೂಡಲೆ ಇಬ್ಬರು ಪುರುಷರು ಅಖಾಡಕ್ಕೆ ಬಂದು ವಿಚಿತ್ರಗತಿಗಳಿಂದ ಸುತ್ತುತ್ತಾ ತಮ್ಮ ಬಲಾತಿಶಯಗಳನ್ನು ತೋರಿಸುತ್ತಾ, ಪ್ರೇಕ್ಷಕರ ಮನಸ್ಸನ್ನು ತಮ್ಮಕಡೆಗೆ ಆಕರ್ಷಿಸಿ, ಮಲ್ಲಯುದ್ಧಕ್ಕೆ ಮೊದಲುಮಾಡಿದರು. ಈ ಇಬ್ಬರು ಮಲ್ಲರಲ್ಲಿ ಒಬ್ಬನು, ಪಾಠಕರಿಗೆ ಪೂರ್ವದಲ್ಲಿ ಪರಿಚಿತನಾಗಿ ರುವ ರುದ್ರದೇವನು ; ಮತ್ತೊಬ್ಬನ ಹೆಸರು ಶಂಕರರೆಡ್ಡಿ. ಇಂಬರಿಬ್ಬರಿಗೂ ಮಲ್ಲಯುದ್ಧಕ್ಕೆ ಪ್ರಾರಂಭವಾದ ಸ್ವಲ್ಪಹೊತ್ತಿನೊಳಗಾಗಿ ರುದ್ರದೇವನೆ ವಿಜಯಿಯಾದನು. ಹಿಂದೆ ನಡೆದ ಎರಡು ಪಂಥಗಳಲ್ಲಿಯೂ ಈತನೇ ಜಯಶಾಲಿಯಾಗಿದ್ದುದರಿಂದ ಪ್ರೇಕ್ಷಕರ ಪ್ರೋತ್ಸಾಹಪೂರ್ವಕವಾದ ಪ್ರಶಂ ಸಾಶಬ್ದಗಳೂ ಕರತಲಧ್ವನಿಗಳೂ ದಿಗ್ವಿವರಗಳನ್ನು ವ್ಯಾಪಿಸಿದುವು.

ಆಗ ಕೃಷ್ಣದೇವರಾಯರು ತಮ್ಮ ಪೀಠವನ್ನು ಬಿಟ್ಟೆದ್ದು—" ವೀರ ಶ್ರೇಷ್ಠರೇ! ಇಲ್ಲಿರುವವರಲ್ಲಿ ಈ ರುದ್ರದೇವನೇ ಎಲ್ಲಾ ಕಾರ್ಯಗಳಲ್ಲಿಯೂ ಪ್ರಥಮಸ್ಥಾನವನ್ನು ಪಡೆದಿರುವನು. ಆದುದರಿಂದ ಈತನಿಗೆ ಬಹುಮಾನ ವನ್ನು ಕೊಡಬೇಕೆಂದಿರುವೆವು. ಇದಕ್ಕೆ ಯಾರದಾದರೂ ಆಕ್ಷೇಪಣೆ ಇರುವ ಪಕ್ಷದಲ್ಲಿ, ಅಂತಹವರು ಬಂದು ಈತನನ್ನು ಇದಿರಿಸಬಹುದು ; ಇಲ್ಲದಿದ್ದರೆ ಈತನಿಗೇ ಬಹುಮಾನವನ್ನು ಕೊಡಲಾಗುವುದು " ಎಂದು ಹೇಳಿದರು.

ಇದನ್ನು ಕೇಳಿ ಆ ಹುಚ್ಚನು ಎದ್ದು " ನಾನು ಆಕ್ಷೇಪಿಸುವೆನು. ಎಲ್ಲರನ್ನೂ ಮೀರಿಸಿದ ವೀರನು ನಾನು; ಬಹುಮಾನವನ್ನು ನನಗೇ ಕೊಡ ಬೇಕು " ಎಂದನು. ಈ ಮಾತುಗಳನ್ನು ಕೇಳಿ ಎಲ್ಲರೂ ಪಕಪಕನೆ ನಕ್ಕರು. ಚಕ್ರವರ್ತಿಯವರೂ ಈ ಪ್ರಲಾಪವನ್ನು ಕೇಳಿ ಮಂದಸ್ಮಿತ ವದನರಾದರು. ಹಾಗೆ ಮಾತನಾಡಿ ಸುಮ್ಮನಿರದೆ, ಆ ಹುಚ್ಚನು ತನಗೆ ಸಮೀಪದಲ್ಲಿದ್ದವರಲ್ಲಿ ಒಬ್ಬಾತನ ಕೈಯಲ್ಲಿದ್ದ ಕತ್ತಿಯನ್ನು ಎಳೆದು ಕೊಂಡು ಅದನ್ನು ಚಿತ್ರವಿಚಿತ್ರವಾಗಿ ತಿರುಗಿಸುತ್ತಾ ಪ್ರೇಕ್ಷಕರಿಗೆ ವಿನೋದ ವನ್ನುಂಟುಮಾಡುತ್ತಿದ್ದನು. ಹುಚ್ಚನ ಕರಲಾಘವವನ್ನು ಕಂಡು ಮಹಾ ರಾಜರೂ ಆಶ್ಚರ್ಯಪಡುತ್ತಿದ್ದರು. ಅನಂತರ ಅವನು ವೀರರನ್ನು ಉದ್ದೇಶಿಸಿ ಹಿಂದೆ ಹೇಳಿದಂತೆಯೇ ಪ್ರಲಪಿಸಿದನು. ಅಲ್ಲಿದ್ದವರು ಒಬ್ಬರಮುಖವ ನ್ನೊಬ್ಬರು ನೋಡುತ್ತಾ ಇರಲು, ಆ ಸಮಯದಲ್ಲಿ ಹಿಂದೆ ಹೇಳಿದ ನೂತನವೀರನು ಜನರಗುಂಪನ್ನು ಭೇದಿಸಿಕೊಂಡು ರಂಗಸ್ಥಳವನ್ನು ಸಮೀಪಿಸಿ ಬಹಳ ನಮ್ರತೆಯಿಂದ ಮಹಾರಾಜರವರಿಗೆ ನಮಸ್ಕರಿಸಿದನು. ಈ ವ್ಯಕ್ತಿಯು ದೀರ್ಘಕಾಯನಾಗಿಯೂ ಆಜಾನುಬಾಹುವಾಗಿಯೂ ಇದ್ದನು. ಅವನಿಗೆ ಆಗತಾನೆ ಯೌವನವು ತಲೆದೋರುತ್ತಿದ್ದಿತೆಂದು ಕಾಣು ತ್ತಿದ್ದಿತು. ಆತನು ಮಹಾರಾಜರ ಇದಿರಿಗೆ ನಿಂತುಕೊಂಡು " ಮಹಾಸ್ವಾಮಿ ಯವರು ಅವಧರಿಸೋಣವಾಗಬೇಕು: ಈ ವೀರನು ನನ್ನನ್ನು ಜಯಿಸುವ ವರೆಗೂ ತಾವು ದಯಪಾಲಿಸಬೇಕೆಂದಿರುವ ಬಹುಮತಿಯನ್ನು ಹೊಂದಲು ಅರ್ಹನಾಗಲಾರನು " ಎಂದು ಗಂಭೀರವಾಗಿ ಹೇಳಿದನು.

ಆತನ ಆಕಾರಲಕ್ಷಣಗಳಿಂದಲೂ ಗಂಭೀರಭಾಷಣದಿಂದಲೂ ಆತನು ಒಬ್ಬ ಪ್ರತಾಪಶಾಲಿಯೆಂದು ಪ್ರೇಕ್ಷಕರು ಭಾವಿಸಿ, ಆತನೇ ಎಲ್ಲಾ ಪಂಥ

ಗಳಲ್ಲಿಯೂ ವಿಜಯಿಯಾಗಿ ಬಹುಮಾನವನ್ನು ಪಡೆಯುವನೆಂದು ನಿಶ್ಚಯಿಸಿದರು. ಆತನನ್ನು ಕಂಡಕೂಡಲೆ ಇದುವರೆಗೂ ಜಯಶಾಲಿಯಾಗಿದ್ದ ರುದ್ರದೇವನಿಗೂ ಸಹ ಹಸ್ತಗತವಾಗಿದ್ದ ಬಹುಮತಿಯು ತಪ್ಪಿಹೋಗುವುದೆಂಬ ಶಂಕೆಯು ತಲೆದೋರಿತು. ಅಷ್ಟರಲ್ಲಿ ಆ ವೀರನು ಮಹಾರಾಜರವರ ಅನುಮತಿಯನ್ನು ಪಡೆದು ತನ್ನ ಖಡ್ಗವನ್ನು ತಿರುಗಿಸಲಾರಂಭಿಸಿದನು. ಇಪ್ಪತ್ತು ಮಂದಿ ಅವನಮೇಲೆ ಕಲ್ಲುಗಳನ್ನು ಎಸೆಯುತ್ತಿದ್ದರೂ, ಪ್ರತಿಯೊಂದು ಕಲ್ಲೂ ಕತ್ತಿಗೆ ತಾಕಿ ಕೆಳಗೆ ಬೀಳುತ್ತಿದ್ದಿತೇ ವಿನಾ, ಒಂದಾದರೂ ಆತನ ಮೈಯನ್ನು ಸೋಕಲಿಲ್ಲ. ಆತನ ಈ ಬಗೆಯ ಕರಲಾಘವವನ್ನು ಕಂಡು ಪ್ರೇಕ್ಷಕರಲ್ಲಿ ಹಲವರು ವಿಸ್ಮಯಾವಿಷ್ಟಚಿತ್ತರಾದರು. ಅಲ್ಲಿದ್ದ ವೀರರಲ್ಲಿ ಕೆಲವರನ್ನು ಈರ್ಷ್ಯಾನಲವು ವೇದಿಸುತ್ತಿದ್ದಿತು. ಅನಂತರ ಆ ವೀರನು ಬಿಲ್ಲುಬಾಣಗಳನ್ನು ತೆಗೆದುಕೊಂಡು ದೂರದಲ್ಲಿದ್ದ ಗುರಿಯನ್ನು ಒಂದೇ ಒಂದು ಬಾಣದಿಂದ ಕತ್ತರಿಸಿ ಕೆಡವಿದನು. ಮಹಾರಾಜರೂ ನಿಷ್ಪಕ್ಷಪಾತಿಗಳಾದ ಅನೇಕ ಪ್ರೇಕ್ಷಕರೂ ರುದ್ರದೇವನ ಕೈಚಳಕಕ್ಕಿಂತಲೂ ಈ ನೂತನವೀರನದೇ ಮೇಲಾದುದೆಂದು ನಿರ್ಧರಿಸಿದರು. ಮತ್ಸರಗ್ರಸ್ತರಾದ ಕೆಲವರಿಗೂ, ತಮ್ಮದೇಶದ ವೀರನಾದ ರುದ್ರದೇವನಿಗೆ ಸಲ್ಲುತ್ತಿದ್ದ ಬಹುಮಾನವು ವಿದೇಶೀಯನಾದ ಈ ನೂತನವೀರನಿಗೆ ದೊರಕುವುದಲ್ಲಾ ಎಂಬ ದುರಾಗ್ರಹದಿಂದ ದಗ್ಧಮಾನಸರಾದ ಮತ್ತೆ ಕೆಲವರಿಗೂ, ನೂತನವ್ಯಕ್ತಿಯ ಕಾರ್ಯಗಳಲ್ಲಿ ಇಲ್ಲದಿದ್ದ ಕೆಲವು ಹುಳುಕುಗಳು ಕಾಣುತ್ತಿದ್ದುವು. ಆದರೂ ಮಹಾರಾಜರವರು ಇಂತಹ ಕರುಬರ ಆಕ್ಷೇಪಣೆಗಳಿಗೆ ಕಿವಿಗೊಡಲಿಲ್ಲ. ಅಂತೂ ಮಲ್ಲಯುದ್ಧದಲ್ಲಿ ವಿಜಯಿಯಾದಾತನೇ ಬಹುಮಾನಾರ್ಹನಾಗುವನೆಂದು ಹೇಳಿದ್ದುದರಿಂದ ರುದ್ರದೇವನೂ ನೂತನವೀರನೂ ಆ ಯುದ್ಧಕ್ಕೆ ಸಿದ್ಧರಾದರು. ಅವರಿಬ್ಬರೂ ಮತ್ತೇಭಗಳಂತೆ ಒಬ್ಬನ ಇದಿರಿಗೆ ಮತ್ತೊಬ್ಬನು ನಿಂತು ಭುಜಾಸ್ಫಾಲನಗಳಿಂದಲೂ, ಊರುಸ್ಫಾಲನಗಳಿಂದಲೂ ಪ್ರೇಕ್ಷಕರ ದೃಷ್ಟಿಗಳನ್ನು ತಮ್ಮ ಕಡೆಗೆ ಆಕರ್ಷಿಸಿ ಒಬ್ಬರನ್ನೊಬ್ಬರು ಬಗೆಬಗೆಯ ಪಟ್ಟುಗಳಿಂದ ಬಿಗಿದು ಹಿಡಿದು ವಿವಿಧಚಿತ್ರಗತಿಗಳಿಂದ ಪ್ರೇಕ್ಷಕರಿಗೆ ಹರ್ಷೋತ್ಕರ್ಷವನ್ನುಂಟುಮಾಡುತ್ತಿದ್ದರು. ಅಲ್ಲಿದ್ದವರಲ್ಲಿ ಕೆಲವರು ರುದ್ರದೇವನ ಪಕ್ಷವನ್ನೂ ಮತ್ತೆ ಕೆಲವರು ನೂತನವೀರನ ಪಕ್ಷವನ್ನೂ

ಹಿಡಿದು ತಮ್ಮ ಕಡೆಯುವವನಿಗೆ ಗೆಲುವಾಗುವಂತೆ ತೋರಿದಾಗ ಉಬ್ಬುತ್ತಲೂ ಸೋಲಾಗುವಂತೆ ಕಂಡಾಗ ತಗ್ಗುತ್ತಲೂ ಅತ್ಯಂತ ಕೌತೂಹಲಾಂದೋಳಿತ ಮಾನಸರಾಗಿದ್ದರು. ಯಾರನ್ನು ಯಾರು ಗೆಲ್ಲುವರೋ ನೋಡಬೇಕೆಂದು ಮೆಟ್ಟುಂಗಾಲಿನಮೇಲೆ ನಿಂತು ಎವೆಯಿಕ್ಕದೆ ನೋಡುತ್ತಿದ್ದ ಆ ಪ್ರೇಕ್ಷಕರಿಗೆ ರಾಜಭಟರ ನಿರ್ಬಂಧಗಳ ಮೇಲೆ ಸ್ಫೂರ್ತಿಯೇ ಇರಲಿಲ್ಲ. ಮಲ್ಲಯುದ್ಧಕ್ಕೆ ಪ್ರಾರಂಭವಾದ ಸ್ವಲ್ಪಹೊತ್ತಿನಲ್ಲಿಯೇ ನೂತನವ್ಯಕ್ತಿಯು ರುದ್ರದೇವನನ್ನು ಕೆಳಗೆ ಕೆಡವಿಬಿಟ್ಟು, ಮಹಾರಾಜರ ಸಮೀಪವನ್ನು ಸೇರಿ ವಿನೀತಭಾವದಿಂದ ನಮಸ್ಕಾರಮಾಡಿ ಕೈಕಟ್ಟಿಕೊಂಡು ನಿಂತನು. ರುದ್ರದೇವನೂ, ಪರಾಭವದಿಂದ ತಗ್ಗಿದ ಮೋರೆಯುಳ್ಳವನಾಗಿ ಮರು ಮಾತಿಲ್ಲದೆ ಮತ್ತೊಂದು ಪಕ್ಕಕ್ಕೆ ಹೋಗಿನಿಂತನು.

ಆ ನೂತನಪುರುಷನಿಗೆ ಆ ಜಯವನ್ನು ಸಹಿಸಲಾರದೆ ಕೆಲವರು ಕರುಬರು ಅತನು ಮಾಡಿದ ಮಲ್ಲಯುದ್ಧವು ಅನ್ಯಾಯವಾದುದೆಂದು ವಾದಿಸ ತೊಡಗಿದರು. ಆದರೆ ಮಲ್ಲಯುದ್ಧವಿದ್ಯೆಯಲ್ಲಿ ನಿರುಪಮಾನಚಾತುರ್ಯವನ್ನು ಪಡೆದಿದ್ದ ಮಹಾರಾಜರವರು ಅಂತಹವರ ಆಕ್ಷೇಪಣೆಗಳನ್ನು ಕಿವಿಯಮೇಲೆ ಹಾಕಿಕೊಳ್ಳದೆ, ನಿಯಮಿತವಾಗಿದ್ದ ಬಹುಮಾನವನ್ನು ನೂತನಪುರುಷನಿಗೆ ದಯೆಪಾಲಿಸಿದರು. ತರುವಾಯ ಶ್ರೀಕೃಷ್ಣದೇವರಾಯರು ರುದ್ರದೇವನ ಸಾಮರ್ಥ್ಯವನ್ನೂ ಶ್ಲಾಘಿಸಿ ಎರಡನೆಯ ಬಹುಮಾನವನ್ನು ಆತನಿಗೆ ಕೊಟ್ಟು "ಪರಾಜಯವನ್ನು ಪಡೆದರೂ ನೀನು ಇತರ ಪರಾಜಿತರಲ್ಲಿ ಸೇರಿಸ ತಕ್ಕವನಲ್ಲ" ವೆಂದು ಪ್ರೋತ್ಸಾಹವಚನಗಳಿಂದ ಅವನನ್ನು ಸಂತೋಷಗೊಳಿಸಿದರು. ಮಿಕ್ಕ ವೀರರಿಗೂ ಉತ್ಸಾಹಭಂಗವಾಗದಂತೆ ತತ್ತದರ್ಹವಾದ ಬಹುಮತಿಗಳನ್ನು ಕೊಡಿಸಿದರು. ಮಿಕ್ಕ ವೀರರು ಸಂತುಷ್ಟರಾದರೂ, ರುದ್ರದೇವನು ಕೈಗೆ ಬಂದಿದ್ದ ತುತ್ತು ಬಾಯಿಗೆ ಬಾರದೇ ಹೋಯಿತಲ್ಲಾ ಎಂಬ ವ್ಯಥೆಯಿಂದ ಖಿನ್ನಮಾನಸನಾದನು. ಈ ಮಧ್ಯದಲ್ಲಿ ಆ ಹುಚ್ಚನಿಗೂ ಒಂದು ಬಹುಮಾನವು ದೊರಕಿತು. ಆದರೆ ಆ ಹುಚ್ಚನು—"ಅಂಗೀಕರಿಸಿದರೆ ಮೊದಲನೆಯ ಬಹುಮಾನವನ್ನೇ ಅಂಗೀಕರಿಸಬೇಕು; ಉಳಿದ ಬಹುಮಾನಗಳಿಂದ ಪ್ರಯೋಜನವಿಲ್ಲ" ಎಂದು ಹೇಳಿ, ತನಗೆ ಬಂದಿದ್ದ ಬಹುಮಾನವನ್ನು ನೆಲದಮೇಲೆ ಒಂದುಕಡೆ ಇಟ್ಟುಬಿಟ್ಟು ಹೊರಟುಹೋದನು. ಹುಚ್ಚನ

ಈ ಚೇಷ್ಟೆಗಳನ್ನು ನೋಡಿ ಅಲ್ಲಿದ್ದವರೆಲ್ಲ ... ಪರಾಜಿತರಾಗಿದ್ದ ಕೆಲವರು ಹುಚ್ಚನ ಈ ಮಾತುಗಳಿಗೆ ... ಗಳು ದೈವಾಧೀನವೆಂದು ಭಾವಿಸಿ ತಮ್ಮ ... ನಿವಾಸಸ್ಥಾನಗಳನ್ನು ಕುರಿತು ಹೊರಟರು. ದುರ್ಗ್ರೀವನಾದರೋ ಆ ... ನೂತನಪುರುಷನ ವಿಷಯದಲ್ಲಿ ಅಮಿತಕ್ರೋಧವನ್ನು ವಹಿಸಿ ಆ ... ಹೊರಟುಹೋದನು. ಹುಚ್ಚನೂ ಅವನ ಹಿಂದೆಯೇ ... ಮಾಡುತ್ತಾ, ತನ್ನ ಸುತ್ತಲೂ ಬರುತ್ತಿದ್ದ ಹುಡುಗರೆಲ್ಲ ... ಮಾಡುತ್ತಾ ಹೋಗುತ್ತಿದ್ದನು. ಪರಾಜಿತರಾಗಿದ್ದ ಮತ್ತೆ ಕೆಲವು ವೀರರು ತಮಗೆ ಪರಾಭವದಿಂದುಂಟಾದ ಅವಮಾನಕ್ಕಿಂತಲೂ ಈ ಹುಚ್ಚನ ಮರ್ಮಪೀಡಕವಾದ ಹರಟೆಗಳಿಂದ ಹೆಚ್ಚು ಅವಮಾನವಾಯಿತೆಂದು ಭಾವಿಸಿ, ಬೇಗಬೇಗನೆ ತಮ್ಮ ವಾಸಸ್ಥಳಗಳಿಗೆ ಹೋಗಿ ಸೇರಿಕೊಂಡರು. ತಮ್ಮೆಲ್ಲರನ್ನೂ ಜಯಿಸಿದ್ದ ರುದ್ರವೀರನ ಅಹಂಕಾರವನ್ನು ... ವಿದೇಶೀಯನಾದ ಆ ನೂತನಪುರುಷನ ವಿಷಯದಲ್ಲಿ ... ಸಿದ್ಧ್ಯೈರಭಾವಕ್ಕೆ ಹೋಗಿ ಹುಚ್ಚನ ಹರಟೆಗಳಿಂದ ಈಷ್ಯಾನಲ ಹೆಚ್ಚು ... ಈ ಸಮಯದಲ್ಲಿ ಮಹಾರಾಜರಿಗೂ ನೂತನ ವೀರಪುರುಷನಿಗೂ ಈ ಕೆಳಗೆ ಹೇಳಿರುವಂತೆ ಸಂಭಾಷಣೆಯು ನಡೆಯುತ್ತಿದ್ದಿತು :—

ಮಹಾರಾಜ—"ವೀರಶ್ರೇಷ್ಠನೇ! ನಿನ್ನ ನಿವಾಸಸ್ಥಳವು ಯಾವುದು? ನೀನು ಉನ್ನತವಂಶಸಂಭವನೆಂದು ತೋರುವಿ. ನಿನ್ನ ಪರಾಕ್ರಮವು ವರ್ಣನೀಯವಾದುದು. ನಿನ್ನ ತಂದೆಯವರು ಯಾರು?"

ನೂತನವೀರ—"ಮಹಾಸ್ವಾಮಿ, ನನ್ನ ನಿವಾಸಸ್ಥಳವು ಕೊಂಡಪಲ್ಲಿ ದುರ್ಗ. ವೀರನಾರಾಯಣಗಜಪತಿಯವರು ನನ್ನ ತೀರ್ಥರೂಪರವರು, ಪರಾಕ್ರಮದಿಂದ ಜೀವಿಸಬೇಕೆಂದು ನಾನು ಈ ಪ್ರಾಂತಕ್ಕೆ ಬಂದಿರುವೆನು"

ಕೃ. ದೇ. ರಾ.—"ನೀನು ವೀರನಾರಾಯಣಗಜಪತಿಯ ಮಗನೇನು? ನೀನೂ ನಿಮ್ಮ ತಂದೆಯಂತೆಯೇ ನಿರುಪಮಪರಾಕ್ರಮಶಾಲಿಯಾಗಿರುವೆ. ನಾವು ಕೊಂಡಪಲ್ಲಿಯನ್ನು ಹಿಡಿದುಕೊಂಡಾಗ ನಿಮ್ಮ ಜನಕನು ತೋರಿಸಿದ ಪರಾಕ್ರಮವು ಅದ್ವಿತೀಯವಾಗಿದ್ದಿತು. ಇಲ್ಲಿಗೆ ನೀನು ಯಾವಾಗ ಬಂದೆ? ಎಲ್ಲಿ ಇಳಿದುಕೊಂಡಿರುವೆ?"

ವೀರ—"ಸಾರ್ವಭೌಮರು ಲಾಲಿಸಬೇಕು! ನಾನು ಎರಡು ದಿನಗಳಿಗೆ ಹಿಂದೆ ಈ ಪಟ್ಟಣಕ್ಕೆ ಬಂದೆನು. ಮೊನ್ನೆ ಮಂತ್ರಿಶ್ರೇಷ್ಠರಿಗೆ ರಾಜದ್ರೋಹಿಗಳ ಮೂಲಕ ಪ್ರಾಪ್ತವಾದ ತೊಂದರೆಯಲ್ಲಿ ಸ್ವಲ್ಪ ಸಹಾಯ ಮಾಡಿದುದಕ್ಕಾಗಿ ಸಂತೋಷಿಸಿ ಅವರು ನನ್ನನ್ನು ತಮ್ಮೊಡನೆ ಕರೆದುಕೊಂಡು ಹೋಗಿ ಅವರ ಮನೆಯಲ್ಲಿ ಇರಿಸಿಕೊಂಡಿರುವರು. ಅಮಾತ್ಯಶ್ರೇಷ್ಠರಿಗೆ ಅವಕಾಶವು ದೊರೆಯದಿದ್ದುದರಿಂದ ಅವರು ತಮ್ಮ ಸಂದರ್ಶನಕ್ಕೆ ಬಾರಲಿಲ್ಲ. ಅದರಿಂದಲೇ ನನಗೂ ಮಹಾಸ್ವಾಮಿಯವರ ಸಂದರ್ಶನಭಾಗ್ಯವು ಲಭಿಸಲಿಲ್ಲ. ಆದರೂ ಈಗ ಅಪ್ರತೀಕ್ಷಿತವಾಗಿಯೇ ಅಂತಹ ಭಾಗ್ಯವು ಲಭಿಸುವಂತೆ ಮಾಡಿದ ಭಗವಂತನಿಗೆ ಅತ್ಯಂತ ಕೃತಜ್ಞನಾಗಿರುವೆನು."

ಕೃ. ದೇ. ರಾ.—"ಮಿತ್ರನೇ! ವೀರ! ಸಾಂದ್ರತಮಚ್ಛಾಯೆಯನ್ನೂ ಸುರಸಫಲಗಳನ್ನೂ ತನ್ನ ಸನ್ನಿಧಾನದಲ್ಲಿ ಕೊಡುತ್ತಾ, ನನಗೂ ನಮ್ಮ ದೇಶದ ಪ್ರಜೆಗಳಿಗೂ ಒದಗಿಸುತ್ತಿರುವ ಆ ರಸಾಲಸಾಲಕ್ಕೆ ತೀವ್ರತರ ದಾವಾನಲಾರ್ಚಿಗಳಿಗೆ ಸಿಕ್ಕಿದ ಸಮಯದಲ್ಲಿ ಜೀವದಾನವನ್ನು ಮಾಡಿದ ಘನನು ನೀನೇಯೋ? ನೀನು ಈಗ ನಮ್ಮ ರಸಾಲವನ್ನು ರಕ್ಷಿಸುವುದಕ್ಕೇ ಇಲ್ಲಿಗೆ ಬಂದೆಯೋ ಅಥವಾ ಕಾರ್ಯಾಂತರದಿಂದ ಬಂದೆಯೋ?"

ವೀ—"ದೇವ ಮಹಾಪ್ರಭೋ! ಘನನು ವರ್ಷಿಸದ ಹೊರತು ಫಲವತ್ತಾದ ಕ್ಷೇತ್ರದಲ್ಲಿ ಬಿತ್ತಿದ ಬೀಜವು ಸಾರ್ಥಕವಾಗುವುದೇ? ವಿನಾ ಊಷರಭೂಮಿಯಲ್ಲಿ ವರ್ಷಿಸಿದಾಗ ನಿಷ್ಫಲವಾಗುವುದು. ಹಾಗೆಯೇ ತಮ್ಮ ಈ ಭೃತ್ಯನೂ ಪರೋಪಕಾರಕಾರ್ಯದಲ್ಲಿ ಪರಾಕ್ರಮಪ್ರದರ್ಶನವು ವಿಹಿತವೆಂದು ಭಾವಿಸಿ ತಮ್ಮಂತಹ ಸಾರ್ವಭೌಮರನ್ನು ಮೆಚ್ಚಿಸಿ ಕೀರ್ತಿಯನ್ನು ಸಂಪಾದಿಸಬೇಕೆಂಬ ಉದ್ದೇಶದಿಂದ ಇಲ್ಲಿಗೆ ಬಂದನು. ಇಂತಹ ಘನರಿಗೆ ಕೃಷ್ಣಭೂಭೃತ್ಸ್ಥಾನದಿಂದ ಆಶ್ರಯವು ಸಿಕ್ಕುವಹಾಗೆ ಮತ್ತಾರಿಂದ ದೊರಕಲಾರದು. ಆದುದರಿಂದಲೇ ನಾನು ಇತ್ತಕಡೆಗೆ ಬಂದೆನು. ಮಂತ್ರಿಯವರಿಗೆ ಸಹಾಯವನ್ನೀಯುವ ಸುಯೋಗವು ಅನಿರೀಕ್ಷಿತವಾಗಿ ಲಭಿಸಿತು."

ಕೃ. ದೇ. ರಾ.—"ಅನರ್ಘಗಾಂಭೀರ್ಯವುಳ್ಳ ನಿನ್ನ ವಚನಗಳನ್ನು ಕೇಳಿ ಬಹಳ ಆನಂದವಾಯಿತು. ಈ ಕೃಷ್ಣಭೂಭೃತ್ತು ನೂತನಘನನಿಗೆ ಆಶ್ರಯ ಕೊಡಲು ಅತ್ಯಂತ ಕುತೂಹಲಪಡುತ್ತಿದ್ದರೂ, ನವಾಂಬುದವು ಮೊದಲು

ಬೇಕಾದಷ್ಟು ವರ್ಷವನ್ನು ಸುರಿಸಿ ಪರ್ವತಸಾನುಗಳಲ್ಲಿಯ ದಾವಾನಲಾರ್ಚಿ ಗಳನ್ನು ಶಮನಮಾಡಿದರೂ, ಕಡೆಕಡೆಗೆ ಹಾಗೆ ಆರಿಸಿದ ದಾವಾನಲಜ್ವಾಲೆ ಗಳಿಗಿಂತಲೂ ಭಯಂಕರವಾದ ನಿರ್ಘಾತಗಳನ್ನು ಹೊರಡಿಸುವುದೂ ಉಂಟು. ಹಾಗೆಯೇ ನೀನೂ................''

ವೀರ—''ಮಹಾಪ್ರಭುಗಳ ಅಭಿಪ್ರಾಯವು ವಿಶದವಾಯಿತು. ಆ ನವಾಂಬುದದಂತೆಯೇ ನಾನೂ ಮೊದಮೊದಲು ಉಪದ್ರವವನ್ನು ಹೋಗ ಲಾಡಿಸಿದರೂ ಕೊನೆಕೊನೆಗೆ ತಮಗೇನಾದರೂ ದ್ರೋಹವನ್ನು ಮಾಡ ಬಹುದೆಂದು ತಾವು ಭಾವಿಸಿರುವಂತೆ ಕಾಣುತ್ತದೆ. ಆದರೆ ಈ ದಾಸನು ನವಾಂಬುದದಂತೆ ವಿವೇಕಶೂನ್ಯನೂ ನಿಷ್ಕರುಣನೂ ಅಲ್ಲ. ಆದುದರಿಂದ ಸಂಶಯಲೇಶವೂ ಇಲ್ಲದೆ ತಾವು ಆಶ್ರಯದಾನವನ್ನು ಮಾಡಬಹುದು.''

ಕೃ. ದೇ. ರಾ.—''ನಿನ್ನ ವಾಕ್ಯಗಳನ್ನು ಕೇಳಿ ಸಂತೋಷವಾಯಿತು. ನೀನು ನಮ್ಮ ಬಳಿಯಲ್ಲಿರಬಹುದು. ನಿನ್ನ ಹೆಸರೇನು?''

ವೀರ—''ನನ್ನನ್ನು ವಿಜಯಸಿಂಹ ಗಜಪತಿ ಎಂದು ಕರೆಯುವರು.''

ಕೃ. ದೇ. ರಾ.—''ವಿಜಯಸಿಂಹ! ನಿನ್ನ ಪರಾಕ್ರಮಾತಿಶಯದಿಂದಲೂ ನೀನು ಆಗಲೇ ಮಾಡಿರುವ ಮಹೋಪಕಾರದಿಂದಲೂ ನಮ್ಮ ಅನುಗ್ರಹಕ್ಕೆ ಪಾತ್ರನಾಗಿರುವೆ. ನಮ್ಮ ಆನಂದಪ್ರದರ್ಶನಾರ್ಥವಾಗಿ ಈ ಉಂಗುರವನ್ನು ಪರಿಗ್ರಹಿಸು. ಇದೂ ಅಲ್ಲದೆ ನಮ್ಮ ಆತಿಥ್ಯವನ್ನು ಸ್ವೀಕರಿಸುವುದಕ್ಕೆ ನಮ್ಮ ನಿವಾಸಕ್ಕೆ ಬಾ'' ಎಂದು ಹೇಳಿ ಆತನನ್ನು ತಮ್ಮ ರಥದಲ್ಲಿ ಕುಳ್ಳಿರಿಸಿ ಕೊಂಡು ರಾಜಭವನಾಭಿಮುಖರಾಗಿ ಹೊರಟರು.

ಹೀಗೆ ಹೋಗುತ್ತಿದ್ದಾಗ ವಿಜಯಸಿಂಹನು ತನಗೆ ಅಂತಹ ಮಹಾ ಗೌರವವು ಆದಿನ ಲಭ್ಯವಾದುದರಿಂದ ಅಮಂದಾನಂದವನ್ನು ಹೊಂದಿ, ಮನಸ್ಸಿ ನಲ್ಲಿಯೇ ಮುಕುಂದನಿಗೆ ಅಭಿವಂದನಗಳನ್ನು ಸಮರ್ಪಿಸಿದನು. ಸ್ವಲ್ಪ ಹೊತ್ತಿನಲ್ಲಿಯೇ ರಾಜಸೌಧವು ಸಮೀಪಿಸಿತು. ಅದನ್ನು ಉಭಯರೂ ಪ್ರವೇಶಿಸಿದ ಬಳಿಕ, ಸಾರ್ವಭೌಮರು ವೀರನಿಗೆ ಉಚಿತವಾದ ನಿವಾಸಸ್ಥಳ ವನ್ನೂ ಆತನ ಉಪಚಾರಕ್ಕಾಗಿ ಪರಿಜನಗಳನ್ನೂ ಯುಕ್ತವಾದ ರೀತಿಯಲ್ಲಿ ನಿಯಮಿಸಿ, ವಿಜಯಸಿಂಹನು ತನ್ನ ಅತಿಥಿಯಾಗಿ ಅರಮನೆಯಲ್ಲಿ ನಿಂತಿರು

ವುದನ್ನು ಅಪ್ಪಾಜಿಯವರ ಮನೆಗೆ ಹೇಳಿಕಳುಹಿಸಿ ಬಳಿಕ ತಮ್ಮ ಮಹಲಿಗೆ ಚಿತ್ತೈಸಿದರು.

ವಿಜಯಸಿಂಹನು ಇಳಿದುಕೊಂಡಿದ್ದ ಮಂದಿರಕ್ಕೆ ದಕ್ಷಿಣದಲ್ಲಿ ರಾಜ ನಿವಾಸ ಮಂದಿರವೂ ಅದಕ್ಕೆ ದಕ್ಷಿಣಪಾರ್ಶ್ವದಲ್ಲಿ ರಾಣೀವಾಸವೂ ಇದ್ದುವು. ಪಶ್ಚಿಮದಿಕ್ಕಿನಲ್ಲಿ ಮನೋಹರವಾದ ಒಂದು ಉದ್ಯಾನವಿದ್ದಿತು. ಅದರಲ್ಲಿ ಕೆಲವು ಉನ್ನತಸೌಧಗಳು ಮನೋಹರವಾಗಿ ಕಾಣುತ್ತಿದ್ದುವು. ಸಾರ್ವಭೌಮರೂ ಅಂತಃಪುರಸ್ತ್ರೀಯರೂ ಆಗಾಗ ಆ ಉದ್ಯಾನದಲ್ಲಿ ವಿಹರಿಸುವ ಪದ್ಧತಿಯಿದ್ದಿತು. ಭೃತ್ಯರು ತಂದು ಒಪ್ಪಿಸಿದ ಆಹಾರಪದಾರ್ಥಗಳನ್ನು ಸೇವಿಸಿ ವಿಜಯಸಿಂಹನು ಶಯನಿಸಿದ್ದನು. ಆ ಸಮಯದಲ್ಲಿ ಅತ್ಯಂತ ಮನೋಹರವಾದ ಗಾನವು ವಿಜಯಸಿಂಹನ ಕರ್ಣಕುಹರವನ್ನು ಪ್ರವೇಶಿಸಿ ಅವನ ಚಿತ್ತವನ್ನು ವಶಪಡಿಸಿಕೊಂಡಿತು. ಆ ಧ್ವನಿಯನ್ನು ಹಿಂದೆ ಕೇಳಿದ್ದಂತೆ ತೋರಿದುದರಿಂದ ಆತನ ಮನಸ್ಸಿನಲ್ಲಿ ಕುತೂಹಲತರಂಗವು ಉಂಟಾಯಿತು. ಆಗ ವಿಜಯಸಿಂಹನಿಗೂ ಆತನ ಬಳಿಯಲ್ಲಿದ್ದ ಸೇವಕನಿಗೂ ಈ ಮೇರೆಗೆ ಸಂಭಾಷಣೆಯು ನಡೆಯಿತು :—

ವಿ. ಸಿಂ—"ಆ ದಿಕ್ಕಿನಿಂದ ಮೃದುಮಧುರವಾಗಿ ಕೇಳಬರುತ್ತಲಿರುವ ಸಂಗೀತಧ್ವನಿಯು ಯಾರದು ?"

ಸೇ.—"ಮಹಾಪ್ರಭು ! ನಾಲ್ಕೈದು ದಿನಗಳಿಗೆ ಹಿಂದೆ ನಮ್ಮ ಮಹಾರಾಣಿಯವರ ಸಂದರ್ಶನಾರ್ಥವಾಗಿ ಇಲ್ಲಿಗೆ ಇಬ್ಬರು ಸ್ತ್ರೀಯರು ಬಂದಿರುವರು. ನಮ್ಮ ಮಹಾರಾಣಿಯವರಿಗೂ, ರಾಜಕುಮಾರಿಗಳಿಗೂ ಸಂಗೀತದಲ್ಲಿ ಪರಿಶ್ರಮವಿರುವುದರಿಂದ ಆಗಾಗ ಆ ಸ್ತ್ರೀಯರಲ್ಲಿ ಒಬ್ಬಾಕೆಯಿಂದ ಹಾಡಿಸುತ್ತಿರುವರು."

ವಿ. ಸಿಂ —"ಅವರು ಯಾರು ? ಅವರು ತಮ್ಮತಮ್ಮ ಪತಿಗಳೊಡನೆ ಬಂದಿರುವರೋ ಅಥವಾ ಇನ್ನೂ ಅವಿವಾಹಿತರಾಗಿರುವರೋ?"

ಸೇ.—"ವೀರವರೇಣ್ಯರೆ ! ಸಂಗೀತ ಹೇಳುತ್ತಿರುವಾಕೆಗೆ ಹದಿನಾರು ವರುಷ ಮಾತ್ರ ವಯಸ್ಸಂತೆ. ಆ ಯುವತಿಗೆ ಇನ್ನೂ ಪರಿಣಯವಾಗಿಲ್ಲವಂತೆ. ಇನ್ನೊಬ್ಬಾಕೆಯು ಮೊದಲನೆಯವಾಕೆಯ ಸಖಿಯಂತೆ. ಮಹಾರಾಣಿಯವರ ಅನುಗ್ರಹವನ್ನು ಸಂಪಾದಿಸಿ ಯಾವುದೋ ಒಂದು ಕಾರ್ಯವನ್ನು ಸಾಧಿಸ

ಕೊಳ್ಳುವುದಕ್ಕೋಸ್ಕರ ಅವರು ಇಲ್ಲಿಗೆ ಬಂದಿರುವರಂತೆ. ನಮ್ಮ ರಾಜಕುಮಾರಿಗಳಿಗೂ ಆ ಯುವತಿಗೂ ಪ್ರಾಣಸ್ನೇಹವೆಂದು ಹೇಳಿಕೊಳ್ಳುವರು."

ವಿಜಯಸಿಂಹನು ಈ ಮಾತುಗಳನ್ನು ಕೇಳಿ ಏನೇನನ್ನೋ ಯೋಚಿಸಿಕೊಳ್ಳುತ್ತಿರಲು ಪುನಃ ಆ ಸಂಗೀತಧ್ವನಿಯು ಕೇಳಿಸಿತು. ಅದನ್ನು ಕೇಳಿ ವಿಜಯಸಿಂಹನು ಅದು ಯಾರಧ್ವನಿಯೆಂದು ಪ್ರಶ್ನಿಸಲು ಆ ಸೇವಕನು—"ಮಹನೀಯರೇ! ಅದು ಆ ಯುವತಿಯ ಕಂಠಧ್ವನಿ. ನಮ್ಮ ರಾಜಕುಮಾರಿಯವರ ಕಂಠಧ್ವನಿಯೂ ಸ್ವಲ್ಪ ಹೆಚ್ಚು ಕಡಿಮೆ ಹಾಗೆಯೇ ಇರುವುದು; ಆದರೆ ಅವರಿಗೆ ಅಭ್ಯಾಸವು ಹೆಚ್ಚಾಗಿಲ್ಲವಾದುದರಿಂದ ಅವರ ಧ್ವನಿಯು ಇಷ್ಟು ಶ್ರವಣಾನಂದಕರವಾಗಿರಲಾರದು" ಎಂದು ಪ್ರತ್ಯುತ್ತರ ಹೇಳಿದನು.

ವಿಜಯಸಿಂಹನು ಆ ಮಾತನ್ನು ಕೇಳಿ ಆ ಗಾನಸುಖವನ್ನು ಮತ್ತೊಮ್ಮೆ ಅನುಭವಿಸಬೇಕೆಂದು ಬಯಸಿದನು. ಆದರೆ ಪುನಃ ಗಾನವು ಕೇಳಿಸಲಿಲ್ಲ. ಅಷ್ಟುಹೊತ್ತಿಗೆ ರಾತ್ರಿಯ ಮೊದಲನೆಯ ಜಾವವು ಕಳೆದುಹೋಗಿದ್ದಿತು. ಸೇವಕನು ನಿದ್ರಾವಶನಾದನು.

ವಿಜಯಸಿಂಹನಿಗೆ ಮಾತ್ರ ನಿದ್ದೆಹತ್ತಲಿಲ್ಲ. ಆತನ ಮನಸ್ಸು ದೀರ್ಘಾಲೋಚನಾಮಗ್ನವಾಗಿದ್ದಿತು. ಹೀಗಿರುವಲ್ಲಿ ಆತನಿಗೆ ನಿದ್ರೆಯು ಹೇಗೆ ಹಿಡಿದೀತು? ಸ್ತ್ರೀಯ ಕಂಠಧ್ವನಿಯ ಮೂಲಕ ವಿಜಯಸಿಂಹನಿಗೆ ತಾನು ಪೂರ್ವದಲ್ಲಿ ಒಲಿದಿದ್ದ ಯುವತೀಮಣಿಯ ಜ್ಞಾಪಕವು ಬರಲು ಆಕೆಯನ್ನು ಕುರಿತು ಏನೇನನ್ನೋ ಯೋಚಿಸಿಕೊಳ್ಳುತ್ತಾ ಅತಿಕಷ್ಟದಿಂದ ಆ ರಾತ್ರಿಯನ್ನು ಕಳೆದನು. ಬೆಳಗಾದಮೇಲೆ ಆತನು ಶಯ್ಯಾತಲವನ್ನು ಬಿಟ್ಟು ನಿತ್ಯಕೃತ್ಯಗಳನ್ನು ನೆರವೇರಿಸಿ ಕುಳಿತುಕೊಂಡು, ಆ ಯುವತೀಮಣಿಯ ವಿಷಯವಾಗಿ ಸೇವಕನನ್ನು ಕೇಳಿ ಹೆಚ್ಚು ಸಂಗತಿಗಳನ್ನು ತಿಳಿದುಕೊಳ್ಳಬೇಕೆಂದು ಯೋಚಿಸಿದನು. ಆದರೆ ಇದರಿಂದ ಏನಾದರೂ ಅಪಾಯವಾದೀತೆಂದು ಸುಮ್ಮನಾದನು. ಹೀಗೆ ದೋಳಾಂದೋಳಿತಮಾನಸನಾಗಿ, ಕಡೆಗೆ ಸೇವಕನ ಸಹಾಯವನ್ನು ಪಡೆದು ಆ ಆರಾಮದಲ್ಲಿ ಸ್ವಲ್ಪ ಕಾಲ ತಿರುಗಾಡಬೇಕೆಂದು ಉದ್ಯಾನವನವನ್ನು ಪ್ರವೇಶಿಸಿ ಅಲ್ಲಿ ಸುತ್ತಾಡುತ್ತಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಆ ಸೌಧದ ಮೇಲ್ಭಾಗದಲ್ಲಿ ಸಂಚರಿಸು

ತ್ತಿದ್ದ ಕೆಲವರು ಸ್ತ್ರೀಯರು ಆತನ ದೃಷ್ಟಿಗೆ ಗೋಚರರಾಗಿ, ವಿದ್ಯುಲ್ಲತೆಯಂತೆ ಕ್ಷಣಮಾತ್ರದಲ್ಲಿ ಅದೃಶ್ಯರಾದರು. ವಿಜಯಸಿಂಹನು ಸ್ವಲ್ಪ ಕಾಲದವರೆಗೆ ತಿರುಗಾಡಿ ಬಳಿಕ ತನ್ನ ನಿವಾಸಸ್ಥಾನಕ್ಕೆ ಹಿಂದಿರುಗಿ ಆರೋಗಣೆಯನ್ನು ತೀರಿಸಿಕೊಂಡು ಹಗಲನ್ನು ಅತ್ಯಂತ ಕಷ್ಟದಿಂದ ಕಳೆದನು. ರಾತ್ರಿಯಾದ ಕೂಡಲೆ ಸಂಗೀತವನ್ನು ಕೇಳಬಹುದೆಂದು ಸಂಜೆಯಾಗುವುದನ್ನೇ ಕುತೂಹಲದಿಂದ ನಿರೀಕ್ಷಿಸುತ್ತಿದ್ದನು. ಆದರೆ ಆದಿನ ರಾತ್ರಿ ಸಂಗೀತಧ್ವನಿಯೇ ಕೇಳಿಸಲಿಲ್ಲ. ಆದುದರಿಂದ ಆ ವಿಷಯದಲ್ಲಿ ನಿರಾಶನಾಗಿ ನಿದ್ರೆಯನ್ನಾದರೂ ಮಾಡಬೇಕೆಂದು ಪ್ರಯತ್ನಿಸಿದನು. ಸರಿಹೊತ್ತಿನವರೆಗೂ ಸ್ವಲ್ಪವಾದರೂ ನಿದ್ರೆ ಬಾರಲಿಲ್ಲ. ಕಡೆಗೆ ಬೆಳಕು ಹರಿಯುವ ಸಮಯದಲ್ಲಿ ಸ್ವಲ್ಪ ತೂಕಡಿಕೆ ಹತ್ತಿತು. ಆಗ ತನ್ನ ಬಳಿಗೆ ಯಾವಳೋ ಒಬ್ಬ ಸ್ತ್ರೀವ್ಯಕ್ತಿಯು ಬಂದಂತಾಯಿತು. ಕಣ್ದೆರೆದು ಸುತ್ತಲೂ ನೋಡಲಾಗಿ ಯಾರೊಬ್ಬರೂ ಕಾಣಿಸಲಿಲ್ಲವಾದಕಾರಣ, ಭ್ರಾಂತಿಯಿಂದ ಹಾಗಾಗಿರಬೇಕೆಂದು ಊಹಿಸಿ ಪುನಃ ಮಲಗಿಕೊಂಡನು. ರಾತ್ರಿಯೆಲ್ಲಾ ನಿದ್ರೆ ಇಲ್ಲದಿದ್ದುದರಿಂದ ಬಲವಾಗಿ ನಿದ್ರೆಹಿಡಿಯಿತು. ಈ ಸಮಯದಲ್ಲಿ ಒಬ್ಬಸ್ತ್ರೀಯು ಆತನ ಕೊಠಡಿಗೆ ಬಂದು, ಶಯನಿಸಿದ್ದ ಆ ವೀರನ ರೂಪರೇಖಾವಿಲಾಸಕ್ಕೆ ಆಶ್ಚರ್ಯಪಡುತ್ತಾ ಆತನನ್ನು ಎಬ್ಬಿಸಿ ಮಾತನಾಡಿಸಬೇಕೆಂದು ಯೋಚಿಸಿದಳು. ಆದರೆ ಸಮೀಪದಲ್ಲಿಯೇ ಮಲಗಿದ್ದ ಸೇವಕನನ್ನು ಕಂಡು ಅಪಾಯವೇನಾದರೂ ಆಗಬಹುದೆಂದು ಹೆದರಿ ವಿಜಯಸಿಂಹನ ಸಮೀಪದಲ್ಲಿ ಜೋಲಾಡುತ್ತಿದ್ದ ಅವನ ಅಂಗರೇಖೆಯ ಜೇಬಿನಲ್ಲಿ ತಾನು ತಂದಿದ್ದ ಪತ್ರಿಕೆಯನ್ನು ಮಡಿಸಿಟ್ಟು, ಅಲ್ಲಿಂದ ಅತಿಜಾಗ್ರತೆಯಾಗಿ ಹೊರಟುಹೋದಳು. ಬೆಳಕು ಹರಿದಮೇಲೆ ವಿಜಯಸಿಂಹನು ತನ್ನ ಅಂಗರೇಖೆಯನ್ನು ತೊಟ್ಟುಕೊಳ್ಳಬೇಕೆಂದು ತೆಗೆದುಕೊಂಡಾಗ ಅದರಲ್ಲಿದ್ದ ಪತ್ರಿಕೆಯು ಅವನ ದೃಷ್ಟಿಗೆ ಗೋಚರವಾಗಿ ಅದರಲ್ಲಿ ಬರೆದಿದ್ದ ಬರೆವಣಿಗೆಯು ಆತನ ಮನಸ್ಸಿಗೆ ಅತ್ಯಂತ ಹರ್ಷವನ್ನುಂಟು ಮಾಡಿತು. ಆ ಪತ್ರಿಕೆಯನ್ನು ಬಹಳ ಆದರದಿಂದ ತೆಗೆದುಕೊಂಡು ನೋಡಲು ಅದರಲ್ಲಿ ಹೀಗೆ ಬರೆದಿದ್ದಿತು:—

"ಹೃದಯವಲ್ಲಭರೇ! ಆನೆಗೊಂದಿಗೆ ತಪ್ಪದೆ ಒಂದುಬಾರಿ ದಯೆ ಮಾಡಿಸಬೇಕು.

ದಾಸಳಾದ ಮುಕ್ತಾಂಬೆ"

ಆ ಕಾಗದವನ್ನು ಓದಿಕೊಂಡ ಬಳಿಕ ವಿಜಯಸಿಂಹನಿಗೆ ಆದ ಆನಂದವನ್ನು ವರ್ಣಿಸಲು ಶಕ್ಯವಲ್ಲ. ಯಾವ ಹಂಪಾಕ್ಷಿಯೆಂಬ ಸುಕ್ಷೇತ್ರದಲ್ಲಿ ಅನುರಾಗಬೀಜವು ಹಿಂದೆಯೇ ಆವಾಪನವಾಗಿ ಕ್ರಮಕ್ರಮವಾಗಿ ವರ್ಧಿಸುತ್ತಿದ್ದು ಆಪದ್ವಾತೂಲದಿಂದ ಉನ್ಮೂಲಿತವಾಗಿದ್ದಿತೋ, ಆ ಅನುರಾಗಬಾಲತರುವು ಈ ಪತ್ರದ ದೆಸೆಯಿಂದ ಪುನಃ ರೂಢಮೂಲವಾಯಿತು. ಆದುದರಿಂದ ವಿಜಯಸಿಂಹನು ಆ ಪತ್ರಿಕೆಯನ್ನು ಪುನಃಪುನಃ ಓದಿಕೊಂಡು ಸಂತುಷ್ಟಸ್ವಾಂತನಾಗಿದ್ದನು. ಸಾರ್ವಭೌಮನಿಂದ ತನಗೆ ಆದ ಗೌರವಕ್ಕೂ, ಚಿರಕಾಲದಿಂದ ಕೇಳಬೇಕೆಂದಿದ್ದ ತನ್ನ ಪ್ರೇಯಸಿಯ ವೃತ್ತಾಂತವು ತಿಳಿದುದಕ್ಕೂ ಒಂದು ಕ್ಷಣದಲ್ಲಿ ಸಂತೋಷವನ್ನು ಅನುಭವಿಸುತ್ತಲೂ ಮರುಕ್ಷಣದಲ್ಲಿ ತನ್ನ ಪ್ರಿಯೆಯು ತನ್ನ ಸಮೀಪಕ್ಕೆ ಬಂದಿದ್ದಾಗಲಾದರೂ ಆಕೆಯನ್ನು ಕಣ್ಣಾರನೋಡಲು ಆಗದಿದ್ದುದಕ್ಕಾಗಿ ಪಶ್ಚಾತ್ತಾಪವನ್ನು ಪಟ್ಟುಕೊಳ್ಳುತ್ತಲೂ ಇದ್ದನು.

ನಾಲ್ಕನೆಯ ಪ್ರಕರಣ

ಆನೆಗೊಂದಿ.

ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಂ |
ಭಾಸ್ವಾನುದೇಷ್ಯತಿ ಹಸಿಷ್ಯತಿ ಪಙ್ಕಜಂ ಚ ||
ಇತ್ಥಂ ವಿಚಿನ್ತಯತಿ ಕೋಶಗತೇ ದ್ವಿರೇಫೇ |
ಹಾ ! ಹಂತ ! ಹಂತ ! ನಲಿನೀಂ ಗಜ ಉಜ್ಜಹಾರ ||

ದಕ್ಷಿಣ ಹಿಂದೂಸ್ಥಾನದಲ್ಲಿ ಕಾಕತೀಯವಂಶದ ದೊರೆಗಳಿಗೆ ರಾಜಧಾನಿಯಾಗಿದ್ದ ಓರುಗಲ್ಲಿನ ವೈಭವವು ತಗ್ಗಿದ ಬಳಿಕವೂ, ವಿಜಯನಗರದ ವಿಭವವು ವೃದ್ಧಿಹೊಂದುವುದಕ್ಕಿಂತ ಹಿಂದೆಯೂ, ಪ್ರಖ್ಯಾತಿಯನ್ನು ಪಡೆದಿದ್ದ ನಗರವು ಆನೆಗೊಂದಿಯು. ಕೆಲವರು ಇತಿಹಾಸಲೇಖಕರು ಈ ಆನೆಗೊಂದಿಯೇ ಪೂರ್ವಕಾಲದಲ್ಲಿ ವಾಲಿಸುಗ್ರೀವರು ಇದ್ದ ಕಿಷ್ಕಿಂಧಾ ಪಟ್ಟಣ

ವಾಗಿದ್ದಿತೆಂದು ಹೇಳುತ್ತಾರೆ. ಈ ನಗರದಲ್ಲಿ ಕ್ರಿ. ಶ. ೧೩೩೪ರಿಂದ ಮಹ
ಮ್ಮದ್ ತೊಗಲಕ್ ಎಂಬ ದೆಹಲಿ ಚಕ್ರವರ್ತಿಯ ಕಾಲದವರೆಗೂ ನಂದ
ನರೇಂದ್ರ, ನನ್ನಮರಾಜು, ರಾಮಬ್ರಹ್ಮರಾಯಲು ಪ್ರತಾಪರಾಯಲು
ಎಂಬುವರು ಅನುಕ್ರಮವಾಗಿ ಆಳುತ್ತಿದ್ದರು. ಪ್ರತಾಪರಾಯನ ಮಗನಾದ
ಜಂಬುಕೇಶ್ವರನು ಮಹಮ್ಮದ್ ತೊಗಲಕ್ ಎಂಬಾತನ ಸಮಕಾಲೀನನು.
ಜಂಬುಕೇಶ್ವರನು ದುಷ್ಟನಾದ ತೊಗಲಕ್ಕಿಗೆ ಬಲವು ಕಾಲದವರೆಗೂ ಅಧೀನ
ನಾಗದೆ ಆನೆಗೊಂದಿಯ ರಾಜ್ಯವನ್ನು ನಿರ್ಭಯವಾಗಿ ಪಾಲಿಸಿದನು. ಆದರೆ
ಕಡೆಗೆ ಆ ತುರಕಚಕ್ರವರ್ತಿಯು ಜಂಬುಕೇಶ್ವರನನ್ನು ಕೊಂದುಬಿಟ್ಟು
ಆನೆಗೊಂದಿಯನ್ನು ಸ್ವಾಧೀನಪಡಿಸಿಕೊಂಡುದಲ್ಲದೆ ಅಲ್ಲಿಯ ಪ್ರಧಾನ ಅಮಾತ್ಯಾದಿ
ಮುಖ್ಯಾಧಿಕಾರಿಗಳೆಲ್ಲರನ್ನೂ ಬಂದಿಗಳನ್ನಾಗಿ ಹಿಡಿದುಕೊಂಡು
ಹೋಗಿ ಸೆರೆಯಲ್ಲಿಟ್ಟನು. ಆನೆಗೊಂದಿಯ ಪ್ರಜೆಗಳು ಸ್ವಾತಂತ್ರ್ಯ
ಮಹಾರ್ಣವದಲ್ಲಿ ಮುಳುಗಲಾರದೆ ಮಹಮ್ಮದೀಯರ ಆಘಾತಕ್ಕೆ ಇದಿರು
ಬಿದ್ದು ಬಹಳ ತೊಂದರೆಯನ್ನುಂಟುಮಾಡಿದರು. ಬಳಿಕ ಆ ಚಕ್ರವರ್ತಿ
ಯು ಈ ಗಲಬೆಯನ್ನು ಅಡಗಿಸುವುದಕ್ಕೆ ದಂಡೆತ್ತಿಹೋಗುವುದು ತಕ್ಕ
ದಲ್ಲವೆಂದು ಮನಗಂಡು ಸಾಮೋಪಾಯವನ್ನು ಅವಲಂಬಿಸಿ ಆ ಮಂತ್ರಿ
ಮೊದಲಾದ ಅಧಿಕಾರಿಗಳನ್ನು ಬಂಧನದಿಂದ ಬಿಡಿಸಿ ಹಿಂದಕ್ಕೆ ಆನೆಗೊಂದಿಗೆ
ಕಳುಹಿಸಿಕೊಟ್ಟನು. ಹೀಗೆ ಕಳುಹಿಸುವುದಕ್ಕೆ ಮೊದಲು, ಹಿಂದೆ ಮುಖ್ಯ
ಮಂತ್ರಿಯಾಗಿದ್ದ ಹರಿಹರನನ್ನು ದೊರೆಯನ್ನಾಗಿಯೂ ಆತನ ತಮ್ಮನನ್ನೇ
ಮಂತ್ರಿಯನ್ನಾಗಿಯೂ ನಿಯಮಿಸಿ ಅದಕ್ಕೆ ಪ್ರತಿಯಾಗಿ ಆನೆಗೊಂದಿಯ
ರಾಜ್ಯವು ದೆಹಲಿಚಕ್ರಾಧಿಪತ್ಯದ ಮಂಡಲೀಕಸಂಸ್ಥಾನವಾಗಿರತಕ್ಕದೆಂದು
ಕೌಲುಮಾಡಿಕೊಂಡನು.

ರಾಜ್ಯಭಾರವನ್ನು ವಹಿಸಿದ ಕೂಡಲೆ ಹರಿಹರರಾಯನು ಸ್ವತಂತ್ರ
ನಾಗಿ ಆನೆಗೊಂದಿಯ ರಾಜ್ಯವನ್ನು ವಿಸ್ತರಿಸಿ ಅದನ್ನು ಬಹಳ ಉನ್ನತಪದ
ವಿಗೆ ತಂದನು. ತುಂಗಭದ್ರಾನದಿಯ ಉತ್ತರತೀರದಲ್ಲಿದ್ದ ಆನೆಗೊಂದಿಗೆ
ತುರುಕರ ಹಾವಳಿಯು ತಪ್ಪಲಾರದೆಂದು ಆತನು ತಿಳಿದು, ದಕ್ಷಿಣತೀರದಲ್ಲಿ
ವಿಜಯನಗರವೆಂಬ ಮತ್ತೊಂದು ಪಟ್ಟಣವನ್ನು ಸ್ಥಾಪಿಸಿ ಅದನ್ನು ತನ್ನ ರಾಜ
ಧಾನಿಯನ್ನಾಗಿ ಮಾಡಿಕೊಂಡನು. ವಿಜಯನಗರವು ಅಭಿವೃದ್ಧಿಗೆ ಬಂದ

ಹಾಗೆಲ್ಲಾ ಆನೆಗೊಂದಿಯು ದಿವಾಚಂದ್ರನಂತೆ ಕಳೆಗುಂದುತ್ತ ಬಂದಿತು. ಆದರೂ ಈ ಕಥಾಕಾಲದಲ್ಲಿ ಆನೆಗೊಂದಿಯು ಕೇವಲ ಹೀನಸ್ಥಿತಿಗೆ ಬಂದಿರಲಿಲ್ಲ. ಕೋಟೆಯ ಗೋಡೆಗಳು ಸ್ವಲ್ಪವಾದರೂ ಶಿಥಿಲವಾಗದೆ ದೃಢವಾಗಿಯೇ ಇದ್ದರೂ, ಆನೆಗೊಂದಿಯು ಪರಿವರ್ತನಶೀಲವಾದ ಕಾಲಮಾಹಾತ್ಮ್ಯದಿಂದ ರೂಪಾಂತರವನ್ನು ಪಡೆಯುತ್ತಲಿದ್ದಿತು. ಪೂರ್ವದಲ್ಲಿ ಅತ್ಯಂತ ವಿಭವೋಪೇತವಾಗಿದ್ದ ಹಲವು ಸೌಧಗಳು ಈಗ ಕಾರಾಗೃಹಸ್ಥಾನಗಳಾಗಿ ಮಾರ್ಪಟ್ಟಿದ್ದುವು. ಕೆಲವು ಸೌಧಗಳಲ್ಲಿ ಪರಕೀಯರಾಜಕುಟುಂಬಗಳೂ ರಾಜಕೀಯಾಧಿಕಾರಿಗಳೂ ವಾಸವಾಗಿದ್ದರು. ಇನ್ನು ಕೆಲವು ಸೌಧಗಳು ಛಿನ್ನಭಿನ್ನಗಳಾಗಿ ಮೂಷಿಕಾದಿಕ್ಷುದ್ರಜಂತುಗಳಿಗೆ ಆವಾಸವಾಗಿದ್ದುವು. ಪರಕೀಯರಾಜಕುಟುಂಬಗಳು ತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳುವುದಕ್ಕಾಗಿ ಕೆಲವು ಸೈನ್ಯವನ್ನು ಇಟ್ಟಿದ್ದುದರಿಂದ, ಆನೆಗೊಂದಿಯೊಳಕ್ಕೆ ಬರುವವರನ್ನೂ, ಅಲ್ಲಿಂದ ಹೊರಕ್ಕೆ ಹೋಗುವವರನ್ನೂ ಅವರು ಕಣ್ಣಿಟ್ಟು ನೋಡಿಕೊಳ್ಳುತ್ತಿದ್ದರು.

ಒಂದುದಿನರಾತ್ರಿ ಒಂದಾನೊಂದು ವಿಶಾಲಸೌಧದಲ್ಲಿ ಕೆಲವರು ಮಂತ್ರಾಲೋಚನೆಗಾಗಿ ಸಭೆಸೇರಿದ್ದರು. ಮಂತ್ರಭೇದವುಂಟಾಗುವಂತೆ ಅದರಲ್ಲಿ ಗವಾಕ್ಷಗಳಾಗಲಿ ಸ್ತಂಭಗಳಾಗಲಿ ಇರಲಿಲ್ಲ. ಅಲ್ಲಿ ಸೇರಿದ್ದ ವ್ಯಕ್ತಿಗಳು ಯಾರನ್ನೋ ಪ್ರತೀಕ್ಷಿಸಿಕೊಂಡಿದ್ದರು. ಆ ಮಂದಿರಕ್ಕೆ ಪೂರ್ವದಿಕ್ಕಿನಲ್ಲಿ ಒಂದು ದೊಡ್ಡಬಾಗಿಲೂ, ಉತ್ತರಪಾರ್ಶ್ವದಲ್ಲಿ ಒಂದು ಸಣ್ಣಬಾಗಿಲೂ ಇದ್ದುವು. ಈ ಉತ್ತರ ದಿಗ್ವಿಭಾಗದಲ್ಲಿಯೇ ಪರರಾಜ್ಯಾನೀತವಾದ ರಾಜಕುಟುಂಬಗಳು ವಾಸಿಸುತ್ತಿದ್ದ ಮಂದಿರಗಳು ಇದ್ದುವು. ಇವುಗಳಲ್ಲೊಂದರಿಂದ ಉತ್ತರದಿಕ್ಕಿನ ಬಾಗಿಲಿನ ಮೂಲಕ ಐವತ್ತುವರುಷ ವಯಸ್ಸಿನ ಒಬ್ಬ ಪುರುಷನೂ ಹದಿನಾರು ವರುಷ ವಯಸ್ಸಿನ ಒಬ್ಬ ಬಾಲಿಕೆಯೂ ಪ್ರವೇಶಿಸಿ ಆ ಸೌಧದಲ್ಲಿ ಇದಕ್ಕೆ ಮುಂಚೆಯೇ ಬಂದು ಕಾದಿದ್ದ ಜನರ ಮಧ್ಯಕ್ಕೆ ಹೋಗಿ ಕುಳಿತುಕೊಂಡರು. ಯಾರಾದರೂ ಮೂಲೆಯಲ್ಲಿ ಅವಿತುಕೊಂಡು ತಮ್ಮ ಮಂತ್ರಾಲೋಚನೆಯನ್ನು ಭೇದಿಸಬಹುದೆಂಬ ಶಂಕೆಯಿಂದ ಒಬ್ಬನು ಮಿಣುಗುಟ್ಟುತ್ತಿದ್ದ ಕೈದೀವಿಗೆಯನ್ನು ಹಿಡಿದುಕೊಂಡು ಆ ಮಂದಿರದಲ್ಲಿ ಒಂದುಸಾರಿ ಸುತ್ತಿಕೊಂಡು ಬಂದನು. ಅವನಲ್ಲದೆ ಮತ್ತೆಯಾರೂ ಆ

ಮಂದಿರದಲ್ಲಿ ಕಾಣದಿರಲು, ಅವನು ದೀವಿಗೆಯನ್ನು ಅದರ ಸ್ಥಾನದಲ್ಲಿಟ್ಟು ತನ್ನ ಪೀಠದಮೇಲೆ ಕುಳಿತುಕೊಂಡ ಕೂಡಲೆ ಈ ಮುಂದೆ ಹೇಳುವಂತೆ ಸಂಭಾಷಣೆಯು ನಡೆಯಿತು :—

"ಪ್ರಹರೇಶ್ವರಪಾತ್ರ! ನೀನೂ ಮುಕ್ತಾಂಬೆಯೂ ಸಮ್ಮತಿಸಿದ ಮೇರೆಗೆ ನಾನು ಬಿಜಾಪುರದ ಸುಲ್ತಾನನನ್ನು ಸಂದರ್ಶಿಸಿ ನಮ್ಮ ಪ್ರಕೃತ ಸ್ಥಿತಿಗತಿಗಳನ್ನು ಆತನಿಗೆ ವಿವರಿಸಿ ಸಹಾಯಮಾಡಬೇಕೆಂದು ಕೇಳಿಕೊಂಡೆನು. ಇದೂಅಲ್ಲದೆ ಆ ಬಿಜಾಪುರದ ರಾಜನಿಗೆ ಪ್ರೀತಿಪಾತ್ರನಾದ ತೋಫಲ್‌ಖಾನನೆಂಬ ಮಹಮ್ಮದೀಯಾಧಿಕಾರಿಯ ಸ್ನೇಹವನ್ನು ಸಂಪಾದಿಸಿಕೊಂಡು ಬಂದಿರುವೆನು. ಆತನು ಮಾತ್ರವಲ್ಲದೆ ಇನ್ನೂ ಕೆಲವರು ಮಹಮ್ಮದೀಯ ಪ್ರಭುಗಳೂ ನಮಗೆ ಸಹಾಯಮಾಡಲು ಒಪ್ಪಿರುವರು. ನೀನೂ ಈ ಮುಕ್ತಾಂಬೆಯೂ ಅಲ್ಲಿಗೆ ಬಂದುದೇ ಆದರೆ ನಮ್ಮ ಕೆಲಸಗಳೆಲ್ಲವೂ ಕೈಗೂಡುವುವು. ಇದಕ್ಕೆ ನಿನ್ನ ಅಭಿಪ್ರಾಯವೇನು ?" ಎಂದು ರಾಮಯ ಮಂತ್ರಿಯು ಕೇಳಿದನು.

"ರಾಮಯಾಮಾತ್ಯಶೇಖರಾ! ನಿನಗಿಂತಲೂ ಬುದ್ಧಿವಂತರು ಯಾರಿರುವರು ? ನೀನು ಏನನ್ನು ಮಾಡೆಂದು ಹೇಳಿದರೂ ಅದನ್ನು ಮಾಡಲು ಸಿದ್ಧನಾಗಿರುವೆನು. ಏನೇ ಆಗಲಿ ಈ ಕೃಷ್ಣದೇವರಾಯರನ್ನು ಜಯಿಸಿ ಹಗೆಯನ್ನು ತೀರಿಸಿಕೊಳ್ಳುವುದು ನನಗೆ ಮುಖ್ಯ" ಎಂದು ಪ್ರಹರೇಶ್ವರನು ಪ್ರತ್ಯುತ್ತರಕೊಟ್ಟನು

"ಮಂತ್ರಿಪುಂಗವರೇ! ನಿಮ್ಮ ಆಲೋಚನೆಯು ಅಷ್ಟು ಯುಕ್ತವೆಂದು ನನಗೆ ತೋರುವುದಿಲ್ಲ. ನಾವು ಆ ಬಿಜಾಪುರದ ರಾಜನ ಸಹಾಯವನ್ನು ಪಡೆದು ಸಾರ್ವಭೌಮರನ್ನು ಜಯಿಸಿ ನಮ್ಮ ಉದಯಗಿರಿಯನ್ನು ಸ್ವಾಧೀನಪಡಿಸಿಕೊಂಡರೂ, ನಾವು ಒಬ್ಬ ಮಹಮ್ಮದೀಯಪ್ರಭುವಿಗೆ ಆಧೀನರಾಗಿರಬೇಕಾದರೆ ನಮಗೆ ಲಭಿಸುವ ಸೌಖ್ಯವಾವುದು ? ಹಿಂದುಗಳೊಡನೆ ಈಗ ಬದ್ಧವೈರವನ್ನು ವಹಿಸಿರುವ ಮಹಮ್ಮದೀಯರೊಡನೆ ಸ್ನೇಹಮಾಡಿ ಅವರ ಆಧೀನಕ್ಕೆ ಒಳಗಾಗುವುದಕ್ಕಿಂತಲೂ ಧರ್ಮಪಾಲನಾಸಕ್ತರಾಗಿರುವ ಹಿಂದೂಸಾಮ್ರಾಟರ ಆಧೀನದಲ್ಲೇ ಇರುವುದು ಉಚಿತವಲ್ಲವೆ ? ನಾವು ಕೋಪಾವಿಷ್ಟಚಿತ್ತರಾಗಿ ಕೃಷ್ಣದೇವರಾಯರೊಡನೆ

ವಿರೋಧವನ್ನು ಕಟ್ಟಿಕೊಂಡಮೇಲೆ ಅಪಜಯವನ್ನು ಹೊಂದಿದುದೇ ಆದರೆ ಅಪಾರವಾದ ದುಃಖಕ್ಕೆ ಈಡಾಗುವೆವು. ಒಂದುವೇಳೆ ಜಯಶೀಲರಾದರೂ, ಪರಾಭೂತರಾದ ಕೃಷ್ಣದೇವರಾಯನು ಪಕ್ಕದಲ್ಲಿಯೇ ಶೂಲದಂತೆ ಪರಿಣಮಿಸಿ ನಮ್ಮ ರಾಜ್ಯವನ್ನು ನಮಗೆ ಬಹಳ ಕಾಲದವರೆಗೂ ದಕ್ಕಗೊಡುವುದಿಲ್ಲ. ಅಪಾರರಾಜ್ಯವನ್ನೂ ಅಸಂಖ್ಯಾವಾಹಿನಿಯನ್ನೂ ಪಡೆದಿರುವ ಗಜಪತಿಯೇ ಕೃಷ್ಣದೇವರಾಯರ ಪ್ರತಾಪಕ್ಕೆ ಇದಿರುನಿಲ್ಲಲಾರದೆ ತನ್ನಮಗಳನ್ನು ಮದುವೆಮಾಡಿಕೊಟ್ಟು ಅವರೊಡನೆ ಸಂಧಿಮಾಡಿಕೊಂಡನು. ಹೀಗಿರಲು ಅವರೊಡನೆ ಪ್ರತಿಭಟಿಸಿ ನಿಲ್ಲುವುದಕ್ಕೆ ನಮ್ಮಂತಹವರು ಎಷ್ಟು ಮಾತ್ರದವರು? ಆದುದರಿಂದ ಮೊದಲು ನಾನು ವಾಗ್ದಾನಮಾಡಿದ್ದರೂ ಈಚೆಗೆ ಯೋಚಿಸುವುದರಲ್ಲಿ ಸಾಮೋಪಾಯದಿಂದ ಕಾರ್ಯಸಾಧನೆ ಮಾಡಿಕೊಳ್ಳುವುದು ಉತ್ತಮವೆಂದು ತೋರುವುದು" ಎಂದು ಉದಯಗಿರಿ ದುರ್ಗಾಧೀಶನ ಮಗಳಾದ ಮುಕ್ತಾಂಬೆಯು ಹೇಳಿದಳು.

ಈ ಮಾತುಗಳಿಗೆ ಪ್ರಹರೀತ್ಯದಪಾತ್ರನು ಯಾವ ಸಮಾಧಾನವನ್ನೂ ಹೇಳಲಾಗದೆ ನೋಡುವುದು ಮಾತ್ರವಲ್ಲದೆ ಮುಕ್ತಾಂಬೆಯ ಮಾತುಗಳೇ ಸುಂದರವಾದುವೆಂದು ನಿಶ್ಚಯಿಸತೊಡಗಿದನು. ಆಕೆಯ ಮಾತುಗಳನ್ನು ಕೇಳಿದ ರಾಮಯಮಂತ್ರಿಯು ಅತ್ಯಾಶ್ಚರ್ಯಭರಿತನಾಗಿ—"ರಾಜಪುತ್ರಿ! ನಿನ್ನ ಯೋಚನೆಗಳು ಬಹಳ ಶ್ಲಾಘ್ಯವಾದುವು. ನೀನು ಹೇಳುವಂತೆ ಸಾಮೋಪಾಯದಿಂದ ಕಾರ್ಯವನ್ನು ನೆರವೇರಿಸಿಕೊಳ್ಳುವುದು ಶ್ರೇಯಸ್ಕರವೇ. ಆದರೆ ಸಾಮದಿಂದ ನಮ್ಮ ಕಾರ್ಯವು ನೆರವೇರಲಾರದು. ಉದಯಗಿರಿದುರ್ಗವನ್ನು ನಿನಗೆ ಕೊಟ್ಟುಬಿಡಬೇಕೆಂಬ ಯೋಚನೆಯು ಕೃಷ್ಣದೇವರಾಯನಿಗೆ ಇರುವುದಿಲ್ಲ. ಸುಮಾರು ಐದಾರು ವರುಷಗಳಿಂದ ನೀನು ಅವರನ್ನು ಬೇಡಿಕೊಂಡು ಕೇಳಿಕೊಳ್ಳುತ್ತಿರುವೆ. ಅದರಿಂದ ಏನಾದರೂ ನಿನಗೆ ಉಪಯೋಗವಾಯಿತೆ? ಆ ತಿಮ್ಮರಸನು ನಿನ್ನ ವಿಷಯದಲ್ಲಿ ಬಹಳ ಕ್ರೌರ್ಯವನ್ನು ವಹಿಸಿರುವುದರಿಂದಲೂ, ಮಹಾರಾಜರೂ ಆತನು ಹೇಳಿದ ಮಾತನ್ನೇ ಮನ್ನಿಸುತ್ತಿರುವುದರಿಂದಲೂ, ನಿನ್ನ ಆಸೆಯು ಎಂದಿಗೂ ಕೈಗೂಡಲಾರದು. ಮಹಾರಾಜರು ಶಾಂತರಂತೆ ತೋರಿದರೂ ಕಠಿನಚಿತ್ತರಾದವರು. ರಾಜರ ಮನಸ್ಸು ಹಾಗೆಯೇ ಇರುತ್ತದು ಸಹಜ. ಲೋಕಾನುಭವ

ಸಾಲದೆ ನೀನು ಆ ಮೇರೆಗೆ ಮಾತನಾಡಿದೆ. ಆದುದರಿಂದ ನಾವು ಆಲೋಚಿಸಿರುವ ಮಾರ್ಗವೇ ಉತ್ತಮವೆಂದು ತಿಳಿಯಮ್ಮಾ !" ಎಂದು ಉತ್ತರ ಕೊಟ್ಟನು.

"ಮಂತ್ರಿಪುಂಗವರೆ ! ರಾಜಕೀಯವ್ಯವಹಾರಗಳು ನನ್ನಂತಹವಳಿಗೆ ಹೇಗೆ ತಿಳಿಯುವುವು ? ನನ್ನಮನಸ್ಸಿನಲ್ಲಿದ್ದ ಅಭಿಪ್ರಾಯವನ್ನು ತಿಳಿಸಿದೆನೇ ಹೊರತು ನನ್ನಮತವೇ ಸಿದ್ಧಾಂತವೆಂದು ಸ್ಥಾಪಿಸುವುದಿಲ್ಲ. ನಮಗೆ ಮುಂದೆ ಸಂಭವಿಸಬಹುದಾದ ಲಾಭ ನಷ್ಟಗಳನ್ನೂ ಕೂಡ ನಾವು ಆಲೋಚಿಸಬೇಕಲ್ಲವೆ ? ಕೃಷ್ಣದೇವರಾಯರಿಗೆ ನಾವು ಅಂಕಿತರಾಗಿರಲು ಒಪ್ಪಿಯಾದರೂ ಉದಯಗಿರಿಯನ್ನು ಸ್ವಾಧೀನ ಪಡಿಸಿಕೊಳ್ಳುವುದು ಯುಕ್ತಕಾರ್ಯವೇ ? ಅವರು ಸಾಮೋಪಾಯದಿಂದ ಉದಯಗಿರಿಯನ್ನು ಬಿಟ್ಟುಕೊಡುವುದಿಲ್ಲವೆಂದು ಅಲ್ಲವೆ ನೀವು ಹೇಳಿದುದು ? ಆ ಮಾತನ್ನು ನಾನು ನಂಬಲಾರೆನು. ನಾನು ಅನ್ನಪೂರ್ಣದೇವಿಯನ್ನು ಆಶ್ರಯಿಸಿ ಆಕೆಯ ಮೂಲಕ ಹೇಳಿಸಿದೆನು. ಸಾರ್ವಭೌಮರು ಅಂತಃಪುರಕ್ಕೆ ಬಂದಿದ್ದಾಗ ನಾನೂ ಅವರನ್ನು ಪ್ರಾರ್ಥಿಸಿಕೊಂಡೆನು. ಅವರು ದಯಾರ್ದ್ರಹೃದಯರಾಗಿದ್ದಂತೆ ತೋರಿತು. ಇನ್ನೂ ಒಂದೆರಡುಸಾರಿ ಹೋಗಿ ಸಂದರ್ಶಿಸಿ ಕೇಳಿಕೊಂಡರೆ ಕಾರ್ಯಸಿದ್ಧಿಯಾಗಬಹುದೆಂದು ತೋರುವುದು. ಶತ್ರುವಿನೊಡನೆ ಸಂಧಿಮಾಡಿಕೊಳ್ಳುವುದು ಪೌರುಷಹೀನವಾದ ಕೆಲಸವೆಂದು ನೀವು ಭಾವಿಸಿರುವುದಾದರೆ ಕಟಕಪುರೀಶ್ವರನಂತಹವನೇ ರಾಯರಿಗೆ ಒಳಗಾಗಿ ಸಂಧಿಮಾಡಿಕೊಳ್ಳುತ್ತಿರುವಾಗ ನಾವು ಹಿಂದೆಗೆಯುವುದೇಕೆ ? ಈಗ ಕೃಷ್ಣದೇವರಾಯರಿಗೆ ಅಧೀನರಾಗಿರಲು ಒಪ್ಪಿ ನಿಷ್ಕಂಟಕವಾಗಿಯೂ ನಿಸ್ಸಪತ್ನವಾಗಿಯೂ ರಾಜ್ಯವನ್ನಾಳುವುದು ಯುಕ್ತವೋ ? ಅಥವಾ ಮಹಮ್ಮದೀಯರಾಜಸಹಾಯದಿಂದ ಉದಯಗಿರಿಯನ್ನು ಜಯಿಸಿ ಸ್ವಾಧೀನಪಡಿಸಿಕೊಂಡು ಪ್ರಬಲಶತ್ರುವನ್ನು ಹೃದಯಶಲ್ಯವಾಗಿಟ್ಟುಕೊಳ್ಳುವುದು ಯುಕ್ತವೋ ? ರಾಜನೀತಿವಿಶಾರದರಾದ ನೀವೇ ಯೋಚಿಸಿನೋಡಿ ಯುಕ್ತರೀತಿಯ [illegible]ವನ್ನು ನಡೆಯಿಸಬಹುದು" ಎಂದು ಮುಕ್ತಾಂಬೆಯು [illegible]ವಾಗಿ ಹೇಳಿದಳು.

ಆ ಮಾತುಗಳನ್ನು ಕೇಳಿ ರಾಮಯಮಂತ್ರಿಗೆ ಅತ್ಯಾಶ್ಚರ್ಯವಾಯಿತು. ಆತನು ಇದಕ್ಕೆ ಹಿಂದೆ ಯಾವಾಗಲೂ ಮುಕ್ತಾಂಬೆಯೊಡನೆ ವಿಶೇಷವಾಗಿ ಮಾತನಾಡಿರಲಿಲ್ಲವಾದುದರಿಂದ ಆಕೆಯ ಪ್ರತಿಭಾವಿಶೇಷವನ್ನು ತಿಳಿದಿರಲಿಲ್ಲ. ಮುಕ್ತಾಂಬೆಯು ಅಷ್ಟು ಬುದ್ಧಿವಂತಳೆಂದೂ, ಅಷ್ಟು ರಾಜನೀತಿಜ್ಞಳೆಂದೂ ಆತನು ಎಂದಿಗೂ ತಿಳಿದಿಲ್ಲ. ಆದುದರಿಂದಲೇ ಮುಕ್ತಾಂಬೆಯ ಮಾತುಗಳಿಂದ ಈಗ ಅತ್ಯಾಶ್ಚರ್ಯವುಂಟಾದುದು. ಆದರೂ ಆತನು ತನ್ನ ವಾದವನ್ನು ಸ್ಥಿರೀಕರಿಸಿಕೊಳ್ಳದೆ ಸುಮ್ಮನಿರುವುದು ಸರಿಯಲ್ಲವೆಂದು ನಿರ್ಧರಿಸಿ "ಮುಕ್ತಾಂಬೆ! ನಿನ್ನ ಮಾತುಗಳು ವಿಶೇಷವಾಗಿ ಅರ್ಥಯುಕ್ತವಾದುವೇ ಸರಿ. ಅವಕ್ಕೆ ಪ್ರತ್ಯುತ್ತರ ಹೇಳಲು ಸಾಮರ್ಥ್ಯವು ನನಗೆ ಇಲ್ಲವೆಂದೇ ತೋರುತ್ತಿರುವುದು. ಆದರೂ ನನ್ನ ಅಭಿಪ್ರಾಯವನ್ನು ಹೇಳುವೆನು. ಕೇಳಮ್ಮ! ನನ್ನ ಆಲೋಚನೆಯನ್ನು ಅನುಸರಿಸಿದುದೇ ಆದರೆ ಅನೇಕ ಲಾಭಗಳು ಕೈಸೇರುವುವು. ಅವು ಸಾಮಾನ್ಯರಿಗೆ ದುರೂಹ್ಯವಾಗಿವೆ. ಅವು ಎಂದಿಗಾದರೂ ಕೈಸೇರುವುವೇ ಎಂದು ಸಂಶಯಪಡಬೇಡ. ನನ್ನ ಅಭಿಪ್ರಾಯವನ್ನು ವಿವರಿಸಿ ಹೇಳುತ್ತೇನೆ. ಅದನ್ನು ಸಾವಧಾನವಾಗಿ ಕೇಳಿ ಅದರಲ್ಲಿ ಲೋಪಗಳೇನಾದರೂ ಇದ್ದರೆ ನನಗೆ ತಿಳಿಸು. ಅವುಗಳಿಗೆ ತಕ್ಕ ಸಮಾಧಾನಗಳನ್ನು ಹೇಳುವೆನು. ಈಗ ದಕ್ಷಿಣಹಿಂದೂಸ್ಥಾನದಲ್ಲಿರುವ ರಾಜ್ಯಗಳೆಲ್ಲೆಲ್ಲಾ ವಿಜಯನಗರದ ಚತುರಂಗಸೈನ್ಯಕ್ಕೆ ಸರಿಸಮನಾದ ಸೈನ್ಯಸಂಪತ್ತಿಯನ್ನು ಪಡೆದಿರುವ ಬಿಜಾಪುರದ ರಾಜ್ಯದೊಡನೆ ನಾವು ಸ್ನೇಹವನ್ನು ಸಂಪಾದಿಸಿರುವೆವು. ಬಿಜಾಪುರದ ರಾಜನೂ, ತನ್ನ ರಾಷ್ಟ್ರದ ಎಲ್ಲೆಯಲ್ಲೇ ಇಷ್ಟು ಪ್ರಬಲರಾಗಿರುವ ಕೃಷ್ಣದೇವರಾಯರನ್ನು ಅಣಗಿಸಬೇಕೆಂದು ಕಾಲನಿರೀಕ್ಷಣೆಯನ್ನು ಮಾಡುತ್ತಿರುವನು. ಪ್ರಬಲಶತ್ರುವನ್ನು ಉನ್ಮೂಲನ ಮಾಡಬೇಕೆಂಬುದೇ ಆತನ ಉದ್ದೇಶವು. ಆದುದರಿಂದ ಆತನಿಗೆ ನಾವು ಅಂಕಿತರಾಗಿರಬೇಕೆಂದು ಆ ಸುಲ್ತಾನ ದೊರೆಯು ಅಪೇಕ್ಷಿಸಲಾರನು. ಬಿಜಾಪುರದ ಅರಸನಿಗೆ ಷ್ಟು ಸಾಮರ್ಥ್ಯವು ಇರುವುದೇ ಎಂದು ನೀನು ಸಂಶಯಪಡತಕ್ಕ ಅವಶ್ಯವಿಲ್ಲ. ಈ ಕಾಲದಲ್ಲಿ ಉಳಿದ ಮುಹಮ್ಮದೀಯ ಪ್ರಭುಗಳೂ ಯಮಾಡಲು ಒಪ್ಪಿರುವರು. ಸರ್ವವಿಧಗಳಲ್ಲಿಯೂ ವಿಜಯನಗರಕ್ಕೆ

ಸರಿಸಾಟಿಯಾಗಿರುವ ಕಟಕಪುರಾಧೀಶನೂ ಸದ್ಯದಲ್ಲಿ ವಿಜಯನಗರ ರಾಜ್ಯದೊಡನೆ ಸಖ್ಯದಿಂದ ಇದ್ದರೂ ತಕ್ಕ ಸಮಯವನ್ನು ಸಾಧಿಸಿ ಕೃಷ್ಣದೇವರಾಯರನ್ನು ಮೂಲೋತ್ಪಾಟನ ಮಾಡಬೇಕೆಂದು ಕಾದಿರುವನು. ಇಷ್ಟೇ ಅಲ್ಲದೆ ಶಿವಸಮುದ್ರದುರ್ಗಾಧಿಪತಿಯಾದ ಗಂಗರಾಜನು ರಾಯರಿಂದಾದ ಪರಾಭವವನ್ನು ಸಹಿಸಲಾರದೆ ಜಲಪ್ರಪಾತದಲ್ಲಿ ಬಿದ್ದು ಆತ್ಮಹತ್ಯವನ್ನು ಮಾಡಿಕೊಂಡುದನ್ನು ಕಣ್ಣಾರೆಕಂಡ ಆತನ ಬಂಧುಗಳು ಕೃಷ್ಣದೇವರಾಯರನ್ನು ಅಣಗಿಸುವುದಕ್ಕಾಗಿ ಒಳಗೊಳಗೇ ಪ್ರಯತ್ನಿಸುತ್ತಿರುವರು. ನಮ್ಮಂತೆಯೇ ಆನೆಗೊಂದಿ ನಗರದಲ್ಲಿ ಮರೆಯಾಗಿರುವವರು ಅನೇಕರಿರುವರು. ಅಂತಹವರೆಲ್ಲರೂ ತಮ್ಮ ಆಪತ್ತಿಗೆ ಕಾರಣಭೂತರಾದ ಕೃಷ್ಣದೇವರಾಯರನ್ನು ನಾಶಮಾಡಬೇಕೆಂದಿರುವಾಗ ನಮಗೆ ಹೃದಯಶಲ್ಯದಂತಹ ಶತ್ರುಶೇಷವು ಎಲ್ಲಿ ಉಳಿಯುವುದು ? ಇದಕ್ಕೆ ನಿನ್ನ ಆಕ್ಷೇಪಣೆ ಏನಾದರೂ ಇರುವುದೇ ?" ಎಂದು ರಾಮಯಾಮಾತ್ಯನು ಕೇಳಿದನು.

"ಮಂತ್ರಿಶ್ರೇಷ್ಠರೇ ! ನನಗೊಂದು ಸಂಶಯವಿರುವುದು. ನೀವು ಹೇಳಿದವರೆಲ್ಲರೂ ಏಕೀಭವಿಸಿ ಪ್ರಯತ್ನಮಾಡಿ ದುರ್ನಿವಾರ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ವಿಜಯನಗರಸಾಮ್ರಾಜ್ಯವೆಂಬ ಚಂಡಭಾನುವನ್ನು ಅಸ್ತಮಿಸಲು ಸಮರ್ಥರಾಗುವರೋ ? ಅಥವಾ ಸಾಹಸ ಮಾಡಿದರೂ ಚಂಡಕಿರಣನ ಪ್ರತಾಪದಿಂದ ಸೀದು ಕರಿಕಾಗಿ ಹೋಗುವರೋ ?'' ಎಂದು ಮುಕ್ತಾಂಬೆಯು ಮಂದಹಾಸದೊಡನೆ ಪ್ರಶ್ನಿಸಿದಳು.

"ತಾಯೀ ! ನಿನ್ನ ಈ ಸಂಶಯವನ್ನು ಹೋಗಲಾಡಿಸುವೆನು. ವಿಜಯನಗರಸಾಮ್ರಾಜ್ಯಭಾನುವಿನ ತೇಜಕ್ಕೆ ಮುಖ್ಯಕಾರಣನಾದವನು ತಿಮ್ಮರಸಮಂತ್ರಿ ಆತನನ್ನು ರಹಸ್ಯವಾಗಿ ಕೊಲ್ಲಿಸಲು ತಕ್ಕ ಉಪಾಯಗಳನ್ನು ಮಾಡಿದ್ದೆನು. ನಾವು ಆತನನ್ನು ಕೊಂದುದೇ ಆದರೆ ಅದು ನಿಸ್ತೇಜಸ್ಕವಾಗಿ ಎದಿರಿಸಲು ಸುಲಭಸಾಧ್ಯವಾಗುವುದು. ಇಂತಹ ಸಂದರ್ಭದಲ್ಲಿ ಇದಿರುನಿಲ್ಲಲು ಹೆದರತಕ್ಕವರಾರು ? ಅಪಾಯಗಳು ಹೇಗೆ ತಾನೇ ಉಂಟಾಗುವುವು ? ಆದುದರಿಂದ ನೀನು ಸಂಶಯಿಸಬೇಕಾಗಿಲ್ಲ " ಎಂದು ರಾಮಯಮಂತ್ರಿಯು ಸಮಾಧಾನಹೇಳಿದನು.

“ಮಂತ್ರಿಪುಂಗವರೇ! ಆ ತಿಮ್ಮರಸಮಂತ್ರಿಯನ್ನು ಕೊಲ್ಲಿಸುವುದು ಅಷ್ಟು ಸುಲಭಸಾಧ್ಯವೇ? ಆ ಕಾರ್ಯವು ನೆರವೇರುವುದು ತಾನೇ ಹೇಗೆ?” ಎಂದು ಮುಕ್ತಾಂಬೆಯು ತಿರುಗಿ ಪ್ರಶ್ನೆಮಾಡಿದಳು.

“ಅಮ್ಮಾ! ಮುಕ್ತಾಂಬೆ! ನೀನು ಹಾಗೆ ಸಂದೇಹಪಡತಕ್ಕ ಅವಶ್ಯಕವಿಲ್ಲ. ನಮ್ಮ ರಾಮಯಮಂತ್ರಿಯ ಪ್ರತಿಭಾವಿಶೇಷವು ನಿರುಪಮವಾದುದು. ಆತನೊಡನೆ ಪ್ರತಿಭಟಿಸತಕ್ಕವನು ಯಾರೂ ಇಲ್ಲ. ನನ್ನ ಮಾತನ್ನು ನಂಬು. ಆತನು ತಿಮ್ಮರಸನ್ನು ಕೊಲ್ಲಬೇಕೆಂದು ಮನಸ್ಸು ಮಾಡಿದುದೇ ಆದರೆ, ತಪ್ಪದೆ ತನ್ನ ಉದ್ದೇಶವನ್ನು ನೆರವೇರಿಸಿಕೊಳ್ಳುವನೆಂಬುದನ್ನು ಸಂಪೂರ್ಣವಾಗಿ ನಂಬು. ಇಷ್ಟುಹೊತ್ತಿಗೇ ತಿಮ್ಮರಸನು ಯಮಸದನಾತಿಥ್ಯವನ್ನು ಅನುಭವಿಸುತ್ತಿರಬೇಕಾಗಿದ್ದಿತು. ಆದರೆ ಅವನ ಸುದೈವದಿಂದ ಒಬ್ಬನು ಬಂದು ಅವನನ್ನು ಮೃತ್ಯುಮುಖದಿಂದ ಬಿಡಿಸಿಕೊಂಡು ಹೋದನು. ಈಸಾರಿ ಅವನ ಅವತಾರವನ್ನು ಪೂರ್ತಿಮಾಡಿಯೇ ಬಿಡುವೆವು. ನೋಡು” ಎಂದು ಪ್ರಹರೇಶ್ವರಪಾತ್ರನು ಅತ್ತಬಂದು ಸಮಾಧಾನೋಕ್ತಿಗಳನ್ನು ಹೇಳಿದನು.

“ಆತನನ್ನು ಕೊಂದು ವಿಜಯನಗರರಾಜ್ಯವನ್ನು ನಾಶಮಾಡುವುದರಿಂದ ನಮಗೆ ಉಂಟಾಗುವ ವಿಶೇಷಲಾಭಗಳೇನಾದರೂ ಇವೆಯೆ?” ಎಂದು ಮುಕ್ತಾಂಬೆ ರಾಮಯಾಮಾತ್ಯನನ್ನು ಕೇಳಿದಳು.

“ಇಲ್ಲದೆ ಏನು? ಬೇಕಾದಷ್ಟು ಇವೆ. ನಮ್ಮ ರಾಜ್ಯವು ನಮಗೆ ದೊರಕುವುದು ಪ್ರಥಮಪ್ರಯೋಜನ; ನಮ್ಮ ಪ್ರಬಲಶತ್ರುವು ಹತನಾಗುವುದು ಎರಡನೆಯ ಲಾಭ; ಸ್ಥೂಲಶರೀರಿಯಾದ ಮತ್ತಗಜವು ನಿಹತವಾದರೆ ಅನೇಕ ಮೃಗಗಳು ಹೊಟ್ಟೆತುಂಬಿಸಿಕೊಳ್ಳುವಂತೆ ವಿಜಯನಗರಾಧೀಶರು ನಾಶವಾದರೆ ಚಿಕ್ಕಚಿಕ್ಕ ರಾಜರುಗಳು, ಅವರ ವಿಸ್ತಾರವಾದ ರಾಜ್ಯದಲ್ಲಿ ಕೆಲಕೆಲವು ಭಾಗಗಳನ್ನು ಆಕ್ರಮಿಸಿಕೊಂಡು ತಮ್ಮತಮ್ಮ ಶಕ್ತ್ಯನುಸಾರ ಸೀಮೆಗಳನ್ನು ವಿಸ್ತರಿಸಿಕೊಳ್ಳುವುದಕ್ಕೆ ವಿಪುಲಾವಕಾಶವು ದೊರೆಯುವುದರಿಂದ, ನಾವೂ ನಮ್ಮ ರಾಜ್ಯದ ಜೊತೆಗೆ ಮತ್ತಷ್ಟನ್ನು ಸಂಪಾದಿಸಿಕೊಳ್ಳಲು ಸಂದರ್ಭವು ದೊರೆಯುವುದು. ಇದೇ ಮೂರನೆಯ ಪ್ರಯೋಜನ. ನಿಮ್ಮ ತಂದೆಯನ್ನು ಕೊಂದ ಶತ್ರುವನ್ನು ನಾಶಮಾಡಿ ಪಿತೃಋಣ

ವನ್ನು ತೀರಿಸುವಂತೆ ನಿನಗೆ ಅವಕಾಶವಾಗುವುದು. ಇದು ನಾಲ್ಕನೆಯಲಾಭ. ಎಲ್ಲಾ ಲಾಭಗಳಿಗಿಂತಲೂ ಇದು ಮುಖ್ಯತಮವಾದುದಲ್ಲವೆ ? " ಎಂದು ರಾಮಯಮಂತ್ರಿಯು ತಿಳಿಸಿದನು.

ಮುಕ್ತಾಂಬೆಯು ಈ ಮಾತುಗಳನ್ನು ಕೇಳಿ ತನ್ನ ತಂದೆಯ ನೆನಪಿನಿಂದ ಉಕ್ಕಿಬರುತ್ತಿದ್ದ ದುಃಖವನ್ನು ತಡೆದುಕೊಂಡು ಪಿತೃಋಣವಿಮುಕ್ತಳಾಗತಕ್ಕದ್ದೇ ಮುಖ್ಯವೆಂದು ನಿರ್ಧರಿಸಿ ಬಂದುದೇಳಿ ಈ ಕಾರ್ಯವನ್ನು ಸಾಧಿಸಿದರೂ ಸಾಧ್ಯವಹುದೆಂದು ನಿಶ್ಚಯಿಸಿದಳು. ಆದುದರಿಂದ ರಾಮಯಮಂತ್ರಿಯನ್ನು ಕುರಿತು "ಮಂತ್ರಿಶ್ರೇಷ್ಠರೇ ! ನೀವು ಹೇಳಿದ ಯಾವಲಾಭವೂ ಪಿತೃಋಣವಿಮೋಚನೆಯಷ್ಟರಮಟ್ಟಿಗೆ ನನ್ನ ಮನಸ್ಸಿಗೆ ರುಚಿಸಲಿಲ್ಲ. ನಾನು ಈಗ ಏನು ಮಾಡಬೇಕೆಂಬುದನ್ನು ವಿವರಿಸಿ ಹೇಳಿ " ಎಂದು ಕೇಳಿದಳು.

ಅಮ್ಮಾ ! ನೀನು ನಿಮಿತ್ತಮಾತ್ರಕ್ಕೆ ವಿಜಯನಗರರಾಜ್ಯಕ್ಕೆ ಬರಬೇಕು; ಉಳಿದ ಕಾರ್ಯಗಳೆಲ್ಲವನ್ನೂ ನಾವೇ ನೋಡಿಕೊಳ್ಳುವೆವು. ನೀನು ನಮ್ಮ ಜೊತೆಯಲ್ಲಿದ್ದಮಾತ್ರಕ್ಕೇ ನಮಗೆ ಉತ್ಸಾಹವು ಹುಟ್ಟುವುದು. ಅಲ್ಲಿಂದ ಬಿಡುಗಡೆಯಾಗುವುದು ಹೇಗೆಂದು ಯೋಚಿಸತಕ್ಕ ಆವಶ್ಯಕವಿಲ್ಲ. ನಿರಪಾಯವಾಗಿಯೂ ಸುಲಭವಾಗಿಯೂ ಬಿಡಿಸಿಕೊಂಡು ಬರುವೆನು. ಆದುದರಿಂದ ನೀನು ನಮ್ಮೊಡನೆ ಬರಲು ಸಿದ್ಧಳಾಗು " ಎಂದು ರಾಮಯಮಂತ್ರಿಯು ಪ್ರತ್ಯುತ್ತರಕೊಟ್ಟನು.

"ಸದಾ ಜಾಗರೂಕತೆಯಿಂದ ಕಾಯುತ್ತಿರುವ ಈ ದುರ್ಗದಿಂದ ನಾವು ನಿರಪಾಯವಾಗಿ ಹೊರಕ್ಕೆ ತಪ್ಪಿಸಿಕೊಂಡು ಹೋಗುವುದು ಹೇಗೆ ?" ಎಂದು ಮುಕ್ತಾಂಬೆಯು ಕೇಳಿದಳು.

"ಅದಕ್ಕಾಗಿ ನೀನು ಚಿಂತಿಸಬೇಕಾದುದಿಲ್ಲ. ನೀನು ಒಪ್ಪಿದುದು ಮಾತ್ರವಾದರೆ, ರಾಮಯಮಂತ್ರಿಯು ನಮ್ಮನ್ನು ಸುಲಭವಾಗಿ ಇಲ್ಲಿಂದ ಬಿಡಿಸಿಕೊಂಡು ಹೋಗಬಲ್ಲನು. ಉಪಾಯಗಳಿಗಾಗಿ ಅತನು ಹೊಸದಾಗಿ ಯೋಚಿಸಬೇಕಾಗಿರುವುದಿಲ್ಲ " ಎಂದು ಪ್ರಮರೇಶ್ವರಪುತ್ರನು ಸಮಾಧಾನಹೇಳಿದನು.

"ಮಂತ್ರಿಶ್ರೇಷ್ಠರೇ! ಮಹಾಪ್ರಭಾವಶಾಲಿಗಳಾದ ನಿಮ್ಮ ಮಾತುಗಳನ್ನು ಸತ್ಯಮಾಡದಿರುವುದಕ್ಕೆ ನಾನೆಷ್ಟರವಳು? ನೀವು ಏನನ್ನು ಮಾಡೆಂದರೂ ಅದನ್ನು ಮಾಡಲು ಸಿದ್ಧಳಾಗಿರುವೆ. ತಮ್ಮ ಯೋಚನೆಗಳು ಸರ್ವವಿಧದಲ್ಲಿಯೂ ನಮಗೆ ಲಾಭಕರವಾಗಿಯೇ ಇರುವುವು" ಎಂದು ಮುಕ್ತಾಂಬೆಯು ರಾಮಯಮಂತ್ರಿಗೆ ಹೇಳಿದಳು.

ರಾಮಯಮಂತ್ರಿಯು ಈ ಮಾತುಗಳನ್ನು ಕೇಳಿ ಸಂತೋಷಿಸಿ ಪ್ರಹರೇಶ್ವರನನ್ನು ಕುರಿತು—"ಹಸ್ತಗತವಾಗಿದ್ದ ಫಲವನ್ನು ಹಾಳುಮಾಡಿ ನನಗೆ ಚಿಂತೆಯನ್ನುಂಟುಮಾಡಿದಿರಿ. ಇರಲಿ! ಮುಖ್ಯವಾಗಿ ಕಾರಣನಾದವನು ಯಾರು? ಎಂದು ಕೇಳಿದನು

"ಅಮಾತ್ಯಶ್ರೇಷ್ಠರೇ! ಶತ್ರುವನ್ನು ಹತಮಾಡುವ ಸಮಯವು ಲಭಿಸಿದಾಗ ಈ ರುದ್ರದೇವನು ತಡಮಾಡದೆ ಅವನನ್ನು ಕಡಿದುಹಾಕಿದ್ದರೆ ಕಾರ್ಯವು ಸಫಲವಾಗುತ್ತಿದ್ದಿತು. ಆದರೆ ಇವನು ಹಾಗೆ ಮಾಡಲಿಲ್ಲ. ಆದುದರಿಂದ ಇದಕ್ಕೆ ಕಾರಣನಾದವನು ರುದ್ರದೇವನೇ" ಎಂದು ಪ್ರತಾಪರಾಯನು ಹೇಳಿದನು.

"ಮಂತ್ರಿಪ್ರವರರೇ! ಸಂಗರದಲ್ಲಿ ಶತ್ರುವಿನ ಇದಿರಿಗೆ ನಿಂತು ಮುಚ್ಚುಮರೆಗಳಿಲ್ಲದೆ ಯುದ್ಧಮಾಡಿ ಅವನನ್ನು ಕೊಲ್ಲುವ ನನಗೆ ನಿರಾಯುಧನಾದವನನ್ನು ಕೊಲ್ಲುವುದು ಹೇಡಿತನವೆಂದು ತೋರಿದುದರಿಂದಲೂ, ಇಂತಹ ಕಾರ್ಯಗಳನ್ನು ಇದುವರೆಗೆ ಒಂದೂ ಮಾಡಿಲ್ಲವಾದುದರಿಂದಲೂ ಹಿಂದೆಗೆದೆನು. ಇನ್ನುಮೇಲೆ, ನೀವು ಎಂತಹ ಕಾರ್ಯವನ್ನು ಮಾಡಹೇಳಿದರೂ ತಪ್ಪದೆ ನಡೆಯಿಸುವೆನು. ನನ್ನನ್ನು ನಂಬಿ. ಆ ವೀರನು ಬಾರದಿದ್ದರೆ ಆ ದಿನವೇ ತಿಮ್ಮರಸನನ್ನು ಕೊಲ್ಲುತ್ತಿದ್ದೆನು. ಹೋಗಲಿ. ಅವನನ್ನು ಕೊಲ್ಲುವುದಕ್ಕೆ ಇನ್ನು ಅವಕಾಶವು ಸಿಕ್ಕುವುದೇ ಇಲ್ಲವೇನು?" ಎಂದು ರುದ್ರದೇವನು ಕೇಳಿದನು

"ಹಾಗೆ ಹೇಳಬೇಡ; ಈಸಲ ತಪ್ಪಿಸಿಕೊಂಡ ಅವನು ಇನ್ನು ಮುಂದೆ ಬಲು ಎಚ್ಚರಿಕೆಯಿಂದ ಇರುವನಾದುದರಿಂದ ಅವನನ್ನು ಕೊಲ್ಲುವುದು ಬಹಳ ಕಷ್ಟ. ಆತನು ರಾಜದ್ರೋಹಿಗಳನ್ನು ಕಂಡುಹಿಡಿದು ಶಿಕ್ಷಿಸುವುದಕ್ಕಾಗಿ ಇನ್ನುಮೇಲೆ ಸರ್ವಪ್ರಯತ್ನವನ್ನೂ ಮಾಡದಿರನು.

ಆದರೂ ಅವನನ್ನು ಕೊಲ್ಲುವುದಕ್ಕೆ ಮತ್ತೊಂದುಸಾರಿ ಪ್ರಯತ್ನಿಸೋಣ, ಆ ನೂತನಪುರುಷನು ಮಹಾ ಪರಾಕ್ರಮಶಾಲಿ ; ಆದುದರಿಂದ ತಪ್ಪದೆ ಅವನನ್ನು ಮುಂಚೆ ಕೊಲ್ಲಬೇಕು'' ಎಂದು ರಾಮಯಮಂತ್ರಿಯು ಹೇಳಿದನು.

"ಮಂತ್ರೀಶ್ವರರೇ ! ನನ್ನ ಕೆಲಸವೆಲ್ಲಾ ಕೆಟ್ಟುಹೋದುದು ಆ ದುರ್ಮಾರ್ಗಿಯ ದೆಸೆಯಿಂದಲೇ. ಅವನು ಅಡ್ಡಬಾರದಿದ್ದರೆ ಇಷ್ಟುಹೊತ್ತಿಗೆ ತಿಮ್ಮರಸನು ನಾನಾಬಗೆಯ ದುಃಖಾನುಭವವನ್ನು ಪಡೆಯುತ್ತಿದ್ದನು. ಆ ದುರಾತ್ಮನ ಹೆಸರು ವಿಜಯಸಿಂಹ, ಆ ದುಷ್ಟಾತ್ಮನನ್ನು ಕೊಂದಹೊರತು ನನ್ನ ಕಣ್ಣಿಗೆ ನಿದ್ದೆ ಬರಲಾರದು'' ಎಂದು ರುದ್ರದೇವನು ಹೇಳಿದನು.

"ರುದ್ರದೇವ ! ಆ ವಿಜಯಸಿಂಹನನ್ನು ಕೊಲ್ಲುವುದು ಎಷ್ಟರ ಕೆಲಸ ? ನಿರಾಯಾಸದಿಂದ ಈ ಕೆಲಸವನ್ನು ಸಾಧಿಸಬಹುದು. ಆ ಇಬ್ಬರನ್ನೂ ಕೊಲ್ಲಿಸುವ ಪ್ರಯತ್ನದಲ್ಲಿಯೇ ನಿರತನಾಗಿರುತ್ತೇನೆ. ಇನ್ನು ನೀವು ನಿಮ್ಮ ಮನೆಗಳಿಗೆ ಹೋಗಿ ನಿತ್ಯವೂ ಬಂದು ನನ್ನನ್ನು ಕಾಣಿಸಿಕೊಳ್ಳುತ್ತಿರಿ'' ಎಂದು ಹೇಳಿ ಅವರನ್ನು ಕಳುಹಿಸಿ ರಾಜಪುತ್ರಿಯ ಅನುಮತಿಯನ್ನು ಪಡೆದು ತನ್ನ ಮನೆಗೆ ಹೊರಟುಹೋದನು. ಪ್ರಹರೇಶ್ವರನೂ ಮುಕ್ತಾಂಬೆಯೂ ತಮ್ಮ ಮಂದಿರಕ್ಕೆ ಹೋದರು. ಆದಿನ ರಾತ್ರಿಯೆಲ್ಲಾ ಮುಕ್ತಾಂಬೆಗೆ ನಿದ್ರೆ ಬರಲಿಲ್ಲ. ವಿಜಯಸಿಂಹನ ಕಳೆಯು ಸ್ಮೃದ್ವೇಶಿಸಿ ಅವರು ಮಾಡಿದ [illegible] ವಚನಗಳೆಲ್ಲವೂ ಆಕೆಗೆ ಅತ್ಯಂತ ಸಂತಾಪವನ್ನುಂಟುಮಾಡಿ[illegible] ! [illegible]ನು ಆ ಮೇಲಿಗೆ ಮಲಗಿರುತ್ತಿದ್ದಾಗ ವಿಜಯಸಿಂಹ[illegible] ಏನಾದರೂ [illegible]ವನ್ನು ಇದರೆ ಅವರು ತನಗೆ [illegible] ತ್ತಿ[illegible]. ಆಕೆಯು ಬಂದು ಮಾತನ್ನೂ ಆಡದೆ ಬಂದಿದ್ದಳು [illegible] ಮನೋಭಾವಗಳು ಬಹಿರಂಗವಾಗುವುದಕ್ಕೆ ಈಗ ಅವಕಾಶವಿ[illegible]ದರಿಂದ, ಬಗೆಬಗೆಯ ಚಿಂತಾತರಂಗಗಳು ಆಕೆಯ ಮನಸ್ಸಿನಲ್ಲಿ [illegible]ನನ್ನು ಕಾಡುತ್ತಿದ್ದುವು. ವಿಜಯಸಿಂಹನಲ್ಲಿ ಅನುರಕ್ತಳಾಗಿದ್ದ[illegible] ಅತನಿಗೆ ತಪ್ಪುವುದಕ್ಕಿದ್ದ ಬಾಧೆಯನ್ನು ಕುರಿತು ಬಹಳ ಹೆದರಿದ್ದಳು. ಆಕೆಯ ಕಣ್ಣುಗಳಿಂದ ಬಾಷ್ಪಬಿಂದುಗಳು ತೊಟ್ಟಿಕ್ಕುತ್ತಿದ್ದುವು. ಇಂತಾಗಿರಲೊಂದು ಕಾಲದಲ್ಲಿ ವಿಜಯಸಿಂಹನು ಉದಯಗಿರಿದುರ್ಗಕ್ಕೆ ಹೋಗಿದ್ದಾಗ ತದ್ದುರ್ಗಾಧಿಪತಿ ಮ[illegible]ರಾಯ

ಮುಕ್ತಾಂಬೆಗೂ ವಿಜಯಸಿಂಹನಿಗೂ ಪರಸ್ಪರಾನುರಾಗವು ಅಂಕುರಿಸಿ ಅಂತರಂಗದಲ್ಲಿಯೇ ಪ್ರವರ್ಧಿಸುತ್ತಿದ್ದಿತು. ಹೀಗೆ ಕೆಲವು ಕಾಲ ಕಳೆಯುವುದರೊಳಗಾಗಿ ಕೃಷ್ಣದೇವರಾಯರು ಉದಯಗಿರಿಯ ಒಡೆಯನಾದ ವೀರಭದ್ರಪಾತ್ರನನ್ನು ಕೊಂದು ದುರ್ಗವನ್ನು ಸ್ವಾಧೀನಪಡಿಸಿಕೊಂಡು ಅವನ ಚಿಕ್ಕಪ್ಪನಾದ ಪ್ರಹರೇಶ್ವರಪಾತ್ರನನ್ನು ಸೆರೆಹಿಡಿದುಕೊಂಡು ಬಂದು ಅವನನ್ನು ಆನೆಗೊಂದಿಯಲ್ಲಿ ಇಟ್ಟಿದ್ದರಲ್ಲದೆ ವೀರಭದ್ರಪಾತ್ರನ ಮಗಳಾದ ಮುಕ್ತಾಂಬೆಯನ್ನೂ ಪ್ರಹರೇಶ್ವರಪಾತ್ರನ ಅಧೀನದಲ್ಲಿಯೇ ಬಿಟ್ಟಿದ್ದರು. ಹೀಗೆ ಆಕೆಯನ್ನು ಜಾಗರೂಕತೆಯಿಂದ ರಕ್ಷಿಸಿ ಸಕಾಲದಲ್ಲಿ ಆಕೆಯನ್ನು ಯೋಗ್ಯನಾದ ವರನೊಬ್ಬನಿಗೆ ಕೊಟ್ಟು ಮದುವೆಮಾಡಿಸಿ ಬಳಿಕ ಆಕೆಗೂ ಆಕೆಯ ಪತಿಗೂ ಉದಯಗಿರಿಯನ್ನು ಹಿಂದಿರುಗಿ ಕೊಡಿಸಿ ರಾಜ್ಯವನ್ನು ಪುನಃ ನೆಲೆಗೊಳಿಸಬೇಕೆಂದು ರಾಯರು ಉದ್ದೇಶಿಸಿದ್ದರು. ಮುಕ್ತಾಂಬೆಯು ಬಂದು ಐದಾರು ವರುಷಗಳು ಆಗಿದ್ದುವು ಅಂದಿನಿಂದ ಈ ಕಥಾಕಾಲದವರೆಗೂ ವಿಜಯಸಿಂಹಮುಕ್ತಾಂಬೆಯರು ಪರಸ್ಪರ ನೋಡಿ ಮಾತನಾಡಲು ಅವಕಾಶವೇ ಒದಗಿರಲಿಲ್ಲ. ಆದರೂ ಆಗ ಜನಿಸಿದ್ದ ಅನುರಾಗವು ಅವರಿಬ್ಬರಲ್ಲಿಯೂ ಕ್ರಮಕ್ರಮವಾಗಿ ಬೇರುಬಿಟ್ಟುಕೊಳ್ಳುತ್ತಿದ್ದಿತು. ವಿಜಯಸಿಂಹನು ಇತರ ರಾಜ್ಯಗಳನ್ನು ಬಿಟ್ಟು ವಿಜಯನಗರಕ್ಕೆ ಬಂದುದು ಈ ಅನುರಾಗಮಾಹಾತ್ಮ್ಯದಿಂದಲೇ. ಕೃಷ್ಣದೇವರಾಯರ ಅಂತಃಪುರಾರಾಮದಲ್ಲಿ ವಿಜಯಸಿಂಹನು ಸಂಚರಿಸುತ್ತಿದ್ದಾಗ ಮುಕ್ತಾಂಬೆಯು ಅರಮನೆಯ ಕಿಂಡಿಯಿಂದ, ಹಿಂದೆ ಹೇಳಿದಂತೆ ಆನೆಗೊಂದಿಗೆ ಬರಬೇಕೆಂದು ಪತ್ರವನ್ನು ಬರೆದು ವಿಜಯಸಿಂಹನ ಅಂಗರಕ್ಕಿನಲ್ಲಿ ಇಡಲು ಆಕೆಗೆ ಅವಕಾಶವಾಯಿತು. ವಿಜಯಸಿಂಹನು ಆನೆಗೊಂದಿಗೆ ಬಂದರೆ ಅಲ್ಲಿ ತನ್ನ ಅನುರಾಗವನ್ನು ಪ್ರಕಟಪಡಿಸಬೇಕೆಂದು ಆಸೆಪಟ್ಟಿರಲು, ಅವನನ್ನು ಕೊಂದುಬಿಡುವ ಆಲೋಚನೆಯು ಸಭೆಯಲ್ಲಿ ನಿರ್ಧಾರವಾಗಲು ಮುಕ್ತಾಂಬೆಯ ಮನಸ್ಸು ಹೇಗೆ ಆಗಿರಬಹುದೆಂಬುದನ್ನು ವರ್ಣಿಸಲು ಶಕ್ಯವಲ್ಲ. ಹಿಂದೆ ಆಕೆಯು ಇಟ್ಟುಕೊಂಡಿದ್ದ ನಿರೀಕ್ಷೆಯು ನಾಶವಾಗಿ ಅವಳ ಸ್ಥಾನದಲ್ಲಿ ಅತ್ಯಂತ ಪ್ರಬಲವಾದ ಹೆದರಿಕೆಯು ಉತ್ಪನ್ನವಾಯಿತು. ಮಹಾಪ್ರತಿಭಾಶಾಲಿಯಾದ ರಾಮಾಯಮಂತ್ರಿಯು ಈ ವಧೋದ್ಯೋಗದಲ್ಲಿ

ಕೈಹಾಕಿದುದು ಆಕೆಯ ಭಯವನ್ನು ಇಮ್ಮಡಿಸಿತು. ತನ್ನ ಪತ್ರವನ್ನು ಕಂಡು ವಿಜಯಸಿಂಹನು ಆನೆಗೊಂದಿಗೆ ಬರುವನೆಂದೂ, ಆಗ ದುರಾತ್ಮರು ಆತನನ್ನು ಕೊಲ್ಲದೆಬಿಡರೆಂದೂ, ತನ್ನಪ್ರಿಯನ ಸಾವಿಗೆ ತಾನೇ ಕಾರಣಳಾಗುವೆನೆಂದೂ ಭಾವಿಸಿ, ಸ್ತ್ರೀಜನಸಾಮಾನ್ಯವಾದ ಭಯದಿಂದ ಸಂತಪ್ತಹೃದಯಳಾಗಿ ಆಕೆಯು ಬಹಳಹೊತ್ತು ಕಳೆದಳು; ಕಡೆಗೆ, ಸುಮ್ಮನೆ ಭಯಪಡುವುದರಿಂದ ಪ್ರಯೋಜನವಿಲ್ಲವೆಂದು ನಿರ್ಧರಿಸಿ, ವಿಜಯಸಿಂಹನನ್ನು ಅಪಾಯದಿಂದ ಬಿಡಿಸುವುದು ಹೇಗೆಂಬುದನ್ನು ಆಲೋಚನೆಮಾಡುತ್ತಾ ಆ ರಾತ್ರಿಯನ್ನು ನೂಕಿದಳು.

ಐದನೆಯ ಪ್ರಕರಣ

ಅನುರಾಗಬಲ

“ತೇ ದುಃಖಮುಚ್ಚಾವಚಮಾಪ್ನುವಂತಿ |
ಯೇಽನುಸ್ಮರಂತಿ ಪ್ರಿಯಸಂಗಮಾನಾಮ್ ||”

ವಿಜಯಸಿಂಹನು ಆ ಲೇಖನವನ್ನು ಓದಿಕೊಂಡು ಅನುಭವಿಸಿದ ಆನಂದವು ಪಾಠಕಮಹಾಶಯರಿಗೆ ತಿಳಿಯದೇ ಇರುವುದು. ಆ ಪತ್ರವನ್ನು ಕಂಡಬಳಿಕ ಅವನ ಆಸೆಯು ಆಕಾಶದವರೆಗೂ ಹಬ್ಬಲಾರಂಭಿಸಿತು. ಉತ್ತರಕ್ಷಣದಲ್ಲೇ ಈ ಯೋಚನೆಯು ಲೀನವಾಗಿಹೋಗಿ ಮತ್ತೊಂದು ಯೋಚನೆಯೂ, ಅದಾದಬಳಿಕ ಮತ್ತೊಂದೂ, ಹೀಗೆ ಅವನ ಮನಸ್ಸಿನಲ್ಲಿ ಹೊಳೆದು ಮಾಯವಾಗುತ್ತ ಬಂದುವು. ಎಷ್ಟು ಹೊತ್ತಿಗೆ ಆನೆಗೊಂದಿಗೆ ಹೋಗಿ ತನ್ನ ಪ್ರಿಯೆಯನ್ನು ಕಾಣ್ಬೆನೋ ಏನೆಂಬ ಆತುರವು ಅವನಿಗೆ ಹೆಚ್ಚುತ್ತಬಂದಿತು. ಒಮ್ಮೆ, ತನಗೆ ಪಕ್ಷಿಯಂತೆ ರೆಕ್ಕೆಗಳಿದ್ದಿದ್ದರೆ ಕ್ಷಣಮಾತ್ರದಲ್ಲಿ ತನ್ನ ಪ್ರೇಯಸಿಯನ್ನು ನೋಡಬಹುದಾಗಿದ್ದಿತಲ್ಲಾ! ಎಂದು ಹಂಬಲಿಸಿಕೊಂಡನು. ಮತ್ತೊಮ್ಮೆ, ಆನೆಗೊಂದಿಗೆ ಹೋಗಿ ಯಾವ ನೆವದಿಂದ ಮುಕ್ತಾಂಬೆಯನ್ನು ನೋಡಬಹುದೆಂದು ಯೋಚಿಸಿದನು. ತನಗೂ ಪ್ರಹರೇಶ್ವರಪಾತ್ರನಿಗೂ ಪರಿಚಯವಿದ್ದಕಾರಣ ಆತನನ್ನು ನೋಡುವ

ಸೇವದಿಂದ ಮುಕ್ತಾಂಬಿಯ ಸಂದರ್ಶನಸುಖವನ್ನು ಅನುಭವಿಸಬಹುದೆಂದು ಅವನು ನೆನೆಸಿದನು. ಆದರೆ ತತ್ಕ್ಷಣವೇ ಸಾರ್ವಭೌಮರ ಮತ್ತು ಮಂತ್ರಿವರ್ಯರ ಅನುಮತಿ ಇಲ್ಲದೆ ಹೊರಡುವುದು ಅನುಚಿತವೆಂಬ ಭಾವನೆಯು ತಲೆದೋರಲು, ಸಾರ್ವಭೌಮರನ್ನೂ ಮಂತ್ರಿಶ್ರೇಷ್ಠರನ್ನೂ ಕಂಡು ಅವರ ಅನುಮತಿಯನ್ನು ಪಡೆಯುವುದು ಅತ್ಯಾವಶ್ಯಕವೆಂದು ನಿರ್ಧರಿಸಿ, ವಿಜಯಸಿಂಹನು ಮೊದಲು ಅರಮನೆಯ ಕಡೆಗೆ ಹೊರಟನು. ಆತನು ಬಂದಿರುವುದನ್ನು ಅರಿತವರಾಗಿ ಮಹಾರಾಜರು ಆತನನ್ನು ಕರೆಯಿಸಿ ಉಚಿತಾಸನದಲ್ಲಿ ಕುಳ್ಳಿರುವಂತೆ ನಿಯಮಿಸಿ—"ವಿಜಯಸಿಂಹ! ನಿನಗೆ ಬಿಡಿಸಿಕೊಟ್ಟಿರುವ ಮನೆಯು ಅನುಕೂಲವಾಗಿರುವುದೆ? ಆಹಾರಾದ್ಯುಪಚಾರಗಳಲ್ಲಿ ಲೋಪಗಳು ಯಾವುವೂ ತೋರಿಬಾರಲಿಲ್ಲವಷ್ಟೆ? ನಿನ್ನ ಪರಾಕ್ರಮಾತಿಶಯದಿಂದ ಉಳಿದುಕೊಂಡ ಮಂತ್ರಿಪುಂಗವರು ಕ್ರಮಕ್ರಮವಾಗಿ ಆರೋಗ್ಯಸ್ಥಿತಿಗೆ ಬರುತ್ತಿರುವರು. ನೀನು ಈಚೆಗೆ ಅವರನ್ನು ನೋಡಿದ್ದೆಯಾ?" ಎಂದು ಕೇಳಿದರು.

"ಮಹಾಸ್ವಾಮಿ! ನಾನು ಪ್ರತಿದಿನವೂ ಅವರನ್ನು ನೋಡಿಕೊಂಡು ಬರುತ್ತಿರುವೆನು. ಮಂತ್ರಿಪುಂಗವರು ಆರೋಗ್ಯವನ್ನು ಪಡೆಯುತ್ತಿರುವರು" ಎಂದು ವಿಜಯಸಿಂಹನು ಹೇಳಿದನು.

"ವೀರವರೇಣ್ಯ! ನಿನ್ನ ಪ್ರವರ್ತನವನ್ನೂ ನಿನ್ನ ಸುಸ್ವಭಾವವನ್ನೂ ನಿನ್ನ ಸುಗುಣಸಂಪದವನ್ನೂ ಕಂಡು, ನಾನೂ ಮಂತ್ರಿಯೂ ಬಹಳ ಸಂತೋಷಪಟ್ಟೆವು ಇನ್ನುಮೇಲೆ ನಿನಗೆ ನಮ್ಮ ಬಳಿ ಅಂಗರಕ್ಷಕೋದ್ಯೋಗವನ್ನು ಕೊಡಬೇಕೆಂದು ನಿಶ್ಚಯಿಸಿರುವೆವು. ಹೊಸದಾಗಿಬಂದ ನಿನಗೆ ಆ ಉದ್ಯೋಗವನ್ನು ಕೊಡುವುದು ರಾಜನೀತಿಗೆ ವಿರುದ್ಧವಾಗಿದ್ದರೂ, ಸ್ಥಾಲೀಪುಲಾಕನ್ಯಾಯದಂತೆ ನಿನ್ನನ್ನು ಪರೀಕ್ಷಿಸಿರುವುದರಿಂದ, ನಿನಗೆ ಆ ಪದವಿಯನ್ನು ಕೊಡುವುದಕ್ಕೆ ಹಿಂದೆಗೆಯಲಿಲ್ಲ. ಇನ್ನುಮೇಲೆ ಈ ಉದ್ಯೋಗದಲ್ಲಿದ್ದುಕೊಂಡು ಚಟುವಟಿಕೆಯಿಂದ ಪ್ರವರ್ತಿಸುತ್ತ ಗೌರವವನ್ನು ಸಂಪಾದಿಸಿಕೊ" ಎಂದು ಕೃಷ್ಣದೇವರಾಯರು ಹೇಳಿದರು.

"ಮಹಾಸ್ವಾಮಿ! ಇಷ್ಟು ಸ್ವಲ್ಪಕಾಲದಲ್ಲೇ ತಮ್ಮ ಮಹಾನುಗ್ರಹವು ನನಗೆ ಲಭಿಸಿದುದಕ್ಕಾಗಿ ಪರಮಸಂತುಷ್ಟನಾಗಿರುವೆನು. ಚಿರಕಾಲ

ಸೇವೆಮಾಡಿ ನಂಬಿಕೆಯನ್ನು ಸಂಪಾದಿಸಿಕೊಂಡಿರುವವರಿಗೆಮಾತ್ರ ದೊರೆಯ ಬಹುದಾದ ಅಧಿಕಾರವನ್ನು ನನಗೆ ದಯೆಪಾಲಿಸಿ, ನನ್ನ ಚರಿತ್ರವನ್ನು ಗೌರವಪಾತ್ರವನ್ನಾಗಿ ಮಾಡಿದುದರಿಂದ, ಮಹಾಸ್ವಾಮಿಯವರಿಗೆ ಅತ್ಯಂತ ಕೃತಜ್ಞನಾಗಿರುವೆನು. ನನ್ನ ಶರೀರದಲ್ಲಿ ಪ್ರಾಣವಿರುವವರೆಗೂ ತಮಗೆ ಯಾವವಿಧವಾದ ಅಪಾಯವಾಗಲಿ, ಲೇಶದಷ್ಟು ಬರಲಾರದೆಂದು ನಂಬ ಬಹುದು" ಎಂದು ವಿಜಯಸಿಂಹನು ಅತ್ಯಂತ ವಿನಯದಿಂದ ಬಿನ್ನವಿಸಿದನು.

"ವಿಜಯಸಿಂಹ! ನಿನ್ನ ಮಾತುಗಳನ್ನು ಕೇಳಿ ಸಂತೋಷವಾಯಿತು. ನೀನು ಏನನ್ನೋ ಕೇಳಿಕೊಳ್ಳಬೇಕೆಂದು ಇಲ್ಲಿಗೆ ಬಂದಿರುವೆ. ನಿನಗೇನು ಬೇಕಾಗಿದೆ ಎಂಬುದನ್ನು ತಿಳಿಸು" ಎಂದು ಪರೇಂಗಿತಜ್ಞರಾದ ಕೃಷ್ಣದೇವ ರಾಯರು ಹೇಳಿದರು.

"ಮಹಾಸ್ವಾಮಿ! ನಾನೊಂದು ವರವನ್ನು ಕೇಳಿಕೊಳ್ಳಬೇಕೆಂದು ಬಂದಿರುವೆನು. ಆನೆಗೊಂದಿಯಲ್ಲಿರುವ ಪ್ರಹರೇಶ್ವರಪಾತ್ರಾದಿಗಳು ನನಗೆ ಪರಿಚಿತರು. ಅವರನ್ನು ಒಂದುಸಾರಿ ನೋಡಿಕೊಂಡು ಬರಬೇಕೆಂಬ ಕುತೂಹಲವು ನನ್ನನ್ನು ಬಾಧಿಸುತ್ತಿರುವುದು. ಅದಕ್ಕೆ ತಮ್ಮ ಅನುಮತಿ ಯನ್ನು ದಯೆಪಾಲಿಸೋಣವಾಗಬೇಕು" ಎಂದು ಕೇಳಿಕೊಂಡನು.

"ವಿಜಯಸಿಂಹ! ಪ್ರಹರೇಶ್ವರಪಾತ್ರಾದಿಗಳನ್ನು ನೋಡಬೇಕೆ? ಆದಿಗಳು ಎಂದರೆ ಯಾರು? ಅಲ್ಲಿರುವ ಮುಕ್ತಾಂಬೆಯೋ ಏನು? ಆಕೆಗೆ ಇನ್ನೂ ಪರಿಣಯವಾಗಿಲ್ಲ. ಆದುದರಿಂದ ಆಕೆಯನ್ನು ನೋಡಿದರೂ ನೋಡಿ ಕೊಂಡು ಬರಬಹುದು" ಎಂದು ಮಂದಹಾಸದಿಂದ ಕೃಷ್ಣದೇವರಾಯರು ಹೇಳಿದರು.

"ಸಾರ್ವಭೌಮರವರ ಅಭಿಪ್ರಾಯವು ಹಾಗಿರುವುದಾದರೆ ಆಕೆ ಯನ್ನು ನೋಡಿಕೊಂಡು ಬರುವೆನು. ಪ್ರಹರೇಶ್ವರನು ನನಗೆ ಪರಿಚಿತನು ಮಾತ್ರವಲ್ಲದೆ ಬಂಧುವರ್ಗದಲ್ಲಿ ಸೇರಿದವನು. ಆತನನ್ನು ಒಂದುಸಾರಿ ನೋಡಿಕೊಂಡು ಬರಬೇಕೆಂಬುದು ನನ್ನ ಅಭಿಲಾಷೆ. ಅಪ್ಪಣೆಯಾದರೆ ಹೋಗಿಬರುವೆನು" ಎಂದು ವಿಜಯಸಿಂಹನು ತನ್ನ ಅಂತರಂಗಾಭಿಲಾಷೆ ಯನ್ನು ಮರೆಯಿಸಿಕೊಂಡು ಬಿನ್ನವಿಸಿದನು.

"ಪ್ರಹರೇಶ್ವರಪಾತ್ರನು ಸಾಮಾನ್ಯನಲ್ಲ. ಅವನ ರಾಜದ್ರೋಹಿಗಳಲ್ಲಿ ಪ್ರಥಮನೆಂದು ಕೇಳಿರುವೆನು. ಅವನ ಹೆಸರನ್ನು ಕೇಳಿದ ಮಾತ್ರದಿಂದಲೇ ನನಗೆ ಕೋಪವು ಉದ್ರೇಕವಾಗುವುದು. ಅವನೊಡನೆ ಏನಾದರೂ ರಹಸ್ಯವನ್ನು ಮಾತನಾಡಿಕೊಂಡು ಬರಲು ಹೋಗುವೆಯಾ ಏನು?" ಎಂದು ಮಹಾರಾಜರು ಕೇಳಿದರು.

"ಸಾರ್ವಭೌಮರಿಗೆ ಅಂತಹ ಸಂಶಯವು ಇರುವುದಾದರೆ ನಾನು ಆನೆಗೊಂದಿಗೆ ಹೋಗುವುದೇ ಇಲ್ಲ. ಪ್ರಹರೇಶ್ವರನು ಅಂತಹವನೆಂದು ತಮ್ಮ ಈ ಸೇವಕನು ಭಾವಿಸಿಲ್ಲ. ಒಂದುವೇಳೆ ಆತನು ಅಂತಹವನೆಂದು ತಿಳಿದುಬಂದರೆ, ಅವನ ದುರಾಲೋಚನೆಯನ್ನು ಹೋಗಲಾಡಿಸುವೆನು ಎಂದು ತಾವು ಸಂಪೂರ್ಣವಾಗಿ ನಂಬಬಹುದು. ಆತನು ತಮ್ಮ ಮೇಲೆ ಪ್ರತಿಭಟಿಸುವುದೆಂದರೆ ಶಲಭವು ಅಗ್ನಿಯ ಮೇಲೆ ಪ್ರತಿಭಟಿಸುವಂತೆಯೂ, ಕತ್ತಲೆಯು ಭಾಸ್ಕರನನ್ನು ಇದಿರಿಸುವಂತೆಯೂ ಆಗುವುದು" ಎಂದು ವಿಜಯಸಿಂಹನು ಉತ್ತರಕೊಟ್ಟನು.

"ವಿಜಯಸಿಂಹ! ನಾನು ಪರಿಹಾಸಕ್ಕೋಸ್ಕರ ಕೇಳಿದ ಪ್ರಶ್ನೆಯನ್ನು ನಿಜವೆಂದು ಭಾವಿಸಿ ಹೆದರಬೇಡ. ನಿನ್ನ ವಿಷಯದಲ್ಲಿ ನನಗೆ ಅಂತಹ ಸಂಶಯವಿಲ್ಲ. ನನ್ನ ಮಂತ್ರಿಯಾಸ್ಥಾನಿಕನು ದುಸ್ಸಹತೇಜಸ್ವಿಯಾಗಿ ಪ್ರಕಾಶಿಸುತ್ತಿರುವವರೆಗೂ ರಾಜದ್ರೋಹತಿಮಿರವು ತಲೆದೋರುವುದೆಂಬ ಭಯವು ನಮಗೆಷ್ಟುಮಾತ್ರವೂ ಇರತಕ್ಕುದಿಲ್ಲ. ನೀನು ಹೋಗಿಬರಬಹುದು. ಆದರೆ ಮಲ್ಲಯುದ್ಧದಲ್ಲಿ ನಿನ್ನಿಂದ ಪರಾಭೂತರಾದವರು, ಆನೆಗೊಂದಿಯಲ್ಲಿ ಇರುವರು. ತನಗೆ ಬರುತ್ತಿದ್ದ ಬಹುಮಾನವನ್ನು, ನೀನು ಪಡೆದುದಕ್ಕೆ ಅತ್ಯಂತ ಕೋಪದಿಂದಿರುವ ರುದ್ರದೇವನು ಪ್ರಹರೇಶ್ವರನಿಗೆ ಪ್ರಾಣಮಿತ್ರನೆಂದು ಕೇಳಿರುವೆವು. ಇದರಿಂದ ನಿನಗೇನಾದರೂ ಅಪಾಯಸಂಭವಿಸೀತು ಎಂದು ಸಂಶಯಪಡುತ್ತೇವೆ. ಇದಲ್ಲದೆ ನಮಗೆ ಮತ್ತೆ ಯಾವ ಸಂದೇಹವೂ ಇಲ್ಲ" ಎಂದು ಮಹಾರಾಜರು ಉತ್ತರಕೊಟ್ಟರು.

"ಮಹಾಸ್ವಾಮಿ! ನನ್ನ ವಿಷಯದಲ್ಲಿ ತಮಗಿರುವ ಪ್ರೇಮವೇ ಈ ಸಂಶಯವನ್ನು ಹುಟ್ಟಿಸಿರುವುದು. ಪ್ರಹರೇಶ್ವರನು ನನಗೆ ಅಂತಹ ಅಪಾಯವನ್ನು, ಎಂದಿಗೂ ಉಂಟುಮಾಡಲಾರನು" ಎಂದು ವಿಜಯಸಿಂಹನು

ಸಮಾಧಾನ ಹೇಳಲು, ರಾಜರು "ಒಳ್ಳೆಯದು; ನೀನು ಹೋಗಿ ಬರಬಹುದು. ಅಲ್ಲಿಗೆ ಹೋಗುವುದಕ್ಕೆ ಮೊದಲು ಮಂತ್ರಿಪುಂಗವರನ್ನು ಒಂದು ಸಾರಿ ನೋಡಿಹೋಗು" ಎಂದು ಹೇಳಿ ಅಲ್ಲಿಂದ ಹೊರಟುಹೋದರು.

ಈ ಸಮಯದಲ್ಲಿ ಅಲ್ಲಿಯೇ ಇದ್ದ ಹುಚ್ಚನು ಎದ್ದು ನಿಂತು ಸೇವಕರನ್ನು ಕುರಿತು—"ಮಹಾರಾಜರ ಅಪ್ಪಣೆಯಾಯಿತೇ? ಮಂತ್ರಿಸಂದರ್ಶನವನ್ನು ಮಾಡಬೇಕೆಂತಲೆ? ಒಳ್ಳೆಯದು, ಹಾಗೆಯೇ ಮಾಡುವೆನು. ಅಮಾತ್ಯರು ಬಹಳ ಒಳ್ಳೆಯವರೆಂದು ಕೇಳಿದ್ದೇನೆ. ನನಗೆ ಯಾವುದಾದರೂ ಒಂದು ಉದ್ಯೋಗವನ್ನು ಕೊಡುವರಲ್ಲವೆ?" ಎಂದು ಕೇಳಿದನು.

"ನಿನಗೆ ಉದ್ಯೋಗವನ್ನು ಕೊಡದೆ ಇರುವವರು ಯಾರು? ನಿನ್ನ ಬುದ್ಧಿಚಾತುರ್ಯವನ್ನೂ, ನಿನ್ನ ಸಂಭಾಷಣಾವೈಚಿತ್ರ್ಯವನ್ನೂ ನೋಡಿದ ಕೂಡಲೆ ನಿನಗೆ ಉದ್ಯೋಗವನ್ನು ಕೊಟ್ಟೇ ಕೊಡುವರು. ರಾಜಮಂತ್ರಿಗಳೆಲ್ಲರೂ ನಿನಗೆ ನಗರಾಧಿಪತ್ಯವನ್ನು ಕೊಡಬೇಕೆಂದು ಯೋಚಿಸಿರುವರು" ಎಂದು ಸೇವಕನು ಪರಿಹಾಸಪೂರ್ವಕವಾಗಿ ಹೇಳಿದನು.

ಹುಚ್ಚನು ಈ ಮಾತುಗಳನ್ನು ಕೇಳಿ ಸಂತೋಷಿಸುತ್ತಾ "ಇನ್ನು ನನಗೆ ಅದೃಷ್ಟವು ಕುಲಾಯಿಸಿತು. ಇನ್ನುಮೇಲೆ ನನಗೆ ದೊಡ್ಡ ಅಧಿಕಾರವಾಗದೆ ತಪ್ಪದು. ನನ್ನನ್ನು ನೋಡಿ ನಗುವಿರಾ? ನಾನು ನಗರಾಧಿಪತ್ಯವಾದ ಕೂಡಲೆ ನಿಮ್ಮನ್ನು ವಧಾಶಿಕ್ಷೆಗೆ ಒಳಪಡಿಸುವೆನು" ಎಂದು ಹೇಳಿ ಅಲ್ಲಿಂದ ಎದ್ದು ದಡದಡನೆ ಓಡಿಹೋದನು. ಅವನು ಹೊರಗೆ ಕಾಲಿಟ್ಟ ಕೂಡಲೆ ಅವನಿಗಾಗಿ ಕಾದುಕೊಂಡಿದ್ದ ಹುಡುಗರು "ಹುಚ್ಚ! ಮರುಳ!" ಎಂದು ಕೇಕೆಗಳನ್ನು ಹಾಕುತ್ತ ಅವನ ಹಿಂದೆಹಿಂದೆ ಓಡಿದರು. ಆ ಹುಡುಗರನ್ನು ಕಂಡು ಹುಚ್ಚನು "ನಾನು ಇನ್ನು ಮೇಲೆ ನಗರಾಧಿಪತಿಯಾಗುವೆನು. ನಿಮ್ಮ ಕಪಿಚೇಷ್ಟೆಗಳನ್ನು ಇನ್ನುಮೇಲೆ ಸಹಿಸಲಾರೆನು" ಎಂದು ಅವರನ್ನು ಗದರಿಸಿ, ಹಾಡುಗಳನ್ನು ವಕ್ರವಕ್ರವಾಗಿ ಹೇಳಿಕೊಳ್ಳುತ್ತಾ, ಮಂತ್ರಿಯ ಮನೆಗೆ ಬಂದನು.

ಇವನು ಎಲ್ಲಿ ಹೋದರೂ ಅಡ್ಡಿಮಾಡುವ ಸಂಪ್ರದಾಯವಿರಲಿಲ್ಲ. ಆದುದರಿಂದ ಮಂತ್ರಿಮಂದಿರದಲ್ಲಿ ದ್ವಾರಪಾಲಕರು ತಡೆಯಲಿಲ್ಲ. ರಾಜಕೀಯವ್ಯವಹಾರಗಳನ್ನು ನಿರ್ವಹಿಸಿ ಮನಸ್ಸು ಬಹಳ ಬಳಲಿದ್ದಾಗ

ಮಂತ್ರಿಪುಂಗವರು ಹುಚ್ಚನನ್ನು ಕ್ರೀಡಾಸಾಧನವನ್ನಾಗಿ ಉಪಯೋಗಿಸಿ ಕೊಳ್ಳುವ ಪರಿಪಾಟಿಯಿದ್ದಿತು. ವಿಶ್ರಾಂತಿಗಾಗಿ ಕುಳಿತುಕೊಂಡಿದ್ದ ಅಪ್ಪಾಜಿ ಯವರು ಈ ಹುಚ್ಚನನ್ನು ಕಂಡು ಈ ಮುಂದೆ ಹೇಳುವ ರೀತಿಯಲ್ಲಿ ಸಂಭಾಷಿಸತೊಡಗಿದರು :—

ಮಂತ್ರಿ—"ಶಾಸ್ತ್ರಿಯವರೇ! ಏನಾದರೂ ಕೆಲಸಕ್ಕಾಗಿ ಬಂದಿರು ವಿರಾ? ಇಲ್ಲವೇ, ಕಾಲಕ್ಷೇಪಾರ್ಥವಾಗಿ ಬಂದಿರುವಿರಾ?"

ಹುಚ್ಚ—"ಯಾರನ್ನು ಯಾವರೀತಿಯಲ್ಲಿ ಸಂಬೋಧಿಸಬೇಕೆಂಬುದು ಅದು ನಿಮಗೆ ತಿಳಿದಿರುವುದಿಲ್ಲ. ಇನ್ನು ಮೇಲೆ ನಾನು ದುರ್ಗಾಧಿಪತಿ ಯಾಗಬೇಕೆಂದಿರುವುದರಿಂದ, ತಾವು ನನ್ನನ್ನು ಈರೀತಿ ಮಾತನಾಡಿಸುವುದು ಯುಕ್ತವಲ್ಲ."

ಮಂತ್ರಿ—"ಏನು! ಏನು! ದುರ್ಗಾಧಿಪತ್ಯವನ್ನು ವಹಿಸಬೇಕೆಂದಿ ರುವಿರೋ? ಹಾಗಾದರೆ ಕ್ಷಮಿಸಿ. ತಮ್ಮನ್ನು ಇನ್ನುಮೇಲೆ ಯಾವ ರೀತಿ ಯಲ್ಲಿ ಸಂಬೋಧಿಸಬೇಕೋ ದಯವಿಟ್ಟು ತಿಳಿಸಬೇಕು."

ಹುಚ್ಚ—"ದುರ್ಗಾಧಿಪತಿಗಳನ್ನು ಹೇಗೆ ಕರೆಯಬೇಕೋ ಹಾಗೆಯೇ ಕರೆಯಿರಿ."

ಮಂತ್ರಿ—"ಅದಕ್ಕೇನು? ಹಾಗೇ ಆಗಲಿ. ತಾವು ಬಂದ ಕೆಲಸವೇನು? ಹೇಳೋಣಾಗಲಿ."

ಹುಚ್ಚ—"ಸಾರ್ವಭೌಮರು ತಮ್ಮನ್ನು ಕಾಣಬೇಕೆಂದು ಅಪ್ಪಣೆ ಮಾಡಿರುವರು."

ಮಂತ್ರಿ—"ಅದೇಕೆ?"

ಹುಚ್ಚ—"ದುರ್ಗಾಧಿಪತ್ಯವನ್ನು ಸಂಪಾದಿಸುವುದಕ್ಕಾಗಿ."

ಮಂತ್ರಿ—"ಒಳ್ಳೆಯದು. ನಿಮಗೆ ಆ ಅಧಿಕಾರವನ್ನು ಕೊಡುವ ಯೋಚನೆಯನ್ನು ಮಾಡುತ್ತೇವೆ. ಒಂದುಸಲ ಪುರಾಣವನ್ನು ಓದಿ ಅರ್ಥ ವನ್ನು ಹೇಳುವಿರಾ?" ಎಂದು ಮಾತನಾಡುತ್ತಿರಲು, ವಿಜಯಸಿಂಹನು ಅಲ್ಲಿಗೆ ಬಂದು ಮಂತ್ರಿಯವರಿಗೆ ವಂದನೆಮಾಡಿದನು. ಆಗ ಮಂತ್ರಿಯ ವರುಆತನಿಗೆ ಉಚಿತಾಸನವನ್ನು ಸ್ವೀಕರಿಸ ಹೇಳಿದರು. ವಿಜಯಸಿಂಹನು—

"ಮಂತ್ರಿಶ್ರೇಷ್ಠರೇ! ತಮಗೆ ಈಗ ದೇಹಸ್ಥಿತಿಯು ಆರೋಗ್ಯವಾಗಿರುವುದೇ?" ಎಂದು ಕುಶಲಪ್ರಶ್ನೆಮಾಡಿದನು.

ಮಂತ್ರಿ—"ವೀರವರೇಣ್ಯ! ಆರೋಗ್ಯವಾಗಿದೇನೆ. ನೀನು ಮಾಡಿದ ಉಪಕಾರವನ್ನು ಎಂದೆಂದಿಗೂ ಮರೆಯಲಾರೆನು. ನೀನು ಇಷ್ಟುದೂರ ಬಂದ ಉದ್ದೇಶವೇನು?"

ವಿಜಯಸಿಂಹ—"ಮಂತ್ರಿಪ್ರವರರೇ! ಪರರ ಉಪಕಾರವು ಅಣುಮಾತ್ರವಾಗಿದ್ದರೂ ಅದನ್ನು ಪರ್ವತೋಪಮವನ್ನಾಗಿ ಭಾವಿಸುವುದು ಮಹಾಪುರುಷರ ಸಹಜಲಕ್ಷಣವಷ್ಟೆ? ಮಹಾರಾಜರ ಅನುಮತಿಯನ್ನು ಪಡೆದು ತಮ್ಮನ್ನು ಕಾಣಬೇಕೆಂದು ಬಂದಿರುವೆನು."

ಮಂತ್ರಿ—"ಮಹಾರಾಜರು ಏನು ಅಪ್ಪಣೆಮಾಡಿರುವರು? ನಾನು ಮಾಡಬೇಕಾಗಿರುವುದೇನು?"

ವಿಜಯಸಿಂಹ—"ನಾನು ಆನೆಗೊಂದಿಗೆ ಹೋಗಿ ಅಲ್ಲಿರುವ ಪ್ರಹರೇಶ್ವರಪಾತಾಳಾದಿಗಳನ್ನು ನೋಡಿಕೊಂಡು ಬರಲು ಅನುಮತಿಸಬೇಕೆಂದು ಮಹಾರಾಜರಪರನ್ನು ಪ್ರಾರ್ಥಿಸಿಕೊಂಡೆನು. ಅದಕ್ಕೆ—ತಮ್ಮನ್ನು ಕಂಡು ತಮ್ಮ ಅನುಮತಿಯನ್ನು ಪಡೆದು ಹೋಗಿ ಬರಬಹುದೆಂದು ಅವರ ಅಪ್ಪಣೆಯಾಯಿತು. ಆದುದರಿಂದ ತಮ್ಮನ್ನು ಕಾಣಬೇಕೆಂದು ಬಂದಿರುವೆನು."

ಮಂತ್ರಿ—"ಏನು! ಏನು! ನೀನು ಆನೆಗೊಂದಿಗೆ ಹೋಗಿಬರಬೇಕೆ? ಅಲ್ಲಿಗೆ ಹೋಗಿ ಬಂದಹೊರತು ನಿಂತುಹೋಗುವ ಕೆಲಸವೇನಿರುವುದು? ಆ ಪ್ರಹರೇಶ್ವರನನ್ನು ಇಲ್ಲಿಗೇ ಬರಮಾಡುವೆನು. ನೀನು ಅಷ್ಟು ದೂರ ಪ್ರಯಾಣಮಾಡುವ ಪ್ರಯತ್ನವನ್ನು ಬಿಡಬಹುದಲ್ಲಾ?"

ವಿಜಯಸಿಂಹ—"ತಾವು ಅಪ್ಪಣೆಕೊಡುವುದನ್ನು ನೋಡಿದರೆ ನನ್ನಲ್ಲಿ ಸಂದೇಹಪಡುತ್ತಿರುವಂತೆ ತೋರುವುದು."

ಮಂತ್ರಿ—"ನಿನ್ನ ವಿಷಯದಲ್ಲಿ ನನಗೇನೂ ಸಂದೇಹವಿರುವುದಿಲ್ಲ. ಆದರೆ ನೀನು ಹಿಡಿಸಿದ ದುರಾತ್ಮರು ಆನೆಗೊಂದಿಯಲ್ಲೇ ಇರುವರು. ಅವರಿಂದ ನಿನಗೇನಾದರೂ ಬಾಧೆಯು ಉಂಟಾದೀತೆಂಬ ಸಂಶಯವು ನನ್ನನ್ನು ಪೀಡಿಸುತ್ತಿದೆ."

ವಿಜಯಸಿಂಹ—“ಪ್ರಹರೇಶ್ವರಪಾತ್ರನು ನನಗೆ ಬಂಧುವಾಗಿರುವ ನಲ್ಲದೆ, ನಮ್ಮ ತಂದೆಗೆ ಆಪ್ತಮಿತ್ರನು. ಆತನು ಅಲ್ಲಿರುವುದರಿಂದ ನನಗೆ ಯಾವ ಅಪಾಯವೂ ಉಂಟಾಗಲಾರದೆಂದೇ ನನ್ನ ನಂಬಿಕೆ.”

ಮಂತ್ರಿ—“ಆತನಿರುವುದರಿಂದ ಇತರರು ನನಗೆ ಅಪಾಯವನ್ನುಂಟುಮಾಡಲಾರರು ಎನ್ನುವಿರಾ? ಆ ಪ್ರಹರೇಶ್ವರ ಪಾತ್ರನಿಂದಲೇ ನಿನಗೆ ಏನಾದರೂ ಕೇಡುಂಟಾಗುವುದೆಂದು ನನ್ನ ಹೆದರಿಕೆ.”

“ಮಂತ್ರಿಪ್ರವರರೇ! ಹಾಗಾದಪಕ್ಷದಲ್ಲಿ ನನ್ನ ಶಕ್ತಿಯು ಆತ್ಮರಕ್ಷಣೆಯಲ್ಲಿ ನನಗೆ [illegible] ಸಹಾಯವನ್ನೇ ಮಾಡುವುದು.” ಎಂದು ವಿಜಯಸಿಂಹನು ಹೇಳಿದನು. ಆಗ ಮಂತ್ರಿಯವರು ಆತನ ಮಾತುಗಳನ್ನು ಕೇಳಿ ಮೊದಮೊದಲು, [illegible]ದ್ರೋಹಿಗಳಿಂದ ಆತನಿಗೆ ಏನಾದರೂ ಹಾನಿಯುಂಟಾದೀತೆಂದು ಭಾವಿಸಿದ್ದರೂ, ವಿಜಯಸಿಂಹನು ಹಿಂದೆ ತೋರಿಸಿದ್ದಂತಹ ಪರಾಕ್ರಮ[illegible]ದ ಮುಂದೆ ಆತನ ಸಾಹಸವು ಕುಂದಲಾರದೆಂತಲೂ, ಬಂದ[illegible] ರಾಜದ್ರೋಹಾಲೋಚನೆಯು ಇಲ್ಲದಿದ್ದ ಪಕ್ಷದಲ್ಲಿ ಅನ[illegible]ವು ಪ್ರಕಟವಾಗುವುದೆಂತಲೂ ವಿಜಯಸಿಂಹನು ಅಲ್ಲಿಗೆ ಹೋಗುವುದರಿಂದ ನಷ್ಟವೇನೂ ಇಲ್ಲವೆಂತಲೂ ನಿರ್ಧರಿಸಿ, ಅವನಿಗೆ ಅಪ್ಪಣೆಯನ್ನು ಕೊಟ್ಟರು.

ಈ ಸಮಯದಲ್ಲಿ [illegible]ನು—“ನಾನು ಮುಂಚೆಯೇ ಬಂದಿದ್ದರೂ ನನ್ನ ಕೆಲಸವನ್ನು ಮುಗಿಸದೆ ಆಮೇಲೆ ಬಂದವನ ಕೆಲಸವನ್ನು ಆಗಮಾಡಿಸಿ [illegible] ನ್ಯಾಯವೇ? ನಾನೇನಾದರೂ ಮಂತ್ರಿಯಾಗಿದ್ದಲ್ಲಿ ಇಂತಹ ಅನ್ಯಾಯವನ್ನು ಎಂದಿಗೂ ಮಾಡುತ್ತಿರಲಿಲ್ಲ” ಎಂದು ಹೇಳಿದನು.

ಮಂತ್ರಿ—“ನನ್ನ ಈ ಅಪರಾಧವನ್ನು ಕ್ಷಮಿಸಿ, ಶಾಸ್ತ್ರಿಗಳೇ! ನಿಮ್ಮ ಕಾರ್ಯವು ಅಷ್ಟು ಜಾಗ್ರತೆಯಾಗಿ ಮುಗಿಯುವಂತಹುದಲ್ಲ. ಮಹಾರಾಜರವರೊಡನೆ ಆಲೋಚಿಸಿ ತಮ್ಮ ಕೆಲಸವನ್ನು ವ್ಯವಸ್ಥೆ ಮಾಡುವೆನು. ಈ ಹೊತ್ತು ತಾವು ದಯಮಾಡಬಹುದು.”

“ತಾವು ಎಷ್ಟೇ ಆಗಲಿ ಅಧಿಕಾರಿಗಳು ನಿಮ್ಮ ಮಾತು ಸಾಗುವಂತೆ ನಮ್ಮ ಮಾತು ನಡೆಯುವುದೇ? ಹೋಗಲಿ! ನಿಮ್ಮ ದುರ್ಗಾಧಿಪತ್ಯವು ನನಗೆ

ಬೇಕಾಗಿಲ್ಲ. ನನ್ನ ಈ ವೃತ್ತಿಯೇ ನನಗೆ ಅನುಕೂಲವಾಗಿರುವುದು" ಎಂದು ಹೇಳಿ ಹುಚ್ಚನು ಕಿಲಕಿಲನೆ ನಕ್ಕು ಅಲ್ಲಿಂದ ತ್ವರೆಯಾಗಿ ಹೊರಟು ಹೋದನು.

ಆರನೆಯ ಪ್ರಕರಣ.

ಅನುರಾಗಮಾಹಾತ್ಮ್ಯ.

ಕಾಂತಾಕಟಾಕ್ಷವಿಶಿಖಾ ನ ಲುನಂತಿ ಯಸ್ಯ |
ಚಿತ್ತಂ ನ ನಿರ್ದಹತಿ ಕೋಪಕೃಶಾನುತಾಪಃ ||
ಕರ್ಷಂತಿ ಭೂರಿವಿಷಯಾಶ್ಚ ನ ಲೋಭಪಾಶಾಃ |
ಲೋಕತ್ರಯಂ ಜಯತಿ ಕೃತ್ಸ್ನಮಿದಂ ಸ ಧೀರಃ ||

ವಿಜಯಸಿಂಹನು ಎಷ್ಟು ಧೀರನಾದರೂ, ಪರಾಕ್ರಮಿಯಾದರೂ, ಅವನ ಪ್ರೇಮಪಾತ್ರಳಾದ ಮುಕ್ತಾಂಬೆಯ ವಿಷಯದಲ್ಲಿ ಉಂಟಾಗಿದ್ದ ಅನುರಾಗವು ಮಹಾರಾಜರ ಮತ್ತು ಮಂತ್ರಿಯವರ ಮಾತುಗಳಿಂದ ವಿಜಿತವಾಗಲಿಲ್ಲ. ಅವರಿಬ್ಬರೂ ನುಡಿದಿದ್ದ ಮಾತುಗಳಿಂದ ಅವನ ಚಿತ್ತವೃತ್ತಿಯು ದೋಳಾಂದೋಳಿತವಾಗಿದ್ದಿತು. "ಮಾನವನು ಎಷ್ಟೇ ಬಲಿಷ್ಠನಾಗಿದ್ದರೂ, ಕಷ್ಟಸಾಧ್ಯವಾದ ಕಾರ್ಯದಲ್ಲಿ ಉದ್ಯಮಿಸುವುದರಿಂದ ಅಪಾಯಪ್ರಾಪ್ತಿಯಾದರೂ ಉಂಟಾಗಬಹುದು. ನನ್ನ ಪ್ರಿಯೆಯನ್ನು ನೋಡಬೇಕೆಂಬ ಸಾಹಸವನ್ನು ಮಾಡಿ ಸರ್ವಮೂಲವಾದ ಪ್ರಾಣವನ್ನು ಉಪೇಕ್ಷಿಸುವುದು ಸರಿಯಲ್ಲ" ಎಂದು ಭಾವಿಸಿದನು. ಆದರೆ ಮರುಕ್ಷಣದಲ್ಲೇ—"ನಸಾಹಸಮನಾರುಹ್ಯ ನರೋ ಭದ್ರಾಣಿ ಪಶ್ಯತಿ" ಎಂಬ ಲೋಕೋಕ್ತಿಯನ್ನು ಕೇಳಿರುವೆನಲ್ಲವೆ? ನರರಿಗೆ ಮುಖ್ಯಫಲಭೂತವಾದುದು ಸ್ತ್ರೀರತ್ನವೇ ಅಲ್ಲವೇ? ಆದುದರಿಂದ ಅಭಿಲಷಿತಕಾಂತಾಮಣಿಯನ್ನು ಸಂದರ್ಶಿಸುವುದು ಮುಖ್ಯವೇ ಸರಿ" ಎಂದು ಆಲೋಚಿಸಿಕೊಂಡನು.

ಪುನಃ, "ಮಾನವಜನ್ಮಕ್ಕೆ ಸ್ವಲ್ಪಕಾಲಮಾತ್ರ ಸುಖದಾಯಕವಾದ ಸ್ತ್ರೀರತ್ನವೇ ಫಲವೆಂದು ಹೇಳುವುದು ಉಚಿತವಲ್ಲ. ಶರೀರಬಲದಿಂದಾಗಲೀ,

ವಿದ್ಯಾಬಲದಿಂದಾಗಲೀ, ಧೀಬಲದಿಂದಾಗಲೀ ಶಾಶ್ವತಕೀರ್ತಿಯನ್ನು ಮನುಷ್ಯನು ಸಂಪಾದಿಸಿಕೊಳ್ಳಬೇಕು. ಕೀರ್ತಿಯನ್ನು ಸಂಪಾದಿಸುವುದೇ ಮಾನವಜನ್ಮಕ್ಕೆ ಫಲವಾಗಿರುವುದೇ ಹೊರತು ಮತ್ತೆ ಬೇರೆ ಫಲವಿಲ್ಲ" ಎಂದು ಆಲೋಚಿಸಿಕೊಂಡನು. ಆದರೆ ಇದಾದ ಉತ್ತರಕ್ಷಣದಲ್ಲಿಯೇ— "ಮುಕ್ತಾಂಬೆಯಂತಹ ಬುದ್ಧಿವಂತಳು, ನಿಷ್ಕಪಟಪ್ರೇಮಾಸ್ಪದನಾದ ನನಗೆ ಅಪಾಯವುಂಟಾಗುವ ಪಕ್ಷದಲ್ಲಿ ಸಹಾಯಮಾಡದೇ ಸುಮ್ಮನಿರುವಳೆ?" ಎಂದು ತನ್ನ ಮನಸ್ಸಿನಲ್ಲಿ ಆಲೋಚಿಸುತ್ತಾ, ಕಟ್ಟಕಡೆಗೆ, ಮುಕ್ತಾಂಬೆಯನ್ನು ನೋಡುವುದೇ ಸರಿ ಎಂದು ನಿರ್ಧರಿಸಿ ಆನೆಗೊಂದಿಗೆ ಹೋದನು. ಆ ಪಟ್ಟಣವನ್ನು ಪ್ರವೇಶಿಸಿ ರಾಜವೀಧಿಯಲ್ಲಿ ಹಯಾರೂಢನಾಗಿ ಬರುತ್ತಿರಲು ಆ ಪುರಜನರು ವಿಜಯಸಿಂಹನನ್ನು ಕಂಡು ಆತನು ಯಾರೋ ಮಹಾಪುರುಷನಾಗಿರುವನೆಂದು ಭಾವಿಸಿದರು. ಕೆಲವರು ಪೋಲಿಹುಡುಗರು ಆತನ ಹಿಂದೆಹಿಂದೆಯೇ ಹೋಗುತ್ತಿದ್ದರು. ಇಷ್ಟರಲ್ಲಿ, ನಮಗೆ ಪರಿಚಿತನಾದ ಹುಚ್ಚನು ಇದಿರಿಗೆ ಬಂದು, ವಿಜಯಸಿಂಹನನ್ನು ಕುರಿತು ಪ್ರಸಕ್ತಾಪ್ರಸಕ್ತವಾದ ಮಾತುಗಳನ್ನು ಆಡುತ್ತಿದ್ದನು. ಆದರೆ ವಿಜಯಸಿಂಹನು ಅವನ ಮಾತಿಗೆ ಕಿವಿಗೊಡದೆ ಮುಂದಕ್ಕೆ ಹೊರಟು, ದಾರಿಯಲ್ಲಿ ಸಿಕ್ಕಿದ ಕೆಲವು ರಾಜಭಟರನ್ನು ವಿಚಾರಿಸಿಕೊಂಡು ಪ್ರಹರೇಶ್ವರನ ಮಂದಿರಕ್ಕೆ ಹೋದನು. ಅಲ್ಲಿದ್ದ ದ್ವಾರಪಾಲಕರು ವಿಜಯಸಿಂಹನ ಮುಖಲಕ್ಷಣವನ್ನು ಕಂಡು ಆತನು ಯಾರೋ ಮಹಾನುಭಾವನೆಂದು ತಿಳಿದು ಆ ಮಂದಿರದ ಆವಾರದೊಳಕ್ಕೆ ಹೋಗಗೊಟ್ಟರು. ಅಲ್ಲಿ ಕುದುರೆಯಿಂದಿಳಿದು ಅದನ್ನು ಅಲ್ಲಿದ್ದ ಒಂದು ಮರಕ್ಕೆ ಕಟ್ಟಿ, ಒಬ್ಬ ಭಟನನ್ನು ಕುರಿತು "ಪ್ರಹರೇಶ್ವರಪುತ್ರರು ಮನೆಯಲ್ಲಿರುವರೇ?" ಎಂದು ಕೇಳಿದನು. ಆ ಭಟನು "ಕಾರ್ಯಾಲಯಕ್ಕೆ ಹೋಗಿರುವರು" ಎಂದು ಉತ್ತರಕೊಡುವ ಹೊತ್ತಿಗೆ ಸರಿಯಾಗಿ, ಮುಕ್ತಾಂಬೆಯು ವಿಜಯಸಿಂಹನನ್ನು ಕಂಡಳು. ಆಗ, ಆಕೆಯು ತನ್ನ ಪ್ರಾಣಪ್ರಿಯನಿಗೆ ಒದಗುವುದಕ್ಕಿದ್ದ ಅಪಾಯವನ್ನು ತಿಳಿದಿದ್ದ ಕಾರಣ, ಪ್ರಹರೇಶ್ವರಪುತ್ರನು ಮನೆಯಲ್ಲಿಲ್ಲದ ಹೊತ್ತಿನಲ್ಲಿ ವಿಜಯಸಿಂಹನು ಅಲ್ಲಿಗೆ ಬಂದುದರಿಂದ ಅತ್ಯಂತ ಸಂತುಷ್ಟಳಾಗಿ, ಅಲ್ಲಿದ್ದ ಭಟರಿಗೆ ಸ್ವಲ್ಪ ಬಹುಮಾನವನ್ನು ಕೊಟ್ಟು ವಿಜಯಸಿಂಹನನ್ನು ಮಂದಿರದೊಳಕ್ಕೆ ಬರಮಾಡಿ

ಕೊಂಡಳು. ಮುಕ್ತಾಂಬೆಯನ್ನು ಕಂಡಕೂಡಲೇ ವಿಜಯಸಿಂಹನು ಹರ್ಷ ಪುಲಕಿತಾಂಗನಾಗಿ ಅತ್ಯಂತಾನಂದವನ್ನು ಹೊಂದಿದರೂ, ಮುಕ್ತಾಂಬೆಯ ಮುಖಲಕ್ಷಣಗಳಿಂದ ಆಕೆಯ ಮನಸ್ಸಿನಲ್ಲಿ ಯಾವುದೋ ಗಾಢವಾದ ಚಿಂತೆಯು ಕೊರೆಯುತ್ತಲಿದ್ದಿತೆಂದು ಕಂಡುಕೊಂಡನು. ಮುಕ್ತಾಂಬೆಯು ತನ್ನ ಪ್ರಾರ್ಥನೆಗೆ ಅನುಸಾರವಾಗಿ ಆನೆಗೊಂದಿಗೆ ಬಂದಿದ್ದ ವಿಜಯಸಿಂಹನ ಮನಸ್ಸಿಗೆ ವಿಷಾದವನ್ನುಂಟುಮಾಡಬಾರದೆಂದು ಭಾವಿಸಿ, ನಗುಮುಖದಿಂದ ಏನನ್ನೋ ಮಾತನಾಡಬೇಕೆಂದು ಪ್ರಯತ್ನಿಸುತ್ತಿದ್ದಳು. ಆಗ ವಿಜಯ ಸಿಂಹನು ಆಕೆಯನ್ನು ಕುರಿತು ಈ ಮುಂದೆ ಹೇಳುವ ರೀತಿಯಲ್ಲಿ ಸಂಭಾ ಷಿಸತೊಡಗಿದನು :--

ವಿಜಯಸಿಂಹ—"ರಾಜಪುತ್ರೀ! ಸುಕುಮಾರಗಾತ್ರಿಯಾದ ನಿನ್ನನ್ನು ಈ ಸ್ಥಿತಿಯಲ್ಲಿ ಕಂಡು ನನ್ನ ಹೃದಯವು ನೀರಾಗುತ್ತಿರುವುದು. ನಿನ್ನ ಜನಕ ರಾದ ವೀರಭದ್ರಪಾತ್ರರು ಇದ್ದಿದ್ದರೆ, ನಿನಗೆ, ಈ ಶತ್ರುದುರ್ಗದಲ್ಲಿ ನಿವಸಿ ಸುತ್ತಾ ಪಡಬಾರದ ಕಷ್ಟಗಳನ್ನು ಅನುಭವಿಸುವ ಆವಶ್ಯಕವಿರುತ್ತಿದ್ದಿತೆ? ನವನೀತಸಮಾನವಾದ ನಿನ್ನ ಹೃದಯವು ವಿಪದಗ್ನಿಹೋತ್ರದ ಸಮುಖ ದಲ್ಲಿಯೂ ದ್ರವಿಸದಿರುವುದು ನಿನ್ನ ಮಹಿಮೆಗೆ ನಿದರ್ಶನವಾಗಿದೆ.

ಮುಕ್ತಾಂಬೆ--"ಮಹನೀಯರೇ! ಮನುಷ್ಯನ ಶ್ರೇಯಸ್ಸೆಲ್ಲವೂ ಯಾವಾಗಲೂ ಒಂದೇ ರೀತಿಯಲ್ಲಿರುವುದೇ? ಯಾರಿಗಾದರೂ ಪುರಾಕೃತ ಕರ್ಮಫಲವನ್ನು ಅನುಭವಿಸದೆ ತೀರದು. ನನಗೆ ಈ ವಿದೇಶವಾಸವು ಇದುವರೆಗೂ ದುರ್ಭರವಾಗಿದ್ದರೂ ಸುಜನವರೇಣ್ಯರಾದ ನಿಮ್ಮ ಸಂದರ್ಶನ ದಿಂದ ನನ್ನ ಚಿಂತೆಯು ತಗ್ಗಿತು. ನನ್ನ ಪುರಾಕೃತಪಾಪಕರ್ಮದಿಂದ ನನಗೆ ಈ ವಿದೇಶವಾಸವು ಸಂಪ್ರಾಪ್ತವಾಗಿರುವುದೆಂದು ನಾನು ಯೋಚಿಸುತ್ತಿರಲು, ತಾವೂ ಈ ವಿದೇಶವಾಸಕ್ಕೆ ಏಕೆ ಒಳಗಾದಿರಿ?

ವಿಜಯಸಿಂಹ—"ಚಿತ್ತವು ಒಂದುಕಡೆ ಇರಲು ಶರೀರವು ಬೇರೊಂದು ಕಡೆ ಇರುವುದು ಕಷ್ಟವಲ್ಲವೆ? ಆದುದರಿಂದ ನಾನೂ ನನ್ನ ಚಿತ್ತದೊಡನೆಯೇ ವಿದೇಶವಾಸವನ್ನು ಕೈಕೊಳ್ಳಬೇಕಾಯಿತು."

ಮುಕ್ತಾಂಬೆ--"ನಿಮ್ಮ ಚಿತ್ತವು ಈ ವಿದೇಶಕ್ಕೆ ಬರಲು ಕಾರಣ

ವೇನು ? ಅದನ್ನು ಆಕರ್ಷಿಸಿ ಇಲ್ಲಿಗೆ ಕರೆತಂದ ಮನೋಹರವಸ್ತುವು ಈ ದೇಶದಲ್ಲಿ ಯಾವುದಿರುವುದು ?"

ವಿಜಯಸಿಂಹ—"ಇದೇನು ವಿಪರೀತವಚನಗಳನ್ನು ಆಡುವೆಯಲ್ಲ? ನನ್ನ ಚಿತ್ತವನ್ನು ಈ ದೇಶಕ್ಕೆ ಎಳೆತಂದ ಮನೋಹರವಸ್ತುವು ಭವದೀಯ ಸುಂದರಾಕಾರವೇ ಅಲ್ಲವೆ? ಆಧಾರದೊಡನೆ ಆಧೇಯವೂ ಇರುವುದು ಸಹಜವಷ್ಟೆ ?"

ಮುಕ್ತಾಂಬೆ—"(ಮಂದಹಾಸವದನಳಾಗಿ) ಈ ಅಸತ್ಯವೇಕೆ ? ಐದಾರು ವರುಷಗಳಿಂದಲೂ ಆಧಾರ ಒಂದುಕಡೆ, ಆಧೇಯವು ಮತ್ತೊಂದು ಕಡೆ ಇದ್ದುದು ಆಶ್ಚರ್ಯವಲ್ಲವೆ !"

ವಿಜಯಸಿಂಹ—"ಒಂದಾದಮೇಲೊಂದು ಅಪಾಯವು ಬಂದು ಆವರಿಸಿಕೊಂಡಿದ್ದುದರಿಂದ ಇಷ್ಟುಕಾಲವೂ ಅಗಲಿರಬೇಕಾಯಿತು. ಏನುಮಾಡಲಿ! ಸ್ವದೇಶದಲ್ಲಿದ್ದಷ್ಟು ಕಾಲವೂ ಚಿತ್ತವೇ ಇಲ್ಲದವನಂತೆ ಸಂಚರಿಸುತ್ತಿದ್ದೆನು. ನನ್ನ ಚಿತ್ತವು ನಿನ್ನ ಬಳಿಯಲ್ಲಿ ಸಿಕ್ಕಿಹೋಗಿದ್ದಕಾರಣ ನನಗೆ ಸಂಭವಿಸಿದ ಆಪತ್ತುಗಳಿಂದ ಪಾರಾಗಿ ಬಂದೆನು. ಹಾಗಲ್ಲದಿದ್ದರೆ ಆ ಆಪತ್ತುಗಳನ್ನು ಅನುಭವಿಸಿ ವ್ಯಸನದಿಂದ ಇಷ್ಟುಹೊತ್ತಿಗೆ ಯಮಸದನವನ್ನು ಪ್ರವೇಶಿಸದೆ ಇರುತ್ತಿರಲಿಲ್ಲ" ಎಂದನು.

ಮುಕ್ತಾಂಬೆ—"ವೀರವರೇಣ್ಯ ! ನೀವು ಶಾತ್ರವಭೂಪಾಲರಾದ ಕೃಷ್ಣದೇವರಾಯರನ್ನು ಆಶ್ರಯಿಸಿರುವುದರಿಂದ ನಿಮ್ಮ ಕೀರ್ತಿಗೆ ಕಳಂಕವು ಬಾರದಿರುವುದೆ ?"

ವಿಜಯಸಿಂಹ—"ಪ್ರಿಯೇ ! ರಾಜನೀತಿಪದ್ಧತಿಯನ್ನು ಯೋಚಿಸಿದರೆ ನನಗೆ ಕಳಂಕವು ಎಷ್ಟುಮಾತ್ರಕ್ಕೂ ಸಂಭವಿಸಲಾರದು. ಶತ್ರುವು ಪರಮೋಚ್ಚಸ್ಥಿತಿಯಲ್ಲಿರುವಾಗ, ನಾವು ಎಷ್ಟೇ ಪರಾಕ್ರಮವಂತರಾದರೂ ಪ್ರತಿಭಟಿಸುವುದು ಸರಿಯಲ್ಲ. ಈಗ ವಿಜಯನಗರಸಾಮ್ರಾಜ್ಯಸೂರ್ಯನು ನಭೋಮಂಡಲಮಧ್ಯದಲ್ಲಿ ದುರ್ನಿರೀಕ್ಷ್ಯನಾಗಿ ಸಂಪೂರ್ಣತೇಜಸ್ಸಿನಿಂದ ವಿರಾಜಿಸುತ್ತಿರುವನು. ಇಂತಹ ಸಮಯದಲ್ಲಿ ಯಾವುದಾದರೂ ಶೀತಲಭೂರುಹಚ್ಛಾಯೆಯನ್ನು ಆಶ್ರಯಿಸಿ ನಿರುಪದ್ರವವಾಗಿ ಕಾಲವನ್ನು ಕಳೆಯುತ್ತಿರುವುದು ಒಳ್ಳೆಯದು."

ಮುಕ್ತಾಂಬೆ—"ನನ್ನ ಅಭಿಪ್ರಾಯವೂ ತಮ್ಮ ಅಭಿಪ್ರಾಯದಂತೆಯೇ ಇರುವುದು. ನಾನು ಈ ವಿಷಯವನ್ನು ಕುರಿತು ಎಷ್ಟು ಹೇಳಿದರೂ ಕೇಳದೆ, ನಮ್ಮ ಪ್ರಹರೇಶ್ವರಪ್ರಭೃತಿಗಳು ಆ ಸಮ್ರಾಜರನ್ನು ಇದಿರಿಸುವ ಪ್ರಯತ್ನವನ್ನು ಮಾಡುತ್ತಿರುವರು."

ವಿಜಯಸಿಂಹ—"ಏನು! ಕೃಷ್ಣದೇವರಾಯರು ನಿಮ್ಮ ದುರ್ಗವನ್ನು ನಿಮಗೆ ಬಿಟ್ಟುಕೊಡುವರೆಂದು ಕೇಳಿದ್ದೆನಲ್ಲಾ!"

ಮುಕ್ತಾಂಬೆ—"ನಮ್ಮ ಮಂತ್ರಿಗಳು ಬಿಜಾಪುರ ಮೊದಲಾದ ರಾಜ್ಯಗಳ ಅಧಿಪತಿಗಳ ಸಹಾಯದಿಂದ ವಿಜಯನಗರರಾಜ್ಯತೇಜಃಪುಂಜವನ್ನು ಆರಿಸಬೇಕೆಂದು ಯತ್ನಿಸುತ್ತಿರುವರು."

ವಿಜಯ—"ಅದು ವ್ಯರ್ಥಾಭಿಲಾಷೆ. ವಿಜಯನಗರಸಾಮ್ರಾಜ್ಯತೇಜಃಪುಂಜವನ್ನು ಆರಿಸಲು ಯತ್ನಿಸುವುದೂ ಶಶವಿಷಾಣವನ್ನು ಸಂಪಾದಿಸಲು ಯತ್ನಿಸುವುದೂ ಒಂದೇ."

ಮುಕ್ತಾಂಬೆ—"ನನಗೆ ಅದು ಗೊತ್ತು. ನಾನು ಎಷ್ಟು ಹೇಳಿದರೂ ಅವರು ಕೇಳದಿರುವರು. ನನ್ನ ಶ್ರೇಯಃಕಾಂಕ್ಷಿಗಳಾದವರನ್ನು ನಿರಾಕರಿಸುವುದು ಸರಿಯಲ್ಲವೆಂದು ಸುಮ್ಮನಿರುವೆನು. ಅಮಾತ್ಯಾದಿಗಳ ಪ್ರಯತ್ನವು ಸಾಗದಿದ್ದರೆ ಆಗ ಸಾಮೋಪಾಯವನ್ನು ಅವಲಂಬಿಸಬಹುದು. ಉದಾರಚಿತ್ತರಾದ ಚಕ್ರವರ್ತಿಯವರು ನಿಮ್ಮ ವಿಷಯದಲ್ಲಿ ಹೇಗಿರುವರು?"

ವಿಜಯ—"ಸುಂದರೀ! ನಾನು ಆ ಸಾರ್ವಭೌಮರ ಮಹಾನುಗ್ರಹಕ್ಕೆ ಪಾತ್ರನಾಗಿರುವೆನೆಂದು ನಿನಗೆ ತಿಳಿಸಲು ಬಹಳ ಸಂತೋಷವಾಗುವುದು. ನನ್ನನ್ನು ಅವರು ವಿಶೇಷಗೌರವದಿಂದ ಕಾಣುತ್ತಿರುವರು. ಆಹೊತ್ತು ಮಂತ್ರಿಪುಂಗವರನ್ನು ಅಪಾಯದಿಂದ ತಪ್ಪಿಸಿದಾಗಿನಿಂದಲೂ, ಅವರು ನನ್ನನ್ನು ತಮ್ಮ ಮಗನಂತೆಯೇ ನೋಡಿಕೊಳ್ಳುತ್ತಿರುವರು."

ಮುಕ್ತಾಂಬೆ—"ನಿಮ್ಮ ಸಂದರ್ಶನವನ್ನು ಪಡೆದು ನಿಮ್ಮ ವೃತ್ತಾಂತವನ್ನು ಕೇಳಿದುದರಿಂದ ಬಹಳ ಸಂತೋಷವಾಯಿತು. ಹಿಂದೆ ನನ್ನ ವಿಷಯದಲ್ಲಿ ತಮಗೆ ಉಂಟಾದ ಅನುರಾಗವು ಹೇಗಿರುವುದೋ ಪರೀಕ್ಷಿಸಬೇಕೆಂದು ನೆನೆದು ತಮ್ಮನ್ನು ಇಲ್ಲಿಗೆ ಬರಹೇಳಿದೆನು. ನಾನು ಹಾಗೆ ಬರಹೇಳಿದುದು ದುಡುಕೆಂದು ಈಗ ತೋರುವುದು. ಆದರೂ ತಾವು ಹೊರಟ ಮುಹೂರ್ತವು

ಒಳ್ಳೆಯದೆಂದು ಕಾಣುವುದು. ನಾನು ಕೆಲವು ಕಾಲದಲ್ಲೇ ತಮ್ಮಲ್ಲಿಗೆ ಬಂದು ಸಾವಕಾಶವಾಗಿ ಮಾತನಾಡುವೆನು. ಈಗ, ಆಲಸ್ಯಮಾಡದೆ ವಿಜಯನಗರಕ್ಕೆ ಹೊರಟುಬಿಡಿ. ಯಾರು ಎಷ್ಟು ನಿರ್ಬಂಧಿಸಿದರೂ ನಿಲ್ಲಬೇಡಿ"

ವಿಜಯ—"ಸುಂದರೀ! ನಿನ್ನ ಸಂದರ್ಶನಸುಖವನ್ನು ಕೋರಿ ನಾನು ಅತ್ಯಂತ ಪ್ರಯಾಸಪಟ್ಟು ಇಲ್ಲಿಗೆ ಬಂದಿರಲು, ಅದನ್ನು ಯೋಚಿಸದೆ ನನ್ನನ್ನು ಹೀಗೆ ಕೂಡಲೇ ಕಳುಹಿಸಿಬಿಡುವುದು ಸರಿಯೇ? ನೀನು ಏಕೆ ಇಷ್ಟು ತ್ವರೆಪಡಿಸುವೆ? ದಿವಸ ಇಲ್ಲಿದ್ದು, ಬೆಳಗ್ಗೆ ಹೊರಡುವೆನು ಇದಕ್ಕೆ ನೀನು ಒಪ್ಪು"

ಮುಕ್ತಾಂಬೆ—"ಪ್ರಿಯನೇ! ನಾನು ಯೋಚಿಸದೆ ಹಾಗೆ ಹೇಳಲಿಲ್ಲ. ನನ್ನ ಮನಸ್ಸಿನಲ್ಲಿ ಯಾವಾಗಲೂ ತಮ್ಮ ಸಂದರ್ಶನಸುಖವನ್ನು ಅನುಭವಿಸಬೇಕೆಂದು ಅಪೇಕ್ಷಿಸುತ್ತಲಿರುವೆನು. ಆದರೆ ಮುಂದೆ ಉಂಟಾಗಬಹುದಾದ ಅಪಾಯಗಳ [illegible] ಕೆಂದು ಹೀಗೆ ತ್ವರಿತಪಡಿಸಬೇಕಾಗಿದೆ. ಆಪತ್ತುಗಳಿಗೆ ಸಿಕ್ಕಿ ಅವುಗಳನ್ನು ನಿವಾರಣ ಮಾಡಿಕೊಳ್ಳುವದಕ್ಕಿಂತ, ಮೊದಲೇ ಅವುಗಳಿಗೆ ಸಿಕ್ಕದಿರುವುದೇ ಮೇಲಲ್ಲವೇ? 'ಪ್ರಕ್ಷಾಲನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಂ' ಎಂಬಂತೆ ಕೆಸರು ತುಳಿಯುವುದೇಕೆ? ಆಮೇಲೆ ಕಾಲು ತೊಳೆದುಕೊಳ್ಳುವುದೇಕೆ?"

ವಿಜಯ—"ಏನು! ಆಪತ್ತುಗಳುಂಟಾಗುವುವೆಂದು ಯೋಚಿಸುವೆಯಾ? ಹೇಗೆ ಉಂಟಾಗಬಹುದೆಂಬುದನ್ನು, ನನಗೆ ವಿವರವಾಗಿ ತಿಳಿಸು."

ಮುಕ್ತಾಂಬೆ—"ಹೃದಯೇಶ್ವರನೇ! ತಮ್ಮ ಶೌರ್ಯದಿಂದ ಪರಾಭೂತರಾದ ಕೆಲವರು ದುರಾತ್ಮರು ಈ ಪಟ್ಟಣದಲ್ಲಿರುವರು. ಅವರು ಅತ್ಯಂತ ಕ್ರೋಧವನ್ನು ವಹಿಸಿ, ತಮ್ಮನ್ನು ಹೇಗಾದರೂ ಮಾಡಿ ಕೊಲ್ಲಬೇಕೆಂದು ಆಲೋಚಿಸಿಕೊಂಡಿರುವರಂತೆ. ಈ ವರ್ತಮಾನವನ್ನು ನಾನು ಕಿವಿಯಾರ ಕೇಳಿರುವೆನು. ಆದುದರಿಂದ ತಾವು ಸಾವಕಾಶಮಾಡದೆ ವಿಜಯನಗರವನ್ನು ಹೋಗಿಸೇರುವುದು ಒಳ್ಳೆಯದು."

ವಿಜಯ—"ಪ್ರಿಯೆ! ಸರ್ವದಾ ನನ್ನ ಶ್ರೇಯಸ್ಸನ್ನು ಬಯಸುತ್ತಿರುವ ನೀನೂ ಪ್ರತ್ಯಕ್ಷವಾಗಿ ಇರುವಾಗ ನನಗೆ ಭಯವೆಲ್ಲಿಯದು?

ನನಗೆ ಬರಬಹುದಾದ ಆಪತ್ತುಗಳನ್ನು ನೀವಿಬ್ಬರೂ ತೊಲಗಿಸಲಾರಿರಾ ? ನನ್ನ ಶೌರ್ಯದಿಂದಲಾದರೂ ಅವನನ್ನು ಜಯಿಸಲಾಗುವುದಿಲ್ಲವೇ ? ”

ಮುಕ್ತಾಂಬೆ—“ ಪ್ರಾಣೇಶ್ವರೇ ! ತಮಗೆ ಸಂಭವಿಸುವ ಆಪತ್ತನ್ನು ಹೋಗಲಾಡಿಸುವಷ್ಟು ಶಕ್ತಿಯು ನನಗೆ ಇರುವುದೋ ಇಲ್ಲವೋ ದೃಢವಾಗಿ ನನಗೆ ತಿಳಿದಿಲ್ಲ. ಪ್ರಹರೇಶ್ವರನು ತಮಗೆ ವಿರೋಧಿಯಲ್ಲದಿದ್ದರೂ, ತಮ್ಮ ಶತ್ರುಗಳ ಪಕ್ಷವನ್ನು ಸೇರಿರುವುದರಿಂದ ಆತನು ತಮ್ಮ ಕಷ್ಟದಲ್ಲಿ ಸಹಾಯಮಾಡುವನೆಂದು ನಂಬಿಕೆಯಿಂದ ಹೇಳಲಾರೆನು. ತಮ್ಮ ಶತ್ರುಗಳು ಕಪಟೋಪಾಯಧುರೀಣರಾದಕಾರಣ, ತಮ್ಮ ಶೌರ್ಯದಿಂದ ಅಷ್ಟೊಂದು ಪ್ರಯೋಜನವಿರುವುದೆಂದು ನಾನು ನಂಬಿಲ್ಲ. ಆದುದರಿಂದ ಸಂದೇಹಫಲಭೂಯಿಷ್ಠವಾದ ಕಾರ್ಯಕ್ಕೆ ಕೈಹಾಕುವುದಕ್ಕೆ ಬದುಲು, ನಿಶ್ಚಯವಾಗಿಯೂ ಫಲಸಿದ್ಧಿಯಾಗುವ ಕಾರ್ಯಕ್ಕೆ ಪ್ರಯತ್ನಿಸುವುದು ಒಳ್ಳೆಯದು. ನನ್ನ ಮಾತನ್ನು ಲಾಲಿಸಿ ಈಗಲೇ ತಾವು ವಿಜಯನಗರಕ್ಕೆ ಹೊರಡಬೇಕು. ”

ವಿಜಯ—“ ಪ್ರಹರೇಶ್ವರನು ಅಂತಹ ದುರಾತ್ಮರ ಸ್ನೇಹವನ್ನು ಮಾಡಿರುವುದರಿಂದ ಲೋಕಾಪವಾದಕ್ಕೆ ಗುರಿಯಾಗುವನು. ಆದಕಾರಣ ಅವನು ಬುದ್ಧಿವಂತನಾದರೆ ಅಂತಹವರ ಸಹವಾಸವನ್ನು ಬಿಟ್ಟುಬಿಡಬೇಕು. ಹೋಗಲಿ. ಅವರು ನನ್ನನ್ನು ಯಾವರೀತಿಯಲ್ಲಿ ಕೊಲ್ಲಬೇಕೆಂದಿರುವರು ? ”

“ ಹೇಗೆಂದು ಹೇಳುವುದೇಕೆ ? ಅವರು ಧರ್ಮವನ್ನವಲಂಬಿಸಿ ಯುದ್ಧಕ್ಕೆ ನಿಲ್ಲುವುದಿಲ್ಲ ; ಕಪಟೋಪಾಯದಿಂದ ಕೊಲ್ಲುವರು. ಆದುದರಿಂದ ಯಾರು ತಿಳಿಯದಂತೆ ನೀವು ಈ ಪಟ್ಟಣವನ್ನು ಬಿಟ್ಟು ಹೊರಡಿ. ಹೀಗೆ ಮಾಡುವುದೇ ಸರಿ ತೋರುತ್ತದೆ. ಇದರಿಂದ ತಮ್ಮ ಶೌರ್ಯಕ್ಕೆ ಯಾವ ಲೋಪವೂ ಉಂಟಾಗಲಾರದು ” ಎಂದು ಮುಕ್ತಾಂಬೆಯು ಹೇಳಿ ವಿಜಯಸಿಂಹನನ್ನು ಬಲಾತ್ಕಾರದಿಂದ ಒಡಂಬಡಿಸಿ ಕಳುಹಿಸಿಕೊಟ್ಟಳು.

ಪ್ರಹರೇಶ್ವರನಪುತ್ರನು ಮುಕ್ತಾಂಬೆಗೆ ಸಂರಕ್ಷಕನು. ಆಕೆಗೆ ಆತನಲ್ಲಿ ಬಹಳ ಭಕ್ತಿಯಿದ್ದಿತು. ಅವನು ರಾಜದ್ರೋಹಿಗಳಲ್ಲಿ ಮೊದಲನೆಯವನೆಂದು ತಿಳಿದಿದ್ದಳು. ಆದರೆ ಅವನು ರಾಜದ್ರೋಹಿಯೆಂದು ವಿಜಯಸಿಂಹನಿಗೆ ತಿಳಿಸಿದರೆ ಅಪಾಯವುಂಟಾದೀತೆಂದು ತಿಳಿದು ಏನನ್ನೂ ಹೇಳಲಿಲ್ಲ. ತಿಮ್ಮರಸನನ್ನು ರಕ್ಷಿಸುವುದಕ್ಕಾಗಿಯೂ ವಿಜಯಸಿಂಹನು ಉಂಟು

ಮಾಡಿದ್ದ ಪರಾಭವಕ್ಕಾಗಿಯೂ ಅವನಮೇಲೆ ಮುಯ್ಯಿ ತೀರಿಸಿಕೊಳ್ಳಬೇಕೆಂದು ಪ್ರಹರೇಶ್ವರನು ದೃಢಸಂಕಲ್ಪನಾಗಿದ್ದನು. ಇದನ್ನು ವಿಜಯಸಿಂಹನಿಗೆ ತಿಳಿಸಿದುದೇ ಆದರೆ, ಪ್ರಹರೇಶ್ವರನಿಗೆ ಹಾನಿಯಾಗುವುದೆಂದು ಅವಳು ಹೆದರಿಕೊಂಡಿದ್ದಳು. ಆದರೆ ಹೀಗೆ ತಿಳಿಸದಿದ್ದರೆ ಪ್ರಹರೇಶ್ವರನು ಸಜ್ಜನನೆಂದು ತಿಳಿದು ಅಲ್ಲಿಯೇ ನಿಲ್ಲಲು ವಿಜಯಸಿಂಹನು ಬಡಂಬಡುವನೆಂದೂ ಅದರಿಂದ ಅವನಿಗೆ ಹಾನಿ ತಟ್ಟುವುದೆಂದೂ ಯೋಚಿಸಿದಳು. ಆದುದರಿಂದ ಯಾವ ತೊಂದರೆಗೂ ಸಿಕ್ಕುವುದಕ್ಕೆ ಮುಂಚೆಯೇ, ವಿಜಯಸಿಂಹನನ್ನು ಕಳುಹಿಸಿಬಿಡುವುದು ಉತ್ತಮವೆಂದು ತಿಳಿದು, ಆತನನ್ನು ಕಳುಹಿಸಿಬಿಟ್ಟಳು.

ಏಳನೆಯ ಪ್ರಕರಣ.

ಪ್ರಹರೇಶ್ವರಪಾತ್ರ.

"ಮುಖಂ ಪದ್ಮದಳಾಕಾರಂ ವಚಶ್ಚಂದನಶೀತಲಂ ।
ಹೃತ್ಕರ್ತರೀಸಮಂ ಚಾತಿವಿನಯಂ ಧೂರ್ತಲಕ್ಷಣಂ॥"

ಹೀಗೆ ತನ್ನ ಪ್ರಿಯಳ ಸಂದರ್ಶನವನ್ನು ಮಾಡಿಕೊಂಡು ಆಕೆಯೊಡನೆ ಮಾತನಾಡಿದ್ದರೂ ವಿಜಯಸಿಂಹನು ಅಸಂತುಷ್ಟನಾಗಿ ಆ ಸ್ಥಳವನ್ನು ಬಿಟ್ಟುಹೋಗಲು ಇಚ್ಛೆಯಿಲ್ಲದವನಾಗಿದ್ದನು. ಆದರೂ ಅವನಿಗೆ ಒದಗಬಹುದಾದ ಅಪಾಯಗಳನ್ನು ನೆನೆದು ಹಿಂದಿರುಗಿದನು. ರಾಜಮಂತ್ರಿಗಳಿಬ್ಬರೂ ಹೇಳಿದ ಮಾತನ್ನು ಕೇಳದೆ ಸಾಹಸಮಾಡಿ ಬಂದು ಅಪಾಯವಿಲ್ಲದೆ ಹಿಂದಿರುಗಿ ಹೋಗಲು ಸಾಧ್ಯವಾದುದಕ್ಕಾಗಿ ಸಂತೋಷಿಸಿ ಭಗವಂತನಿಗೆ ಮನಸ್ಸಿನಲ್ಲಿಯೇ ವಂದಿಸುತ್ತಾ ದುರ್ಗದ್ವಾರವನ್ನು ದಾಟಿಬಂದನು. ಅಷ್ಟರಲ್ಲಿ ಒಬ್ಬನು ಅವನನ್ನು ಕಂಡು ನಿಂತುಕೊಂಡನು. ಅವನ ಸಮೀಪಕ್ಕೆ ಬಂದು ವಿಜಯಸಿಂಹನು ತನ್ನ ಕುದುರೆಯ ನಡಿಗೆಯನ್ನು ಸಾವಕಾಶಮಾಡಿದನು. ಕೂಡಲೆ ಆ ಪುರುಷನಿಗೂ ವಿಜಯಸಿಂಹನಿಗೂ ಈ ಮುಂದೆ ಹೇಳುವಂತೆ ಸಂಭಾಷಣೆ ಪ್ರಾರಂಭವಾಯಿತು:—

ಪುರುಷ—“ ನನ್ನನ್ನು ಮರೆತುಬಿಟ್ಟೆಯೇನು ? ನಾನು ಪ್ರಹರೇಶ್ವರ ಪೌತ್ರನು. ಇದೇನು ! ನೀನು ಎಲ್ಲಿಂದ ಬರುತ್ತಿದ್ದೀಯೆ ? ಎಲ್ಲಿ ಇಳಿದು ಕೊಂಡಿರುವೆ ? ಈ ಹೊತ್ತು ಇಷ್ಟು ಸುದಿನವೆಂದು ನಾನು ನಂಬಿರಲಿಲ್ಲ. ನೀನು ನಮ್ಮ ಊರಿಗೆ ಬಂದರೂ ನನ್ನನ್ನು ನೋಡದೆಯೇ ಹೊರಡುತ್ತಿರುವೆಯಲ್ಲಾ ! ”

ವಿಜಯ—“ ಪ್ರಹರೇಶ್ವರಪೌತ್ರರೇ ! ತಮ್ಮ ಸಂದರ್ಶನಕ್ಕಾಗಿಯೇ ಇಲ್ಲಿಗೆ ಬಂದುದು. ತಾವು ಮನೆಯಲ್ಲಿ ಇಲ್ಲದಿದ್ದುದರಿಂದ ವಿಜಯನಗರಕ್ಕೆ ಹಿಂದಿರುಗಿ ಹೋಗುತ್ತಿದ್ದೆನು. ಈಗಲಾದರೂ ತಮ್ಮ ದರ್ಶನಲಾಭವಾದುದರಿಂದ ಅತ್ಯಂತ ಸಂತುಷ್ಟನಾದೆನು. ಮತ್ತೊಂದುಸಾರಿ ಇಲ್ಲಿಗೆ ಬಂದು ಸಾವಕಾಶವಾಗಿ ತಮ್ಮೊಡನೆ ಮಾತನಾಡುವೆನು. ಈಗ ನನಗೆ ಅಪ್ಪಣೆಯಾಗಲಿ. ಹೋಗಿಬರುವೆನು. ”

ಪ್ರಹರೇ—“ ಇದೇನು ! ಈ ಹೊತ್ತು ಹೊಸ ವಿಷಯವನ್ನು ಕೇಳುತ್ತಿದೇನೆ! ಇಷ್ಟರಲ್ಲಿಯೇ ನಾವು ದೂರದವರಾದೆವ್ರೋ ? ನಿಮ್ಮ ತಂದೆಯು ನನಗೆ ಪರಮಾಪ್ತನು. ನಮ್ಮಿಬ್ಬರ ಪರಸ್ಪರಮನೋಧರ್ಮಗಳು ಹೇಗಿದ್ದವೆಂಬುದನ್ನು ಆ ಭಗವಂತನೇ ಬಲ್ಲನು. ಸಾಮಾನ್ಯರಿಗೆ ಎಂದಿಗೂ ತಿಳಿಯಲಾರವು. ನನ್ನ ಆ ಮಿತ್ರನು ಕಾಲಧರ್ಮವನ್ನು ಹೊಂದಿದ ಸಮಾಚಾರವನ್ನು ಕೇಳಿದಾಗ ನನಗೆ ಆದ ವ್ಯಥೆಯು ಆ ಭಗವಂತನಿಗೇ ಅರ್ಪಿತವು. ನನ್ನ ಆಪ್ತಮಿತ್ರನ ಮಗನಾದ ನಿನ್ನನ್ನು ಕಂಡು ಈ ದಿನ ನನಗೆ ಪರಮಸಂತೋಷವಾಯಿತು. ಇದರಮೇಲೆ ನನ್ನನ್ನು ನೋಡುವುದಕ್ಕೆ ಬಂದಿರುವೆಯಾದುದರಿಂದ ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡು. ಬಂಧುಕೋಟಿಯಲ್ಲಿ ಒಬ್ಬನಾಗಿರುವ ನೀನು ಇಷ್ಟು ಹೊತ್ತಿನಮೇಲೆ ಹಾಗೆಯೇ ಹೊರಟ್ಟು ಹೋಗುವುದು ಉಚಿತವಲ್ಲ ; ಬಂದು ನನ್ನ ಆತಿಥ್ಯವನ್ನು ಅಂಗೀಕರಿಸಿ ನನ್ನ ಮನಸ್ಸಿಗೆ ತೃಪ್ತಿಯನ್ನುಂಟುಮಾಡಪ್ಪಾ ! ”

ವಿಜಯ—“ ಮಹನೀಯರೇ ! ತಮ್ಮ ಅಮೃತೋಪಮವಾದ ಮಾತುಗಳಿಂದ ಅತ್ಯಂತ ಸಂತುಷ್ಟನಾಗಿರುವೆನು. ತಾವು ಮಾಡುವ ಉಪಚಾರಗಳು ತಮ್ಮ ಮಧುರವಾಕ್ಯಗಳಷ್ಟು ತೃಪ್ತಿಯನ್ನುಂಟುಮಾಡಲಾರವು. ಇದರಿಂದಲೇ ನನಗೆ ತೃಪ್ತಿಯಾಯಿತು. ನನಗಿರುವ ಕಾರ್ಯಭಾರದಿಂದ ಇಲ್ಲಿ

ನಿಲ್ಲಲು ಅವಕಾಶವಿಲ್ಲ. ಕ್ಷಮಿಸಬೇಕು. ಮತ್ತೊಂದುಸಾರಿ ಬಂದು ತಮ್ಮ ಮನೆಯಲ್ಲೇ ಇಳಿದುಕೊಳ್ಳುವೆನು. ತಾವು ಎಷ್ಟು ದಿನಗಳು ಇರಬೇಕೆಂದು ಹೇಳಿದರೂ ಅಷ್ಟು ದಿನ ಇರುವೆನು. ನನ್ನ ಈ ಪ್ರಾರ್ಥನೆಯನ್ನು ಲಾಲಿಸಿ ಅಪ್ಪಣೆಕೊಡಬೇಕು. ಸೂರ್ಯನು ಅಸ್ತಮಿಸುತ್ತಲಿರುವನು. ''

ಪ್ರಹರೇ—'' ನೀನು ಮೊದಲಿನ ವಿಜಯಸಿಂಹನಲ್ಲ. ನಿನ್ನ ನಡತೆಯೇ ವ್ಯತ್ಯಸ್ತವಾದಂತಿದೆ. ಹಾಗಿಲ್ಲದಿದ್ದರೆ, ದೊಡ್ಡವನಾದ ನನ್ನ ಮಾತನ್ನು ಮೀರಲು ಯತ್ನಿಸುತ್ತಿದ್ದೆಯಾ? ನಿನಗಿಂತಲೂ ವಯೋವೃದ್ಧನೂ ಹೆಚ್ಚು ಲೋಕಾನುಭವಶಾಲಿಯೂ ಆದ ನನ್ನಂತಹವನ ಮಾತನ್ನು ಕೇಳದಿರುವುದು ಯುಕ್ತವಲ್ಲ; ಶ್ರೇಯಸ್ಕರವೂ ಅಲ್ಲ. ನಿನಗೆ ಅನೇಕ ಶತ್ರುಗಳಿರುವರೆಂದು ಕೇಳಿದೇನೆ. ನಿನಗೆ ದಾರಿಯಲ್ಲಿ ಏನಾದರೂ ಅಪಾಯವು ಸಂಭವಿಸೀತಲ್ಲಾ ಎಂದು ನನ್ನ ಮನಸ್ಸು ಬಾಧಿಸುತ್ತಿರುವುದರಿಂದ ಇಷ್ಟೊಂದು ಹೇಳಬೇಕಾಗಿದೆ. ನಿನ್ನನ್ನು ಕೊಲ್ಲಬೇಕೆಂದೇ ನಿನ್ನ ಶತ್ರುಗಳು ದೃಢಪ್ರಯತ್ನಮಾಡುತ್ತಿರುವರಂತೆ. ನೀನು ಎಷ್ಟು ಬಲಾಢ್ಯನಾದರೂ ನಿನಗೆ ಹಾನಿ ಸಂಭವಿಸದೆ ಇರಲಾರದು. ಆದುದರಿಂದ ಈ ಹೊತ್ತು ನನ್ನ ಮನೆಯಲ್ಲಿ ಆತಿಥ್ಯವನ್ನು ಸ್ವೀಕರಿಸಿ ನಾಳೆ ಬೆಳಗ್ಗೆ ಏಳುತ್ತಲೇ ಹೊರಡು. ನೀನು ಶ್ರೀಕೃಷ್ಣದೇವರಾಯರ ಕೃಪಾಪಾತ್ರನಾಗಿರುವೆಯೆಂದು ಕೇಳಿ ನಿನ್ನ ಮೂಲಕ ನಮ್ಮ ಕಾರ್ಯಗಳನ್ನು ನೆರವೇರಿಸಿಕೊಳ್ಳಬೇಕೆಂದು ಇದ್ದೇನೆ. ನನ್ನ ವೃತ್ತಾಂತವನ್ನೆಲ್ಲಾ ನಿನಗೆ ಸಾವಕಾಶವಾಗಿ ತಿಳಿಸಬೇಕಾಗಿದೆ. ಆದುದರಿಂದ ಈ ರಾತ್ರಿ ಪ್ರಯಾಣವನ್ನು ನಿಲ್ಲಿಸಿ, ನನ್ನ ಕೋರಿಕೆಗಳನ್ನು ಕೇಳಿ ನಿನ್ನ ಶಕ್ತ್ಯನುಸಾರವಾಗಿ ನಮಗೆ ಸಹಾಯವನ್ನು ಮಾಡು. ''

ವಿಜಯ—'' ದಯಾಶಾಲಿಗಳೇ! ನಿಮ್ಮ ಕೃಪಾರಸವು ನನ್ನನ್ನು ಪೋಷಿಸುತ್ತಿರುವಷ್ಟು ನನಗೆ ಅಪಾಯಗಳು ತಟ್ಟುವುದು ಹೇಗೆ? ಶತ್ರುಗಳು ಮಾರ್ಗದಲ್ಲಿ ಅಡ್ಡ ಹಾಕಿ ನನ್ನನ್ನು ಇದಿರಿಸುವರೆಂಬುದು ನನ್ನ ಮನಸ್ಸಿಗೆ ನಿಜವೆಂದು ತೋರುವುದಿಲ್ಲ. ದಾರಿಯಲ್ಲಿ ಇದಿರಿಸಬೇಕೆಂದಿರುವ ಶತ್ರುಗಳು ಇಲ್ಲಿ ತಾನೇ ಹಾಗೆಮಾಡಲಾರರೇ? ಒಂದುವೇಳೆ ದಾರಿಯಲ್ಲಿ ನನ್ನ ಮೇಲೆ ಕಾಣಿಸಿಕೊಂಡರೆ, ನನ್ನ ಈ ಕತ್ತಿಯು ಆ ಶತ್ರುಗಳನ್ನು ವಿಚಾರಿಸಿಕೊಳ್ಳುವುದು. ನಾನು ಮತ್ತೊಂದುಸಾರಿ ತಮ್ಮಲ್ಲಿಗೆ ಬಂದು ತಮ್ಮ

ವೃತ್ತಾಂತವನ್ನು ಸಾವಕಾಶವಾಗಿ ಕೇಳಿ ನನ್ನ ಕೈಯಿಂದಾಗುವ ಸೇವೆಯನ್ನು ತಮಗೆ ಸಮರ್ಪಿಸುವೆನು. ಆದುದರಿಂದ ನನಗೆ ಅಪ್ಪಣೆಯನ್ನು ಕೊಡಿ."

ಪ್ರಹರೇ—" ಅಯ್ಯಾ, ವಿಜಯಸಿಂಹ! ನೀನು ಇನ್ನೂ ತರುಣವಯಸ್ಕನು ; ತರುಣಜನಸಾಮಾನ್ಯವಾದ ಅಲಕ್ಷ್ಯವೂ, ಗರ್ವವೂ ನಿನ್ನಲ್ಲಿಯೂ ಇರುವುದರಲ್ಲಿ ವಿಶೇಷವೇನೂ ಇಲ್ಲ. ಯಾವ ಶತ್ರುಗಳನ್ನಾದರೂ ನಿನ್ನ ಕತ್ತಿಯು ವಿಚಾರಿಸಿಕೊಳ್ಳುವುದೆಂದು ಹೇಳದೆ. ಜಯಾಪಜಯಗಳನ್ನು ನಿರ್ಣಯಿಸುವವರು ಯಾರು ? ಹೇಗೆ ಹೋಗಿ ಹೇಗೆ ಆಗುವುದೋ ಕಂಡವರು ಯಾರು ? ಆಮೇಲೆ ಪಶ್ಚಾತ್ತಾಪಪಟ್ಟರೆ ಫಲವಿಲ್ಲ. ನೀನು ಇಲ್ಲಿ ನಿಂತುದೇ ಆದರೆ ನಿನಗೆ ಯಾವ ಬಗೆಯ ಬಾಧೆಯೂ ಉಂಟಾಗಲಾರದು. ಮಾರ್ಗಮಧ್ಯದಲ್ಲಿ ನಿನ್ನ ಕ್ಷೇಮವು ಸಂದೇಹಾಸ್ಪದವೇ ಹೊರತು, ನನ್ನ ಮನೆಯಲ್ಲಿರುವಾಗ ನಿನಗೆ ಸ್ವಲ್ಪವೂ ಕೆಡಕುಂಟಾಗದು. ಬುದ್ಧಿವಂತರು ಸಂದಿಗ್ಧಫಲವುಳ್ಳ ಕೆಲಸಗಳಿಗೆ ಕೈಹಾಕದೆ ಸಿದ್ಧಿತಫಲಗಳಾದ ಕಾರ್ಯಗಳಲ್ಲೇ ಪ್ರವರ್ತಿಸುವರು. ಚಕ್ರವರ್ತಿಯವರಿಗೆ ಭೃತ್ಯನಾದ ನೀನು ನನ್ನನ್ನು ನೋಡಲುಬಂದಿದ್ದಾಗ ನಿನಗೆ ಏನಾದರೂ ಅಪಾಯವು ಸಂಭವಿಸಿದುದೇ ಆದರೆ ನನಗೆ ಅಪಕೀರ್ತಿಯು ತಪ್ಪುವುದೇ ? ಆಗ ನಾನು ಪ್ರಾಣಸಹಿತವಾಗಿ ಇರಲಾಗುವುದೇ ? ನನ್ನ ಆಪ್ತಮಿತ್ರನ ಕುಮಾರನಾದ ನೀನೂ ನಾನೂ ಹೀಗೆ ಒಟ್ಟಿಗೆ ಅಪಾಯಕ್ಕೆ ಒಳಗಾಗುವುದು ಸರಿಯಲ್ಲವಯ್ಯ ! ಆದುದರಿಂದ ನನ್ನ ಮಾತನ್ನು ಕೇಳಿ ಈ ದಿನದ ಪ್ರಯಾಣವನ್ನು ನಿಲ್ಲಿಸು. ನಡೆ, ಮನೆಗೆ ಹೋಗೋಣ."

ಈ ಮಾತುಗಳನ್ನು ಕೇಳಿ ವಿಜಯಸಿಂಹನ ಅಂತರಂಗದಲ್ಲಿ ಎರಡು ಬಗೆಯ ಆಲೋಚನಾತರಂಗಗಳು ಹುಟ್ಟಿದುವು.

ದುರ್ಬುದ್ಧಿ—" ವಿಜಯಸಿಂಹ! ಪ್ರಹರೇಶ್ವರನು ನಿಮ್ಮ ತಂದೆಗೆ ಪ್ರಾಣಸ್ನೇಹಿತನು. ಆತನ ಆದರವನ್ನು ಅಸಡ್ಡೆಮಾಡುವುದು ಸರಿಯಲ್ಲ. ಆತನ ಮೃದುಮಧುರವಚನಗಳನ್ನೂ, ವಿನಯಾತಿಶಯವನ್ನೂ, ಬಾಂಧವ್ಯಪೂರ್ವಕವಾದ ಪ್ರೇಮವನ್ನೂ ನಿರಾಕರಿಸುವುದು—ಯೋಗ್ಯನೂ, ಉನ್ನತಕುಲಸಂಭೂತನೂ, ಯುಕ್ತಾಯುಕ್ತಜ್ಞಾನಿಯೂ ಆದ ನಿನಗೆ ಉಚಿತವೆ? ಪ್ರಹರೇಶ್ವರನಂತಹ ಆಪ್ತರು ನಿನಗೆ ಮತ್ತಿಯಾರಿರುವರು ? ಅವನಲ್ಲಿ

ಸಂಶಯಪಡುವುದು ಪಾಪಕರವಲ್ಲವೆ? ಆದುದರಿಂದ ಆತನ ಕೋರಿಕೆಯನ್ನು ನೆರವೇರಿಸುವುದು ನಿನ್ನ ಕರ್ತವ್ಯ" ಎಂದು ಪ್ರೇರಿಸತೊಡಗಿತು.

ಸುಬುದ್ಧಿ—"ವಿಜಯಸಿಂಹ! 'ಅತಿವಿನಯಂ ಧೂರ್ತಲಕ್ಷಣಂ' ಎಂಬ ಲೋಕೋಕ್ತಿಯನ್ನು ಜ್ಞಾಪಿಸಿಕೊ. ಪ್ರಹರೇಶ್ವರನು ಗೋಮುಖ ವ್ಯಾಘ್ರನೆಂದೇ ತಿಳಿ. ಅವನ ಮಾತನ್ನು ನಂಬಿ ಅವನೊಡನೆ ಹೋದುದೇ ಆದರೆ ತಪ್ಪದೆ ಕೆಟ್ಟುಹೋಗುವೆ! ನೋಡಿಕೊ! ಹೀಗೆ ಜೇನುತುಪ್ಪದ ಮಾತುಗಳನ್ನಾಡಿ, ಮನೆಗೆ ಕರೆದುಕೊಂಡುಹೋಗಿ ಕೊಲ್ಲಿಸಿದರೆ ನೀನು ಏನು ಮಾಡುವೆ? ನೀನೇನೋ ಅಪ್ರತಿಮಪ್ರತಾಪಶಾಲಿಯೇ ಹಾದು. ಆದರೆ ಕಪಟದಮೇಲೆ ಪ್ರತಾಪವು ಕೆಂದುವುದೇ? ನೀನು ಇಲ್ಲಿ ನಿಲ್ಲುವುದು ಸುರಕ್ಷಿತವಾಗಿದ್ದಿದ್ದರೆ, ಹಲವುಕಾಲದವರೆಗೂ ನಿನ್ನನ್ನು ನೋಡುವುದಕ್ಕೆ ಅವಕಾಶವೇ ಇಲ್ಲದಿದ್ದ ನಿನ್ನ ಪ್ರಿಯೆಯು, ನಿನ್ನನ್ನು ಇಲ್ಲಿಯೇ ಉಳಿಸಿಕೊಳ್ಳದೆ, ಇಲ್ಲದ ಸಲ್ಲದ ಭಯಗಳನ್ನು ಕಲ್ಪಿಸಿಕೊಂಡು ನಿನ್ನನ್ನು ಹೀಗೆ ಕಳುಹಿಸಿಬಿಡುತ್ತಿದ್ದಳೇ? ಪ್ರಹರೇಶ್ವರಪಾತ್ರನು ಸ್ವಲ್ಪವೂ ವಿಶ್ವಾಸ ಪಾತ್ರನಲ್ಲ. ಬೆಣ್ಣೆಮಾತಿಗೆ ಬೆರಗಾಗಿ ಕೆಡಬೇಡ" ಎಂದು ಸುಬುದ್ಧಿಯು ಅವನಿಗೆ ಬೋಧಿಸತೊಡಗಿತು.

"ವಿಜಯಸಿಂಹ! ಸುಬುದ್ಧಿಯ ಮಾತುಗಳನ್ನು ಕೇಳಿ ಮೋಸಹೋಗಬೇಡ. ನಾನು ಹೇಳುವ ಮಾತುಮಾತಿಗೂ ಪ್ರತಿ ಹೇಳುವುದು ಸುಬುದ್ಧಿಯ ಸ್ವಭಾವ. ಪ್ರಹರೇಶ್ವರನು ಆಡಿದಮಾತುಗಳನ್ನು ಮತ್ತೊಂದುಬಾರಿ ಯೋಚಿಸಿನೋಡು. ಪಾಪ! ಸ್ವಲ್ಪವಾದರೂ ಸಂಶಯಕ್ಕೆ ಅವಕಾಶವಿಲ್ಲವಲ್ಲಾ! ಎಂತಹವನಾದರೂ ತನ್ನ ಪ್ರಾಣವನ್ನು ಎಂತಹ ಕಾಲದಲ್ಲಾದರೂ ಉಳಿಸಿಕೊಳ್ಳಲು ಯತ್ನಿಸುವನಲ್ಲವೆ? ಚಕ್ರವರ್ತಿಯವರಿಗೆ ಪ್ರೀತಿಪಾತ್ರನಾಗಿರುವ ನಿನ್ನನ್ನು ಒಂದುವೇಳೆ ಪ್ರಹರೇಶ್ವರನಾಗಲಿ, ಅವನ ಕಡೆಯವರಾಗಲಿ ಕೊಂದರೆ, ಪ್ರಹರೇಶ್ವರನ ಗತಿಯೇನಾಗುವುದು, ಯೋಚಿಸಿನೋಡು. ಈಗಲೇ ಪ್ರಹರೇಶ್ವರನು ಚಕ್ರವರ್ತಿಯವರ ಪಂಜರದ ಗಿಳಿಯಾಗಿರುವನು. ಹೀಗಿರುವಲ್ಲಿ ಪ್ರಬಲನೂ, ಬಂಧುವೂ, ಆಪ್ತಮಿತ್ರನ ಮಗನೂ ಆದ ನಿನಗೆ ದ್ರೋಹಚಿಂತೆಯನ್ನು ಮಾಡಿ ದೌರಾತ್ಮ್ಯಕ್ಕಾಗಿ ಇಹಲೋಕದಲ್ಲಿ ರಾಜ ದಂಡನೆಯನ್ನೂ, ಮಿತ್ರದ್ರೋಹಕ್ಕಾಗಿ ಪರಲೋಕದಲ್ಲಿ ಯಮದಂಡನೆ

ಯನ್ನೂ ಪಡೆಯಲು ಪ್ರಹರೇಶ್ವರನಂತಹ ವೃದ್ಧನೂ ಜ್ಞಾನಿಯೂ ಇಚ್ಛಿಸುವನೆ? ಆದುದರಿಂದ ಸುಬುದ್ಧಿಯ ಕುತ್ಸಿತವಾದ ಬೋಧನೆಯನ್ನು ಕೇಳಿ ಶಾಪಗಳಿಗೂ ಆಶಾಭಂಗಗಳಿಗೂ ತುತ್ತಾಗಬೇಡ. ನೀನು ಇಲ್ಲಿಯೇ ನಿಂತುದೇ ಆದರೆ, ಅನೇಕ ವರ್ಷಗಳಿಂದ ಹಾರೈಸುತ್ತಿರುವ ತ್ವತ್ಪ್ರಿಯಾಸಂದರ್ಶನವು ದೊರೆಯುವುದು. ಅಪಾಯವು ಎಳ್ಳಷ್ಟಾದರೂ ಇರುವುದಿಲ್ಲ'' ಹೀಗೆಂದು ದುರ್ಬುದ್ಧಿಯು ಪುನಃ ಪ್ರೇರೇಪಿಸಿತು.

ಹೀಗೆ ಹುಟ್ಟಿದ ಆಲೋಚನಾತರಂಗಗಳಲ್ಲಿ ದುರ್ಬುದ್ಧಿಯ ಪ್ರೇರಣೆಯೇ ಹಿತಕರವೆಂದು ತೋರಿತು. ಅಂತಹ ಸಂಜೆಯ ಹೊತ್ತಿನಲ್ಲಿ ಏಕಾಕಿಯಾಗಿ ಪ್ರಯಾಣಮಾಡುವುದರಲ್ಲಿ ಅಪಾಯವಿರುವುದೆಂಬ ಭಾವನೆಯು ಹುಟ್ಟಿ, ಸ್ವಲ್ಪಸ್ವಲ್ಪವಾಗಿ ಬಳೆಯಲು ಕಟ್ಟಕಡೆಗೆ, ಆ ದಿನ ರಾತ್ರಿ ಅಲ್ಲಿ ನಿಂತುಬಿಡುವುದೇ ಕ್ಷೇಮಕರವೆಂದು ವಿಜಯಸಿಂಹನು ನಿರ್ಧಾರಮಾಡಿಕೊಂಡನು. ಇಂಗಿತಜ್ಞನಾದ ಪ್ರಹರೇಶ್ವರನು ಸಮಯವನ್ನು ನೋಡಿಕೊಂಡು ಪುನಃ ತನ್ನ ಕೋರಿಕೆಯನ್ನು ನಡೆಯಿಸಿಕೊಡಬೇಕೆಂದು ಕೇಳಿಕೊಂಡನು. ವಿಜಯಸಿಂಹನು ಅದಕ್ಕೆ ಒಪ್ಪಲಾಗಿ ಇಬ್ಬರೂ ಪ್ರಹರೇಶ್ವರನ ಮನೆಗೆ ಹೊರಟರು.

ಹಿಂದಿರುಗಿ ಬಂದ ತನ್ನ ಪ್ರಿಯನನ್ನು ಕಂಡು ಮುಕ್ತಾಂಬೆಗೆ ಉಂಟಾದ ಸಂತಾಪವನ್ನು ಹೇಳತೀರದು. ಪ್ರಹರೇಶ್ವರನ ವೃತ್ತಾಂತವನ್ನು ಸಾಂಗವಾಗಿ ಮೊದಲೇ ತಿಳಿಸದೇಹೋದುದು ತನ್ನ ದೊಡ್ಡ ತಪ್ಪೆಂದು ಆಕೆಯು ಬಹಳವಾಗಿ ಪಶ್ಚಾತ್ತಾಪಪಟ್ಟುಕೊಂಡಳು. ಮುಂದೆ ಒದಗಬಹುದಾದ ಅಪಾಯವನ್ನು ಕುರಿತು ವಿಜಯಸಿಂಹನಿಗೆ ಎಚ್ಚರಿಸಬೇಕೆಂದು ಎಷ್ಟು ಪ್ರಯತ್ನಮಾಡಿದರೂ, ಪ್ರಹರೇಶ್ವರನು ಎಡೆಬಿಡದೆ ವಿಜಯಸಿಂಹನ ಜೊತೆಯಲ್ಲಿಯೇ ಇದ್ದುದರಿಂದ, ಮುಕ್ತಾಂಬೆಯನ್ನು ಭಯದುಃಖಗಳು ಪೀಡಿಸಲಾರಂಭಿಸಿದುವು. ಪ್ರಹರೇಶ್ವರನು ವಿಜಯಸಿಂಹನೊಡನೆ ಮಾತನಾಡುತ್ತಿದ್ದು, ಭೋಜನಕ್ಕೆ ಮುಂಚೆ ಕೈಕಾಲು ತೊಳೆದುಕೊಳ್ಳುವುದಕ್ಕಾಗಿ ಅವನ ಸಂಗಡ ಒಳಕ್ಕೆ ಹೊರಟನು.

ಸಮಯ ಸಿಕ್ಕಿದರೆ ಸಾಕೆಂದು ಮುಕ್ತಾಂಬೆಯು ಕತ್ತಲಲ್ಲಿ ಅತ್ತಿತ್ತ ಓಡಾಡುತ್ತಿದ್ದಳು. ಹೀಗೆ ಸುತ್ತಾಡುತ್ತಿದ್ದಾಗ ಒಬ್ಬ ಪುರುಷವ್ಯಕ್ತಿಯು ಅತ್ತಕಡೆಯೇ ಬರುತ್ತಿದ್ದಂತೆ ಕಂಡಳು. ಆ ವ್ಯಕ್ತಿಯು ಸಮೀಪಿಸಿ

"ಯಾರು, ಅವರು ? " ಎಂದು ಕೇಳಲು ಅದಕ್ಕೆ " ನಾನು, ಮುಕ್ತಾಂಬೆ ನೀವು ಯಾರು? "ಎಂದು ಉತ್ತರಕೊಟ್ಟಳು. ಆ ವ್ಯಕ್ತಿಯು " ತಾಯಿ ! ನಾನು ಹೊರಟ ಹೊತ್ತು ಬಹಳ ಒಳ್ಳೆಯದು. ಆದುದರಿಂದಲೇ ನೀನು ಸುಲಭವಾಗಿ ನನಗೆ ಕಾಣಬಂದೆ " ಎಂದು ಹೇಳಲು, ಮುಕ್ತಾಂಬೆಯು "ಓಹೊ ! ನೀನೋ ? ರಾಮರಾಜ! ಈ ಕತ್ತಲೆಯಲ್ಲಿ ಏಕಪ್ಪಾ ಬಂದೆ?" ಎಂದಳು.

ರಾಮರಾಜ:—"ಕಾರಣವನ್ನು ಆಮೇಲೆ ಹೇಳುವೆನು. ವಿಜಯ ಸಿಂಹನು ಇಲ್ಲಿಯೇ ಇರುವನೆ ? ಸುಖವಾಗಿರುವನೆ ? ವಿಶೇಷಗಳೇನೂ ಇಲ್ಲವಷ್ಟೆ ?''

ಮುಕ್ತಾಂಬೆ:—" ವಿಶೇಷಗಳಿಲ್ಲದೆಯೇನು ? ಈದಿನ ನಿನ್ನಿಂದ ನನಗೆ ಒಂದು ದೊಡ್ಡ ಉಪಕಾರವಾಗಬೇಕಾಗಿರುವುದು. ಅದನ್ನು ಮಾಡಿಕೊಡುವೆನೆಂದು ಮಾತುಕೊಡು. ''

ರಾಮರಾಜ:—"ನಿನ್ನಿಂದ ನಾನು ಪಡೆದಿರುವ ಉಪಕಾರದಲ್ಲಿ ಸಾವಿರದಲ್ಲಿ ಒಂದು ಪಾಲವನ್ನಾದರೂ ನಾನು ತೀರಿಸಲಾರೆನು. ನಿನ್ನ ವಾಕ್ಚಾತುರ್ಯದಿಂದಲೇ ನನ್ನಲ್ಲಿ ರಾಜಪುತ್ರಿಗೆ ಅನುರಾಗವು ಹುಟ್ಟುವಂತೆ ಮಾಡಿದೆ. ರಾಜದ್ರೋಹವೊಂದನ್ನು ಬಿಟ್ಟು, ಎಂತಹ ಸೇವೆಯನ್ನಾದರೂ ಮಹೋಪಕಾರಿಣಿಯಾದ ನಿನಗೆ ಮಾಡಲು ಸಿದ್ಧನಾಗಿರುವೆನು."

ಮುಕ್ತಾಂಬೆ:—"ಸಾರ್ಥಕವಾದ ಮಾತನ್ನಾಡಿದೆ ! ರಾಜದ್ರೋಹವೆ !! ಅಂತಹ ಮಾತನ್ನೇ ನನ್ನ ಇದಿರಿಗೆ ಎತ್ತಬೇಡ. ಈ ರಾತ್ರಿ ವಿಜಯಸಿಂಹರಿಗೆ ಅಪಾಯವು ಒದಗುವುದು. ಆದರಿಂದ ಅವರನ್ನು ತಪ್ಪಿಸಬೇಕು. ಒಂದುವೇಳೆ ಕೆಲವರ ಸಹವಾಸದಿಂದ ಪ್ರಹರೇಶ್ವರನು ರಾಜದ್ರೋಹಿಗಳೊಡನೆ ಸೇರಿರುವನೆಂದು ಕಂಡುಬಂದರೂ, ಈ ವಿಷಯವನ್ನು ಯಾರೊಡನೆಯಾಗಲಿ ತಿಳಿಸದಿರಬೇಕು. ಈ ಎರಡು ಉಪಕಾರಗಳನ್ನೂ ಮಾಡಿ ನನಗೆ ಸಹಾಯಮಾಡು. ''

ರಾಮರಾಜ:—" ಸೋದರೀ ! ನಿನ್ನ ಈ ಎರಡು ಕೋರಿಕೆಗಳನ್ನೂ ತಪ್ಪದೆ ನಡೆಯಿಸಿಕೊಡುವೆನು. ಈದಿನ ನೀನೂ ನನಗೆ ಮತ್ತೊಂದು ಉಪಕಾರಮಾಡಬೇಕಾಗಿದೆ. ಪ್ರಹರೇಶ್ವರವಿಜಯಸಿಂಹರ ಸಂಭಾಷಣೆ

ಯನ್ನು ನಾನು ಹೊಂಚಿಕೇಳಬೇಕಾಗಿದೆ. ಆದುದರಿಂದ ಸರಿಯಾದ ಸ್ಥಳವನ್ನು ತೋರಿಸು."

ಮುಕ್ತಾಂಬೆ:—"ಅಗೋ! ಆ ಚಿಕ್ಕಮನೆಗೆ ಯಾರೂ ಬರುವುದಿಲ್ಲ. ಅಲ್ಲಿ ಸದ್ದುಮಾಡದೆ ಕುಳಿತುಕೊಂಡಿದ್ದರೆ, ಆ ಕಿರುಮನೆಯ ಮುಗ್ಗುಲಲ್ಲಿರುವ ಜಗಲಿಯಮೇಲೆ ಅವರಿಬ್ಬರೂ ಮಲಗಿಕೊಂಡು ಮಾತನಾಡಿಕೊಳ್ಳುವರು. ನೀನು ಅವರ ಸಂಭಾಷಣೆಯನ್ನು ಸುಲಭವಾಗಿ ಕೇಳಬಹುದು."

ಹೀಗೆ ಹೇಳಿ ಮುಕ್ತಾಂಬೆಯು ಆ ಸ್ಥಳವನ್ನು ಬಿಟ್ಟು ಹೊರಟುಹೋದಳು. ಇದಾದ ಸ್ವಲ್ಪಹೊತ್ತಿನಲ್ಲೇ ಪ್ರಹರೇಶ್ವರನೂ ವಿಜಯಸಿಂಹನೂ ಊಟಮಾಡಿ ಎಲೆ ಅಡಕೆ ಹಾಕಿಕೊಳ್ಳುತ್ತಾ, ತಮ್ಮ ತಮ್ಮ ಹಾಸಿಗೆಯಮೇಲೆ ಕುಳಿತುಕೊಂಡಿದ್ದರು. ಆ ಸಮಯಕ್ಕೆ ಸರಿಯಾಗಿ, ಸುಮಾರು ಮೂವತ್ತು ವರುಷ ವಯಸ್ಸುಳ್ಳ ಪುರುಷನೊಬ್ಬನು ಅಲ್ಲಿಗೆ ಬಂದು ಕುಳಿತುಕೊಂಡು, ವಿಜಯಸಿಂಹನೊಡನೆ ಈ ಮುಂದೆ ಹೇಳುವಂತೆ ಸಂಭಾಷಿಸತೊಡಗಿದನು:—

ಆಗಂತುಕ:—"ವಿಜಯಸಿಂಹ! ನಿನ್ನನ್ನು ನೋಡಿದರೆ ಪರಾಕ್ರಮ ಸಿಂಹನಂತೆ ಕಾಣಿಸುತ್ತಿರುವೆ. ವೈರಿಗಜಗಳಮೇಲೆ ಹಾರಿ ಕುಂಭಸ್ಥಳವನ್ನು ಸೀಳದೆ ಹೀಗೇಕೆ ಸುಮ್ಮನಿರುವೆ?"

ವಿಜಯ:—"ವೈರಿಗಳು ಮತ್ತಗಜಗಳಂತಹವರಾಗಿದ್ದರೆ ನೀನು ಹೇಳುವಂತೆಯೇ ಮಾಡಬಹುದು. ಅವರೂ ಬಲಿಷ್ಠಸಿಂಹಪರಾಕ್ರಮಶಾಲಿಗಳೇ ಆಗಿದ್ದರೆ, ಸ್ನೇಹವನ್ನು ಅವಲಂಬಿಸುವುದೇ ಯುಕ್ತವು."

ಆಗಂತುಕ:—"ಬಳ್ಳೆಯ ಮಾತುಹೇಳಿದೆ. ಬಲಿಷ್ಠರಾದ ವೈರಿಗಳನ್ನು ನಿರ್ಮೂಲಮಾಡಬೇಕಾದರೆ ಕಪಟಸ್ನೇಹದಂತಹ ಸಾಧನವು ಮತ್ತೊಂದಿಲ್ಲ. ಪರ್ವತವನ್ನು ಸಣ್ಣಗಿರುವ ನೀರಿನ ಪ್ರವಾಹವು ಕೊರೆದು ಹಾಕುವಂತೆ ಬೆಂಕಿಯು ಭೇದಿಸಬಲ್ಲುದೇ? ಹಾಗೆಯೇ ಪ್ರಬಲ ಶತ್ರುಗಳನ್ನು ಸ್ನೇಹವು ನಿರ್ಮೂಲಿಸುವಂತೆ ವಿಕ್ರಮವು ಮಾಡಲಾರದು."

ವಿಜಯ:—"ಈ ನಿನ್ನ ವಿಪರೀತಪ್ರಸಂಗದಿಂದ ನನಗೆ ಏನೂ ಅರ್ಥವಾಗಲಿಲ್ಲ. ಚಕ್ರವರ್ತಿಗಳನ್ನು ಕೊಲ್ಲಬೇಕೆಂದು ಅವರ ಬಳಿಯಲ್ಲಿ ಸೇರಿಕೊಂಡಿರುವೆನೆಂದು ತಿಳಿದಿರುತ್ತೀಯಾ?"

ಆಗಂತುಕ:—" ನಾನೊಬ್ಬನೇ ಹಾಗೆ ತಿಳದಿಲ್ಲ. ರಾಜನೀತಿವಿಶಾರದರೆಲ್ಲರೂ ಹಾಗೆಯೇ ತಿಳದಿರುವರು."

ವಿಜಯ:—" ಅದು ರಾಜನೀತಿವಿಶಾರದರ ಅಭಿಪ್ರಾಯವಾಗಿರಬಹುದು; ಆದರೆ ಒಂದುವೇಳೆ ಅಂತಹ ಉಪಾಯದಿಂದ ಫಲಸಿದ್ಧಿಯಾದರೂ, ಅಂತಹ ಮಾರ್ಗವನ್ನು ಹಿಡಿಯಲು ಎಂದಿಗೂ ನನ್ನ ಮನಸ್ಸು ಒಪ್ಪಲಾರದು. ರಾಜನೀತಿಯು ಬಹುಕುಟಿಲವಾದುದು. ಅದನ್ನು ಆಧಾರವನ್ನಾಗಿ ಮಾಡಿಕೊಂಡು, ನನ್ನಲ್ಲಿ ವಿಶ್ವಾಸವಿಟ್ಟಿರುವ ಚಕ್ರವರ್ತಿಯವರ ವಿಷಯದಲ್ಲಿ ಹೇಗೆತಾನೇ ವಿಶ್ವಾಸಘಾತುಕನಾಗಬಹುದು? ಇನ್ನು ಈ ವಿಷಯವನ್ನು ಕುರಿತು ನನ್ನೊಡನೆ ಉಸಿರೆತ್ತಬೇಡ"

ಆಗಂತುಕ:—" ಶೂರವಂಶದಲ್ಲಿ ಹುಟ್ಟಿದ ನೀನೇ ಹೀಗೆ ಹೆಂಗುಸಂತೆ ಹೆದರಿದರೆ ಸಾಮಾನ್ಯರು ಏನನ್ನುತಾನೇ ಮಾಡರು? ಶತ್ರುವನ್ನು ಶೌರ್ಯದಿಂದಾಗಲಿ, ಕಪಟಸ್ನೇಹದಿಂದಾಗಲಿ, ಮತ್ತೆ ಯಾವ ರೀತಿಯಿಂದಲೇ ಆಗಲಿ ನಿರ್ಮೂಲಮಾಡಿ ಸ್ವತಂತ್ರರಾಗಲು ಯತ್ನಿಸದವರ ಬಾಳಿನಿಂದ ಏನು ಪ್ರಯೋಜನ?"

ವಿಜಯ:—" ನೀನು ಎಷ್ಟೇಹೇಳಿದರೂ ವಿಶ್ವಾಸಘಾತುಕನಾಗಲಾರೆನು. ಇನ್ನು ಈ ವಿಷಯವನ್ನು ಕುರಿತು ನನ್ನೊಡನೆ ಮಾತಾಡಬೇಕಾಗಿಲ್ಲ."

ಆಗಂತುಕ:—" ಅಯ್ಯಾ, ವಿಜಯಸಿಂಹ! ನೀನು ನನ್ನ ಮಾತನ್ನೀಗ ಕೇಳಿದರೆ ರಾಜ್ಯಾಧಿಪತಿಯಾಗುವೆ. ದೈವವಶದಿಂದ ನೀನು ಚಕ್ರವರ್ತಿ ಮಂತ್ರಿಗಳೆಲ್ಲರಿಗೂ ವಿಶ್ವಾಸಪಾತ್ರನಾಗಿರುವೆ. ತಕ್ಕ ಸಮಯವನ್ನು ಸಾಧಿಸಿ ಕೆಲಸವನ್ನು ನಡೆಯಿಸಿಬಿಡು. ಈಗ ನಿನಗಿರುವ ಸೇವಕತ್ವಕ್ಕೂ ಆಮೇಲೆ ಉಂಟಾಗುವ ರಾಜಪದವಿಗೂ ಎಷ್ಟು ವ್ಯತ್ಯಾಸವಿದೆಯೋ ಸ್ವಲ್ಪ ಯೋಚಿಸಿ ನೋಡು.

ವಿಜಯ:—" ನಿನ್ನ ಕುಟಿಲಬೋಧನೆಗಳು ನನ್ನ ಮನಸ್ಸನ್ನು ತಿರುಗಿಸಲಾರವು. ವಿಶ್ವಾಸಘಾತುಕನಾಗುವುದಕ್ಕಿಂತಲೂ, ಅತ್ಯಂತ ಹೇಯವಾದ ಸೇವಾವೃತ್ತಿಯಲ್ಲಿರುವುದೇ ಮೇಲು. ಸೇವಾವೃತ್ತಿಯಲ್ಲಿರಲು ಮನಸ್ಸಿಲ್ಲದಿದ್ದರೆ ತಿರಿದಾದರೂ ಜೀವನಮಾಡುವುದು ಒಳ್ಳೆಯದು. ಶೂರರಿಗೆ ವಿಶ್ವಾಸಘಾತುಕತೆಯು ಎಂದಿಗೂ ರುಚಿಸದು."

ಆಗಂತುಕ:—“ ಅಯ್ಯಾ, ವಿಜಯಸಿಂಹ! ನೀನು ಇನ್ನೂ ತರುಣನು; ಲೋಕಾನುಭವವು ಎಳ್ಳಷ್ಟೂ ಇರುವುದಿಲ್ಲ. ಆದುದರಿಂದಲೇ ನಿನಗೆ ಇದಿರಾಗಿರುವ ನಿಧಿಯನ್ನು ಬಿಟ್ಟು, ನಿನ್ನ ಹಗೆಗಳು ಕೊಡುವ ಭಿಕ್ಷಕ್ಕೆ ಕೈಯೊಡ್ಡಿರುವೆ. ಇನ್ನಾದರೂ ನನ್ನಲ್ಲಿ ಸಂಶಯಪಡದೆ ನನ್ನ ಹಿತೋಪದೇಶವನ್ನು ಅನುಸರಿಸಿ ಅದೃಷ್ಟವಂತನಾಗಿ ಬದುಕು.”

ವಿಜಯ :—(ಬೇಸರದಿಂದ) “ ನೀನು ಯಾರೋ ರಾಜದ್ರೋಹಿಯಂತಿರುವೆ. ನಾನು ಸಹಿಸಿದರೂ ನನ್ನ ಈ ಕೃಪಾಣವು ರಾಜದ್ರೋಹವನ್ನು ಸಹಿಸಲಾರದು. ಆದುದರಿಂದ ಎಚ್ಚರದಿಂದಿರು ” ಎಂದು ಗರ್ಜಿಸುತ್ತಾ, ಪ್ರಹರೇಶ್ವರಪೌತ್ರನ ಕಡೆ ತಿರುಗಿ “ ಪ್ರಹರೇಶ್ವರಪೌತ್ರರೇ! ತಾವು ಇಂತಹ ರಾಜದ್ರೋಹಿಗಳಿಗೆ ಅವಕಾಶಕೊಡುವುದರಿಂದ ಲೋಕನಿಂದೆಗೆ ಗುರಿಯಾಗಬೇಕಾಗುವುದು. ಇಂತಹ ರಾಜದ್ರೋಹಿಗಳ ಮಾತುಗಳನ್ನು ನಮ್ಮಂತಹವರು ಕೇಳಬಾರದು-ಎಂಬುದು ನನ್ನ ಅಭಿಪ್ರಾಯ ; ತಮ್ಮ ಅಭಿಮತ ಹೇಗೆ ? ”

ಪ್ರಹರೇ—“ ನೀನು ಹೇಳಿದಮಾತು ಯುಕ್ತವು. ಈ ರಾಜದ್ರೋಹಿಯ ಮಾತುಗಳು ನನಗೆ ಎಷ್ಟುಮಾತ್ರವೂ ರುಚಿಸಲಿಲ್ಲ. ಇವನು ಯಾವನೋ ವಿದೇಶಿಯು ಬಂದು ಪ್ರತಿದಿನವೂ ನನಗೆ ಉಪದೇಶಮಾಡುತ್ತಿರುವನು. ನಾನೂ, ಈಗ ನೀನು ಮಾಡಿದಂತೆಯೇ ತಿರಸ್ಕರಿಸುತ್ತಿರುವೆನು ” ಹೀಗೆಂದು ಹೇಳಿ ಪ್ರಹರೇಶ್ವರನು ಆಗಂತುಕನನ್ನು ಕುರಿತು—“ ಅಯ್ಯಾ, ಆಗಂತುಕನೆ! ನಿನ್ನ ಮಾತುಗಳನ್ನು ನಾವು ಸ್ವಲ್ಪವಾದರೂ ಕಿವಿಗೆಹಾಕಿಕೊಳ್ಳುವುದಿಲ್ಲ. ಇನ್ನಾದರೂ ಬಂದದಾರಿಯನ್ನು ಹಿಡಿದು ಹೊರಡು. ಇನ್ನು ಯಾವಾಗಲಾದರೂ ಈಕಡೆ ಬಂದೀಯೆ! ಜೋಕೆ! ಎಲ್ಲಿ, ಹೊರಡು! ” ಎಂದು ಗದರಿಸಿಕೊಂಡನು.

ಆ ಆಗಂತುಕನು ಈ ಗರ್ಜನೆಯನ್ನು ಕೇಳಿ ಬೇರೆ ಉಸಿರೆತ್ತದೆ ಅಲ್ಲಿಂದ ಹೊರಟುಹೋದನು. ಆಮೇಲೆ ಪ್ರಹರೇಶ್ವರನು ರಾಜದ್ರೋಹಿಗಳನ್ನು ಬಹಳವಾಗಿ ನಿಂದಿಸಲಾರಂಭಿಸಿದನು. ಈ ಮಾತುಗಳನ್ನು ಕೇಳಿದ ವಿಜಯಸಿಂಹನು ತನ್ನ ಮನಸ್ಸಿನಲ್ಲಿಯೇ ಚಕ್ರವರ್ತಿಯವರೂ ಮಂತ್ರಿ

ಯುವರೂ, ಪ್ರಹರೇಶ್ವರನು ರಾಜದ್ರೋಹಿಯೆಂದು ತಿಳದುಕೊಂಡು ಘೋರ ವಾದ ಅನ್ಯಾಯುವಮಾಡಿರುವರೆಂದು ಯೋಚಿಸಿಕೊಳ್ಳಲಾರಂಭಿಸಿದನು. ಸ್ವಲ್ಪ ಹೊತ್ತಾದಬಳಿಕ ವಿಜಯುಸಿಂಹನು ಪ್ರಹರೇಶ್ವರನನ್ನು ಕುರಿತು ಹೀಗೆ ಸಂಭಾಷಿಸಿದನು :—

"ಪ್ರಹರೇಶ್ವರಪಾತ್ರರೇ! ತಾವು ಇಂತಹ ಮನುಷ್ಯರನ್ನು ಹತ್ತಿರಕ್ಕೆ ಕೂಡ ಬರಗೊಡಿಸದಿರುವುದೇ ಒಳ್ಳೆಯದೆಂದು ನನಗೆ ತೋರುವುದು. ಅಂತಹವರಿಗೆಲ್ಲಾ ವಿರೋಧಿಗಳಾಗಿಯೇ ತಾವು ವರ್ತಿಸಬೇಕಾದುದು ಅವಶ್ಯಕವಲ್ಲವೇ ? ''

ಪ್ರಹರೇ—" ಅದಕ್ಕೆ ಸಂದೇಹವೇನು? ರಾಜದ್ರೋಹಿಗಳನ್ನು ಅಡಗಿಸಬೇಕೆಂದು ಪ್ರಯತ್ನಿಸುತ್ತಿರುವೆನು. ಆದರೂ ನನಗೆ ಅಷ್ಟೊಂದು ಸಾಮರ್ಥ್ಯವಿರುವಂತೆ ತೋರುವುದಿಲ್ಲ. ನನ್ನಮನೆಗೆ ಕಾಲುಹಾಕಕೂಡದೆಂದು ಹೇಳುತ್ತಿದ್ದರೂ ಅವರು ಪುನಃ ಪುನಃ ಬರುತ್ತಿರುವರು. ಏನುಮಾಡಲಿ, ಹೇಳು. "

ವಿಜಯು—" ಬೇಕಾದರೆ, ತಮಗೆ ನನ್ನಿಂದಾಗುವ ಸಹಾಯುವನ್ನು ಮಾಡಲು ಸಿದ್ಧನಾಗಿರುವೆನು. ನಾವಿಬ್ಬರೂ ಸೇರಿ ಅಂತಹವರನ್ನು ಹಿಡಿದುಕೊಂಡುಹೋಗಿ ಮಹಾರಾಜರವರಿಗೆ ಒಪ್ಪಿಸೋಣವೆ ? ''

ಪ್ರಹರೇ—" ಅಗತ್ಯವಾಗಿಯೂ ಹಾಗೆ ಮಾಡೋಣ. ಒಂದುವೇಳೆ ಚಕ್ರವರ್ತಿಯವರಿಗೆ ನನ್ನವಿಷಯದಲ್ಲಿ ಸಂಶಯವೇನಾದರೂ ಇದ್ದರೆ, ಅಂತಹ ಸಂದೇಹವೆಲ್ಲವೂ ಹೋಗುವುದು."

ವಿಜಯ—" ಒಳ್ಳೆಯದು. ಆ ರಾಜದ್ರೋಹಿಗಳು ಎಲ್ಲಿಸೇರಿ ಒಳಸಂಚು ನಡೆಯಿಸುವರೋ ತಮಗೆ ತಿಳಿದಿರುವುದೇ ? ಸಾವಕಾಶಮಾಡದೆ ಅವರನ್ನು ಈ ರಾತ್ರಿಯೇ ಹಿಡಿದುಬಿಡಬಹುದು. ಇಲ್ಲಿಗೆ ಬಂದಿದ್ದ ದುರಾತ್ಮನನ್ನು ಬಿಟ್ಟುಬಿಟ್ಟುದು ಅವಿವೇಕವಾಯಿತಲ್ಲಾ ! "

" ಹೋಗಲಿ. ಆ ದ್ರೋಹಿಗಳೆಲ್ಲರೂ ಈ ಪುರಪಾರ್ಶ್ವದಲ್ಲಿರುವ ಶೈವಮಠದಲ್ಲಿ ಸೇರುವರಂತೆ. ಅವರು ಸೇರುವಸ್ಥಳವನ್ನು ಚೆನ್ನಾಗಿ ವಿಚಾರಿಸಿಕೊಂಡು ಬಂದುಬಿಡುತ್ತೇನೆ. ಅದುವರೆಗೂ ಎಚ್ಚರದಿಂದಿರು. ರಾಜ

ದ್ರೋಹಿಗಳಿಂದ ನಿನಗೆ ಯಾವ ತೊಂದರೆಯೂ ಆಗದಂತೆ ಈ ಇಬ್ಬರು ಭಟರು ನಿನ್ನ ಅಧೀನದಲ್ಲಿರುವರು. ಬೇಗ ಹೋಗಿಬಿಟ್ಟು ಬರಲೋ ? ” ಎಂದು ಪ್ರಹರೇಶ್ವರನು ಉತ್ಸಾಹದಿಂದ ಕೇಳಿ, ಅವನ ಅನುಮತಿಯನ್ನು ಪಡೆದು ಹೊರಟನು.

ಈ ಸಮಯದಲ್ಲಿ ವಿಜಯಸಿಂಹನು, ಸಾಧ್ಯವಾದರೆ ಮುಕ್ತಾಂಬೆಯನ್ನು ಕಂಡು, ಆಕೆಯ ಕೋರಿಕೆಗೆ ವ್ಯತಿರಿಕ್ತವಾಗಿ ನಡೆಯಬೇಕಾಗಿ ಬಂದುದನ್ನು ಕುರಿತು ತಿಳಿಸಬೇಕೆಂದು ನಿರ್ಧರಿಸಿಕೊಂಡನು. ಆದರೆ ಪ್ರಹರೇಶ್ವರನು ನಿಯಮಿಸಿದ್ದ ಇಬ್ಬರು ಆಳುಗಳೂ ಅಲ್ಲಿಯೇ ಇದ್ದುದರಿಂದ ಅವಕಾಶವೇ ಸಿಕ್ಕಲಿಲ್ಲ. ವಿಜಯಸಿಂಹನಿಗೆ ಸನ್ನಿಹಿತವಾಗಿದ್ದ ಆಪತ್ತನ್ನು ತಿಳಿಸಬೇಕೆಂದು ಮುಕ್ತಾಂಬೆಗೂ ಅತ್ಯಂತ ಕುತೂಹಲವಿದ್ದಿತು. ಆದರೆ ಅಲ್ಲಿ ನಿಯಮಿತರಾಗಿದ್ದ ಸೇವಕರು ಕೇವಲದುರಾತ್ಮರಾಗಿದ್ದುದರಿಂದ ಅವರ ಇದಿರಿಗೆ ಹೋಗಿ ವಿಜಯಸಿಂಹನೊಡನೆ ಮಾತನಾಡುವುದು ಅತ್ಯಪಾಯಕರವೆಂದು ತಿಳಿದು ಬಹಳವಾಗಿ ವ್ಯಥೆಪಟ್ಟುಕೊಂಡಳು. ಆದುದರಿಂದ ಕೊಟಡಿಯಲ್ಲಿ ಹೊಂಚುಹಾಕಿಕೊಂಡು ಕೇಳುತ್ತಿದ್ದ ರಾಮರಾಜನಿಗೆ ಮತ್ತೊಂದು ಬಾರಿ ಎಚ್ಚರಿಸುವುದು ಯುಕ್ತವೆಂದು ಭಾವಿಸಿ, ಅವನ ಬಳಿಗೆ ಹೊರಟಳು. ಅವರ ಸಂಭಾಷಣೆಯೆಲ್ಲವನ್ನೂ ಕೇಳಿದ್ದ ರಾಮರಾಜನಿಗೆ ಹೆಚ್ಚಾಗಿ ಹೇಳುವ ಆವಶ್ಯಕವಿರಲಿಲ್ಲ. ರಾಮರಾಜನು—“ಪಾಪ ! ಪ್ರಹರೇಶ್ವರನು ನಿರಪರಾಧಿ; ಇದ್ದ ಸಂಗತಿಯನ್ನು ತಿಮ್ಮರಸರಿಗೆ ತಿಳಿಸಿ ಅವರಿಗೆ ಆತನ ವಿಷಯದಲ್ಲಿರುವ ಸಂಶಯವೆಲ್ಲವನ್ನೂ ಹೋಗಲಾಡಿಸುವೆನು ” ಎಂದು ಹೇಳಿದನು. ಮುಕ್ತಾಂಬೆಯು ಆತನ ಮಾತುಗಳನ್ನು ಕೇಳಿ ಬಹಳ ಸಂತುಷ್ಟಳಾಗಿ, ಆತನೊಡನೆ ಕೆಲವು ಗುಟ್ಟುಮಾತುಗಳನ್ನು ಹೇಳಿ ಹೊರಟುಹೋದಳು. ರಾಮರಾಜನೂ ಬೇರೊಂದುದಿಕ್ಕಿಗೆ ಹೊರಟುಹೋದನು.

ಎಂಟನೆಯ ಪ್ರಕರಣ

ಮೋಸ.

ಮಧು ತಿಷ್ಠತಿ ಜಿಹ್ವಾಗ್ರೇ ಹೃದಿ ತಿಷ್ಠತಿ ಕರ್ತರೀ.

ಪ್ರಹರೇಶ್ವರನು ವಿಜಯಸಿಂಹನ ಅನುಮತಿಯನ್ನು ಪಡೆದು ಮನೆಯನ್ನು ಬಿಟ್ಟು ಹೊರಟಕೂಡಲೆ, ಅವನಿಗೆ ಕೆಲವರು ಕಾಣಿಸಿಕೊಂಡರು. ಅವರನ್ನು ಕರೆದುಕೊಂಡು ಆ ಗೃಹದ ಬೇರೊಂದುಭಾಗದಲ್ಲಿದ್ದ ಆಲೋಚನಾಮಂದಿರಕ್ಕೆ ಹೋಗಿ ಕುಳಿತುಕೊಂಡನು. ಸ್ವಲ್ಪ ಹೊತ್ತಿನಲ್ಲೇ ಅಲ್ಲಿಗೆ ಮುಕ್ತಾಂಬೆಯೂ ಬಂದು ಸೇರಿದಳು. ವಿಜಯಸಿಂಹನಲ್ಲಿ ಮುಕ್ತಾಂಬೆಗೆ ಅನುರಾಗವಿದ್ದುದು ಅಲ್ಲಿ ಯಾರಿಗೂ ತಿಳಿದಿರಲಿಲ್ಲ. ಆದುದರಿಂದ ಅಲ್ಲಿದ್ದವರೆಲ್ಲರೂ ಈ ಕೆಳಗೆ ಕಂಡಂತೆ ಧಾರಾಳವಾಗಿ ಸಂಭಾಷಿಸತೊಡಗಿದರು:—

ಪ್ರಹರೇ—"ರಾಮಯಾಮಾತ್ಯರೆ! ಕಟುಕನ ಅಂಗಡಿಗೆ ಕುರಿ ಬಂದಂತೆ ವಿಜಯಸಿಂಹನು ಈ ದಿನ ನಮ್ಮ ಬಳಿಗೆ ಬಂದಿರುವನು. ಇವನು ವಿಜಯನಗರಕ್ಕೆ ಅತಿತ್ವರೆಯಿಂದ ಹಿಂದಿರುಗುತ್ತಿದ್ದಾಗ ಅವನಿಗೆ ಮರುಳು ಮಾಡಿ ಇಲ್ಲಿಗೆ ಕರೆದುಕೊಂಡುಬಂದು, ನಮ್ಮ ಕಡೆಗೆ ಸೇರಿಸಿಕೊಳ್ಳಬೇಕೆಂದು ಸರ್ವಪ್ರಯತ್ನವನ್ನೂ ಮಾಡಿನೋಡಿದೆನು ನಮ್ಮ ಆಸೆಯು ಕೈಗೂಡಲಾರದು. ಆದುದರಿಂದ ಅವನನ್ನು ಯಮಸದನಕ್ಕೆ ಸಾಗಕಳುಹಿಸುವುದೇ ಯುಕ್ತವೆಂದು ತೋರುವುದು"

ರಾಮಯ—"ನೀನು ಹೇಳುವುದೇನೋ ಸರಿ. ವಿಜಯಸಿಂಹನು ಬಹಳ ಪರಾಕ್ರಮಶಾಲಿ; ಇಂತಹವನನ್ನು ಕೊಲ್ಲುವುದಕ್ಕೆ ಪ್ರತಿಯಾಗಿ ನಮ್ಮ ವಶಪಡಿಸಿಕೊಂಡರೆ, ನಮಗೆ ಬಹಳ ಲಾಭವುಂಟೆಂದು ಭಾವಿಸಿ, ಸಾಮೋಪಾಯದಿಂದ ಅವನನ್ನು ನಮ್ಮ ಕಡೆಗೆ ಮಾಡಿಕೊಳ್ಳಬೇಕೆಂದು ನಿನಗೆ ಹೇಳಿದ್ದೆನು. ಇದು ಸಾಧ್ಯವಲ್ಲದುದರಿಂದ, ಅವನನ್ನು ಕಡೆಗಾಣಿಸುವುದು ಆವಶ್ಯಕವೆಂದು ಕಾಣುವುದು."

ಪ್ರಹರೇ—"ಮಂತ್ರಿಶ್ರೇಷ್ಠರೆ! ಆ ಹೊತ್ತು ಆ ದುರಾತ್ಮನು ಹೊಡೆದ ಏಟು ನನಗೆ ಇನ್ನೂ ಬಾಧಿಸುತ್ತಿದೆ. ಅವನಿಗೆ ಆ ಸಾಲವನ್ನು ತೀರಿಸಬೇಕೆಂದು ನನಗೆ ಬಹಳ ಆಸೆ ಇರುವುದು. ಅವನಿಗೆ ನಿದ್ದೆ ಹತ್ತಿದ

ಕೂಡಲೆ ಅವನನ್ನು ಕಡಿದು ತುಂಡುತುಂಡು ಮಾಡಿ ಬಾವಿಯೊಳಕ್ಕೆ ಹಾಕಿ ಬಿಡಬೇಕೆಂದು ನಿರ್ಧರಿಸಿದೇನೆ. ಇದಕ್ಕೆ ತಮ್ಮ ಅಭಿಪ್ರಾಯವೇನು ?" ಎಂದು ಕೇಳಿದನು.

ಮುಕ್ತಾಂಬೆ—" ನನಗೆ ಒಂದು ಸಂಶಯವುಂಟಾಗಿರುವುದು. ನಮ್ಮ ಮನೆಯಲ್ಲಿ ಇಂತಹ ಕಾರ್ಯವನ್ನು ಎಷ್ಟೇ ಗುಟ್ಟಾಗಿ ಮಾಡಿದರೂ ಜನರಿಗೆ ತಿಳಿದುಬಿಡದೆ ಹೋಗುವುದಿಲ್ಲ. ಒಂದುವೇಳೆ ಹಾಗೆ ತಿಳಿದುಹೋದರೆ, ನಮ್ಮೆಲ್ಲರಿಗೂ ಹಾನಿಯುಂಟಾಗುವುದು. ಆದುದರಿಂದ ಇನ್ನೂ ಚೆನ್ನಾಗಿ ಯೋಚಿಸಿ ಅಂತಹ ಕಾರ್ಯವನ್ನು ಮಾಡುವುದು ಕ್ಷೇಮವೆಂದು ನನಗೆ ತೋರುವುದು. "

ರಾಮಯ—" ಸಣ್ಣವಳಾದರೂ, ಮುಕ್ತಾಂಬೆಯು ಹೇಳುವ ಈ ಮಾತುಗಳು ಬಹಳ ಯುಕ್ತವಾದುವು. ವಿಜಯಸಿಂಹನು ಇಲ್ಲಿಗೆ ಬಂದಿರುವ ವೃತ್ತಾಂತವು ಚಕ್ರವರ್ತಿಗಳಿಗೂ ಮಂತ್ರಿಗೂ ಗೊತ್ತಿದೆ. ಈಗ ಅವನನ್ನು ಕೊಂದರೆ ಸಂಶಯವು ನಮ್ಮ ಮೇಲೆಯೇ ನಾಟಿಕೊಳ್ಳುವುದು. "

ಮುಕ್ತಾಂಬೆ—" ಆದುದರಿಂದ ವಿಜಯಸಿಂಹನಿಗೆ ಮತ್ತೂ ನಂಬಿಕೆ ಹುಟ್ಟಿಸಲು, ಈ ಸಾರಿ ಅವನನ್ನು ಬಿಟ್ಟುಬಿಟ್ಟರೆ, ಅವನು ಆಗಾಗ ನಿಸ್ಸಂಶಯವಾಗಿ ಇಲ್ಲಿಗೆ ಬರುತ್ತಿರುವನು. ಸಮಯಕಾದಿದ್ದು ಒಂದುವೇಳೆ ನಮ್ಮ ಕೆಲಸವನ್ನು ಮಾಡಿಕೊಳ್ಳಬಹುದು. "

ಪ್ರಹರೇ—" ಮುಕ್ತಾಂಬೆ ! ಹೀಗೆ ಪುಕ್ಕಲುತನದಿಂದ ಕೈಗೆ ಸಿಕ್ಕಿರುವ ಹಗೆಯನ್ನು ಬಿಟ್ಟುಬಿಡುವುದಕ್ಕೆ ನನಗೆ ಸ್ವಲ್ಪವೂ ಇಷ್ಟವಿಲ್ಲ. "

ರಾಮಯ—" ಪ್ರಹರೇಶ್ವರ ! ಅವನನ್ನು ಈಗ ಬಿಟ್ಟುಬಿಡುವುದು ನನಗೂ ಸಮ್ಮತವಿಲ್ಲ. ಈಗ ಒಂದು ಕೆಲಸಮಾಡು. ನೀನೂ ಅವನ ಬಳಿ ಮಲಗಿಕೊಂಡಿರು. ಅವನಿಗೆ ನಿದ್ರೆಹತ್ತಿದ ಕೂಡಲೆ, ರುದ್ರದೇವಾದಿಗಳು ವೇಷವನ್ನು ಮರೆಸಿಕೊಂಡು ಬಂದು, ಮೊದಲು ನಿನ್ನನ್ನು ಬಂಧಿಸಿ ಕೆಡವುವರು. ಬಳಿಕ ವಿಜಯಸಿಂಹನನ್ನು ಕಟ್ಟಿ ಹಿಡಿದುಕೊಂಡುಹೋಗಿ ಶೈವಮಠದಲ್ಲಿ ಕೊಂದುಬಿಡುವರು. ಹೀಗೆ ಮಾಡಿದರೆ, ಪ್ರಹರೇಶ್ವರನಿಗೆ ಆಗದವರು ಯಾರೋ ಬಂದು ಅವನನ್ನು ಕಟ್ಟಿಕೆಡವಿ ವಿಜಯಸಿಂಹನನ್ನು

ಹೊತ್ತುಕೊಂಡು ಹೋಗಿರುವರೆಂದು ಜನರು ನಂಬುವರು. ಯಾರಿಗೂ ಏನೂ ಅಪಾಯವಿರುವುದಿಲ್ಲ."

ರಾಮಯನ ಈ ಸೂಚನೆಗೆ ತಕ್ಕ ಪ್ರತಿಬಂಧಕವನ್ನು ತಂದು ಒಡ್ಡಲು ಮುಕ್ತಾಂಬೆಗೆ ತೋರಲಿಲ್ಲ. ಇಂತಹ ಸಂದರ್ಭದಲ್ಲಿ ಮಾತನಾಡಿದರೆ ತನ್ನಮೇಲೆಯೇ ಸಂಶಯಬರುವುದೆಂದು ಸುಮ್ಮನಾದಳು. ಆದುದರಿಂದ ರಾಮಯನು ಸೂಚಿಸಿದ್ದಂತೆಯೇ ನಿರ್ಣಯವಾಯಿತು.

ಬಳಿಕ ರಾಮಯಾದಿಗಳು ಆ ಸ್ಥಳವನ್ನು ಬಿಟ್ಟು ಅಗಲಿದರು. ಪ್ರಹರೇಶ್ವರನೂ ತನ್ನ ಶಯನಸ್ಥಳಕ್ಕೆ ಬಂದುಸೇರಿದನು.

ಪ್ರಹರೇಶ್ವರನು ತನ್ನಬಳಿಗೆ ಬಂದುದನ್ನು ಕಂಡು ವಿಜಯಸಿಂಹನು ಅವನನ್ನು ಕುರಿತು" ನೀವು ಹೋಗಿದ್ದ ಕೆಲಸವೇನಾಯಿತು? " ಎಂದು ಕೇಳಿದನು.

ಪ್ರಹರೇ—" ವಿಜಯಸಿಂಹ! ನಾನು ಆಸ್ಥಳಕ್ಕೆ ಹೋಗಿನೋಡಿದೆನು. ಅವರಲ್ಲಿ ಒಬ್ಬರಾದರೂ ಬಾರಲಿಲ್ಲ. ಆದುದರಿಂದ ಅವರ ಮನೆಗೇ ಹೋಗಿ ವಿಚಾರಿಸಲು, ಅವರೆಲ್ಲರೂ ಗ್ರಾಮಾಂತರಗಳಿಗೆ ಹೋಗಿರುವರೆಂದೂ ಇನ್ನು ಎರಡುಮೂರು ದಿನಗಳಿಗೆ ಹಿಂದಿರುಗಿ ಬರುವರೆಂದೂ ತಿಳಿಯಿತು. ನೀನೂ ಮತ್ತೊಂದುಬಾರಿ ಸಾವಕಾಶವಾಗಿ ಇಲ್ಲಿಗೆ ಬಂದರೆ, ರಾಜದ್ರೋಹಿಗಳೆಲ್ಲರನ್ನೂ ಸುಲಭವಾಗಿ ಹಿಡಿದುಬಿಡಬಹುದು. ಈಗ ಮಾತನಾಡಿ ಪ್ರಯೋಜನವೇನು ? ಅವರೆಲ್ಲರನ್ನೂ ಬಲೆಗೆಬೀಳಿಸುವ ಭಾರವು ನನ್ನದಾಗಿರಲಿ. ಈಗಾಗಲೇ ಬಹಳ ಹೊತ್ತಾಯಿತು. ಪಾಪ! ನೀನು ದಾರಿನಡೆದು ದಣಿದಿದೀಯೆ! ಸುಖವಾಗಿ ನಿದ್ದೆಮಾಡು. ನಾನೂ ಇಲ್ಲಿಯೇ ಮಲಗಿಕೊಳ್ಳುವೆನು."

ಪ್ರಹರೇಶ್ವರನ ಈ ಉಪಚಾರದ ಮಾತುಗಳಿಂದ ಸರಳಹೃದಯನಾದ ವಿಜಯಸಿಂಹನು ಅತ್ಯಾನಂದಭರಿತನಾದನು ; ಆದರೆ ಮುಕ್ತಾಂಬೆಯೊಡನೆ ಮಾತನಾಡುವುದಕ್ಕೆ ಅನುವು ದೊರೆಯಲಿಲ್ಲವಲ್ಲಾ ! ಎಂದು ವ್ಯಥೆಪಡುತ್ತಿದ್ದನು. ಹಾಗೆಯೇ ಯೋಚಿಸುತ್ತಾ ಮುಕ್ತಾಂಬೆಯ ವಿಷಯವಾಗಿ ಸಂಕಲ್ಪಪರಂಪರೆಗಳಿಂದ ಆಕಾಶಹರ್ಮ್ಯವನ್ನು ಕಟ್ಟಿ ಅದರಲ್ಲಿ ಸುಖಾನುಭವವನ್ನು ಪಟ್ಟುಕೊಳ್ಳುತ್ತಾ ಹಾಗೆಯೇ ನಿದ್ರಾವಶನಾದನು.

ಮುಕ್ತಾಂಬೆಯು ಆಲೋಚನಾಮಂದಿರವನ್ನು ಬಿಟ್ಟಕೂಡಲೆ ಅತ್ಯಂತವಿಚಾರಪರೀತಳಾಗಿ, ಸಂಕೇತಸ್ಥಳದಲ್ಲಿ ರಾಮರಾಜನನ್ನು ಕಂಡು "ಅಣ್ಣಾ! ಈ ಹೊತ್ತಿನ ಆಪತ್ತಿನಲ್ಲಿ ವಿಜಯಸಿಂಹರು ಉಳಿಯುವಂತೆ ತೋರುವುದಿಲ್ಲ. ಈ ವಿಪತ್ತನ್ನು ತಪ್ಪಿಸಬೇಕೆಂದು ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾದುವು. ಆದುದರಿಂದ ನನಗೆ ಬಹಳ ಶೋಕವುಂಟಾಗಿದೆ. ನೀನು ಮನಸ್ಸಿಟ್ಟಹೊರತು ವಿಜಯಸಿಂಹರನ್ನು ಉಳಿಸಿಕೊಳ್ಳುವುದು ಅಸಾಧ್ಯವೆಂದೇ ತೋರುತ್ತಿದೆ. ಇದಕ್ಕೆ ನೀನೇನು ಹೇಳುವೆ?"

ರಾಮರಾಜ— "ಸೋದರಿ! ನಾನು ಪ್ರಾಣಸಹಿತನಾಗಿರುವವರೆಗೂ ನೀನು ಹೆದರಬೇಕಾಗಿಲ್ಲ. ಯಾರಾದರೂ ವಿಜಯಸಿಂಹನನ್ನು ಬಾಧಿಸಬೇಕೆಂದು ಪ್ರಯತ್ನಿಸಿದರೆ ಅಂತಹವರನ್ನು ಈ ಕತ್ತಿಗೆ ಬಲಿಕೊಡುವೆನು." ಎಂದು ಧೈರ್ಯಹೇಳಿದನು.

ಮುಕ್ತಾಂಬೆ "ಸೋದರಾ! ಹೌದು, ನೀನೇನೋ ಬಲಶಾಲಿಯೇ; ಆದರೂ ಒಬ್ಬನು ಅನೇಕ ಬಲಶಾಲಿಗಳೊಡನೆ ಹಣಗಾಡುವುದು ಎಲ್ಲಿಯವರೆಗೆ ಸಾಧ್ಯ? ಈಗ ವಿಜಯಸಿಂಹರನ್ನು ಅಪಾಯದಿಂದ ತಪ್ಪಿಸುವುದು ಕರ್ತವ್ಯವಾಗಿರುವುದೇ ಹೊರತು ಶತ್ರುಮರ್ದನವಲ್ಲ. ಈ ರಾಜದ್ರೋಹಿಗಳೊಡನೆ ಯುದ್ಧಮಾಡುತ್ತನಿಂತರೆ ವಿಜಯಸಿಂಹರ ಪರಿಣಾಮವೇನಾಗುವುದು? ನಾನೇ ಈ ಕೆಲಸಕ್ಕೆ ಪ್ರತ್ಯಕ್ಷವಾಗಿ ಯತ್ನಿಸಿದರೆ ಮುಂದೆ ಅನೇಕ ಕಷ್ಟಗಳಾಗುವುವು. ನೀನು ಕೆಲವುಮಂದಿ ಸುಭಟರ ಸಹಾಯವನ್ನು ದೊರಕಿಸಿಕೊಂಡು ರಾಜದ್ರೋಹಿಗಳನ್ನು ಶಿಕ್ಷಿಸಲು ಯತ್ನಿಸಿದುದೇ ಆದರೆ, ಈಗಾಗಲೇ ಪ್ರಹರೇಶ್ವರನ ವಿಷಯದಲ್ಲಿ ರಾಯರಿಗೆ ಕಾಣಿಸಿಕೊಂಡಿರುವ ಸಂಶಯವು ಮತ್ತೂ ದೃಢವಾಗಿ ಬೇರೂರುವಂತಾಗುವುದು. ವಿಜಯಸಿಂಹರು ಶತ್ರುಗಳ ಕೈಗೆ ಸಿಕ್ಕುವುದಕ್ಕೆ ಮುಂಚೆ ಅವರನ್ನು ತಪ್ಪಿಸಿದರೆ ಪ್ರಹರೇಶ್ವರನಿಗೆ ಆಪದವು ಬರುವುದು. ಶತ್ರುಗಳ ಕೈಗೆ ಸಿಕ್ಕಿದಮೇಲೆ, ಶತ್ರುಗಳನ್ನು ಒಂದುವೇಳೆ ಶಿಕ್ಷಿಸಿದರೂ, ವಿಜಯಸಿಂಹರು ಅಪಾಯವಿಲ್ಲದೆ ಇರುವರೆಂಬ ನಂಬಿಕೆ ಅಷ್ಟೊಂದು ಇರಲಾರದು. ಶೈವಮಠಕ್ಕೆ ವಿಜಯಸಿಂಹರನ್ನು ಎತ್ತಿಕೊಂಡು ಹೋದಮೇಲೆ ನಿನ್ನ ಸಾಹಸದಿಂದ ಪ್ರಯೋಜನವಿಲ್ಲ. ಅದು

ದರಿಂದ ಯುದ್ಧಪ್ರಸಕ್ತಿಯಿಲ್ಲದೆಯೇ ಅವರನ್ನು ಬಿಡಿಸುವುದು ಮೇಲು. ನಿನ್ನೊಡನೆ ಆಪ್ತರು ಯಾರಾದರೂ ಬಂದಿರುವರೊ ? "

ರಾಮರಾಜ—" ತಂಗೀ ! ನನ್ನೊಡನೆ ನಾಲ್ವರು ಸೇವಕರು ಬಂದಿರುವರು. ಅವರನ್ನು ಈ ಊರಲ್ಲಿ ಒಂದು ಕಡೆ ನಿಲ್ಲಿಸಿ ಬಂದಿರುವೆನು. ಆದರೂ ಅವರು ಅಷ್ಟೇನು ಬಲಶಾಲಿಗಳಲ್ಲ. "

" ಸಹೋದರ ! ಸಾಮೋಪಾಯದಿಂದಲೇ ಕೆಲಸವನ್ನು ಮಾಡಿಕೊಳ್ಳಬಹುದಾಗಿರುವಾಗ ಬಲಶಾಲಿಗಳಿಂದ ಆಗಬೇಕಾಗಿರುವುದೇನು ? ಸ್ವಲ್ಪ ಧೈರ್ಯವನ್ನು ಅವಲಂಬಿಸಿದ್ದರೆ ಸಾಕು. ನೀನು ಅವರನ್ನು ಕರೆದುಕೊಂಡು ಹೋಗಿ ಶೈವಮಠಕ್ಕೆ ಹೋಗುವ ದಾರಿಯಲ್ಲಿ ಹೊಂಚುಹಾಕಿಕೊಂಡು ಕಾದಿದ್ದರೆ, ನಾನು ಆ ಮಾರ್ಗವಾಗಿ ಸ್ವಲ್ಪ ಹೊತ್ತಿನಲ್ಲಿಯೇ ಬರುವೆನು. ಮುಂದೆ ಮಾಡಬೇಕಾದ ಉಪಾಯಗಳನ್ನು ತಿಳಿಸುವೆನು. " ಎಂದು ಹೇಳಿ ಮುಕ್ತಾಂಬೆಯು ಅವನನ್ನು ಕಳುಹಿಸಿ ತನ್ನ ಕೊಟಡಿಯಲ್ಲಿ ಕಣ್ಣುಬಿಟ್ಟುಕೊಂಡು ಮಲಗಿದ್ದಳು.

ಸುಮಾರು ರಾತ್ರಿ ಎರಡು ಜಾವವಾಯಿತು. ಪುರನಿವಾಸಿಗಳೂ ದುರ್ಗರಕ್ಷಕಭಟರೂ ನಿದ್ರಾಸಕ್ತರಾದರು. ಪುರವೆಲ್ಲವೂ ನಿಶ್ಶಬ್ದಮಯವಾಗಿದ್ದಿತು. ಪ್ರಹರೇಶ್ವರನ ಮಂದಿರದಲ್ಲಿಯೂ ನಾಲ್ವರುವಿನಾ ಉಳಿದವರೆಲ್ಲರೂ ಗಾಢನಿದ್ರೆಯಿಂದ ಮೈಮರೆತಿದ್ದರು. ಈ ನಾಲ್ವರಲ್ಲಿ ಮುಕ್ತಾಂಬೆಯೊಬ್ಬಳು ಮುಂದಣ ಘಟನಾವಳಿಯನ್ನು ಪ್ರತೀಕ್ಷಿಸುತ್ತ ನಿಶ್ಶಬ್ದವಾಗಿ ಮಲಗಿದ್ದಳು. ಪ್ರಹರೇಶ್ವರನು ತನ್ನ ಸಂಗಡಿಗರು ಯಾವಾಗ ಬಂದಾರೋ ಎಂದು ತದೇಕಧ್ಯಾನದಲ್ಲಿದ್ದರೂ, ನಿದ್ದೆಯಿಂದ ಮೈಮರೆತು ಗೊರಕೆಹೊಡೆಯುತ್ತಿರುವಂತೆ ನಟಿಸುತಿದ್ದನು. ಉಳಿದವರು ಪ್ರಹರೇಶ್ವನ ಭಟರು. ಇವರು ಆತನ ಲಂಚದ ರುಚಿಯನ್ನು ಕಂಡಿದ್ದವರಾದುದರಿಂದ, ಕದ್ದು ಹಾಲುಕುಡಿದು ಬಂದಿರುವ ಬೆಕ್ಕಿನಂತೆ ಮೌನವಾಗಿ ಮಲಗಿಕೊಂಡಿದ್ದರು. ಇಷ್ಟರಲ್ಲಿ ಕೆಲವರು, ಪ್ರಹರೇಶ್ವರನ ಮನೆಯನ್ನು ಸದ್ದಿಲ್ಲದಂತೆ ಹೊಕ್ಕರು. ಎಚ್ಚರವಾಗಿದ್ದ ಪ್ರಹರೇಶ್ವರನ ಭಟರು ಅವರನ್ನು ಕಂಡಕೂಡಲೆ ಅವರಬಳಿಗೆ ಹೋಗಿ " ಇಷು ಹೊತ್ತು ಏಕೆ ? ಬನ್ನಿ !

ಬನ್ನಿ" ಎಂದು ಪಿಸುಗುಟ್ಟುತ್ತಾ ಅವರನ್ನು ಒಳಕ್ಕೆ ಕರೆದುಕೊಂಡು ಹೋದರು. ಬಳಿಕ ರಾಮಯನ ಅಪ್ಪಣೆಗೆ ಅನುಸಾರವಾಗಿ ರುದ್ರದೇವಾದಿಗಳು ನಿಮಿಷಮಾತ್ರದಲ್ಲಿ ಪ್ರಹರೇಶ್ವರನನ್ನು ಹೆಡಮುರಿಗಟ್ಟಿ ಕೆಡವಿದರು. ಆದರೂ ಎಳ್ಳು ಬಿದ್ದಷ್ಟು ಶಬ್ದವೂ ಆಗಲಿಲ್ಲ. ಇದಾದಮೇಲೆ ವಿಜಯಸಿಂಹನ ಸರದಿಯು ಬಂದಿತು. ರುದ್ರದೇವಾದಿಗಳು ವಿಜಯಸಿಂಹನಮೇಲೆ ಕೈಹಾಕಿದ ಕೂಡಲೆ ಅವನಿಗೆ ಎಚ್ಚರವಾಗಿ ಅವರಿಂದ ಬಿಡಿಸಿಕೊಳ್ಳಬೇಕೆಂದು ತನ್ನ ಕೈಯಲ್ಲಾದಮಟ್ಟಿಗೂ ಪ್ರಯತ್ನಿಸಿದನು. ಆದರೆ ದಾಂಡಿಗರಾದ ನಾಲ್ವರು ಕಟ್ಟಾಳುಗಳ ಮೇಲೆ ಒಬ್ಬನ ಸಾಹಸವು ಕೆಂದುವುದುಂಟೆ? ಅಂತಹ ವಿಷಮ ಸಮಯದಲ್ಲಿ ಪ್ರಹರೇಶ್ವರನಾದರೂ ಸಹಾಯಮಾಡುವನೆಂದು ಅವನು ಮಲಗಿದ್ದಕಡೆ ತಿರುಗಿನೋಡಲು, ಆಗಲೇ ಅವನಿಗೆ ಹೆಡಮುರಿಸೇವೆಯಾಗಿದ್ದಿತು. ರಾಜದ್ರೋಹಿಗಳು ತಮ್ಮಕೆಲಸವನ್ನು ಒಂದುಕ್ಷಣಕಾಲದಲ್ಲಿ ಮುಗಿಸಿಬಿಟ್ಟು ವಿಜಯಸಿಂಹನನ್ನೂ ಕಟ್ಟಿ ಉರುಳಿಸಿಬಿಟ್ಟರು. ಆಗ ಅವನು ಅವರನ್ನುನೋಡಿ "ನೀವು ಯಾರು?ನನ್ನನ್ನೇಕೆ ಕಟ್ಟಿಹಾಕಿರುವಿರಿ? ನನ್ನಿಂದ ನಿಮಗೆ ಆದ ಅಪರಾಧವೇನು? ಪ್ರಹರೇಶ್ವರನು ಮಾಡಿರುವ ತಪ್ಪೇನು?" ಎಂದು ಕೇಳಿದನು.

"ನಾವು ನಿಮ್ಮ ಪಾಲಿನ ಯಮದೂತರು. ಯಮರಾಜನಿಗೆ ಬಲಶಾಲಿಯಾದ ಒಬ್ಬ ದೂತನು ಈಗಲೇ ಬೇಕಾಗಿರುವನು. ನಿನ್ನನ್ನು ಆತನಲ್ಲಿಗೆ ಕಳುಹಿಸಿಕೊಡುತ್ತೇವೆ. ನೀನು ನಮಗೆ ಮಹಾಪರಾಧವನ್ನು ಮಾಡಿರುತ್ತೀಯೆ. ಮಂತ್ರಿಯನ್ನು ಕೊಲ್ಲಲು ಯತ್ನಿಸಿದಾಗ ಅಡ್ಡಬಂದು ನಮ್ಮ ಕೆಲಸವನ್ನು ಕೆಡಿಸಿದೆ; ನಮ್ಮನ್ನು ಕೊಲ್ಲುವುದಕ್ಕೂ ಯತ್ನಿಸಿದ್ದೆ. ಅದರ ಫಲವನ್ನು ಈಗ ಉಣ್ಣುವೆ! ನಿನ್ನಂತಹ ದುರಾತ್ಮನಿಗೆ ಆಶ್ರಯವನ್ನು ಕೊಟ್ಟ ಈ ಮುದುಕನಿಗೂ ನಿನಗಾಗುವ ಶಿಕ್ಷೆಯೇ ತಕ್ಕುದಾಗಿರುವುದು."

ವಿಜಯ—"ನನ್ನನ್ನು ಹಿಡಿಕೊಂಡು ಹೋಗಿ ನಿಮಗೆ ಬೇಕಾದುದನ್ನು ಮಾಡಿಕೊಳ್ಳಿ. ನನ್ನಮೇಲಣ ಮುಯ್ಯಿಗಾಗಿ ಪ್ರಹರೇಶ್ವರನನ್ನು ಹಿಂಸಿಸಬೇಡಿ. ಆತನು ನಿರಪರಾಧಿ; ಆತನನ್ನುಮಾತ್ರ ಬಿಡಿ."

ರುದ್ರ—"ನಿನ್ನಮಾತು ನಮ್ಮಕಿವಿಗೇ ಬೀಳುವುದಿಲ್ಲ; ನಮ್ಮ

ಕೈಗೆ ಸಿಕ್ಕಿದ ಹಗೆಗಳನ್ನು ಬಿಟ್ಟುಬಿಡಲಾರೆವು. ಎಲ್ಲಿ? ತಮ್ಮ ಮಂತ್ರಿಗಳವರನ್ನು ಕರೆಯಿಸಿ; ಅವರು ಇಲ್ಲಿಗೆ ದಯಮಾಡಿ ತಮ್ಮನ್ನು ಬಿಡಿಸಿಕೊಂಡುಬಿಡುವರು."

ವಿಜಯ—"ಹೇಡಿಗಳಾದ ದುರಾತ್ಮರುಗಳಿರಾ! ನಿಮ್ಮಂತಹ ಪುಕ್ಕಲರಾದ ದುಷ್ಟರಿಂದ ಬಿಡಿಸಿಕೊಳ್ಳುವುದಕ್ಕೆ ಮಂತ್ರಿಗಳು ಬರಬೇಕೆ? ನಿಮ್ಮ ವಿಚಾರಣೆಯನ್ನು ತೆಗೆದುಕೊಳ್ಳುವುದಕ್ಕೆ ನಾನೊಬ್ಬನೇ ಸಾಕು. ನಿಮ್ಮಲ್ಲಿ ಶೂರತನವು ಎಳ್ಳಷ್ಟಾದರೂ ಇದ್ದರೆ, ಎಲ್ಲಿ? ನೋಡೋಣ! ನನಗೊಂದು ಕತ್ತಿಯನ್ನು ಕೊಟ್ಟು ನಿಲ್ಲಿ. ನಿದ್ದೆಯಲ್ಲಿದ್ದವರ ಮೇಲೆ ಹೇಡಿಗಳಂತೆ ಬಿದ್ದು ಕೈಕಾಲುಗಳನ್ನು ಕಟ್ಟಿ ವೀರಾಲಾಪಗಳನ್ನಾಡುತ್ತಿರುವ ನಿಮಗೆ ನಾಚಿಕೆ ಎಂಬುದೇ ತಿಳಿದಿಲ್ಲವಲ್ಲಾ! ನಿಮ್ಮ ಬಾಳನ್ನು ಸುಡಬೇಕು!"

ರುದ್ರ—"ನಿನ್ನ ಪ್ರಗಲ್ಭವಚನಗಳೆಲ್ಲವನ್ನೂ ಒಂದು ಗಂಟುಕಟ್ಟಿ ದೂರವಾಗಿ ಎಸೆದುಬಿಡು. ನಿನ್ನ ಪೌರುಷವಾಕ್ಯಗಳಿಂದ ಕ್ರುದ್ಧರಾಗಿ ನಿನ್ನ ಕೈಗೆ ಕತ್ತಿಯನ್ನು ಕೊಟ್ಟುಬಿಡುವೆವೆಂದು ನೀನು ನಂಬಿರಬಹುದು. ನಾವು ವೀರಧರ್ಮವನ್ನು ಕಟ್ಟಿಕೊಂಡು ಆಳಬೇಕೆಂದಿಲ್ಲ. ನಿನ್ನ ಮೇಲೆ ಮುಯ್ಯಿ ತೀರಿಸಿಕೊಳ್ಳುವುದೊಂದೇ ನಮಗೆಪರಮೋದ್ದೇಶವಾಗಿದೆ; ಆದುದರಿಂದ ಅಂತಹ ಭ್ರಮೆಗಳಿಗೆ ಅವಕಾಶಕೊಡಬೇಡ."

ವಿಜಯ—"ನಾನು ಸಾವಿಗೆ ಹೆದರುವೆನೆಂದು ತಿಳಿದಿರುವಿರೇನು? ಸಾವಿನ ಭಯವು ನಿಮ್ಮಂತಹ ಹೇಡಿಗಳಿಗೆ ಇರುವುದೇ ಹೊರತು ಇತರರಿಗೆ ಇರುವುದಿಲ್ಲ. ಒಂದುವೇಳೆ ಭಯಪಟ್ಟಮಾತ್ರದಿಂದ ಸಾವು ತಪ್ಪಿಹೋಗುವುದೇ? ಈದಿನ ನಾನು ಸಾಯಬಹುದು; ನಾಳೆ ನಿಮ್ಮ ಸರದಿಯು ಬಂದೇ ಬರುವುದು. ಎಂದಾದರೂ ಸಾಯಲೇಬೇಕಾಗಿರುವಾಗ ಒಂದು ದಿನ ಮುಂದಾಗಿ ಸಾಯುವುದಕ್ಕೆ ಹೆದರಿಕೆ ಏಕೆ?"

ರಾಮಯ—"ನಿನ್ನ ವೇದಾಂತಗಳಿಗೆ ನಮ್ಮ ಮನಸ್ಸು ಸಿಲುಕಲಾರದು; ನಿನ್ನ ಬಲವನ್ನು ಈ ಕಟ್ಟುಗಳು ಕಟ್ಟಿಹಾಕಿವೆ; ನಿನ್ನ ಹರಟೆಗಳನ್ನು ಈ ಬಟ್ಟೆಯು ತಡೆದುಬಿಡುವುದು" ಎಂದು ತನ್ನ ಬಂಟರ ಕಡೆಗೆ ನೋಡಲು ಅವರು ವಿಜಯಸಿಂಹನ ಬಾಯಿಗೆ ಆ ಬಟ್ಟೆಯನ್ನು ಗಿಡಿದು ಬಿಟ್ಟರು.

ಕಾಯಕವಾಚಕವ್ಯಾಪಾರಗಳಿಗೆ ತಡೆಯನ್ನು ಕಲ್ಪಿಸಬಹುದು; ಮಾನಸಿಕಪ್ರವೃತ್ತಿಗೆ ನಿರೋಧವನ್ನುಂಟುಮಾಡುವುದಕ್ಕೆ ಮನುಷ್ಯನಿಂದ ಸಾಧ್ಯವಲ್ಲ. ವಿಜಯಸಿಂಹನು ಈ ಅವಸ್ಥೆಯಲ್ಲಿದ್ದಾಗ ಅವನ ಮನಃಪ್ರವೃತ್ತಿಯು ಸ್ವೇಚ್ಛೆಯಾಗಿ ವರ್ತಿಸತೊಡಗಿತು. ಹಿಂದೆ ಅಷ್ಟು ಹಿತಚಿಂತಕನಂತೆ ತೋರ್ಪಡಿಸಿಕೊಂಡಿದ್ದ ದುರ್ಬುದ್ಧಿಯು, ಆಪತ್ಕಾಲದಲ್ಲಿ ತಲೆಮರೆಸಿಕೊಳ್ಳುವ ಕಪಟಸ್ನೇಹಿತನಂತೆ, ತಲೆದೋರಿಸದೆ ಹೋಯಿತು. ಮುಕ್ತಾಂಬೆಯ ಮಾತುಗಳನ್ನು ಮೀರಿದುದರಿಂದ ತನಗೆ ಸಂಭವಿಸಿದ್ದ ಆಪತ್ತಿಗಾಗಿ ಪಶ್ಚಾತ್ತಾಪಪಟ್ಟುಕೊಂಡು ತನ್ನ ಮೂರ್ಖತನವೇ ತನ್ನ ಸರ್ವನಾಶಕ್ಕೆ ಕಾರಣವಾಯಿತೆಂದು ಅವನು ತಿಳಿದುಕೊಂಡನು. ಸ್ವಯಂಕೃತಾಪರಾಧದ ದುಷ್ಪರಿಣಾಮವನ್ನು ಅನುಭವಿಸುವಾಗ ಉಂಟಾಗುವ ದುಃಖಾನುಭವವು ಪ್ರಾರಂಭವಾಯಿತು. ಇಷ್ಟರಲ್ಲಿ ರಾಜದ್ರೋಹಿಗಳು ವಿಜಯಸಿಂಹನನ್ನು ಶೈವಮಠಕ್ಕೆ ಹೊತ್ತುಕೊಂಡು ಹೋಗಲು ಉದ್ಯುಕ್ತರಾದರು.

ಈ ಸಂಗತಿಗಳು ನಡೆದಕಾಲದಲ್ಲಿ ಶೈವಮಠವು ಶಿಥಿಲವಾಗಿದ್ದರೂ, ಆಂಧ್ರದೇಶದಲ್ಲಿ ಶೈವಮತವು ಪ್ರಬಲವಾಗಿದ್ದಾಗ ಮಠವು ಅತ್ಯಂತವೈಭವಕ್ಕೆ ಆಶ್ರಯಸ್ಥಾನವಾಗಿದ್ದಿತು. ಯಾವ ಮಂದಿರವು ಒಂದಾನೊಂದು ಕಾಲದಲ್ಲಿ ಶೈವಾಗಮಜ್ಞರ ಶಾಸ್ತ್ರವಿಚಾರಗಳಿಗೂ, ಶೈವಪೂಜಾಸಂವಿಧಾನ ಕೋಲಾಹಲಗಳಿಗೂ ಶೈವಪುರಾಣಕಥನಗಳಿಗೂ ಆಸರೆಯಾಗಿದ್ದಿತೋ ಅದೇ ಮಂದಿರವು ಕಾಲಮಾಹಾತ್ಮ್ಯದಿಂದ ಈಗ ಬಹು ಕಂಟಕಾವೃತಗಳಾದ ತರುಲತೆಗಳಿಗೂ, ಮೂಷಿಕಾದಿ ಕ್ಷುದ್ರಜಂತುಗಳಿಗೂ, ಘೂಕಜಂಬುಕಾದಿಗಳ ಭಯಂಕರವಾದ ಕೂಗುಗಳಿಗೂ ಆಕರವಾಗಿದ್ದಿತು. ಇಂತಹ ನಿರ್ಜನವಾದ, ಭಯಂಕರಸ್ಥಳದಲ್ಲಿ ತಮ್ಮ ಕೆಲಸವನ್ನು ಕೈಗೂಡಿಸಿಕೊಳ್ಳಬೇಕೆಂದು ಅವರು ವಿಜಯಸಿಂಹನನ್ನು ಹೊತ್ತುಕೊಂಡು ಬಂದಿದ್ದರು. ರಾಮಯ್ಯನು ಇತರರನ್ನು ಸಂಬೋಧಿಸಿ "ಇನ್ನು ನಿರಾತಂಕವಾಗಿ ನಿಮ್ಮ ಹಗೆಯನ್ನು ಚಿತ್ರವಿಚಿತ್ರವಾಗಿ ಪೀಡಿಸಿ ಕೊಂದುಬಿಡಿ" ಎಂಬುದಾಗಿ ಹೇಳಿದನು. ರಾಮಯ್ಯನ ಸಂಗಡಿಗರು ಅತ್ಯಂತಹರ್ಷಿತರಾಗಿ ವಿಜಯಸಿಂಹನ ಸುತ್ತಲೂ ನಿಂತು ಪೀಡಿಸಲಾರಂಭಿಸಿದರು. ಅವರುಗಳಲ್ಲಿ

ಅತ್ಯಂತ ಕಠಿನಹೃದಯನಾದ ರುದ್ರದೇವನು ಮಿಕ್ಕವರನ್ನು ಕುರಿತು ಈ ದುರಾತ್ಮನನ್ನು ಒಂದೇ ಏಟಿಗೆ ಕೊಲ್ಲಬಾರದು ; ಗಳಿಗೆಗೆ ಒಂದೊಂದರಂತೆ ಇವನ ಅವಯವಗಳನ್ನು ಕಡಿದುಹಾಕೋಣ " ಎಂದು ಹೇಳಿದನು. ರುದ್ರದೇವನ ಬಾಯಿಂದ ಈ ಮಾತುಗಳು ಹೊರಡುವಷ್ಟರಲ್ಲೇ—" ಅಯ್ಯಯ್ಯೋ! ಸತ್ತೆ ! ಈ ಕಳ್ಳರು ನನ್ನನ್ನು ಕೊಲ್ಲುತ್ತಿರುವರಲ್ಲಾ ! ರಾಮಯ ! ನೀವು ನನ್ನನ್ನು ಹೀಗೆ ಕೈಬಿಡಬಹುದೇ ! ರುದ್ರದೇವ ! ನೀನು ನನ್ನನ್ನು ಪ್ರೀತಿಸುವುದು ಹೀಗೇಯೋ ? ಅಯ್ಯೋ! ನನಗೆ ಯಾ...ದುಗತಿ ! '' ಎಂಬ ಆರ್ತಧ್ವನಿಯು ಕರ್ಣಕಠೋರವಾಗಿ ಅನತಿದೂರದಲ್ಲೇ ಕೇಳಬಂದಿತು. ಈ ಧ್ವನಿಯು ಯಾರದೆಂಬುದು, ಅಲ್ಲಿದ್ದವರೆಲ್ಲರಿಗೂ ತತ್‌ಕ್ಷಣವೇ ಗೊತ್ತಾಗಿ ಹೋದುದರಿಂದ, ರಾಮಯರುದ್ರದೇವಾದಿಗಳು ಭಯಭ್ರಾಂತರಾಗಿ, ಶಬ್ದವು ಕೇಳಬಂದಕಡೆಗೆ ಹೊರಟರು. ವಿಜಯಸಿಂಹನ ಕಾವಲಿಗೆ ಇಬ್ಬರು ಆಳುಗಳು ಮಾತ್ರ ಅಲ್ಲಿಯೇ ನಿಂತಿದ್ದರು. ಉಳಿದವರು ಆ ಗಾಢಾಂಧಕಾರಮಯವಾದ ರಾತ್ರಿಯಲ್ಲಿ ಮುಕ್ತಾಂಬೆಯಿದ್ದ ಸ್ಥಳಕ್ಕೆ ಹೋಗಿಸೇರಲು ಸ್ವಲ್ಪ ಸಾವಕಾಶವಾಯಿತು. ಮುಕ್ತಾಂಬೆಯನ್ನು ಬಿಡಿಸಿಕೊಳ್ಳುವುದಕ್ಕಾಗಿ ಯಾರೋ ಓಡಿಬರುತ್ತಿರುವ ಶಬ್ದವನ್ನು ಕೇಳಿದಕೂಡಲೆ, ಆಕೆಯನ್ನು ಹಿಡಿದುಕೊಂಡು ಬಂದಿದ್ದವರು ಆಕೆಯನ್ನು ಬಿಟ್ಟು ತಲೆತಪ್ಪಿಸಿಕೊಂಡು ಓಡಿಹೋದರು. ಇಷ್ಟುಹೊತ್ತಿಗೆ ರಾಮಯಾದಿಗಳು ಮುಕ್ತಾಂಬೆಯ ಬಳಿಗೆ ಬಂದು, ಆಕೆಯ ಕೈಕಾಲುಗಳಿಗೆ ಬಿಗಿದಿದ್ದ ಕಟ್ಟುಗಳನ್ನು ಬಿಡಿಸಿ, ಆಕೆಯನ್ನು ಸಂತೈಸಿದರು. ಸ್ವಲ್ಪ ಶಾಂತವಾದ ಬಳಿಕ ರಾಮಯನು ಮುಕ್ತಾಂಬೆಯನ್ನು ಕುರಿತು "ರಾಜಪುತ್ರಿ! ನಿನಗೆ ಇಂತಹ ಕಷ್ಟವು ಪ್ರಾಪ್ತವಾದುದಕ್ಕಾಗಿ ವ್ಯಸನಪಡುತ್ತಿದೇನೆ. ಆ ದುರಾತ್ಮರಿಂದ ನಿನಗೆ ಗಾಯಗಳೇನೂ ಆಗಲಿಲ್ಲವಷ್ಟೆ ? ಆ ನೀಚರು ಯಾರು ? " ಎಂದು ಕೇಳಿದನು.

ಮುಕ್ತಾಂಬೆ—" ದೈವಾನುಗ್ರಹದಿಂದ ನನಗೆ ಗಾಯಗಳೇನೂ ಆಗಿಲ್ಲ. ಆ ದುರಾತ್ಮರು ಯಾರೋ ತಿಳಿಯದು. ಅವರು ನನ್ನನ್ನು ಹೊತ್ತು ತರುತ್ತಿದ್ದಾಗ ವಿಜಯಸಿಂಹನ ಹೆಸರನ್ನೆತ್ತಿದುದರಿಂದ ಆತನ ಸ್ನೇಹಿತರಾಗಿರಬಹುದೆಂದು ಕಾಣುವುದು. ಮನೆಯಲ್ಲಿ ಪ್ರಹರೇಶ್ವರನನ್ನು ಯಾರೋ

ಕಟ್ಟಿ ಉರುಳಿಸಿರುವರು. ಆಳುಗಳೆಲ್ಲರೂ ಮಾಯವಾಗಿರುವರು. ಹೀಗಿರುವಾಗ ಅರಕ್ಷಿತಳಾಗಿದ್ದ ನನ್ನನ್ನು ಯಾರೋ ದುರಾತ್ಮರು ಕಟ್ಟಿಹಾಕಿ, ಬಾಯಿಗೆ ಬಟ್ಟೆಯನ್ನು ತುರುಕಿ ಹೊತ್ತುತಂದು ಇಲ್ಲಿ ಇಳಿಸಿದರು. ಬಾಯಿಯ ಬಟ್ಟೆಯನ್ನು ತೆಗೆದಕೂಡಲೆ ನಿರಾಶಳಾಗಿ ಅರಚಿಕೊಂಡೆನು. ನನ್ನ ಅದೃಷ್ಟವು ಗಟ್ಟಿಯಾಗಿದ್ದಿತೆಂದು ತೋರುವುದು. ಇಲ್ಲದಿದ್ದರೆ ನನ್ನ ಈ ಕಷ್ಟದಲ್ಲಿ ನೀವು ಬಂದು ಬಿಡಿಸಿಕೊಳ್ಳುತ್ತಿರಲಿಲ್ಲ. ವಿಜಯಸಿಂಹನನ್ನು ವಧಿಸಿಬಿಟ್ಟಿರಷ್ಟೆ! ಮುಂಚೆ ಈ ಶುಭವರ್ತಮಾನವನ್ನು ತಿಳಿಸಿ.''

ರಾಮಯ್ಯ—"ತಾಯಿ! ಅವನನ್ನು ಕೊಲ್ಲಬೇಕೆಂದಿರುವಷ್ಟರಲ್ಲಿ ನಿನ್ನ ಆರ್ತಧ್ವನಿಯನ್ನು ಕೇಳಿ ಓಡಿಬಂದೆವು. ಆ ಧ್ವನಿಯನ್ನು ನೆನೆದುಕೊಂಡರೆ ಈಗಲೂ ಭಯವಾಗುವುದು. ಬಾ. ಈಗಲೇಹೋಗಿ ಆ ದುರಾತ್ಮನಾದ ವಿಜಯಸಿಂಹನನ್ನು ಕೊಲ್ಲಿಸೋಣ" ಎಂದುಹೇಳಿ ಆಕೆಯನ್ನೂ ಜೊತೆಯಲ್ಲಿ ಕರೆದುಕೊಂಡು ಅವರು ಹೊರಟರು.

ಅವರು ವಿಜಯಸಿಂಹನನ್ನು ಕಟ್ಟಿ ಉರುಳಿಸಿದ್ದ ಸ್ಥಳಕ್ಕೆ ಬಂದು ನೋಡಲಾಗಿ ಅಲ್ಲಿ, ಅವನಿಗೆ ಕಟ್ಟಿದ್ದ ಹಗ್ಗಗಳು ತುಂಡುತುಂಡಾಗಿ ಇದ್ದುವೇ ಹೊರತು ವಿಜಯಸಿಂಹನು ಇರಲಿಲ್ಲ; ಅವನ ಮೇಲೆ ಕಾವಲಿದ್ದ ಇಬ್ಬರು ಆಳುಗಳೂ ಇರಲಿಲ್ಲ. ಸ್ವಲ್ಪದೂರದಲ್ಲಿ ಇಬ್ಬರು ಮನುಷ್ಯರ ಶವಗಳು ಬಿದ್ದಿದ್ದುವು. ದೀಪದ ಬೆಳಕನ್ನು ಹಿಡಿದು ನೋಡಲಾಗಿ ಅವು ಕಾವಲುಗಾರರ ಹೆಣಗಳೆಂದು ಗೊತ್ತಾದುದಲ್ಲದೆ ವಿಜಯಸಿಂಹನನ್ನು ಅವನ ಹಿತಚಿಂತಕರು ಬಿಡಿಸಿಕೊಂಡು ಹೋದರೆಂದೂ ಸ್ಪಷ್ಟವಾಯಿತು. ಇನ್ನು ವ್ಯಸನಪಟ್ಟು ಫಲವಿಲ್ಲವೆಂದು ತಿಳಿದು, ರಾಮಯ್ಯನು ತನ್ನ ಸಂಗಡಿಗರನ್ನು ಸಮಾಧಾನಪಡಿಸಿ ಅವರೊಡನೆ ಪ್ರಹರೇಶ್ವರನ ಮನೆಗೆ ಬಂದನು. ರಾಮಯ್ಯನನ್ನು ಕಂಡಕೂಡಲೆ ಪ್ರಹರೇಶ್ವರನು ಆನಂದದಿಂದ—"ವಿಜಯಸಿಂಹನು ಸತ್ತನಷ್ಟೆ?" ಎಂದು ಕೇಳಿದನು. ರಾಮಯ್ಯನು ಪ್ರಹರೇಶ್ವರನ ಬಂಧನಗಳನ್ನು ಬಿಡಿಸಿ ನಡೆದ ಘಟನಾವಳಿಯೆಲ್ಲವನ್ನೂ ತಿಳಿಸಲಾಗಿ ಪ್ರಹರೇಶ್ವರನಿಗೆ ಅತ್ಯಂತ ವ್ಯಸನವಾಯಿತು. ಪ್ರಹರೇಶ್ವರನೂ, ರುದ್ರದೇವನೂ, ಮುಕ್ತಾಂಬೆಗೆ ಅಪಾಯವನ್ನು ತಂದವರು ವಿಜಯಸಿಂಹನ ಕಡೆಯವರೆಂದೇ ನಿರ್ಧರಿಸಿದರು.

ಅಂತಹ ಶತ್ರುವು ಪುನಃ ಉಳಿದುಕೊಂಡನಲ್ಲಾ ಎಂದು ಅವರ ವ್ಯಸನವು ಮಿತಿಮೀರಿತು. ವಿಜಯಸಿಂಹನು ಧರಿಸಿದ್ದ ಆಭರಣಗಳಲ್ಲಿ ರಾಯರು ಅವನಿಗೆ ಕೊಟ್ಟಿದ್ದ ಪದಕವನ್ನು ಪ್ರಹರೇಶ್ವರನು ತೆಗೆದುಕೊಂಡು, ರುದ್ರದೇವನನ್ನು ಕುರಿತು "ಇಗೋ! ನಿನಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಪದಕವನ್ನು ಆ ದುರ್ಮಾರ್ಗಿಯು ಅಪಹರಿಸಿದ್ದನು. ಈಗಲಾದರೂ ಅದು ನ್ಯಾಯವಾದ ಭಾಧ್ಯಸ್ಥನಿಗೆ ದೊರೆಯಿತಲ್ಲಾ ಎಂದು ಸಂತೋಷವಾಯಿತು. ಇದನ್ನು ಧರಿಸು" ಎಂದು ಹೇಳಿ ಕೊಟ್ಟನು. ಉಳಿದ ಆಭರಣಗಳನ್ನೂ ಇತರರಿಗೆ ವಿನಿಯೋಗಮಾಡಿದನು. ಆ ರೀತಿಯಲ್ಲಿ ಆದ ಆಶಾಭಂಗವನ್ನು ಮನಸ್ಸಿನಲ್ಲಿಡಬೇಕಾಗಿಲ್ಲವೆಂತಲೂ, ವಿಜಯಸಿಂಹನು ಮತ್ತೊಂದು ವೇಳೆ ತಮ್ಮ ಕೈಗೆ ಸಿಕ್ಕದೆ ಇರಲಾರನೆಂತಲೂ ರಾಮಯನು ಸಮಾಧಾನ ಮಾಡಿದನು. ಆ ಬಳಿಕ ಅವರೆಲ್ಲರೂ ತಮ್ಮತಮ್ಮ ನಿವಾಸಸ್ಥಾನಗಳಿಗೆ ಹೋಗಿ ರಾತ್ರಿಯನ್ನು ಕಳೆದರು.

ಒಂಬತ್ತನೆಯ ಪ್ರಕರಣ.

ಹುಚ್ಚ ; ಕೋತಿ.

ಕ್ವಚಿತ್ ಪೃಥ್ವೀಶಯ್ಯಃ ಕ್ವಚಿದಪಿ ಚ ಪರ್ಯಂಕಶಯನಃ |
ಕ್ವಚಿತ್ ಶಾಕಾಹಾರಃ ಕ್ವಚಿದಪಿ ಚ ಶಾಲ್ಯೋದನರುಚಿಃ ||
ಕ್ವಚಿತ್ ಕಂಥಾಧಾರೀ ಕ್ವಚಿದಪಿ ಚ ದಿವ್ಯಾಂಬರಧರೋ |
ಮನಸ್ವೀ ಕಾರ್ಯಾರ್ಥೀ ಗಣಯತಿ ನ ದುಃಖಂ ನ ಚ ಸುಖಂ ||

ಭರ್ತೃಹರಿ

ಸೂರ್ಯನು ಮೂಡಲಿನಲ್ಲಿ ತಲೆದೋರಿದನು. ಎಳಬಿಸಿಲು ಎಲ್ಲ ದಿಕ್ಕುಗಳಲ್ಲಿಯೂ ಹರಡಿಕೊಳ್ಳುತ್ತಿದ್ದಿತು. ಸೋಮಾರಿಗಳಲ್ಲದವರೆಲ್ಲರೂ ತಮ್ಮತಮ್ಮ ಕೆಲಸಗಳನ್ನು ಪ್ರಾರಂಭಿಸುತ್ತಿದ್ದರು. ಈ ಸಮಯದಲ್ಲಿ ವಿಜಯನಗರದ ರಾಜಬೀದಿಯಲ್ಲಿ, ಹಿಂದೆ ನಮಗೆ ಪರಿಚಿತನಾದ ಹುಚ್ಚ ಸು

ಒಂದು ಮರದಕೆಳಗೆ ಕುಳಿತುಕೊಂಡು ಮನಸ್ಸಿಗೆ ತೋರಿದಂತೆ ಹರಟೆ ಕೊಳ್ಳುತ್ತಲೂ, ಚೇಷ್ಟೆಗಳನ್ನು ಮಾಡುತ್ತಲೂ ಕಾಲಕಳೆಯುತ್ತಿದ್ದನು. ಅವನು ಈಹೊತ್ತು ತನ್ನ ಸಹಾಯಕ್ಕಾಗಿ ಒಂದು ಕೋತಿಯನ್ನೂ ತಂದು ಕೊಂಡಿದ್ದನು. ಸಾಮಾನ್ಯವಾಗಿ ಕೋತಿಯ ಚೇಷ್ಟೆಗಳೇ ಮನುಷ್ಯರಿಗೆ ನಗೆಹುಟ್ಟಿಸಲು ಸಾಕಾಗಿರುವುವು; ಕೋತಿಯ ಜೊತೆಗೆ ಹುಚ್ಚನೂ ಚೇಷ್ಟೆಮಾಡತೊಡಗಿದರೆ ನೋಡುವವರಿಗೆ ವಿನೋದವು ಮತ್ತೂ ಹೆಚ್ಚುವು ದೆಂದು ಹೇಳಬೇಕಾದುದೇನು? ಮೊದಲು ಈ ಹುಚ್ಚನು ಸ್ವಲ್ಪಮಟ್ಟಿಗೆ ರೂಪವಂತನಾಗಿದ್ದರೂ, ಈಗ ತನ್ನಮುಖಕ್ಕೆ ಮಸಿಯನ್ನು ಬಳದುಕೊಂಡು ವಿರೂಪವಾಗಿ ಕಾಣಿಸುತ್ತಿದ್ದನು. ಈ ವೇಷವನ್ನು ಹಾಕಿಕೊಂಡಿದ್ದ ಹುಚ್ಚ ನನ್ನು ನೋಡುವುದಕ್ಕೆ ಹುಡುಗರು ಗುಂಪುಸೇರಿ, ಕೋತಿಯ ಮೇಲೂ ಹುಚ್ಚನ ಮೇಲೂ ಸಣ್ಣಕಲ್ಲುಗಳನ್ನು ಎಸೆಯತೊಡಗಿದರು. ಕಲ್ಲುಗಳ ಏಟುಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಕೋತಿಯು ಅತ್ತಿತ್ತ ನೆಗೆದಾಡುತ್ತಿ ದ್ದಿತು. ಹುಚ್ಚನೂ ಕೋತಿಗಿಂತ ಹೆಚ್ಚಾಗಿ ಹಾರಾಡುತ್ತಾ, ವಿಕಟವಾಗಿ ಕೇಕೆ ಹಾಕುತ್ತಿದ್ದನು. ಈ ವಿನೋದವನ್ನು ಕಂಡು ಬಾಲಕರು ಚಪ್ಪಾಳೆ ಹೊಡೆಯುತ್ತಾ ನಗುತ್ತಿದ್ದರು. ಹೀಗೆ ಕೆಲವು ಕಾಲವನ್ನು ಕಳೆದ ಬಳಿಕ ಹುಚ್ಚನು ಹೊರಟು, ರಾಜಮಂದಿರದ ಬಳಿಗೆ ಬಂದನು. ರಾಜದ್ವಾರದಲ್ಲಿ ಕಾದಿದ್ದ ಭಟರು ಹುಡುಗರನ್ನು ಮುಂದಕ್ಕೆ ಬರಗೊಡಿಸಲಿಲ್ಲ. ಹುಚ್ಚನಾ ದರೋ ಯಾರಅಡ್ಡಿಯೂ ಇಲ್ಲದೆ ನೆಟ್ಟಗೆ ಅಂತಃಪುರದ ಕಡೆಗೆ ಹೊರಟನು. ಈಗಲೂ ಅವನನ್ನು ಯಾರೂ ತಡೆಯಲಿಲ್ಲ. ಅಲ್ಲಿ ಪಟ್ಟದರಾಣಿಯವರ ಮಹಲಿಗೆ ಹೋಗಿ ಅವರಮುಂದೆ ಕೋತಿಯನ್ನು ಬಹು ವಿನೋದಕರವಾಗಿ ಆಡಿಸಿ ರಾಣಿಯವರನ್ನು ಮೆಚ್ಚಿಸಿದನು. ಅನಂತರ ಅನ್ನಪೂರ್ಣ ದೇವಿಯರ ಮಂದಿರಕ್ಕೆ ಹೋಗಿ ಅಲ್ಲಿಯೂ ಹೀಗೆಯೇ ವಿನೋದವನ್ನುಂಟುಮಾಡಿ ಅಲ್ಲಿಂದ ತಿರುಮಲ ದೇವಿಯರ ಮಹಲಿಗೆ ಬಂದನು. ಅಲ್ಲಿ ದೇವಿಯರೂ ಆಕೆಯ ಭೃತ್ಯನಿವಹವೂ ಹುಚ್ಚನ ವಿನೋದಗಳಿಂದ ಬಹಳ ಸಂತೋಷ ಪಟ್ಟು, ಅವನಿಗೂ ಅವನ ಕೋತಿಗೂ ಕೆಲವು ಹಣ್ಣುಗಳನ್ನು ಕೊಟ್ಟರು.

ೞ ಬಳಿಕ ಹುಚ್ಚನು ತನ್ನ ಕೋತಿಯನ್ನು ಕರೆದುಕೊಂಡು ಅಸಂಗ ಸೇನ್ನೆಯ ಮಂದಿರಕ್ಕೆ ಹೊರಟನು. ವಿವಾಹಿತಳಾದ ಭಾರ್ಯೆಯಲ್ಲದಿದ್ದರೂ

ಆಕೆಯನ್ನು ಕೃಷ್ಣದೇವರಾಯರು ಬಹಳ ಪ್ರೇಮದಿಂದ ಕಾಣುತ್ತಿದ್ದರು. ಕುಲದಲ್ಲಿ ನೀಚಳಾಗಿದ್ದರೂ ತನ್ನ ಸದ್ಗುಣಗಳಿಂದಲೂ ದೇಹಸೌಂದರ್ಯದಿಂದಲೂ, ಸತ್ಕುಲಪ್ರಸೂತರಾದ ಯುವತಿಯರನ್ನು ಮೀರಿಸುತ್ತಿದ್ದುದರಿಂದ, ಆಕೆಯಲ್ಲಿ ರಸಿಕರಾದ ಕೃಷ್ಣದೇವರಾಯರೂ ಗೌರವಪ್ರೇಮಗಳನ್ನು ಇಟ್ಟಿದ್ದರು. ಅನಂಗಸೇನೆಯು ತನ್ನ ಅನನ್ಯಸಾಧಾರಣವಾದ ಪತಿಭಕ್ತಿಯಿಂದಲೂ ಪ್ರೇಮದಿಂದಲೂ ಕೃಷ್ಣದೇವರಾಯರಿಗೆ ಸಂತೋಷಪಡಿಸುತ್ತಿದ್ದಳು. ಪಟ್ಟದರಾಣಿಯವರ ವಿಷಯದಲ್ಲಿಯೂ ಆಕೆಯು ಹೆಚ್ಚಾದ ಭಕ್ತಿಯಿಂದಲೂ ನಮ್ರತೆಯಿಂದಲೂ ನಡೆದುಕೊಳ್ಳುತ್ತಿದ್ದುದರಿಂದ ಆ ರಾಣಿಯವರಿಗೂ ಆಕೆಯ ವಿಷಯದಲ್ಲಿ ಸಪತ್ನೀಭಾವವು ಹೋಗಿ ಸೋದರೀಭಾವವು ನೆಲೆಸಿದ್ದಿತು.

ಅನಂಗಸೇನೆಗೆ ಕೋತಿ ಮೊದಲಾದ ಪ್ರಾಣಿಗಳ ಆಟದಲ್ಲಿ ಬಹಳ ಆಸಕ್ತಿಯಿದ್ದಿತು. ಆಕೆಯು ಹುಚ್ಚನನ್ನು ಪ್ರೋತ್ಸಾಹಿಸಿ ಕೋತಿಯಿಂದ ಬಗೆಬಗೆಯ ಆಟಗಳನ್ನು ಆಡಿಸಿದಳು; ಅಷ್ಟುಮಾತ್ರದಿಂದ ತೃಪ್ತಳಾಗದೆ ತಾನೇ ಆಡಿಸಬೇಕೆಂದು ಪ್ರಯತ್ನಿಸಿ ಕೋತಿಗೆ ಸಮೀಪವಾಗಿಯೇ ಹಣ್ಣನ್ನು ತೋರಿಸುತ್ತಾ ಅದನ್ನು ತೆಗೆದುಕೊಳ್ಳುವುದಕ್ಕೆ ಕೈನೀಡಿದಾಗ ತಟ್ಟನೆ ಕೈಯನ್ನು ಹಿಂದಕ್ಕೆ ಎಳೆದುಕೊಳ್ಳುತ್ತಾ ವಿನೋದಪಡುತ್ತಿದ್ದಳು. ಆಕೆಯ ಕೈಯಲ್ಲಿದ್ದ ಹಣ್ಣನ್ನು ಕಿತ್ತುಕೊಳ್ಳುವ ಸಾಮರ್ಥ್ಯವು ಕೋತಿಗಿದ್ದರೂ ಆ ಹುಚ್ಚನು ಅದಕ್ಕೆ ಹಣ್ಣನ್ನು ಕಿತ್ತುಕೊಳ್ಳಲು ಅವಕಾಶ ಕೊಡುತ್ತಿರಲಿಲ್ಲ. ಹೀಗೆ ಅನೇಕವೇಳೆ ತನ್ನ ಪ್ರಯತ್ನಗಳು ನಿಷ್ಫಲವಾದುದರಿಂದ ಕೋತಿಗೆ ಕೋಪವು ಬಂದಿದ್ದಿತು. ಇನ್ನೊಂದುಸಾರಿ ಅನಂಗಸೇನೆಯು ಪೂರ್ವದಂತೆ ಹಣ್ಣನ್ನು ತೋರಿಸಿದಾಗ ಅದು ಸುಮ್ಮನೆ ಇದ್ದಿತು. ಇದನ್ನು ಕಂಡು ಅನಂಗಸೇನೆಯು ಕೈಯನ್ನು ಇನ್ನೂ ಮುಂದಕ್ಕೆ ನೀಡಲು ಕೋತಿಯು ಆಕೆಯ ಕೈಯನ್ನೇ ಹಿಡಿದುಕೊಂಡಿತು. ಈ ಸಮಯಕ್ಕೆ ಸರಿಯಾಗಿ ಕೋತಿಗೆ ಕಟ್ಟಿದ್ದ ದಾರವು ಹುಚ್ಚನ ಕೈಯಿಂದ ಜಾರಿಹೋಯಿತು. ಈಗ ಕೋತಿಗೆ ಅಡ್ಡಿಯೇನೂ ಇಲ್ಲದೆ ಆಕೆಯ ಕೈಯನ್ನು ಹಿಡಿದು ತೂಗಾಡುತ್ತ ಹಣ್ಣನ್ನು ತನ್ನ ಬಾಯಿಂದ ಕಿತ್ತುಕೊಳ್ಳಲು ಯತ್ನಿಸುತ್ತಿದ್ದಿತು. ಅನಂಗಸೇನೆಗೆ ಹೆದರಿಕೆಯುಂಟಾಗಿ ತನ್ನ ಕೈಯನ್ನು ಒದರಿದಳು; ಆದರೂ ಕಪಿಯು

ತನ್ನ ಹಿಡಿತವನ್ನು ಸಡಿಲಿಸಲಿಲ್ಲ. ಆಕೆಯು ಹಣ್ಣನ್ನು ಕೆಳಗೆ ಎಸೆದುಬಿಟ್ಟಿದ್ದರೆ ಕೋತಿಯು ತನ್ನ ಹಿಡಿತವನ್ನು ಬಿಡುತ್ತಿದ್ದಿತಾದರೂ ಆಕೆಗೆ ಅಷ್ಟು ಮಟ್ಟಿಗೆ ಸಮಯಸ್ಫೂರ್ತಿ ಇರಲಿಲ್ಲವಾದುದರಿಂದ, ದಿಕ್ಕುತೋರದೆ ಓಡ ತೊಡಗಿದಳು. ಆಗ ಕೋತಿಯು ತನ್ನ ಹಿಡಿತವನ್ನು ಮತ್ತೂ ಹೆಚ್ಚಿಸಿತು. ಹುಚ್ಚನು ಪಕಪಕನೆ ನಗುತ್ತ ಸುಮ್ಮನೆ ಒಂದುಕಡೆ ನಿಂತುಕೊಂಡಿದ್ದನು. ಕೋತಿಯ ಹಾವಳಿಯಿಂದ ಆಕೆಯನ್ನು ತಪ್ಪಿಸುವುದಕ್ಕೆ ಅಲ್ಲಿದ್ದ ಸೇವಕಿಯರಿಗೂ ಧೈರ್ಯವಿರಲಿಲ್ಲ. ಸ್ವಲ್ಪದೂರ ಓಡಿದಕೂಡಲೇ, ಅನಂಗಸೇನೆಯು ಧರಿಸಿದ್ದ ಆಭರಣಗಳಲ್ಲಿ ಕೆಲವು ನೆಲದಮೇಲೆ ಉದಿರಬೀಳತೊಡಗಿದುವು ಇಷ್ಟರಲ್ಲಿ ಅನಂಗಸೇನೆಯು ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ತನ್ನ ಕೈಯನ್ನು ಕೊಡಹಲು ಕೋತಿಯು ದೊಪ್ಪನೆ ಕೆಳಕ್ಕೆ ಬಿದ್ದಿತು. ಕೂಡಲೇ ಹುಚ್ಚನು ಮುಂದಕ್ಕೆ ನುಗ್ಗಿ ಅದನ್ನು ಹಿಡಿದುಕೊಂಡು ತನ್ನಪಾಡಿಗೆ ತಾನು ಹೊರಟುಹೋದನು.

ತಮ್ಮ ಒಡತಿಯನ್ನು ಕೋತಿಯು ಬಿಟ್ಟಕೂಡಲೇ ಸೇವಕಿಯರಿಗೆ ಕರ್ತವ್ಯಜ್ಞಾನವು ಅಂಕುರಿಸಿ, ನೆಲದಮೇಲೆ ಬಿದ್ದಿದ್ದ ಆಭರಣಗಳನ್ನು ಅವರು ಹುಡುಕತೊಡಗಿದರು. ಕಡೆಗೆ, ಒಂದು ವಜ್ರದ ಉಂಗುರಹೊರತಾಗಿ ಮಿಕ್ಕ ಒಡವೆಗಳೆಲ್ಲಾ ಸಿಕ್ಕಿದುವು. ಈ ವಜ್ರದ ಉಂಗುರವನ್ನೂ ಇದೇ ತರಹದ ಮತ್ತೊಂದನ್ನೂ ಕೃಷ್ಣದೇವರಾಯರು ವಿಶೇಶವರ್ತಕರಿಂದ ಬಹಳ ಹಣಕೊಟ್ಟು ಕೊಂಡುಕೊಂಡು, ಒಂದಾನೊಂದು ಸಮಯದಲ್ಲಿ ಅವುಗಳಲ್ಲಿ ಒಂದನ್ನು ಅನಂಗಸೇನೆಗೆ ಕೊಟ್ಟಿದ್ದರು. ಆಕೆಯು ತನ್ನ ಉಳಿದ ಎಲ್ಲಾ ಆಭರಣಗಳಿಗಿಂತಲೂ ಇವನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದಳು. ಆದುದರಿಂದ ಈ ಉಂಗುರವು ಸಿಕ್ಕದೆಹೋಗಲು ಹುಚ್ಚನು ಕದ್ದುಕೊಂಡು ಹೋಗುತ್ತಿರಬಹುದೆಂದು ನೆನೆಸಿ ಅವನನ್ನು ಹಿಂದಕ್ಕೆ ಕರೆಯಿಸಿದಳು. ಅವನು ಹುಚ್ಚುಹುಚ್ಚಾಗಿ ಹಾಡುಗಳನ್ನು ಹೇಳಿಕೊಳ್ಳುತ್ತಾ ಕೂಡಲೇ ಹಿಂದಿರುಗಿ ಬಂದನು. ಉಂಗುರವನ್ನು ಆ ಕೋತಿಯು ತನ್ನ ಕೈಯಲ್ಲೇ ಹಿಡಿದುಕೊಂಡು ತಿರುಗಿಸಿ ತಿರುಗಿಸಿ ನೋಡುತ್ತಾ, ಒಂದೊಂದುಬಾರಿ ವಜ್ರವನ್ನು ಹಲ್ಲಿನಿಂದ ಕಡಿಯುತ್ತಿದ್ದಿತು. ಅನಂಗಸೇನೆಯು ಅದನ್ನು ಬಿಡಿಸಿಕೊಳ್ಳುವುದಕ್ಕಾಗಿ ಕೋತಿಯಕಡೆಗೆ ಒಂದು ಹಣ್ಣನ್ನು

ಎಸೆಯಲು ಅದು ಆ ಉಂಗುರವನ್ನು ಕೆಳಗೆಹಾಕಿ ಹಣ್ಣನ್ನು ತೆಗೆದುಕೊಂಡಿತು. ಆಗ ಅನಂಗಸೇನೆಯು ಸಂತೋಷದಿಂದ ಆ ಉಂಗುರವನ್ನು ತೆಗೆದುಕೊಂಡು ತನ್ನ ಬೆರಳಿಗೆ ಇಟ್ಟುಕೊಂಡಳು.

ಹುಚ್ಚನು ತನ್ನ ಕೋತಿಯನ್ನು ಕರೆದುಕೊಂಡು ಬೀದಿಗೆ ಬಂದ ಕೂಡಲೆ ಅವನಿಗಾಗಿ ಕಾದಿದ್ದ ಪೋಲಿಹುಡುಗರು ಚಪ್ಪಾಳೆ ಹಾಕುತ್ತಾ ಅವನ ಹಿಂದೆಹಿಂದೆ ಹೋಗುತ್ತಿದ್ದರು. ಹೀಗೆ ಸ್ವಲ್ಪದೂರ ಹೋಗಲಾಗಿ, ಗಣಗಣ ಎಂದು ಕಿರುಗಂಟೆಗಳನ್ನು ಧ್ವನಿಮಾಡುತ್ತ ಒಂದು ಬಸವನು ಆ ಮಾರ್ಗವಾಗಿ ಬರುತ್ತಿದ್ದುದು ಕಂಡುಬಂದಿತು. ಅದರ ಬಿಳುಮೈಯನ್ನೂ ಅಂದವಾದ ಕೊಂಬುಗಳನ್ನೂ ಮುದ್ದಾದ ಮುಖವನ್ನೂ ನೋಡಿದರೆ ಬಹಳ ಸಂತೋಷವಾಗುವಂತಿದ್ದಿತು. ಹುಚ್ಚನ ಹಿಂದೆ ಬರುತ್ತಿದ್ದ ಹುಡುಗರ ಗುಂಪನ್ನೂ ಅವರು ಮಾಡುತ್ತಿದ್ದ ಗಲಿಬಿಲಿಯನ್ನೂ ಕಂಡು ಆ ಗೂಳಿಯು ತನ್ನ ಕಿವಿಗಳನ್ನು ನೆಟ್ಟಗೆ ಮಾಡಿಕೊಂಡು ಬಾಲವನ್ನು ಅಲ್ಲಾಡಿಸುತ್ತ ಗುಟರೆಹಾಕಿತು. ಇಷ್ಟರಲ್ಲಿ ಹುಚ್ಚನೂ ಅವನ ಹಿಂದೆ ಇದ್ದ ಹುಡುಗರೂ ಸಮೀಪವಾದರು. ಹುಡುಗರಲ್ಲಿ ತುಂಟನಾದವನೊಬ್ಬನು ತಾನು ಹೊದೆದುಕೊಂಡಿದ್ದ ಕೆಂಪುಬಣ್ಣದ ರೇಷ್ಮೆಯ ವಸ್ತ್ರವನ್ನು ಗೂಳಿಯ ಕಡೆಗೆ ಎಸೆದುದರಿಂದ ಗೂಳಿಯು ಗುಟರೆಹಾಕುತ್ತಾ ಆ ಜನರ ಗುಂಪಿನ ಮೇಲೆ ನುಗ್ಗಿತು ಇಷ್ಟರಲ್ಲಿ, ವಕ್ರವಕ್ರವಾಗಿ ಮುಸಿಯನ್ನು ಬಳೆದುಕೊಂಡಿದ್ದ ಹುಚ್ಚನೂ ಕೋತಿಯೂ ದೃಷ್ಟಿಗೆ ಬೀಳಲಾಗಿ, ಗೂಳಿಗೆ ಮತ್ತೂ ಹೆದರಿಕೆ ಹೆಚ್ಚಿತು. ಕೋತಿಯು ಪ್ರಾಣಭಯದಿಂದ ಹಾರಾಡುತ್ತ ತನಗೆ ಕಟ್ಟಿದ್ದ ಹುರಿಯನ್ನು ಕಿತ್ತುಹಾಕಿಕೊಂಡು ಸಮೀಪದಲ್ಲಿದ್ದ ಒಂದು ಮರವನ್ನು ಹತ್ತಿತು. ಹುಚ್ಚನಿಗೆ ಮಾತ್ರ ತಪ್ಪಿಸಿಕೊಳ್ಳಲು ಅವಕಾಶ ಸಿಕ್ಕದೆ ಅವನು ಓಡಲಾರಂಭಿಸಿದನು. ಗೂಳಿಯು ಅವನನ್ನು ತರುಬಿಕೊಂಡು ಹೋಗುತ್ತಿದ್ದಿತು. ಹುಚ್ಚನು ಸತ್ತನೆಂದು ಕೂಗಿಕೊಳ್ಳುತ್ತಾ ಜನರು ಹಿಂದೆಹಿಂದೆ ಹೋಗುತ್ತಿದ್ದರೇ ಹೊರತು ಅವನನ್ನು ಬಿಡಿಸಿಕೊಳ್ಳುವುದಕ್ಕೆ ಒಬ್ಬನಾದರೂ ಪ್ರಯತ್ನಿಸಲಿಲ್ಲ. ಕಡೆಗೆ ಹುಚ್ಚನು ಮುಂದಕ್ಕೆ ಓಡಲು ಶಕ್ತಿಯಿಲ್ಲದೆ ಕೆಳಗೆ ಬಿದ್ದುಬಿಟ್ಟನು. ಗೂಳಿಯು ರೌದ್ರಾವೇಶದಿಂದ ಅವನನ್ನು ತಿವಿಯುವುದಕ್ಕೆ ತನ್ನ ಕೊಂಬುಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಿತು.

ಇಷ್ಟರಲ್ಲಿ ಆ ಗುಂಪಿನಲ್ಲಿದ್ದ ಧೈರ್ಯಶಾಲಿಯೊಬ್ಬನು ಒಂದು ಕೋಲಿನಿಂದ ಗೂಳಿಗೆ ಬಲವಾಗಿ ಕೆಲವು ಏಟುಗಳನ್ನು ಹಾಕಲು ಅದಕ್ಕೆ ಹೆದರಿಕೆಯುಂಟಾಗಿ ಹುಚ್ಚನನ್ನು ಬಿಟ್ಟು ಓಡಿಹೋಯಿತು. ಆದುದರಿಂದ ಹುಚ್ಚನಿಗೆ ಬಂದಿದ್ದ ಆಪತ್ತು ತಪ್ಪಿತು. ಈ ಸಾಹಸಕೃತ್ಯವನ್ನು ಮಾಡಿದಾತನು ಇಂತಹವನೆಂದು ವಾಚಕರು ಊಹಿಸಲಾರರಲ್ಲವೆ? ಈತನು ವಿಜಯಸಿಂಹನೇ ಹೊರತು ಮತ್ತೆ ಯಾರೂ ಅಲ್ಲ. ಜನರು ವಿಜಯಸಿಂಹನ ಧೈರ್ಯವನ್ನು ಹೊಗಳಿಕೊಳ್ಳುತ್ತಾ ತಮ್ಮ ತಮ್ಮ ಕೆಲಸಗಳಿಗೆ ಹೊರಟುಹೋದರು. ಹುಚ್ಚನು ತನ್ನ ಕೋತಿಯನ್ನು ಹಿಡಿದುಕೊಂಡು ಸುಮ್ಮನೆ ಹೊರಟುಹೋಗುತ್ತಿದ್ದನು. ಅಷ್ಟರಲ್ಲಿ ಒಬ್ಬ ವೃದ್ಧನು ಬಂದು "ನಿನಗೆ ಉಪಕಾರಮಾಡಿದವನಿಗೆ ಏನಾದರೂ ಪ್ರತ್ಯುಪಕಾರಮಾಡದೆ ಹೀಗೆ ಸುಮ್ಮನೆ ಹೊರಟುಹೋಗುವುದು ಸರಿಯೇ?" ಎಂದು ಕೇಳಲು ಹುಚ್ಚನು ತನ್ನ ಕೈಯಲ್ಲಿಟ್ಟುಕೊಂಡಿದ್ದ ಒಂದು ಉಂಗುರವನ್ನು ವಿಜಯಸಿಂಹನಿಗಾಗಿ ಕೊಟ್ಟುಬಿಟ್ಟು ತನ್ನ ದಾರಿಯನ್ನು ಹಿಡಿದನು. ಆ ವೃದ್ಧನು ವಿಜಯಸಿಂಹನ ಬಳಿಗೆ ಓಡುತ್ತ ಬಂದು "ಅಯ್ಯಾ ಮಹನೀಯನೇ! ನೀನು ಆ ಹುಚ್ಚನಿಗೆ ಮಾಡಿದ ಉಪಕಾರಕ್ಕೋಸ್ಕರ ಅವನು ನಿನಗೆ ತನ್ನ ಕೃತಜ್ಞತೆಯನ್ನು ತೋರಿಸಲು, ಈ ಉಂಗುರವನ್ನು ಕೊಟ್ಟುಕಳುಹಿಸಿರುವನು" ಎಂದು ಹೇಳಿ ಬಲಾತ್ಕಾರದಿಂದ ಅದನ್ನು ಅವನ ಬೆರಳಿಗೆ ಇಟ್ಟು ಹೊರಟುಹೋದನು. ವಿಜಯಸಿಂಹನೂ ಮನಸ್ಸಿಲ್ಲದೆ ಆ ಉಂಗುರವನ್ನು ಧರಿಸಿಕೊಂಡು, ತನ್ನ ಕೆಲಸಕ್ಕೆ ಹೋದನು.

ಹತ್ತನೆಯ ಪ್ರಕರಣ.

ಅವಧಾನಿಯವರು

"ಕಾರ್ಯೇ ಕರ್ಮಣಿ ನಿರ್ದಿಷ್ಟೇ ಯೋ ಬಹೂನ್ಯಪಿ ಸಾಧಯೇತ್ |
ಪೂರ್ವಕಾರ್ಯಾವಿರೋಧೇನ ಸ ಕಾರ್ಯಂ ಕರ್ತುಮರ್ಹತಿ ||"

ಶ್ರೀಮದ್ರಾಮಾಯಣ V. ೪೧. ೫.

ಸಾಧಾರಣವಾಗಿ ಮನಸ್ಸಿಗೆ ಏಕಾಗ್ರತೆಯುಂಟಾಗುವುದು ಬಹಳ ಕಷ್ಟ; ಬಹು ಕಾಲ ಅಭ್ಯಾಸಮಾಡಿದ ಹೊರತು ಚಿತ್ತೈಕಾಗ್ರತೆಯುಂಟಾಗುವುದಿಲ್ಲ. ಅಭ್ಯಾಸ ಮಾಡಿದವರೆಲ್ಲರಿಗೂ ಇದು ಉಂಟಾಗುವುದೆಂದೂ ಹೇಳುವುದಕ್ಕೆ ಆಗದು. ಚಿತ್ತಸ್ಥೈರ್ಯವಿಲ್ಲದವರು ಒಂದು ಕಡೆ ನಿಲ್ಲದೆ, ಒಂದು ಕೆಲಸವನ್ನೂ ಪಟ್ಟಾಗಿ ಹಿಡಿಯದೆ, ಯಾವ ಕೆಲಸವನ್ನೂ ಪೂರ್ತಿಗೊಳಿಸದೆ ಕ್ಷಣಕ್ಷಣಕ್ಕೂ ಒಂದೊಂದು ಕಡೆ ನುಗ್ಗಿ, ಕ್ಷಣಕ್ಷಣಕ್ಕೂ ಒಂದೊಂದು ಕೆಲಸಕ್ಕೆ ಕೈಹಾಕುತ್ತಿರುವರು. ವಿಶೇಷವಾಗಿ ಚಿತ್ತಚಾಂಚಲ್ಯವಿರುವವರು ಉನ್ಮತ್ತರೆನಿಸಿಕೊಳ್ಳುವರು. ಇಂತಹವರಿಗೆ ಸಾಧಾರಣವಾಗಿ ಲೋಕಜ್ಞಾನವಾಗಲಿ, ನಿದ್ರಾಭಯತ್ರಪಾದಿಗಳಾಗಲಿ, ದೇಹಾಭಿಮಾನವಾಗಲಿ ಇರುವುದು ಅಪೂರ್ವ. ಕೆಲವರು ಕೇವಲ ಜ್ಞಾನಹೀನರಾಗಿಲ್ಲದಿದ್ದರೂ ಸಿಕ್ಕಿದವರೊಡನೆಲ್ಲಾ ಪೂರ್ವೋತ್ತರಸಂದರ್ಭಗಳಿಗೆ ಲಕ್ಷ್ಯಮಾಡದೆ ವಿಪರೀತವಾಗಿ ಹರಟುತ್ತಾ ವಿಕಟಹಾಸವನ್ನು ಮಾಡುತ್ತಾ ಇರುವರು. ಇಂತಹವರು ಹುಚ್ಚರಲ್ಲಿ ಎರಡನೆಯ ತರಗತಿಯವರೆನ್ನಬಹುದು. ವಿಜಯನಗರದಲ್ಲಿ ಅಲೆದಾಡುತ್ತಿದ್ದ ಹುಚ್ಚನು ಒಂದೊಂದು ಬಾರಿ ವಸ್ತ್ರಗಳನ್ನು ಧರಿಸಿಯೂ, ಒಂದೊಂದು ಸಾರಿ ವಸ್ತ್ರವಿಹೀನನಾಗಿಯೂ, ಕೆಲವು ವೇಳೆಗಳಲ್ಲಿ ಸಮಂಜಸವಾಗಿ ಮಾತನಾಡುತ್ತಲೂ, ಮತ್ತೆ ಕೆಲವು ಸಮಯಗಳಲ್ಲಿ ಅಸಂಬದ್ಧಪ್ರಲಾಪಗಳನ್ನು ಮಾಡುತ್ತಲೂ ತಿರುಗುತ್ತಿದ್ದನು. ಸಾಮಾನ್ಯವಾಗಿ, ಆತನ ಚಿತ್ತವೈಕಲ್ಯವು ಪರ್ವದಿನಗಳಲ್ಲಿ ಉಲ್ಬಣಾವಸ್ಥೆಯಲ್ಲಿರುತ್ತಿದ್ದಿತು. ಇಂತಹ ಸಮಯಗಳಲ್ಲಿಯೂ ಕೂಡ ಅವನು ಯಾರನ್ನೂ ಬಾಧಿಸುತ್ತಿರಲಿಲ್ಲ. ಇದನ್ನು ಕಂಡು ಹುಡುಗರು ಅವನನ್ನು ಸಿಕ್ಕಿದಂತೆ ಕಾಡುತ್ತಿದ್ದರು. ಅವನು ದಿನದಿನಕ್ಕೆ ಒಂದೊಂದು ವೇಷವನ್ನು ಹಾಕುತ್ತಾ ಹುಡುಗರಿಗೆ

ವಿನೋದವನ್ನು ಹೆಚ್ಚಿಸುತ್ತಿದ್ದನು. ವೇಷವನ್ನು ಧರಿಸುವುದಕ್ಕೆ ಹುಚ್ಚನಿಗೆ ಬಹಳ ಪ್ರಯಾಸವೂ ಇರುತ್ತಿರಲಿಲ್ಲ. ಅವನ ಅಭಿಪ್ರಾಯವು ತಿಳಿದ ಕೂಡಲೆ ಹುಡುಗರು ತಕ್ಕ ಸಾಮಗ್ರಿಗಳನ್ನು ಒದಗಿಸಿಬಿಡುತ್ತಿದ್ದರು. ಒಂದುದಿನ ಶುದ್ಧಶ್ರೋತ್ರಿಯನ ವೇಷವನ್ನು ಹಾಕಿಕೊಳ್ಳುವನೆಂಬ ಸೂಚನೆಯು ತೋರಿದಕೂಡಲೆ ಒಬ್ಬ ಹುಡುಗನು ತನ್ನ ಮನೆಯಿಂದ ಹಳೆಯ ಮಡಿಪಂಚೆಗಳನ್ನೂ, ಇನ್ನೊಬ್ಬನು ವಿಭೂತಿಯನ್ನೂ, ಮತ್ತೊಬ್ಬನು ರುದ್ರಾಕ್ಷಮಾಲೆಯನ್ನೂ ತಂದು ಒದಗಿಸುತ್ತಿದ್ದರು. ಒಬ್ಬನು ಹಳೆಯ ಗೋಣಿಚೀಲವನ್ನು ತಂದು ಹರಿದು ದರ್ಭಾಸನವನ್ನು ಏರ್ಪಡಿಸುತ್ತಿದ್ದನು. ಇನ್ನೊಬ್ಬನು ಉಳಿದ ಪರಿಕರಗಳನ್ನು ತಕ್ಕಹಾಗೆ ಅಳವಡಿಸುತ್ತಿದ್ದನು. ಶ್ರೋತ್ರಿಯನಿಗೆ ತಕ್ಕ ಸ್ವಚ್ಛಭಾಷೆಯೂ ಹುಚ್ಚನಿಗಿದ್ದಿತು. ದಿಗಂಬರನಾಗಿದ್ದ ಹುಚ್ಚನು ಹೀಗೆ ಅತ್ಯಲ್ಪಕಾಲದಲ್ಲಿಯೇ ಹದಿನಾರು ಆಣೆಯ ಶ್ರೋತ್ರಿಯನಾಗಿ ಮಾರ್ಪಡುತ್ತಿದ್ದನು. ಹುಡುಗರು ತಮ್ಮ ಹುಡುಗಾಟಿಕೆಯನ್ನು ಕಂಡು ತಾವೇ ಹಿಗ್ಗಿಹೋಗುತ್ತಿದ್ದರು.

ಒಂದುದಿನ ಈ ಹುಚ್ಚನು ಶ್ರೋತ್ರಿಯವೇಷವನ್ನು ಧರಿಸಿ ವಿಜಯನಗರದಲ್ಲಿ ಸುತ್ತುತ್ತಲಿದ್ದನು ; ಎಲ್ಲಿಗೆ ಬೇಕಾದರೂ ಹೋಗಲು ಇವನಿಗೆ ಅವಕಾಶವಿದ್ದುದರಿಂದ, ಮೊದಲು ಅರಮನೆಯ ಕಡೆಗೆ ಹೊರಟನು. ಅಲ್ಲಿ ಸ್ವಲ್ಪಹೊತ್ತು ವಿನೋದವನ್ನುಂಟುಮಾಡಿ ಬಳಿಕ ಮಂತ್ರಿಸದನವನ್ನು ಪ್ರವೇಶಿಸಿದನು. ಹುಚ್ಚನಾದರೂ ಇವನಲ್ಲಿ ಒಂದು ಜಾಣತನವಿದ್ದಿತು : ಇವನು ಯಾರಮನೆಯನ್ನು ಹೊಕ್ಕರೂ ಆಯಾ ಗೃಹಪತಿಗಳು ಕಾರ್ಯನಿಮಗ್ನರಾಗಿದ್ದರೆ ಅವರ ಕೆಲಸವೆಲ್ಲವೂ ಮುಗಿಯುವ ವರೆಗೆ ಕಾದಿದ್ದು ಬಳಿಕ ತನ್ನ "ಕಂತೆಯಪುರಾಣ" ವನ್ನು ಮೊದಲು ಮಾಡುತ್ತಿದ್ದನು ಲೋಕಜ್ಞಾನಶೂನ್ಯನೂ, ಲಾಭನಷ್ಟವಿವೇಕಹೀನನೂ ಆದ ಈ ಹುಚ್ಚನು ಇದಿರಿಗಿದ್ದರೂ, ಗೃಹಪತಿಗಳು ತಾವು ನಿರತರಾಗಿದ್ದ ಕಾರ್ಯಗಳನ್ನಾಗಲಿ, ಸಂಭಾಷಣೆಗಳನ್ನಾಗಲಿ ನಿಲ್ಲಿಸುತ್ತಿರಲಿಲ್ಲ. ಈಗ ಕೇಳಿದ ಮಾತನ್ನು ಉತ್ತರಕ್ಷಣದಲ್ಲಿಯೇ ಮರೆತುಬಿಡುವ ಹುಚ್ಚನು ಅವರ ರಹಸ್ಯವನ್ನು ಕಟ್ಟಿಕೊಂಡು ಏನುಮಾಡುವನು ? ಒಂದುವೇಳೆ ತಿಳಿದುಕೊಂಡರೂ ಇತರರಲ್ಲಿ ಇವನು ಹೇಳಿದರೆ, ಇವನ ಉನ್ಮತ್ತಪ್ರಲಾಪಕ್ಕೆ ಯಾರು ಲಕ್ಷ್ಯಮಾಡು

ವರು ? ಎಂದು ಗೃಹಪತಿಗಳು ಭಾವಿಸುತ್ತಿದ್ದರು. ಇವನು ಮಂತ್ರಿಭವನಕ್ಕೆ ಬಂದಾಗ ಮಂತ್ರಿಯು ಸಂಭಾಷಣೆಯಲ್ಲಿ ಮಗ್ನನಾಗಿದ್ದುದರಿಂದ ಹುಚ್ಚನು ಯಾವುದೋ ಒಂದು ಮಂತ್ರವನ್ನು ಜಪಿಸಿಕೊಳ್ಳುತ್ತಾ, ರುದ್ರಾಕ್ಷಮಾಲೆಯನ್ನು ತಿರುಗಿಸುತ್ತಾ ಕುಳಿತುಕೊಂಡಿದ್ದನು.

ಈ ಮಧ್ಯದಲ್ಲಿ ತಿಮ್ಮರಸನಿಗೂ ಆತನ ಇದಿರಿಗಿದ್ದ ರಾಮರಾಜನಿಗೂ ಹೀಗೆ ಸಂಭಾಷಣೆಯು ನಡೆಯುತ್ತಿದ್ದಿತು :—

ತಿಮ್ಮರಸ—"ರಾಮರಾಜ! ನೀನು ಆನೆಗೊಂದಿಗೆ ಹೋಗಿದ್ದ ಕೆಲಸವೇನಾಯಿತು ?"

ರಾಮರಾಜ—"ಪ್ರಭುಗಳ ಅಪ್ಪಣೆಯನ್ನು ಶಿರಸಾವಹಿಸಿ ಸಂಜೆಯ ಹೊತ್ತಿಗೆ ರಾಜಮಂದಿರವನ್ನು ಹೊಕ್ಕೆನು. ಮುಕ್ತಾಂಬೆಯು ಅಷ್ಟು ಹೊತ್ತಿಗೆ ಸರಿಯಾಗಿ ನನ್ನ ಪುಣ್ಯವಶದಿಂದ ಕಣ್ಣಿಗೆ ಬಿದ್ದಳು."

ತಿಮ್ಮ—"ಅದರಿಂದ ಆದ ಪ್ರಯೋಜನವೇನು ? ರಾಜದ್ರೋಹಿಗಳಲ್ಲಿ ಅವಳೂ ಸೇರಿಯೇ ಇರುವಳು."

ರಾಮ—"ಶಿವಶಿವ ! ತಾವು ಹಾಗೆ ಭಾವಿಸಲಾಗದು. ಆಕೆಯ ಸಹವಾಸಿಗಳನ್ನು ಕಂಡು ಆಕೆಯನ್ನು ರಾಜದ್ರೋಹಿಗಳಲ್ಲಿ ಎಣಿಸಬಾರದು. ನಿಂಬವೃಕ್ಷಕದಂಬದಲ್ಲಿ ಸಹಕಾರವೃಕ್ಷವೂ ಇರಬಹುದಲ್ಲವೆ ? ಹಾಗೆ ಇದ್ದ ಮಾತ್ರದಿಂದಲೇ ಸಹಕಾರದ ಸಹಜಗುಣವು ಮಾರ್ಪಡುವುದೇ ? ಮುಕ್ತಾಂಬೆಯು ನಿರ್ದುಷ್ಟಗುಣಸಮನ್ವಿತಳು. ಆಕೆಯ ಪ್ರವರ್ತನೆಗಳನ್ನು ಚೆನ್ನಾಗಿ ಪರೀಕ್ಷಿಸಿದರೆ ಆಕೆಯನ್ನು ಎಷ್ಟುಮಾತ್ರಕ್ಕೂ ರಾಜದ್ರೋಹಿಯೆನ್ನಲಾರಿರಿ."

ತಿಮ್ಮ—"ಹಾಗಾದರೆ, ನೀನು ಆನೆಗೊಂದಿಯಲ್ಲಿ ಕಂಡು ಕೇಳಿದುದರಿಂದ ನಿನಗೆ ಏನುತೋರುವುದು ?"

ರಾಮ—"ಸ್ವಾಮಿ ! ಪೂರ್ವದಿಂದಲೂ ನನಗೆ ಮುಕ್ತಾಂಬೆಯ ಪರಿಚಯವಿದ್ದುದರಿಂದ ಆಕೆಯ ಸಹಾಯವನ್ನು ಸುಲಭವಾಗಿ ಪಡೆದುಕೊಂಡು ಪ್ರಹರೇಶ್ವರಪಾತ್ರಾದಿಗಳ ಗುಪ್ತಸಂಭಾಷಣೆಗಳನ್ನು ಹೊಂಚಿ ಕೇಳಲು ತಕ್ಕ ಅನುಕೂಲ್ಯಗಳನ್ನು ಪಡೆದುಕೊಂಡೆನು. ಒಂದಾನೊಂದು ಸಮಯದಲ್ಲಿ ಪ್ರಹರೇಶ್ವರನೂ ವಿಜಯಸಿಂಹನೂ ಮಾತನಾಡಿಕೊಳ್ಳುತಿ

ದ್ದಾಗ ಅಲ್ಲಿಗೆ ಒಬ್ಬನು ಬಂದು ತನ್ನೊಡನೆ ಸೇರಿ ಚಕ್ರವರ್ತಿಗಳ ಮೇಲೆ ಕತ್ತಿಯನ್ನು ಕಟ್ಟೆಂದು ವಿಜಯಸಿಂಹನಿಗೆ ಬಹಳವಾಗಿ ಪ್ರೇರೇಪಿಸಿದನು. ಆದರೆ ವಿಜಯಸಿಂಹನು ಅವನ ಮಾತನ್ನು ಎಳ್ಳಷ್ಟಾದರೂ ಕಿವಿಗೆ ಹಾಕಿ ಕೊಳ್ಳಲಿಲ್ಲ. ಬಿರುಗಾಳಿಯಾದರೂ ಬೆಟ್ಟವನ್ನು ಅಲುಗಿಸಬಲ್ಲುದೇ? ಕಡೆಗೆ ವಿಜಯಸಿಂಹನಿಗೆ ಕೋಪಬಂದು "ಇನ್ನು ಪುನಃ ನೀನು ಹೀಗೆ ಮಾತನಾಡಿದರೆ ನನ್ನ ಈ ಕತ್ತಿಯು ನಿನ್ನನ್ನು ವಿಚಾರಿಸಿಕೊಳ್ಳುವುದು" ಎಂದು ಹೇಳಿ ಅವನನ್ನು ಅಟ್ಟಬಿಟ್ಟನು.

ತಿಮ್ಮ—"ವಿಜಯಸಿಂಹನ ಸುದ್ದಿ ಹಾಗಿರಲಿ. ಪ್ರಹರೇಶ್ವರನ ಸಮಾಚಾರವನ್ನು ತಿಳಿಸು. ಅವನು ರಾಜದ್ರೋಹಿ ಹೌದೋ ಅಲ್ಲವೋ?"

ರಾಮ—"ಅವನು ರಾಜದ್ರೋಹಿಗಳಲ್ಲಿ ಸೇರಿಲ್ಲ; ಅವರುಗಳನ್ನು ಹಿಡಿದುಕೊಡುವೆನೆಂದೂ ವಿಜಯಸಿಂಹನಿಗೆ ಮಾತುಕೊಟ್ಟಿರುವನು. ಆದಿನ ರಾತ್ರಿಯೇ ರಾಜದ್ರೋಹಿಗಳನ್ನು ಹಿಡಿದುಬಿಡಬೇಕೆಂದು ಪ್ರಯತ್ನವನ್ನೂ ನಡೆಯಿಸಿದನು. ಆದರೆ ಅವರ ಅದೃಷ್ಟವು ಗಟ್ಟಿಯಾಗಿದ್ದುದರಿಂದ ಅವರು ಆ ದಿನ ತಮ್ಮ ಸಂಕೇತಸ್ಥಳದಲ್ಲಿ ಬಂದು ಸೇರಲಿಲ್ಲ. ಹಾಗೆ ಸೇರಿದ್ದರೆ ಅವರು ಇಷ್ಟುಹೊತ್ತಿಗೆ ಕಾರಾಗೃಹದಲ್ಲಿ ಅತಿಥಿಗಳಾಗಿರುತ್ತಿದ್ದರು."

ತಿಮ್ಮ—"ಮತ್ತೇನಾದರೂ ವಿಶೇಷಗಳುಂಟೋ?"

ರಾಮ—"ಉಂಟು. ವಿಜಯಸಿಂಹನೂ ಪ್ರಹರೇಶ್ವರನೂ ಸ್ವಲ್ಪ ಹೊತ್ತು ಸಂಭಾಷಿಸಿಕೊಳ್ಳುತ್ತಾ ಇದ್ದು ನಿದ್ದೆ ಹೋದಮೇಲೆ, ಯಾರೋ ಕೆಲವರು ಬಂದು ಅವರಿಬ್ಬರನ್ನೂ ಹೆಡಮುರಿಕಟ್ಟಿ ಕೆಡವಿ, ವಿಜಯಸಿಂಹನನ್ನು ಶೈವಮಠಕ್ಕೆ ಹೊತ್ತುಕೊಂಡು ಹೋದರು."

ತಿಮ್ಮ—"ಪ್ರಹರೇಶ್ವರನನ್ನುಹೊತ್ತುಕೊಂಡು ಹೋಗಲಿಲ್ಲವೋ?"

ರಾಮ—"ಆ ಘಾತುಕರಿಗೆ ವಿಜಯಸಿಂಹನ ಮೇಲೆಯೇ ದ್ವೇಷವಿದ್ದಂತೆಯೂ, ಅವನನ್ನು ಕಟ್ಟಿ ತೆಗೆದುಕೊಂಡು ಹೋಗುವಾಗ ಪ್ರಹರೇಶ್ವರನು ಅಡ್ಡಿಮಾಡದಿರಲೆಂದು ಅವನನ್ನು ಕಟ್ಟಿ ಕೆಡವಿದಂತೆಯೂ ತೋರುವುದು, ಆದುದರಿಂದಲೇ ವಿಜಯಸಿಂಹನನ್ನು ಹೊತ್ತುಕೊಂಡು ಹೋದರೆಂದು ನನಗೆ ತೋರುತ್ತದೆ."

ತಿಮ್ಮ—"ವಿಜಯಸಿಂಹನ ಗತಿಯೇನಾಯಿತು ? ಸುರಕ್ಷಿತವಾಗಿರುವನಷ್ಟೆ ?"

ರಾಮ—"ಮಹಾಪ್ರತಿಭಾಶಾಲಿನಿಯಾದ ಮುಕ್ತಾಂಬೆಯು ವಿಜಯಸಿಂಹನಿಗೆ ಒದಗಿದ್ದ ವಿಪತ್ತಿನ ಸುಳಿವನ್ನು ಕಂಡುಕೊಂಡು ಸಕಾಲದಲ್ಲಿ ನನ್ನ ಸಹಾಯವನ್ನು ಕೋರಿ ಆತನನ್ನು ಉಳಿಸಿಕೊಂಡಳು."

ತಿಮ್ಮ—"ರಾಜದ್ರೋಹಿಗಳು ಆಕೆಗೆ ಹೆದರಿಕೊಂಡು ಓಡಿ ಹೋದರೇನು ? ಆಕೆ ಮಾಡಿದ ಉಪಾಯವೇನು ?"

ರಾಮ—"ಆ ರಾಜದ್ರೋಹಿಗಳಲ್ಲಿ ಒಬ್ಬನು ತನ್ನನ್ನು ವರಿಸಬೇಕೆಂದು ಮುಕ್ತಾಂಬೆಯನ್ನು ಬಲಾತ್ಕರಿಸಿದನಂತೆ ; ಆದರೆ ಆಕೆಯು ಅವನನ್ನು ತಿರಸ್ಕರಿಸಿದಳಂತೆ. ಅವರು ವಿಜಯಸಿಂಹನನ್ನು ಶೈವಮಠಕ್ಕೆ ಹೊತ್ತುಕೊಂಡು ಹೋಗಿ ಅವನನ್ನು ಕೊಲ್ಲಬೇಕೆಂದು ಪ್ರಯತ್ನಿಸುವ ಹೊತ್ತಿಗೆ ಸರಿಯಾಗಿ, ಮುಕ್ತಾಂಬೆಯು ಪೂರ್ವದಲ್ಲಿ ತನ್ನನ್ನು ಬಲಾತ್ಕರಿಸಿದ್ದ ರಾಜದ್ರೋಹಿಯ ಹೆಸರನ್ನು ಹಿಡಿದು ತನ್ನನ್ನು ರಕ್ಷಿಸಿಕೊಳ್ಳಬೇಕೆಂದು ಕೂಗಿಕೊಂಡ ಕೂಡಲೆ, ರಾಜದ್ರೋಹಿಗಳಲ್ಲಿ ಕೆಲವರು ವಿಜಯಸಿಂಹನನ್ನು ಬಿಟ್ಟು ಮುಕ್ತಾಂಬೆಯನ್ನು ಬಿಡಿಸಿಕೊಳ್ಳಲು ಓಡಿಹೋದರು. ಆಗ ನಾನೂ ನನ್ನ ಜೊತೆಗಾರರೂ ವಿಜಯಸಿಂಹನ ಮೇಲೆ ಕಾವಲಿದ್ದ ರಾಜದ್ರೋಹಿಗಳನ್ನು ಪರಲೋಕಯಾತ್ರೆಗೆ ಕಳುಹಿಸಿ ವಿಜಯಸಿಂಹನನ್ನು ಬದುಕಿಸಿಕೊಂಡೆವು"

ತಿಮ್ಮ—"ಒಳ್ಳೆಯದು. ನನಗೆ ಮಹೋಪಕಾರವನ್ನು ಮಾಡಿದ್ದ ವಿಜಯಸಿಂಹನನ್ನು ರಕ್ಷಿಸಿದುದಕ್ಕೋಸ್ಕರ ನನಗೆ ಬಹಳ ಸಂತೋಷವಾಯಿತು.. ಒಂದುವೇಳೆ ಮುಕ್ತಾಂಬೆಯು ಅಪರಾಧಿನಿಯಾಗಿದ್ದರೂ ಈ ಸತ್ಕಾರ್ಯಕ್ಕೋಸ್ಕರ ಕ್ಷಮಾರ್ಹಳಾಗಿರುವಳು. ಆ ರಾಜದ್ರೋಹಿಗಳ ಹೆಸರನ್ನು ಮುಕ್ತಾಂಬೆಯು ತಿಳಿಸಲಿಲ್ಲವೇ ?"

ರಾಮ—"ವಿಜಯಸಿಂಹನೊಡನೆ ನೆಟ್ಟಗೆ ಇಲ್ಲಿಗೆ ಹೊರಟು ಬಂದುದರಿಂದ ಮುಕ್ತಾಂಬೆಯನ್ನು ನೋಡಲು ನನಗೆ ಅವಕಾಶವಾಗಲಿಲ್ಲ."

ತಿಮ್ಮ—"ಹೋಗಲಿ. ಮುಕ್ತಾಂಬೆಯು ವಿಜಯಸಿಂಹನನ್ನು ರಕ್ಷಿಸಿದುದು ಪರೋಪಕಾರಬುದ್ಧಿಯಿಂದಲೋ ? ಸ್ವಾರ್ಥಬುದ್ಧಿಯಿಂದಲೋ?

ಹೇಳಬಲ್ಲೆಯಾ ?''

ರಾಮು-"ಪರೋಪಕಾರಬುದ್ಧಿಯಿಂದಲ್ಲ; ಸ್ವಾರ್ಥಬುದ್ಧಿಯಿಂದಲೇ."

ತಿಮ್ಮ-''ಏನು! ಏನು! ಸ್ವೋಪಕಾರಬುದ್ಧಿಯಿಂದಲೇ ? ಆಕೆಯು ವಿಜಯಸಿಂಹನಲ್ಲಿ ಅನುರಕ್ತಳಾಗಿರುವಳೇನು ?''

ರಾಮು-''ಅದಕ್ಕೆ ಸಂದೇಹವೇನು ? ಮುಕ್ತಾಂಬೆಯು ವಿಜಯಸಿಂಹನನ್ನು ಮದುವೆಯಾಗಬೇಕೆಂದಿರುವಳು.''

ತಿಮ್ಮ-''ಅವರವರಿಗೆ ಪ್ರೇಮಾನುಬಂಧವು ಯಾವಾಗ ಉಂಟಾಯಿತು ?''

ರಾಮು-''ಉದಯಗಿರಿಯಲ್ಲೇ ಅವರವರಿಗೆ ಪ್ರೇಮಾಂಕುರವಯಿತು. ವಿಜಯಸಿಂಹನು ಸ್ವದೇಶವನ್ನು ಬಿಟ್ಟು ಇಲ್ಲಿಗೆ ಬಂದುದು ಇದೇ ಕಾರಣದಿಂದಲೇ.''

ತಿಮ್ಮ-''ಆನೆಗೊಂದಿಗೆ ವಿಜಯಸಿಂಹನು ಹೊರಟುದಕ್ಕೆ ಉದ್ದೇಶವು ಇದೇಯೋ ? ನಾನು ಅನ್ಯಥಾ ತಿಳದುಕೊಂಡಿದ್ದೆನು.''

ರಾಮು-''ತಾವು ತಿಳದುಕೊಂಡಿದ್ದುದು ಸರಿಯಲ್ಲ.''

ತಿಮ್ಮ-''ಇರಬಹುದು. ಆದಿನ ನನ್ನಮೇಲೆ ಬಿದ್ದ ದುರಾತ್ಮರಲ್ಲಿ ಒಬ್ಬನ ಕಂಠಧ್ವನಿಯು ಪ್ರಹರೇಶ್ವರನ ಧ್ವನಿಯಂತಿದ್ದಿತು. ನನಗೆ ಆಗಿನಿಂದಲೂ ಪ್ರಹರೇಶ್ವರನ ವಿಷಯದಲ್ಲಿ ಸಂಶಯವು ಬೇರೂರಿಕೊಂಡಿರುವುದು. ಪ್ರಹರೇಶ್ವರನನ್ನು ನೋಡಿಕೊಂಡು ಬರುತ್ತೇನೆಂದು ವಿಜಯಸಿಂಹನು ಹೇಳದಕೂಡಲೆ ಸಜಾತೀಯನಾದ ಪ್ರಹರೇಶ್ವರನೊಡನೆ ವಿಜಯಸಿಂಹನ ಪ್ರವರ್ತನಗಳನ್ನು ಕಂಡುಹಿಡಿದರೆ, ಆ ಇಬ್ಬರ ಆಂತರ್ಯವು ತಿಳದುಹೋಗುವುದೆಂದೇ ಭಾವಿಸಿ ಅವನ್ನು ತಿಳದುಕೊಂಡುಬರುವುದಕ್ಕಾಗಿ ನಿನ್ನನ್ನು ಆನೆಗೊಂದಿಗೆ ಕಳುಹಿಸಿದೆನು. ವಿಜಯಸಿಂಹನು ವಿಶ್ವಾಸಾರ್ಹನೆಂದು ಈಗ ತಿಳಯಿತು. ಮುಕ್ತಾಂಬೆಯೂ ವಿಶ್ವಸನೀಯಳೆಂದು ತೋರುತ್ತದೆ. ಆದರೆ ಪ್ರಹರೇಶ್ವರನು ನಿರ್ದೋಷಿಯೆಂದು ಭಾವಿಸಲು ನನಗೆ ಸಾಕಾದಷ್ಟು ಸಾಧನಗಳು ದೊರೆಯಲಿಲ್ಲ."

ರಾಮು-''ಒಬ್ಬರ ಧ್ವನಿಯಂತೆ ಮತ್ತೊಬ್ಬರದು ಇರಕೂಡದೇ ? ಕಂಠಧ್ವನಿಯ ಸಾಮ್ಯದಿಂದಲೇ ತಾವು ಹೀಗೆ ಭಾವಿಸಲಾಗುವುದೆಂದು ನನಗೆ

ತೋರುವುದಿಲ್ಲ. ಆದಿನ ಪ್ರಹರೇಶ್ವರವಿಜಯಸಿಂಹರುಗಳಿಗೆ ನಡೆದ ಸಂಭಾಷಣೆಯಿಂದಲೂ ರಾಜದ್ರೋಹಿಯ ಪ್ರೇರೇಪಣೆಗಳನ್ನು ತಿರಸ್ಕರಿಸಿದುದರಿಂದಲೂ, ಪ್ರಹರೇಶ್ವರನು ನಿರಪರಾಧಿಯೆಂತಲೂ, ಇಂತಹ ಸಂಶಯಕ್ಕೆ ತಕ್ಕವನಲ್ಲವೆಂತಲೂ ನನಗೆ ಕಂಡುಬಂದಿದೆ. ಇದೂ ಅಲ್ಲದೆ ಪ್ರಹರೇಶ್ವರನು ರಾಜದ್ರೋಹಿಗಳೊಡನೆ ಸೇರಿಕೊಂಡಿದ್ದ ಪಕ್ಷದಲ್ಲಿ ವಿಜಯಸಿಂಹನಿಂದ ಹಿಂದೆ ಪರಾಭೂತನಾಗಿದ್ದರೂ ಈಗ ಅವನಿಗೆ ಸತ್ಕಾರಗಳನ್ನು ಮಾಡುತ್ತಿದ್ದನೇ ? "

ತಿಮ್ಮ—" ಅವನ ಸತ್ಕಾರಗಳು ಕಪಟಮೂಲವಾಗಿದ್ದರೂ ಇರಬಹುದು. ಅದು ಹೇಗೇ ಇರಲಿ, ಅವನನ್ನು ಈಗ ನಂಬಲಾರೆನು. ಅವನ ಮುಂದಿನ ನಡೆವಳಿಕೆಗಳನ್ನು ನೋಡಿ ಅವನ ಯೋಗ್ಯತೆಯನ್ನು ನಿರ್ಣಯಿಸಬೇಕಾಗಿದೆ. ಅಂತೂ, ನಿನ್ನನ್ನು ಆನೆಗೊಂದಿಗೆ ಕಳುಹಿಸಿದುದು ಒಳ್ಳೆಯದೇ ಆಯಿತು ; ಇಲ್ಲದಿದ್ದರೆ ಅನ್ಯಾಯವಾಗಿ ವಿಜಯಸಿಂಹನು ಸತ್ತು ಹೋಗುತ್ತಿದ್ದನು."

ರಾಮ—" ಬುದ್ಧಿವಂತಳಾದ ಮುಕ್ತಾಂಬೆಯು ನನ್ನಿಂದಲ್ಲದಿದ್ದರೆ ಮತ್ತೆ ಯಾರಮೂಲಕವಾದರೂ ವಿಜಯಸಿಂಹನ ರಕ್ಷಣೆಗೆ ಏರ್ಪಾಡು ಮಾಡುತ್ತಿದ್ದಳು. ಆದರೂ ನಾನು ಹೋದುದರಿಂದ ಆಕೆಗೆ ಶ್ರಮವು ಸ್ವಲ್ಪ ಕಡಿಮೆಯಾಯಿತೆಂದು ಹೇಳಬಹುದು. "

ತಿಮ್ಮ—" ಒಳ್ಳೆಯದು. ಈಗ ನೀನು ಹೊರಡಬಹುದು. ರಾಜದ್ರೋಹಿಗಳ ಮೇಲೆ ಕಣ್ಣಿಟ್ಟಿರು."

ಹೀಗೆ ಈ ಸಂಭಾಷಣೆಯು ಮುಗಿದಕೂಡಲೆ, ಮಂತ್ರಿಯು ಹುಚ್ಚನ ಕಡೆ ತಿರುಗಿದನು. ಅವನೂ ಒಂದುಬಾರಿ ಕಣ್ಣುಬಿಟ್ಟು ನೋಡಿ ರುದ್ರಾಕ್ಷಮಾಲೆಯನ್ನು ತಿರುಗಿಸುತ್ತಾ, ಜಪವನ್ನು ಪಿಟಗುಟ್ಟುತ್ತಾ ಕುಳಿತುಕೊಂಡನು. ಆಗ ಮಂತ್ರಿಯು " ಅವಧಾನಿಗಳವರೇ ! ನಿಮ್ಮ ಮಹಾಜಪವು ಇನ್ನೂ ಮುಗಿಯಲಿಲ್ಲವೇನು ? " ಎಂದು ಸಂಭಾಷಿಸತೊಡಗಲು, ಹುಚ್ಚನು " ನೀವು ನನ್ನ ತಪಕ್ಕೆ ವಿಘ್ನವನ್ನುಂಟುಮಾಡಿದಿರಿ ; ನನ್ನ ಮಂತ್ರಗಳೆಲ್ಲವೂ ಮರೆತುಹೋದುವು ; ಇನ್ನು ಈ ಜಾಳ[illegible]ಪಸರದಿಂದೇನು ಪ್ರಯೋಜನ ? ಈ ದರ್ಭಾಸನದಿಂದೇನು ಉಪಯೋಗ ? " ಎಂದು ಹೇಳಿ ಅವನ್ನು ಎಸೆದು

ಬಿಟ್ಟು, ಹರಟುತ್ತಾ, ಮಂತ್ರಿಯ ಮುಖವನ್ನು ನೋಡಿ ಪಕಪಕನೆ ನಗುತ್ತಾ, ತಾನು ಎಸೆದುಬಿಟ್ಟಿದ್ದ ರುದ್ರಾಕ್ಷಮಾಲೆಯನ್ನೂ ದರ್ಭಾಸನವನ್ನೂ ಎತ್ತಿಕೊಂಡು ಹುಚ್ಚುಹುಚ್ಚಾಗಿ ಹಾಡು ಹೇಳಿಕೊಳ್ಳುತ್ತಾ ಹೊರಟು ಹೋದನು.

ಹುಚ್ಚನ ಬುದ್ಧಿಯು ಯಾವಾಗಲೂ ವಿಪರೀತವೇ ಎಂದುಕೊಂಡು ಮಂತ್ರಿಯು ತನ್ನ ಕೆಲಸವನ್ನು ತಾನು ನೋಡಿಕೊಳ್ಳುತ್ತ ಕುಳಿತನು.

ಹನ್ನೊಂದನೆಯ ಪ್ರಕರಣ.

ಒಂದು ಆಶ್ಚರ್ಯಕರವಾದ ವಸ್ತು.

"ಸುಖಮಾಪತಿತಂ ಸೇವ್ಯಂ ದುಃಖಮಾಪತಿತಂ ತಥಾ |
ಚಕ್ರವತ್ ಪರಿವರ್ತನ್ತೇ ದುಃಖಾನಿ ಚ ಸುಖಾನಿ ಚ ||"

ಹಿತೋಪದೇಶ.

ಸೂರ್ಯನು ಪಶ್ಚಿಮದಿಗಂತವನ್ನು ಸಮೀಪಿಸುತ್ತಿದ್ದನು. ಪಶ್ಚಿಮ ದಿಕ್ಕಿನ ಆಕಾಶದಲ್ಲಿದ್ದ ಮೇಘಗಳಮೇಲ್ ಬಿದ್ದ ಸೂರ್ಯರಶ್ಮಿಗಳು ಮನೋಹರವಾದ ನೀರುಬಿಸಿಲನ್ನುಂಟುಮಾಡಿದ್ದುವು. ತಮ್ಮ ಕೆಲಸಗಳನ್ನು ಮುಗಿಸಿಕೊಂಡು ಮನೆಗಳಿಗೆ ಹಿಂದಿರುಗುತ್ತಿದ್ದವರಿಂದಲೂ, ತಮಗೆ ಬೇಕಾದ ಪದಾರ್ಥಗಳನ್ನು ಅಂಗಡಿಗಳಿಂದ ಕೊಂಡುತರುವುದಕ್ಕಾಗಿ ಹೋಗುತ್ತಿದ್ದವರಿಂದಲೂ, ಕೆಲಸವೇನೂ ಇಲ್ಲದೆ ಕಾಡಹರಟೆಯನ್ನು ಹರಟಿಕೊಳ್ಳುತ್ತ ಅಲ್ಲಲ್ಲಿ ನಿಂತಿದ್ದವರಿಂದಲೂ, ಬೀದಿಗಳು ಕಿಕ್ಕಿರಿಯುತ್ತಿದ್ದುವು. ತಮ್ಮ ಆ ದಿನದ ವ್ಯಾಪಾರಗಳನ್ನು ಮುಗಿಸುವುದಕ್ಕೆ ಮುಂಚೆ, ಸಾಧ್ಯವಾದಷ್ಟು ಮಂದಿ ಗಿರಾಕಿಗಳನ್ನು ಸಂಪಾದಿಸಿ ಹೆಚ್ಚು ವ್ಯಾಪಾರವನ್ನು ನಡೆಯಿಸಬೇಕೆಂದು ಕೆಲವರು ವರ್ತಕರು ತಮ್ಮ ಅಂಗಡಿಗಳ ಕಡೆ ನೋಡಿಕೊಂಡು ಹೋಗುತ್ತಿದ್ದವರನ್ನೆಲ್ಲಾ ತಮ್ಮ ಮೃದುವಾದ ಮಾತುಗಳಿಂದ ಬರಮಾಡಿಕೊಳ್ಳಲು ಯತ್ನಿಸುತ್ತಿದ್ದರು. ನಾನಾವೇಷಗಳನ್ನು ಧರಿಸಿ ಬೇಡು

ತ್ತಿದ್ದ ಭಿಕ್ಷಗಾರರು ಸಿಕ್ಕಿದಷ್ಟನ್ನು ಸಂಪಾದಿಸಿಕೊಂಡು ಹೋಗಬೇಕೆಂದು ಕಡೆಯ ಪ್ರಯತ್ನಗಳನ್ನು ನಡೆಯಿಸುತ್ತಿದ್ದರು. ಕೆಲವರು ವರ್ತಕರು ಕೃಪಣಶಿರೋಮಣಿಗಳೆಂಬುದನ್ನು ತಿಳಿಯದೆ ಅವರನ್ನು ಯಾಚಿಸಿ ಯಾಚಿಸಿ ಸ್ವಲ್ಪವಾದರೂ ಪ್ರಯೋಜನಹೊಂದದೆ ತಡೆಯಲಾರದಷ್ಟು ವ್ಯಸನವನ್ನು ಅನುಭವಿಸುತ್ತಾ ಕೆಲವರು ಭಿಕ್ಷುಕರು ತಮ್ಮ ತಮ್ಮ ಗುಡಿಸಲುಗಳನ್ನೋ ಹಾಳುಮಂಟಪಗಳನ್ನೋ ಅಥವಾ ಮುರುಕುಮನೆಗಳನ್ನೋ ಕುರಿತು ಹೋಗುತ್ತಿದ್ದರು. ಇನ್ನು ಕೆಲವರು ಯಾಚಕರು ದಯಾರಸಪೂರಿತರಾದ ದಾತೃಗಳನ್ನು ಯಾಚಿಸಿ ಅಲ್ಪಸ್ವಲ್ಪಪ್ರಯೋಜನವನ್ನಾದರೂ ಪಡೆದು ತಮ್ಮ ದೀನನಿವಾಸಸ್ಥಾನಗಳ ಕಡೆಗೆ ಹೋಗುತ್ತಿದ್ದರು. ಮತ್ತೊಂದುಕಡೆ, ಐಶ್ವರ್ಯವಂತರಾದವರು ಕುದುರೆ ಎತ್ತುಗಳನ್ನು ಕಟ್ಟಿದ್ದ ಗಾಡಿಗಳಲ್ಲಿ ಕುಳಿತು ವಿಹಾರಕ್ಕಾಗಿ ಹೊರಟು, ಹಿಂದಿರುಗುತ್ತಿದ್ದರು.

ಈ ಸಮಯದಲ್ಲಿ ವಿಜಯನಗರದ ಒಬ್ಬ ಹೂವಾಡಿಗನ ಅಂಗಡಿಯ ಮುಂಗಟ್ಟಿನಲ್ಲಿ ನಿಂತಿದ್ದ ಒಬ್ಬ ಯುವತಿಗೂ ಆ ಅಂಗಡಿಯವನಿಗೂ ಈ ಮುಂದೆ ಹೇಳುವಂತೆ ಸಲ್ಲಾಪವು ನಡೆಯುತ್ತಿದ್ದಿತು :—

ಯುವತಿ—"ವಸಂತಾ! ವಸಂತಾ! ಏನುಮಾಡುತ್ತಿರುವೆ? ಕೂಗಿದರೂ ಕೇಳಿಸುವುದಿಲ್ಲವೆ?"

ವಸಂತ—"ಮಾಲತೀವಿರಹಿತನಾದ ವಸಂತನು ಈ ರೀತಿಯಲ್ಲಿರುವುದರಲ್ಲಿ ವಿಶೇಷವೇನು? ಬಾ, ಕುಳಿತುಕೊ"

ಮಾಲತಿ—"ನಿನಗೆ ಯಾವಾಗಲೂ ಹುಡುಗಾಟವೇ!"

ವಸಂತ—"ಸುಂದರೀ! ಕೋಪಮಾಡಬೇಡ. ಪರಿಹಾಸವನ್ನು ಮಾಡಿದರೆ ಕೋಪಿಸಿಕೊಳ್ಳುವವಳು ನೀನೊಬ್ಬಳೇ ಸರಿ! ಈಗ ನೀನು ಇಲ್ಲಿಗೆ ಬಂದುದಕ್ಕೆ ಕಾರಣವೇನು?"

ಮಾಲತಿ—"ವಸಂತ! ನನಗೆ ಕೋಪವೇನೂ ಬರಲಿಲ್ಲ. ನನಗೆ ಈ ದಿನದ ಹೂವಿನ ದಂಡೆಯನ್ನು ಕೊಡುವೆಯಾ?"

ವಸಂತ—"ನಾನು ಕಟ್ಟಿಕೊಡುವ ಹೂದಂಡೆಗಳನ್ನು ನೋಡಿ ನಿಮ್ಮ ಯಜಮಾನಿಯವರು ಮೆಚ್ಚಿಕೊಂಡಿರುವರೋ? ಅವುಗಳ ವಿಷಯವಾಗಿ ನಿನಗೆ ಎಂದಾದರೂ ಏನಾದರೂ ಹೇಳಿರುವರೊ?"

ಮಾಲತಿ—"ಹೌದು, ನಿನ್ನ ಪುಷ್ಪಮಾಲಾರಚನೆಯನ್ನು ಕಂಡು ನಮ್ಮ ಒಡತಿಯವರು ಮೆಚ್ಚಿರುವರು. ಈಗ ಮಹಾರಾಜರವರು ನಮ್ಮ ಯಜಮಾನಿಯವರೊಡನೆ ಚದುರಂಗವನ್ನಾಡುತ್ತಿರುವರು. ಈ ಸಮಯದಲ್ಲೀ ಹೂವಿನದಂಡೆಯನ್ನು ಅನಂಗಸೇನೆಯವರಿಗೆ ಕೊಟ್ಟರೆ ಮಹಾರಾಜರವರೂ ಅದನ್ನು ನೋಡಿ ಸಂತೋಷಪಡುವರು. ಆದುದರಿಂದ ಕೂಡಲೆ ನನ್ನನ್ನು ಕಳುಹಿಸು"

ವಸಂತ—"ಎಂದಿಗಿಂತ ಹೆಚ್ಚಾಗಿ ಈ ದಿನ ಕಷ್ಟಪಟ್ಟು ಈ ಹೂಮಾಲೆಯನ್ನು ಕಟ್ಟಿದುದಕ್ಕೆ ಸಾರ್ಥಕವಾಯಿತು. ಇದನ್ನು ತೆಗೆದುಕೊಂಡು ಹೋಗಿ ಕೊಟ್ಟು ಚಕ್ರವರ್ತಿಯವರು ಸಂತೋಷಪಟ್ಟುಕೊಳ್ಳುವಂತೆ ಮಾಡು" ಎಂದು ಹೇಳಿ ಹೂಮಾಲೆಯನ್ನು ಕೊಟ್ಟನು.

ಮಾಲತಿಯು ಹೂಮಾಲೆಯನ್ನು ಎಚ್ಚರಿಕೆಯಿಂದ ತಂದು ಅನಂಗಸೇನೆಯ ಕೊಟಡಿಯನ್ನು ಪ್ರವೇಶಿಸುತ್ತಿರುವಾಗ ಮಹಾರಾಜರಿಗೂ ಅನಂಗಸೇನೆಗೂ ಈ ಮೇರೆಗೆ ಸಂಭಾಷಣೆ ನಡೆಯುತ್ತಿದ್ದಿತು:—

ಅನಂಗ—"ದೇವಾ! ರಾಜನು ಸಿಕ್ಕಿಹೋದನು."

ಕೃ. ದೇ—"ಹೌದು. ಅನಂಗಸೇನೆಯು ಇದಿರುಪಕ್ಷದಲ್ಲಿರುವಾಗ ಹೀಗಾಗುವುದರಲ್ಲಿ ವಿಶೇಷವೇನು?"

ಅನಂಗ—"ತಮಗೆ ಅನಂಗಸೇನೆಯಮೇಲೆ ದಯೆಯಿರುವುದರಿಂದಲೇ ರಾಜನು ಸಿಕ್ಕುವಂತೆ ದಯೆಮಾಡಿದಿರಿ. ಹಾಗಲ್ಲದಿದ್ದರೆ, ಚತುರಂಗಬಲವನ್ನು ಚಮತ್ಕಾರದಿಂದ ನಡೆಯಿಸಿಕೊಂಡು ಹೋಗಿ ರಣರಂಗದಲ್ಲಿ ಅನೇಕ ರಾಜರನ್ನು ಬಂಧಿಸುವ ತಾವು ಇದಿರುಪಕ್ಷದಲ್ಲಿರುವಾಗ ನಿಮ್ಮ ಈ ನಿರ್ಜೀವದ ರಾಜನಿಗೆ ಬರುತ್ತಿದ್ದ ಭಯವೇನು?"

ಕೃ. ದೇ—"ಸಜೀವಿಗಳಾದ ಸೈನಿಕರ ಸಹಾಯದಿಂದ ಪರರಾಜರನ್ನು ಬಂಧಿಸುವುದು ಸಹಜವೇ ಆದರೂ, ನಿರ್ಜೀವಿಯಾದ ಬಲವನ್ನು ನಡೆಯಿಸಿಕೊಂಡು ನಿರ್ಜೀವಿಯಾದ ರಾಜನನ್ನು ಕಟ್ಟಿಹಾಕಿದುದು ಮಾತ್ರವೇ ಅಲ್ಲದೆ ಸಜೀವಿಯಾದ ರಾಜನನ್ನೂ ಬಂಧಿಸಿಬಿಟ್ಟಿರುವೆ."

ಅನಂಗ—"ತಮ್ಮ ಸರಸವಚನಗಳಿಂದಲೇ ನನ್ನನ್ನು ಮುಗ್ಧಳನ್ನಾಗಿ ಮಾಡಿ ಆಟವನ್ನು ಮುಗಿಸಿಬಿಡುವಿರಿ. ರಾಜನನ್ನು ಬಿಡಿಸಿಕೊಳ್ಳುವ ಆಲೋಚನೆಯನ್ನು ಮಾಡೋಣಾಗಲಿ."

ಇಷ್ಟರಲ್ಲಿ ಮಾಲತಿಯು ಹೂವಿನ ದಂಡೆಯನ್ನು ತಂದು ಒಪ್ಪಿಸಿದಳು. ಅತ್ಯಂತ ನಿಪುಣತೆಯನ್ನು ಪ್ರಯೋಗಿಸಿ ಕಟ್ಟಿದ್ದ ಆ ಹಾರವನ್ನು ಕಂಡು ರಸಜ್ಞರಾದ ಕೃಷ್ಣದೇವರಾಯರು ಅದನ್ನು ತಮ್ಮ ಕೈಗೇ ತೆಗೆದುಕೊಂಡು ಅದರ ರಚನೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸತೊಡಗಿದರು. ಹೀಗೆ ಪರೀಕ್ಷಿಸುತ್ತಿದ್ದಾಗ ಚಕ್ರವರ್ತಿಯವರಿಗೆ ಒಂದು ವಸ್ತುವು ಗೋಚರವಾಯಿತು. ಅದನ್ನು ಹೊರಕ್ಕೆ ತೆಗೆದು ಪರೀಕ್ಷಿಸಿದಕೂಡಲೆ ಚಕ್ರವರ್ತಿಯವರಿಗೆ ಉಂಟಾದ ಕೋಪವು ಇದುವರೆಗೆ ಕಾಣಬರುತ್ತಿದ್ದ ಅವರ ಅನುರಾಗರಸವನ್ನು ಹೀರಿಬಿಟ್ಟಿತು. ಕೂಡಲೆ ಚಕ್ರವರ್ತಿಯವರ ಬಲಗೈಯು ಕತ್ತಿಯ ಕಡೆಗೆ ತಾನಾಗಿಯೇ ಚಲಿಸಿತು ; ಪಾದಗಳು ಗಡಗಡನೆ ನಡುಗಲಾರಂಭಿಸಿದುವು. ಅವರು ಅಲ್ಲಿ ನಿಲ್ಲಲಾರದೆ ತಮ್ಮ ಮಹಲಿನ ಕಡೆಗೆ ಹೊರಟರು. ಅಲ್ಲಿಗೆ ಹೋದಕೂಡಲೆ ಅನಂಗಸೇನೆಯನ್ನು ಕೊಲ್ಲಿಸಿಬಿಡಬೇಕೆಂಬ ಪ್ರಬಲೇಚ್ಛೆಯು ಹುಟ್ಟಿತು ; ಆದರೆ ಉತ್ತರಕ್ಷಣದಲ್ಲಿಯೇ ವಿವೇಕವು ಅವರಿಗೆ ತಲೆದೋರಿ, ಚೆನ್ನಾಗಿ ಪರೀಕ್ಷಿಸಿದಮೇಲೆ ಮುಂದಿನ ಕೆಲಸವನ್ನು ನಡೆಯಿಸಬೇಕೆಂಬ ಬುದ್ಧಿಯುಂಟಾಯಿತು.

ಇತ್ತಕಡೆ, ಮಹಾರಾಜರವರು ಇದ್ದುದಕ್ಕೆ ಇದ್ದಂತೆಯೇ ಹೊರಟು ಹೋದುದನ್ನು ಕಂಡು ಅನಂಗಸೇನೆಗೆ ದಿಗ್ಭ್ರಮೆ ಹಿಡಿಯಿತು. ಇದುವರೆಗೂ ಮಹಾರಾಜರವರು ಯಾವಾಗಲೂ ಪ್ರಸನ್ನರಾಗಿಯೇ ಇದ್ದು ಈದಿನ ಹೀಗೆ ರೌದ್ರಾವತಾರವನ್ನು ಹೊಂದಿದುದಕ್ಕೆ ಕಾರಣವೇನಿರಬಹುದೆಂದು ಬಹಳವಾಗಿ ಆಕೆಯು ಯೋಚಿಸಿದಳು. ಹಲವು ತರ್ಕಗಳನ್ನು ಮಾಡಿಕೊಂಡುದಾಯಿತು ; ಹಲವು ವಿತರ್ಕಗಳನ್ನೂ ಮಾಡಿಕೊಂಡುದಾಯಿತ . ಆದರೂ ಅನಂಗಸೇನೆಗೆ ಸಮಾಧಾನವಾಗಲಿಲ್ಲ. ಇಷ್ಟರಲ್ಲಿ ಮಹಾರಾಜರವರು ಅನಂಗಸೇನೆಯು ಇದ್ದ ಕೊಟಡಿಗೆ ಬಂದು “ ನೀಚಳೇ ! ನಿನ್ನನ್ನು ನನ್ನ ಈ ಕತ್ತಿಗೆ ಬಲಿಕೊಟ್ಟರೂ ಪಾಪವು ಬರಲಾರದು. ಆದರೆ ಶತ್ರುಪುರುಷರ ರುಧಿರವನ್ನು ಕುಡಿದಿರುವ ಈ ಕತ್ತಿಗೆ ನಿನ್ನ ರಕ್ತವು ರುಚಿಸದು. ” ಎಂದು ಹೇಳಿ ಪುನಃ ಹೊರಟುಹೋದರು. ಈಗ, ಮಹಾರಾಜರವರಿಗೆ ತನ್ನಮೇಲೆ ಏನೋ ಕಾರಣದಿಂದ ಕೋಪಬಂದಿರುವುದೆಂದು ಅನಂಗಸೇನೆಯ ಮನಸ್ಸಿಗೆ ಹೊಳೆಯಿತು. ಹೀಗೆ ಮಹಾರಾಜರವರ ದರ್ಶ

ಯು ತನ್ನನ್ನು ಬಿಟ್ಟಿತೆಂದು ತಿಳಿದಕೂಡಲೆ ಅನಂಗಸೇನೆಗೆ ಭೂಮಿಯು ತನ್ನ ಕಾಲುಕೆಳಗಿನಿಂದ ಜಾರಿಹೋಯಿತೋ ಎಂಬಂತೆ ಭಯವೂ ನಿರಾಶೆಯೂ ತಲೆದೋರಿದುವು; ತಡೆಯಲಾರದಷ್ಟು ದುಃಖವು ಹುಟ್ಟಿ ಬಿಕ್ಕಿಬಿಕ್ಕಿ ಅವಳು ಅಳಲಾರಂಭಿಸಿದಳು; ತಾನು ಧರಿಸಿದ್ದ ಆಭರಣಗಳೆಲ್ಲವನ್ನೂ ಒಂದೊಂದನ್ನಾಗಿ ಕಳಚಿ ಎಸೆಯುತ್ತ ಬಂದಳು. ಕೆಲವು ಕಾಲ ಹೀಗೆ ಕಳೆದ ಮೇಲೆ ದುಃಖವು ಸ್ವಲ್ಪಮಟ್ಟಿಗೆ ಶಮನವಾಯಿತೆಂದು ತಿಳಿದು, ಮಾಲತಿಯು ಆಕೆಗೆ ದುಃಖೋಪಶಮನಮಾಡಬೇಕೆಂದು ಹೀಗೆ ಸಂಭಾಷಿಸಿದಳು:—

ಮಾಲತಿ—"ತಾಯಿ! ಹೀಗೇಕೆ ದುಃಖಿಸುವಿ? ಈ ಆಭರಣಗಳ ಮೇಲೆ ಏಕೆ ಸಿಟ್ಟುಮಾಡಿಕೊಂಡು ಛಿದ್ರಮಾಡುತ್ತಿರುವಿ? ಅವುಗಳಿಂದ ನಿನಗೆ ಏನು ಅಪರಾಧವಾಗಿದೆ?"

"ನನಗೆ ಇನ್ನು ಆಭರಣಗಳೇಕೆ?" ಎಂದು ಹೇಳಿ ಪುನಃ ಅನಂಗಸೇನೆಯು ಅಳಲಾರಂಭಿಸಿದಳು.

ಮಾಲತಿ—"ಅಮ್ಮಾ! ಹೀಗೆ ಅಳುವುದರಿಂದ ಆಗುವ ಪುರುಷಾರ್ಥವೇನು? ಒಂದುವೇಳೆ ಮಹಾರಾಜರವರಮೇಲೆ ಕೋಪಮಾಡಿಕೊಂಡು ನೀನು ಹೀಗೆ ಮಾಡುತ್ತಿರುವೆಯಾದರೆ ಯಾರಿಗೆ ನಷ್ಟವೆಂಬುದನ್ನು ಆಲೋಚಿಸು. ರಾಜನ ಚಿತ್ತವು ಈಗ ನಿಗ್ರಹಪ್ರವೃತ್ತಿಯುಳ್ಳುದಾಗಿದ್ದರೆ ಮರುಕ್ಷಣದಲ್ಲಿ ಅನುಗ್ರಹಪ್ರವೃತ್ತಿಗೆ ಒಳಗಾಗಬಹುದು. ಸ್ಥಿರಮೂಲವಾದ ವೃಕ್ಷರಾಜನೊಂದಿದ್ದರೆ ಬಹುಲತೆಗಳು ಅದನ್ನು ಆಶ್ರಯಿಸಿಕೊಳ್ಳುವುವು. ಲತೆಯೊಂದು ವೈಮನಸ್ಯವನ್ನು ಹೊಂದಿದರೆ ವೃಕ್ಷಕ್ಕೆ ಎಂದಿಗೂ ನಷ್ಟವಿಲ್ಲ. ಆದುದರಿಂದ ನೀನು ಹೀಗೆ ಕೋಪಹೊಂದುವುದಾಗಲಿ ದುಃಖಪಡುವುದಾಗಲಿ ಎಷ್ಟುಮಾತ್ರಕ್ಕೂ ಪ್ರಯೋಜನಕಾರಿಯಲ್ಲ."

ಅನಂಗ—"ಮಾಲತಿ! ನೀನು ಹೇಳುವುದು ಸರಿಯೆಂದು ಕಾಣುವುದು. ಆದರೆ ನನ್ನಮೇಲೆ ಅಷ್ಟು ಪ್ರೀತಿಯಿಂದಿದ್ದ ಮಹಾರಾಜರವರು ಕ್ಷಣಮಾತ್ರದಲ್ಲಿ ರೋಷಾವಿಷ್ಟರಾದರಲ್ಲಾ! ಹೀಗೆ ಆಗುವುದಕ್ಕೆ ಕಾರಣವೇನಿರಬಹುದು? ಹೇಗಾದರೂ ಮಾಡಿ ಈ ಕೋಪಕ್ಕೆ ಕಾರಣವನ್ನು ಕಂಡುಹಿಡಿದು ನನಗೆ ತಿಳಿಸುವಿಯಾ?"

"ಅಮ್ಮಾ! ಪ್ರಯತ್ನಿಸಿ ನೋಡುವೆನು. ನಾನು ಬರುವವರೆಗೂ ಮನಸ್ಸನ್ನು ಬಿಗಿಹಿಡಿದಿರು. ಬೇಗ ಬಂದುಬಿಡುವೆನು" ಎಂದು ಹೇಳಿ

ಮಾಲತಿಯು ಹೊರಟುಹೋದಳು. ಬಳಿಕ ಅನಂಗಸೇನೆಯು ರಾಯರಿಗೆ ಒಂದು ಕಾಗದವನ್ನು ಬರೆದುಕೊಳ್ಳಬೇಕೆಂದು ಯೋಚಿಸಿದಳು. ಆದರೆ ಮರುಕ್ಷಣದಲ್ಲಿಯೇ ಇಂತಹ ಸಮಯದಲ್ಲಿ ಕಾಗದಬರೆಯುವುದರಿಂದ ಕೇಡಾಗಬಹುದೆಂದು ತಿಳಿದು ತನ್ನ ಮೊದಲಿನ ಉದ್ದೇಶವನ್ನು ಬಿಟ್ಟುಬಿಟ್ಟಳು. ಹೀಗೆಯೇ ಹಲವುಬಗೆಗಳಲ್ಲಿ ತರ್ಕವಿತರ್ಕಗಳನ್ನು ಮಾಡಿಕೊಳ್ಳುತ್ತ, ರಾಯರ ಮನಸ್ಸನ್ನು ಪುನಃ ಒಲಿಸಿಕೊಳ್ಳುವುದಕ್ಕಾಗಿ ಹಲವು ಉಪಾಯಗಳನ್ನು ಯೋಚಿಸಿಕೊಳ್ಳುತ್ತ, ಯಾವ ಪ್ರಯತ್ನದಿಂದ ಏನು ವಿಪರೀತಫಲವಾದೀತೋ ಎಂದು ಹೆದರುತ್ತ ಡೋಲಾಯಮಾನಮಾನಸಳಾಗಿ ಕುಳಿತುಕೊಂಡಿದ್ದಳು.

ಹನ್ನೆರಡನೆಯ ಪ್ರಕರಣ.

ಕೊಂಡಪಲ್ಲಿಯ ಪರಿಚಯ — ಮರಣದಂಡನೆ.

ಶುಚಿರಶುಚಿಃ ಪಟುರಪಟುಃ ಶೂರೋಭೀರುಃ ಚಿರಾಯುರಲ್ಪಾಯುಃ ||
ಕುಲಜಃ ಕುಲೇನಹೀನಃ ಭವತಿ ನರೋ ನರಪತೇರತಿಕ್ರೋಧಾತ್ ||

ಇತ್ತ ಚಕ್ರವರ್ತಿಯವರು ತಮ್ಮ ಕೊಟಡಿಗೆ ಹೋಗಿ ಅತ್ಯಂತ ಗಾಢವಾದ ಯೋಚನೆಗೆ ಒಳಗಾಗಿ, ಕಡೆಗೆ ಅನಂಗಸೇನೆಯನ್ನು ಅರಮನೆಯಿಂದ ಹೊರಡಿಸಿಬಿಡಬೇಕೆಂದು ನಿರ್ಧರಿಸಿದರು. ಉನ್ನತವಂಶಸಂಭೂತನೆಂದೂ, ಮಹಾಪರಾಕ್ರಮಶಾಲಿಯೆಂದೂ, ಸದ್ಗುಣಗಣೋಪೇತನೆಂದೂ ಭಾವಿಸಿ, ವಿಜಯಸಿಂಹನಿಗೆ ತಮ್ಮಲ್ಲಿ ಆಸರೆಯನ್ನು ಕೊಟ್ಟರೆ, ಅವನು ಅಕ್ಷಮ್ಯವಾದ ಕೃತಘ್ನತೆಯಿಂದ ತಿಂದಮನೆಗೆರಡನ್ನು ಬಗೆದನೆಂದೂ, ಅವನ ಅಪರಾಧಕ್ಕೆ ಮರಣದಂಡನೆಯೇ ತಕ್ಕ ಶಿಕ್ಷೆಯೆಂದೂ ನಿಶ್ಚಯಮಾಡಿಕೊಂಡು, ಅಪ್ಪಾಜಿಯವರನ್ನು ಬರಹೇಳಲು ಅವರು ದೂತನನ್ನು ಅಟ್ಟಿದರು.

ತಿಮ್ಮರಸನು ತಡಮಾಡದೆ ಅರಮನೆಗೆ ಬಂದು ರಾಯರಿಗೆ ಕಾಣಿಸಿಕೊಂಡು ಅವರ ಅಪ್ಪಣೆಯ ಮೇರೆಗೆ ಉಚಿತಾಸನಾಸೀನನಾದನು. ಇಂಗಿತ

[illegible] ಮಂತ್ರಿಪ್ರವರನು ರಾಯರ ಆಕಾರಲಕ್ಷಣಗಳು ವಿಪರೀತವಾಗಿದ್ದುದರಿಂದ ಅದಕ್ಕೆ ಪ್ರಬಲವಾದ ಕಾರಣವೇನೋ ಇರಬಹುದೆಂದು ಊಹಿಸಿಕೊಂಡು ಈ ಮುಂದೆ ಹೇಳುವಂತೆ ಸಂಭಾಷಿಸತೊಡಗಿದನು:—

ಮಂತ್ರಿ—"ಮಹಾಸ್ವಾಮಿಯವರು ಏನೋ ವಿಚಾರಕ್ಕೊಳಗಾಗಿರುವಂತೆ ತೋರುವುದು; ನಾನು ತಿಳಿಯಬಹುದಾಗಿದ್ದರೆ, ಅದನ್ನು ಕೇಳಿ ತಿಳಿದುಕೊಳ್ಳುವ ಭಾಗ್ಯವನ್ನು ನನಗೆ ಉಂಟುಮಾಡಬೇಕು."

ಕೃ. ದೇ—"ಅಪ್ಪಾಜಿ! ವಿಷಯವೇನೋ ಬಹಳ ವಿಷಾದಕರವಾದುದು. ಮೊದಲು, ವಿಜಯಸಿಂಹನ ನಡತೆಯ ವಿಷಯದಲ್ಲಿ ನಿಮಗೇನಾದರೂ ವರ್ತಮಾನ ತಿಳಿದಿದ್ದರೆ ಅದನ್ನು ತಿಳಿಸಿ ಬಳಿಕ ನನ್ನ ಸಂಗತಿಯನ್ನು ತಿಳಿಸುವೆನು."

ಮಂತ್ರಿ—"ವಿಜಯಸಿಂಹನ ಚಾರಿತ್ರವು ಅನಿಂದ್ಯವಾದುದು. ಕೆಲವರು ರಾಜದ್ರೋಹಿಗಳು ಬಂದು ಅವನನ್ನು ಎಷ್ಟು ಪ್ರೋತ್ಸಾಹಿಸಿದರೂ, ನಮ್ಮ ವಿಷಯದಲ್ಲಿ ಎಳ್ಳಷ್ಟಾದರೂ ದ್ರೋಹವನ್ನು ಅವನು ಬಗೆಯಲಿಲ್ಲವಂತೆ. ಇದಲ್ಲದೆ ರಾಜದ್ರೋಹಿಗಳನ್ನು ಹಿಡಿದುಬಿಡುವ ಪ್ರಯತ್ನವನ್ನು ನಡೆಯಿಸಿದರೂ ದೈವೇಚ್ಛೆಯು ಬೇರೆಯಾಗಿದ್ದುದರಿಂದ ವಿಜಯಸಿಂಹನ ಪ್ರಯತ್ನವು ಸಫಲವಾಗದೆ ವಿಪರೀತಫಲವುಂಟಾಯಿತಂತೆ"

ಕೃ; ದೇ—"ದೈವವು ಉಂಟುಮಾಡಿದ ವಿಪರೀತಫಲವೇನು ?"

ಮಂತ್ರಿಯು ಆನೆಗೊಂದಿಯಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ನಿವೇದಿಸಿದನು.

ಕೃ. ದೇ—"ವಿಜಯಸಿಂಹನನ್ನು ಮೃತ್ಯುಮುಖದಿಂದ ತಪ್ಪಿಸಲು, ಮುಕ್ತಾಂಬೆಗೇನು ಅಷ್ಟು ಆವಶ್ಯಕ ?"

ಮಂತ್ರಿ—"ವಿಜಯಸಿಂಹನು ಮುಕ್ತಾಂಬೆಯನ್ನು ಪ್ರೀತಿಸಿರುವನಂತೆ. ಮುಕ್ತಾಂಬೆಗೂ ಅವನಲ್ಲಿ ಪ್ರೀತಿಯಿರುವುದರಿಂದ ಅವರಿಬ್ಬರೂ ದಂಪತಿಗಳಾಗಬೇಕೆಂದಿರುವರಂತೆ."

ಕೃ. ದೇ—"ವಿಜಯಸಿಂಹನು ಇತರ ಸ್ತ್ರೀಯರಲ್ಲೂ ಅನುರಕ್ತನಾಗಿರುವಂತೆ ತೋರುತ್ತದೆ"

ಮಂತ್ರಿ—"ವಿಜಯಸಿಂಹನು ಮತ್ತೆ ಯಾವಸ್ತ್ರೀಯರಲ್ಲಿ ಅನುರಕ್ತನಾಗಿರುವನು ?"

ಕೃ. ದೇ—"ಅನಂಗಸೇನೆಯಲ್ಲಿ."

ಈ ಮಾತನ್ನು ಕೇಳಿದ ಕೂಡಲೆ ಅಪ್ಪಾಜಿಗೆ ದಿಗ್ಭ್ರಮೆಹಿಡಿದಂತಾಯಿತು. ವಿಜಯಸಿಂಹನು ಅಂತಹ ದುರ್ಮಾರ್ಗಿಯಾಗಿರಲಾರನೆಂದು ಕೂಡಲೆ ತೋರಿತು. ಧೈರ್ಯವನ್ನು ತಂದುಕೊಂಡು, "ಮಹಾಸ್ವಾಮಿಯವರ ನಂಬಿಕೆಗೆ ಸರಿಯಾದ ಕಾರಣಗಳಿರುವುವೇ? ಕೆಲವುವೇಳೆ ಭ್ರಾಂತಿಯಿಂದ ಅಂತಹ ನಂಬಿಕೆ ಹುಟ್ಟುವುದೂ ಉಂಟು" ಎಂದನು.

ಕೃ. ದೇ—"ಬರೆವಣಿಗೆಯ ಸಾಕ್ಷಿಯು ಸಿಕ್ಕಿರುವಾಗ ಭ್ರಾಂತಿಗೆ ಅವಕಾಶವೆಲ್ಲಿಯದು?"

ಮಂತ್ರಿ—"ಬರೆವಣಿಗೆಯ ನಿದರ್ಶನವೇ? ಅದು ಯಾರ ಬರೆವಣಿಗೆ?"

ಕೃ. ದೇ—ಬೇರೆಯವರ ಬರೆವಣಿಗೆಯಿಂದ ವಿಜಯಸಿಂಹನ ಮೇಲೆ ದೋಷಾರೋಪಣೆ ಮಾಡಲಾಗುವುದೇ? ನೀವೇ ನೋಡಿರಿ" ಎಂದು ಹೇಳಿ ಒಂದು ಕಾಗದವನ್ನು ತೆಗೆದು ಮಂತ್ರಿಗೆ ಕೊಟ್ಟರು. ಆತನು ದೀಪದ ಬೆಳಕಿನಲ್ಲಿ ಆ ಕಾಗದದ ಬರೆವಣಿಗೆಯನ್ನು ಚೆನ್ನಾಗಿ ಪರೀಕ್ಷಿಸಿ, ಅನಂತರ ಅದನ್ನು ಓದಿಕೊಂಡನು. ಅದರಲ್ಲಿ ಈ ಮೇರೆಗೆ ಬರೆದಿದ್ದಿತು:—

"ಸುಗುಣನಿಧಿಯಾದ ಅನಂಗಸೇನೆಗೆ—

ನಮ್ಮ ಅನುರಾಗಬೀಜವು ಚಿಕ್ಕಂದಿನಲ್ಲೇ ಮೊಳೆತು, ಚಿಗುರಿ ಹೂವಾಗಿದ್ದರೂ, ಫಲಬಿಡುವಹೊತ್ತಿಗೆ ಒಬ್ಬರಿಂದೊಬ್ಬರನ್ನು ಭಗವಂತನು ಅಗಲಿಸಿಬಿಟ್ಟನು. ಆ ದಿನ ಕೊಂಡವಲ್ಲಿಯ ದುರ್ಗದ ಉಪವನದಲ್ಲಿ ನಮ್ಮಿಬ್ಬರಿಗೂ ನಡೆದ ಸಂಭಾಷಣೆಯನ್ನು ಜ್ಞಾಪಿಸಿಕೊಂಡು, ಒಂದುಬಾರಿ ನನಗೆ ನಿನ್ನ ಸಂದರ್ಶನವನ್ನು ಕೊಡು. ನನ್ನ ಗುರುತು ತಿಳಿಯದಿರಲೆಂದು ಈ ಮೇರೆಗೆ ನನ್ನ ಬರೆವಣಿಗೆಯನ್ನು ಬದಲಾಯಿಸಿರುವೆನು. ನನ್ನ ಗುರುತಿಗಾಗಿ ಇದರಲ್ಲಿಟ್ಟಿರುವ ಉಂಗುರವನ್ನು ಕಳುಹಿಸಿರುವೆನು ನಿನ್ನ ಉಂಗುರವನ್ನು ಕಳುಹಿಸಿಕೊಟ್ಟರೆ, ಅದನ್ನು ನೀನು ಬರುವವರೆಗೂ ನೋಡಿಕೊಳ್ಳುತ್ತಲಾದರೂ ಮನಸ್ಸಿಗೆ ಸಮಾಧಾನವನ್ನು ಉಂಟುಮಾಡಿಕೊಳ್ಳುತ್ತಲಿರುವೆನು. ಕೂಡಲೆ ಇದಕ್ಕೆ ಪ್ರತ್ಯುತ್ತರವನ್ನು ಕಳುಹಿಸು."

ಈ ಕಾಗದವನ್ನು ಪೂರ್ತಿಯಾಗಿ ಓದಿಕೊಂಡ ಕೂಡಲೆ ಮಂತ್ರಿ ವಿಸ್ಮಯವೂ ವ್ಯಸನವೂ ಉಂಟಾದುವು. ಅದರ ಬರೆವಣಿಗೆಯು ವಿಜಯ

ಸಿಂಹನ ಬರೆವಣಿಗೆಯನ್ನು ಸ್ವಲ್ಪಮಟ್ಟಿಗೆ ಹೋಲುತ್ತಿದ್ದರೂ, ಅದು, ವಿಜಯಸಿಂಹನ ಹಸ್ತಾಕ್ಷರವೆಂದೇ ಸಾಧಿಸಲು ಆಗುವಂತಿರಲಿಲ್ಲ. ಆದುದರಿಂದ ಮಂತ್ರಿಯು ಚಕ್ರವರ್ತಿಯವರನ್ನು ಕುರಿತು "ಮಹಾಸ್ವಾಮಿಯವರಿಗೆ ಈ ಬರೆವಣಿಗೆಯು ವಿಜಯಸಿಂಹನದೇ ಎಂದು ಹೇಗೆ ನಿರ್ಧರವಾಯಿತೋ ತಿಳಿಯಲಿಲ್ಲ; ಆದರೂ ಇದನ್ನು ನಂಬಿಬಿಟ್ಟು ಅನಂಗಸೇನೆಯನ್ನೂ ವಿಜಯಸಿಂಹನನ್ನೂ ದೋಷಿಗಳಾಗಿ ಎಣಿಸುವುದು ಅಷ್ಟು ಉಚಿತವಾಗಿ ತೋರುವುದಿಲ್ಲ" ಎಂದು ಧೈರ್ಯವಾಗಿ ಹೇಳಿದನು.

ಕೃ. ದೇ—"ನೀವು ಈ ಕಾಗದವನ್ನೇಕೆ ನಂಬುವುದಿಲ್ಲ? ಅವನು ಬರೆವಣಿಗೆಯನ್ನು ಬೇಕೆಂತಲೇ ಬದಲಾಯಿಸಿರುವನೆಂದು ಕಾಗದದಿಂದಲೇ ವ್ಯಕ್ತವಾಗುವುದಲ್ಲಾ! ಇದು ವಿಜಯಸಿಂಹ, ಅನಂಗಸೇನೆ—ಇವರಿಗೆ ನಡೆದ ಪತ್ರವ್ಯವಹಾರವೇ ಆಗಿರಬೇಕೆಂದು ಸ್ಪಷ್ಟವಾಗಿಯೇ ಇರುವುದಷ್ಟೆ?"

"ಅವರಿಬ್ಬರಿಗೂ ಕೊಂಡಪಲ್ಲಿಯೇನೋ ಜನ್ಮಭೂಮಿ ಹೌದು. ಆದರೆ ಅಷ್ಟುಮಾತ್ರದಿಂದಲೇ ಈ ಕಾಗದದಲ್ಲಿ ಹೇಳಿರುವವರು ವಿಜಯಸಿಂಹನೂ ಅನಂಗಸೇನೆಯೂ ಹೌದೆಂದು ನಂಬಬಹುದೇ? ಚೆನ್ನಾಗಿ ಯೋಚಿಸಿ ನೋಡೋಣವಾಗಲಿ."

"ಅಪ್ಪಾಜಿ! ಇದೇನು ಹೀಗೆ ಹೇಳುತ್ತಿರುವಿರಿ? ಅಂಗುಳೀಯಕವನ್ನು ವಿನಿಮಯಮಾಡಿಕೊಂಡಿರುವರೆಂದು ಹೇಳಿದೆಯಷ್ಟೆ? ಇದು ನಿಜವಾಗಿದ್ದರೆ ನಂಬದೆ ಇರಲು ಹೇಗಾಗುವುದು?"

"ಮಹಾಸ್ವಾಮಿಯವರು ಸಾವಧಾನದಿಂದ ಕೇಳಬೇಕು: ವಿಜಯಸಿಂಹನಿಗೆ ಪ್ರಬಲಶತ್ರುಗಳಿರುವರೆಂದು ತಮಗೆ ತಿಳಿದೇ ಇರುವುದು. ಅವರು ಕುತಂತ್ರಗಳನ್ನು ಮಾಡಿ ಬಂದು ಉಂಗುರದಂತಿರುವ ಮತ್ತೊಂದನ್ನು ರಚಿಸಿರಬಾರದೇ? ಒಂದು ವೇಳೆ ಅವರು ಹೀಗೆ ಮಾಡಿದ್ದಲ್ಲಿ, ನಿರಪರಾಧಿಗಳಾದವರಮೇಲೆ ದೋಷಾರೋಪಣೆ ಮಾಡಿದಂತಾಗುವುದಿಲ್ಲವೇ?"

"ನಿಮ್ಮ ಈ ಪೂರ್ವಪಕ್ಷವು ಅಷ್ಟು ಸಮಂಜಸವೆಂದು ತೋರುವುದಿಲ್ಲ. ಏಕೆಂದರೆ ಆ ಉಂಗುರಗಳು ಸುಲಭವಾಗಿ ಎಲ್ಲರ ಕೈಗೂ ಸಿಕ್ಕುವಂತಹುವಲ್ಲ. ಪರದೇಶದ ವರ್ತಕನೊಬ್ಬನಿಂದ ಒಂದೇಮಾಟದ ಎರಡು ಉಂಗುರಗಳನ್ನು ಕೊಂಡುಕೊಂಡು ರಹಸ್ಯವಾಗಿ ಬಂದರಮೇಲೆ 'ಶ್ರೀರಂಗ

ಎಂದು ಕೆತ್ತಿಸಿ ನಮ್ಮ ಬೆರಳಿಗೇ ಇಟ್ಟುಕೊಂಡು, ಮತ್ತೊಂದರಮೇಲೆ 'ಅನಂಗಸೇನೆ' ಎಂದು ಕೆತ್ತಿಸಿ ಅದನ್ನು ಆಕೆಗೆ ಕೊಟ್ಟಿದ್ದೆವು. ಹೀಗಿರುತ್ತಿರಲಾಗಿ ವಿಜಯಸಿಂಹನು ಅಪಾಯದಿಂದ ನಿಮ್ಮನ್ನು ತಪ್ಪಿಸಿದುದಕ್ಕಾಗಿ ಸಂತೋಷಪಟ್ಟು ಅವನಿಗೆ ನಮ್ಮ ಉಂಗುರವನ್ನು ಕೊಟ್ಟುಬಿಟ್ಟೆವು. ಈಗ ಅವರವರ ಉಂಗುರಗಳು ಅವರವರ ಬಳಿಯಲ್ಲೇ ಇರುವ ಪಕ್ಷದಲ್ಲಿ, ಈ ಕಾಗದವು ಕೃತಕವಾದುದೆಂದು ನಂಬಿದರೂ ನಂಬಬಹುದು" ಎಂದು ಚಕ್ರವರ್ತಿಯವರು ಉತ್ತರಕೊಟ್ಟರು.

ಈ ಮಾತನ್ನು ಕೇಳಿ ಮಂತ್ರಿಯು ನಿರುತ್ತರನಾದುದರಿಂದ, ಚಕ್ರವರ್ತಿಯವರು ಅತ್ಯಂತವಿಶ್ವಾಸಪಾತ್ರನಾಗಿದ್ದ ಒಬ್ಬ ದೂತನನ್ನು ಕರೆದು ವಿಜಯಸಿಂಹನಿಂದ ಅವನಿಗೆ ಕೊಟ್ಟಿದ್ದ ಉಂಗುರವನ್ನು ತರಬೇಕೆಂದು ಆಜ್ಞಾಪಿಸಿದರು. ಅವನು ಜಾಗ್ರತೆಯಾಗಿ ವಿಜಯಸಿಂಹನ ಬಳಿಗೆಹೋಗಿ ಚಕ್ರವರ್ತಿಯವರು ಉಂಗುರವನ್ನು ತರಬೇಕೆಂದು ಆಜ್ಞಾಪಿಸಿರುವರೆಂಬುದಾಗಿ ತಿಳಿಸಿದನು. ಈಗ ವಿಜಯಸಿಂಹನಿಗೆ ಪ್ರಬಲವಾದ ಚಿಂತೆಯೊದಗಿತು. ಏಕೆಂದರೆ ಅನೆಗೊಂದಿಯಲ್ಲಿ ಘಾತುಕರು ಅವನನ್ನು ಕಟ್ಟಿ ಕೈವಮುತಕ್ಕೆ ಹೊತ್ತುಕೊಂಡು ಹೋದಾಗ ಅವರು ಅವನ ಉಂಗುರವನ್ನು ಅಪಹರಿಸಿಬಿಟ್ಟಿದ್ದರು. ಈ ಸಂಗತಿಯನ್ನು ಪ್ರಕಟಪಡಿಸಿದರೆ ಮಾನಹಾನಿಯಾದೀತೆಂದು ಹೆದರಿ, ವಿಜಯಸಿಂಹನು ಅವನಿಗೆ ಬಹುಮತಿಯಾಗಿ ಹುಚ್ಚನು ಕೊಟ್ಟಿದ್ದ ಉಂಗುರವೂ ರಾಯರು ಕೊಟ್ಟಿದ್ದ ಉಂಗುರದಂತೆಯೇ ಇದ್ದುದರಿಂದ ಅದನ್ನೇ ಕೊಟ್ಟುಕಳುಹಿಸಿದನು. ಆದರೆ ಮಹಾರಾಜರವರು ಹೀಗೆ ತಾವೇ ಕೊಟ್ಟಿದ್ದ ಉಂಗುರವನ್ನು ಅಕಸ್ಮಾತ್ತಾಗಿ ಹಿಂದಕ್ಕೆ ತರಿಸಿಕೊಂಡುದನ್ನು ಕಂಡು ಆಶ್ಚರ್ಯಪಟ್ಟು, "ಈಗ ಉಂಗುರವನ್ನೇಕೆ ತರಿಸಿಕೊಂಡಿರುವರು?" ಎಂದು ವಿಜಯಸಿಂಹನು ದೂತನನ್ನು ಕೇಳಿದನು. ಆದರೆ ಅವನು "ಏತಕ್ಕೋ ತಿಳಿಯದು. ರಾಜಮಂತ್ರಿಗಳಿಬ್ಬರೂ ಮಾತನಾಡುತ್ತಾ ಇರುವರು" ಎಂದು ಹೇಳಿ ಅರಮನೆಗೆ ಹೋಗಿ ಅದನ್ನು ರಾಯರಿಗೆ ಒಪ್ಪಿಸಿದನು. ರಾಯರು ಅನಂಗಸೇನೆಯ ಬಳಿಗೆ ಒಬ್ಬ ದೂತಿಯನ್ನು ಕಳುಹಿಸಿ ಅನಂಗಸೇನೆಯ ಉಂಗುರವನ್ನೂ ತರಿಸಿ ಮಂತ್ರಿಯ ಕೈಗೆ ಕೊಟ್ಟರು. ಹೀಗೆ ಉಂಗುರವನ್ನು ಅಕಸ್ಮಾತ್ತಾಗಿ ತರಿಸಿಕೊಂಡುದನ್ನು ಕಂಡು ಮಾಲತಿಯು ಆ ದೂತಿ

ಯ ಸಹಾಯದಿಂದ ವಿಷಯವೆಲ್ಲವನ್ನೂ ತಿಳಿದುಕೊಂಡಳು. ಉಂಗುರಗಳು ವಿನಿಮಯವಾಗಿರುವುದನ್ನು ಮಂತ್ರಿಯು ಕಂಡು ಬೆರಗಾಗಿಹೋಗಿ ನಿರುತ್ತರನಾದನು. ರಾಯರು ಆತನನ್ನು ಕುರಿತು "ಈಗ ಏನುಹೇಳುವಿರಿ? ಈಗಲಾದರೂ ಕಾಗದವು ವಾಸ್ತವವಾದುದೆಂದು ನಂಬುವಿರಲ್ಲವೇ?" ಎಂದು ಕೇಳಿದರು. ಅದಕ್ಕೆ ಮಂತ್ರಿಯು "ನಂಬಬೇಕಾಗಿದೆ; ಆದರೆ ನಾನು ಈ ವರೆಗೂ ವಿಜಯಸಿಂಹನು ಇಂತಹವನೆಂದು ತಿಳಿದಿರಲಿಲ್ಲ; ಅವನನ್ನೇ ಇಲ್ಲಿಗೆ ಕರೆಯಿಸಿ ಕೇಳಿದರೆ ಏನುಹೇಳುವನೋ?"

ಕೃ. ದೇ—"ಇದುವರೆಗೂ ಉಪಕಾರವನ್ನು ಮಾಡಿರುವ ಅವನನ್ನು ನಮ್ಮ ಇದಿರಿಗೆ ನಿಲ್ಲಿಸಿಕೊಂಡು ವಧಾಜ್ಞೆಮಾಡುವುದು ಸರಿಯಲ್ಲ. ಉಂಗುರವೇ ಪ್ರತ್ಯಕ್ಷಪ್ರಮಾಣವಾಗಿರುವುದರಿಂದ, ಅವನನ್ನು ಕರೆಯಿಸಿ ಕೇಳುವ ಆವಶ್ಯಕತೆಯೂ ಇಲ್ಲ; ಅವನನ್ನು ನಾಳೆಯೇ ಶೂಲಕ್ಕೆ ಏರಿಸಿ ಬಿಡಬೇಕೆಂದು ಚಂಡಾಲರಿಗೆ ಆಜ್ಞಾಪತ್ರವನ್ನು ಕಳುಹಿಸಿಬಿಡಿ" ಎಂದು ಹೇಳಿದರು.

ಮಂತ್ರಿಯೂ ಆ ಮಾತಿಗೆ ಪ್ರತಿಯಾಡಲು ಪ್ರಯತ್ನಿಸಲಿಲ್ಲ. ಆದರೂ ಒಂದು ಆಲೋಚನೆಯು ಹೊಳೆದುದರಿಂದ ಆತನು—"ಇದು ಹೂವಿನ ದಂಡೆಯಲ್ಲಿದ್ದಿತೆಂದಲ್ಲವೇ ತಾವು ಅಪ್ಪಣೆಕೊಡಿಸಿದುದು? ಹೂವಾಡಿಗನನ್ನು ಕರೆಯಿಸಿ ಕೇಳಿದರೆ ಏನಾದರೂ ಸಂಗತಿಗಳು ಹೊರಪಡುವುವೇನೋ? ವಿಚಾರಿಸಿದರೆ ಒಳ್ಳೆಯದೆಂದು ನನ್ನ ಬುದ್ಧಿಗೆ ಹೊಳೆಯುತ್ತದೆ" ಎಂದನು.

ಕೃ. ದೇ—ಅಂತಃಪುರದ್ರೋಹಿಯನ್ನು ಬಿಟ್ಟುಬಿಡಬೇಕೆಂದು ನಿಮಗೆ ಅಭಿಪ್ರಾಯವಿರುವುದೇನು? ಉಂಗುರಗಳನ್ನು ವಿನಿಮಯಮಾಡಿಕೊಂಡಿರುವುದನ್ನು ಕಂಡೂ ಇಷ್ಟೆಂದು ಸಂಶಯವೇಕೆ?"

ಮಂತ್ರಿ—"ಮಹಾಸ್ವಾಮಿಯವರು ಕ್ಷಮಿಸಬೇಕು. ನಾನು ದುಷ್ಟನಿಗ್ರಹಕ್ಕೆ ಎಂದಿಗೂ ಹಿಂದೆಗೆಯುವವನಲ್ಲವೆಂದು ಚಿತ್ತಕ್ಕೆ ವೇದ್ಯವಾಗಿದೆ."

[illegible] ವಿಜಯಸಿಂಹನನ್ನು ವಧಿಸಿ ಬಿಡಬೇಕೆಂದು [illegible] ಆಜ್ಞಾಪತ್ರವನ್ನು ಬರೆದು ಕಳುಹಿಸಿಬಿಡಿ."

ಮಂತ್ರಿ:—“ ಮಹಾಸ್ವಾಮಿಯವರ ಚಿತ್ತಕ್ಕೆ ನಾನು ಎಂದಿಗೂ ಪ್ರತಿ ಹೇಳುವವನಲ್ಲವೆಂದು ತಮಗೆ ತಿಳಿದೇ ಇದೆ. ಈಗಲೇ ಆಜ್ಞಾಪತ್ರವನ್ನು ಬರೆದು ಕಳುಹಿಸುವೆನು. ಆದರೆ ನನ್ನದೊಂದು ಸಣ್ಣ ಪ್ರಾರ್ಥನೆಯನ್ನು ನಡೆಯಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದಯೆಯಿಟ್ಟು ದೊಡ್ಡ ಮನಸ್ಸುಮಾಡಿ ಅಪ್ಪಣೆಕೊಡಿಸಬೇಕು.”

ಕೃ. ದೇ :—“ ಅದೇನು ?”

ಮಂತ್ರಿ :—“ ವಿಜಯಸಿಂಹನನ್ನು ಕೂಡಲೇ ಕಾರಾಗೃಹದಲ್ಲಿ ಬಂಧಿಸಿ ಇಂದಿಗೆ ಐದನೆಯ ದಿವಸ ಅವನನ್ನು ವಧಿಸಲು ಅನುಜ್ಞೆಯಾಗಬೇಕು” ಎಂದು ವಿನಯದಿಂದ ಕೇಳಿಕೊಳ್ಳಲು ಅದಕ್ಕೆ ಮಹಾರಾಜರು ಒಪ್ಪಿಕೊಂಡರು. ಅನಂಗಸೇನೆಯು ಎರಡುದಿನಗಳಲ್ಲಿ ಊರನ್ನು ಬಿಟ್ಟು ಹೊರಡಬೇಕೆಂದು ತಿಳಿಸುವಂತೆಯೂ ಅವಳು ಕಳುಹಿಸಿದ್ದ ಉಂಗುರವನ್ನು ಅವಳಿಗೆ ಹಿಂದಿರುಗಿ ಕೊಡಿಸುವಂತೆಯೂ ಮಂತ್ರಿಗೆ ನಿಯಮಿಸಿ, ಮಹಾರಾಜರವರು ತಮ್ಮ ಅಂತಃಪುರಕ್ಕೆ ಹೊರಟುಹೋದರು.

ಬಳಿಕ ಮಂತ್ರಿಯು ತನಗೆ ಪ್ರಾಣದಾನವನ್ನು ಮಾಡಿದ್ದ ವಿಜಯಸಿಂಹನಿಗೆ ವಧಾಜ್ಞೆಯನ್ನು ಕಳುಹಿಸಿಕೊಡಬೇಕಾಯಿತಲ್ಲಾ ಎಂದು ವ್ಯಸನಪಡುತ್ತಾ, ರಾಯರ ಆಜ್ಞೆಯಂತೆ ನಡೆದುಕೊಂಡನು. ಅನಂಗಸೇನೆಯು ರಾಯರ ಆಜ್ಞೆಯನ್ನು ಕೇಳಿ ಚಿಂತಾಕ್ರಾಂತಳಾಗಿ ದಿಕ್ಕುತೋರದೆ ಪ್ರಲಾಪಿಸುತ್ತಿದ್ದಳು. ಮಾಲತಿಯು ಎಷ್ಟು ಸಂತೈಸಿದರೂ ಅವಳಿಗೆ ಸಮಾಧಾನವಾಗಲಿಲ್ಲ. ಉಂಗುರಗಳು ಹೇಗೆ ವಿನಿಮಯವಾದುವೆಂಬುದು ಮಾಲತಿಗೆ ತಿಳಿಯದು; ಅನಂಗಸೇನೆಗೆ ಮೊದಲೇ ತಿಳಿಯದು. ಹೂವಿನದಂಡೆಯಲ್ಲಿ ಸಿಕ್ಕಿದ ಒಂದು ಹಾಳುಕಾಗದದಿಂದ ತನ್ನ ಒಡತಿಗೆ ಈ ಅವಸ್ಥೆಯು ಒದಗಿರಬಹುದೆಂದು ಊಹಿಸಿ ಹೂವಾಡಿಗ ವಸಂತನನ್ನಾದರೂ ಕೇಳಿದರೆ ಏನಾದರೂ ಸಂಗತಿ ಹೊರಪಡುವುದೆಂದು ಭಾವಿಸಿ ಮಾಲತಿಯು ಹೂವಾಡಿಗನನ್ನು ಹುಡುಕಿದಳು. ಆದರೆ ಯಾರನ್ನು ಕೇಳಿದರೂ ಅವನ ಸುದ್ದಿಯೇ ತಿಳಿಯಲಿಲ್ಲ. ಆದುದರಿಂದ ಮಾಲತಿಯು ಹಿಂದಿರುಗಿಬಂದು ಅನಂಗಸೇನೆಯನ್ನು ಸಂತೈಸುವ ಪ್ರಯತ್ನವನ್ನು ಮಾಡುತ್ತಿದ್ದಳು. ಕಡೆಗೆ ಅನಂಗಸೇನೆಯು ಆ ದಿನ ರಾತ್ರಿಯೇ ಅರಮನೆಯನ್ನು ಬಿಟ್ಟುಹೊರಡಬೇಕೆಂದು

ನಿಶ್ಚಯಿಸಿಕೊಂಡಳು. ಮಾಲತಿಯೂ ತನ್ನ ಒಡತಿಯು ಆಪತ್ಕಾಲದಲ್ಲಿ ಆಕೆಯೊಡನೆಯೇ ಇದ್ದುಕೊಂಡಿರಬೇಕೆಂದು ನಿರ್ಧರಿಸಿದಳು. ಆದುದರಿಂದ ಆದಿನ ರಾತ್ರಿಯೇ ಅನಂಗಸೇನೆ ಮಾಲತಿಯರು ವಿಜಯನಗರವನ್ನು ಬಿಟ್ಟು ಹೊರಟುಹೋದರು. ಪೌರಜನರು ಆ ಸಮಾಚಾರವನ್ನು ಕೇಳಿದ ಕೂಡಲೆ ಅನಂಗಸೇನೆಯು ವಾಸ್ತವವಾಗಿಯೂ ಅಪರಾಧಿನಿ ಎಂದೇ ಭಾವಿಸಿಕೊಂಡರು.

ಹದಿಮೂರನೆಯ ಪ್ರಕರಣ.

ಮತ್ತೊಂದು ಸಭೆ.

ಮಂತ್ರಃ ಕಾರ್ಯಾನುಗೋ ಯೇಷಾಂ ಕಾರ್ಯಂ ಸ್ವಾಮಿಹಿತಾನುಗಮ್ |
ತ ಏತೇ ಮಂತ್ರಿಣೋ ರಾಜ್ಞಾಂ ನ ತು ಯೇ ಗಳಪಲ್ಲವಾಃ ||

ಆನೆಗೊಂದಿಯಲ್ಲಿ ಮತ್ತೊಂದುಸಲ ಪ್ರಹರೇಶ್ವರಾದಿಗಳ ಸಭೆಯು ಸೇರಿತು. ಪೂರ್ವದ ಸಭೆಯಲ್ಲಿ ಆಗಿದ್ದಂತೆಯೇ ಈ ಸಭೆಯಲ್ಲೂ ರಾಮಯನು ಅಧ್ಯಕ್ಷನಾಗಿದ್ದನು. ಆದರೆ ಈ ಸಭೆಗೆ ಮುಕ್ತಾಂಬೆಯು ಮಾತ್ರ ಬಂದಿರಲಿಲ್ಲ. ಆಕೆಯನ್ನು ಸಭೆಗೆ ಬರುವಂತೆ ರಾಮಯನೂ ಒತ್ತಾಯ ಮಾಡಲಿಲ್ಲ. ರುದ್ರದೇವಾದಿಗಳು ಮುಕ್ತಾಂಬೆಯು ಬಾರದಿದ್ದುದಕ್ಕೆ ಕಾರಣಗಳನ್ನು ಊಹಿಸಿ ಸಾಕಾಯಿತು; ಆದರೂ ಕಾರಣತಿಳಿಯಲಿಲ್ಲ. ಕಟ್ಟಕಡೆಗೆ ರುದ್ರದೇವನು ರಾಮಯನನ್ನು ಕುರಿತು " ಮುಕ್ತಾಂಬೆಯು ಈ ಸಭೆಗೆ ಏಕೆ ಬರಲಿಲ್ಲ ? ಮೃದುಮಧುರವಾಗಿಯೂ ಸಯುಕ್ತಿಕವಾಗಿಯೂ ಮಾತನಾಡಿ ಕಾರ್ಯನಿಶ್ಚಯಮಾಡುವುದಕ್ಕೆ ಆಕೆಗಿರುವ ಸಾಮರ್ಥ್ಯವು ಅಸಾಧಾರಣವಾದುದು " ಎಂದು ಹೇಳಿದನು.

ಈ ಮಾತುಗಳನ್ನು ಕೇಳಿ, ಉತ್ತರಕೊಡದಿದ್ದರೆ ರುದ್ರದೇವನಿಗೆ ಕೋಪಬಂದೀತೆಂದು ತಿಳಿದು, ರಾಮಯನು " ಮುಕ್ತಾಂಬೆಯು ಈದಿನದ ಸಭೆಗೆ ಬಾರದಿರುವುದಕ್ಕೆ ಒಂದು ಪ್ರಬಲಕಾರಣವಿರುವುದು. ಸ್ತ್ರೀಚಿತ್ತವು ಅತಿಚಂಚಲವಾದುದು. ಅವರಿದಿರಿಗೆ ಹೇಳಿದ ರಹಸ್ಯವು ಬಯಲಿಗೆ ಬಾರದಿರದು. ಆ ದಿನ ವಿಜಯಸಿಂಹನನ್ನು ಕೊಲ್ಲಬೇಕೆಂದು ನಾವು ಮಾಡಿದ ಆಲೋಚನೆಗಳೆಲ್ಲವೂ ಬಹಿರಂಗವಾಗಿ, ನಮ್ಮ ಉದ್ದೇಶವು ವ್ಯರ್ಥವಾದುದು

ಮುಕ್ತಾಂಬೆಯು ದೆಸೆಯಿಂದಲೇ. ಮುಖ್ಯವಾಗಿ, ಅವಳು ವಿಜಯಸಿಂಹನಿಗೆ ಮನಸೋತಿರುವಳು " ಎಂದು ಹೇಳಿ, ಉಳಿದ ವೃತ್ತಾಂತವನ್ನೆಲ್ಲಾ ಸಮಗ್ರವಾಗಿ ತಿಳಿಸಿದನು.

ಈ ಸಮಾಚಾರವನ್ನು ಕೇಳಿ ಸಭೆಯವರೆಲ್ಲರೂ ಆಶ್ಚರ್ಯಭರಿತರಾದರು. ರುದ್ರದೇವನಿಗೆ ಆಶ್ಚರ್ಯಮಾತ್ರವಲ್ಲದೆ ದುರ್ಧರವಾದ ಚಿಂತೆಯೂ ಉಂಟಾಯಿತು. ಸಕಾಲದಲ್ಲಿ ಮುಕ್ತಾಂಬೆಯು ತನ್ನನ್ನು ವರಿಸುವಳೆಂದೂ, ಆಗ ತನ್ನ ಮನೋರಥವು ಕೈಗೂಡುವುದೆಂದೂ ವಿಧವಿಧವಾಗಿ ಮನಸ್ಸಿನಲ್ಲಿಯೇ ಆಲೋಚಿಸಿಕೊಳ್ಳುತ್ತಾ ಆಕಾಶಹರ್ಮ್ಯಗಳನ್ನು ಕಲ್ಪಿಸಿಕೊಳ್ಳುತ್ತಿದ್ದ ರುದ್ರದೇವನಿಗೆ ಮುಕ್ತಾಂಬೆಯು ವಿಜಯಸಿಂಹನಲ್ಲಿ ಅನುರಕ್ತಳಾಗಿರುವಳೆಂದು ಕೇಳಿದಕೂಡಲೆ ಚಿಂತೆಯುಂಟಾದುದರಲ್ಲಿ ವಿಶೇಷವೇನು? ಈ ಚಿಂತೆಯು ಬಹುಕಾಲವಿರಲಿಲ್ಲ. "ಈಗಲಾದರೂ ಆ ದುರಾತ್ಮನು ನಾಶವಾಗಲಾರನೇ? ಇಷ್ಟು ಹೊತ್ತಿಗೆ ಆಗಲೇ ಅವನು ಯಮಪಟ್ಟಣದ ದಾರಿಯನ್ನು ಹಿಡಿದಿರಬೇಕು ಎಂದು ತೋರುವುದು. ಮುಕ್ತಾಂಬೆಯು ಅಂತಹ ಕೆಲಸಮಾಡಿದ್ದರೆ, ಅವಳು ಈ ಸಭೆಗೆ ಬಾರದಿದ್ದುದೇ ಬಹಳ ಕ್ಷೇಮ"ವೆಂದು ರುದ್ರದೇವನು ಉತ್ತರಹೇಳಿದನು.

ರಾಮಯ—"ಸಭೆಗೆ ಬರಬೇಕೆಂದು ಮುಕ್ತಾಂಬೆಯನ್ನು ನಾನು ಕರೆಯದಿದ್ದಮಾತ್ರಕ್ಕೇ ಆಕೆಗೆ ಕೋಪಬರುವಂತಿಲ್ಲ. ವಿಜಯಸಿಂಹನು ಇಂದೋ ನಾಳೆಯೋ ಸಾಯುವನು; ಬಳಿಕ ನಿನ್ನಬಯಕೆಯು ಕೈಗೂಡುವುದು" ಎಂದು ರುದ್ರದೇವನಿಗೆ ಸಮಾಧಾನಹೇಳಿದನು.

ಪ್ರಹರೇಶ್ವರನಾದರೋ "ನಿಮ್ಮ ಬಲೆಯಲ್ಲಿ ಸಿಕ್ಕಿಬಿದ್ದ ಮೇಲೆ ಅವನಿಗೆ ಬಿಡುಗಡೆಯೆಲ್ಲಿ? ಇದಕ್ಕಾಗಿ ರುದ್ರದೇವನೂ ನೀವೂ ಮಾಡಿದ ಕಾರ್ಯಗಳನ್ನು ಎಷ್ಟು ಹೊಗಳಿದರೂ ಕಡಿಮೆಯೇ. ಇಷ್ಟು ಬುದ್ಧಿಕುಶಲತೆಯನ್ನು ಹೊಂದಿರುವ ರುದ್ರದೇವನೇ ಮುಕ್ತಾಂಬೆಗೆ ತಕ್ಕ ಪತಿ ಎಂಬುದು ನನ್ನ ಅಭಿಪ್ರಾಯ"ವೆಂದು ಹೇಳಿದನು.

ಇದನ್ನು ಕೇಳಿ ರಾಮಯನು "ನಿನ್ನ ಮಾತು ಯುಕ್ತವಾದುದೇ ಸರಿ. ಆದರೂ ಮುಕ್ತಾಂಬೆಯು ಅನುರಾಗವು ವಿಜಯಸಿಂಹನನ್ನು ಬಿಟ್ಟು, ರುದ್ರದೇವನಲ್ಲಿ ನೆಲೆಗೊಳ್ಳುವುದು ಸುಲಭವಲ್ಲ. ಹಳ್ಳಕ್ಕೆ ಹರಿಯುತ್ತಿರುವ

ಪ್ರವಾಹವು ತಿಟ್ಟು ಹತ್ತುವಂತಾಗುವುದು ಸುಲಭವಲ್ಲವಷ್ಟೆ ?" ಎಂದು ಕೇಳಿದನು.

ರುದ್ರದೇವ—"ಮಂತ್ರಿವರ್ಯ ! ನಿಮ್ನಗಾಮಿಗಳಾದ ಪ್ರವಾಹಗಳಿಗೆ ಅಡ್ಡಗಟ್ಟಿ, ಅವುಗಳನ್ನು ಬೇಕಾದ ಸ್ಥಳಗಳಿಗೆ ತೆಗೆದುಕೊಂಡು ಹೋಗಿರುವುದನ್ನು ತಾವು ಎಷ್ಟು ನೋಡಿಲ್ಲ ?"

ರಾಮಯ—"ಆದರೂ ಹರಿಯುತ್ತಿರುವ ಪ್ರವಾಹವನ್ನು ತಡೆಯಬೇಕಾದರೆ ಕಟ್ಟೆಗೆ ಎಷ್ಟು ಬಲವಿರಬೇಕು ? ಕಟ್ಟೆಯಲ್ಲಿ ಎಷ್ಟು ಮಾತ್ರ ಲೋಪವಿದ್ದರೂ, ಪ್ರಯತ್ನಗಳೆಲ್ಲವೂ ನಷ್ಟವಾಗುವುವಷ್ಟೆ ? ಪ್ರಹರೇಶ್ವರನೂ ಆಕೆಯ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಲು ಯತ್ನಿಸುತ್ತಿರಬೇಕು. ನೀನೂ ಸದ್ಗುಣಗಳಿಂದ ಆಕೆಯ ಅನುರಾಗವನ್ನು ಸಂಪಾದಿಸಿಕೊಳ್ಳಲು ಸರ್ವಪ್ರಯತ್ನಗಳನ್ನೂ ಮಾಡುತ್ತಿರಬೇಕು."

ಪ್ರಹರೇ—"ಮಂತ್ರಿವರೇಣ್ಯರೇ ! ಮೊನ್ನೆ ಮದುವೆಯ ಪ್ರಸ್ತಾವವನ್ನೆತ್ತಿದಾಗ ಮುಕ್ತಾಂಬೆಯು ನಿಷ್ಕರ್ಷೆಯಾದ ಮಾತನ್ನೇನೂ ಹೇಳಲಿಲ್ಲ. ಅವಳಿಗೆ ವಿಜಯಸಿಂಹನಲ್ಲೇ ಅನುರಾಗವು ಸ್ಥಿರವಾಗಿರುವಂತೆ ತೋರುವುದು. ವಿಜಯಸಿಂಹನು ಸತ್ತನೆಂದರೆ ಆಕೆಯ ಅನುರಾಗಲತೆಗೆ ನಿರಾಲಂಬತೆಯುಂಟಾಗಿ, ರುದ್ರದೇವನನ್ನು ಆಶ್ರಯಿಸಬಹುದು ; ಈಗಲವೂ ವಿಜಯಸಿಂಹನು ಬದುಕಿಕೊಳ್ಳುವನೇ ?"

ರಾಮಯ—"ಅದು ಹೇಗೆ ಆಗುವುದು ? ಅವನನ್ನು ಕೂಡಲೆ ವಧಿಸಬೇಕೆಂದು ಚಕ್ರವರ್ತಿಯವರು ಉದ್ದೇಶಿಸಿದ್ದರೂ, ತಿಮ್ಮರಸನು ಅವನನ್ನು ಕೆಲವು ದಿನಗಳವರೆಗೆ ಕಾರಾಗೃಹದಲ್ಲಿಟ್ಟಿರುವಂತೆ ಏರ್ಪಡಿಸಿರುವನಂತೆ ! ಅನಂಗಸೇನೆಯು ಊರುಬಿಟ್ಟು ಹೊರಟುಹೋದಳಂತೆ ! ಇನ್ನು ವಿಜಯಸಿಂಹನ ಅವತಾರವು ಮುಗಿದಹಾಗೆಯೇ. ಆದರೆ ವಿಜಯಸಿಂಹನನ್ನು ಕೊಲ್ಲಿಸುವುದಕ್ಕಾಗಿ ನಾವು ಈಗ ಮಾಡಿರುವ ಒಳಸಂಚನ್ನು ಒಬ್ಬರಿಗೂ ತಿಳಿಸಕೂಡದು."

ಪ್ರಹರೇ—"ಮಂತ್ರಿಶ್ರೇಷ್ಠರೆ ! ಇನ್ನು ಮುಂದೆ ನಾವು ಮಾಡಬೇಕಾದುದೇನಿರುವುದು ? ಮಂತ್ರಿಯನ್ನು ಕೊಲ್ಲಲು ಪುನಃ ಪ್ರಯತ್ನಿಸೋಣವೊ ?"

ರಾಮಯ್ಯ—"ನಾವು ಮಾಡಬೇಕಾದ ಕೆಲಸಗಳು ಅನೇಕವಿರುವುವು. ವಿಜಯಸಿಂಹನು ಸತ್ತನೆಂದು ಕೇಳಿದಮೇಲೆ ಅವುಗಳನ್ನು ತಿಳಿಸುವೆನು. ಸದ್ಯದಲ್ಲಿ ಈ ಪುರದಿಂದ ಯಾರೂ ಅರಿಯದಂತೆ ಮುಕ್ತಾಂಬೆಯನ್ನು ಕರೆದುಕೊಂಡು ಹೋಗುವ ಯತ್ನವನ್ನು ಮಾಡಬೇಕಾಗಿದೆ."

ಪ್ರಹರೇ—"ನಾವು ರಾಜದ್ರೋಹಿಗಳೊಡನೆ ಸೇರಿಕೊಂಡು ಒಳಸಂಚನ್ನು ನಡೆಯಿಸುತ್ತಿರುವೆವೆಂದು ಸಂಶಯಪಟ್ಟು, ಈಗ ತಿಮ್ಮರಸನು ನಮ್ಮ ಕಾವಲಿಗಾಗಿ ಹೆಚ್ಚು ಮಂದಿ ಭಟರನ್ನು ನೇಮಿಸಿರುವನು. ತಾವು ನಾನಾವೇಷಗಳನ್ನು ಧರಿಸುತ್ತಿರುವುದರಿಂದಲೇ ಪ್ರವೇಶವು ತಮಗೆ ಸಾಧ್ಯವಾಗಿರುವುದು. ಹೀಗಿರುವಲ್ಲಿ, ಬಲು ಎಚ್ಚರಿಕೆಯುಳ್ಳ ಆ ಭಟರಿಗೆ ಮಂಕುಬೂದಿಯನ್ನು ಚೆಲ್ಲಿ ಮುಕ್ತಾಂಬೆಯನ್ನು ಬಿಡಿಸಿಕೊಂಡು ಹೋಗುವುದು ಹೇಗೋ ನನಗೆ ತಿಳಿಯದು."

ರಾಮಯ್ಯ—"ಇದರ ವಿಷಯವನ್ನು ಕುರಿತು ಯೋಚನೆಯನ್ನು ಬಿಡು. ನೂರುಮಂದಿ ಭಟರಿದ್ದರೂ ಈ ಕೆಲಸವನ್ನು ಸಾಧಿಸುವೆನು. ಮುಕ್ತಾಂಬೆಯು ವಿಜಾಪುರಕ್ಕೆ ಹೋಗಲು ಅಡ್ಡಿಮಾಡಲಾರಳಷ್ಟೆ? ಒಂದು ವೇಳೆ ಅವಳು ಅಡ್ಡಿಮಾಡಿದರೆ ನಮ್ಮ ಪ್ರಯಾಸವೆಲ್ಲವೂ ಮಣ್ಣುಪಾಲಾಗುವುದು"

ಪ್ರಹರೇ—"ಮುಕ್ತಾಂಬೆಯು ನಿಮ್ಮ ಮಾತುಗಳನ್ನು ಮೀರಲಾರಳು. ಪೌರುಷದಿಂದಲೇ ರಾಜ್ಯವನ್ನು ಸಂಪಾದಿಸಿಕೊಳ್ಳಬೇಕೆಂದು ಆಕೆಗೂ ಇಷ್ಟ. ತನ್ನ ಪ್ರಿಯನಾದ ವಿಜಯಸಿಂಹನು ಸತ್ತನೆಂದರೆ ಈ ರಾಜ್ಯದಲ್ಲಿರಲು ಅವಳಿಗೆ ಮನಸ್ಸಿರಲಾರದು. ಇದೂ ಅಲ್ಲದೆ ರಾಜಮಂತ್ರಿಗಳು ಅನೇಕ ಕ್ರೂರಕೃತ್ಯಗಳನ್ನು ಮಾಡುವರೆಂದು ಸುದ್ದಿಯನ್ನು ಹುಟ್ಟಿಸಿದರೆ ಅವಳು ಒಂದು ನಿಮಿಷಕಾಲವಾದರೂ ಇಲ್ಲಿ ಇರಲು ಒಪ್ಪಲಾರಳು. ಇಲ್ಲಿ ಇದ್ದರೆ ನನಗೆ ರಾಜದ್ರೋಹಕ್ಕಾಗಿ ಮರಣದಂಡನೆಯಾಗುವ ಸಂಭವವಿರುವುದೆಂದೂ, ಇಲ್ಲಿಂದ ತಪ್ಪಿಸಿಕೊಂಡುಹೋಗುವುದು ಅತ್ಯಾವಶ್ಯಕವೆಂದೂ ತಿಳಿಸಿದರೆ, ನನ್ನಮೇಲೆ ಆಕೆಗೆ ಬಹಳ ಪ್ರೀತಿಯಿರುವುದರಿಂದ ಅವಳು ನನ್ನೊಡನೆ ಬಂದುಬಿಡಲು ಒಪ್ಪುವಳು. ಆದರೆ ಹೀಗೆಲ್ಲಾ ಬೋಧಿಸು

ವುದಕ್ಕೆ ಒಬ್ಬ ದೂತನನ್ನು ಮಾತ್ರ ಮುಕ್ತಾಂಬೆಯ ಬಳಿಗೆ ಕಳುಹಿಸಿ ಕೊಡಬೇಕು.''

ರಾಮಯ್ಯ—'' ಈ ಕೆಲಸಕ್ಕೆ ರುದ್ರದೇವನೇ ತಕ್ಕವನು. ಇವನು ಆಗಾಗ ಮುಕ್ತಾಂಬೆಯ ಬಳಿಗೆ ಹೋಗಿ ಬರುತ್ತಿದ್ದರೆ, ಇವನಲ್ಲಿ ಅನುರಾಗವು ಹುಟ್ಟಬಹುದು. ಮುಕ್ತಾಂಬೆಯು ವಿಜಯಸಿಂಹನನ್ನು ವರಿಸಿಬಿಟ್ಟರೆ, ಪೌರುಷದಿಂದ ಉದಯಗಿರಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂಭವವೇ ಇರಲಾರದು ; ಆದುದರಿಂದ ರುದ್ರದೇವನನ್ನೇ ಕಳುಹಿಸೋಣ.''

ಪ್ರಹರೀ—'' ನಿಮ್ಮ ಬುದ್ಧಿವಿಶೇಷವು ಅಪ್ರತಿಹತವಾದುದು. ಅದರಿಂದಲೇ ನಿಮ್ಮ ಪ್ರಭುಪುತ್ರಿಯ ಹಿತವು ಕೈಗೂಡುವುದು. ಆದರೆ ಮುಕ್ತಾಂಬೆಯು ನಮ್ಮ ಪ್ರಯತ್ನಗಳಿಗೆ ಅನುಕೂಲಳಾಗಿರಬೇಕು. ನಾನು ಎಷ್ಟು ಹೇಳಿದರೂ ಅವಳು ಸ್ವಲ್ಪ ಮೂರ್ಖತೆಯನ್ನು ತೋರಿಸುತ್ತಿರುವಳು. ಏನುಮಾಡೋಣ ?''

ರಾಮಯ್ಯ—'' ನನ್ನ ಪ್ರಭುಕುಮಾರಿಯ ಹಿತವೇ ನನಗೆ ಯಾವಾಗಲೂ ಮುಖ್ಯವಾಗಿರುವುದರಿಂದ ಆಕೆಯ ಮೂರ್ಖತೆಯೇ ಮೊದಲಾದ ಪ್ರತಿಬಂಧಕಗಳಿಂದ ನಾನು ನನ್ನ ಪ್ರಯತ್ನಗಳಲ್ಲಿ ವಿಮುಖನಾಗುವುದಿಲ್ಲ. ಒಂದು ವಿಷಯದಲ್ಲಿ ಮಾತ್ರ ಆಕೆಯು ನನಗೆ ಪ್ರತಿಕೂಲಳಾಗಿರುವಳು. ನಾನು ರುದ್ರದೇವನನ್ನು ಮದುವೆಯಾಗೇದರೆ ತಾನು ವಿಜಯಸಿಂಹನನ್ನು ಮದುವೆಯಾಗುವೆನೆಂದು ಯತ್ನಿಸುತ್ತಿರುವಳು. ಆದರೆ ವಿಜಯಸಿಂಹನು ನಾಶವಾಗುವುದರಿಂದ ಇನ್ನು ನನ್ನ ಉದ್ದೇಶವು ನೆರವೇರದೆ ಇರದು. ಒಂದು ವೇಳೆ ವಿಜಯಸಿಂಹನನ್ನು ಉಳಿಸಿಕೊಳ್ಳುವುದಕ್ಕಾಗಿ ಮುಕ್ತಾಂಬೆಯು ಹಲವು ಪ್ರಯತ್ನಗಳನ್ನು ಮಾಡಲೂಬಹುದು. ಹೀಗೆ ಮಾಡುವುದು ಸಹಜವೇ ತಾನೇ. ರುದ್ರದೇವ ! ನೀನು ಆಗಾಗ ಮುಕ್ತಾಂಬೆಯ ಬಳಿಗೆ ಹೋಗಿ ಬರುತ್ತಾ ನಿನ್ನಲ್ಲಿ ಆಕೆಗೆ ಅನುರಾಗವು ಹುಟ್ಟುವಂತೆ ಪ್ರಯತ್ನಿಸುತ್ತಿರು. ಆದರೆ ನಮ್ಮ ಗುಟ್ಟುಗಳನ್ನು ಮಾತ್ರ ರಟ್ಟುಮಾಡದಿರು'' ಹೀಗೆ ಹೇಳಿ ರಾಮಯ್ಯನು ಒಬ್ಬರಿಗೂ ಗೊತ್ತಾಗದಂತೆ ಎಲ್ಲಿಗೋ ಹೊರಟುಹೋದನು.

*

ಹದಿನಾಲ್ಕನೆಯ ಪ್ರಕರಣ.

ಮಂತ್ರಭೇದ.

ಯೋ ಮಹತ್ ಮನ್ಯತೇ ಮೂಢೋ ರಕ್ತೇಯಂ ಮಮ ಕಾಮಿನೀ ||
ಸ ತಸ್ಯಾ ವಶಗೋ ಭೂತ್ವಾ ನೃತ್ಯೇತ್ ಕ್ರೀಡಾಶಕುಂತವತ್ ||

ರಾಮಯಾದಿಗಳು ತಪ್ಪದೆ ವಿಜಯಸಿಂಹನನ್ನು ಕೊಲ್ಲಿಸಬೇಕೆಂದು ನಿರ್ಧರಿಸಿದಾಗ, ಮುಕ್ತಾಂಬೆಯು ತನ್ನ ದೆಸೆಯಿಂದ ವಿಜಯಸಿಂಹನಿಗೆ ಆಪತ್ತು ಒದಗಿತಲ್ಲಾ ಎಂದು ವಿಷಾದಪಟ್ಟಳಾದರೂ ರಾಜಸಹಾಯವನ್ನು ಪಡೆದಿದ್ದ ಆತನಿಗೆ ಭಯವಿಲ್ಲವೆಂದು ಒಂದುಸಾರಿ ಸಮಾಧಾನಮಾಡಿಕೊಂಡಿದ್ದಳು. ಆದರೆ ಈಗ ತನ್ನ ಪ್ರಿಯನು ಆಕಸ್ಮಿಕವಾಗಿ ರಾಜದ್ವೇಷಕ್ಕೆ ಗುರಿಯಾದನೆಂದು ಕೇಳಿದಕೂಡಲೆ ಇದಕ್ಕೆ ರಾಮಯಾದಿಗಳು ನಡೆಯಿಸಿದ ಯಾವುದೋ ಕುತಂತ್ರವೇ ಕಾರಣವಾಗಿರಬೇಕೆಂದು ದೃಢಮಾಡಿಕೊಂಡಳು. ತಾನು ಇದ್ದುದು ಆನೆಗೊಂದಿಯಲ್ಲಿ, ಅಹಿತರಮಧ್ಯದಲ್ಲಿ; ವಿಜಯಸಿಂಹನು ಇದ್ದುದು ವಿಜಯನಗರದ ಕಾರಾಗೃಹದಲ್ಲಿ. ಹೀಗಿರಲು ರಾಮಯಾದಿಗಳ ಕಪಟೋಪಾಯವನ್ನು ಕಂಡುಹಿಡಿಯಲು ಅವಳಿಗೆ ಅವಕಾಶವೇ ಇರಲಿಲ್ಲವಾದುದರಿಂದ ಸ್ವಲ್ಪಮಟ್ಟಿಗೆ ಅವಳು ಕಾತರಳಾಗಿದ್ದಳು; ಆದರೆ ಈ ವಿಷಮಸಮಯದಲ್ಲಿ ದೈವವು ಮುಕ್ತಾಂಬೆಗೆ ಸಹಾಯಮಾಡಿತು.

ನಯಭಯದಿಂದ ಮುಕ್ತಾಂಬೆಯ ಅನುರಾಗವನ್ನು ಸಂಪಾದಿಸಿಕೊಳ್ಳಲು ಇದೇ ತಕ್ಕ ಸಮಯವೆಂದು ಭಾವಿಸಿ ರುದ್ರದೇವನು, ಆಕೆಯು ಇದ್ದಲ್ಲಿಗೆ ಬಂದನು. ಮುಕ್ತಾಂಬೆಯು ಬಹಳ ಆದರದಿಂದ ಅವನನ್ನು ಬರಮಾಡಿಕೊಂಡಳು. ಯೋಗಕ್ಷೇಮಸಮಾಚಾರವು ನಡೆದ ಬಳಿಕ ಮುಕ್ತಾಂಬೆಯು "ರಾಮಯಾಮಾತ್ಯನ ಉಪಾಯಕ್ಕೆ ಅಡ್ಡಿಯೇನೂ ಬಂದಿಲ್ಲವಷ್ಟೆ?" ಎಂದು ಪ್ರಶ್ನಿಸಿದಳು.

ಮುಕ್ತಾಂಬೆಯ ನಯವಾದ ನಡೆನುಡಿಗಳಿಂದಲೂ, ಆಕೆಯ ಹಾವಭಾವವಿಲಾಸದಿಂದಲೂ ಮುಗ್ಧನಾಗಿಹೋಗಿದ್ದ ರುದ್ರದೇವನು ಇನ್ನು ಆಕೆಯು ತನ್ನ ಸ್ವಾಧೀನಕ್ಕೆ ಸಿಕ್ಕಿದಳೆಂದು ನಂಬಿಕೊಂಡು ವಿವೇಕಹೀನನಾಗಿ "ರಾಮಯಮಂತ್ರಿಯ ಉಪಾಯಕ್ಕೆ ಅಡ್ಡಿಬರುವುದು ಎಂದರೇನು?

ಹಿಂದೆಯಂತೂ ಸ್ವಪಕ್ಷದವರೇ ರಹಸ್ಯವನ್ನು ಹೊರಗೆಹುವುತ್ತಿದ್ದುದರಿಂದ ಅವನ ಸಾಹಸವು ನಡೆಯುತ್ತಿರಲಿಲ್ಲ. ಈಗ ನಡೆಯಲು ಅಡ್ಡಿ ಹೇಗೆತಾನೆ ಉಂಟಾದೀತು ?" ಎಂದು ಮೂಕರಿಸಿದನು.

ಮುಕ್ತಾಂಬೆ—"ರುದ್ರದೇವ! ನಿನ್ನ ಪರುಷವಾದ ಮಾತುಗಳಿಂದ ನನಗೇಕೆ ವ್ಯಥೆಯನ್ನುಂಟುಮಾಡುತ್ತಿರುವೆ ? ಹಿಂದೆ ವಿಜಯಸಿಂಹನನ್ನು ನಾನೇ ರಕ್ಷಿಸಿದೆನೆಂದು ನೀವೆಲ್ಲರೂ ತಿಳಿದುಕೊಂಡಿರುವಿರಿ. ಅವನನ್ನು ರಕ್ಷಿಸಿದಾತನು ರಾಮರಾಜನು ; ವಿಜಯಸಿಂಹನಿಗೆ ಆತನು ಆಪ್ತಮಿತ್ರನಂತೆ ; ಅವನನ್ನು ತಿಮ್ಮರಸನೇ ಬೇಕೆಂದು ನಿಯಮಿಸಿದ್ದನಂತೆ ; ಅವನೀಗ ನಮ್ಮ ಕಾರ್ಯವನ್ನು ಹಾಳುಮಾಡಿದವನು. ರಾಮಯಾದಿಗಳು ನನ್ನ ಹಿತವನ್ನು ಕೋರಿ ರಾತ್ರಿಯೂ ಹಗಲೂ ಕಷ್ಟಪಡುತ್ತಿರುವಲ್ಲಿ, ಅವರಿಗೆ ವಿರೋಧವಾಗಿ ನಾನೆಂದಿಗಾದರೂ ಪ್ರವರ್ತಿಸುವೆನೇ ! ನಾನು ಬದುಕುವ ದಾರಿ ನನಗೆ ತಿಳಿಯದೇ ? ನೀನೂ ಇಷ್ಟು ಯೋಚಿಸಲಿಲ್ಲವಲ್ಲಾ !"

ಈ ಮಾತುಗಳನ್ನು ಕೇಳಿ ರುದ್ರದೇವನ ಮನಸ್ಸು ಕರಗಿತು. ಒಂದುವೇಳೆ ರಾಮಯಾದಿಗಳು ಭಾವಿಸಿಕೊಂಡಿದ್ದುದು ತಪ್ಪಾಗಿರಬಹುದೆಂದು ಭಾಸವಾಯಿತು. ಇಷ್ಟುಹೊತ್ತಿಗೆ ಮುಕ್ತಾಂಬೆಯು ಕಣ್ಣಿಗೆ ನೀರು ತಂದುಕೊಂಡುದನ್ನು ನೋಡಿ ರುದ್ರದೇವನು ಸಂಪೂರ್ಣವಾಗಿ ಆಕೆಯ ವಿಷಯದಲ್ಲಿ ಮನಸ್ಸನ್ನು ಬದಲಾಯಿಸಿಕೊಂಡನು. ಆಕೆಗೆ ಸಮಾಧಾನವನ್ನುಂಟುಮಾಡುವುದಕ್ಕಾಗಿ "ಮುಕ್ತಾಂಬೆ! ರಾಮಯಾದಿಗಳು ಹೇಳಿಕೊಂಡ ಮಾತುಗಳನ್ನು ಕೇಳಿ ನಿಜವೆಂದು ಭಾವಿಸಿದ್ದೆನು. ಆತನು ವಾಸ್ತವಸ್ಥಿತಿಯನ್ನರಿಯದೆ, ತಪ್ಪುತಿಳಿದುಕೊಂಡಿರುವನೆಂದು ಈಗ ಮುಂದಟ್ಟಾಯಿತು. ನೀನು ನಮ್ಮ ಕಡೆಯವಳೇ ಆದುದರಿಂದ ನಮ್ಮ ಕಾರ್ಯವು ಕೈಗೂಡುವುದಕ್ಕಿರುವ ತಡೆಯು ಇಷ್ಟರಲ್ಲಿಯೇ ನಾಶವಾಗುವುದೆಂದು ತಿಳಿಸಿದರೆ ನಿನಗೂ ಸಂತೋಷವೇ ಎಂದು ತಿಳಿದಿರುವೆನು" ಎಂದು ಅವನು ಹೇಳಿದನು.

ರುದ್ರದೇವನು ತನ್ನ ವಶನಾದನೆಂದು ತಿಳಿದು "ರುದ್ರದೇವ ! ಇನ್ನೂ ನನ್ನ ವಿಷಯದಲ್ಲಿ ಸಂಶಯವನ್ನು ಬಿಡಲಿಲ್ಲವಲ್ಲಾ ! ರಾಮಯಾದಿಗಳು ನನ್ನನ್ನೇ ಮುಂದಿಟ್ಟುಕೊಂಡು ಕೆಲಸಕಾರ್ಯಗಳನ್ನು ನಡೆಯಿಸುತ್ತಿರುವುದ

ರಿಂದ, ಅವರು ನನ್ನ ಆಪ್ತರೇ ಅಲ್ಲವೇ? ದೈವಾನುಗ್ರಹದಿಂದ ನನ್ನ ರಾಜ್ಯವು ನನಗೆ ದೊರೆತರೆ ರಾಮಯಾದಿಗಳು ರಾಜ್ಯಪ್ರಕೃತಿಗಳೇ ಆಗುವರಲ್ಲವೇ? ರಾಜನೂ ಮಂತ್ರಿಯೂ, ಬೇರೆಬೇರೆ ಪಕ್ಷಗಳಲ್ಲಿ ಸೇರಿರುವುದನ್ನು ಎಲ್ಲಿಯಾದರೂ ಕಂಡಿರುವೆವೇ? ಅವರಿಬ್ಬರೂ ಒಟ್ಟುಗೂಡಿ ಕೆಲಸಗಳನ್ನು ನಡೆಯಿಸಿದರೆ ಶತ್ರುಗಳು ವಶರಾಗುವುದರಲ್ಲಿ ಸಂದೇಹವೇ ಇಲ್ಲ. ಇದು ನನಗೆ ತಿಳಿಯದ ಮಾತಲ್ಲ. ಕೃಷ್ಣದೇವರಾಯನು ನನಗೆ ವಿರೋಧಿ. ಆತನಿಗೆ ಪ್ರಿಯಭೃತ್ಯನಾದ ವಿಜಯಸಿಂಹನು ನನ್ನ ಅನುರಾಗಕ್ಕೆ ಹೇಗೆ ತಾನೇ ಪಾತ್ರನಾದಾನು? ಇದನ್ನಾದರೂ ನೀನು ಯೋಚಿಸಬೇಡವೇ?'' ಎಂದಳು.

ಮೊದಲೇ ಮೋಹಾಂಧನಾಗಿದ್ದ ರುದ್ರದೇವನು ಈ ಬೆಡಗಿನ ಮಾತುಗಳಿಗೆ ಬೆರಗಾಗಿ, ವಿಜಯಸಿಂಹನಲ್ಲಿ ಮುಕ್ತಾಂಬೆಗೆ ಅನುರಾಗವಿಲ್ಲವೆಂದು ದೃಢಮಾಡಿಕೊಂಡನೇ ಹೊರತು, ತನ್ನಿಂದ ಗುಟ್ಟನ್ನು ಹೊರಡಿಸುವುದಕ್ಕಾಗಿ ಹಾಗೆ ಮಾತಾಡಿದಳೆಂದು ತಿಳಿದುಕೊಳ್ಳಲಿಲ್ಲ. ಆದುದರಿಂದ—"ಸ್ತ್ರೀರತ್ನವೇ! ವಿಜಯಸಿಂಹನು ನಮಗೆ ಪ್ರತಿಕಕ್ಷಿಯೆಂದು ತಿಳಿದಿರುವಿಯಾದರೆ, ಈಗ ನಾವು ಅವನಿಗೆ ತಂದಿರುವ ವಿಪತ್ತು ಅವನ ಅವತಾರವನ್ನು ಪೂರ್ತಿಮಾಡಿಬಿಡುವುದೆಂದು ತಿಳಿಯಲು ನೀನು ಬಹಳ ಸಂತೋಷಪಡುವುದರಲ್ಲಿ ಸಂದೇಹವಿಲ್ಲ" ಎಂದನು.

ಮುಕ್ತಾಂಬೆ—"ಅದೇನು! ಅಂತಹ ಶುಭವರ್ತಮಾನ? ಅಷ್ಟು ಒಳ್ಳೆಯ ಸಮಾಚಾರವನ್ನು ಏಕೆ ಮುಚ್ಚಿ ಮುಚ್ಚಿ ಹೇಳುವೆ? ನನಗೆ ಸಂತಾಪಕರನಾದ ವಿಜಯಸಿಂಹನು ಕಾಲಧರ್ಮವನ್ನು ಹೊಂದಿದನೋ ಇನ್ನೂ ಇಲ್ಲವೋ? ಬೇಗ ತಿಳಿಸು"

ರುದ್ರ—"ವಿಜಯಸಿಂಹನು ಇನ್ನೇನು ಸಾಯುವುದರಲ್ಲಿರುವನು. ಈಹೊತ್ತೋ ನಾಳೆಯೋ ಅವನು ಯಮಧರ್ಮರಾಯನನ್ನು ನೋಡುವುದು ಖಂಡಿತ; ವಿಜಯಸಿಂಹನು ಸತ್ತಕೂಡಲೆ ನಾನೇ ಬಂದು ತಿಳಿಸುವೆನು."

ಮುಕ್ತಾಂಬೆ—"ಶುಭವರ್ತಮಾನವನ್ನು ಸಾಮಾನ್ಯರು ತಂದರೂ ವಿಶೇಷವಾಗಿ ಬಹುಮಾನಮಾಡುವಲ್ಲಿ, ರಾಜಪುತ್ರನಾದ ನೀನೇ ಈ ಸಂತೋಷಕರವಾದ ಸಮಾಚಾರವನ್ನು ತಿಳಿಸಿದಾಗ ನಿನ್ನನ್ನು ಹೇಗೆ ಸತ್ಕರಿಸಲಿ ಎಂದು ಯೋಚಿಸುತ್ತಿರುವೆನು. ಆದರೆ ಆ ವಿಜಯಸಿಂಹನು ಮಹಾಸಾಹಸಿ;

ಮೃತ್ಯುಮುಖದಲ್ಲಿದ್ದರೂ ತಪ್ಪಿಸಿಕೊಳ್ಳಲು ಏನಾದರೂ ಉಪಾಯವನ್ನು ಮಾಡಿಬಿಡುವನು " ಎಂದು ಹೇಳಿದಳು.

ರುದ್ರದೇವನು ಮುಕ್ತಾಂಬೆಯನ್ನು ತನ್ನ ವಶಮಾಡಿಕೊಳ್ಳುವುದು ಸುಲಭಮಾಡಿಕೊಳ್ಳುವುದಕ್ಕಾಗಿ ಒಳಗುಟ್ಟನ್ನು ಸ್ವಲ್ಪಸ್ವಲ್ಪವಾಗಿ ಒಡೆದು ಹೇಳುತ್ತಾ ಬರಲು, ಚತುರಳಾದ ಮುಕ್ತಾಂಬೆಯು ಅವನಲ್ಲಿದ್ದ ಗುಟ್ಟನ್ನೆಲ್ಲಾ ಉಪಾಯವಾಗಿ ಹೀರಿಕೊಳ್ಳುವುದಕ್ಕಾಗಿ ಅವನನ್ನು ಪ್ರೋತ್ಸಾಹಿಸುತ್ತಾ ಬಂದಳು. "ವಿಜಯಸಿಂಹನು ಅನಂಗಸೇನೆಯ ವಿಷಯದಲ್ಲಿ ನಡೆಯಿಸಿದ ರಾಜದ್ರೋಹಕ್ಕಾಗಿ ಆಪತ್ತಿಗೆ ಒಳಗಾದನೆಂದು ಕೇಳಿದೆನಲ್ಲಾ" ಎಂದಳು.

ರುದ್ರ—"ಪಾಪ ! ವಿಜಯಸಿಂಹನು ಅನಂಗಸೇನೆಯ ಮುಖವನ್ನಾದರೂ ಕಾಣನು. ಅದೆಲ್ಲಾ ನಾನೂ ರಾಮಯನೂ ಮಾಡಿದ ತಂತ್ರವು" ಎಂದನು.

ಮುಕ್ತಾಂಬೆ—"ಏನು ! ನೀನು ಮಾಡಿದ ತಂತ್ರವೆ ? ಈ ಮಹಾಕಾರ್ಯಕ್ಕೆ ಎಷ್ಟು ಬುದ್ಧಿಯನ್ನು ವೆಚ್ಚಮಾಡಬೇಕು ! ಇಷ್ಟು ಉಪಾಯವನ್ನು ಮಾಡಬೇಕಾದರೆ ಸಾಮಾನ್ಯರಿಂದ ಆದೀತೆ ! ಆದರೆ ಪ್ರಜ್ಞಾವಂತನಾದ ಕೃಷ್ಣದೇವರಾಯನು ಸಂಶಯಕ್ಕೆ ಸಿಕ್ಕಿ, ತನ್ನ ಪ್ರಿಯಭೃತ್ಯನನ್ನು ಕೊಲ್ಲಿಸಲು ಮನಸ್ಸನ್ನು ಮಾಡಿರುವನೇ ? ಇದು ತಾನೇ ಸ್ವಲ್ಪಸಂಶಯ."

ರುದ್ರ—"ನಡೆದ ವರ್ತಮಾನವನ್ನು ಪೂರ್ತಿಯಾಗಿ ತಿಳಿದುಕೊಂಡರೆ ನಿನ್ನ ಸಂಶಯಾಗಿಂಶಯವೆಲ್ಲಾ ಓಡಿಹೋಗುವುದು. ರಾಮಯಮಂತ್ರಿಯು ಹುಚ್ಚನ ವೇಷವನ್ನು ಹಾಕಿಕೊಂಡು ಕೋತಿಯನ್ನು ಕುಣಿಸುವ ನೆವದಲ್ಲಿ ಅನಂಗಸೇನೆಯಿಂದ ಅವಳ ಉಂಗುರವನ್ನು ಅಪಹರಿಸಿ, ಅದಕ್ಕೆ ಮುಂಚೆಯೇ ಶೈವಮಠದಲ್ಲಿ ವಿಜಯಸಿಂಹನಿಂದ ಅಪಹರಿಸಿದ್ದ ಉಂಗುರವನ್ನು ಅನಂಗಸೇನೆಗೆ ಕೊಟ್ಟನು. ಗೂಳಿಯು ತನ್ನನ್ನು ಕೊಲ್ಲದಂತೆ ಕಾಪಾಡಿದನೆಂದು ಕೃತಜ್ಞತೆಯ ನೆವದಿಂದ ರಾಮಯನು ಅನಂಗಸೇನೆಯ ಉಂಗುರವು ವಿಜಯಸಿಂಹನಿಗೆ ತಲುಪುವಂತೆ ಮಾಡಿದನು. ರಾಮಯನು ಹುಚ್ಚನ ವೇಷದಲ್ಲಿ ಎಷ್ಟು ಕೆಲಸಮಾಡಿಬಿಟ್ಟನು ಕಂಡೆಯಾ ? ಗೂಳಿಯನ್ನು ಬೀದಿಯಲ್ಲಿ ಮುಂದೆ ಬಿಟ್ಟುಕೊಂಡು ಬರುತ್ತಿದ್ದವನೂ ಸಮಯದಲ್ಲಿ ಅದನ್ನು ರೇಗಿಸಿದವನೂ ಯಾರೆಂದು ತಿಳಿದುಕೊಂಡಿರುವೆ ? ನಾನೇ ! ಉಂಗುರಗಳು ಹೀಗೆ

ವಿನಿಮಯವಾದನಂತರ ರಾಮಯನು ಹೂವಿನ ಹಾರದಲ್ಲಿ ಒಂದು ಸೃಷ್ಟನೆಯ ಕಾಗದವು ರಾಯರ ಕೈಗೆ ತಲುಪುವಂತೆ ಮಾಡಿಬಿಟ್ಟನು. ಇಗೋ ಇಂದೋ ನಾಳೆಯೋ ವಿಜಯಸಿಂಹನು ಅದರ ಫಲವನ್ನು ಉಣ್ಣುವನು! ನೋಡಿದೆಯೋ ನಮ್ಮ ಸಾಹಸವನ್ನು!" ಎಂದು ಹಿಗ್ಗುತ್ತಾ ಹೇಳಿದನು.

ಮುಕ್ತಾಂಬೆ—(ಆಶ್ಚರ್ಯವನ್ನು ನಟಿಸುತ್ತಾ) "ಬಹಳ ಒಳ್ಳೆಯ ಉಪಾಯ ಮಾಡಿದಿರಿ. ಇದನ್ನು ನಂಬುವುದಕ್ಕೆ ಸಹ ಕೆಲವುವೇಳೆ ಸಂದೇಹವಾಗುವುದು. ನೀನೂ ಬಹಳ ಸಾಹಸ ಮಾಡಿದೆ."

ರುದ್ರ—"ನನ್ನ ಸಾಹಸವು ಇಷ್ಟೇ ಎಂದು ತಿಳಿದುಕೊಂಡಿದ್ದೀಯೇನು? ಸೃಷ್ಟನೆಯ ಕಾಗದವನ್ನು ರಾಯರಿಗೆ ತಲುಪುವಂತೆ ಮಾಡಿದವರು ಯಾರೆಂದು ತಿಳಿದಿದ್ದೀಯೆ?"

ಮುಕ್ತಾಂಬೆ—"ಅದೂ ನೀನೇ ಏನು? ಆ ಕೆಲಸವು ನಿನ್ನಿಂದ ಹೇಗಾಯಿತು?"

ರುದ್ರ—"ಹೂವಿನಹಾರವನ್ನು ಕಟ್ಟಿಕೊಡುತ್ತಿದ್ದ ಹೂವಾಡಿಗನು ನಾನೇ. ಚಿಕ್ಕಂದಿನಲ್ಲಿ ಒಬ್ಬ ದಾದಿಯು ಹೂಕಟ್ಟುತ್ತಿದ್ದುದನ್ನು ನೋಡಿ ತಿಳಿದುಕೊಂಡಿದ್ದೆನು. ಸ್ವಲ್ಪ ಅಭ್ಯಾಸಮಾಡಿಕೊಂಡಬಳಿಕ ಬಹಳ ಸೊಗಸಾಗಿ ಹೂದಂಡೆಗಳನ್ನು ಕಟ್ಟುವುದನ್ನು ಕಲಿತುಬಿಟ್ಟೆನು. ವಿಜಯನಗರದಲ್ಲಿ ಬಾಡಿಗೆಗೆ ಒಂದು ಮಳಿಗೆಯನ್ನಿಟ್ಟುಕೊಂಡು ವ್ಯಾಪಾರಮಾಡುತ್ತಾ ಅನಂಗಸೇನೆಯ ಸೇವಕಳಾದ ಮಾಲತಿಯೆಂಬುವಳನ್ನು ಗಿರಾಕಿಮಾಡಿಕೊಂಡೆನು. ಸರಿ! ಕೆಲವು ದಿವಸದಲ್ಲೇ ಅನಂಗಸೇನೆಗೆ ಕೈಕೊಟ್ಟುಬಿಟ್ಟೆನು"

ಮುಕ್ತಾಂಬೆ—"ಆಹಾ! ನೀನೂ ಸ್ವಲ್ಪಸ್ವಲ್ಪ ಕೆಲಸ ಮಾಡಿಲ್ಲ! ನಿನ್ನ ಈ ಸಾಹಸಕೃತ್ಯಗಳ ಮುಂದೆ ವಿಜಯಸಿಂಹನು ಬದುಕಿಕೊಂಡ ಕಾಲಕ್ಕೆ ನೋಡೋಣ. ಅಂತೂ ಬಹಳ ಉಪಾಯಮಾಡಿದೆ" ಎಂದು ಹೇಳಿ ರುದ್ರದೇವನನ್ನು ಉಬ್ಬಿಸಿ ಕಳುಹಿಸಿಕೊಟ್ಟಳು. ರುದ್ರದೇವನೂ ಹಿಂದೆ ತಿಮ್ಮರಸನನ್ನು ಕೊಲ್ಲಬೇಕೆಂದು ಮಾಡಿದ್ದ ಪ್ರಯತ್ನದಲ್ಲಿಯೂ, ದ್ವಂದ್ವಯುದ್ಧದಲ್ಲಿಯೂ, ತನ್ನನ್ನು ಭಂಗಪಡಿಸಿದ್ದ ಶತ್ರುವನ್ನು ಉಪಾಯದಿಂದ ಕೊಲ್ಲುವುದರಲ್ಲಿ ಸಂದೇಹವಿಲ್ಲವೆಂದು ಹಿಗ್ಗುತ್ತಾ ಮನೆಗೆ ಹೊರಟು ಹೋದನು.

ಮೊದಲನೆಯ ಭಾಗ ಸಮಾಪ್ತ.

THE

KARNATAKA GRANTHAMALA

SERIES No. 82.

ರಾಯಶ್ಬಮವಿಜಯ.

(೨ ನೆಯ ಭಾಗ)

MYSORE.

THE G. T. A. PRESS,

1919.

ರಾಯಶ್ಚಾರರ ವಿಜಯ

ದ್ವಿತೀಯ ಭಾಗ

೧೫ ನೆಯ ಪ್ರಕರಣ

" ತಾನೊಂದು ಬಗೆದರೆ ದೈವವೊಂದು ಬಗೆಯಿತು. "

"ನೈವಾಕೃತಿಃಫಲತಿ ನೈವಕುಲಂ ನಶೀಲಂ | ವಿದ್ಯಾಪಿನೈವ ನಚಯತ್ನಕೃತಾಪಿ ಸೇವಾ |
ಭಾಗ್ಯಾನಿಪೂರ್ವತಪಸಾ ಖಲುಸಂಚಿತಾನಿ | ಕಾಲೇಫಲಂತಿ ಪುರುಷಸ್ಯಯಥೈವವೃಕ್ಷಾಃ ||"

"ಅನ್ಯಥಾ ಚಿಂತಿತಂಕಾರ್ಯಂ ದೈವಮನ್ಯತ್ರ ಚಿಂತಯೇತ್."

ಹೀಗೆ ಮುಕ್ತಾಂಬೆರಾಮರಾಜರ ಸಹಾಯದಿಂದ ವಿಜಯಸಿಂಹನು ವಿಮುಕ್ತನಾಗಿ ವಿಜಯನಗರವನ್ನು ಸೇರಿ ಕೆಲವು ದಿವಸಗಳಾದಬಳಿಕ ಒಂದು ರಾತ್ರಿ ತನ್ನ ಹಾಸಿಗೆಯಮೇಲೆ ಮಲಗಿಕೊಂಡು ತನ್ನಮುಂದಿನ ಶುಭೋದಯವನ್ನು ಕುರಿತು ಗಂಧರ್ವನಗರಗಳನ್ನು ಕಲ್ಪಿಸಿಕೊಳ್ಳುತ್ತಿದ್ದನು. ಆ ದಿನ ಮುಕ್ತಾಂಬೆಯು ಆಪತ್ತಿನಿಂದ ತನ್ನನ್ನು ರಕ್ಷಿಸುವುದಕ್ಕೆ ಮಾಡಿದ ಉಪಾಯಗಳನ್ನು ನೆನೆನೆನೆದು ಸಂತೋಷಪಟ್ಟುಕೊಳ್ಳುತ್ತಿದ್ದನು. ರಾಜಮಂತ್ರಿಗಳಿಬ್ಬರೂ ತನ್ನ ವಿಷಯದಲ್ಲಿ ಅನುಗ್ರಹಹೊಂದಿದ್ದುದರಿಂದ ತಾನು ಮುಂದೆ ಉನ್ನತಪದವಿಯನ್ನು ಹೊಂದುವನೆಂದೂ ಆಗ ಮುಕ್ತಾಂಬೆಯನ್ನು ಮದುವೆ ಮಾಡಿಕೊಂಡು ಸಂಸಾರ ಸುಖಸಾಮ್ರಾಜ್ಯವನ್ನು ಅನುಭವಿಸಬಹುದೆಂದೂ ಬಗೆಬಗೆಯಾಗಿ ಯೋಚಿಸಿಕೊಳ್ಳುತ್ತಿರಲು, ಉಂಗುರವನ್ನು ತರುವುದಕ್ಕಾಗಿ ಕಳುಹಿಸಿದ್ದ ರಾಜಭಟನು ಬಂದು ಅದನ್ನು ಕೇಳಿ ತೆಗೆದುಕೊಂಡು, ತಿರುಗಿ

ಬಂದುಗಂಟೆಯೊಳಗಾಗಿ ತಂದುಕೊಡುವೆನೆಂದು ಹೇಳಿ ಹೊರಟುಹೋದನು. ವಿಜಯಸಿಂಹನಿಗೆ ತಾನು ಯೋಚಿಸುತಿದ್ದ ವಿಷಯವು ಬಹಳ ಮನೋಹರವಾಗಿದ್ದುದರಿಂದ ಉಂಗುರದ ಸಂಗತಿ ಅಷ್ಟುಮುಖ್ಯವಾಗಿ ಕಂಡುಬರಲಿಲ್ಲ. ಆದಕಾರಣ ರಾಜಭಟನು ಹೊರಟುಹೋದಕೂಡಲೆ ತನ್ನ ಮುಗಿಲು ಮಾಳಿಗೆಯನ್ನು ಪುನಃ ಕಟ್ಟಿಕೊಳ್ಳಲಾರಂಭಿಸಿದನು. ಅದರಲ್ಲಿ ಬಗೆಬಗೆಯಾಗಿ ವಿಹರಿಸಿಕೊಳ್ಳುತ್ತಿರಲು ರಾತ್ರಿ ಬಹಳಹೊತ್ತು ಆಯಿತು. ಆಗ ಯಾರೋಬರುತ್ತಿದ್ದ ಶಬ್ದವಾಗಲು, ವಿಜಯಸಿಂಹನು ಸದ್ದು ಕೇಳಿಬಂದ ದಿಕ್ಕಿಗೆ ನೋಡಲಾರಂಭಿಸಿದನು. ಸ್ವಲ್ಪಹೊತ್ತಿನಲ್ಲೆ ಶಸ್ತ್ರಪಾಣಿಗಳಾದ ಹತ್ತುಮಂದಿ ರಾಜಭಟರು ತನ್ನನ್ನು ಸಮೀಪಿಸುತ್ತಿದ್ದುದು ಕಂಡುಬಂತು. ಇವರನ್ನು ನೋಡಿ ಮೊದಲು ತಾನು ತಪ್ಪಿಸಿಕೊಂಡುಬಂದುದಕ್ಕಾಗಿ ಪುನಃ ತನ್ನನ್ನು ಹಿಡಿದುಕೊಂಡುಹೋಗಲು ಬರುತ್ತಿರುವ ಶತ್ರುಭಟರೇನೊ ಎಂದು ಭಾವಿಸಿ, ಪಕ್ಕದಲ್ಲಿದ್ದ ತನ್ನ ಘೋರತರಕೃಪಾಣವನ್ನು ಹಿರಿದು ಕೈಯ್ಯಲ್ಲಿ ಧರಿಸಿ ಕುಳಿತುಕೊಂಡಿದ್ದನು. ಅಷ್ಟರಲ್ಲಿ ಆ ಭಟರು ವಿಜಯಸಿಂಹನನ್ನು ಸಮೀಪಿಸಿ ಆತನಿಗೆ ನಮ್ರತೆಯಿಂದ ವಂದಿಸಿ ದೂರದಲ್ಲೇ ನಿಂತುಕೊಳ್ಳಲು, ರಾಜದ್ರೋಹಿಗಳು ತನ್ನನ್ನೇ ಹಿಡಿದುಕೊಂಡು ಬರಬೇಕೆಂದು ಮಹಾರಾಜರು ತನಗೆ ನಿಯಮಿಸಿರಬಹುದೆಂದೂ, ತನ್ನ ಸಹಾಯಕ್ಕಾಗಿ ಅವರನ್ನು ಕಳುಹಿಸಿರಬಹುದೆಂದೂ ಭಾವಿಸಿ ಈ ಮೇರೆಗೆ ಸಂಭಾಷಿಸಲಾರಂಭಿಸಿದನು :—

ವಿಜಯ—"ನೀವು ಯಾರು ? ಇಂತಹ ಹೊತ್ತಿನಲ್ಲಿ ಆಯುಧಹಸ್ತರಾಗಿ ನನ್ನಮನೆಗೇಕೆ ಬಂದಿರುವಿರಿ ?" ಹೀಗೆಂದು ಕೇಳಿದನು. ಆ ಭಟರ ನಾಯಕನು "ಓ ವೀರಶ್ರೇಷ್ಠನೆ, ನಾನು ಕಾರಾಗೃಹಾಧಿಕಾರಿ. ಇವರು ನನ್ನ ಅನುಚರರು. ಚಕ್ರವರ್ತಿಯವರ ಅಪ್ಪಣೆಯಾದುದರಿಂದ ಈ ಅರ್ಧರಾತ್ರಿಯಲ್ಲಿ ಇಲ್ಲಿಗೆ ಬರಬೇಕಾಯಿತು."

ವಿಜಯ—" ಸಾರ್ವಭೌಮರ ಅಪ್ಪಣೆ ಏನಾಯಿತು ? ನೀವು ಶಸ್ತ್ರಪಾಣಿಗಳಾಗಿ ಬಂದಿರುವಿರಿ ಈಗೇನಾದರೂ ಈ ಶಸ್ತ್ರಗಳನ್ನುಪಯೋಗಿಸುವ ಕಾರ್ಯವಿರುವುದೇನು ? "

ಈ ಪ್ರಶ್ನೆಗಳನ್ನು ಕೇಳಿ ಆ ಭಟನಾಯಕನು ಒಂದು ಕಾಗದವನ್ನು ವಿಜಯಸಿಂಹನಿಗೆ ಕೊಟ್ಟನು. ಅದನ್ನು ಹಿಡಿಕೊಂಡ ಕೂಡಲೇ ಬಿರುಗಾಳಿಗೆ ಬುಡಸಹಿತ ಮುರಿದು ಬಿದ್ದ ಮರದಂತೆ ವಿಜಯಸಿಂಹನು ಕೆಳಕ್ಕೆ ಕುಕ್ಕರಿಸಿದನು. ಮಾತಾಡಲು ನಾಲಗೆ ಹೊರಡಲಿಲ್ಲ. ಆಗ ತನಗೆ ಸಂಭವಿಸಿದ್ದ ಘೋರಾಪವಾದದಿಂದ ಬಹಳವಾಗಿ ದುಃಖಪಡುತ್ತಿದ್ದರೂ ಧೀರೋದಾತ್ತನಾದುದರಿಂದ ದುಃಖವನ್ನಡಗಿಸಿಕೊಂಡು, ಆತನನ್ನು ನೋಡಿ " ಈ ಪತ್ರಿಕೆಯ ವೃತ್ತಾಂತವು ಅತಿವಿಚಿತ್ರವಾಗಿದೆ. ಎಂತಹ ಘೋರಕೃತ್ಯಸಂಭವಿಸಿದೆ ! ಇದನ್ನು ರಾಯರು ಬರೆದು ಕಳುಹಿಸಿದರೆ ! ಅವರು ಅಸಾಧಾರಣವಿವೇಕಶಾಲಿಗಳೆಂದೂ ನ್ಯಾಯಾನ್ಯಾಯ ಪರಿಶೀಲನಾಪರರೆಂದೂ ಕೇಳಿದ್ದೆನು; ಅಂತಹ ಚಕ್ರವರ್ತಿಗಳ ಬುದ್ಧಿಯು ಈ ದಿನ ಈ ಮಾರ್ಗದಲ್ಲಿ ಏಕೆ ಪ್ರವೇಶಿಸಿತೋ ಕಾಣೆ ಆ ಮಂತ್ರಿಶ್ರೇಷ್ಠರೂ ನಿರುಪಮಾನಪ್ರಜ್ಞಾಶಾಲಿಗಳೆಂದು ಕೇಳಿದ್ದೇನೆ. ಅವರಿಗೂ ಈ ವಿಷಯದಲ್ಲಿ ಭ್ರಾಂತಿಯುಂಟಾಯಿತೆ ! ' ಪ್ರಮಾದೋ ಧೀಮತಾಮಪಿ ' ಎಂಬ ವಚನವು ಸತ್ಯವಾದುದೇ ! ನಾನು ಅಂತಃಪುರದ್ರೋಹಿಯೇ ! ಅಕಟ ! ಇಂತಹ ಅಪನಿಂದೆಯು ನನಗೆ ಬಂದಿರುವುದರಿಂದ ನನ್ನ ಮನಸ್ಸು ಬಹಳ ತಲ್ಲಣಿಸುತ್ತಿದೆ ಅಯ್ಯಾ ! ಸಾರ್ವಭೌಮರನ್ನಾಗಲೀ ಮಂತ್ರಿಪುಂಗವರನ್ನಾಗಲೀ ಸಂದರ್ಶಿಸಲು ಅವಕಾಶವಿರುವುದೇ ? " ಎಂದು ಕಾರಾಗೃಹಾಧಿಕಾರಿಯನ್ನು ಪ್ರಶ್ನಿಸಿದನು.

" ಅಯ್ಯಾ! ರಾಜಮಂತ್ರಿಗಳಲ್ಲಿ ಸ್ವಲ್ಪವಾದರೂ ಲೋಪವಿಲ್ಲ. ನಿನ್ನ ಕೈಯಲ್ಲಿರುವ ಉಂಗುರವೇ ನಿನ್ನ ಅಪರಾಧಿತ್ವವನ್ನು ಸ್ಥಾಪಿಸಿರುವುದು. ರಾಜಮಂತ್ರಿಗಳಿಬ್ಬರೂ ಆಲೋಚಿಸಿಯೇ ಹೀಗೆ ಅಪ್ಪಣೆಮಾಡಿರುವರು. ರಾಜಾ

ಜ್ಞೆಗೆ ಬಳಪಟ್ಟು ಕಾರಾಗೃಹದಲ್ಲಿ ಇದ್ದೇ ಇರಬೇಕಾಗುವುದು. ಅದಕ್ಕೆ ಮೀರಲು ಯತ್ನಿಸಿದರೆ ಕ್ರಮಪ್ರಕಾರ ಬಂಧಿಸಿ ಕರೆದುಕೊಂಡುಹೋಗಬೇಕಾಗುವುದು. ಅಂತಃಪುರದ್ರೋಹವನ್ನು ಮಾಡಲು ಯತ್ನಿಸಿದ ನಿನಗೆ ಶಿಕ್ಷೆಯು ಆವಶ್ಯಕವಾದುದೆ. ಕಾಲವಿಳಂಬ ಮಾಡಬೇಡ.'' ಎಂದು ನಾಯಕನು ನಿಸ್ಸಂದೇಹವಾಗಿ ಹೇಳಿದನು.

"ಅಯ್ಯಾ, ಅಧಿಕಾರಿ! ರಾಜಾಜ್ಞೆಯನ್ನು ಮೀರಲು ನನಗೆ ಸ್ವಲ್ಪವೂ ಮನಸ್ಸಿಲ್ಲ. ಆದರೂ ಅಪರಾಧವನ್ನು ವಿಮರ್ಶಿಸದೆ ಇಂತಹ ಶಿಕ್ಷೆಯನ್ನು ನಿರಪರಾಧಿಗೆ ವಿಧಿಸಿದರಲ್ಲಾ ಎಂಬುದೊಂದೇ ಚಿಂತೆಯಾಗಿದೆ ಈ ಉಂಗುರವು ಯಾರದೆಂಬುದು ನನಗೆ ತಿಳಿಯದು. ಹುಚ್ಚಬ್ರಾಹ್ಮಣನನ್ನು ಕಾಪಾಡಿದುದಕ್ಕಾಗಿ ಆ ಹುಚ್ಚನು ಇದನ್ನು ನನಗೆ ಬಹುಮಾನವಾಗಿ ಕೊಟ್ಟನು. ಇದು ಅನಂಗಸೇನೆಯದು ಎಂದು ನನಗೆ ಸ್ವಲ್ಪವೂ ತಿಳಿಯದು. ಅಷ್ಟೇಕೆ? 'ಅನಂಗಸೇನೆ' ಎಂಬ ಹೆಸರನ್ನು ಕೇಳಿದುದು ಈಗಲೇ. ನನಗೆ ಈ ಉಂಗುರವು ಲಭಿಸಿದ ಸಮಾಚಾರವೆಲ್ಲವನ್ನೂ ವಿಶದವಾಗಿ ರಾಯರಲ್ಲಿ ಅರಿಕೆಮಾಡಿಕೊಂಡರೆ, ವಿವೇಕನಿಧಿಗಳಾದ ಮಹಾರಾಜರು ನನ್ನನ್ನು ನಿರಪರಾಧಿಯೆಂದು ನಿರ್ಣಯಿಸದೆ ಇರಲಾರರು. ಆದುದರಿಂದ ನೀನು ಹೋಗಿ ವಿಜಯಸಿಂಹನು ಮಹಾಸ್ವಾಮಿಗಳ ದರ್ಶನವನ್ನು ಬೇಡುತ್ತಿರುವನು ಎಂದು ಮಹಾರಾಜರವರಿಗೆ ಬಿನ್ನಹಮಾಡು. ಅದರಮೇಲೆ ನನ್ನ ಅದೃಷ್ಟವಿದ್ದಂತಾಗಲಿ," ಎಂದು ಬಗೆಬಗೆಯಲ್ಲಿ ಹೇಳಿಕೊಂಡನು. ಆದರೆ ಕಠಿನಹೃದಯನಾದ ಆ ಅಧಿಕಾರಿಯು ಇವನ ಮಾತುಗಳನ್ನು ಕಿವಿಗೇ ಹಾಕಿಕೊಳ್ಳದೆ "ವಿಜಯಸಿಂಹ! ನಿನ್ನ ದೀನಾಲಾಪಗಳನ್ನು ಕೇಳುವವರಾರು? ಅಪರಾಧಿಯಾದ ನಿನ್ನ ಮುಖವನ್ನು ಸಹ ನೋಡಕೂಡದೆಂದು ರಾಜಮಂತ್ರಿಗಳಿಬ್ಬರೂ ನಿರ್ಧರಿಸಿಕೊಂಡಿರುವರು. ಕೋಪೋದ್ದೀಪಿತಮಾನಸರಾದ ಚಕ್ರವರ್ತಿಗಳು ನಿನ್ನನ್ನು ತತ್‌ಕ್ಷಣವೇ ವಧಿಸಿಬಿಡಬೇಕೆಂದು ಮನಸ್ಸುಮಾಡಿದ್ದರು. ಆದರೆ ದಯಾರ್ದ್ರ

ಹೃದಯರಾದ ಮಂತ್ರಿಗಳು ನಾಲ್ಕು ದಿವಸಗಳವರೆಗೂ ವಧಾಜ್ಞೆಯನ್ನು ನಿಲ್ಲಿಸಬೇಕೆಂದು ಕೇಳಿಕೊಂಡುದರಿಂದ ನಿನಗೆ ಇನ್ನೂ ನಾಲ್ಕುದಿವಸ ಆಯುಸ್ಸು ಇರುವುದೆಂದು ತೋರುವುದು. ಆದರೂ ನಿನಗೆ ಸಂದರ್ಶನಕೊಡ ಲಾಗುವುದಿಲ್ಲವೆಂದು ಅಪ್ಪಣೆಮಾಡಿರುವುದರಿಂದ ನಿನ್ನ ಆ ಆಶೆಯನ್ನು ಬಿಟ್ಟು ಬಿಡು. ಹುಚ್ಚನು ಉಂಗುರವನ್ನು ಕೊಟ್ಟನೆಂದು ಹೇಳುವೆ; ಇದನ್ನು ನಂಬುವರು ಯಾರು? ಅಪರಾಧಮಾಡಿ ತಪ್ಪಿಸಿಕೊಳ್ಳಲು ಯತ್ನಿಸು ವೆಯಾ?'' ಎಂದು ಅಧಿಕಾರಮದದಿಂದ ಅವನು ಪ್ರತಿಹೇಳಿದನು. ಆದುದ ರಿಂದ ವಿಜಯಸಿಂಹನು ತನ್ನ ಅದೃಷ್ಟದಲ್ಲಿದ್ದಂತೆ ನಡೆದುಹೋಗಲಿಯೆಂದು ಆ ಅಧಿಕಾರಿಯನ್ನು ಕುರಿತು, "ಅಯ್ಯಾ, ನೀವು ನಿಮ್ಮ ಕೆಲಸವನ್ನು ಮಾಡಿಕೊಳ್ಳಿರಿ'' ಎಂದು ಹೇಳಲು ರಾಜಭಟರು ವಿಜಯಸಿಂಹನ ಕೈಗೆ ಕೋಳವನ್ನು ತೊಡಿಸಿ ಸೆರೆಮನೆಗೆ ಕರೆದೊಯ್ದರು. ಅಲ್ಲಿ ವಿಜಯಸಿಂ ಹನು ನಾಲ್ಕುದಿನಗಳನ್ನೂ ನಾಲ್ಕುಯುಗದಂತೆ ಕಳೆದನು. ಈ ಕಾಲದಲ್ಲಿ ಅವನು ಒಂದು ತುತ್ತು ಆಹಾರವನ್ನೂ ಮುಟ್ಟಲಿಲ್ಲ. ಒಂದು ನಿಮಿಷ ವಾದರೂ ನಿದ್ರಿಸಲಿಲ್ಲ. ತನಗೆ ಮೃತ್ಯುವು ಸನ್ನಿಹಿತವಾಗಿದೆಯೆಂದು ಸ್ವಲ್ಪ ವಾದರೂ ಚಿಂತಿಸಲಿಲ್ಲ. ವೀರಮರಣಾಕಾಂಕ್ಷಿಯಾಗಿದ್ದ ತನಗೆ ಚೋರ ಯೋಗ್ಯವಾದ ಮರಣವು ಬಂದುದಕ್ಕಾಗಿಯೂ, ಲೋಕಾಪವಾದವು ಬಂದು ದಕ್ಕಾಗಿಯೂ, ಬಹಳವಾಗಿ ಪರಿತಪಿಸುತ್ತಿದ್ದನು. ತನ್ನ ಪರಾಕ್ರಮದಿಂದ ಸಾಧಾರಣರಾದ ವೀರಶ್ರೇಷ್ಠರನ್ನು ಮಾತ್ರವಲ್ಲದೆ ಸಾರ್ವಭೌಮರನ್ನೂ ಕೂಡ ಮೆಚ್ಚಿಸಿ ಪ್ರಖ್ಯಾತನಾಗಬೇಕೆಂದು ವಿಜಯನಗರಕ್ಕೆ ಬಂದಿರಲು, ತನಗೆ ಇಂತಹ ಅಪಖ್ಯಾತಿಯುತವಾದ ಮರಣವು ಸಂಘಟಿಸಿತಲ್ಲಾ ಎಂದು ಒಂದುಸಾರಿಯೂ, ನಾಲ್ಕುದಿವಸಗಳವರೆಗೂ ವಧಾಜ್ಞೆಯನ್ನು ನಿಲ್ಲಿಸಿದುದ ರಿಂದ ಮಂತ್ರಿಪುಂಗವರು ತನ್ನ ನಿರಪರಾಧಿತ್ವವನ್ನು ಕಂಡುಹಿಡಿದು, ಬಿಡಿಸಿ ಕೊಳ್ಳುವರೆಂದು ಮತ್ತೊಂದುಸಾರಿಯೂ ಊಹಿಸಿಕೊಳ್ಳುತ್ತಿದ್ದನು. ಆದರೂ

ಆ ನಾಲ್ಕು ದಿನಗಳಲ್ಲಿ ಅರಮನೆಯಿಂದಾಗಲೀ ಮಂತ್ರಿಯ ಮನೆಯಿಂದಾಗಲೀ ಯಾವ ವರ್ತಮಾನವೂ ಬರಲೇಯಿಲ್ಲ. ತನ್ನ ವೃತ್ತಾಂತವನ್ನು ಸಾಂತವಾಗಿ ಅರಿಕೆಮಾಡಿಕೊಳ್ಳಲು ಚಕ್ರವರ್ತಿಗಳ ಬಳಿಗೆ ಕರೆದುಕೊಂಡು ಹೋಗ ಬೇಕೆಂದು ಕಾರಾಧಿಕಾರಿಗೆ ಪುನಃ ಪ್ರಾರ್ಥಿಸಿಕೊಂಡನು. ಸುಂಕದವನೊಡನೆ ಸುಖದುಃಖವನ್ನು ಹೇಳಿಕೊಂಡರೆ ಕೇಳುವನೆ? ವಿಜಯಸಿಂಹನ ಪ್ರಾರ್ಥನೆ ಯನ್ನು ಆ ಅಧಿಕಾರಿಯು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಚಕ್ರವರ್ತಿಗಳ ಸಂದರ್ಶನವು ತನಗೆ ಸಿಕ್ಕಿದರೆ ತನ್ನ ಆಪತ್ತನ್ನು ತೊಲಗಿಸಿಕೊಳ್ಳಬಹುದೆಂದು ತಿಳಿದುಕೊಂಡಿದ್ದನು. ಆದರೆ ರಾಜಸಂದರ್ಶನವು ದೊರೆಯುವುದು ಹೇಗೆ? ಸೂರ್ಯಸಂದರ್ಶನವು ಲಭಿಸಿದರೆ ಚಳಿಯಬಾಧೆಯು ನಶಿಸುವುದು. ಆದರೆ ಸಾಂದ್ರಮೇಘವೃಂದಗಳು ಪ್ರತಿಬಂಧಿಸುತ್ತಿರಲು ಚಳಿ ತೊಲಗುವುದು ಹೇಗೆ? ಆದುದರಿಂದ ವಿಜಯಸಿಂಹನು ತನಗೆ ಮರಣವು ನಿಶ್ಚಯವೇ ಎಂದು ನಿರ್ಧರಿಸಿಕೊಂಡನು. ಪ್ರತ್ಯರ್ಥಿಯಾದ ಮಹಾವೀರನ ಶಸ್ತ್ರಕ್ಕೆ ಗುರಿಮಾಡ ಬೇಕೆಂದಿದ್ದ ತನ್ನ ಶರೀರವನ್ನು, ಪಶುಪ್ರಾಯರಾದ ಮಾನವರನ್ನು ಕೊಲ್ಲುವ ಚಂಡಾಲನ ಕತ್ತಿಗೆ ಗುರಿಮಾಡಬೇಕಾಯಿತಲ್ಲ ಎಂದು ದುಃಖವು ಕ್ಷಣಕ್ಷಣ ಕ್ಕೂ ಹೆಚ್ಚುತ್ತಿತ್ತು. ಇದರಜೊತೆಗೆ ನಿರಪರಾಧಿಯಾದ ತನ್ನನ್ನು ಮಹಾಪ ವಾದವು ಮುಸುಕಿತಲ್ಲಾ ಎಂಬ ದುಃಖವು ಸಹಿಸಲಶಕ್ಯವಾದ ಸಂತಾಪವ ನ್ನುಂಟುಮಾಡುತ್ತಿತ್ತು. ಈ ದುಃಖದ ಮಧ್ಯದಲ್ಲಿ ಮುಕ್ತಾಂಬೆಯ ಜ್ಞಾಪಕ ವು 'ಗಂಡಸ್ಯೋಪರಿ ಸ್ಫೋಟಕ'ವೆಂಬಂತೆ ಮನಸ್ಸಿನಲ್ಲಿ ಕೊರೆಯುತಿತ್ತು. ಯಾವ ಲಲನಾಮಣಿಯ ಬುದ್ಧಿಚಾತುರ್ಯದಿಂದ ಸನ್ನಿಹಿತವಾದ ಮೃತ್ಯುವು ತೊಲಗಿತ್ತೊ ಅಂತಹವಳ ಸ್ನೇಹಫಲವನ್ನು ಅನುಭವಿಸದೆಯೇ ಸಾಯಬೇ ಕಾಗಿದೆಯಲ್ಲ ಎಂದು ಬಹಳವಾಗಿ ಕೊರಗಿದನು. ಅಂತಹ ಮುಕ್ತಾಂಬೆ ಯನ್ನು ದುರಾತ್ಮರ ಕೈಯಲ್ಲಿಟ್ಟು ಸಾಯಬೇಕಲ್ಲಾ ಎಂಬ ಬಂದು ಸಂತಾಪವು ಬೇರೆ ಕೊರೆಯುತಿತ್ತು. ಹೀಗೆ ಪರಿತಪಿಸುತ್ತಿದ್ದಾಗ ಇಬ್ಬರು ಆವನಿದ್ದ

ಸೆರೆಮನೆಗೆ ಬಂದರು. ಅವರು ಕಪ್ಪನೆಯ ತೋಳೆಯುರಾಗಿದ್ದರು. ಒಂದು ಸಾರಿ ನೋಡಿದ ಮಾತ್ರಕ್ಕೆ ಅವರ ಭಯಂಕರವಾದ ರೂಪನ್ನು ಎಂದೆಂದಿಗೂ ಮರೆಯಲಾಗುತ್ತಿರಲಿಲ್ಲ. ಇವರ ಕೈಯಲ್ಲಿ ರಕ್ತದ ಕಲೆಗಳಿದ್ದ ಎರಡು ಕತ್ತಿಗಳಿದ್ದುವು ಇವರನ್ನು ಕಂಡಕೂಡಲೆ ಕಟುಗರೆಂದು ನಿರ್ಧರಿಸಿಬಿಟ್ಟನು. ಎಂತಹ ಮಹಾವೀರರನ್ನಾದರೂ ಧೈರ್ಯದಿಂದ ಎದಿರಿಸುವ ಶಕ್ತಿಹೊಂದಿದ್ದ ವಿಜಯಸಿಂಹನಿಗೆ ಇವರನ್ನು ಕಂಡು ಒಂದುಬಗೆಯ ಜುಗುಪ್ಸೆಯುಂಟಾಗಿ ಅಂತಹ ನೀಚಾತ್ಮರ ಕತ್ತಿಗೆ ತುತ್ತಾಗುವಂತಾಯಿತಲ್ಲ ಎಂಬ ಭಯವುಂಟಾ ಯಿತು. ಆದರೆ ಸಹಜಶೂರನಾದ ವಿಜಯಸಿಂಹನು ಜುಗುಪ್ಸಾಮೂಲವಾದ ತನ್ನ ಭಯವನ್ನು ತಡೆದು, ' ನೀವ್ಯಾರು ? ಯಾತಕ್ಕೆ ಬಂದಿರಿ ? ' ಎಂದು ಕೇಳಿದನು.

" ಏನಯ್ಯಾ ನಮ್ಮ ರೂಪವನ್ನೂ ವೇಷವನ್ನೂ ನೋಡಿಯೂ ಹೀಗೆ ಕೇಳುವೆಯಲ್ಲಾ ! ನಾವು ನಿನ್ನಪಾಲಿನ ಯಮದೂತರು. ಬಲಿಕೊಡಲು ನಿನ್ನನ್ನು ಎಳೆದುಕೊಂಡು ಹೋಗಲು ಬಂದಿದ್ದೇವೆ " ಎಂದು ಮೊದಲನೆಯ ವನು ಹೇಳಿದನು.

ಚಂಡಾಲರಲ್ಲಿಯೂ ಎಷ್ಟೋಮಂದಿ ಒಳ್ಳೆಯವರಿರುವರು ; ಕೆಟ್ಟ ವರೂ ಸಿಕ್ಕುವರು. ಈ ಕೆಟ್ಟವರಲ್ಲಿಯೂ ಒಬ್ಬೊಬ್ಬರನ್ನೂ ಹೋಲಿಸಿ ನೋಡಿದರೆ ಒಬ್ಬರಿಗಿಂತ ಮತ್ತೊಬ್ಬರು ಒಳ್ಳೆಯವರೆನಿಸಿಕೊಳ್ಳಬಹುದು. ವಿಜಯಸಿಂಹನನ್ನು ಎಳೆದುಕೊಂಡು ಹೋಗಲು ಬಂದಿದ್ದ ಇಬ್ಬರಲ್ಲಿ ಮೊದಲು ಉತ್ತರಕೊಟ್ಟವನೇ ಉತ್ತಮನು. ಎರಡನೆಯವನು ಅವನಿ ಗಿಂತಲೂ ಕಠಿನಹೃದಯನು. ನಿರ್ದಾಕ್ಷಿಣ್ಯಪರ. ಇವನು " ಏನುಸ್ವಾಮಿ, ಅನಂಗಸೇನೆಯವರಿಗೆ ಕಾಗದಬರೆದ ಫಲವು ತಮ್ಮನ್ನು ಸುಮ್ಮನೆಬಿಟ್ಟೀತೆ ? ನಿನ್ನ ಮೈಯನ್ನು ಚೆನ್ನಾಗಿ ಕೊಬ್ಬಿಸಿರುವೆ ! ಹದ್ದುಕಾಗೆಗಳಿಗೆ ಅದನ್ನು ನೈವೇದ್ಯಮಾಡುವೆ ! ಹೊರಡು " ಎಂದು ವಿಕಟಹಾಸಮಾಡುತ್ತಾಗರ್ಜಿಸಿದನು.

ಈ ನೀಚನ ತುಚ್ಛವಾದ ಈ ಹರಟೆಯನ್ನು ಕೇಳಿ ವಿಜಯಸಿಂಹನಿಗೆ ಎದೆಬಡೆಯುವಂತಾಯಿತು. ಸಹಜಶೂರನಾದ ಆತನು—"ಛೀ ದುರಾತ್ಮ! ನಿನಗೆಷ್ಟು ಹರಟೆ; ನಿನ್ನ ಕೆಲಸಕ್ಕೆ ನನ್ನ ಅಡ್ಡಿಯೇನೂ ಇಲ್ಲ. ನನ್ನ ತಲೆಯನ್ನು ಕತ್ತರಿಸಿಹಾಕು. ಶೂಲದಂತಿರುವ ಮಾತುಗಳಿಂದ ನನ್ನ ಮನಸ್ಸನ್ನೇಕೆ ನೋಯಿಸುವೆ?" ಎಂದು ಕೋಪದಿಂದ ಹೇಳಿದನು.

ಇದನ್ನು ಕೇಳಿದಕೂಡಲೆ ಆ ಎರಡನೆಯ ಚಂಡಾಲನಿಗೆ ಕೋಪವು ಹೆಚ್ಚಿತು. "ಮೃತ್ಯುಮುಖದಲ್ಲಿದ್ದರೂ ಇವನ ಕೊಬ್ಬು ಅಣಗಿದಂತಿಲ್ಲ. ನನ್ನ ಕತ್ತಿಯು ಇವನ ರಕ್ತವನ್ನು ಕುಡಿಯಬೇಕೆಂದು ಆತುರಪಡುತ್ತಿದೆ. ಬೇಗ ಹೊರಡಿಸು." ಎಂದು ತನ್ನ ಜೊತೆಗಾರನಿಗೆ ಹೇಳಿದನು. ಆದರೆ ವಿಜಯಸಿಂಹನ ಆಕಾರವನ್ನೂ ವೇಷಭೂಷೆಗಳನ್ನೂ ಕಂಡು ಮನಕರಗಿದ್ದ ಮೊದಲನೆಯವನು ಪ್ರತಿಹೇಳಲಿಲ್ಲ.

ಆಗ ವಿಚಾರಾತಿಶಯದಿಂದ ಯುಕ್ತಾಯುಕ್ತ ವಿಚಾರಶೂನ್ಯನಾಗಿದ್ದ ವಿಜಯಸಿಂಹನು ಮೊದಲನೆಯ ಚಂಡಾಲನನ್ನು ನೋಡಿ "ಅಯ್ಯಾ, ನನಗೆ ಒಂದುಸಾರಿ ಮಹಾರಾಜರ ದರ್ಶನವನ್ನುಂಟುಮಾಡಿಸಲು ಸಾಧ್ಯವೇ?" ಎಂದು ಕೇಳಿದನು. ಇದಕ್ಕೆ ಮೊದಲನೆಯವನು ಉತ್ತರ ಹೇಳಬೇಕೆಂದಿರುವಷ್ಟರಲ್ಲೇ ಎರಡನೆಯವನು ಬಾಯಿಹಾಕಿ "ಮಹಾಸ್ವಾಮಿಗಳಿಗೆ ಮಹಾರಾಜರ ಭೇಟಿ ಬೇರೆ ಆಗಬೇಕೇನೊ? ಯಮಮಹಾರಾಜರವರ ದರ್ಶನವನ್ನೇನೋ ಮಾಡಿಸುವುದು ನಮಗೆ ಸಾಧ್ಯ ಮಹಾರಾಜರ ದರ್ಶನಕ್ಕೂ ನಮಗೂ ಸಂಬಂಧವಿಲ್ಲ ನನ್ನಮೇಲೆ ತೋರಿಸಿದ ಗರ್ವಕ್ಕೆ ತಕ್ಕಫಲವನ್ನು ಉಣ್ಣಲು ಸಿದ್ಧನಾಗು. ಹೊರಡು." ಎಂದು ಹೇಳಿದನು.

ಅಲ್ಪನ ಸಹವಾಸವು ಸರಿಯಲ್ಲವೆಂದು ತಿಳಿದು "ನಿಮ್ಮ ಕೆಲಸವನ್ನು ನೀವು ಮಾಡಿಕೊಳ್ಳಬಹುದು" ಎಂದು ವಿಜಯಸಿಂಹನು ಉತ್ತರಹೇಳಿದನು.

ಚಂಡಾಲರು ವಧ್ಯಸ್ಥಾನಕ್ಕೆ ವಿಜಯಸಿಂಹನನ್ನು ಕರೆದುಕೊಂಡು ಹೊರಟರು. ದಾರಿಯಲ್ಲಿ ಕೆಲವರು ಚಂಡಾಲರ ಮಧ್ಯದಲ್ಲಿ ಹೋಗುತ್ತಿದ್ದ

ವಿಜಯಸಿಂಹನ ಆಕಾರವನ್ನು ಕಂಡು ಗೇಲಿಮಾಡಿದರು. ಇನ್ನು ಕೆಲವರು ಆಶ್ಚರ್ಯದಿಂದ ಮೌನವಾಗಿ ನೋಡುತ್ತಿದ್ದರು. ಮತ್ತೆ ಕೆಲವರು ಇಂತಹ ಸ್ಫುರದ್ರೂಪಿಯಾದ ಯೌವ್ವನಸ್ಥನಿಗೆ ಎಂತಹ ದೆಸೆಯುಂಟಾಯಿತು ಎಂದು ಮರುಗುತ್ತಿದ್ದರು. ವಿಜಯಸಿಂಹನ ಶೌರ್ಯೌದಾರ್ಯಾದಿ ಸುಗುಣಗಳನ್ನು ಕಂಡು ಹೊಟ್ಟೆಕಿಚ್ಚಿನಿಂದ ಪರಿತಪಿಸುತ್ತಿದ್ದ ಉಳಿದ ಕೆಲವರು ತಮ್ಮ ಹಗೆಗೆ ಬಂದ ಈ ಅವಸ್ಥೆಯನ್ನು ಕಂಡು ಹಿಗ್ಗುತ್ತಿದ್ದರು. ಆಹಾ! ದೈವೇಚ್ಛೆಯು ಅಚಿಂತ್ಯವಾದುದಲ್ಲವೆ? ತನ್ನ ಬಾಹುಪರಾಕ್ರಮದಿಂದ ಮಂತ್ರಿವರ್ಯನನ್ನು ಆಕ್ರಮಿಸಿದ್ದ ಶತ್ರುಗಳನ್ನು ಬಡಿದಟ್ಟಿ, ತನಗೆ ಎದಿರಿಸಿದ್ದ ರುದ್ರದೇವನೇ ಮೊದಲಾದ ಶೂರರನ್ನು ದ್ವಂದ್ವಯುದ್ಧದಲ್ಲಿ ಪರಿಭವಿಸಿ, ಮಹಾರಾಜರ ಕೃಪೆಗೆ ಪಾತ್ರನಾಗಿ ಅನೇಕರ ಗೌರವವನ್ನು ಸಂಪಾದಿಸಿದ್ದ ವಿಜಯಸಿಂಹನು ಈಗ ಅಧಮರಾದ ಚಂಡಾಲರ ಕೈಗೆ ಸಿಕ್ಕಿ ವಧ್ಯಸ್ಥಾನಕ್ಕೆ ಹೋಗಿ ಕಟುಕರ ಕತ್ತಿಗೆ ತಲೆಕೊಡುವ ಹಾಗಾದುದು ಎಂತಹ ವಿಪರೀತ ದೆಸೆ; ವಿಜಯಸಿಂಹನಿಗೆ ಈ ಸಂಕಟಸಮಯದಲ್ಲಿ ತನ್ನ ಪೂರ್ವಸ್ಮರಣೆಯುಂಟಾಗಲು, ರಾಜಮಂತ್ರಿಗಳ ಕಟಾಕ್ಷವನ್ನು ಪಡೆದಿದ್ದ ತಾನು ನಿರಪರಾಧಿಯಾಗಿದ್ದರೂ ಈ ಅವಸ್ಥೆಗೆ ಗುರಿಯಾಗಬೇಕಾದುದು ದೈವಚಿತ್ತವೆಂದೂ, ಅದಕ್ಕಾಗಿ ಪರಿತಪಿಸುವುದರಿಂದ ಏನೂ ಪ್ರಯೋಜನವಿಲ್ಲವೆಂದೂ ಮನಸ್ಸನ್ನು ಗಟ್ಟಿಮಾಡಿಕೊಂಡು ಶಾಂತನಾಗಲು ಯತ್ನಿಸುತ್ತಿದ್ದನು. ಆದರೆ ಇಂತಹ ವಿಷಮಸಮಯದಲ್ಲಿ ಚಾಂಚಲ್ಯಶೀಲವಾದ ಮನಸ್ಸು ಶಾಂತವಾಗಿರುವುದು ಹೇಗೆ? ಪುನಃ ಪುನಃ ಅತ್ಯಂತ ವಿವೇಕಶಾಲಿಗಳಾದ ರಾಜಮಂತ್ರಿಗಳು ತನ್ನ ನಿರಪರಾಧಿತ್ವವನ್ನು ಕಂಡು ಹಿಡಿಯಲಾರರೇ? ಕಂಡು ಹಿಡಿಯುವ ಮಾರ್ಗವು ಯಾವುದು? ಇವೇ ಮೊದಲಾದ ಅನೇಕ ಬಗೆಯ ಯೋಚನೆಗಳು ತಲೆದೋರುತ್ತಲಿದ್ದುವು. ಮನಸ್ಸು ಹೀಗೆ ಅನ್ಯಥಾ ಪ್ರವೃತ್ತವಾಗಿರಲು ನೇತ್ರಶ್ರೋತ್ರಾದಿ ಜ್ಞಾನೇಂದ್ರಿಯಗಳು ವಿಷಯಗ್ರಹಣ ಮಾಡದೆ ಸ್ತಬ್ಧವಾಗಿದ್ದುವು. ಇದ

ರಿಂದಲೂ ಬಂದುಪಕ್ಷಕ್ಕೆ ವಿಜಯಸಿಂಹನಿಗೆ ಬಳ್ಳಿಯದೇ ಆದಂತಾಯಿತು. ಅವನ ಕಣ್ಣುಗಳು ತೆರೆದಿದ್ದರೂ ದಾರಿಯುದ್ದಕ್ಕೂ ಅಲ್ಲಲ್ಲಿ ನಿಂತಿದ್ದ ಪೂರ್ವಪರಿಚಿತರನ್ನು ಗುರುತಿಸಲಾರದೆ ಹೋದುವು; ಪ್ರೇಕ್ಷಕರು ಮಾತ ನಾಡಿಕೊಳ್ಳುತ್ತಿದ್ದ ದೂಷಣೆಯನ್ನಾಗಲಿ ಭೂಷಣವನ್ನಾಗಲಿ ಅವನ ಕಿವಿ ಗಳು ಗ್ರಹಿಸಲಾರದಿದ್ದುವು; ವಧ್ಯಸ್ಥಾನದ ದುರ್ಗಂಧವನ್ನು ಘ್ರಾಣೇಂದ್ರಿ ಯವು ಗ್ರಹಿಸಲಶಕ್ತವಾಗಿತ್ತು. ಸಂತತವಾಗಿ ಆ ದುರಾತ್ಮರ ಅಪವಿತ್ರಕರ ಸ್ಪರ್ಶವು ಉಂಟಾಗಿದ್ದರೂ, ಆ ಚಂಡಾಲರ ಪಾಶಗಳು ತನ್ನ ಕೈಗಳನ್ನು ಬಂಧಿಸಿದ್ದರೂ ವಿಜಯಸಿಂಹನಿಗೆ ಬೇರೆ ಗೋಚರವಾಗುತ್ತಿರಲಿಲ್ಲ. ಹೀಗಿದ್ದ ವಿಜಯಸಿಂಹನನ್ನು ಚಂಡಾಲರು ವಧ್ಯಸ್ಥಾನಕ್ಕೆ ಕರೆತಂದು ನಿಲ್ಲಿಸಿದರು.

ಅಲ್ಲಿ ಎತ್ತರವಾದ ಕೆಲವು ವೃಕ್ಷಗಳಿದ್ದುವು. ಇವು ಶ್ಮಶಾನವಾಸಿಗ ಳಾದ ಕೆಲವು ಗೃಧ್ರ ಕಾಕಗಳಿಗೆ ಮನೆಯಾಗಿದ್ದುವು. ವಧಿತರಾದ ನಿರ್ಭಾ ಗ್ಯರ ಅಸ್ಥಿರೋಮಗಳಿಂದಲೂ ದುರ್ಗಂಧದಿಂದಲೂ ಶ್ಮಶಾನವು ಭೀಭತ್ಸ ಜನಕವಾಗಿತ್ತು. ಅದರೂ ಅಶ್ಲೀಲಮನಸ್ಕರೂ, ಕಾರ್ಯಭಾರರಹಿತರೂ, ಈರ್ಷ್ಯಾತ್ಮರೂ, ಅನುತಾಪಸಂತಪ್ತರೂ ಆದ ಕೆಲವರು ಆ ಸ್ಥಳಕ್ಕೂ ಬಂದು ನೋಡುತ್ತಿದ್ದರು. ಇವರಲ್ಲಿ, ಅನುತಾಪದಿಂದಿದ್ದ ಕೆಲವರು ವಿಜಯಸಿಂಹ ನಿಗೆ ಒದಗಿದ್ದ ದುರ್ದೆಸೆಯಲ್ಲಿ ಅವನನ್ನು ಬಿಟ್ಟುಹೋಗಲಾರದೆ ಕಂಬನಿಗರೆ ಯುತ್ತಾ ನಿಂತುಕೊಂಡಿದ್ದರು. ಇತರರು ವಧೆಯು ಯಾವಾಗ ಆದೀತೆಂದು ಕುತೂಹಲದಿಂದ ಕಾದುಕೊಂಡಿದ್ದರು. ಇಂತಹವರಲ್ಲಿ ರುದ್ರದೇವನೂ ಒಬ್ಬನು. ತನಗೆ ಪ್ರಬಲಪ್ರತ್ಯರ್ಥಿಯಾದ ವಿಜಯಸಿಂಹನ ಮರಣವಾರ್ತೆ ಯನ್ನು ಮುಕ್ತಾಂಬೆಗೆ ತಿಳಿಸಬೇಕೆಂದು ಅತ್ಯಂತ ಕುತೂಹಲದಿಂದ ಕಾದಿ ದ್ದನು. ಚಂಡಾಲರು ವಿಜಯಸಿಂಹನಿಗೆ ಕಣ್ಣುಕಟ್ಟಿ ವಧ್ಯಸ್ಥಾನಕ್ಕೆ ಕರೆ ತಂದು ಒಂದು ಚಪ್ಪಡಿಯ ಮುಂದೆ ನಿಲ್ಲಿಸಿದರು. ತನ್ನ ಅಂತ್ಯಸಮ ಯವು ಸನ್ನಿಹಿತವಾಯಿತೆಂದು ಭಾವಿಸಿ, ವಿಜಯಸಿಂಹನು ತಾನು ತಿಳಿದೂ

ತಿಳಿಯದೆಯೂ ಮಾಡಿರಬಹುದಾದ ಸಕಲ ವಿಧವಾದ ಪಾತಕಗಳನ್ನೂ ಕ್ಷಮಿಸಿ ತನಗೆ ಸದ್ಗತಿಯನ್ನುಂಟುಮಾಡಬೇಕೆಂದು ಅನನ್ಯಮನಸ್ಕನಾಗಿ ಭಗವಂತನನ್ನು ಧ್ಯಾನಿಸಿದನು. ಅಷ್ಟರಲ್ಲೇ ಕ್ರೂರಕರ್ಮಿಗಳಾದ ಆ ಚಂಡಾಲರು "ನಿನ್ನ ಧ್ಯಾನವು ಮುಗಿಯಿತೆ? ಮುಂದಿನ ಕೆಲಸವನ್ನು ನಡೆಯಿಸ ಬಹುದೇ?" ಎಂದು ಕೇಳಲು, ವಿಜಯಸಿಂಹನು ನಡೆಯಿಸಬಹುದೆಂದು ಕೈಯಿಂದಲೇ ಸಂಜ್ಞೆಮಾಡಿ ತೋರಿಸಿದನು. ಕಟುಕರು ಅವನನ್ನು ಆ ಚಪ್ಪಡಿಯ ಮೇಲಕ್ಕೆ ಕರೆದುಕೊಂಡು ಹೋಗಿ ನಿಲ್ಲಿಸಿ, ಒಬ್ಬನು ಅವನನ್ನು ಬಲವಾಗಿ ಹಿಡಿದು ನಿಲ್ಲಿಸಿದನು. ಮತ್ತೊಬ್ಬನು ತನ್ನ ಕತ್ತಿಯನ್ನು ಗುರಿ ಹಿಡಿದು ನೋಡುತ್ತಿದ್ದನು ಪ್ರೇಕ್ಷಕರಲ್ಲೊಬ್ಬನು "ತಡಮಾಡಬೇಡ, ತಡಮಾಡಬೇಡ, ಕತ್ತರಿಸಿ ಹಾಕು" ಎಂದು ಕೂಗಿಕೊಳ್ಳುತ್ತಿದ್ದನು. "ಇವನು ನಮಗೆ ಹಿಂದೆ ಪರಿಚಿತನಾದ ಹುಚ್ಚನೇ. ಹಿಂದೆ ನಿನಗೆ ಜೀವವನ್ನು ಳಿಸಿದವನ ಪ್ರಾಣವನ್ನು ತೆಗೆಯಬೇಕೆಂದು ಹೀಗೇಕೆ ತ್ವರೆಪಡಿಸುವೆ?" ಎಂದು ಪ್ರೇಕ್ಷಕರಲ್ಲಿ ಕೆಲವರು ಹುಚ್ಚನನ್ನು ಕೇಳಲು, ಅವರಿಗೆ ಉತ್ತರ ಕೊಡದೆ ಪಕಪಕನೆ ನಕ್ಕುಬಿಟ್ಟನು.

ಈ ಸಮಯದಲ್ಲಿ "ನಿಲ್ಲು! ಕೊಲ್ಲಬೇಡ! ನಿಲ್ಲು! ನಿಲ್ಲು!" ಎಂಬ ಮಾತುಗಳು ಕೇಳಬಂದುವು. ಚಂಡಾಲನು ಎತ್ತಿದ್ದ ಕೈಯನ್ನು ಇಳಿಸಿದನು. ಜನರೆಲ್ಲರೂ ಈ ಧ್ವನಿ ಕೇಳಬಂದ ದಿಕ್ಕನ್ನು ನೋಡುತ್ತಿದ್ದರು. ಹೀಗೆ ಕೂಗುತ್ತ ಬಂದವನ ಆಕಾರವನ್ನು ನೋಡಿದರೆ ದೊಡ್ಡ ಅಧಿಕಾರಿಯಾಗಿದ್ದಂತೆ ಕಂಡುಬಂತು. ದಾರಿಯಲ್ಲಿದ್ದವರೆಲ್ಲರೂ ಆತನಿಗೆ ಸ್ಥಳಬಿಟ್ಟುಕೊಟ್ಟರು. ಈ ಪುರುಷನು ಮಹಾಪ್ರಧಾನನಾದ ತಿಮ್ಮರಸನ ಮಂತ್ರಿಯೇ ಆಗಿದ್ದುದನ್ನು ಕಂಡು ಪ್ರೇಕ್ಷಕರಲ್ಲಿ ಬಗೆಬಗೆಯ ಭಾವಗಳುಂಟಾದುವು. ವಿಜಯಸಿಂಹನಿಗೆ ಅಹಿತರಾಗಿದ್ದ ರುದ್ರದೇವ ಮೊದಲಾದವರಿಗೆ ಹೊಗೆಯಾಡುತ್ತಿದ್ದ ಹೊಟ್ಟೆಕಿಚ್ಚು ಭಗ್ಗನೆ ಹೊತ್ತಿಕೊಂಡಂತೆ

ಸಂಕಟವಾಗುತ್ತಿತ್ತು. ಸೋಮಾರಿಗಳಾಗಿದ್ದ ಪ್ರೇಕ್ಷಕರಿಗೆ ತಮ್ಮ ಪ್ರಯಾಸವು ನಿಷ್ಫಲವಾಯಿತೆಂದೂ ಆಶಾಭಂಗವುಂಟಾಯಿತೆಂದೂ ವ್ಯಥೆಯಾಗುತ್ತಿತ್ತು. ಸ್ವಾಭಾವಿಕವಾಗಿ ಅಮಂಗಳಾಕಾಂಕ್ಷಿಗಳಾಗಿದ್ದವರು ತಮ್ಮ ಕಣ್ಣಿಗೆ ಆಗುತ್ತಿದ್ದ ಹಬ್ಬವು ತಪ್ಪಿದುದಕ್ಕಾಗಿ ಚಿಂತಿಸಿಕೊಳ್ಳುತ್ತಿದ್ದರು. ವಿಜಯಸಿಂಹನಲ್ಲಿ ಅನುತಾಪಪಡುತ್ತಿದ್ದವರೆಲ್ಲರೂ ಮೊದಮೊದಲು, ಅನಾಥರಕ್ಷಕನೂ ಭಕ್ತವತ್ಸಲನೂ ಆದ ಶ್ರೀ ಭಗವಂತನೇ ಆ ಮನುಷ್ಯನ ರೂಪವನ್ನು ತಾಳಿ ಬಂದನೆಂದು ಭ್ರಮಿಸಿ ವಂದನೆಗಳನ್ನು ಅರ್ಪಿಸಿದರು. ಆತನು ತಿಮ್ಮರಸನೆಂದು ಗುರುತು ಸಿಕ್ಕಿದಕೂಡಲೆ ವಿವೇಕಶಾಲಿಯೂ ವಿನಯವೂ ರ್ತಿಯೂ ಆದ ತಿಮ್ಮರಸನು ತನ್ನ ಉನ್ನತಪದವಿಯನ್ನೂ ಲಕ್ಷ್ಯಮಾಡದೆ ಅಮಂಗಳವಾದ ಶ್ಮಶಾನಕ್ಕೆ ಬಂದುದಕ್ಕಾಗಿ ಆತನನ್ನು ವಿಧವಿಧವಾಗಿ ಸ್ತುತಿಸುತ್ತಿದ್ದರು. ವಿಜಯಸಿಂಹನು ತನಗೆ ಸ್ವಪ್ನವೇ ಉಂಟಾಗುತ್ತಿದೆಯೆಂದು ಭ್ರಮಿಸಿದನಲ್ಲದೆ, ತಾನು ಎಚ್ಚರವಾಗಿದ್ದನೆಂದು ತಿಳಿದುಕೊಳ್ಳಲಿಲ್ಲ. ಮಂತ್ರಿವರ್ಯನು ವಧ್ಯಸ್ಥಳದ ಬಳಿಗೇ ಬಂದು ವಿಜಯಸಿಂಹನನ್ನು ಬಾಚಿ ತಬ್ಬಿಕೊಳ್ಳಲು, ವಿಜಯಸಿಂಹನಿಗೆ ಸ್ವಲ್ಪಸ್ವಲ್ಪವಾಗಿ ಸ್ಫೂರ್ತಿಯುಂಟಾಗಿ ತಿಮ್ಮರಸನನ್ನು ಗುರುತಿಸಿದನು. ಆತನು ತಾನು ತಂದಿದ್ದ ಗಾಡಿಯಲ್ಲಿ ವಿಜಯಸಿಂಹನನ್ನು ಕುಳ್ಳಿರಿಸಿಕೊಂಡು ಅರಮನೆಗೆ ಕರೆದುಕೊಂಡು ಹೊರಟನು.

ಭವಿಷ್ಯತ್ಕಾರ್ಯಾಲೋಚನೆ.

ಉಪಾಯೇನ ನಯಚ್ಛಕ್ಯಂ । ನತಚ್ಛಕ್ಯಂ ಪರಾಕ್ರಮೈಃ ॥

ಆನೆಗೊಂದಿಯ ಪ್ರಹರೇಶ್ವರಪಾತ್ರನು ತನ್ನ ಮಂದಿರದಲ್ಲಿ ಕುಳಿತುಕೊಂಡು ಏನೋ ಯೋಚಿಸಿಕೊಳ್ಳುತ್ತಾ ಇರಲು, ಹುಚ್ಚನು ಅವನ ಬಳಿಗೆ ಬಂದನು. ಆತನನ್ನು ಕಂಡಕೂಡಲೆ ಪ್ರಹರೇಶ್ವರನು ಎದ್ದು ಆತನನ್ನು ಗೌರವದಿಂದ ಬರಮಾಡಿಕೊಂಡು ಉಚಿತಾಸನದಲ್ಲಿ ಕುಳ್ಳಿರಿಸಿದನು. ಅನೇಕಭಟರು ದುರ್ಗದಲ್ಲಿ ನಿಯಮಿತರಾಗಿದ್ದುದರಿಂದ ದುರ್ಗಕ್ಕೆ ಹೋಗಿ ಬರುವುದು ಸುಲಭವಾಗಿರಲಿಲ್ಲ. ಆದುದರಿಂದ ರಾಮಯ ಮಂತ್ರಿಯು ತನ್ನ ಹುಚ್ಚನವೇಷವನ್ನು ಹಾಕಿಕೊಂಡೇ ದುರ್ಗವನ್ನು ಪ್ರವೇಶಿಸಿದ್ದನು. ರಾಮಯನು ಪ್ರಹರೇಶ್ವರನನ್ನು ಕುರಿತು "ಅಯ್ಯಾ ನಮ್ಮ ಸಹವ್ಯವಸಾಯಿಗಳಲ್ಲಿ ಕೆಲವರ ನಾಲಗೆಗಳು ಅತಿಚಂಚಲವಾದುವೆಂದು ಕಾಣುವುದು. ಆದುದರಿಂದಲೇ ನಾವು ಮಾಡುವ ಮಂತ್ರಾಲೋಚನೆಗಳೆಲ್ಲಾ ಎದಿರು ಕಕ್ಷಿಯವರಿಗೆ ತಿಳಿದು, ನಮ್ಮ ಕಷ್ಟಗಳೆಲ್ಲಾ ಮಣ್ಣುಪಾಲಾಗುತ್ತಿವೆ. ನಮ್ಮ ಸ್ನೇಹಿತರೇ ನನ್ನ ಕೋರಿಯಂತೆ ನಡೆದುಕೊಳ್ಳದೆ ಇರುವುದರಿಂದ ಫಲೋನ್ಮುಖವಾಗಿದ್ದ ಉಪಾಯಮಹೀರುಹವನ್ನು ತಮ್ಮ ರಸನಾಕುಠಾರಗಳಿಂದ ಕತ್ತರಿಸಿಹಾಕಿದರು. ಇನ್ನು ಏನುಮಾಡಲಿ! ನಾನು ಹಲವು ವೇಷಗಳಿಂದ ಶತ್ರುಗಳನ್ನು ಠಕ್ಕುಗೊಳಿಸಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದರೂ ನಮ್ಮ ಮಿತ್ರರ ರಸನಾಚಾಪಲ್ಯದಿಂದ ನನ್ನ ಪ್ರಯತ್ನಗಳೆಲ್ಲಾ ವ್ಯರ್ಥವಾಗುತ್ತಿವೆ. ಮೃತ್ಯುವಿನ ದವಡೆಗೇ ಸಿಕ್ಕಿದ್ದ ವಿಜಯಸಿಂಹನು ನಿರಪಾಯವಾಗಿ ತಪ್ಪಿಸಿಕೊಂಡನು. ಅವನನ್ನು ಮೃತ್ಯುಮುಖಕ್ಕೆ ನೂಕಲು ನಾನುಮಾಡಿದ ಪ್ರಯತ್ನಗಳು ದೇವರಿಗೇ ಗೊತ್ತು. ಇಂತಹ

ದರಲ್ಲಿ ನಮ್ಮಲ್ಲಿ ಯಾರದೆಸೆಯಿಂದಲೋ ಆ ಪ್ರಯತ್ನಗಳೆಲ್ಲಾ ನಿಷ್ಫಲವಾದುವು.'' ಎಂದು ಬಹಳವಾಗಿ ವಿಚಾರದಿಂದ ಮಾತನಾಡಿದನು.

ಪ್ರಹರೇಶ್ವರ—''ಮಂತ್ರಿಪ್ರವರರೇ! ನಮ್ಮಲ್ಲಿ ಅಂತಹ ವಿವೇಕ ಶೂನ್ಯರು ಯಾರಿರುವರು. ನಮ್ಮ ಮಿತ್ರರು ತಮ್ಮ ಪ್ರಾಣವನ್ನಾದರೂ ಕಳೆದುಕೊಳ್ಳುವರೇ ಹೊರತು, ಗುಟ್ಟನ್ನು ರಟ್ಟುಮಾಡಲಾರರು ಎಂದು ದೃಢವಾಗಿ ನಂಬಿರುವೆನು ಹೀಗಿರಲು ನಮ್ಮ ರಹಸ್ಯವು ಶತ್ರುಗಳಿಗೆ ಹೇಗೆ ತಿಳಿಯಿತೋ ಎಂದು ನನಗೆ ಬಹಳ ವಿಷಾದವಾಗಿದೆ. ನಿಮಗೆ ಯಾರಮೇಲೆ ಸಂಶಯ ?'' ತಿಳಿಸಿ.

ರಾಮಯ—''ನಮ್ಮವರ ವಿಶ್ವಾಸಾರ್ಹತೆಯು ನನಗೆ ಚೆನ್ನಾಗಿ ತಿಳಿದಿರುವುದು ಆದರೂ ಮುಕ್ತಾಂಬೆಯ ಮೂಲಕ ನಮ್ಮ ಗುಟ್ಟು ಹೊರಪಟ್ಟಿತೆಂದು ನನಗೆ ಚೆನ್ನಾಗಿ ತಿಳಿಯಿತು''.

ಪ್ರಹರೇ—''ಮಂತ್ರಿಶ್ರೇಷ್ಠರೇ! ಮುಕ್ತಾಂಬೆಯು ನಿಂದ್ಯಳಲ್ಲವೆಂದು ನನಗೆ ನಂಬಿಕೆಯಿದೆ ಏಕೆಂದರೆ—ಹಿಂದಿನ ಸಭೆಗೆ ಆಕೆಯು ಬಂದೇ ಇರಲಿಲ್ಲ. ಆದುದರಿಂದ ಸಭೆಯಲ್ಲಿ ನಡೆದ ಸಮಾಚಾರಗಳು ಅವಳಿಗೆ ಗೊತ್ತಾಗಿರಲಾರವು. ನನ್ನ ಆಣೆಭಾಷೆಗಳಲ್ಲಿ ತಮಗೆ ನಂಬಿಕೆಯಿರುವ ಪಕ್ಷದಲ್ಲಿ ದೇವರಆಣೆಗೂ ನಾನು ಮುಕ್ತಾಂಬೆಯೊಡನೆ ಈ ಸುದ್ದಿಯನ್ನು ಎತ್ತಲಿಲ್ಲವೆಂದು ಹೇಳುತ್ತೇನೆ. ಹೀಗಿರಲು ಆ ಸಭೆಯ ವೃತ್ತಾಂತವು ಮುಕ್ತಾಂಬೆಗೆ ತಿಳಿಯಲು ಅವಕಾಶವಿಲ್ಲ. ಅವಳಿಗೆ ತಿಳಿಯದ ರಹಸ್ಯವನ್ನು ಮುಕ್ತಾಂಬೆಯು ಹೊರಗೆಡುವುವುದು ಹೇಗೆತಾನೆ ಸಾಧ್ಯ! ತಾವೇ ಹೇಳೋಣಾಗಲಿ.''

ರಾಮಯ—''ಮಿತ್ರಾ! ನಿನ್ನ ವಿಷಯದಲ್ಲಿ ನನಗೆ ರವೆಯಷ್ಟಾದರೂ ಅನುಮಾನವಿಲ್ಲ. ಆದುದರಿಂದ ಸ್ವಲ್ಪವಾದರೂ ಚಿಂತಿಸಬೇಡ. ಆಕೆಗೆ ಗುಟ್ಟುತಿಳಿದ ರೀತಿಯೇ ಬೇರೆ: ರುದ್ರದೇವನು ಆಕೆಯನ್ನು ನೋಡಿ

ಕೊಂಡು ಬರಲು ಹೋಗಿದ್ದನು. ಅಸಾಧಾರಣಪ್ರಜ್ಞಾಶಾಲಿನಿಯಾದ ಮುಕ್ತಾಂಬೆಯು ತನ್ನ ಚಾತುರ್ಯದಿಂದ ಅವನು ತಿಳದಿದ್ದ ಗುಟ್ಟನ್ನು ಹೀರಿ ಬಿಟ್ಟಳು. ಇದರಿಂದಲೇ ನಮ್ಮ ರಹಸ್ಯವು ಪ್ರತಿಕಕ್ಷಿಗಳ ಪಾಲಾಯಿತು. ಮುಕ್ತಾಂಬೆಯು ವಿಜಯಸಿಂಹನನ್ನೇ ವರಿಸಬೇಕೆಂದು ದೃಢಮನಸ್ಕಳಾಗಿರುವುದರಿಂದ, ಅಷ್ಟು ಮುಖ್ಯವಾದ ರಹಸ್ಯವನ್ನು ತಿಳದೂ ಸುಮ್ಮನಿರುವಳೇ ? ನಮ್ಮ ಉಪಾಯಕ್ಕೆ ಪ್ರತಿಕ್ರಿಯೆಗಳನ್ನು ಮಾಡಿಯೇ ಮಾಡಿದಳು. ರುದ್ರದೇವನೇ ತನ್ನ ಕೆಲಸಕ್ಕೆ ಕಲ್ಲು ಎಳೆದುಕೊಂಡರೂ, ಅವನ ಕೆಲಸವನ್ನು ಇಲ್ಲಿಗೇ ಬಿಟ್ಟುಬಿಡುವುದರಿಂದ ನಮ್ಮ ಉದ್ದೇಶವು ಸಿದ್ಧಿಸಲಾರದು. ನಮ್ಮಿಂದ ಆಗುವ ಸಕಲ ಪ್ರಯತ್ನಗಳನ್ನೂ ನಡೆಯಿಸಿಯೇ ನೋಡಿಬಿಡೋಣ. ಪ್ರಯತ್ನಗಳು ನಮ್ಮ ಅಧೀನ ; ಫಲ ದೇವರ ಅಧೀನ. ಕೆಲಸವು ಇಷ್ಟು ಕೆಟ್ಟದ್ದರೂ ನಾವು ದುಡುಕಿ ಪ್ರಯೋಜನವಿಲ್ಲ. ರುದ್ರದೇವನ ಅವಿವೇಕವು ನಮಗೆ ತಿಳದುಬಿಟ್ಟಿತೆಂದು ಅವನಿಗೆ ಗೊತ್ತಾದರೆ ಅವನು ಪಶ್ಚಾತ್ತಾಪದಿಂದಲೂ ನಾಚಿಕೆಯಿಂದಲೂ ನಿರುತ್ಸಾಹನಾಗಿ ನಮ್ಮ ಮುಂದಿನ ಪ್ರಯತ್ನಗಳಿಗೆ ಮನಸ್ಸುಕೊಡದೆ ಹೋಗಬಹುದು. ಮುಕ್ತಾಂಬೆಯ ತಂತ್ರಗಳು ನಮಗೆ ಗೊತ್ತಾಗಿವೆಯೆಂದು ಆಕೆಗೆ ನಮ್ಮ ಮಾತಿನಿಂದಲಾಗಲಿ, ಆಕಾರದಿಂದಲಾಗಲಿ ಸ್ವಲ್ಪಮಟ್ಟಿಗೆ ವ್ಯಕ್ತವಾದರೂ ನಮ್ಮ ಮುಂದಿನ ಪ್ರಯತ್ನಗಳಿಗೆ ಅಗತ್ಯವಾಗಿಯೂ ಆಗಬೇಕಾಗಿರುವ ಆಕೆಯ ಸಹಾಯವು ಮುಕ್ತಾಂಬೆಯಿಂದ ದೊರೆಯಲಾರದು. ಆಕೆಯ ಪರೇಂಗಿತಜ್ಞತೆಯು ಅನನ್ಯಸಾಧಾರಣವಾದುದು. ಆದುದರಿಂದ ನಾವು ನಮ್ಮ ವ್ಯವಹಾರಗಳಲ್ಲಿ ಎಷ್ಟುಮಟ್ಟಿಗೆ ಜಾಗ್ರತೆಯಿಂದಿರಬೇಕೋ ನೀನೇಯೋಚಿಸು. ಈಗ ನಾವು ಮಾಡಬೇಕಾಗಿರುವ ಕಾರ್ಯಗಳು ಅತ್ಯಂತ ಕಷ್ಟಸಾಧ್ಯವಾದುವು. ಮೊದಲು ಅನಂಗಸೇನೆಯನ್ನು ವಿಜಯನಗರ ಸಂಸ್ಥಾನದಿಂದ ಹೊರಕ್ಕೆ ಕರೆದುಕೊಂಡು ಹೋಗಬೇಕು. ಅನಂತರ ಮುಕ್ತಾಂಬೆ

ಯನ್ನು ಇಲ್ಲಿಂದ ಹೊರಕ್ಕೆ ತಪ್ಪಿಸಿಕೊಂಡು ಹೋಗಲು ಉಪಾಯದಿಂದ ಒಪ್ಪಿಸಿ, ರಾಯಚೂರಿಗೆ ಕರೆದುಕೊಂಡು ಹೋಗಬೇಕು. ಆಮೇಲೆ ನಡೆಯಿಸಬೇಕಾದ ಕಾರ್ಯಗಳೂ, ಫಲಗಳೂ ಆನುಷಂಗಿಕಗಳು. ನೆರವೇರಿದರೆ ಸಂತೋಷ, ಇಲ್ಲದಿದ್ದರೂ ಚಿಂತಿಸಬೇಕಾಗಿಲ್ಲ. ಆದುದರಿಂದ ಹಿಂದೆ ಮಂತ್ರಿಯು ಉಳಿದುಕೊಂಡುದಕ್ಕಾಗಿಯೂ, ಈಗ ವಿಜಯಸಿಂಹನು ಬದುಕಿಕೊಂಡುದಕ್ಕಾಗಿಯೂ ನಾವು ಯೋಚಿಸಬೇಕಾಗಿಲ್ಲ. ನಮ್ಮ ಪ್ರಯಾಸ ಮಾತ್ರ ವ್ಯರ್ಥವಾದಂತಾಯಿತು. ಯೋಚಿಸಿನೋಡಿದರೆ, ಶತ್ರುಗಳಿಗೆ ಅಧಿಕವಾಗಿ ಮನೋವ್ಯಥೆಯನ್ನುಂಟುಮಾಡಿದುದರಿಂದ, ಅದೂ ವ್ಯರ್ಥವಾದಂತೆ ಆಗಿಲ್ಲ. ಈಗ ನಡೆಯಬೇಕಾಗಿರುವ ಕಾರ್ಯಗಳಲ್ಲಿ ಮೊದಲನೆಯದಕ್ಕೆ ಮಾಡಬೇಕಾಗಿರುವ ಸನ್ನಾಹಗಳೆಲ್ಲವನ್ನೂ ಆಗಲೇ ಮಾಡಿಯೇ ಇರುವೆನು. ಈ ಎರಡನೆಯ ಕಾರ್ಯವನ್ನು ನೆರವೇರಿಸಲು ಈ ಹುಚ್ಚನ ಸೋಗೇ ಸರಿ. ನಾನು ಇನ್ನು ಬಹಳಕಾಲ ಇಲ್ಲಿರುವುದಕ್ಕಾಗದುದರಿಂದ, ಈ ಘನಕಾರ್ಯವನ್ನು ಬೇಗ ಮುಗಿಸಿಬಿಡಬೇಕಾಗಿದೆ ಸಾವಕಾಶಮಾಡಿದರೆ ವಿಪತ್ತು ತಪ್ಪದು ವಿಜಯಸಿಂಹನು ಉಳಿದುಕೊಂಡನು; ಉಂಗುರದ ವೃತ್ತಾಂತವು ಬಯಲಾಗಿ ನನ್ನಮೇಲೆ ಆಗಲೇ ಕಣ್ಣಿಟ್ಟಿರುವ ತಿಮ್ಮರಸನು ನನ್ನನ್ನು ಧ್ವಂಸಮಾಡಿಬಿಡುವನು. ಆದುದರಿಂದ ಈ ದಿನವೇ ನಿಮ್ಮನ್ನು ಈ ದುರ್ಗದಿಂದ ತಪ್ಪಿಸಿ ಕರೆದುಕೊಂಡು ಹೋಗುವೆನು. ಹೊರಡಲು ಸಿದ್ಧರಾಗಿರಿ" ಎಂದನು.

ಪ್ರಹರೇಶ್ವರ—"ವಿಜಯಸಿಂಹನನ್ನು ಬಂಧಿಸಿದಾಗಿನಿಂದಲೂ ತಿಮ್ಮರಸನ ಕಣ್ಣು ನನ್ನ ಮೇಲೆಯೂ ಇರುವುದೆಂದು ಕೇಳಿರುವೆನು. ಆದುದರಿಂದಲೇ ಇಲ್ಲಿ ಹಿಂದೆ ಇದ್ದುದಕ್ಕಿಂತಲೂ ಈಗ ಹೆಚ್ಚು ಮಂದಿ ಕಾವಲುಗಾರರಿರುವರು; ನನ್ನಬಳಿಗೆ ಯಾರನ್ನೂ ಸುಲಭವಾಗಿ ಬರಗೊಡಿಸುತ್ತಿಲ್ಲ. ಆ ಭಟರಾದರೋ ಎಡೆಬಿಡದೆ ಕಾದುಕೊಂಡಿರುವರು. ಅವರನ್ನು ಮರುಳು

ಗೊಳಿಸಿ ನಮ್ಮನ್ನು ಹೊರಕ್ಕೆ ಕರೆದುಕೊಂಡು ಹೋಗುವುದು ಅಸಾಧ್ಯವೆಂದು ತೋರುವುದು".

ರಾಮಯ—"ಪ್ರಹರೇಶ್ವರ, ಹಾಗೆ ಸಂಶಯಪಡಬೇಡ. ಸುಲಭವಾಗಿ ನಿಮ್ಮೆಲ್ಲರ ಬಂಧನವನ್ನೂ ತಪ್ಪಿಸಿಬಿಡುವೆನು. ಆಗಲೇ ಅದಕ್ಕೆ ತಕ್ಕ ಉಪಾಯವನ್ನು ಸಿದ್ಧಮಾಡಿಕೊಂಡಿರುವೆನು. ಆದರೆ ಅದನ್ನು ಯಾರಿಗೂ ಹೇಳುವುದಿಲ್ಲ. ಇದಕ್ಕಾಗಿ ನೀನು ಕೋಪಿಸಬೇಡ."

ಪ್ರಹರೇ—"ತಾವು ಹೀಗೇಕೆ ಹೇಳುವಿರಿ? ನನಗೆ ಕೋಪವೇಕೆ ಬರುವುದು? ತಾವು ತಮಗೆ ಯುಕ್ತವೆಂದು ತೋರಿದ ರೀತಿಯಲ್ಲಿ ಪ್ರಯತ್ನ ನಡೆಯಿಸಬಹುದು. ನಾವು ಪ್ರಯಾಣಸನ್ನದ್ಧರಾಗಿ ಕಾದಿರುವೆವು."

ರಾಮಯ—"ಹಾಗೆ ಆಗಬಹುದು. ಮುಕ್ತಾಂಬೆಯನ್ನು ಈಗ ನೋಡಬೇಕಾಗಿದೆ. ಆದುದರಿಂದ ಆಕೆಯನ್ನು ಇಲ್ಲಿಗೆ ಸ್ವಲ್ಪ ಕರೆದುಕೊಂಡು ಬಾ. ಆಕೆಯೊಡನೆ ಸ್ವಲ್ಪ ಮಾತಾಡಬೇಕಾಗಿದೆ." ಎಂದು ಹೇಳಲು ಪ್ರಹರೇಶ್ವರನು ಮುಕ್ತಾಂಬೆಯನ್ನು ಅಲ್ಲಿಗೆ ಕರೆತಂದುಬಿಟ್ಟು ತಾನು ಬೇರೆ ಕೆಲಸದಮೇಲೆ ಹೊರಟುಹೋದನು. ಮುಕ್ತಾಂಬೆಯು ರಾಮಯನನ್ನು ಕಂಡಕೂಡಲೆ—"ಮಂತ್ರಿವರ್ಯರೇ! ಈಚೆಗೆ ತಮ್ಮ ಸಂದರ್ಶನವೇ ಆಗಲಿಲ್ಲ. ತಮ್ಮ ಕಾರ್ಯಗಳು ಎಷ್ಟರಮಟ್ಟಿಗೆ ಫಲಿಸಿವೆ? ಈಗ ನಾನು ಮಾಡಬೇಕಾದುದು ಏನಾದರೂ ಇದೆಯೇ? ಅಪ್ಪಣೆಯಾಗಲಿ" ಎಂದು ವಿನಯದಿಂದ ಕೇಳಿದಳು.

ರಾಮಯ—"ಅಮ್ಮಾ! ಫಲೋನ್ಮುಖವಾಗಿದ್ದ ನನ್ನ ಪ್ರಯತ್ನಗಳು ನಿಷ್ಫಲವಾದುವು; ಆದರೂ ಭವಿಷ್ಯವುಮಾತ್ರ ಕೆಡಲಿಲ್ಲ. ನಮ್ಮ ಉದ್ದೇಶವನ್ನು ಈಗಲೂ ಸಾಧಿಸಿಕೊಳ್ಳಬಹುದಾಗಿದೆ."

ಮುಕ್ತಾಂಬೆ—"ಮಂತ್ರಿಶ್ರೇಷ್ಠರೇ! ಹಾಗಂದರೇನು? ತಮ್ಮ ಪ್ರಯತ್ನಗಳು ನಿಷ್ಫಲವಾದುವೇ?"

ರಾಮಯ—“ ಸಂಪೂರ್ಣವಾಗಿಯೂ ನಿಷ್ಫಲವಾಗಲಿಲ್ಲ. ಆದರೂ ಉದ್ದೇಶಿಸಿದ್ದಂತೆ ನಡೆದಿದ್ದರೆ ನಮ್ಮ ಕೆಲಸವು ಮತ್ತೂ ಸುಲಭವಾಗುತ್ತಿತ್ತು. ಕೆಲಸವು ಸ್ವಲ್ಪಮಟ್ಟಿಗೆ ಕೆಟ್ಟುಹೋದುದರಿಂದ ನಾವುಗಳು ಈ ದಿನವೇ ಇಲ್ಲಿಂದ ತಪ್ಪಿಸಿಕೊಂಡು ಹೋಗಬೇಕಾಗಿದೆ. ಇಲ್ಲಿಯೇ ಇದ್ದರೆ ನಿಜವಾಗಿಯೂ ನಮಗೆ ಕೇಡುಂಟಾಗುವುದು ”

ಮುಕ್ತಾಂಬೆ—“ ಇಲ್ಲಿಂದ ತಪ್ಪಿಸಿಕೊಂಡು ಹೋಗುವುದೆ ! ಅದೂ ಈದಿನವೇ !'' ಎಂದು, ಪ್ರಬಲವಾದ ಸಂಶಯದಿಂದ ಭ್ರಾಂತಿಪಟ್ಟವಳಂತೆ ಕೇಳಿದಳು.

ರಾಮಯ—“ ಅಮ್ಮಾ ! ಇಷ್ಟು ಅನುಮಾನವೇಕೆ ? ನಿಮಗೆಲ್ಲಾ ರಾಜದ್ರೋಹಿಗಳ ಸಂಬಂಧವಿರುವುದೆಂದು ತಿಮ್ಮರಸನು ಈಗ ಚೆನ್ನಾಗಿ ನಂಬಿರುವನು. ಕೆಲವುದಿನಗಳಿಗೆ ಹಿಂದೆ ನಾನೊಂದುಬಾರಿ ಹುಚ್ಚನವೇಷವನ್ನು ಹಾಕಿಕೊಂಡು ಅವನಮನೆಗೆ ಹೋಗಿದ್ದ ವೇಳೆಯಲ್ಲಿ ‘ ಪ್ರಹರೇಶ್ವರನು ರಾಜದ್ರೋಹಿಗಳಲ್ಲಿ ಮೊದಲಿಗನು “ ಎಂದು ಹೇಳುತ್ತಿದ್ದುದನ್ನು ಕಿವಿಯಾರೆ ಕೇಳಿದೆ. ಪ್ರಹರೇಶ್ವರನು ಇಲ್ಲಿಯೇಇದ್ದರೆ ಅವನಿಗಂತೂ ಸಾವು ತಪ್ಪದು. ಹೆಂಗುಸೆಂದು ನಿನ್ನನ್ನು ಜೀವಸಹಿತವಾಗಿ ಬಿಟ್ಟರೂ ಬಿಡಬಹುದು. ಒಂದುವೇಳೆ ಹಾಗೆಬಿಟ್ಟರೂ, ಹಿಂದಿನ ಗೌರವವು ಬೇರೆ ಉಳಿಯದು. ಗೌರವವನ್ನು ಕಳೆದುಕೊಂಡಬಳಿಕ ಬದುಕುವುದೂ ಬದುಕೇ ? ಇನ್ನುಮೇಲೆ ಸಾಮೋಪಾಯದಿಂದ ರಾಜ್ಯವನ್ನು ಸಂಪಾದಿಸಬಹುದೆಂಬ ಆಸೆಯನ್ನು ಬಿಟ್ಟುಬಿಡು. ಪ್ರಹರೇಶ್ವರನು ಇಲ್ಲಿಂದ ತಪ್ಪಿಸಿಕೊಂಡುಹೋಗಿ ಪ್ರಾಣವನ್ನುಳಿಸಿಕೊಳ್ಳಬೇಕೆಂದಿರುವನು. ಅವನು ಹೊರಟುಹೋದ ಬಳಿಕ ನೀನು ಒಬ್ಬಳೇ ಇಲ್ಲಿ ಇರುವುದರಿಂದ ಕೇಡು ಉಂಟಾಗಬಹುದು. ಶತ್ರುಗಳನ್ನು ಗೆದ್ದು ನಿನ್ನ ರಾಜ್ಯವನ್ನು ನಿನಗೆ ಪುನಃ ಸಂಪಾದಿಸಿಕೊಟ್ಟು, ಸ್ವಾಮಿಭಕ್ತಿಯನ್ನುಳಿಸಿಕೊಳ್ಳಬೇಕೆಂದಿರುವೆನು. ನೀನು ಇಲ್ಲಿಯೇ ಇದ್ದುಬಿಟ್ಟರೆ ನಾನು ನನ್ನರಾಜಭಕ್ತಿ

ಮುನ್ನು ತೋರಿಸುವುದು ಹೇಗೆ ? ಪ್ರತಿಭಾಶಾಲಿನಿಯಾದ ನೀನು ನನಗೆ ಸಹಾಯಕಳಾಗದಿದ್ದರೆ ನನಗೆ ಕೈಕಾಲುಗಳೇ ಅಲ್ಲಾಡಲಾರವು. ನಿನ್ನ ಸಂದರ್ಶನಮಾತ್ರದಿಂದಲೇ ನಮ್ಮೆಲ್ಲರ ಬಲವೂ ಇಮ್ಮಡಿಸುವುದು, ಎಂತಹ ಕೆಲಸವನ್ನಾದರೂ ಲೀಲಾಮಾತ್ರದಿಂದ ಮಾಡಿಬಿಡುವೆವು '' ಎಂದು ಮನಗಾಣುವಂತೆ ಬೋಧಿಸಿದನು.

ಮುಕ್ತಾಂಬೆಯು ವಿವೇಕಶಾಲಿನಿ, ಪೂರ್ವಾಪರಜ್ಞಳು ; ಆದುದರಿಂದ ರಾಮಯನ ಬೋಧನೆಯನ್ನು ಅನುಸರಿಸಿದರೆ ಯಾವ ಸಾಧಕಬಾಧಕಗಳುಂಟಾಗುವುವೆಂದು, ಚೆನ್ನಾಗಿ ಮನಸ್ಸಿನಲ್ಲೇ ವಿಚಾರಮಾಡತೊಡಗಿದಳು. ರಾಜ್ಯನಾಶವಾದಮೇಲೂ, ರಾಜನುಗತಿಸಿದಬಳಿಕಲೂ, ಅನಿತರಸಾಧಾರಣವಾದ ಸ್ವಾಮಿಭಕ್ತಿಯಿಂದಲೂ, ಅಧ್ಯವಸಾಯದಿಂದಲೂ, ಅಸ್ವಾರ್ಥತೆಯಿಂದಲೂ, ಸಕಲವಿಧವಾಗಿಯೂ ಪ್ರಯತ್ನಿಸಿ, ಹೋಗಿದ್ದ ತನ್ನರಾಜ್ಯವನ್ನು ತನಗೆ ಸಂಪಾದಿಸಿಕೊಡಲು ಯತ್ನಿಸುತ್ತಿದ್ದ ರಾಮಯನು ವಿಶ್ವಾಸಯೋಗ್ಯನೆಂದೂ, ತಾನು ನಿರಾಕರಿಸುತ್ತಿದ್ದರೂ, ಅವನು ತನ್ನನ್ನು ಪ್ರೋತ್ಸಾಹಿಸುತ್ತಾ ಹೇಗಾದರೂ ಕಾರ್ಯಸಾಧನೆಯನ್ನು ಮಾಡಲು ಯತ್ನಿಸುತ್ತಿದ್ದ ಆತನು ತನ್ನ ಹಿತಚಿಂತಕನೆಂದೂ ನಿರ್ಧರಿಸಿದಳು ನಿರುಪಮಾನ ಪ್ರತಿಭಾಶಾಲಿಯಾದ ಆತನು ಹಿಡಿದಕೆಲಸವನ್ನು ಹೇಗಾದರೂ ಸಾಧಿಸದೆ ಬಿಡನೆಂದೂ, ಆತನ ಬುದ್ಧಿವಾದವನ್ನು ಮೀರುವುದರಲ್ಲಿ ತನಗೆ ಅಪಾಯ ಸಂಭವಿಸಿದರೂ ಸಂಭವಿಸಬಹುದೆಂದೂ ಯೋಚಿಸಿದಳು. ಇದೂ ಅಲ್ಲದೆ, ಆತನು ಮಾಡಿದ್ದ ಉಪಾಯಗಳಿಗೆ ತಾನು ಪ್ರತಿಕ್ರಿಯೆಮಾಡಿದ್ದರೂ ಅದಕ್ಕಾಗಿ ಸ್ವಲ್ಪವಾದರೂ ತನ್ನನ್ನು ದೂಷಿಸದೆಯೂ, ವಿಫಲಮನಸ್ಕನಾಗದೆಯೂ, ಸರ್ವಶಕ್ತಿಯನ್ನೂ ತನ್ನ ಪ್ರಯೋಜನಕ್ಕಾಗಿಯೇ ವಿನಿಯೋಗಿಸುತ್ತಿದ್ದುದು ಮುಕ್ತಾಂಬೆಯ ಮನವನ್ನು ಕರಗಿಸಿ ಬಿಟ್ಟಿತು. ಆದುದರಿಂದ ಬಹಳಕಾಲದಿಂದಲೂ ಸ್ವಾಮಿಭಕ್ತಿ ಪರಾಯಣತೆಯಿಂದ ಕೆಲಸಮಾಡುತ್ತಿದ್ದ

ರಾಮಯನಂತಹವನಿಗೆ ಪ್ರತಿಹೇಳಿದರೆ ಕೃತಘ್ನತಾದೋಷಬರುವುದೆಂದು ತಿಳಿದು, ಕಡೆಗೆ, ರಾಮಯನೊಡನೆ ತಪ್ಪಿಸಿಕೊಂಡು ಹೊರಟುಹೋಗಬೇಕೆಂದು ನಿರ್ಧರಮಾಡಿಕೊಂಡಳು. ತನಗೆ ರಾಜ್ಯಲಾಭವಾದಬಳಿಕ ಪ್ರಿಯನಾದ ವಿಜಯಸಿಂಹನನ್ನು ಮದುವೆಯಾಗಬಹುದೆಂತಲೂ, ಒಂದುವೇಳೆ ಸಾಹಸದಿಂದ ಕಾರ್ಯಸಾಧನೆಯಾಗದಿದ್ದರೆ, ಚಕ್ರವರ್ತಿಯವರ ಪ್ರೀತಿಗೆ ಪಾತ್ರನಾಗಿದ್ದ ವಿಜಯಸಿಂಹನ ಮೂಲಕವಾಗಿ ರಾಜ್ಯಸಂಪಾದನೆ ಮಾಡಿಕೊಳ್ಳಬಹುದೆಂತಲೂ ಯೋಚಿಸಿದಳು. ಆದುದರಿಂದ "ಮಂತ್ರಿಶ್ರೇಷ್ಠರೇ ! ತಮ್ಮ ಮಾತುಗಳನ್ನುಕೇಳಿ ಬಹಳ ಸಂತೋಷವಾಯಿತು. ತಮ್ಮ ರಾಜಭಕ್ತಿಯೂ ಪರಾರ್ಥ ಬುದ್ಧಿಯೂ, ಅನನ್ಯಸಾಧಾರಣವಾದುವು. ತಮ್ಮಂತಹ ಹಿತಚಿಂತಕರು ನನಗೆ ಮತ್ತೆಯಾರಿರುವರು ? ತಮ್ಮಂತಹ ಮಂತ್ರಿಗಳು ನನಗೆ ಸಿಕ್ಕಿದುದು ನನ್ನ ಪೂರ್ವಜನ್ಮಪುಣ್ಯ. ಇನ್ನು ತಮ್ಮ ಮಾತನ್ನು ಮೀರಲಾರೆನು. ತಾವು ಹೇಳಿದಂತೆ ಮಾಡುವೆನು. ದುರ್ಗದಿಂದ ತಪ್ಪಿಸಿಕೊಂಡುಹೋಗುವ ಆಲೋಚನೆಗಳೆಲ್ಲವೂ ನಡೆದಿವೆಯೆ ?" ಎಂದು ಕೇಳಿದಳು.

ರಾಮಯ—"ರಾಜಪುತ್ರಿ ! ಆ ವಿಷಯವನ್ನೆಲ್ಲಾ ಪರ್ಯಾಲೋಚಿಸಿ ಉಪಾಯಗಳನ್ನೂ ಸಿದ್ಧಮಾಡಿರುವೆನು. ನೀವುಗಳು ಪ್ರಯಾಣಕ್ಕೆ ಸಿದ್ಧರಾಗಿರಿ" ಎಂದು ಹೇಳಿ ರಾಮಯನು ಹೊರಟುಹೋದನು.

ಹದಿನೇಳನೆಯ ಅಧ್ಯಾಯ.

ಲಂಕಾದಹನ.

" ಕರುವಾಡಂ ಮೇರುವಂ ಪರ್ವಿದುದೊ ಚಟುಳದಾವಾಗ್ನಿಯೆಂಬಂದದಿಂನಿಂ |
ದುರಿಯುತ್ತಿರ್ದತ್ತದಂ ಸುತ್ತಿಱಿದ ಧವಳಹಾರಂ ಸುಧಾವಾರ್ಧಿಯಂ ದು ||
ಸ್ತರದೌರ್ವಜ್ವಾಳೆ ಜಿಹ್ವಾಪರಿಕರಮುಳುರ್ದತ್ತೆಂಬಿನಂಕಣ್ಗದೇಂ ಭೀ |
ಕರಮಾಗಿರ್ದತ್ತೊ ಲಂಕಾಪುರಮನುರಿಪೆ ವಾಲಾಗ್ನಿಯಿಂದಾಂಜನೇಯಂ " ||

ಆನೆಗೊಂದಿಯಲ್ಲಿ ಒಂದು ದಿನ ಸಾಯಂಕಾಲ ಹುಚ್ಚನು ಸುತ್ತಾಡು ತ್ತಿದ್ದನು. ತುಂಟಹುಡುಗರು ಅವನನ್ನು ಮುತ್ತಿಕೊಂಡು ಬಗೆಬಗೆಯಾಗಿ ಬಾಧಿಸುತ್ತಿದ್ದರು. ಆದರೂ ಹುಚ್ಚನು ಅದನ್ನು ಸಹಿಸಿಕೊಂಡು ಪಕಪ ಕನೆ ನಗುತ್ತಿದ್ದುದರಿಂದ ಹುಡುಗರಿಗೆ ಮತ್ತಷ್ಟು ಪ್ರೋತ್ಸಾಹವುಂಟಾಗಿ ಇನ್ನೂ ಹೆಚ್ಚಾಗಿ ಚೇಷ್ಟೆಮಾಡುತ್ತಿದ್ದರು ಹೀಗೆ ಸುತ್ತುತ್ತಿರಲು ಹುಡು ಗರು ಹೆಚ್ಚುಹೆಚ್ಚಾಗಿ ಗುಂಪು ಸೇರಿದರು. ಅವರು ಹೆಚ್ಚಾಗಿ ಬಾಧಿಸಿ ದಾಗ " ದುಷ್ಟರೇ ! ನಾನು ಯಾರೆಂದು ತಿಳಿದಿರುವಿರಿ ? ನಾನು ಮಹಾವೀರ ನಾದ ಹನುಮಂತನು, ನೀವು ರಾಕ್ಷಸರು ; ಲಂಕೆಯನ್ನು ಸುಟ್ಟು ರಾಕ್ಷಸ ರನ್ನು ಧ್ವಂಸಮಾಡಿದಂತೆ ನಿಮ್ಮನ್ನು ಅಪ್ಪಳಿಸಿಬಿಡುವೆನು." ಎಂದು ಗರ್ಜಿಸಿ ದನು. ಇದನ್ನು ಕಂಡು ಕೆಲವು ಹುಡುಗರು ಹೆದರಿದರು. ಆದರೆ ಕೂಡಲೆ ಹುಚ್ಚನು ಕಿಲಕಿಲನೆ ನಕ್ಕುಬಿಟ್ಟುದರಿಂದ, ಹುಡುಗರಿಗೆ ಭಯ ವೆಲ್ಲಾ ಹೋಯಿತು. ಹುಚ್ಚನು ಹೀಗೆತಿರುಗುತ್ತಾ ಶೈವಮಠಕ್ಕೆ ಹೋಗಿ ಕುಳಿತುಕೊಂಡನು. ಹುಡುಗರೂ ಅವನ ಸುತ್ತಲೂ ಕುಳಿತುಕೊಂಡರು. ಕೆಲವರು ದಿಟ್ಟರಾದ ಹುಡುಗರು ಅವನ ಜುಟ್ಟನ್ನೆಳೆಯುತ್ತಲೂ, ಮತ್ತೆ ಕೆಲವರು ಕಿವಿಯನ್ನು ಹಿಂಡುತ್ತಲೂ, ಹಿಂಸೆಮಾಡುತ್ತಿದ್ದರು. ಈ ಬಾಧೆ

ಯನ್ನು ತಾಳಲಾರದೆ ಹಿಂದೆ ಹೇಳಿದ್ದಂತೆಯೇ ಮತ್ತೊಂದುಸಲ ಗರ್ಜಿಸಿದನು. ಆದರೆ ಈ ಸಾರಿ ಯಾರೂ ಹೆದರಲಿಲ್ಲ. ನೀನು ಹನುಮಂತನೋ ಹಾಗಾದರೆ ನಿನ್ನ ಬಾಲವೆಲ್ಲಿ ?" ಎಂದು ಒಬ್ಬ ಹುಡುಗನು ಕೇಳಿದನು. ಮತ್ತೊಬ್ಬನು ಹತ್ತಿರ ಬಿದ್ದಿದ್ದ ಕೋಲನ್ನು ತಂದು ಬಾಲದಂತೆ ಕಟ್ಟಲು, ಹುಚ್ಚನು ಇಗೋ ಹನುಮಂತನ ಬಾಲ ! ಹನುಮಂತನ ಬಾಲ !! ನೀವು ರಾಕ್ಷಸರು. ಹನುಮಂತನನ್ನು ಬಂಧಿಸಿ ಹಿಂಸಿಸಲು ಅವನು ರಾಕ್ಷಸರನ್ನು ತನ್ನ ಬಾಲದಿಂದಲೇ ಬಡಿದು ಶಿಕ್ಷಿಸಿದುದು ತಿಳಿಯದೋ ?" ಎಂದು ಹೇಳಿ ವಿಜೃಂಭಿಸಿ ನಕ್ಕನು. ಕೆಲವರು ದಿಟ್ಟರಾದ ಹುಡುಗರು ಹುಚ್ಚನ ಬೆದರಿಕೆಗೆ ಲಕ್ಷ್ಯ ಕೊಡದೆ "ನೀನು ಹನುಮಂತ, ನಾವು ರಾಕ್ಷಸರು ನಿನ್ನನ್ನು ಕಟ್ಟಿ ಕೆಡವುತ್ತೇವೆ ; ನಮ್ಮನ್ನು ನೀನೇನು ಮಾಡುತ್ತೀಯೋ ನೋಡೋಣ" ಎಂದು ಅಲ್ಲಲ್ಲಿ ಬಿದ್ದಿದ್ದ ಲೊಡ್ಡುಹುರಿಗಳಿಂದ ಕಟ್ಟಲಾರಂಭಿಸಿದರು. ಹುಚ್ಚನು ತನ್ನ ಕಟ್ಟನ್ನು ಕಿತ್ತು ಮುಖವನ್ನು ಉರುಗಿಸಿಕೊಂಡು ತನ್ನ "ಬಾಲ"ವನ್ನು ಹುಚ್ಚುಹುಚ್ಚಾಗಿ ಅಲ್ಲಾಡಿಸುತ್ತಾ, ಹತ್ತಿರ ಇದ್ದ ಹುಡುಗರಿಗೆ ಮೆತ್ತಗೆ ಒಂದೆರಡು ಏಟನ್ನು ಹೊಡೆಯುತ್ತಿದ್ದನು.

ಇಷ್ಟು ಹೊತ್ತಿಗೆ ಹುಡುಗರ ಉತ್ಸಾಹವು ಬಹಳ ಉದ್ರೇಕವಾಗಿತ್ತು. ಕೆಲವರು ಹುಡುಗರು ಲಂಕಾದಹನವನ್ನು ಜ್ಞಾಪಿಸಿಕೊಂಡು ಹಳೆಯ ಚಿಂದಿಗಳನ್ನು "ಬಾಲ"ಕ್ಕೆ ಸುತ್ತಿದರು ; ಇನ್ನು ಕೆಲವರು ತಮ್ಮಲ್ಲಿದ್ದ ಪುಡಿದುಡ್ಡುಗಳಿಗೆ ಎಣ್ಣೆಯನ್ನು ಕೊಂಡುತಂದರು. ಮತ್ತೊಬ್ಬ ಹುಡುಗನು ಬಾಲಕ್ಕೆ ಬೆಂಕಿಯನ್ನೂ ಹೊತ್ತಿಸಿಬಿಟ್ಟನು. ತಮ್ಮ ಚಾತುರ್ಯವನ್ನು ದೊಡ್ಡವರಿಗೆ ತೋರಿಸಬೇಕೆಂದು ಹುಡುಗರು ಸದಾ ಅಭಿಲಾಷಿಸುವರು. ಈ ಹುಡುಗರೂ ತಮ್ಮ "ಆಂಜನೇಯ"ನನ್ನು ತಮ್ಮ ದೊಡ್ಡವರಿಗೆ ತೋರಿಸಬೇಕೆಂದು ಅವನನ್ನು ಒಂದೆಡೆಯಲ್ಲಿ ನಿಲ್ಲಗೊಡದೆ ಅಟ್ಟಿಕೊಂಡು ಬರುತ್ತಿದ್ದರು. ಅಷ್ಟುಹೊತ್ತಿಗೆ ಮುಚ್ಚಂಜೆಯಾಗಿದ್ದುದರಿಂದ

ಕತ್ತಲೆ ಕವಿದುಕೊಳ್ಳುತ್ತಿತ್ತು. ಆಕಾಶದಲ್ಲಿ ಮೋಡಗಳು ಮುಚ್ಚಿಕೊಳ್ಳುತ್ತಿದ್ದುವು. ಹುಡುಗರಿಗೆ ತಮ್ಮ ಹುಡುಗಾಟವನ್ನು ಬೇಗ ಮುಗಿಸಿಕೊಂಡು ತಮ್ಮತಮ್ಮ ಮನೆಗಳನ್ನು ಸೇರಬೇಕೆಂದು ಮನಸ್ಸಿತ್ತು. ಊರಿನ ಒಂದೆರಡು ಬೀದಿಗಳಲ್ಲಿ ಮೆರೆವಣಿಗೆಯಾದ ಬಳಿಕ ಪುರಜನರು ಈ ವಿನೋದವನ್ನು ನೋಡಿ ಗುಂಪು ಸೇರಲು, ಹುಡುಗರಿಗೆ ಮತ್ತೂ ಉತ್ತೇಜನವುಂಟಾಯಿತು. ಆಗ ಅವರು ಹುಚ್ಚನನ್ನು ಮತ್ತೂ ಪೀಡಿಸಲಾರಂಭಿಸಿ, ಕೆಲವು ಬೀದಿಗಳಲ್ಲಿ ಬೇಗಬೇಗ ಸುತ್ತಿಸಿದರು. ಆಗ ದಟ್ಟವಾಗಿ ಮೋಡಗಳು ಕವಿದುಕೊಂಡು ತಂಗಾಳಿ ಬೀಸಲಾರಂಭವಾಗಿತ್ತು. ಇನ್ನು ಕೆಲವು ನಿಮಿಷಗಳೊಳಗಾಗಿ ಬಿರುಗಾಳಿಯೂ ಬೀಸತೊಡಗಿತು. ಇಷ್ಟುಹೊತ್ತಿಗೆ ದುರ್ಗರಕ್ಷಕಭಟರ ಮನೆಗಳಿದ್ದ ಬೀದಿಗೆ ಬಂದಿದ್ದನು. ಮಳೆಬಂದರೆ ತಮ್ಮ ವಿನೋದಕ್ಕೆ ವಿಘ್ನವಾಗುವುದೆಂದು ನೆನೆದು, ಹುಡುಗರು ಹುಚ್ಚನನ್ನು ಕ್ರೂರವಾಗಿ ಬಾಧಿಸತೊಡಗಿದರು. ಆ ಬಾಧೆಯನ್ನು ತಾಳಲಾರದೆ ಗಾಳಿ ಬೀಸುತ್ತಿದ್ದ ದಿಕ್ಕಿನಲ್ಲಿದ್ದ ಒಂದು ಮನೆಯ ಮೇಲಕ್ಕೆ ನೆಗೆದು, ತನ್ನನ್ನು ಬಾಧಿಸುತ್ತಿದ್ದ ಹುಡುಗರನ್ನು ಅಣಕಿಸುವುದಕ್ಕಾಗಿ ವಿಕಟವಾಗಿ ಕುಣಿಯತೊಡಗಿದನು ಹುಡುಗರಿಗೆ ಇದರಿಂದ ಕೋಪವು ಹೆಚ್ಚಿ ಕಲ್ಲುಗಳನ್ನು ಬೀರಲಾರಂಭಿಸಿದರು. ಹುಚ್ಚನು ಕಲ್ಲುಗಳ ಏಟುಗಳನ್ನು ತಡೆಯಲಾರದೆ ಮನೆಯಿಂದ ಮನೆಗೆ ನೆಗೆದಾಡುತ್ತಾ ಬಂದನು. ಇಷ್ಟರಲ್ಲಿ ಕೆಲವು ಮನೆಗಳು ಹೊತ್ತಿಕೊಂಡು ಉರಿಯಲಾರಂಭಿಸಿದುವು. ಊರಿನಲ್ಲೆಲ್ಲಾ ವಿಶೇಷವಾಗಿ ಗಲಭೆಯುಂಟಾಯಿತು. ತಮ್ಮ ಮನೆಗಳಿಗೆ ಬೆಂಕಿಬಿದ್ದಿರುವ ಸುದ್ದಿಯನ್ನು ಕೇಳಿ, ದುರ್ಗದಲ್ಲಿದ್ದ ರಕ್ಷಕಭಟರು ತಮ್ಮ ಹೆಂಡಿರುಮಕ್ಕಳನ್ನೂ ಮನೆಮಾರುಗಳನ್ನೂ ಉಳಿಸಿಕೊಳ್ಳಬೇಕೆಂದು ತಲ್ಲಣಗೊಳ್ಳಲಾರಂಭಿಸಿದರು. ಅವರಿಗೆ ಉಂಟಾದ ಅಂತಹ ವಿಷಮವಿಪತ್ತಿನಲ್ಲಿ ಸಮಯಸ್ಫೂರ್ತಿಯು ತೊಡೆದುಹೋಯಿತು; ಕರ್ತವ್ಯಜ್ಞಾನವು ಕುಂದಿಹೋಯಿತು ಆದುದರಿಂದ

ದುರ್ಗದ ಕಾವಲುಗಾರರೂ, ಅಧಿಕಾರಿಗಳೂ ತಮ್ಮ ಆಯುಧಗಳನ್ನು ಅಲ್ಲಲ್ಲೇ ಎಸೆದುಬಿಟ್ಟು ಮನೆಗಳ ಕಡೆಗೆ ಓಡಿದರು.

ಇಷ್ಟು ಹೊತ್ತಿಗೆ ಹುಚ್ಚನ "ಬಾಲಕ್ಕೆ" ಕಟ್ಟಿದ್ದ ಬಟ್ಟೆಚೆಂದಿಗಳಲ್ಲಿದ್ದ ಎಣ್ಣೆಯೆಲ್ಲವೂ ಮುಗಿದು ಹೋಗಿ ಅವು ಕೆಳಗೆ ಉದುರತೊಡಗಿದುವು. ಬಲವಾಗಿ ಗಾಳಿ ಬೀಸುತ್ತಿದ್ದುದರಿಂದ ಉರಿಯುತ್ತಿದ್ದ ಈ ಚೆಂದಿಗಳು ಕೆಳಗೆ ನಿಂತಿದ್ದ ಜನಗಳ ಮೇಲೆ ಬಿದ್ದು ಅವರ ಬಟ್ಟೆಗಳಿಗೆ ಬೆಂಕಿ ಹೊತ್ತಿಸಿದುವು. ಉರಿಯುತ್ತಿದ್ದ ಮನೆಗಳಿಂದಲೂ ಕಿಡಿಗಳು ಹೊರಡುತ್ತಿದ್ದುವು. ಹೊಗೆಯು ಸಹಿಸಲಶಕ್ಯವಾಗಿತ್ತು. ಆದುದರಿಂದ ಜನರಲ್ಲಿ ಹಾಹಾಕಾರವೂ ಹೆದರಿಕೆಯೂ ಹೆಚ್ಚಿ ಅವರು ತಮ್ಮತಮ್ಮ ಮನೆಗಳನ್ನು ಸೇರಿಕೊಂಡರು. ಉರಿಯುತ್ತಿದ್ದ ಮನೆಗಳ ಜನರು ಜೀವಸಹಿತವಾಗಿ ತಪ್ಪಿಸಿಕೊಂಡರೆ ಸಾಕೆಂದು ದಿಕ್ಕುದಿಕ್ಕಿಗೆ ಓಡುತ್ತಿದ್ದರು; ದನಕರುಗಳೂ ತಮ್ಮ ಹಗ್ಗಗಳನ್ನು ಕಿತ್ತುಕೊಂಡು, ಅಂಬೇ! ಎಂದು ಅರಚುತ್ತಾ, ಕಿವಿಗಳನ್ನೂ ಬಾಲಗಳನ್ನೂ ಎತ್ತಿಕೊಂಡು ನಾಗಾಲೋಟದಿಂದ ಓಡುತ್ತಿದ್ದುವು.

ಸ್ವಲ್ಪಕಾಲದಲ್ಲಿಯೇ ಬಿರುಗಾಳಿಯು ಶಾಂತವಾಯಿತು. ಬೆಂಕಿಯೂ ಸ್ವಲ್ಪಸ್ವಲ್ಪವಾಗಿ ತಗ್ಗುತ್ತ ಬಂತು. ಆಗ ದಯಾಳುಗಳಾದ ಪುರಜನರು ಧೈರ್ಯವನ್ನು ತಂದುಕೊಂಡು ಬೆಂಕಿಯನ್ನು ಸಂಪೂರ್ಣವಾಗಿ ಆರಿಸಲು ಸಹಾಯ ಮಾಡತೊಡಗಿದರು. ತಮ್ಮ ಬಂಧುಗಳು ಸಿಕ್ಕದೆ ತಪ್ಪಿಸಿಕೊಂಡಿದ್ದ ಕೆಲವರು ಪೌರರು ತಮ್ಮ ಬಂಧುಗಳನ್ನು ಹೆಸರುಹಿಡಿದು ಕೂಗುತ್ತಾ ಹುಡುಕುತ್ತಿದ್ದರು. ಕೆಲವರು ಪರೋಪಕಾರಶೀಲರು ಮನೆಮಾರುಗಳನ್ನು ಕಳೆದುಕೊಂಡಿದ್ದವರಿಗೆ ಅನ್ನಬಟ್ಟೆಗಳನ್ನು ಒದಗಿಸಲು ಹವಣಿಸುತ್ತಿದ್ದರು. ಪುರರಕ್ಷಣಾಧಿಕಾರಿಯು ಆ ಅನಾಹುತವೆಲ್ಲಾ ಹುಚ್ಚನಿಂದಲೇ ನಡೆಯಿತೆಂದು ಕೇಳಿ, ಅವನನ್ನು ಹಿಡಿತರಬೇಕೆಂದು ದೂತರನ್ನು ಕಳುಹಿದನು

ಇತ್ತ ದುರ್ಗದಲ್ಲಿ ಆಶ್ಚರ್ಯಕರವಾದ ಘಟನೆಯೊಂದು ನಡೆದು ಹೋಗಿತ್ತು. ಹುಚ್ಚನು ಮನೆಯಿಂದ ಮನೆಗೆ ನೆಗೆಯುತ್ತಾ, ಹೊಗೆಯು

ಹೆಚ್ಚಾಗಿದ್ದ ಸ್ಥಳದಲ್ಲಿ ತನ್ನ "ಬಾಲ" ವನ್ನು ಕಿತ್ತು ಬಿಸಾಡಿ ಕೆಳಕ್ಕೆ ದುಮಿಕಿ ದುರ್ಗವನ್ನು ಪ್ರವೇಶಿಸಿದ್ದನು. ಕಾವಲುಗಾರರೆಲ್ಲರೂ ತಮ್ಮ ತಮ್ಮ ಮನೆಗಳನ್ನು ನೋಡಿಕೊಳ್ಳುವುದಕ್ಕಾಗಿ ಕಾಲಿಗೆ ಬುದ್ಧಿಹೇಳಿದ್ದರು. ಪ್ರಹರೇಶ್ವರಾದಿಗಳು ತಪ್ಪಿಸಿಕೊಂಡು ಹೊರಟುಹೋಗಿದ್ದುದರಿಂದ ತೃಪ್ತ ನಾಗಿ ಸಂಕೇತಸ್ಥಳಕ್ಕೆ ಹೋಗಿ ಅವರನ್ನು ಸೇರಿಕೊಂಡನು.

ಹದಿನೆಂಟನೆಯ ಪರಿಚ್ಛೇದ.

ತತ್ವಾನ್ವೇಷಣ.

" ಕಾಲಕ್ರಮೇಣ ಜಗತಃ ಪರಿವರ್ತಮಾನಾ |
ಚಕ್ರಾರಪಙ್ಕ್ತಿರಿವ ಗಚ್ಛತಿ ಭಾಗ್ಯಪಙ್ಕ್ತಿಃ ||" ಸ್ವಪ್ನವಾಸವದತ್ತಾ.

ಕಸ್ಯಾತ್ಯಂತಂ ಸುಖಮುಪನತಂ ದುಃಖಮೇಕಾಂತತೋವಾ |
ನೀಚೈರ್ಗಚ್ಛತ್ಯುಪರಿಚದಶಾಚಕ್ರನೇಮಿಕ್ರಮೇಣ || ಮೇಘದೂತ. II. ೪೯.

ತಿಮ್ಮರಸನು ವಿಜಯಸಿಂಹನನ್ನು ಕರೆದುಕೊಂಡು ತನ್ನ ಮನೆಗೆ ಹೋದನು. ಮೊದಲು ವಿಜಯಸಿಂಹನು ಅಪರಾಧಿಯೆಂದು ನಂಬಿ ಬಳಿಕ ಅವನನ್ನು ಬಿಡಿಸಿದುದು ಹೇಗೆಂದು ತಿಳಿದುಕೊಳ್ಳಲು ಪ್ರಿಯವಾಚಕರು ಕುತೂಹಲಪಡುತ್ತಿರುವರಲ್ಲವೆ? ವಿಜಯಸಿಂಹನು ಸನ್ಮಾರ್ಗಿಯೆಂದೂ, ಉದಾರಗುಣೋಪೇತನೆಂದೂ, ಮಂತ್ರಿ ತಿಳಿದಿದ್ದರೂ, ಚಕ್ರವರ್ತಿಯವರು ಅವನಮೇಲೆ ಆರೋಪಿಸಿದ್ದ ಅಪರಾಧವನ್ನೂ, ಅವರು ಅಪರಾಧಸ್ಥಾಪನೆ ಗಾಗಿ ತೋರಿಸಿದ ನಿದರ್ಶನಗಳನ್ನೂ ನಂಬಲಾರದೆ ಇರಲು ಆಗಲಿಲ್ಲ. ಆದರೂ ಚೆನ್ನಾಗಿ ವಿಮರ್ಶಿಸಿದಹೊರತು ಕೆಲಸಮಾಡಿಬಿಟ್ಟರೆ ಪಶ್ಚಾತ್ತಾಪ ಪಡಬೇಕಾದೀತೆಂದು ಹೆದರಿ, ಚಕ್ರವರ್ತಿಗಳನ್ನು ನಾಲ್ಕು ದಿನಗಳ ಅವಧಿ

ಕೊಡುವಂತೆ ಪ್ರಾರ್ಥಿಸಿಕೊಂಡನು. ಅಪ್ಪಾಜಿಯುವರಿಗೂ ಚಕ್ರವರ್ತಿಯು ವರಿಗೂ ಇದ್ದ ಋಣಾನುಬಂಧವೇ ಅಂತಹ ವಿಷಮಸಂಕಟದಲ್ಲಿಯೂ ಮಂತ್ರಿಯ ಪ್ರಾರ್ಥನೆಯನ್ನು ನಡೆಯಿಸಿಕೊಟ್ಟಿತು. ಆದರೂ ತಮಗೆ ದ್ರೋಹವನ್ನು ಬಗೆದಿದ್ದ ವಿಜಯಸಿಂಹನಿಗೆ ಮತ್ತೆ ಅಂತಹ ಗಡುವುದೊರೆ ಯಕೂಡದೆಂದೂ, ಐದನೆಯದಿನ ಪ್ರಾತಃಕಾಲವೇ ವಿಜಯಸಿಂಹನನ್ನು ಕೊಂದು ಬಿಡಬೇಕೆಂದೂ, ಈ ನಾಲ್ಕು ದಿನಗಳಲ್ಲಿ ಮಂತ್ರಿಯವರು ವಿಜಯ ಸಿಂಹನನ್ನು ನೋಡಕೂಡದೆಂತಲೂ ವಿಧಿಸಿದ್ದರು.

ಅಷ್ಟಾದರೂ ವಿರಾಮಸಿಕ್ಕಿತಲ್ಲಾ ಎಂದು ಸಂತೋಷಿಸಿ ಮಂತ್ರಿಯು ಮನೆಗೆಬಂದು "ವಿಜಯಸಿಂಹನು ನಿಜವಾಗಿಯೂ ಅಪರಾಧಿಯೇ? ಇಲ್ಲವೇ ಶತ್ರುಗಳ ಕುತಂತ್ರಕ್ಕೆ ಬಲಿಯಾಗುವಂತೆ ಆಗಿದೆಯೇ?" ಎಂದು ಹಲವು ವಿಧಗಳಲ್ಲಿ ಯೋಚಿಸಿದನು. ಎಷ್ಟು ಯೋಚಿಸಿದರೂ ಬಗೆಹರಿಯಲಿಲ್ಲ. ಕಡೆಗೆ, ಹಿಂದೆ ವಿಜಯಸಿಂಹನಿಗೆ ಶತ್ರುಗಳು ತಂದಿದ್ದ ಗಂಡಾಂತರದಲ್ಲಿ ಮು ಕ್ತಾಂಬೆಯು ಸಹಾಯಮಾಡಿದ್ದುದೂ, ರಾಮರಾಜನು ಆ ಸಮಯದಲ್ಲಿ ಅಲ್ಲಿ ನಡೆದ ಸಮಾಚಾರಗಳನ್ನೆಲ್ಲಾ ತಿಳಿದುಬಂದು ಹೇಳಿದ್ದುದೂ ನೆನಪಿಗೆ ಬಂತು. ಆದುದರಿಂದ ಈಗಲೂ ರಾಮರಾಜನ ಮೂಲಕ ಸ್ವಲ್ಪಮಟ್ಟಿಗಾದರೂ ತಥ್ಯಾಂಶವು ತಿಳಿಯಬಹುದೆಂದು ಅವನನ್ನು ಕರೆಯಿಸಿ ಆನೆಗೊಂದಿಗೆ ಕಳು ಹಿಸಿದನು.

ಅವನು ಬಂದು ಮುಕ್ತಾಂಬೆಯನ್ನು ಕಂಡನು. ಇಷ್ಟರಲ್ಲೇ ಮು ಕ್ತಾಂಬೆಯು ವಿಜಯಸಿಂಹನ ವೃತ್ತಾಂತವೆಲ್ಲವನ್ನೂ ರುದ್ರದೇವನಿಂದ ಕೇಳಿ ತಿಳಿದುಕೊಂಡುಬಿಟ್ಟಿದ್ದಳು. ರಹಸ್ಯವನ್ನು ಮಂತ್ರಿಗಾಗಲಿ, ಚಕ್ರ ವರ್ತಿಯುವರಿಗಾಗಲಿ ವಾಸ್ತವವಾಗಿಯೂ ತಲುಪಿಸುವ ಭಟನ ಕೈಯಲ್ಲಿ ಪತ್ರವನ್ನು ಕೊಟ್ಟುಕಳುಹಿಸಬೇಕೆಂದು ಆತುರಪಡುತ್ತಿದ್ದಳು. ಆದುದರಿಂದ ರಾಮರಾಜನು ತನ್ನನ್ನು ನೋಡಲು ಬಂದಾಗ ಸಿಧಿಯುಸಿಕ್ಕಿದ ನಿರ್ಧನನಂತೆ

ಅಪರಿಮಿತಾನಂದಭರಿತಳಾಗಿ " ಅಣ್ಣಾ ರಾಮರಾಜ! ಹಿಂದೆಯೂ ಭಾಗ್ಯದೇವತೆಯಂತೆ ಅಸಿರೀಕ್ಷಿತವಾಗಿ ಬಂದು ವಿಜಯಸಿಂಹನನ್ನು ಉಳಿಸಿದೆ ; ಈಗಲೂ ಅವನ ಪ್ರಾಣವನ್ನು ರಕ್ಷಣೆಮಾಡಲು ದೇವರೇ ನಿನ್ನನ್ನು ಇಲ್ಲಿಗೆ ಕಳುಹಿಸಿರಬೇಕು. ಕ್ಷಣಮಾತ್ರವೂ ತಡಮಾಡದೆ ಈ ಕಾಗದವನ್ನು ಮಂತ್ರಿಯವರಕೈಗೇ, ನೀನೇ ಕೊಡು. ಇದು ಶತ್ರುಗಳಕೈಗೆ ಸಿಕ್ಕಿದರೆ ನಿರಪರಾಧಿಯು ಹತನಾಗುವನು. ವಿಜಯಸಿಂಹನ ಪ್ರಾಣವು ನಿನ್ನಕೈಯಲ್ಲೆ ಇರುವುದು. ಜೋಕೆ ! ತಡಮಾಡಬೇಡಣ್ಣಾ !" ಎಂದು ವಿನಯದಿಂದ ಪ್ರಾರ್ಥಿಸಿ ಬಂದು ಕಾಗದವನ್ನು ಅವನಿಗೆ ಕೊಟ್ಟಳು.

ರಾಮರಾಜನು ಆ ಘೋರಾಂಧಕಾರದಲ್ಲಿಯೇ ಹೊರಟು ವಿಜಯನಗರವನ್ನು ಸೇರಿ, ಆ ಕಾಗದವನ್ನು ಮಂತ್ರಿಗೆ ತಲುಪಿಸಿದನು. ಆತನು ಆ ವೇಳೆಯಲ್ಲಿ ರಾಜಸಂದರ್ಶನವನ್ನು ಕೋರುವುದು ಅಯುಕ್ತವೆಂದು ಬೆಳಕುಹರಿಯುವವರೆಗೂ ಕಾದಿದ್ದನು ರಾಜಸಂದರ್ಶನವನ್ನು ಮಾಡಿ ಹುಚ್ಚನೂ ರುದ್ರದೇವನೂ ನಡೆಯಿಸಿದ್ದ ಪೈಶಾಚಿಕತಂತ್ರವನ್ನೆಲ್ಲಾ ವಿವರಿಸಿದನು. ವಿಜಯಸಿಂಹನು ಆನೆಗೊಂದಿಗೆ ಹೋಗಿದ್ದಾಗ ಅವನನ್ನು ಭೈರವಮಠಕ್ಕೆ ಹೊತ್ತುಕೊಂಡುಹೋಗಿ ಅವನನ್ನು ಕೊಲ್ಲಲಾಗದೆ ಅವನು ಧರಿಸಿದ್ದ ಆಭರಣಗಳನ್ನು ಅಪಹರಿಸಿದುದೂ, ಹುಚ್ಚನು ಕೋತಿಯನ್ನು ಕುಣಿಸುವವನ ಸೋಗನ್ನು ಹಾಕಿಕೊಂಡು ಅನಂಗಸೇನೆಯ ಉಂಗುರವನ್ನು ಅಪಹರಿಸಿ ಅದಕ್ಕೆ ಪ್ರತಿಯಾಗಿ ಚಕ್ರವರ್ತಿಯವರು ವಿಜಯಸಿಂಹನಿಗೆ ಕೊಟ್ಟಿದ್ದ ಉಂಗುರವನ್ನು ವಿನಿಮಯ ಮಾಡಿದುದೂ, ತನ್ನ ಪ್ರಾಣರಕ್ಷಣೆಯನ್ನು ಮಾಡಿದುದಕ್ಕಾಗಿ ಪಾರಿತೋಷಕ ಕೊಡುವ ವ್ಯಾಜದಿಂದ ವಿಜಯಸಿಂಹನಿಗೆ ಅನಂಗಸೇನೆಯ ಉಂಗುರವನ್ನು ತಲುಪಿಸಿದುದೂ, ಬಳಿಕ, ಪುಷ್ಪಮಾಲಿಕೆಯಲ್ಲಿ ಕೃತ್ರಿಮಲೇಖನವನ್ನು ಹುದುಗಿಸಿದುದೂ—ಇವೇ ಮುಂತಾದ ಬಳಸಂಚುಗಳನ್ನೆಲ್ಲಾ ಕುರಿತು ತನಗೆಬಂದಿದ್ದ ಲೇಖನವನ್ನು

ತೋರಿಸಿ ಅನಂಗಸೇನೆಯೂ ವಿಜಯಸಿಂಹನೂ ಕೇವಲ ನಿರಪರಾಧಿಗಳೆಂದು ನಿದರ್ಶನಮಾಡಿಕೊಡಲು, ವಿವೇಕನಿಧಿಯಾದ ಚಕ್ರವರ್ತಿಯವರು ತಾವು ದುಡುಕಿ ಮರಣದಂಡನೆಯನ್ನು ವಿಧಿಸಿದುದು ಸರಿಯಲ್ಲವೆಂದು ಕಂಡುಕೊಂಡರು. ಆದುದರಿಂದ ವಿಜಯಸಿಂಹನನ್ನು ರಕ್ಷಿಸಲು ಮಂತ್ರಿಯನ್ನೇ ಕಳುಹಿಸಿ, ಆತನನ್ನು ತಮ್ಮಲ್ಲಿಗೆ ಬರಮಾಡಿಕೊಂಡರು. ವಿಜಯಸಿಂಹನು ಬಂದಕೂಡಲೆ ಆತನನ್ನು ಗೌರವಿಸಿ ಉಚಿತಾಸನದಲ್ಲಿ ಕುಳ್ಳಿರಿಸಿ ಸಂಕೋಚದಿಂದ ತಲೆಯನ್ನು ತಗ್ಗಿಸಿಕೊಂಡು ಕುಳಿತಿದ್ದ ವಿಜಯಸಿಂಹನೊಡನೆ ಹೀಗೆ ಸಂಭಾಷಿಸತೊಡಗಿದರು :—

"ಓ ವಿಜಯಸಿಂಹ! ನಿನ್ನ ಸತ್ಪ್ರವರ್ತನವನ್ನು ತಿಳಿಯದೆ, ಕುತಂತ್ರಿಗಳು ಮಹಾ ನಿಪುಣತೆಯಿಂದ ಒಡ್ಡಿದ್ದ ಬಲೆಗೆ ಸಿಕ್ಕಿಬಿದ್ದು, ನಿರಪರಾಧಿಯಾಗಿರುವ ನಿನಗೆ ಶಿಕ್ಷೆಯನ್ನು ವಿಧಿಸಿದುದಕ್ಕಾಗಿ ಮನಃಪೂರ್ವಕವಾಗಿ ವ್ಯಥೆಪಡುತ್ತಿದೇವೆ. ಪೈಶಾಚಿಕಕೃತ್ಯನಿಪುಣರಾದ ನಿನ್ನ ಹಗೆಗಳು ತಪ್ಪದೆ ನಿನಗೆ ವಿಪತ್ತನ್ನುಂಟುಮಾಡಬೇಕೆಂದು, ನನ್ನ ಆತ್ಮಗೌರವಕ್ಕೆ ಹಾನಿ ಬರುವಂತೆ ಮಾಡಿ, ಕೂಲಂಕಷವಾದ ವಿಚಾರಕ್ಕೂ ಅವಕಾಶಕೊಡದೆ ನಿನ್ನ ಮೇಲೆ ಅಧಿಕ ರೋಷ ಉಂಟಾಗುವಂತೆ ಮಾಡಿದರು. ನಿನಗೆ ಅನ್ಯಾಯವಾಗಿ ಉಂಟಾದ ಮನೋವ್ಯಥೆಗಾಗಿ ಬಹಳ ಪಶ್ಚಾತ್ತಾಪ ಪಡುತ್ತಿದ್ದೇವೆ. ನಿನಗೆ ನಮ್ಮಿಂದಾದ ಅಪಕಾರವನ್ನು ಮನಸ್ಸಿನಲ್ಲಿಡಬೇಡ" ಎಂದರು.

ವಿಜಯ—"ಮಹಾಸ್ವಾಮಿ! ನನ್ನ ಪುರ್ವಾತ ಕರ್ಮಕ್ಕೆ ಯಾರೇನು ಮಾಡುವರು. ನನ್ನ ದುಷ್ಕರ್ಮವೇ ಆ ಹಲವು ಘಟನಾವಳಿಗಳನ್ನೂ ಉಂಟುಮಾಡಿದುವು. ಆ ಹುಚ್ಚನು ಬಹು ದುರ್ಮಾರ್ಗಿಯೆಂದು ತೋರುವುದು. ಅವನು ನನ್ನನ್ನು ಅವಮಾನಕರವಾದ ಮೃತ್ಯುವಿನ ದವಡೆಗೆ ಸಿಕ್ಕಿಸುವುದರಲ್ಲಿದ್ದನು. ಯುಕ್ತಾಯುಕ್ತಜ್ಞಾನಮೂರ್ತಿಗಳಾದ ಮಹಾ

ಸ್ವಾಮಿಗಳು ನಾನು ನಿರಪರಾಧಿಯೆಂಬುದನ್ನು ವಿಮರ್ಶಾಪೂರ್ವಕವಾಗಿ ತಿಳಿದುದಕ್ಕಾಗಿ ತಮಗೆ ಬಹಳ ಕೃತಜ್ಞನಾಗಿರುವೆನು."

ಕೃಷ್ಣದೇವರಾಯರು—"ವಿಜಯಸಿಂಹ! ಮುಕ್ತಾಂಬೆಯ ದೆಸೆಯಿಂದ ನಿನ್ನ ನಿರಪರಾಧಿತ್ವವು ತಿಳಿಯಬಂತು. ಆಕೆಯು ಈ ಕಾಗದವನ್ನು ಸಕಾಲದಲ್ಲಿ ಬರೆದು ಕಳುಹಿಸದಿದ್ದರೆ, ಪ್ರಮಾದವು ನಡೆದು ಹೋಗುತ್ತಿತ್ತು. ನಮಗೆ ಬರುತ್ತಿದ್ದ ಅಪಕೀರ್ತಿಯನ್ನು ತಪ್ಪಿಸಿದುದಕ್ಕಾಗಿ ಮುಕ್ತಾಂಬೆಗೆ ನಾವು ಬಹಳ ಕೃತಜ್ಞರಾಗಿರುವೆವು. ನಿನಗೆ ನಾವು ಅವಜ್ಞತೆಯಿಂದುಂಟುಮಾಡಿದ ಮನೋವ್ಯಥೆಗೆ ಕಿಂಚಿನ್ಮಾತ್ರ ಪ್ರತಿ ಫಲರೂಪವಾಗಿ ನಿನಗೆ ಬೇಕಾದ ವರವನ್ನು ಅನುಗ್ರಹಿಸಬೇಕೆಂದಿರುವೆವು; ಬೇಕಾದುದನ್ನು ಕೇಳು.''

ಮುಕ್ತಾಂಬೆಯ ಹೆಸರನ್ನು ಕೇಳಿ ವಿಜಯಸಿಂಹನಿಗೆ ಮನಸ್ಸಿನಲ್ಲಿದ್ದ ಸಂಕಟವೆಲ್ಲವೂ ಶಾಂತವಾಯಿತು. ತನ್ನ ನಿರಪರಾಧಿತ್ವವು ಸ್ಥಿರಪಟ್ಟಿತೆಂಬ ಸಂತೋಷದಿಂದ ಮನೋವ್ಯಥೆಯೆಲ್ಲವೂ ಮರೆತುಹೋಯಿತು. ಚಕ್ರವರ್ತಿಯವರು ತಾವಾಗಿ ಕೊಡಬೇಕೆಂದು ಇದ್ದ ವರನನ್ನು ಪಡೆಯದಿರುವುದು ಯುಕ್ತವಲ್ಲವೆಂದು ತಿಳಿದು, "ಮಹಾಸ್ವಾಮಿಯವರ ಕರುಣಾರಸಕ್ಕೆ ಪಾತ್ರನಾಗಿರುವುದರಿಂದಲೇ ನನ್ನ ಸರ್ವಾಭೀಷ್ಟಗಳೂ ಕೈಗೂಡಿದುವೆಂಬ ತೃಪ್ತಿಯುಂಟಾಗಿದೆ. ಆದರೂ ತಾವು ದಯೆಪಾಲಿಸಬೇಕೆಂದಿರುವ ವರವನ್ನು ಮುಂದೆ ಪಡೆದುಕೊಳ್ಳಲು ಅನುಜ್ಞೆಯಾಗಬೇಕು'' ಎಂದು ವಿನಯದಿಂದ ಕೇಳಿಕೊಂಡನು.

ವಿಜಯಸಿಂಹನ ವಿನಯವಾಕ್ಯಗಳನ್ನು ಕೇಳಿ ಚಕ್ರವರ್ತಿಯವರಿಗೆ ಬಹಳ ಆನಂದವಾಯಿತು. ಅಪ್ಪಾಜಿಯವರನ್ನು ನೋಡಿ "ಅವಿಚಾರದಿಂದ ಅನಂಗಸೇನೆಗೂ ಬಹಳವಾಗಿ ಮನೋವ್ಯಥೆಯನ್ನುಂಟುಮಾಡಿದೆವು. ಆಕೆಯು ಅವಮಾನವನ್ನು ತಾಳಲಾರದೆ ಪ್ರಾಣವನ್ನು ತೊರೆದುಕೊಂಡಿರು

ವಳೋ ? ಅಥವಾ ಊರನ್ನು ಬಿಟ್ಟು ಹೊರಟುಹೋದಳೋ ? ವಿಚಾರಿಸ ಬೇಕಲ್ಲಾ ! " ಎನ್ನಲು ಆತನು " ಮಹಾರಾಜರೇ ! 'ಗತಂ ನಶೋಚಯೇತ್ ಪ್ರಾಜ್ಞಃ' ಎಂಬುದನ್ನು ತಿಳಿದೇ ಇರುವಿರಲ್ಲವೇ ? ದೈವದುರ್ವಿಪಾಕದಿಂದ ಸಕಲರಿಗೂ ಕಷ್ಟಗಳು ಅವಿತರ್ಕಿತಸಂಭವವಾಗಿ ಬರುವುದುಂಟು. ಅನಂಗ ಸೇನೆಯು ಊರನ್ನು ಬಿಟ್ಟು ಹೊರಟುಹೋದಂತೆ ವರ್ತಮಾನವನ್ನು ಕೇಳಿ ದೆನು. ಆಕೆಯೊಡನೆ ಮಾಲತಿಯೂ ಹೋಗಿರುವಳಂತೆ. ಅನಿತರಸಾಧಾ ರಣವಾದ ವಿವೇಕವನ್ನು ಪಡೆದಿರುವ ಮಾಲತಿಯು ಸಂಗಡವಿರುವುದರಿಂದ, ಅನಂಗಸೇನೆಗೆ ಯಾವಬಾಧೆಯೂ ಉಂಟಾಗಲಾರದು ಅವರನ್ನು ಕಂಡು ಹಿಡಿಯಲು ದೂತರನ್ನು ನಿಯಮಿಸುವೆನು " ಎಂದು ಉತ್ತರಹೇಳಿದನು.

" ಮಂತ್ರಿಪುಂಗವಾ ! ನಮಗೆ ಇಷ್ಟು ತೊಂದರೆಯನ್ನುಂಟುಮಾ ಡಿದ ಆ ಹುಚ್ಚನು ಬಹಳ ತುಂಟನೆಂದೂ, ಕುತಂತ್ರಿಯೆಂದೂ ವ್ಯಕ್ತಪಡು ತ್ತದೆ. ಅವನು ಯಾರು ? ಹುಚ್ಚನೆಂದೇ ನಾವು ಅವನನ್ನು ತಿಳಿದು ಅವನಿಗೆ ಬೇಕಾದೆಡೆಯಲ್ಲೆಲ್ಲಾ ಸಂಚರಿಸಲು ಅವಕಾಶಕೊಟ್ಟುದು ಅಷ್ಟು ಯುಕ್ತ ವಲ್ಲವೆಂದು ತೋರುವುದು. ಅವನು ಯಾರೆಂಬುದನ್ನು ಕಂಡು ಹಿಡಿಯ ಬೇಕಲ್ಲಾ ! "

" ಮಹಾಸ್ವಾಮಿ ! ಅವನು ಯಾರೋ ಬಹಳಬುದ್ಧಿಶಾಲಿ. ನಮ್ಮ ಶತ್ರುಮಂಡಲಿಯಲ್ಲಿ ಪ್ರಬಲನೆಂದು ತೋರುವುದು. ನಾನು ಅವನನ್ನು ಐಲು ಗಾರನೆಂದೇ ತಿಳಿದಿದ್ದೆನು. ಅವನು ಯಾರಿಗೂ ಬಾಧಿಸದೇ ಇದ್ದುದ ರಿಂದಲೂ, ಸಮಯಸಂದರ್ಭಗಳನ್ನು ತಿಳಿದು ವಿನೋದಪಡಿಸುತ್ತಿದ್ದುದ ರಿಂದಲೂ ಅವನನ್ನು ನಿರ್ಬಾಧಕವಾದ ಕ್ರೀಡಾಸಾಧನವನ್ನಾಗಿ ಉಪಯೋ ಗಿಸಿಕೊಳ್ಳುತ್ತಿದ್ದೆನು. ಅವನ ಕಪಟನಾಟಕವು ಈಗೀಗ ವ್ಯಕ್ತವಾಗುತ್ತ ಲಿದೆ. ನನ್ನನ್ನು ಮೊದಲು ಕೊಲ್ಲಲುಯತ್ನಿಸಿದುದೂ ಆ ತಂತ್ರಿಯ ಬೋಧ ನೆಯಿಂದಲೇ ! ವಿಜಯಸಿಂಹನನ್ನು ವಧಿಸಲು ಹವಣಿಸಿದುದೂ ಆ ಮೋಸ

ಗಾರನ ಪ್ರೇರಣೆಯಿಂದಲೇ. ಆ ಕುಹಕಿಯ ಮಾಯದಿಂದಲೇ ವಿಜಯಸಿಂಹ ನಿಗೂ, ಅಂಗಸೇನೆಗೂ ದುರಪವಾದವುಂಟಾದುದು. ನೆನ್ನೆ ಆನೆಗೊಂದಿ ಯನ್ನು ಸುಟ್ಟವನೂ ಆ ಮಾಯಾವಿಯೇ ಎಂದು ವರ್ತಮಾನ ಬಂತು. ಇಂತಹ ಠಕ್ಕನು ತಂತ್ರಗಳಲ್ಲೆಲ್ಲಾ ಅಗ್ರಗಣ್ಯನು."

ಕೃಷ್ಣ—"ಏನು! ಆನೆಗೊಂದಿಗೆ ಬೆಂಕಿಬಿತ್ತೆ? ಆ ಹುಚ್ಚನೇ ಅದಕ್ಕೂ ಕಾರಣಭೂತನೆ?"

ಅಪ್ಪಾಜಿ—"ಆಠಕ್ಕುಗಾರನೇ ಆನೆಗೊಂದಿಗೆ ಉಪಾಯವಾಗಿ ಬೆಂಕಿ ಹೊತ್ತಿಸಿ, ಪ್ರಹರೇಶ್ವರನನ್ನು ತಪ್ಪಿಸಿ ಕರೆದುಕೊಂಡು ಹೋಗಿರುವನು. ಮುಕ್ತಾಂಬೆಯು ಆ ಹುಚ್ಚನನ್ನು ಕುರಿತು ಬರೆದಿರುವಳೇ ಹೊರತು ಅವನು ಇಂತಹವನೆಂದು ತಿಳಿಸದಿರುವುದು ನೋಡಿದರೆ ಹುಚ್ಚನಿಗೂ ಆಕೆಗೂ ಬಾಂಧವ್ಯವಿರುವುದೆಂದು ತೋರುವುದು. ಯಾವಕಾರಣದಿಂದಲೊ ಅವ ನಿಗೂ, ವಿಜಯಸಿಂಹನಿಗೂ ಹಗೆತನವುಂಟಾಗಿರಬಹುದು. ಮುಕ್ತಾಂಬೆಯು ಮತ್ತೆ ಯಾವಕಾರಣದಿಂದಲೋ ಹುಚ್ಚನ ತಂತ್ರಗಳಿಗೆ ಸಿಕ್ಕಿಬೀಳದಂತೆ ವಿಜಯಸಿಂಹನಿಗೆ ಸಹಾಯ ಮಾಡುತ್ತಿರುವಳು. ಈ ಉಭಯಸಂಕಟ ದಲ್ಲಿ ಆಕೆಯು ತೋರಿಸುತ್ತಿರುವ ಚಾತುರ್ಯವು ಅನಿತರಸಾಧಾರಣವಾ ಗಿರುವುದು."

"ಮಂತ್ರೀಶ್ವರರೇ! ಮುಕ್ತಾಂಬೆಯು ತಪ್ಪಿಸಿಕೊಂಡು ಹೋಗ ದಂತೆ ಕಾವಲುಗಾರರನ್ನು ನೇಮಿಸಿರಲಿಲ್ಲವೆ? ಅವರೆಲ್ಲರೂ ತಪ್ಪಿಸಿ ಕೊಂಡುಹೋಗಲು ಅವಕಾಶ ಹೇಗುಂಟಾಯಿತು?"

"ಮಹಾರಾಜಾಧಿರಾಜರೆ! ಪ್ರಹರೇಶ್ವರಾದಿಗಳನ್ನು ಕಾಯಲು ಅನೇಕಮಂದಿ ಕಾವಲುಗಾರರನ್ನು ನೇಮಿಸಿತ್ತು. ಆದರೂ ಅವರೆಲ್ಲರಿಗೂ ಬುಮ್ಮೆಯೇ ಆಗದವುಂಟಾಗುವಂತೆ ಮಾಡಿ, ಅವರಕರ್ತವ್ಯ ಬುದ್ಧಿಯನ್ನು ಸೂರೆಗೊಂಡು, ಲೀಲಾಮಾತ್ರದಿಂದ ತನ್ನವರನ್ನು ತಪ್ಪಿಸಿಕೊಂಡು ಹೋದು

ದನ್ನು ನೋಡಿದರೆ, ಹುಚ್ಚನು ಅಪೂರ್ವಚರಿತ್ರನಂತೆ ತೋರುವನು. ಅವನು ಪ್ರಯೋಗಿಸುವ ಉಪಾಯುಗಳಿಗೆ ಪ್ರತಿಕ್ರಿಯೆಯುನ್ನು ಮಾಡುವುದು ಅಷ್ಟು ಸುಲಭವೆಂದು ತೋರುವುದಿಲ್ಲ. ದೈವವಶದಿಂದ ಅವನ ಪ್ರಯೋಗಗಳಲ್ಲಿ ಒಂದೆರಡು ಭಗ್ನಫಲಗಳಾದುವು. ಇಂತಹ ಪ್ರಬಲಪ್ರತಿದ್ವಂದ್ವಿಯನ್ನು ಜಯಿಸಿದರಲ್ಲವೇ ನನ್ನಹೆಸರು ಉಳಿಯುವುದು," ಎಂದು ಹೇಳಿದನು.

ಚಕ್ರವರ್ತಿಯವರು ಅಪ್ಪಾಜಿಯವರ ಪ್ರತಿಜ್ಞೆಯನ್ನು ಕೊಂಡಾಡಿ ಆತನನ್ನೂ ವಿಜಯಸಿಂಹನನ್ನೂ ಗೌರವದಿಂದ ಕಳುಹಿಸಿಕೊಟ್ಟರು.

ಹತ್ತೊಂಭತ್ತನೆಯ ಪ್ರಕರಣ.

" ಅನ್ಯೇತೇ ವಿಹಗಾಃ ಪಯೋದಪುರತೋ ಧಾವಂತಿ ತೃಷ್ಣಾತುರಾ |
ವಾಪೀಕೂಪತಟಾಕ ಸಾಗರಸರಿತ್ತೋಯೇಷು ಬದ್ಧಾದರಾಃ ||
ಚಿತ್ರಂ ಪಶ್ಯಯ ಏಷ ಚಾತಕಶಿಶುಶ್ಶುಷ್ಕೋಷ್ಠ ಕಂಠೋಪಿಸನ್ |
ನಾನ್ಯಂಪಶ್ಯತಿ ನೋಪಸರ್ಪತಿ ನ ಚ ಪ್ರಸ್ತೌತಿ ನ ಧ್ಯಾಯತಿ || "

ಆನೆಗೊಂದಿಗೆ ಐದು ಹರಿದಾರಿಯ ದೂರದಲ್ಲಿ ಗಂದರಾಡವೆಂಬ ಊರೊಂದಿತ್ತು. ಈಗ ಆ ಊರು ಇಲ್ಲ. ಈ ಕಥೆಯ ಸಂಗತಿಗಳು ನಡೆದ ಕಾಲದಲ್ಲಿ ಆ ಹಳ್ಳಿಯಲ್ಲಿ ನೂರು ಮನೆಗಳು ಇದ್ದುವು ಅವುಗಳಲ್ಲಿ ಒಂದೆರಡು ಹೆಂಚಿನವು; ಮಿಕ್ಕುವು ಹುಲ್ಲಿನವು. ಆ ಊರಿನಲ್ಲೇ ಗ್ರಾಮಾಧಿಕಾರಿಯಾದ ವಿಪ್ರನೊಬ್ಬನು ವಾಸಿಸುತ್ತಿದ್ದನು. ಅವನ ಮನೆಯಲ್ಲಿ ಎರಡು ಕೊಟಡಿಗಳಿದ್ದುವು. ಅವುಗಳಲ್ಲೊಂದರಲ್ಲಿ ತಾನು ವಾಸಿಸುತ್ತಾ, ಮತ್ತೊಂದನ್ನು ಪರಸ್ಥಳದವರು ಬಂದರೆ ಇಳಿದುಕೊಳ್ಳುವುದಕ್ಕಾಗಿ ಕೊಡುತ್ತಿದ್ದನು.

ಭೂತದಯಾಪರನಾದುದರಿಂದ ಪರಸ್ಥಳೀಯರಿಗೆ ಬೇಕಾದ ಚಿಲ್ಲರೆ ಸಾಮಾನುಗಳನ್ನು ಉಚಿತವಾಗಿ ಒದಗಿಸಿಕೊಡುತ್ತಲೂ ಇದ್ದನು. ಸಾಧಾರಣವಾಗಿ ಪರಸ್ಥಳದವರು ಎರಡುಮೂರುದಿನಗಳು ಮಾತ್ರ ಇದ್ದು ಮುಂದಕ್ಕೆ ಪ್ರಯಾಣಮಾಡುತ್ತಿದ್ದರು. ಪ್ರಯಾಣಸ್ಥರ ಕೊಟಡಿಯಲ್ಲಿ ಇಳಿದಿದ್ದ ಇಬ್ಬರು ಯುವತಿಯರು ಮಾತ್ರ ತಾವು ಬಂದು ನಾಲ್ಕೈದು ದಿನಗಳಾಗಿದ್ದರೂ, ಇನ್ನೂ ಅಲ್ಲೇ ಇದ್ದರು. ಇಬ್ಬರು ಸ್ತ್ರೀಯರಲ್ಲಿ ಒಬ್ಬಳು ಮಲಗಿಕೊಂಡಿದ್ದಳು. ಆದರೆ ನಿದ್ರಿಸುತ್ತಿರಲಿಲ್ಲ. ಮತ್ತೊಬ್ಬಳು ಆಕೆಯ ಸಮೀಪದಲ್ಲೇ ಕುಳಿತಿದ್ದಳು. ಹೀಗೆ ಬಹಳ ಹೊತ್ತಾದರೂ ಇಬ್ಬರೂ ಎಚ್ಚರವಾಗಿಯೇ ಇದ್ದರು. ಆ ಇಬ್ಬರ ಕಣ್ಣುಗಳಲ್ಲಿಯೂ ನೀರು ತೊಟ್ಟಿಕ್ಕುತಿತ್ತು. ಹೀಗೆ ಶೋಕಿಸುತ್ತಿರುವವರಿಗೆ ನಿದ್ರೆ ಹೇಗೆ ಬಂದೀತು? ಆ ಇಬ್ಬರಲ್ಲಿ ಒಬ್ಬಾಕೆಯು ಅನಂಗಸೇನೆಯೆಂತಲೂ ಮತ್ತೊಬ್ಬಳು ಮಾಲತಿಯೆಂತಲೂ ಚತುರರಾದ ಪಾಠಕಮಹಾಶಯರು ಆಗಲೇ ಗುರುತು ಹಿಡಿದಿರುವರಲ್ಲವೆ? ಅವರಿಬ್ಬರಿಗೂ ಈ ಮೇರೆಗೆ ಸಂಭಾಷಣೆ ನಡೆಯುತ್ತಿತ್ತು:—

ಮಾಲತಿ—" ಅಮ್ಮಾ, ಅನಂಗಸೇನೆ! ಪುರವನ್ನು ಬಿಟ್ಟು ಹೊರಟ ಮೇಲೆ, ನಾವು ಕಳ್ಳರ ಕೈಗೋ ಮೃಗಗಳ ಬಾಯಿಗೋ ತುತ್ತಾಗಬೇಕಾಗುತ್ತಿತ್ತು. ಆದರೆ ಆ ಬ್ರಾಹ್ಮಣನು ಸಹಾಯಮಾಡಿದುದರಿಂದ ನಿರಪಾಯವಾಗಿ ಬಂದೆವು; ದಿಕ್ಕಿಲ್ಲದವರಿಗೆ ದೇವರೇ ಗತಿಯಲ್ಲವೆ?"

ಅನಂಗ—" ದಾರಿಯಲ್ಲೇ ಕಳ್ಳರಾಗಲಿ, ಮೃಗಗಳಾಗಲಿ ನನ್ನನ್ನು ಕೊಂದುಬಿಟ್ಟಿದ್ದರೆ ನನ್ನ ಈ ಹಾಳುಜನ್ಮವು ಕಳೆದುಹೋಗುತ್ತಿತ್ತು. ನನಗೆ ಅಂತಹ ಅದೃಷ್ಟವೆಲ್ಲಿಂದ ಬರಬೇಕು? ಗಾಳಿ ಬಿಸಿಲುಗಳನ್ನು ಕಾಣದ ನಾನು ದಾರುಣವಾದ ಪರಿಭವಕ್ಕೆ ಈಡಾಗಿ ಊರೂರು ಅಲೆಯುತ್ತಿರುವ ಈ ನನ್ನ ಹಾಳುಬಾಳಿನಿಂದ ಏನು ಪ್ರಯೋಜನ? ನಿರುಪಮಾನಸರಸಾಗ್ರೇಸರರೂ ಸಾರ್ವಭೌಮರೂ ಆದವರ ಸ್ತುತಿಗೆ ಪಾತ್ರವಾಗಿದ್ದ ಈ ನನ್ನ

ಕೋಮಲವಾದ ಪಾಪಿಶರೀರವು ಇಂತಹ ಆಪತ್ತನ್ನೂ ತಡೆದುಕೊಂಡು ಬದುಕಿರುವುದಲ್ಲಾ? ಅಯ್ಯೋ! ಮೃತ್ಯುದೇವತೆಗೂ ನನ್ನಮೇಲೆ ದಯೆ ಯಿಲ್ಲವಲ್ಲಾ?"

ಮಾಲತಿ—"ಅಮ್ಮಾ! ಸುಖವನ್ನನುಭವಿಸಿ ದುಃಖಕ್ಕೆ ಈಡಾಗುವುದು ಅತ್ಯಂತ ದುರ್ಭರವಾಗುವುದು. ಆದರೆ ಕಷ್ಟಗಳನ್ನೂ ಅವಮಾನಗಳನ್ನೂ ಅನುಭವಿಸುತ್ತಿರುವವರು ಪ್ರಪಂಚದಲ್ಲಿ ಎಷ್ಟುಮಂದಿ ಇಲ್ಲ? ಅವರೆಲ್ಲರೂ ಪ್ರಾಣಬಿಡಬೇಕೆಂತಲೇ ಪ್ರಾರ್ಥಿಸುತ್ತಿರುವರೇ? ಕಷ್ಟ ಸುಖಗಳೂ ಬದಲಾಯಿಸುತ್ತಿರುತ್ತವೆ. ನಿನಗೆ ಬಂದಿರುವ ಈ ಕಷ್ಟವು ತಾನೇ ಎಷ್ಟುದಿನವಿದ್ದೀತು? ನಿರಪರಾಧಿಯಾದ ನಿನ್ನನ್ನು ಅವಮಾನಪಡಿಸಿದುದರಿಂದ ರಾಜೇಂದ್ರರಿಗೂ ಪಶ್ಚಾತ್ತಾಪ ಹುಟ್ಟಲೇಹುಟ್ಟುವುದು. ನಿನ್ನನ್ನು ಶೀಘ್ರದಲ್ಲೇ ಪುನಃ ತಮ್ಮಬಳಿಗೆ ಕರೆಯಿಸಿಕೊಳ್ಳುವರು. ಆದುದರಿಂದ ನಿನ್ನ ಯೋಚನೆಯನ್ನು ಬಿಟ್ಟು ಧೈರ್ಯತಂದುಕೊ."

ಅನಂಗ—"ಸಖಿ! ನಿನ್ನ ಸಮಾಧಾನೋಕ್ತಿಗಳು ನನಗೆ ಶಾಂತಿಯನ್ನುಂಟುಮಾಡಲಾರವು. ಇನ್ನು ನನ್ನ ಸ್ವಾಮಿಯ ಪಾದದರ್ಶನವು ನನಗೆಲ್ಲಿ ದೊರೆಯುವುದು? ದೊರೆತರೂ ನನ್ನ ಹಿಂದಿನ ಗೌರವವು ಉಂಟಾಗುವುದು ಹೇಗೆ? ನನಗೆ ಅಂತಹ ಅದೃಷ್ಟವು ಇರುವುದೇ? ನಿನ್ನ ಸಮಾಧಾನೋಕ್ತಿಗಳಿಂದ ನನಗೆ ಇದುವರೆಗೂ ಜೀವವು ಅಂಟಿಕೊಂಡಿದೆ. ಇಲ್ಲದಿದ್ದರೆ ಈ ವೇಳೆಗೆ ಎಲ್ಲಿರುತ್ತಿತ್ತೊ? ಎಲ್ಲಿ, ನೆನ್ನೆ ಸಂಜೆಗೇ ಬರುವೆನೆಂದು ಹೇಳಿದ್ದ ಬ್ರಾಹ್ಮಣನು ಇನ್ನೂ ಬರಲಿಲ್ಲವಲ್ಲಾ?"

ಮಾಲತಿ—"ಆತನಿಗೆ ಕೆಲಸವಿದ್ದುದರಿಂದ ಇನ್ನೂ ಬರಲಿಲ್ಲ. ಹೇಗಿದ್ದರೂ ಜಾಗ್ರತೆಯಾಗಿಯೇ ಬರುವನು. ಬೆಳಗಿನವರೆಗೂ ನೋಡೋಣ. ಗಲೂ ಆತನು ಬಾರದಿದ್ದರೆ, ಈ ಸ್ಥಳವನ್ನು ಬಿಟ್ಟು ಹೋಗೋಣ. ನಿನ್ನ ಆ

ತೌರುಮನೆಯಾದ ಕೊಂಡಪಲ್ಲಿಗೆ ದಾರಿ ನನಗೆ ತಿಳಿಯುವುದು; ಕಳ್ಳಕಾಕರ ಕೈಗೆ ಸಿಕ್ಕದಂತೆ ಕರದುಕೊಂಡು ಹೋಗುವೆನು ".

ಅನಂಗ—" ನಾವು ಈಗ ಕೊಂಡಪಲ್ಲಿಗೆ ಹೋಗುವುದು ಉಚಿತ ವಲ್ಲ. ದುಶ್ಚರಿತ್ರಳೆಂಬ ಅಪಖ್ಯಾತಿಯು ಬಂದಿರುವಾಗ ನಾನು ಅಲ್ಲಿಗೆ ಹೋಗಿ ಅವಮಾನಿತಳಾಗಲಾರೆ "

ಮಾಲತಿ—" ನಿನ್ನ ಆಲೋಚನೆಯು ವಿಪರೀತವಾಗಿದೆ. ತಾಯಿತಂದೆ ಗಳು ಹೆತ್ತಮಕ್ಕಳ ವಿಷಯದಲ್ಲಿ ವಾತ್ಸಲ್ಯಪರರಾಗಿಯೇ ಇರುವರು. ದುರ್ಗುಣಗಳೂ ಹಾಗೆ ಕಂಡುಬರಲಾರವು. ಈ ಆಪತ್ಕಾಲದಲ್ಲಿ ನಿನಗೆ ಮತ್ತೆಯಾರು ರಕ್ಷಕರಿರುವರು ? ನಿಮ್ಮ ತಾಯಿತಂದೆಗಳು ಆಡುವ ಮೃದು ವಾದ ಮಾತುಗಳಿಂದ ನಿನಗೆ ಉಂಟಾಗಿರುವ ಮಹದ್ವ್ಯಸನವು ಸ್ವಲ್ಪ ಮಟ್ಟಿಗಾದರೂ ಶಾಂತವಾಗುವುದು."

ಅನಂಗ—" ಹಾಗೆನ್ನಬೇಡ ; ದುಃಖೋಪಶಮನವಾಗಬೇಕಾದರೆ ನೀನು ಹೇಳಿದ ಉಪಾಯಕ್ಕಿಂತಲೂ ಉತ್ತಮವಾದುದು ಬಂದಿದೆ.''

ಮಾಲತಿ—" ಅದು ಯಾವುದು ? ''

ಅನಂಗ—" ಪುಣ್ಯಕ್ಷೇತ್ರಗಳಿಗೆ ಹೋಗಿ ಮಹಾತ್ಮರ ದರ್ಶನವನ್ನು ಮಾಡಿ ಅವರ ಪಾದಸೇವೆಮಾಡುತ್ತಾ ಅವರ ಸದುಪದೇಶವನ್ನು ಕೇಳುತ್ತಾ ಕಾಲಯಾಪನೆ ಮಾಡುವುದು. ಹೀಗೆ ಮಾಡಿದರೆ ನಮ್ಮ ದುಃಖವು ಕಡಿಮೆ ಯಾಗಬಹುದು."

ಮಾಲತಿ—" ನಿನ್ನ ಮಾತುಗಳನ್ನು ಕೇಳಿ ನನಗೆ ನಗುಬರುತ್ತಿರು ವುದು. ನೀನು ಸಾಧಿಸಬೇಕೆಂದಿರುವ ಉದ್ದೇಶಕ್ಕೆ ನೀನೇ ಬಾಧಕಳಾಗಿರು ವೆ. ನಿನ್ನ ಸುಂದರಮುಖಾರವಿಂದವೂ ಮಂಜುಲಾಲಾಪವೂ ಯಾವ ಮಹಾ ತ್ಮನಿಗಾದರೂ ಬುದ್ಧಿಭ್ರಂಶವನ್ನುಂಟುಮಾಡಿಬಿಟ್ಟು ತಪೋಭ್ರಷ್ಟನನ್ನಾಗಿ ಮಾಡುವುವು ; ಆತನ ಜ್ಞಾನದೀಪವನ್ನು ನಂದಿಸಿಬಿಡುವುವು ; ಮನೋದಾ

ರ್ಯವನ್ನು ಕರಗಿಸಿ ನೀರುಮಾಡಿ ಬಿಡುವುವು. ಇದರಿಂದ ಉಭಯ ಭ್ರಷ್ಟ ತೆಯುಂಟಾಗಬಹುದು. ಪುಣ್ಯಕ್ಷೇತ್ರಗಳಿಗೂ ದುರಾತ್ಮರು ಬರುವುದುಂಟು. ಇಂತಹವರಿಂದ ಹಾನಿಯು ತಪ್ಪಲಾರದು. ಆದುದರಿಂದ ಈ ಯೋಚನೆ ಯನ್ನು ಬಿಟ್ಟುಬಿಡು. ನಿನ್ನ ತವರುಮನೆಯಲ್ಲಿ ಸುರಕ್ಷಿತವಾಗಿರುವುದನ್ನು ಕಂಡು ನಿಜಾಂಶವನ್ನು ತಿಳಿದು, ಪಶ್ಚಾತ್ತಾಪಪಟ್ಟು, ಮಹಾರಾಜರು ಕರೆ ಯಿಸಿಕೊಳ್ಳುವರು."

ಅನಂಗ—"ತಂಗೀ, ದುಃಖಾತಿರೇಕದಿಂದ ನನ್ನ ಮನಸ್ಸು ಯುಕ್ತಾ ಯುಕ್ತ ವಿವೇಚನೆ ಮಾಡಲು ಅಶಕ್ತವಾಗಿರುವುದು. ಈ ಆಪತ್ತಿನಲ್ಲಿ ನೀನೇ ನನಗೆ ಗತಿ. ಈಗ ನಾವು ಏನುಮಾಡೋಣ? ನಮಗೆ ವಸತಿಯನ್ನು ಕೊಟ್ಟಿರುವ ಬ್ರಾಹ್ಮಣನು ಪರೋಪಕಾರಶೀಲನೆಂದು ತೋರುವನು. ನಮ್ಮನ್ನು ಕೊಂಡಪಲ್ಲಿಗೆ ಸೇರಿಸಲಾರನೇ?"

ಮಾಲತಿ—"ಆತನು ಬಹು ಯೋಗ್ಯನೆಂದು ತೋರುವನು. ಆತನು ಬಂದಮೇಲೆ ಆಲೋಚಿಸಿ ನೋಡೋಣ. ಬಂದುವೇಳೆ ಆತನೇ ನಮ್ಮನ್ನು ಕರೆದುಕೊಂಡು ಹೋಗಿ, ಕೊಂಡಪಲ್ಲಿಗೆ ಬಿಡಲು ಒಪ್ಪಿದರೆ ನಮ್ಮ ಕೆಲಸವು ಸುಲಭವಾಯಿತು. ಇಲ್ಲದಿದ್ದರೆ ನಾನು ನಿನ್ನನ್ನು ಸುರಕ್ಷಿತವಾಗಿ ಕರೆದು ಕೊಂಡು ಹೋಗುವೆನು. ಧೈರ್ಯದಿಂದಿರು."

ಹೀಗೆ ಆ ಇಬ್ಬರು ಸ್ತ್ರೀಯರೂ ಮಾತನಾಡುತ್ತಿರುವಾಗ ಯಾರೋ ಬರುತ್ತಿದ್ದ ಶಬ್ದವು ಕೇಳಿಸಿತು. ಬೀದಿಯಕಡೆ ನೋಡಲು ನೀರುಗಾವಿಯ ದೋತರವನ್ನುಟ್ಟು ವಿಭೂತಿ ರುದ್ರಾಕ್ಷಮಾಲೆಯನ್ನು ಧರಿಸಿ, ಜಪಸರವನ್ನು ಕೈಯಲ್ಲಿ ಹಿಡಿದು ಜಪಮಾಡಿಕೊಳ್ಳುತ್ತಾ ಬರುತ್ತಿದ್ದ ಒಬ್ಬ ಮನುಷ್ಯನು ಗೋಚರನಾದನು. ಈತನು ಆ ಯುವತಿಯರು ಪ್ರಸ್ತಾವಿಸುತ್ತಿದ್ದ ಗೃಹ ಪತಿಯೇ. ಆತನ ಹೆಸರು ಸದಾಶಿವಭಟ್ಟ. ಆತನನ್ನು ಕಂಡಕೂಡಲೆ ಆ ಯುವತಿಯರಿಬ್ಬರೂ ಆತನಿಗೆ ಪ್ರಣಾಮಮಾಡಲು ಸದಾಶಿವಭಟ್ಟನು ಆಶೀ

ರ್ವಾದ ಮಾಡಿ ಕುಶಲಪ್ರಶ್ನೆಯನ್ನು ಕೇಳಿದನು. ಅನಂಗಸೇನೆಯು ,, ತಮ್ಮ ಕಟಾಕ್ಷದಿಂದ ನಾವು ಕ್ಷೇಮವಾಗಿದೇವೆ. ನಾನು ಕೊಂಡಪಲ್ಲಿಯಲ್ಲಿರುವ ನನ್ನ ತೌರುಮನೆಗೆ ಹೋಗಬೇಕೆಂದಿದೇನೆ. ನನ್ನನ್ನು ಕೊಂಡಪಲ್ಲಿಗೆ ಕರೆದುಕೊಂಡು ಹೋಗಿ ಬಿಡುವಿರಾ ? " ಎಂದು ಕೇಳಿದಳು.

" ಅಮ್ಮಾ ! ಅಗತ್ಯವಾಗಿಯೂ ಹಾಗೆ ಮಾಡುವೆನು ಅಬಲೆಯರಾದ ಸ್ತ್ರೀಯರಿಗೆ ಕಷ್ಟಕಾಲದಲ್ಲಿ ಸಹಾಯಮಾಡದ ಮಾನವನ ಬುದ್ಧಿಬಲಗಳಿಂದ ಫಲವೇನು ? ಕಷ್ಟಕಾಲದಲ್ಲಿ ಧೈರ್ಯಕೆಡಬಾರದು. ಮನುಷ್ಯನಿಗೆ ಕಷ್ಟವೂ ಶಾಶ್ವತವಲ್ಲ, ಸುಖವೂ ಶಾಶ್ವತವಲ್ಲ. " ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ " ಎಂಬಂತೆ ಕಷ್ಟಸುಖಗಳು ಬಂದು ಹೋಗುತ್ತಲಿರುವುವು. ಕಷ್ಟ ಬಂದಾಗ ಕುಗ್ಗದೆಯೂ, ಸುಖ ಬಂದಾಗ ಹಿಗ್ಗದೆಯೂ ಇರುವವರೇ ಜ್ಞಾನಿಗಳು. ಅವರಿಗೆ ಎಂತಹ ಕಷ್ಟ ಕಾಲದಲ್ಲಿಯೂ ಬಹಳ ವ್ಯಥೆಯಾಗಲಾರದು. ಆದುದರಿಂದ ಧೈರ್ಯದಿಂದ ಇರಿ. ದೇವರು ನಿಮಗೆ ಒಳ್ಳೆಯದನ್ನು ಮಾಡುವನು.'' ಎಂದು ಕರುಣೆಯಿಂದ ಸಮಾಧಾನಪಡಿಸಿದನು

ಈತನ ಮಾತುಗಳನ್ನು ಕೇಳಿ ಆ ಯುವತಿಯರಿಬ್ಬರಿಗೂ ಬಹಳ ಆನಂದವಾಯಿತು ತಮ್ಮ ಭಾಗ್ಯದೇವತೆಯೇ ಆ ಬ್ರಾಹ್ಮಣನ ರೂಪಿನಿಂದ ತಮಗೆ ಸಹಾಯಮಾಡುತ್ತಿದೆಯೆಂದು ಅವರು ಭಾವಿಸಿದರು.

ಇಪ್ಪತ್ತನೆಯ ಪ್ರಕರಣ.

ರಾಯಚೂರು ದುರ್ಗ.

ಕೃಷ್ಣಾ ತುಂಗಭದ್ರಾನದಿಗಳ ಮಧ್ಯಪ್ರದೇಶದಲ್ಲಿ ರಾಯಚೂರು ಎಂಬ ದುರ್ಗವೊಂದಿರುವುದು. ಆ ದುರ್ಗವು ಸಾಧಾರಣವಾದುದೇ ಆದರೂ ಚರಿತ್ರೆಯಲ್ಲಿ ಬಹಳ ಪ್ರಖ್ಯಾತವಾದುದು. ಈ ಕಥೆಯು ನಡೆದ ಕಾಲದಲ್ಲಿ ಅದು ಬಿಜಾಪುರಕ್ಕೆ ಸೇರಿತ್ತು. ಇದನ್ನು ಕೆಲವು ಕಾಲ ವಿಜಯನಗರದವರೂ ಮತ್ತೆ ಸ್ವಲ್ಪ ಕಾಲ ಬಿಜಾಪುರದವರೂ ವಶಪಡಿಸಿಕೊಳ್ಳುತ್ತಿದ್ದರು. ಇದನ್ನು ವಶಪಡಿಸಿಕೊಳ್ಳಲು ಈ ಎರಡು ರಾಜ್ಯದವರಿಗೂ ಎಷ್ಟೋ ಸಾರಿ ಯುದ್ಧಗಳು ನಡೆದಿದ್ದುವು. ಈ ಗಡಿಯುದುರ್ಗವನ್ನು ತಮ್ಮ ವಶಪಡಿಸಕೊಳ್ಳಬೇಕೆಂದು ಶ್ರೀಕೃಷ್ಣದೇವರಾಯರು ಸಮಯವನ್ನು ಕಾದುಕೊಂಡಿದ್ದರು.

ಈ ಕಾಲದಲ್ಲಿ ಬಿಜಾಪುರಕ್ಕೆ ಇಸ್ಮೆಯಲ್ ಆದಿಲ್‌ಷಹಾ ಎಂಬವನು ದೊರೆಯಾಗಿದ್ದನು. ಅವನು ರಾಯಚೂರನ್ನು ಕಾಪಾಡುವುದಕ್ಕಾಗಿ ತೋಫಲ್‌ಖಾನ್ ಎಂಬವನನ್ನು ನೇಮಿಸಿದ್ದನು. ಇವನು ಮೊದಲು ಹಿಂದುವಾಗಿದ್ದು ಧನಾಪೇಕ್ಷೆಯಿಂದ ಮುಹಮ್ಮದೀಯ ಮತವನ್ನು ಅವಲಂಬಿಸಿದ್ದನು. ಇತರ ಹಿಂದುಗಳನ್ನೂ ಮುಹಮ್ಮದೀಯರನ್ನಾಗಿ ಮಾಡಿ ಅವರಿಗೆ ಉತ್ತಮಗತಿಯನ್ನುಂಟುಮಾಡಬೇಕೆಂದು ಬಹಳವಾಗಿ ಕುತೂಹಲಪಡುತ್ತಿದ್ದನು. ಖಾನನು ಬಹಳ ಶೂರನು. ಆದುದರಿಂದಲೇ ಅವನು ರಾಯಚೂರಂತಹ ಮುಖ್ಯದುರ್ಗದ ಕಾವಲಿಗೆ ನಿಯಮಿತನಾಗಿದ್ದನು. ಈ ತೋಫಲ್‌ಖಾನನು ಹಿಂದುವಾಗಿದ್ದುದರಿಂದ ಇತರ ಮುಹಮ್ಮದೀಯ ಸರದಾರರು ಇವನನ್ನು ಅಷ್ಟು ಉತ್ತಮನೆಂದು ಭಾವಿಸಿರಲಿಲ್ಲ. ಆದುದರಿಂದ

ಒಬ್ಬ ಸಾಮಾನ್ಯನಾದ ಮಹಮ್ಮದೀಯನ ಮಗಳನ್ನು ಮದುವೆಯಾಗಿದ್ದನು. ಇವನು ತನಗಿರುವ ಕುಂದನ್ನು ಒಬ್ಬಳು ಹೆಸರುವಾಸಿಯಾದ ಹಿಂದೂ ಸ್ತ್ರೀಯನ್ನು ಮದುವೆಯಾಗುವುದರಿಂದ ಕಳೆದುಕೊಳ್ಳಬೇಕೆಂದು ನಿರ್ಧರಿಸಿ ಕೊಂಡಿದ್ದನು.

ಒಂದಾನೊಂದು ದಿನ ತೋಫಲ್‌ಖಾನನು ತನ್ನ ಸುಸಜ್ಜಿತವಾದ ಭವನದಲ್ಲಿ ಕುಳಿತುಕೊಂಡು ತನಗಿರುವ ಕುಂದು ಯಾವಾಗ ಕಳೆದುಹೋಗುವುದೋ ಎಂದು ಯೋಚಿಸಿಕೊಳ್ಳುತ್ತಿದ್ದನು. ಆ ಸಮಯಕ್ಕೆ ಸರಿಯಾಗಿ ದ್ವಾರಪಾಲಕನೊಬ್ಬನು ಬಂದು "ರಾಮಯಮಂತ್ರಿಯವರು ಬಂದಿರುವರು. ಅಪ್ಪಣೆಯಾದರೆ, ಕರೆತರುವೆನು" ಎಂದು ಹೇಳಲು, "ಆಗಬಹುದು," ಎಂದನು. ರಾಮಯಮಂತ್ರಿಯು ಬಂದು ಉಚಿತಾಸೀನನಾದ ತರುವಾಯ, "ರಾಮಯಮಂತ್ರಿಗಳೇ! ನೀವು ಹೋದ ಕೆಲಸ ಎಷ್ಟು ಮಟ್ಟಿಗೆ ಕೈಗೂಡಿತು?" ಎಂದು ಕೇಳಿದನು.

ರಾಮಯ—"ಸ್ಥಿರಸಂಕಲ್ಪನಾಗಿ, ರಾಮಯಮಂತ್ರಿಯು ಕೆಲಸಕ್ಕೆ ತೊಡಗಿದಾಗ ಸಫಲವಾಗದ ಕಾರ್ಯವೂ ಇರುವುದೆ?"

ತೋಫಲ್‌ಖಾನ್—"ಶಾಬಾಸ್, ಮಂತ್ರಿಶ್ರೇಷ್ಠರೇ! ನಿಮ್ಮ ಸಾಮರ್ಥ್ಯವೇ ಸಾಮರ್ಥ್ಯ ನಿಮ್ಮ ಪ್ರಜ್ಞಾವಾತೂಲದ ಮುಂದೆ ಮಿಕ್ಕವರ ಉಪಾಯಗಳೆಲ್ಲವೂ ತೂಲರಾಶಿಯಂತೆಯೇ. ಆ ಸ್ತ್ರೀಲಾಭವು ಯಾವ ಸ್ಥಳವನ್ನು ಅಲಂಕಾರಭೂತವನ್ನಾಗಿ ಮಾಡಿರುವುದು?" ಎಂದು ಅಧಿಕ ಸಂತೋಷದಿಂದ ಪ್ರಶ್ನಿಸಿದನು

ರಾಮಯ—"ಆ ಸುಂದರಿಯು ತನ್ನ ಒಬ್ಬಳು ಸಖಿಯೊಡನೆ ತಮ್ಮ ದುರ್ಗದಲ್ಲಿಯೇ ಇರುವ ಧರ್ಮಸತ್ರದಲ್ಲಿರುವಳು. ಈ ಶುಭವರ್ತಮಾನವನ್ನು ತಮಗೆ ತಿಳಿಸಬೇಕೆಂದೇ ಬಂದೆನು."

ತೋಘಲ್‌ಖಾನ—“ ಅಯ್ಯೋ ! ಇದೇನು ಹೀಗೆ ಮಾಡಿದಿರಿ ? ಈ ನನ್ನ ಸುಂದರಭವನವನ್ನು ಆಕೆಯಿಂದ ಅಲಂಕರಿಸದೆ, ಯಾವುದೋ ಧರ್ಮ ಸತ್ರದಲ್ಲಿ ಇಳಿಸಿಬಿಟ್ಟಿರಲ್ಲಾ! ಈ ಮಾತನ್ನು ಕೇಳದಾಗಿನಿಂದಲೂ ನನ್ನ ಮನಸ್ಸು ಬಹಳವಾಗಿ ವಿಹ್ವಲವಾಗಿದೆ. ಕೂಡಲೆ ಸೇವಕರನ್ನು ಕಳುಹಿಸಿ ಇಲ್ಲಿಗೆ ಕರೆಯಿಸುವೆನು.”

ರಾಮಯ—“ ಖಾನಸಾಹೇಬರೇ ! ತ್ವರೆಪಟ್ಟು ಸೇವಕರನ್ನು ಕಳು ಹಿಸಬೇಡಿರಿ. ಅದರಿಂದ ಕೆಲಸ ಕೆಟ್ಟೀತು. ಅವರಿಗೆ ಮೆತ್ತಗೆ ಪುಸಲಾ ಯಿಸಿ ಸಂಶಯಕ್ಕೆ ಎಡೆಗುಡದೆ ಇಲ್ಲಿಯವರೆಗೂ ಕರೆತಂದುದಾಗಿದೆ. ಈಗ ಎಚ್ಚರಿಕೆಯಿಂದ ನಡೆದುಕೊಳ್ಳದಿದ್ದರೆ ಸ್ತ್ರೀಜನಸಹಜವಾದ ಸಂಶಯವನ್ನು ಹೆಚ್ಚಿಸಿ ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ ಮಾಡಿಕೊಳ್ಳಬಹುದು. ಆ ಯುವತಿಯು ಚಕ್ರವರ್ತಿಯ ಸಹವಾಸದಲ್ಲಿದ್ದುಕೊಂಡು ಆತನಲ್ಲಿ ಪರಿ ಪೂರ್ಣಾನುರಾಗ ಹೊಂದಿದ್ದವಳು. ಅಂತಹವಳನ್ನು ಸ್ವಾಧೀನಪಡಿಸಿ ಕೊಳ್ಳುವುದು. ಸುಲಭವಲ್ಲ. ಅನೇಕಕಾಲ ಕಷ್ಟಪಟ್ಟು ನಿಮ್ಮಲ್ಲಿ ಅನು ರಾಗ ಹುಟ್ಟುವಂತೆ ಮಾಡಿಕೊಳ್ಳಬೇಕು. ದುಡುಕಿದರೆ ಆಕೆಯು ಆತ್ಮಹತ್ಯ ವನ್ನಾದರೂ ಮಾಡಿಕೊಳ್ಳಬಹುದು ಆದುದರಿಂದ ಬಲು ಎಚ್ಚರಿಕೆಯಿಂದ ಈಕಾರ್ಯವನ್ನು ಸಾಧಿಸಿಕೊಳ್ಳುವುದು ತಮಗೆ ಸೇರಿದೆ ” ಎಂದನು.

ತೋಘಲ್‌ಖಾನ—“ ಮಂತ್ರಿವರ್ಯರೇ ! ನಾನು ಬಹಳ ದಿವಸ ತಡೆ ದುಕೊಂಡಿರಲಾರೆ. ಅನಂಗಸೇನೆಯನ್ನು ನಾನು ಕಾಣದವನಲ್ಲ. ಕೊಂಡ ಪಲ್ಲಿಯಲ್ಲಿರುವ ಆಕೆಯ ತಂದೆಯು ನನಗೆ ಪರಿಚಿತನೆಂಬುದು ತಮಗೆ ತಿಳಿದೇ ಇದೆ. ನನ್ನ ಪರಿಚಿತನ ಮಗಳನ್ನು ನನ್ನ ದುರ್ಗಕ್ಕೇ ಕರೆತಂದು ಬಿಟ್ಟಿರುವಾಗ, ಆಕೆಯನ್ನು ನೋಡದೆ ನಾನು ಹೇಗೆ ಸುಮ್ಮನಿರಲು ಆಗು ವುದು ? ”

ರಾಮುಯ.—" [illegible]ಸಾಹೇಬರೇ! ಕಷ್ಟವಾದರೂ ತಡೆಯಬೇಕಾ ಗಿದೆ. ಅಪಾಯಕರವಾದ [illegible] ವೈದ್ಯನು ನಿಷೇಧಿಸುವಾಗ ಅಪಥ್ಯಪದಾ ರ್ಥವನ್ನು ಬಿಡಬೇಕಲ್ಲವೆ? ಹಾಗೆಯೇ, ಪಂಡಿತನ ಕುವರಿಯಾದರೂ ಅನಂ ಗಸೇನೆಯನ್ನು ಈಗ [illegible]. ನಿಮಗೆ ಅಕಸ್ಮಾತ್ತಾಗಿ ಕಾಣಿಸಿ[illegible] ಪ್ರಕಟವಾಗಬಹುದು. ತಾವು ಇಷ್ಟು ಕುತೂಹಲ [illegible] ಯಾತ್ರಿಕನಾಗಿ ಆಕೆಯ ಸಂದರ್ಶನ ವನ್ನು [illegible] ಹೋದನು. ಅಲ್ಲಿ ಆ ಯುವತಿಯ [illegible]ಕೊಳ್ಳುತ್ತಿದ್ದರು:—

ಅನಂ[illegible] "[illegible]! [illegible]ಬ್ರಾಹ್ಮಣನು ನನ್ನೊಡನೆ ಬಂದುದ ರಿಂದ ನನಗೆ ಸ್ವಲ್ಪವೂ ಕಷ್ಟವಾಗಲಿಲ್ಲ."

[illegible] ಹೇಳುತ್ತಿದ್ದ ಅತಿವಿನೋದಕರವಾದ ಕಥೆಗಳಿಂದ ನಮ್ಮ [illegible] ಸ್ವಲ್ಪವಾದರೂ [illegible]ವಾಗಿತೋರಲಿಲ್ಲ."

ಅನಂಗ—"ಇದ[illegible] ದೊಡ್ಡ ದುರ್ಗದಂತೆ ತೋರುವುದು. ಇದು [illegible] ರಾಜ್ಯಕ್ಕೆ [illegible]"

[illegible]—"ಇದು ರಾಯಚೂರುದುರ್ಗವಂತೆ. ಹಿಂದೆ ಇದು ವಿಜಯ ನಗರ ರಾಜ್ಯಕ್ಕೆ [illegible]. ಈಗ ವಿಜಾಪುರದ ರಾಜ್ಯಕ್ಕೆ ಸೇರಿದೆಯಂತೆ. ನಮ್ಮನ್ನು [illegible] ಬ್ರಾಹ್ಮಣನು ಇಲ್ಲಿಗೇಕೆ ಕರೆತಂದನು?"

ಅನಂಗ—"ಬ್ರಾಹ್ಮಣನು ಬಹಳ ಒಳ್ಳೆಯವನು. ಆತನು ನಮ್ಮನ್ನು ದುರಭಿಪ್ರಾಯದಿಂದ ಇಲ್ಲಿಗೆ ಕರೆತಂದಿರಲಾರನು. ಸುರಕ್ಷಿತವಾಗಿರಲೆಂದು, ದಾರಿಯಲ್ಲಿ ಸಿಕ್ಕಿದ ಇಲ್ಲಿಗೆ ಕರೆತಂದಿರಬಹುದು. ಕೆಲವು ಮಜಲಿನಲ್ಲೇ ನಮ್ಮ ಕೊಂಡಪಲ್ಲಿಯು ಸಿಕ್ಕುವುದು."

ಇಷ್ಟರಲ್ಲಿ ರಾಮುಯನು ಎಂದು ಆ ಯುವತಿಯರಿದ್ದ ಕೋಟಡಿಯನ್ನು ಹೊಕ್ಕನು. ಕೂಡಲೆ ಅನಂಗಸೇನೆಯು "ಸ್ವಾಮಿ! ಈ ದಿನದ ಪಯಣವು

ಮುಗಿಯಿತೋ ಅಥವಾ ಇನ್ನೂ ಕೆಲವು ದೂರ ಪ್ರಯಾಣಮಾಡಬೇಕಾಗಿರುವುದೋ ?" ಎಂದು ಕೇಳಿದಳು.

ಸದಾಶಿವಭಟ್ಟ—"ಈ ದಿನ ಬಹಳ ದೂರ ಪ್ರಯಾಣ ಮಾಡಿದ್ದೇವೆ. ನನಗೇ ಸಾಕಾಯಿತು. ಆದುದರಿಂದ ಕುಸುಮಕೋಮಲೆಯರಾದ ನಿಮಗೆ ಮತ್ತೆಷ್ಟು ಆಯಾಸವಾಗಿದೆಯೋ! ಈ ದಿನ ಇಲ್ಲಿ ತಂಗಿದ್ದು ನಾಳೆ ಮುಂದಕ್ಕೆ ಪಯಣಮಾಡೋಣ."

ಅನಂಗ—"ಈ ದುರ್ಗವು ಯಾರದು ? ಇದಕ್ಕೆ ಅಧಿಪತಿ ಯಾರು ?"

ಸದಾ—"ಅಮ್ಮಾ ! ಇದು ಬಿಜಾಪುರಕ್ಕೆ ಸೇರಿದುದು. ಈಗ ಇದಕ್ಕೆ ತೋಫಲ್‌ಖಾನನೆಂಬಾತನು ಅಧಿಕಾರಿಯಾಗಿರುವನು. ಆತನು ನನಗೆ ಮಿತ್ರನು." ಎಂದನು.

ಅನಂಗ—"ಸ್ವಾಮಿ! ತಮ್ಮ ಮಾತುಗಳನ್ನು ಕೇಳಿ ನನಗೆ ಭಯವಾಗುತ್ತಿದೆ"

ಸದಾ—"ಅಮ್ಮಾ ! ಹೀಗೇಕೆ ಹೆದರುವಿ? ಹೆದರಲು ಕಾರಣವೇನಿದೆ? ಮಂತ್ರೋಪಾಸನಾಶಕ್ತಿಯಿರುವ ನನಗೆ ಕೋಪಬಂದರೆ, ಲಕ್ಷಾಂತರ ಸೈನ್ಯಗಳೊಡನೆ ರಾಜಾಧಿರಾಜರು ಇದಿರುಬಿದ್ದರೂ, ಅವರನ್ನು ನಿಗ್ರಹಿಸಬಲ್ಲೆನು. ನನ್ನನ್ನು ಸಾಮಾನ್ಯನೆಂದು ತಿಳಿಯಬೇಡ. ನಿನ್ನ ಹೆದರಿಕೆಗೆ ಕಾರಣವನ್ನು ತಿಳಿಸು. ಅದಕ್ಕೆ ಆಧಾರವೇನಾದರೂ ಇದೆಯೋ ವಿಮರ್ಶಿಸಿ ತಿಳಿಸುವೆನು."

ಈ ಪೌರುಷದ ಮಾತುಗಳಿಂದ ಅನಂಗಸೇನೆಯ ಅರ್ಧ ಹೆದರಿಕೆಯು ಶಾಂತವಾಯಿತು. ಬಳಿಕ ಆಕೆಯು "ಸ್ವಾಮಿ! ಬಹುಕಾಲದಿಂದಲೂ ತಮ್ಮ ಪರಿಚಯವು ಇಲ್ಲವಾದುದರಿಂದಲೂ, ಹೊಸಸ್ಥಳಕ್ಕೆ ಬಂದಿರುವುದರಿಂದಲೂ, ಅಪರಿಚಿತರಾದ ಮಹಮ್ಮದೀಯರ ಹೆಸರನ್ನು ಕೇಳಿದುದರಿಂದಲೂ ನಮಗೆ ಸ್ವಾಭಾವಿಕವಾಗಿ ಹೆದರಿಕೆಯುಂಟಾಯಿತು." ಎಂದು ಹೇಳಿದಳು.

ಸದಾ—"ತಾಯಿ! ನಿನ್ನ ಅಭಿಪ್ರಾಯವು ನನಗೆ ತಿಳಿಯಿತು. ಮಹಮ್ಮದೀಯರಲ್ಲಿ ಎಲ್ಲರೂ ಕೆಟ್ಟವರಲ್ಲ. ಒಳ್ಳೆಯವರೂ ಸಿಕ್ಕುವರು. ಈ ದುರ್ಗಾಧಿಪತಿಯು ಬಹಳ ಸಜ್ಜನನು. ಆತನಿಗೆ ಹಿಂದುಗಳು ಮಹಮ್ಮದೀಯರು ಎಂಬ ಭೇದವಿಲ್ಲ. ಆತನು ನನಗೆ ಪರಮಾಪ್ತನು. ಆದುದರಿಂದ ನಿನಗೆ ಯಾರಿಂದಲೂ ಇಲ್ಲಿ ಭಯವುಂಟಾಗಲಾರದು."

ಅನಂಗ—"ತಾವು ಇಷ್ಟು ಧೈರ್ಯ ಹೇಳುವುದರಿಂದ ನಮ್ಮ ಹೆದರಿಕೆಯೆಲ್ಲವೂ ಹೋಯಿತು. ನಮ್ಮನ್ನು ಕಾಪಾಡುವಭಾರ ತಮ್ಮದೇ. ನಿಮ್ಮನ್ನೇ ನಂಬಿಕೊಂಡಿರುವುದರಿಂದ ನಮಗೆ ವಿಶ್ವಾಸಘಾತವುಂಟಾಗಲಾರದೆಂದು ದೃಢವಾಗಿ ತಿಳಿದುಕೊಂಡಿದೇವೆ."

ಸದಾ—"ಅಮ್ಮ! ನೀವು ನನ್ನನ್ನು ಸಂಪೂರ್ಣವಾಗಿ ನಂಬಬಹುದು. ಈ ಧರ್ಮಸತ್ರವು ಗಟ್ಟಿಯಾಗೇನೋ ಕಟ್ಟಿರುವುದು. ಆದರೂ ಇಲ್ಲಿ ನೀವುಗಳು ಇರುವುದು ಅಷ್ಟು ಯುಕ್ತವಾಗಿಲ್ಲ. ಆದುದರಿಂದ ಬೇರೊಂದು ಸ್ಥಳಕ್ಕೆ ಹೋಗಿ ಅಲ್ಲಿ ಇಳಿದುಕೊಳ್ಳೋಣ. ಆ ಸ್ಥಳದಲ್ಲಿ ರಾಜಭಟರು ಯಾವಾಗಲೂ ಕಾವಲಾಗಿಯೇ ಇರುವರು. ಆದುದರಿಂದ ಅತ್ಯಂತ ಸುರಕ್ಷಿತವಾದ ಸ್ಥಳ. ಅಲ್ಲಿಗೆ ಹೋಗೋಣ." ಎಂದು ಹೇಳಿ ಅವರನ್ನು ಮತ್ತೊಂದು ಸ್ಥಳಕ್ಕೆ ಕರೆದುಕೊಂಡು ಹೋದನು.

ಆ ಯುವತಿಯರಿಗೆ ಒಂದುಕಡೆ ಹೆದರಿಕೆಯೂ, ಮತ್ತೊಂದುಕಡೆ ಧೈರ್ಯವೂ ಉಂಟಾದುವು. ಆದರೂ ಈ ಸಂದರ್ಭದಲ್ಲಿ ಅವರಿಗೆ ಸ್ವಲ್ಪವಾದರೂ ದಿಕ್ಕು ತೋಚದೆ, ಹೇಳಿದಂತೆ ಕೇಳುವುದೇ ಒಳ್ಳೆಯದೆಂದು ತೋರಿತು. ಆದುದರಿಂದ ಅವನ ಸಂಗಡಲೇ ಹೊರಟರು. ಅವರನ್ನು ಒಂದು ಕೊಟಡಿಗೆ ಕರೆದುಕೊಂಡು ಹೋಗಿ ಬಿಟ್ಟು "ನಾಳೆಯ ಬೆಳಗ್ಗೆ ಹೊರಡೋಣ. ಈಗಿನ ಆಹಾರಕ್ಕೆ ಏರ್ಪಾಡುಮಾಡಿದೇನೆ. ನಿಮಗೆ ಬಬ್ಬಳು ಆಹಾರವನ್ನು

ತರುವಳು. ಅದನ್ನು ಸೇವಿಸಿ ಚೆನ್ನಾಗಿ ನಿದ್ರೆಮಾಡಿಕೊಳ್ಳಿರಿ. ಧೈರ್ಯದಿಂದಿರಿ. ಸರಿಹೊತ್ತಿಗೇ ಬಂದು ಎಚ್ಚರಿಸುವೆನು." ಹೀಗೆ ಹೇಳಿ [illegible]ನು ಹೊರಟುಹೋದನು.

೩೧ ನೆಯ ಪ್ರಕರಣ.

ಧರ್ಮಸತ್ರ.

ತಾವದ್ವೃತ್ತೀಃಪ್ರತಿಷ್ಠಾಂ [illegible] |
ತಾವತ್ [illegible] ||
ಕಾಳಿಂದೀಪ್ರ[illegible] |
ಯಾವನ್ನೋ[illegible] ||

ಭರತಖಂಡದಲ್ಲಿ ಪ್ರವಹಿಸುತ್ತಿರುವ ಪ್ರಸಿದ್ಧ ನದಿಗಳಲ್ಲಿ ತುಂಗಭದ್ರೆಯು ಒಂದು. ಅದು ಪಶ್ಚಿಮಘಟ್ಟ ಪರ್ವತಗಳಲ್ಲಿ ಹುಟ್ಟಿ ಸುಮಾರು ೨೧೦ ಮೈಲುಗಳ ದೂರ ಪೂರ್ವಾಭಿಮುಖವಾಗಿ ಹರಿದು ಕೃಷ್ಣಾನದಿಯನ್ನು ಸೇರುವುದು. ತುಂಗಭದ್ರಾ ತೀರದಲ್ಲಿ ಇರುವ ಪ್ರಸಿದ್ಧವಾದ ಪಟ್ಟಣ ನಗರಗಳಲ್ಲಿ ಆದವಾನಿಯು ಒಂದು. ಈ ಪುರದಲ್ಲಿ ಪಥಿಕರು ಇಳಿದುಕೊಳ್ಳುವ ಧರ್ಮಸತ್ರ ಒಂದು ಇತ್ತು. ಒಂದುರಾತ್ರಿ ಬಹಳ ಹೊತ್ತು ಕಳೆದಮೇಲೆ, ಕೆಲವರು ಪ್ರಯಾಣಿಕರು ಇಲ್ಲಿಗೆ ಬಂದು ಇಳಿದುಕೊಂಡರು. ದಾರಿಯಲ್ಲಿ ಬಹಳ ದಣಿದು ಇದ್ದುದರಿಂದ, ಅವರಲ್ಲಿ ಒಬ್ಬನು ವಿನಾ ಉಳಿದವರೆಲ್ಲರೂ ಮಲಗಿಕೊಂಡು ನಿದ್ರಿಸುತ್ತಿದ್ದರು. ಎಚ್ಚರದಿಂದಿದ್ದ ಮನುಷ್ಯನ ಕೈಯಲ್ಲಿ

ಒಂದು ಕತ್ತಿಯನ್ನು ಹಿಡಿದುಕೊಂಡು, ಅತ್ತಿತ್ತ ಸುತ್ತಾಡುತ್ತ ಕಾವಲು ಕಾದಿದ್ದನು. ಕಾರ್ಯಭಾರವು ತಲೆಯಮೇಲೆ ಇರಲು, ಕರ್ತವ್ಯನಿರತನಾದ ಯಾವನಿಗೆ ತಾನೆ ನಿದ್ರೆಯು ಬಂದೀತು? ಆ ಮನುಷ್ಯನು ಎಚ್ಚರದಿಂದಿರುವುದಕ್ಕೆ ಮತ್ತೂ ಒಂದು ಕಾರಣವಿತ್ತು. ಆವನು ತಾನು ಕಾದಿದ್ದ ಯುವತಿಗಳಲ್ಲೊಬ್ಬಳಲ್ಲಿ ಅನುರಕ್ತನಾಗಿದ್ದುದರಿಂದ ಅವಳಿಗೆ ಸೇವೆಮಾಡುವುದು ಆತನಿಗೆ ಬಹಳ ಸಂತೋಷಕರವಾಗಿತ್ತು. ಬಹುಕಾಲದಿಂದ ತನ್ನ ಅನುರಾಗಕ್ಕೆ ಪಾತ್ರಳಾಗಿದ್ದ ಆ ಯುವತಿಯನ್ನು ಶತ್ರುಸಮೂಹದಿಂದ ತಪ್ಪಿಸಿ ಕರೆದುಕೊಂಡು ಹೋಗಬೇಕೆಂದು ಪ್ರಯತ್ನಮಾಡಿಕೊಂಡಿದ್ದನು. ಆ ಯುವತಿಯನ್ನು ರಕ್ಷಿಸಬೇಕೆಂದು ದೃಢಮನಸ್ಸಿನಿಂದಲೂ, ಹೀಗೆ ಉಪಕೃತಳಾಗುವ ಸ್ತ್ರೀಯು ತನಗೆ ಪ್ರೀತಿಪಾತ್ರಳಾಗುವುದರಿಂದಲೂ, ಆ ಪುರುಷನು ದಾರಿಯಲ್ಲಿ ಎಲ್ಲರಂತೆಯೇ ಬಳಲಿದ್ದರೂ ಅವನು ನಿದ್ದೆಬರಲಿಲ್ಲ. ಹೀಗೆ ಅವನು ಕಾದುಕೊಂಡು ಇರಲು ಆಗತಾನೆ ಹುಟ್ಟುತ್ತಿದ್ದ ಶುಕ್ರಗ್ರಹವನ್ನು ಕಂಡು, ಬೆಳಕು ಹರಿಯುವ ಸಮಯವಾಯಿತೆಂದು ತಿಳಿದು ಮುಂದಿನ ಪ್ರಯಾಣಕ್ಕೆ ಅವರನ್ನು ಸಿದ್ಧಪಡಿಸಬೇಕೆಂದು ಯೋಚಿಸಿಕೊಳ್ಳುತ್ತಿದ್ದನು. ಇಷ್ಟರಲ್ಲೇ ಅವನಿಗೆ ಪ್ರೀತಿಪಾತ್ರಳಾಗಿದ್ದ ಯುವತಿಯು ಎಚ್ಚರಗೊಂಡುದರಿಂದ ಆಕೆಗೂ ಕಾವಲಿದ್ದಾತನಿಗೂ ಈ ಮೇರೆಗೆ ಸಂಭಾಷಣೆಯು ನಡೆಯಿತು :—

ಯುವತಿ—"ರುದ್ರದೇವ! ಈ ರಾತ್ರಿ ಸ್ವಲ್ಪ ಹೊತ್ತಾದರೂ ನಿದ್ರಿಸಿದಂತೆ ಕಾಣುವುದಿಲ್ಲವಲ್ಲಾ? ಪಾಪ! ನೀನು ನಮಗಾಗಿ ಎಷ್ಟು ಕಷ್ಟಪಡುತ್ತಿರುವೆ? ನಾನು ಸ್ವಲ್ಪಹೊತ್ತು ಕಾದಿರುವೆನು, ನೀನು ನಿದ್ದೆ ಹೋಗು."

ರುದ್ರದೇವ—"ಮುಕ್ತಾಂಬೆ! ರಾಮಯಮಂತ್ರಿಯು ನನಗೆ ಈ ಕಾರ್ಯವನ್ನು ಒಪ್ಪಿಸಿದಾಗಲೇ ನಾನು ನಿದ್ದೆಯನ್ನು ಬಿಟ್ಟೆನು. ಆತನು ತನ್ನ ಬುದ್ಧಿಚಾತುರ್ಯದಿಂದ ನಿನ್ನನ್ನು ಶತ್ರುಪುರದಿಂದ ತಪ್ಪಿಸಿ, ನನಗೆ ಒಪ್ಪಿಸಿ, ಶತ್ರುಗಳ ಕೈಗೆ ಪುನಃ ಬೀಳದಂತೆ ಕರೆದುಕೊಂಡು ಬರಬೇಕೆಂದು

ಆಜ್ಞಾಪಿಸಿರುವನು! ನಾನು ಸ್ವಲ್ಪ ಮಾತ್ರ ಅಶ್ರದ್ಧೆಯಿಂದಿದ್ದರೂ ನಿನಗೆ ಕಷ್ಟವು ಸಂಭವಿಸುವುದು ಮಾತ್ರವಲ್ಲದೆ ಮಂತ್ರೀಶ್ವರನ ಪ್ರಯಾಸವೆಲ್ಲವೂ ಸಂಪೂರ್ಣವಾಗಿ ನಷ್ಟವಾಗುವುದು."

ಮುಕ್ತಾಂಬೆ—"ಹೌದು, ಚೆನ್ನಾಗಿ ಹೇಳಿದೆ. ನನ್ನನ್ನು ತಪ್ಪಿಸಿಕೊಂಡು ಬರುವುದಕ್ಕಾಗಿ ರಾಮಯ್ಯಮಂತ್ರಿಯು ಬಹಳ ಕಷ್ಟಪಟ್ಟನು. ಭಯಂಕರ ಶಾರ್ದೂಲಗಳಂತೆ ಆ ರಕ್ಷಕಭಟರು ಹಗಲೂ ರಾತ್ರಿಯೂ ಕಾವಲುಕೊಂಡಿರಲು, ತಪ್ಪಿಸಿಕೊಂಡು ಹೋಗುವುದು ಹೇಗೆಂದು ಚಿಂತಿಸುತ್ತಿದ್ದೆನು. ಹೀಗಿರಲು ಆ ಮಹನೀಯನು ನಿರಪಾಯವಾಗಿಯೂ ನಿರಾತಂಕವಾಗಿಯೂ ತಪ್ಪಿಸಿ, ಮುಹೂರ್ತಮಾತ್ರದಲ್ಲಿ ನಗರದಿಂದ ಹೊರಕ್ಕೆ ಕರೆತಂದನು. ಆತನು ಆ ನಗರಿಯನ್ನು ಸುಡುತ್ತಿರಲು, ಪೌರರು ಸುಮ್ಮನಿದ್ದರೇ?"

ರುದ್ರ—"ಏನು ಮಾಡುವರು? ತಾನೇ ಬರಲು ಪ್ರಯತ್ನಿಸಿದ್ದರೆ ತನ್ನನ್ನು ಹಿಡಿದು ಕೊಂಡು ಹೋಗಿ ಕೊಲ್ಲುವರೆಂದು ತಿಳಿದು ಅವನು ಹಾಗೆ ಮಾಡಲಿಲ್ಲ. ಸಾಧಾರಣವಾಗಿ, ಹುಡುಗರಿಗೆ ಒಳ್ಳೆಯ ಮಾತುಗಳನ್ನಾಡಿದರೆ ಅವರು ಉಬ್ಬಿಹೋಗುವರು. ಇದನ್ನು ತಿಳಿದು ಹುಡುಗರನ್ನು ಶೈವಮಠದ ಹತ್ತಿರಕ್ಕೆ ಕರೆದುಕೊಂಡು ಹೋಗಿ, ಲಂಕಾದಹನ ಕಾಲದಲ್ಲಿ ಇದ್ದ ಆಂಜನೇಯನ ವೇಷವನ್ನು ಹುಡುಗರಿಂದ ಹಾಕಿಸಿಕೊಂಡು, ಅವರಾಗಿ ಅವರೇ ಪುರಕ್ಕೆ ಬೆಂಕಿಹೊತ್ತಿಸುವ ಹಾಗೆ ತಂತ್ರಮಾಡಿದನು. ರಾಮಯ್ಯನ ಮಂತ್ರಶಕ್ತಿಯನ್ನು ಭೇದಿಸುವುದು, ದೊಡ್ಡ ದೊಡ್ಡ ಮಂತ್ರಿಗಳಿಗೇ ಸಾಧ್ಯವಿಲ್ಲ. ಹೀಗಿರಲು ಆ ಬಾಲಕರಿಗೆ ಏನು ತಿಳಿಯುವುದು? ಆತನು ಅವಕಾಶಕೊಟ್ಟಂತೆಲ್ಲಾ ಬಾಲಕರು ರೇಗಿಸುತ್ತ ಹೋದರು. ವಿನೋದವು ಹೆಚ್ಚುತ್ತಲೂ, ದೊಡ್ಡವರೂ ಚಿಕ್ಕವರಂತೆಯೇ ವಿನೋದಮಗ್ನರಾದರು. ಬಿರುಗಾಳಿಯು ಬೀಸುತ್ತಿದ್ದುದು ಆತನ ಉದ್ದೇಶಕ್ಕೆ

ಸಹಾಯವಾಯಿತು. ಹೀಗೆ ಹಾಗೆ ಸ್ವಲ್ಪ ಹೊತ್ತು ವಿನೋದಿಸಿ, ದುರ್ಗ ರಕ್ಷಕಭಟರ ಮನೆಗಳಿಗೆ ಬೆಂಕಿಹೊತ್ತಿಸಿದನು ಈ ವಿಪತ್ತನ್ನು ತಪ್ಪಿಸುವುದಕ್ಕಾಗಿ ರಕ್ಷಕಭಟರು ತ್ವರೆಯಿಂದ ಓಡಿಹೋಗುವರೆಂದೂ, ಆಗ ನಿಮ್ಮೆಲ್ಲರನ್ನೂ ನಿರಪಾಯವಾಗಿ ತಪ್ಪಿಸಿಕೊಂಡು ಬರಬಹುದೆಂದೂ ದೂರದೃಷ್ಟಿಯಿಂದ ಯೋಚಿಸಿ, ಈ ಕಾರ್ಯಸಾಧನೆ ಮಾಡಿರುವನು''

ಮುಕ್ತಾಂಬೆ—''ರಾಮರಾಯಮಂತ್ರಿಯ ಕೆಲಸವು ಅತಿಘೋರವಾದುದು! ಆ ಪಾಪರ ಗೋಳು ಇನ್ನೂ ನನ್ನ ಕಿವಿಗೆ ಕೇಳಿಸುವಂತಿದೆ. ಅದನ್ನು ನೆನೆದುಕೊಂಡರೆ ನನಗೆ ಬಹಳ ಕಷ್ಟವಾಗುವುದು.''

ರುದ್ರ—''ಸುಂದರಿ! ನೀನು ಭಯಸ್ವಭಾವದವಳು, ನವನೀತಹೃದಯಳು ಆದುದರಿಂದಲೇ ಅತ್ಯಲ್ಪವಾದ ಘೋರಕೃತ್ಯವನ್ನು ಕಂಡರೂ ಭಯಪಟ್ಟು ಸಂತಾಪಪಡುತ್ತಿರುವೆ ನಮ್ಮಂತಹವರಿಗೆ ಅದೊಂದು ಲೆಕ್ಕವೆ?''

ಮುಕ್ತಾಂಬೆ—''ಎಷ್ಟಾದರೂ ಪುರುಷರು ಕಠಿನಹೃದಯರು. ಎಂತಹ ಘೋರಕೃತ್ಯಕ್ಕಾದರೂ ಹೆದರುವುದಿಲ್ಲ.''

ರುದ್ರ—''ಪುರುಷರು ಶತ್ರುಗಳ ವಿಷಯದಲ್ಲಿ ಮಾತ್ರ ಕಠಿನಹೃದಯರೇ ಹೊರತು ಮಿಕ್ಕವರಲ್ಲಿ ಸಾಧುಸ್ವಭಾವದವರೇ, ಮೃದುಹೃದಯರೇ.''

ಮುಕ್ತಾಂಬೆ—''ಎಲ್ಲರ ಮಾತನ್ನು ಕಟ್ಟಿಕೊಂಡೇನು? ನಿನ್ನ ವಿಷಯ ಹೇಳು ನೀನು ಕಠಿನಹೃದಯನು ಹೌದೋ, ಅಲ್ಲವೋ? ಶತ್ರುಗಳದಿರಿಗೆ ಕಠಿನಹೃದಯನೆಂದು ಹೇಳುತ್ತಿರುವೆ. ನಾನು ನಿನಗೆ ಶತ್ರುವಾಗಿರುವುದರಿಂದಲೇ, ನನ್ನ ವಿಷಯದಲ್ಲಿ ನೀನು ಇಷ್ಟು ಕಠಿನಹೃದಯನಾಗಿರುವಿಯಾ?'' ಎಂದು ಮಂದಹಾಸದಿಂದ ಪ್ರಶ್ನಿಸಿದಳು.

ಈ ಮಾತುಗಳನ್ನು ಕೇಳಿ ಆತನು ಸಿಡಿಲುಬಡಿದವನಂತಾದನು. ಏನನ್ನೂ ಮಾತನಾಡದೆ ಸ್ವಲ್ಪಹೊತ್ತು ಸುಮ್ಮನಿದ್ದನು ಕಡೆಗೆ ಧೈರ್ಯ

ವನ್ನು ತಂದುಕೊಂಡು, "ಓ ಸುಂದರಿ! ಇದೇನು ಹೀಗೆ ಮಾತನಾಡುತ್ತಿದ್ದೀಯೆ? ಯುವ ಸುಂದರಿಯ ವದನೇಂದುಬಿಂಬಸಂದರ್ಶನದಿಂದ ನನ್ನ ಹೃದಯಕೈರವವು ವಿಕಸಿತವಾಗುತ್ತಿರುವುದೋ, ಅಂತಹ ಸ್ತ್ರೀಯು ನನಗೆ ಶತ್ರುವಾಗುವುದು ಹೇಗೆ! ಓ ರಾಜಪುತ್ರಿ! ನಿನ್ನ ಸಂದರ್ಶನವು ಲಭ್ಯವಾಗದಿದ್ದ ದಿನ ನನ್ನ ನೇತ್ರಗಳು, ನಿನ್ನ ಮಧುರವಚನಗಳನ್ನು ಕೇಳದಿದ್ದ ದಿನ ನನ್ನ ಕಿವಿಗಳೂ ವ್ಯರ್ಥವಾದುವೆಂದು ನೆನೆಸಿ, ಲೋಕದಲ್ಲಿ ಆನಂದಸಂದಾಯಕವಾದ ವಸ್ತುವು ನಿನಗಿಂತ ಬೇರೆಯಿಲ್ಲವೆಂದು ಎಣಿಸಿಕೊಂಡಿದ್ದರೂ, ನೀನು ಹೀಗೆ ಹೇಳುತ್ತಿರುವುದು ಉಚಿತವೇ!?" ಎಂದು ಅತ್ಯಂತ ವ್ಯಸನದಿಂದ ಹೇಳಿದನು.

ಮುಕ್ತಾಂಬೆ—"ರುದ್ರದೇವ! ನೀನು ಬಹಳ ಯೋಗ್ಯನಾಗಿರಬಹುದು. ನನ್ನಲ್ಲಿ ನಿನಗೆ ಪ್ರೇಮಾನುರಾಗವೂ ಇರಬಹುದು. ಆದರೆ ಒಬ್ಬರ ಅಭಿಪ್ರಾಯವನ್ನು ತಿಳಿಯಬೇಕಾದರೆ ಅವರ ವರ್ತನಗಳಿಂದಲೇ ಅಲ್ಲವೆ ತಿಳಿಯಬೇಕು? ಆದುದರಿಂದ ನಿನ್ನ ಅಭಿಪ್ರಾಯಗಳು ಎಂತಹವು ಎಂಬುದನ್ನು ನಿನ್ನ ವರ್ತನಗಳಿಂದಲೇ ತಿಳಿದುಕೊಳ್ಳಬೇಕು. ಇದನ್ನು ಬಿಟ್ಟರೆ ಬೇರೆ ಯಾವ ಉಪಾಯವೂ ಇಲ್ಲ."

ರುದ್ರ—"ಮುಕ್ತಾಂಬೆ! ಈ ಹೊತ್ತು ಏನೇನೋ ಹೊಸ ಮಾತುಗಳು ಕೇಳಬರುತ್ತಿವೆ. ನನ್ನ ಪ್ರಾಣವನ್ನೂ ಪಣ ಕಟ್ಟಿಗೆ ಹೇಳು. ನಿನ್ನ ವಿಷಯದಲ್ಲಿ ನನ್ನ ಮನಸ್ಸು ನಿಷ್ಕಪಟವಾಗಿರುವುದೆಂದು ನಿಜವಾಗಿಯೂ ನಂಬು. ನನ್ನ ವರ್ತನದಲ್ಲಿ ನಿನಗೆ ಸಂಶಯವೇನಾದರೂ ಹುಟ್ಟಿದ್ದರೆ, ನನಗೆ ತಿಳಿಸಿ ನನ್ನ ಚಿಂತೆಯನ್ನು ಹೋಗಲಾಡಿಸು."

ಮುಕ್ತಾಂಬೆ—"ರುದ್ರದೇವ! ನನ್ನ ಮಾತು ಕೇಳಿ ಕೋಪಮಾಡಿಕೊಳ್ಳಬೇಡ. ಪ್ರತಿದಿನವೂ ನಿನಗೆ ಸಂದರ್ಶನ ಕೊಡುವೆನೆಂದು ಆದಿನ ಹೇಳಿದ್ದೆ; ಅಲ್ಲವೆ? ನೀನು ಹೇಳುವಷ್ಟು ಅನುರಾಗವು ನಿನಗೆ ಇದ್ದಪಕ್ಷ

ದಲ್ಲಿ, ಆ ಮಾತಿಗೆ ತಪ್ಪುತ್ತಿದ್ದೆಯೋ? ನಿಮ್ನಾಭಿಮುಖವಾದ ಜಲಪ್ರವಾಹವು ಹೇಗೆ ನಿರ್ಬಂಧಕ್ಕೆ ಒಳಗಾಗುವುದಿಲ್ಲವೋ, ನಿಷ್ಕಪಟಾನುರಾಗವೂ ಹಾಗೆಯೇ ಯಾರ ಮಾತಿನ ನಿರ್ಬಂಧಕ್ಕೂ ಒಳಪಡದು."

ರುದ್ರ—"ಲಲನಾಮಣಿ! ತಿಮ್ಮರಸನ ಆಜ್ಞೆಯಿಂದ, ನಿಮ್ಮ ಮನೆಗೆ ಯಾವ ಹೊಸಬನೂ ಬರುವುದಕ್ಕೆ ಆಗುತ್ತಿರಲಿಲ್ಲ. ಪೂರ್ವದಲ್ಲಿದ್ದ ರಾಜಭಟನನ್ನು ತಪ್ಪಿಸಿ, ಬೇರೊಬ್ಬ ಕಾವಲುಗಾರನನ್ನು ನೇಮಿಸಿದ್ದುದರಿಂದಲೂ, ಅವನಿಗೆ ಲಂಚದ ಆಸೆಯು ಇರಲಿಲ್ಲವಾದುದರಿಂದಲೂ, ನಾನು ಎಷ್ಟು ಪ್ರಯತ್ನಮಾಡಿದರೂ ನಿನ್ನ ಸಂದರ್ಶನವು ದೊರೆಯಲಿಲ್ಲ. ಏನುಮಾಡಲಿ? ಅಷ್ಟುದಿವಸವೂ ನಾನು ಅನುಭವಿಸಿದ ಸಂತಾಪವು ದೇವರಿಗೇ ಗೊತ್ತು. ಆ ವಿಜಯಸಿಂಹನು ಮೃತ್ಯುಮುಖದಲ್ಲಿದ್ದರೂ ಅದೃಷ್ಟವಶದಿಂದ ಉಳಿದುಕೊಂಡನು. ಅವನನ್ನು ಕೊಲ್ಲಬೇಕೆಂದು ಮಾಡಿದ ನಮ್ಮ ಪ್ರಯತ್ನಗಳು ನಿರರ್ಥಕವಾದುವು. ನಿನಗೆ ಸಂತೋಷಕರವಲ್ಲದ ಈ ಸುದ್ದಿಯನ್ನು ಹೇಗೆ ವಿವರಿಸಲಿ?"

ಮುಕ್ತಾಂಬೆ—"ಏನು! ಏನು! ವಿಜಯಸಿಂಹನು ಸತ್ತನೆಂದು ಕೇಳಿದೆನಲ್ಲಾ? ಇದೇನು ಹೀಗೆ ಹೇಳುತ್ತಿರುವೆ? ವಿಜಯಸಿಂಹನು ಬದುಕಿಕೊಂಡನೆ?" ಎಂದು ಕೇಳಿದಳು.

ಮುಕ್ತಾಂಬೆಗೆ ವಿಜಯಸಿಂಹನು ಕ್ಷೇಮವಾಗಿದ್ದನೆಂದು ಗೊತ್ತಿತ್ತು. ಆದರೂ ನಿಜವಾದ ಸಮಾಚಾರವನ್ನು ತಿಳಿಯಬೇಕೆಂದೂ, ರುದ್ರದೇವನಿಗೆ ಮೋಸಮಾಡಿ ರಹಸ್ಯವನ್ನೆಲ್ಲಾ ತಿಳಿದುಕೊಳ್ಳಬೇಕೆಂದೂ, ಹೀಗೆಮಾತನಾಡುತ್ತಿದ್ದಳು. ಇದೂ ಅಲ್ಲದೆ ರಾಮಯಮಂತ್ರಿಯು ಸ್ಥಿರಮನಸ್ಕನಾಗಿದ್ದುದರಿಂದ ವಿಜಯಸಿಂಹನ ವಧೆಗಾಗಿ ಮತ್ತೇನಾದರೂ ಪ್ರಯತ್ನಗಳನ್ನು ನಡೆಯಿಸುತ್ತಿರುವನೋ ಇಲ್ಲವೋ ಎಂಬುದನ್ನು ರುದ್ರದೇವನಿಂದ ಹೊರಡಿಸಬೇಕೆಂದು ಹೀಗೆ ಮಾತನಾಡುತ್ತಿದ್ದಳು.

ರುದ್ರ—" ಸುಂದರಿ ! ವಿಜಯಸಿಂಹನನ್ನು ವಧಿಸುವುದಕ್ಕಾಗಿ ವಧ್ಯಶಿಲೆಯಮೇಲೆ ನಿಲ್ಲಿಸಿದುದನ್ನು ನಾನು ನೋಡುತ್ತಿದ್ದೆನು. ಅವರೆ ಇದ್ದುದಕ್ಕೆ ಇದ್ದಹಾಗೆಯೇ ತಿಮ್ಮರಸನು ಆ ಶ್ಮಶಾನಕ್ಕೆ ಬಂದು, ಅವನನ್ನು ಬಿಡಿಸಿಕೊಂಡುಹೋದನು. ಗಟ್ಟಿ ಆಯುಸ್ಸೆಂದರೆ, ವಿಜಯಸಿಂಹನದೇ! ಮೃತ್ಯುವಿನ ದವಡೆಯಲ್ಲಿದ್ದರೂ ಬದುಕಿಕೊಂಡನು ! "

ಮುಕ್ತಾಂಬೆ—" ನಮ್ಮ ರಾಮಯಮಂತ್ರಿ ಸ್ಥಿರಪ್ರತಿಜ್ಞನು. ಆತನು ಇಷ್ಟಕ್ಕೇ ಬಿಟ್ಟುಬಿಡುವನೇ ? "

ರುದ್ರ—" ಆದರೂ ಏತಕ್ಕೋ ರಾಮಯನು ವಿಜಯಸಿಂಹನ ವಧೋದ್ಯೋಗದಲ್ಲಿ ಉಪೇಕ್ಷಾಪರನಾಗಿರುವನು "

ಮುಕ್ತಾಂಬೆ—" ಉಪೇಕ್ಷೆಯೇತಕ್ಕೆ ! ಆತನು ಏನೋ ಕಪಟೋಪಾಯವನ್ನು ಮಾಡಿಯೇ ಇರಬೇಕು ಅದು ನಿನಗೆ ತಿಳಿದಿದ್ದರೂ ನೀನು ಮರೆಮಾಚುತ್ತಿರುವೆ. ಇದೇ ಅಲ್ಲವೆ ನಿನ್ನ ಅನುರಾಗಕ್ಕೆ ಗುರುತು ? "

ರಾಮಯಮಂತ್ರಿಯು ಹಿಂದಿನ ರಹಸ್ಯವೆಲ್ಲವೂ ರುದ್ರದೇವನಿಂದಲೇ ಬಯಲಾಯಿತೆಂದು ತಿಳಿದು, ಅವನಿಗೆ ಇತರ ರಹಸ್ಯಗಳನ್ನು ತಿಳಿಸುಗೊಡದೆ ಇದ್ದುದರಿಂದ, ವಾಸ್ತವವಾಗಿಯೂ ರುದ್ರದೇವನಿಗೆ ಈ ಸಮಾಚಾರವು ಗೊತ್ತಿರಲಿಲ್ಲ. ಆದುದರಿಂದ ಆತನು, " ಶಲ್ಯಗಳಂತಿರುವ ಈ ಮಾತುಗಳಿಂದ ನನ್ನ ಹೃದಯವನ್ನೇತಕ್ಕೆ ಸೀಳುತ್ತಿರುವೆ ? ರಹಸ್ಯವನ್ನು ಬಯಲುಮಾಡಕೂಡದೆಂದು ರಾಮಯಮಂತ್ರಿಯು ನನ್ನ ಕೈಯಿಂದ ಪ್ರಮಾಣ ಮಾಡಿಸಿಕೊಂಡಿದ್ದಾಗಲೂ, ನಿನಗೆ ಹಿಂದಿನ ಗುಟ್ಟನ್ನು ತಿಳಿಸಲಿಲ್ಲವೆ ? ಅಂತಹ ನನ್ನನ್ನು ಈಗ ಇಷ್ಟು ಕ್ರೂರವಾಗಿ ನೋಯಿಸುತ್ತಿರುವಿಯಾ ?" ಎಂದು ಅತ್ಯಂತ ವಿಚಾರದಿಂದ ಉತ್ತರಕೊಟ್ಟನು.

ಮುಕ್ತಾಂಬೆ—" ರುದ್ರದೇವ ! ಪರಿಹಾಸಕ್ಕಾಗಿ ಹೇಳಿದ ಮಾತುಗಳನ್ನು ನಿಜವೆಂದು ತಿಳಿಯಬೇಡ. ನಿನ್ನ ಮನಸ್ಸು ನನಗೆ ತಿಳಿಯದೆ ? ಹೋ

ಗಲಿ! ಅವಮಾನಪೀಡಿತಳಾದ ಅನಂಗಸೇನೆಯು ಆತ್ಮಹತ್ಯ ಮಾಡಿಕೊಂಡಳೆಂದು ಕೆಲವರು, ಎಲ್ಲಿಗೋ ಹೋದಳೆಂದು ಮತ್ತೆ ಕೆಲವರು, ಹೇಳಿಕೊಳ್ಳುತ್ತಿರುವರು. ಆಕೆ ಎಲ್ಲಿ ಹೋಗಿರುವಳು? ನಿನಗೇನಾದರೂ ಗೊತ್ತೆ?"

ರುದ್ರ—"ಆಕೆ ಎಲ್ಲಿಗೆ ಹೋಗುವಳು? ರಾಮಯಮಂತ್ರಿ ಆಕೆಯನ್ನು ಸುಮ್ಮನೆ ಬಿಟ್ಟುಬಿಡುವನೇ? ಆಕೆ ಬದುಕಿಯೇ ಇರುವಳು. ನಿಮ್ಮನ್ನು ನನ್ನ ವಶದಲ್ಲಿ ಬಿಟ್ಟು, ಆ ಅನಂಗಸೇನೆಯನ್ನು ರಾಯಚೂರಿಗೆ ಕರೆತರಲು ಹೋಗಿರುವನು. ನೀವು ರಾಯಚೂರಿಗೆ ಹೋಗುವ ಹೊತ್ತಿಗೆ, ಆತನೂ ಅನಂಗಸೇನೆಯೊಡನೆ ಬಂದು ಕಾದಿರುವನು."

ಮುಕ್ತಾಂಬೆ—"ಅನಂಗಸೇನೆಯನ್ನು ಕರೆತರುವುದರಿಂದ ಲಾಭವಿರುವುದೆಂದು ಮಂತ್ರಿಯು ನನ್ನೊಡನೆ ಹೇಳಿದ್ದನು. ಆದರೆ ಅದನ್ನು ನಾನು ಮರೆತು ಬಿಟ್ಟಿದ್ದೇನೆ. ಅದರಿಂದ ಲಾಭವೇನು? ನೀನು ಜ್ಞಾಪಿಸುವೆಯಾ?"

ರುದ್ರ—"ರಾಮಯಮಂತ್ರಿಯು ಮೊದಲು ಬಿಜಾಪುರದ ದೊರೆಯ ಸಹಾಯವನ್ನು ಕೇಳಿಕೊಂಡನು. ಆದರೆ ಚಿರಕಾಲದಿಂದಲೂ ಆತನಿಗೂ ಕೃಷ್ಣದೇವರಾಯರಿಗೂ ವೈರತ್ವ ಇರುವುದರಿಂದ ರಾಮಯಮಂತ್ರಿಯ ಆಸೆಯು ಅಲ್ಲಿ ಕೈಗೂಡಲಿಲ್ಲ. ಆದುದರಿಂದ ಆತನು ರಾಯಚೂರು ದುರ್ಗಾಧಿಪತಿಯ ಸ್ನೇಹವನ್ನು ಮಾಡಿರುವನು. ಆತನಿಗೆ ಅನಂಗಸೇನೆಯನ್ನು ತಂದು ಕೊಟ್ಟು, ತನ್ನ ಕೆಲಸವನ್ನು ಮಾಡಿಕೊಳ್ಳಬೇಕೆಂದು ಇರುವನು. ಆ ದುರ್ಗಾಧಿಪತಿಯಾದ ತೋಫಲ್‌ಖಾನನು ಬಿಜಾಪುರದ ದೊರೆಯ ಮನಸ್ಸನ್ನು ತನ್ನ ಕಪಟ ವಚನಗಳಿಂದ ವಶಪಡಿಸಿಕೊಂಡು ರಾಮಯಮಂತ್ರಿಗೆ ಸಹಾಯ ಮಾಡುವಂತೆ ಒಪ್ಪಿಸಿರುವನು."

ಮುಕ್ತಾಂಬೆ—"ಅಯ್ಯೋ! ನಿಷ್ಕಲ್ಮಷಚರಿತಳಾದ ಅನಂಗಸೇನೆಗೆ ಎಂತಹ ಆಪತ್ತು ಬಂತು! ಹೀಗೆ ಮಾಡುವನೆಂದು ತಿಳಿದಿದ್ದರೆ ನಾನು ಈ ಕೆಲಸಕ್ಕೆ ಒಪ್ಪುತ್ತಲೇ ಇರಲಿಲ್ಲವಲ್ಲಾ! ಇಂತಹ ಪಾಪಕಾರ್ಯಗಳಿಂದ ಸಂಪಾದಿಸಿದ ರಾಜ್ಯವು ಹೇಗೆ ಅಭಿವೃದ್ಧಿಯಾದೀತು!"

ರುದ್ರ—“ ಸುಂದರಿ, ನಿನಂತೆಯೇ ನಾವೂ ದಯಾರ್ದ್ರಹೃದಯರಾದರೆ ಶತ್ರುಹಸ್ತಗತವಾದ ರಾಜ್ಯವನ್ನು ಸಂಪಾದಿಸುವುದು ಹೇಗೆ ? ಶತ್ರುಗಳಿಗೆ ಆಪತ್ತನ್ನು ಉಂಟುಮಾಡದೆ ನಾವು ಅಭಿವೃದ್ಧಿ ಯಾಗುವುದು ಹೇಗೆ ? ಯುದ್ಧವು ಕ್ರೂರವೆಂದು ಹಿಂತೆಗೆದರೆ ಯಾವ ದೊರೆಯ ರಾಜ್ಯವುತಾನೆ ಉಳಿದೀತು ? ರಾಜನು ಎಷ್ಟೇದಯಾಳುವಾದರೂ, ರಾಜ್ಯಾಭಿವರ್ಧನಕ್ಕಾಗಿ ಎಂತಹ ಕ್ರೂರಕೃತ್ಯವನ್ನಾದರೂ ಮಾಡಲೇಬೇಕು. ರಾಜ್ಯತಂತ್ರವಿಶಾರದನಾದ ರಾಮಯಮಂತ್ರಿಯು ಆದುದರಿಂದಲೇ ಇಂತಹ ಕಾರ್ಯದಲ್ಲಿ ಪ್ರವೃತ್ತನಾಗಿರುವನು. ಅನಂಗಸೇನೆಯನ್ನು ಮಹಮದೀಯನಿಗೆ ವಶಪಡಿಸಿದಂತೆಯೇ ನಿನಗೂ ಏನಾದರೂ ಅಂತಹ ದುರವಸ್ಥೆಯು ಬರಬಹುದೆಂದು ಸಂಶಯವಿದ್ದೀತು. ದುಷ್ಟಸ್ವಭಾವದವರಾದ ಮ್ಲೇಚ್ಛರಿಂದ ನಿನಗೆ ಯಾವ ಬಗೆಯ ಅವಮಾನವಾದರೂ ಸಂಭವಿಸಿದಂತೆ ನನ್ನನ್ನು ನಿನ್ನಕಾವಲಿಗೆ ನೇಮಿಸಿರುವನು. ನನ್ನ ಜೀವವಿರುವರೆಗೂ ನಿನಗೆ ಯಾವ ಅಪಾಯವೂ ಬರಲಾರದೆಂದು ಸಂಪೂರ್ಣವಾಗಿ ತಿಳಿ.” ಎಂದನು.

ಮುಕ್ತಾಂಬೆ—“ ರುದ್ರದೇವ ! ಬಹಳ ಸಂತೋಷವಾಯಿತು. ನಿನ್ನ ಅನುರಾಗದ ಆಳವನ್ನು ಕಂಡು ಹಿಡಿಯಬೇಕೆಂದೇ ನಿನ್ನನ್ನು ಹೀಗೆ ಮಾತನಾಡಿಸಿದೆನು. ಆದುದರಿಂದ ಬೇರೆ ತಿಳಿದುಕೊಳ್ಳಬೇಡ. ನನಗೆ ಅಪಾಯ ತಟ್ಟದಂತೆ ಕಾಪಾಡುತ್ತಿರು.”

ರುದ್ರದೇವನು ಆಕೆಯ ಆಶಯವನ್ನು ತಿಳಿದುಕೊಳ್ಳಲಾರದೆ ಮುಕ್ತಾಂಬೆಯು ತನ್ನಮೇಲೆ ನಿಜವಾಗಿಯೂ ಅನುರಾಗದಿಂದಿರುವಳೆಂದು ತಿಳಿದುಕೊಂಡನು. ಇಷ್ಟರಲ್ಲಿಯೆ ಪ್ರಹರೇಶ್ವರನಿಗೂ ಎಚ್ಚರವಾಯಿತು. ಆಗ ಉಳಿದವರನ್ನೂ ಎಬ್ಬಿಸಿ ಮುಕ್ತಾಂಬೆಯನ್ನು ಮೇನದಲ್ಲಿ ಕುಳ್ಳಿರಿಸಿ ಒಂದುಕಡೆ ಪ್ರಹರೇಶ್ವರನೂ ಮತ್ತೊಂದುಕಡೆ ತಾನೂ ಖಡ್ಗಪಾಣಿಗಳಾಗಿ ರಕ್ಷಿಸುತ್ತಾ ಪ್ರಯಾಣಮಾಡಿ ಅವರೆಲ್ಲರೂ ರಾಯೂರಿಗೆ ಬಂದು ಸೇರಿದರು

೨೨ ನೆಯ ಪ್ರಕರಣ.

ತೋಫಲ್‌ಖಾನ್--ಫಕೀರ

ರಾಯಚೂರು ದುರ್ಗಕ್ಕೆ ಅಧಿಪತಿಯಾದ ತೋಫಲ್‌ಖಾನನು ವಾಸವಾಗಿದ್ದ ಸೌಧವು ಮಹೋನ್ನತವಾಗಿಯೂ ವಿಶಾಲವಾಗಿಯೂ ಮನೋಹರವಾಗಿಯೂ ಒಪ್ಪುತ್ತಿತ್ತು. ಆತನು ಕಾರ್ಯಗಳನ್ನು ಮುಗಿಸಿಕೊಂಡು ಆ ಸೌಧದಲ್ಲಿದ್ದ ಒಂದು ಕೊಟ್ಟಡಿಯಲ್ಲಿ ಕುಳಿತಿದ್ದನು. ಆಗ ರಾತ್ರಿ ಸುಮಾರು ಏಳುಗಂಟೆ ಆಗಿತ್ತು. ಆದಿನ ಹುಣ್ಣಿಮೆಯಾಗಿದ್ದುದರಿಂದ ಪೂರ್ಣಚಂದ್ರನು ಉದಯಿಸಿ ಕ್ರಮಕ್ರಮವಾಗಿ ಮೇಲಕ್ಕೆ ಏರುತ್ತಿದ್ದನು. ಆನಂದಕರವಾದ ಬೆಳದಿಂಗಳು ನಾಲ್ಕು ದಿಕ್ಕುಗಳಲ್ಲಿಯೂ ವ್ಯಾಪಿಸುತ್ತಿತ್ತು. ತಂಗಾಳಿಯು ಮೆಲ್ಲನೆ ಬೀಸುತ್ತಾ ಪ್ರಾಣಿಸಮೂಹಕ್ಕೆ ಸಂತೋಷವನ್ನುಂಟುಮಾಡುತ್ತಿತ್ತು. ಆದರೆ ಈ ಸಾಮಗ್ರಿಗಳಿಂದಲೇ ವಿಯೋಗಿಗಳಿಗೆ ದುಸ್ಸಹವಾದ ಬಾಧೆಯು ಸಂಜನಿಸುತ್ತಿತ್ತು. ಚಿರಕಾಲದಿಂದ ಅನಂಗಸೇನಾಚಿಂತಾಸಂತಪ್ತನಾಗಿದ್ದ ತೋಫಲ್‌ಖಾನನಿಗೆ ಮೇಲೆಹೇಳಿದ ಸಾಮಗ್ರಿಗಳಿಂದ ಅತಿದುರ್ಭರವಾದ ಸಂತಾಪವು ಉಂಟಾಗಿತ್ತೆಂದು ಬೇರೆ ಹೇಳಬೇಕಾದ ಆವಶ್ಯಕವಿಲ್ಲ. ಆದುದರಿಂದ ಅವನ ಮನಸ್ಸು ತಳಮಳಗೊಳ್ಳುತ್ತಿತ್ತು. ಆತನ ಸ್ಮೃತಿದರ್ಪಣದಲ್ಲಿ ಒಂದು ಸುಂದರವ್ಯಕ್ತಿಯು ಆವಿರ್ಭವಿಸಿ, ಮೊದಮೊದಲು ಅವಯವವಿಭಾಗರಹಿತವಾಗಿ ಕಾಣಿಸಿಕೊಂಡು ಕ್ರಮಕ್ರಮವಾಗಿ ವಿಸ್ಫುಟಾವಯವವುಳ್ಳ ದಿವ್ಯಸುಂದರವಿಗ್ರಹವಾಗಿ ಪರಿಣಮಿಸಿತು. ಈ ವ್ಯಕ್ತಿಯನ್ನು ಮನಸ್ಸಿನಲ್ಲಿಯೇ ನೋಡಿನೋಡಿ ಸಂತೋಷಪಟ್ಟುಕೊ

ಳ್ಳುತ್ತಾ ಕುಳಿತಿರಲು, ಆ ಸುಂದರಿಯು ತನ್ನ ವಿಶ್ರಾಮಮಂದಿರದಲ್ಲಿಯೇ ಇರುವಳಲ್ಲವೇ ಎಂದು ಸಂತೋಷಿಸಿ, ತನ್ನ ಪೀಠದಿಂದೆದ್ದು ಕೈಯಲ್ಲಿ ಕತ್ತಿಯನ್ನು ಹಿಡಿದು ಆ ಸ್ಥಳಕ್ಕೆ ಹೋಗಬೇಕೆಂದು ಹೊರಟನು ಆದರೆ ಆಗ ರಾಮುಯು ಮಂತ್ರಿಯು ಹೇಳಿದ್ದ ಮಾತುಗಳು ಜ್ಞಾಪ್ತಿಗೆಬಂದು, ದೃಢಪಾಶದಿಂದ ಬದ್ಧನಾದವನಂತೆ ತನ್ನ ಪೀಠದಲ್ಲಿಯೇ ಕುಳಿತುಕೊಂಡುಬಿಟ್ಟನು.

ಈ ಸ್ಥಿತಿಯಲ್ಲಿ ಸುಖವಾಗಿ ಕಾಲಕ್ಷೇಪ ಮಾಡುವುದು ಅಸಾಧ್ಯವೆಂದು ಆತನಿಗೆ ತೋರಿತು. ಮೊದಲು, ತನ್ನ ಮಿತ್ರರೊಡನೆ ಸಂಭಾಷಿಸಿದರೆ ಮನಸ್ಸಿನ ಆತಂಕವು ತೊಲಗುವುದೆಂದು ಭಾವಿಸಿದನು. ಆದರೆ ಕೂಡಲೆ, ಹೇಳಿದಮಾತುಗಳನ್ನೇ ಯಾವಾಗಲೂ ಹೇಳುತ್ತಿರುವ ಮಿತ್ರರಿಂದ ತನ್ನ ಮನೋವಿಕಾರವನ್ನು ಹೋಗಲಾಡಿಸಿಕೊಳ್ಳುವುದು ಸಾಧ್ಯವಲ್ಲವೆಂದು ತಿಳಿದು ಆ ಪ್ರಯತ್ನವನ್ನು ಅಲ್ಲಿಗೇ ಬಿಟ್ಟನು ಅನೇಕ ದೇಶಗಳಲ್ಲಿ ಸುತ್ತಾಡಿ, ಅಲ್ಲಿಯ ವೃತ್ತಾಂತಗಳನ್ನು ಸಂಗ್ರಹಿಸಿ, ಸರಸವಾಗಿ ವಿವರಿಸಿ ಆನಂದಗೊಳಿಸುವ ಫಕೀರರು ಯಾರಾದರೂ ಸಿಕ್ಕಿದರೆ, ತನ್ನ ಮನೋವ್ಯಥೆಯು ಶಾಂತವಾದೀತೆಂದು ಯೋಚಿಸಿದನು. ಖಾನನಿಗೆ ಮಹಮ್ಮದೀಯ ಮತದಲ್ಲಿ ಬಹಳ ಆಸಕ್ತಿಯಿತ್ತು. ಆದುದರಿಂದಲೇ ಅವನು ಅನಾದಿಸಿದ್ಧವಾದ ಹಿಂದೂ ಮತವನ್ನು ಬಿಟ್ಟು ಮಹಮ್ಮದೀಯ ಮತವನ್ನು ಅವಲಂಬಿಸಿದ್ದನು. ಆ ಮತವನ್ನು ಎಲ್ಲೆಲ್ಲೂ ಹರಡಬೇಕೆಂದು ಬಹಳವಾಗಿ ಆಸೆಪಡುತ್ತಿದ್ದನು. ಇಂತಹ ಮತವನ್ನು ಲೋಕದಲ್ಲಿ ವಿಸ್ತರಿಸುವಂತೆ ಮಾಡುವ ಫಕೀರರು ತೋಫಲ್ ಖಾನನಿಗೆ ಎಷ್ಟು ಪ್ರೀತಿ ಪಾತ್ರರಾಗಿದ್ದರೆಂದು ವರ್ಣಿಸುವುದು ಅನಾವಶ್ಯಕ. ತೋಫಲ್‌ಖಾನನು ಫಕೀರನೊಡನೆ ಮಾತಾಡಿ ತನ್ನ ಮನಃಕ್ಲೇಶವನ್ನು ಹೋಗಲಾಡಿಸಿಕೊಳ್ಳಬೇಕೆಂದು ಯೋಚಿಸಿದಕೂಡಲೆ, ಆಗತಾನೆ ರಾಯದುರ್ಗಕ್ಕೆ ಬಂದಿದ್ದ ಒಬ್ಬ ಫಕೀರನ ಜ್ಞಾಪಕವು ಬಂತು. ಅವನು ಆ ದುರ್ಗದಲ್ಲಿಯೇ ಇದ್ದ ಒಂದು ಮಸೀದಿಯಲ್ಲಿ ಇಳಿದುಕೊಂಡಿದ್ದನು.

ಅವನನ್ನು ಕರೆತರಬೇಕೆಂದು ಒಬ್ಬ ಸೇವಕನನ್ನು ಕಳುಹಿಸಲು, ಫಕೀರನು ಕೂಡಲೇ ಹೊರಟ ಹಿಂದೀಭಾಷೆಯ ಹಾಡುಗಳನ್ನು ಮಧುರಧ್ವನಿಯಿಂದ ಹಾಡಿಕೊಳ್ಳುತ್ತಾ ತೋಫಲ್‌ಖಾನನಿದ್ದ ಕಚೇರಿಗೆ ಬಂದನು. ಆತನಿಗೆ ಉಚಿತಾಸನವನ್ನು ಕೊಟ್ಟು, ಪರಸ್ಪರ ಕುಶಲಪ್ರಶ್ನೆಯಾದನಂತರ ಮುಂದೆ ಹೇಳಿರುವ ಸಂಭಾಷಣೆಯನ್ನು ಪ್ರಾರಂಭಿಸಿದನು.

ಖಾನ—“ಓ ಮಹಾತ್ಮರೆ! ತಾವು ಅನೇಕ ಮಹಿಮೆಗಳುಳ್ಳವರು. ಆ ದಿನ ತಾವು ಇಲ್ಲಿಗೆ ದಯೆಮಾಡಿಸಿದ್ದಾಗ, ನನಗೆ ಬಹಳ ಕೆಲಸವಿದ್ದುದರಿಂದ ಮಾತನಾಡಲು ಅವಕಾಶವಾಗಲಿಲ್ಲ. ತಾವು ಯಾವಯಾವ ದೇಶಗಳಲ್ಲಿ ಸಂಚರಿಸಿರುವಿರಿ? ಎಲ್ಲೆಲ್ಲಿ ಏನೇನು ವಿಶೇಷಗಳನ್ನು ಕಂಡುಇರುವಿರಿ? ತಾವು ನಮ್ಮಹಾಗೆ ಕೇವಲ ಸುಖಾಭಿಲಾಷಿಗಳಾಗಿ ಒಂದೇಕಡೆ ನಿಂತಿರದೆ, ಸದಾ ದೇಶಸಂಚಾರದಲ್ಲಿ ನಿರತರಾಗಿರುವಿರಿ. ಆದುದರಿಂದ ತಮಗೆ ತಿಳಿಯದೇ ಇರುವ ಆಶ್ಚರ್ಯಗಳು ಪ್ರಪಂಚದಲ್ಲಿಯೇ ಇಲ್ಲವೆಂದು ನಾನು ಭಾವಿಸಿರುವೆನು.”

ಫಕೀರ—“ಪ್ರಭುವರ್ಯರೇ! ತಾವುಹೇಳಿದುದು ವಾಸ್ತವ. ನಾವು ನಿಂತಕಡೆ ನಿಲ್ಲದೆ, ಯಾವಾಗಲೂ ಊರೂರು ತಿರುಗುತ್ತಾ ಪರಿಶುದ್ಧವಾದ ಇಸ್ಲಾಮ್ ಮತವನ್ನು ಬೋಧಿಸುತ್ತಾ ಇರುವೆವು. ಭಗವಂತನಿಗೆ ಪ್ರಿಯದೂತರಾದ ನಮಗೆ ಅದೇ ಪರಮಧರ್ಮ. ಮತಾಭಿವೃದ್ಧಿಗಾಗಿ ಎಷ್ಟುಕಾಲ ಒಂದೇಕಡೆ ನಿಂತರೂ, ದೇವರಿಗೆ ಕೋಪಬರುವುದಿಲ್ಲ. ಆದರೆ ಮತಸಂಬಂಧವಲ್ಲದ ಕೆಲಸಕ್ಕೆ ಪ್ರವೇಶಿಸಿದರೆ, ದೇವರು ನಮ್ಮನ್ನು ಯಾವ ರೀತಿಯಲ್ಲಾದರೂ ಶಿಕ್ಷಿಸದೇ ಬಿಡನು. ದಿಕ್ಕುದಿಕ್ಕುಗಳಲ್ಲೂ ತಿರುಗುತ್ತಾ ಹಿಂದುಗಳಿಗೆ ಮಹಮ್ಮದೀಯ ಮತವನ್ನು ಬೋಧಿಸಿ ಅವರನ್ನು ನಮ್ಮ ಮತಕ್ಕೆ ಸೇರಿಸಿಕೊಳ್ಳಬೇಕೆಂದು ದೇವರು ಮಾಡಿರುವ ಆಜ್ಞೆಯನ್ನು ಶಿರಸಾವಹಿಸಿ ನಡೆಯಿಸುತ್ತಿರುವೆನು. ರಾತ್ರಿಯೂ ಹಗಲೂ ನಾನು ಮಾಡು

ತ್ತಿರುವ ಪ್ರಯತ್ನದಿಂದಲೂ, ದೇವರ ಅನುಗ್ರಹದಿಂದಲೂ ಅನೇಕ ಹಿಂದುಗಳು ನಮ್ಮ ಮತಕ್ಕೆ ಸೇರಿರುವರು."

ಖಾನ—"ಓ ಮಹಸೀಯರೆ! ಮಹಮ್ಮದೀಯ ಮತದಂತಹ ಪರಿಶುದ್ಧವಾದ ಮತವು ಮತ್ತೆ ಯಾವುದಿರುವುದು? ಈ ಮತದಮೇಲೆ ನನಗೆ ಬಹಳಪ್ರೇಮ. ಆ ಮತಬೋಧಕರು ನನಗೆ ಪ್ರಾಣಾಧಿಕಪ್ರಿಯರು. ಅಯ್ಯೋ! ಹಿಂದುಗಳು ಬುದ್ಧಿಹೀನರಾಗಿ ಕಲ್ಲುಬೊಂಬೆಗಳನ್ನು ದೇವರೆಂದು ಭ್ರಮಿಸಿ ಪೂಜಿಸುವರು. ಅವರ ದೇವಸ್ಥಾನಗಳನ್ನು ಕಂಡರೆ ನನಗೆ ಎಷ್ಟೋವ್ಯಥೆಯಾಗುವುದು. ಅವುಗಳೆಲ್ಲವೂ ಮಸೀದಿಗಳಾಗುವುದು ಯಾವಾಗಲೋ! ಹಾಗೆಮಾಡಿಬಿಡಬೇಕೆಂದು ನನಗೆ ಮನಸ್ಸೇನೋಇದೆ. ಆದರೆ ಅಂತಹಶಕ್ತಿಯು ಇಲ್ಲವಲ್ಲಾ! ಏನುಮಾಡಲಿ!"

ಫಕೀರ—"ಖಾನವರ್ಯ! ಚೆನ್ನಾಗಿ ಅಪ್ಪಣೆಕೊಟ್ಟಿರಿ. ಈ ವಿಚಾರದಲ್ಲಿ ನಮ್ಮ ಇಬ್ಬರ ಅಭಿಪ್ರಾಯವೂ ಒಂದೇ. ಹಿಂದೂ ದೇವಾಲಯಗಳನ್ನು ಕೆಡವಿಸಿ ಮಸೀದಿಗಳನ್ನು ಕಟ್ಟಿಸಿರೆಂದು ಈ ಕಾಲದ ಮಹಮ್ಮದೀಯ ಪ್ರಭುಗಳಿಗೆ ಎಷ್ಟು ಬೋಧಿಸಿದರೂ, ಅವರು ಕಿವಿಗೆ ಹಾಕಿಕೊಳ್ಳದಿರುವರು. ಆ ಶಕ್ತಿಯು ಪೂರ್ವಕಾಲದವರಿಗೆ ಇತ್ತು. ಹಿಂದೆ ಘಜ್ನೀಮಹಮೂದನು ಎಷ್ಟೊಂದು ದೇವಾಲಯಗಳನ್ನು ನೆಲಸಮಮಾಡಿಬಿಟ್ಟನು! ಹಿಂದೂ ದೇಶದಲ್ಲೆಲ್ಲಾ ಬಹಳ ಪ್ರಸಿದ್ಧವಾಗಿದ್ದ ಸೋಮನಾಥದೇವಾಲಯವನ್ನು ಪಾಳುಗೆಡವಿ ಅದರ ಬಾಗಿಲುಗಳನ್ನು ಸಾಗಿಸಿಕೊಂಡು ಹೋದನು. ಹಿಂದುಗಳು ಪರಮಭಕ್ತಿಯಿಂದ ಪೂಜಿಸುತ್ತಿದ್ದ ಕಲ್ಲಿನ ಬೊಂಬೆಯನ್ನು ತುಂಡುತುಂಡುಮಾಡಿ, ಆ ಚೂರುಗಳನ್ನು ಮಕ್ಕಾಪಟ್ಟಣಕ್ಕೆ ಕಳುಹಿಸಿಕೊಟ್ಟನು. ಅಂತಹ ಸಾಮರ್ಥ್ಯವು ಈಗಿನ ಕಾಲದವರಿಗೆ ಬಂದೀತೆ? ಮಹಮ್ಮದ್ ಘೋರಿಯೂ, ಕುತುಬುದೀನನೂ ಹಿಂದುಗಳ ಮತಕ್ಕೆ ಕೊಡಲಿಯಂತೆ ಪ್ರವರ್ತಿಸಿ ನಮ್ಮ ಮತಕ್ಕೆ ಎಷ್ಟೋಸಹಾಯಮಾಡಿ

ದರು. ಕುತುಬುದ್ದೀನನು ಕಟ್ಟಿಸಿದ ಜಗತ್ಪ್ರಸಿದ್ಧವಾಗಿ ಕುತುಬ್‌ಮಿನಾರ್ ಸ್ತಂಭವು ತನ್ನ ಪ್ರತಿಯೊಂದು ಕಲ್ಲಿಂದಲೂ ಆತನ ಮತಾಭಿಮಾನವನ್ನು ಪ್ರಕಟಿಸುತ್ತಿರುವುದು. ಈ ಸ್ತಂಭವನ್ನು ಕಟ್ಟಿಸಲು ಆ ಮಹಾತ್ಮನು ಎಷ್ಟು ಹಿಂದೂದೇವಸ್ಥಾನಗಳನ್ನು ನಾಶಗೊಳಿಸಿರಬೇಕು! ಆ ಬಳಿಕ ಹಿಂದೂದೇಶದಲ್ಲಿ ಅನೇಕ ಮಹಮ್ಮದೀಯ ಪ್ರಭುಗಳು ಆಳಿದರೂ, ಆ ಮಹಾತ್ಮನಂತೆ ಪ್ರಖ್ಯಾತಿ ಹೊಂದಿದವರು ಒಬ್ಬರೂ ಇಲ್ಲ. ಆತನಂತಹ ಮಹಾತ್ಮರು ಮಾಡಿದ ಸಾಹಸಕಾರ್ಯಗಳಿಂದಲೇ, ಈ ದೇಶದಲ್ಲಿ ಮಹಮ್ಮದೀಯಮತವು ಬೇರೂರಿ ಬೆಳೆಯಲು ಸಾಧ್ಯವಾಯಿತು. ಈಗ ನಮ್ಮ ಪ್ರಭುಗಳು ಮತಾಭಿಮಾನದಿಂದ ಪ್ರಯತ್ನಿಸಿದ ಹೊರತು, ನಮ್ಮಂತಹವರು ಎಷ್ಟು ಯತ್ನಿಸಿದರೂ ಫಲವಾಗಲಾರದು."

ಖಾನ—"ಮಹನೀಯರೆ! ತಾವು ಹೇಳಿದುದು ನಿಶ್ಚಯ. ನಮ್ಮ ಮಹಮ್ಮದೀಯ ಪ್ರಭುಗಳಿಗೆ ಅಂತಹ ಒಳ್ಳೆಯ ಬುದ್ಧಿಯು ಹುಟ್ಟುವುದೇ? ನಾನು ಎಷ್ಟೋ ಸಾರಿ ನಮ್ಮ ಅದಿಲ್‌ಷಹ ಪ್ರಭುಗಳಿಗೆ ಈ ವಿಷಯವಾಗಿ ಅರಿಕೆಮಾಡಿಕೊಂಡಿರುವೆನು. ಆದರೆ ಉಪೇಕ್ಷೆಯಿಂದ ನನ್ನ ಕೋರಿಕೆಯನ್ನು ಮನ್ನಿಸದಿರುವರು. ಗೋಲಕೊಂಡದ ಕುತುಬ್‌ಷಾಹಿ ದೊರೆಯೂ ಅಂತಹವನೇ. ಅಹಮ್ಮದ್‌ನಗರದ ಪ್ರಭುವೂ ಇವರಂತೆಯೇ ಇರುವನು. ಇವರುಗಳೆಲ್ಲರೂ ಹಿಂದೂಗಳನ್ನು ಪ್ರೀತಿಸುತ್ತಾ ಅವರಿಗೆ ದೊಡ್ಡ ದೊಡ್ಡ ಉದ್ಯೋಗಗಳನ್ನು ಕೊಡುತ್ತಿರುವರು. ಆದುದರಿಂದಲೇ ಹಿಂದುಗಳು ಈಗ ಸ್ವತಂತ್ರರಾಗಿ, ನಮ್ಮನ್ನು ನಿರ್ಲಕ್ಷ್ಯದಿಂದ ಕಾಣುತ್ತಿರುವರು. ಇನ್ನು ಮುಂದೆಯೂ ನಮ್ಮ ಪ್ರಭುಗಳು ಹೀಗೆ ಮಾಡುತ್ತ ಬಂದರೆ, ನಮ್ಮ ಮತವು ನಾಮಾವಶೇಷವಾಗಿ ಹೋಗುವುದೆಂದು ಕಾಣುವುದು. ನಮ್ಮ ಮತವನ್ನು ಅಭಿವೃದ್ಧಿಗೊಳಿಸಬೇಕೆಂದಿರುವ ದೊರೆಗಳು ಉತ್ತರ ಹಿಂದೂಸ್ಥಾನದಲ್ಲಾದರೂ ಒಬ್ಬರಿಬ್ಬರು ಇರುವರೆ?"

ಫಕೀರ—“ ದುರ್ಗಾಧಿಪರೇ ! ಏನು ಹೇಳಲಿ ? ಈವರೆಗೆ ಡೆಲ್ಲಿಯಲ್ಲಿ ಆಳುತ್ತಿದ್ದ ಸಿಕಂದರ್ ಲೋಡಿಯು ನಮ್ಮ ಮತಕ್ಕಾಗಿ ಪ್ರಾಣವನ್ನಾದರೂ ಒಪ್ಪಿಸುತ್ತಿದ್ದನು. ಆದರೆ ನಮ್ಮ ದುರದೃಷ್ಟದಿಂದ ಅವನೂ ಕಾಲವಶನಾದನು. ಈಗಿನ ದೊರೆಯು ಅಷ್ಟು ಒಳ್ಳೆಯವನಲ್ಲ. ಸಂಕರಜಾತಿಯವರಾದ ಈ ದಕ್ಷಿಣದೇಶದ ಮುಹಮ್ಮದೀಯ ಪ್ರಭುಗಳು ತಮ್ಮ ಹಿಂದಿನ ಮತದ ವಾಸನಾಬಲದಿಂದ, ಮತಾಭಿವೃದ್ಧಿಯಲ್ಲಿ ಆಸಕ್ತರಾಗಿಲ್ಲದೇ ಇರಬಹುದು. ಆದರೆ ಸ್ವಚ್ಛ ಮ್ಲೇಚ್ಛ ವಂಶಜರಾದ ಉತ್ತರ ಹಿಂದೂಸ್ಥಾನದ ತುರುಷ್ಕಪ್ರಭುಗಳೂ ಮಹಮ್ಮದೀಯಮತಾಭಿವೃದ್ಧಿಗಾಗಿ ಪ್ರಯತ್ನಿಸದೇ ಇರುವುದು ಅತ್ಯಂತ ಶೋಚನೀಯವಾಗಿರುವುದು. ತಮಗಿರುವ ಮತಾಭಿಮಾನವು ಇನ್ನೂ ಕೆಲವು ಮುಹಮ್ಮದೀಯ ಪ್ರಭುಗಳಿಗೆ ಇದ್ದಿದ್ದರೆ, ಈಗ ಹಿಂದೂಸ್ಥಾನವಾಗಿರುವ ಈ ದೇಶವು ಮತ್ತೊಂದು ತುರುಷ್ಕಸ್ಥಾನವೆನಿಸಿಕೊಳ್ಳದೇ ಹೋಗುತ್ತಿತ್ತೇ ? ತಮಗೆ ಇರುವ ಮತಾಭಿಮಾನವನ್ನು ಕಂಡು ನನಗೆ ಪರಮಾನಂದವಾಗಿರುವುದು.”

ಈ ಮಾತುಗಳನ್ನು ಕೇಳಿ ತೋಫಲ್‍ಖಾನನಿಗೂ ಸಂತೋಷವಾಯಿತು. ಫಕೀರನನ್ನು ನೋಡಿ “ ಮಹಾತ್ಮರೆ ! ತಾವು ಕೇವಲ ದೈವಸ್ವರೂಪರು. ತಮ್ಮಂಥವರ ದಯೆಯು ನನಗೆ ಉಂಟಾದುದು ನನ್ನ ಸೌಭಾಗ್ಯದಿಂದಲೇ. ತಮ್ಮ ಅನುಗ್ರಹದಿಂದ ಕೃತಾರ್ಥನಾದೆನು. ತಮ್ಮಂತಹ ಪುಣ್ಯಪುರುಷರಿಗೆ ಭವಿಷ್ಯತ್ತೆಲ್ಲವೂ ಕರತಲಾಮಲಕದಂತೆ ವಿಶದವಾಗಿರುವುದು. ನನ್ನಲ್ಲಿ ಅನುಗ್ರಹಿಸಿ ನಾನು ಕೇಳಬೇಕೆಂದಿರುವ ಪ್ರಶ್ನೆಗೆ ಉತ್ತರಕೊಡಬೇಕು.”

ಫಕೀರ—“ ಒಳ್ಳೆಯದು, ಕೇಳಬಹುದು. ನನಗೆ ತಿಳಿದಮಟ್ಟಿಗೂ ಉತ್ತರಹೇಳಿ ಸಂತೋಷಪಡಿಸುವೆನು.”

ಖಾನ—"ನಾನೊಬ್ಬ ಸ್ತ್ರೀಯನ್ನು ಸಂಪಾದಿಸಿರುವೆನು. ಆಕೆಯನ್ನು ಮದುವೆಯಾದರೆ ನನಗೆಲ್ಲವೂ ಒಳ್ಳೆಯದಾಗುವುದೆ ?"

ಫಕೀರ—"ಆ ಸ್ತ್ರೀ ಯಾರು ? ಆಕೆಯು ಶೌರ್ಯಲಬ್ಧಳೋ, ತಂತ್ರಲಬ್ಧಳೋ ?"

ಖಾನ—"ಆಕೆಯದು ಈ ದೇಶವೇ; ಹಿಂದೂಮತಸ್ಥಳು; ಅತ್ಯಂತ ಸುಂದರಳು ; ನನ್ನ ಆಪ್ತಮಿತ್ರನ ಸಹಾಯದಿಂದ ನನಗೆ ದೊರೆತಿರುವಳು."

ಫಕೀರ—"ಒಳ್ಳೆಯದು, ತಾವು ಕೇಳುವ ಪ್ರಶ್ನೆಗೆ ಉತ್ತರ ಹೇಳಬೇಕಾದರೆ, ಜ್ಯೋತಿಷಶಾಸ್ತ್ರದ ಸಹಾಯಕ್ಕೆ ಸಾಮುದ್ರಿಕಶಾಸ್ತ್ರವೂ ಬರಬೇಕಾಗಿದೆ. ಆಕೆಯ ಮುಖಲಕ್ಷಣವನ್ನು ಮೊದಲು ನೋಡಿ, ಬಳಿಕ ಗುಣಿತಕ್ಕೆ ಕುಳ್ಳಿರಬೇಕೆಂದು ಮನಸ್ಸಿದೆ. ಅಭ್ಯಂತರವೇನೂ ಇಲ್ಲವಷ್ಟೆ ?"

ಖಾನ—"ತಮ್ಮಂತಹವರ ವಿಷಯದಲ್ಲಿ ಅಭ್ಯಂತರವೇನಿರುವುದು ? ಆಕೆಯು ಇಲ್ಲೇ ನನ್ನ ವಿಶ್ರಾಂತಿಮಂದಿರದಲ್ಲಿ ವಾಸಿಸುತ್ತಿರುವಳು"

ಫಕೀರ—"ಆಕೆಗೆ ತಮ್ಮಲ್ಲಿ ಅನುರಾಗವಿರುವುದೆ ? ಮದುವೆಯಾಗಲು ಒಪ್ಪಿರುವಳಷ್ಟೆ ?"

ಖಾನ—"ಅದೇನೋ ನನಗೆ ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ. ಆಕೆಯು ಇಲ್ಲಿಗೆ ಬಂದಾಗಿನಿಂದಲೂ ನಾನು ಆಕೆಯನ್ನು ನೋಡಿಲ್ಲ. ಆಕೆಗೆ ನನ್ನಲ್ಲಿ ಪ್ರೀತಿಹುಟ್ಟುವುದಕ್ಕಾಗಿ ಮನೋಹರವಾದ ಸಾಮಗ್ರಿಗಳನ್ನು ಕಳುಹಿಸುತ್ತಿರುತ್ತೇನೆ"

ಫಕೀರ—"ಇದೇನು ಆಶ್ಚರ್ಯ! ಅಭಿಲಷಿತಕಾಂತಾಮಣಿಯು ಕೈಗೆ ಸಿಕ್ಕಿರುವಾಗ, ಆಕೆಯು ಈ ಭವನದಲ್ಲೇ ವಾಸಿಸುತ್ತಿರುವಾಗ, ಆಕೆಯನ್ನು ಸಂದರ್ಶಿಸಿ ಯೋಗಕ್ಷೇಮವಿಚಾರವನ್ನು ಮಾಡದೆ ಹೇಗೆ ಯಾರಾದರೂ ಮೌನದಿಂದ ಇರುವರೆ ? ದರ್ಶನಸಂಭಾಷಣಾದಿಗಳಿಂದಲ್ಲವೇ ಅನುರಾಗವು ವೃದ್ಧಿಯಾಗಬೇಕು ?"

ಖಾನ—"ಮಹಾತ್ಮರೆ! ಆಕೆಯನ್ನು ನೋಡಬೇಕೆಂದು ನಾನು ಕುತೂಹಲಪಡುತ್ತಿದ್ದರೂ, ನನ್ನಮಿತ್ರನಾದ ರಾಮಯ ಮಂತ್ರಿಯು ಕೆಲವುದಿನಗಳ ವರೆಗೂ ಆಕೆಯನ್ನು ನೋಡಕೂಡದೆಂದು ನಿಷೇಧಿಸಿರುವನು. ಮಹಾಬುದ್ಧಿಶಾಲಿಯಾದ ಆತನ ಮಾತನ್ನು ಮೀರಿದರೆ ಕೆಲಸ ಕೆಟ್ಟೀತೆಂದು ಸುಮ್ಮನಿರುವೆನು."

ಫಕೀರ—"ಆತನು ಅದೇಕೆ ಹಾಗೆ ಹೇಳಿರುವನು? ಆಕೆಗೆ ಈಗ ಏನಾದರೂ ಕಷ್ಟಕಾಲವು ಬಂದಿರುವುದೋ? ಅನ್ಯಾಸಕ್ತಳಾಗಿರುವವಳನ್ನು ಇಲ್ಲಿಗೆ ತಂತ್ರದಿಂದ ಬರಮಾಡಿರುವಿರೆಂದು ಕಾಣುವುದು!"

ಖಾನ—"ಭರ್ತನು ನಿಂದೆಯನ್ನು ಹೊರಿಸಿ ಮನೆಯಿಂದ ಆಕೆಯನ್ನು ಹೊರಡಿಸಿದನಂತೆ. ಆದುದರಿಂದ ದುಃಖಿತೆಯಾಗಿ ಎಲ್ಲಿಗೋ ಹೋಗುತ್ತಿದ್ದವಳನ್ನು ನನ್ನ ಮಿತ್ರನು ಇಲ್ಲಿಗೆ ಕರೆತಂದಿರುವನು. ಆಕೆಗೆ ನನ್ನಲ್ಲಿ ಅನುರಾಗವಿರುವುದೋ ಇಲ್ಲವೋ ನನಗೆ ತಿಳಿಯದು."

ಫಕೀರ—"ಒಂದುವೇಳೆ ಅನುರಾಗವಿಲ್ಲದಿದ್ದರೂ ದರ್ಶನಸಂಭಾಷಣದಾನಮಾನಾದಿಗಳಿಂದ ಅದನ್ನು ಸಂಪಾದಿಸಬಹುದು. ಆಕೆಯನ್ನು ಒಲಿಸಿಕೊಳ್ಳಲು ಬೇಕಾದ ವಾಕ್ಚಾತುರ್ಯವು ತಮಗೆ ಇರುವುದೋ ಇಲ್ಲವೋ ಎಂದು ಸಂದೇಹಿಸಿ, ರಾಮಯಮಂತ್ರಿಯು ತಮಗೆ ಹಾಗೆ ಹೇಳಿರಬಹುದು. ತಮ್ಮ ವಾಕ್ಚಾತುರ್ಯದಿಂದ ಆಕೆಯನ್ನು ತಪ್ಪದೆ ವಶಪಡಿಸಿಕೊಳ್ಳಬಲ್ಲಿರಿ ಎಂದು ನನಗೆ ಸಂಪೂರ್ಣವಾದ ನಂಬಿಕೆಯುಂಟು. ಇದೂ ಅಲ್ಲದೆ ಆಕೆಯು ಪ್ರಥಮಭರ್ತನಿಂದ ತಿರಸ್ಕೃತಳಾಗಿರುವುದರಿಂದ, ಆಕೆಯ ಅನುರಾಗಲತೆಗೆ ಬೇರೊಂದು ಆಶ್ರಯವು ಇಲ್ಲದೇ ಇರಲು ಸಾಧ್ಯವಲ್ಲ. ಆದುದರಿಂದ ಆಶ್ರಯಾಂತರವನ್ನು ಸಂಪಾದಿಸಿಕೊಳ್ಳುವುದಕ್ಕೆ ಮೊದಲೇ, ತಾವು ಆಕೆಯನ್ನು ಕಾಣುವುದು ಬಹಳ ಒಳ್ಳೆಯದು."

" ರೋಗಿ ಬಯಸಿದುದೂ ಹಾಲೋಗರ; ವೈದ್ಯ ಹೇಳಿದುದೂ ಹಾಲೋಗರ " ಎಂಬ ಗಾದೆಯಂತೆ ತೋಫಲ್‌ಖಾನನಿಗೆ ಫಕೀರನ ಈ ಮಾತುಗಳನ್ನು ಕೇಳಿ, ಬಹಳ ಸಂತೋಷವಾಯಿತು. ಆದುದರಿಂದ ಅನಂಗಸೇನೆಯನ್ನು ಕಾಣುವುದು ಒಳ್ಳೆಯದೆಂದು ಭಾವಿಸಿ, ಫಕೀರನನ್ನು ಕುರಿತು " ಓ ಮಹಾತ್ಮರೇ ! ತಮ್ಮ ಅಪ್ಪಣೆಯಂತೆ ಆ ಯುವತಿಯನ್ನು ನೋಡಲು ಈಗಲೇ ಹೊರಡುವೆನು. ತಾವು ಶ್ರಮವೆಂದು ಭಾವಿಸದೆ, ನನ್ನೊಡನೆ ದಯಮಾಡಿಸಿ, ಆಕೆಯನ್ನು ನೋಡಿ, ಮುಖಲಕ್ಷಣಗಳನ್ನು ಪರೀಕ್ಷಿಸಿ ಶುಭಾಶುಭಗಳನ್ನು ತಿಳಿಸಬೇಕೆಂದು ಬೇಡುತ್ತೇನೆ. ಸಂಬಂಧವು ಅನುಕೂಲಿಸಿದರೆ ಆಕೆಗೆ ಮಹಮ್ಮದೀಯ ಮತದೀಕ್ಷೆಯನ್ನು ಕೊಡಬೇಕಾದುದು ಆವಶ್ಯಕವಾದುದರಿಂದ, ಇದೂ ಒಂದು ಮತಕಾರ್ಯವೆಂದು ಪರಿಭಾವಿಸಿ ನನ್ನೊಡನೆ ಚಿತ್ತೈಸಬೇಕು. " ಎಂದು ಹೇಳಿಕೊಳ್ಳಲು, ಫಕೀರನು ಅದಕ್ಕೆ ಸಮ್ಮತಿಸಿದನು. ಆ ಬಳಿಕ ಇಬ್ಬರೂ ಹೊರಟು, ಅನಂಗಸೇನೆಯು ಇದ್ದ ವಿಶ್ರಮ ಮಂದಿರವನ್ನು ಪ್ರವೇಶಿಸಿದರು.

ಇಪ್ಪತ್ತುಮೂರನೆಯ ಪ್ರಕರಣ.

ಔಷಧ ಮಾರುವವನು.

ಆರಾಮಮಂದಿರದಲ್ಲಿ ಇಳಿದುಕೊಂಡಿದ್ದ ಆ ಸ್ತ್ರೀಯರು ರಾಮಯ ಮಂತ್ರಿಗಾಗಿ ಕಾದಿದ್ದರು. ಬೆಳಗ್ಗೆ ಬರುವೆನೆಂದು ಹೇಳಿಹೋಗಿದ್ದರೂ, ಆತನು ಬರಲಿಲ್ಲ; ಆದರೂ ಅವರು ನಿರಾಶರಾಗಲಿಲ್ಲ. ಹೀಗೆಯೇ ನಿರೀಕ್ಷಿಸುತ್ತಾ ನಿರೀಕ್ಷಿಸುತ್ತಾ ಒಂದು ವಾರವಾಯಿತು. ಎರಡನೆಯ ವಾರವೂ ಕಳೆದು ಹೋಯಿತು. ಯೋಗ್ಯನೆಂದು ತಿಳಿದಿದ್ದ ಆ ಬ್ರಾಹ್ಮಣನು ತಮಗೆಂದಿಗೂ ಮೋಸಮಾಡಲಾರನೆಂದು ನಂಬಿಕೊಂಡಿದ್ದುದರಿಂದ, ಆ ಬ್ರಾಹ್ಮಣನು ಬಾರದೆ ಇರಲಾರನೆಂದು ಭಾವಿಸಿದ್ದರು.

ಪ್ರತಿದಿನವೂ ವೇಳೆಗೆ ಮೀರದೆ ಒಬ್ಬ ಪರಿಚಾರಿಕೆಯು ಆಹಾರವನ್ನು ತಂದುಕೊಡುತ್ತಿದ್ದಳು. ಅದನ್ನು ಯಾರು ಕಳುಹಿಸುತ್ತಿರುವರೆಂದು ಕೇಳಲು, ಆ ಸೇವಕಿಯು ಆಹಾರವನ್ನು ತನ್ನ ಪ್ರಭುವು ಕಳುಹಿಸುತ್ತಿರುವನೆಂದು ಹೇಳಿದಳು. ತಮಗೆ ಪರಿಚಿತನಾದ ಬ್ರಾಹ್ಮಣನಿಗೆ ಆ ದುರ್ಗಾಧೀಶನು ಮಿತ್ರನಾದುದರಿಂದ, ಆ ಬ್ರಾಹ್ಮಣನ ಇಷ್ಟದಂತೆ, ಆತನು ಕಳುಹಿಸುತ್ತಿರಬಹುದೆಂದು ಭಾವಿಸಿದರು. ಅವರಿದ್ದ ಸ್ಥಳಕ್ಕೆ ಪುರುಷರು ಯಾರೂ ಬರುತ್ತಿರಲಿಲ್ಲವಾದುದರಿಂದ, ಆ ಸ್ಥಳವು ಸ್ತ್ರೀಜನವಾಸಯೋಗ್ಯವೆಂದೂ, ನಿರಪಾಯಕರವೆಂದೂ ತಿಳಿದು ಕಾಲವನ್ನು ಕಳೆಯುತ್ತಿದ್ದರು. ಆ ಸೌಧದಲ್ಲಿ ಇದ್ದ ವಸ್ತುಗಳು ಅನಂಗಸೇನೆಯ ನಿವಾಸಭವನದಲ್ಲಿ ಇರುತ್ತಿದ್ದ ವಸ್ತುಗಳಂತೆಯೇ ಸುಂದರವಾಗಿಯೂ ವೈಭವ ಯುಕ್ತವಾಗಿಯೂ ಇದ್ದುದರಿಂದ

ಆಕೆಗೆ ಹಿಂದಿನ ಸ್ಮರಣೆಯೂ ಉಂಟಾಗಿ ದುರ್ಭರವಾದ ವ್ಯಥೆಯುಂಟಾಗು ತ್ತಿತ್ತು. ಹಿಂದೆ ಸಕಲವಿಧವಾದ ಸುಖಕ್ಕೆ ಪಾತ್ರಳಾಗಿದ್ದ ತಾನು ಪರದೇಶಕ್ಕೆ ಬಂದು, ಅನ್ಯನಸೌಧದಲ್ಲಿ ವಾಸಿಸುತ್ತಾ ಪರಾನ್ನವನ್ನು ತಿನ್ನಬೇಕಾಗಿ ಬಂದಿದ್ದುದರಿಂದ ಆಕೆಯ ವ್ಯಸನಕ್ಕೆ ಮೇರೆ ಇರಲಿಲ್ಲ. ಆದರೂ ಮಾಲತಿಯು ಎಡೆಬಿಡದೆ ಆಕೆಯ ಸಮೀಪದಲ್ಲಿದ್ದುಕೊಂಡು ಸಮುಚಿತ ವಚನಗಳಿಂದ ಆಕೆಗೆ ಸಮಾಧಾನವನ್ನುಂಟುಮಾಡುತ್ತಿದ್ದಳು. ಆದರೆ ಮನೋವ್ಯಥೆಯು ಅನಂಗಸೇನೆಯ ಆರೋಗ್ಯವನ್ನು ಸ್ವಲ್ಪಸ್ವಲ್ಪವಾಗಿ ಹಾಳುಮಾಡುತ್ತಿತ್ತು. ಒಂದಾನೊಂದುರಾತ್ರಿ, ಅನಂಗಸೇನೆಯೂ ಮಾಲತಿಯೂ ಈ ಮೇರೆಗೆ ಮಾತನಾಡಿಕೊಳ್ಳುತ್ತಿದ್ದರು :—

ಅನಂಗಸೇನೆ—"ಮಾಲತಿ! ಆಬ್ರಾಹ್ಮಣನು ಇನ್ನೂ ಏತಕ್ಕೆ ಬರಲಿಲ್ಲ? ಅವನು ನಮ್ಮನ್ನು ಯಾವ ಅಭಿಪ್ರಾಯದಿಂದ ಈ ತುರುಷ್ಕರಾಜ್ಯಕ್ಕೆ ತಂದು ಬಿಟ್ಟಿರಬಹುದು? ದುರ್ಭರಶೋಕಸಂತಪ್ತಳಾಗಿದ್ದ ನನಗೆ ಈ ಬರಸಿಡಿಲು ಬೇರೆ ಬರಗಿರುವುದಲ್ಲ—" ಇನ್ನು ಮುಂದಕ್ಕೆ ಮಾತನಾಡಲಾರದೆ ಗೊಳೋ ಎಂದು ಅಳಲಾರಂಭಿಸಿದಳು. ಇದನ್ನು ಕಂಡು ಮಾಲತಿಗೂ ಬಹಳ ದುಃಖ ಬಂತು. ಆದರೂ ಕೂಡಲೆ ಧೈರ್ಯವನ್ನವಲಂಬಿಸಿದಳು. ಜಾಣಳಾದ ಮಾಲತಿಯು, ಆಬ್ರಾಹ್ಮಣನು ಮಹಾ ನ್ಯಾಯಾವಿಯೆಂದೂ, ಅವನಿಗೆ ಅನಂಗಸೇನೆಯು ಊಹಿಸಿದ್ದಂತೆ ಯಾವುದೋ ದುರುದ್ದೇಶವು ಇರಬೇಕೆಂದೂ ಭಾವಿಸಿ, ಉಪಾಯವಾಗಿ ಆ ದುರ್ಗದಿಂದ ತಪ್ಪಿಸಿಕೊಳ್ಳಬೇಕೆಂದು ಅಲ್ಲಿಗೆ ಬಂದ ಎರಡನೆಯ ದಿವಸದಿಂದಲೇ ಬಗೆಬಗೆಯಾಗಿ ಆಲೋಚಿಸುತ್ತಿದ್ದಳು. ತನ್ನ ಶಂಕೆಯನ್ನು ಸ್ವಲ್ಪವಾದರೂ ತೋರ್ಪಡಿಸಿಕೊಳ್ಳದೆ, "ಅಮ್ಮ! ನೀನು ಯೇಕೆ ಹೀಗೆ ದುಃಖಿಸುತ್ತಿರುವೆ? ಆಬ್ರಾಹ್ಮಣನು ಪರೋಪಕಾರಿಯೆಂದೂ ಮಹಾಯೋಗ್ಯನೆಂದೂ ಕಾಣುವನು. ಅವನು ನಮ್ಮನ್ನು ವಂಚಿಸಲಾರನು. ಅವನಿಗೆ ಏನೋ ಕೆಲಸ ಬಂದಿರುವುದರಿಂದ

ಇಲ್ಲಿಗೆ ಬರಲಿಲ್ಲವೆಂದು ಕಾಣುವುದು. ಕರುಣಾನಿಧಿಯಾದ ಭಗವಂತನು ಅತ್ಯಂತ ದುಃಖಸಂತಪ್ತಳಾದ ನಿನಗೆ ಪುನಃ ಕಷ್ಟವನ್ನುಂಟುಮಾಡಲಾರನು. ಆದುದರಿಂದ ಚಿಂತಿಸಬೇಡ. ಇಷ್ಟರಲ್ಲಿಯೇ ಆ ವಿಪ್ರನು ಬಂದು ನಮ್ಮನ್ನು ಗಮ್ಯಸ್ಥಾನಕ್ಕೆ ಕರೆದುಕೊಂಡು ಹೋಗುವನು." ಎಂದು ಧೈರ್ಯಹೇಳಿದಳು.

ಅನಂಗ—" ಮಾಲತಿ ! ಆಪತ್ಸಾಗರದಲ್ಲಿ ನಿಮಗ್ನಳಾಗಿರುವ ನನಗೆ ಭಗವಂತನು ದೃಢತರನೌಕದಂತಿರುವ ನಿನ್ನನ್ನು ದಯೆಪಾಲಿಸಿರುವನು. ಆದುದರಿಂದಲೇ ನಾನು ಇನ್ನೂ ಜೀವಸಹಿತಳಾಗಿರುವೆನು ಆ ಬ್ರಾಹ್ಮಣನು ಬರುವನೋ ಇಲ್ಲವೋ, ಎಲ್ಲಿಯಾದರೂ ವಿಚಾರಿಸುವೆಯಾ? ಒಂದು ವೇಳೆ ಅವನು ಬಾರದೇ ಇರುವಲ್ಲಿ, ಸರಿಹೊತ್ತಿನಲ್ಲೇ ತಪ್ಪಿಸಿಕೊಂಡು ಹೊರಟು ಹೋಗುವುದು ಒಳ್ಳೆಯದಲ್ಲವೇ ? ಇದಕ್ಕೆ ನೀನೇನುಹೇಳುವೆ ? "

ಈ ವಾಕ್ಯಗಳನ್ನು ಕೇಳಿ ಮಾಲತಿಯು " ಅಮ್ಮಾ ! ಆ ಬ್ರಾಹ್ಮಣನಿಗಾಗಿ ಎಲ್ಲೆಲ್ಲೋ ವಿಚಾರಿಸಿದೆ. ಅವನು ಈ ಊರಲ್ಲಿಯೇ ಇರುವನಂತೆ. ನಾನೇ ಅವನನ್ನು ಕಾಣಬೇಕೆಂದು ಯೋಚಿಸಿದೆ. ಆದರೆ ಯಾರಾದರೂ ದುಷ್ಟರಾದ ತುರುಷ್ಕರಿಂದ ಏನಾದರೂ ಕೇಡು ಸಂಭವಿಸೀತೆಂದು ಹೆದರುತ್ತಿರುವೆನು. ಹೇಗಾದರೂ ಮಾಡಿ ಆತನ ವೃತ್ತಾಂತವನ್ನು ನಾಳೆ ತಿಳಿದುಕೊಂಡು ಬರುವೆನು. ಈದಿಸ ನಿಶ್ಚಿಂತೆಯಿಂದ ನಿದ್ರೆಮಾಡು. ಇಲ್ಲದಿದ್ದರೆ ದೇಹಾರೋಗ್ಯವು ಕೆಟ್ಟೀತು." ಎಂದು ಸಂತೈಸುತ್ತಿದ್ದಳು.

ಅಷ್ಟರಲ್ಲಿ ಯಾರೋಬರುತ್ತಿದ್ದ ಶಬ್ದವು ಕೇಳಬಂದುದರಿಂದ, ತಾವು ಯೋಚಿಸುತ್ತಿದ್ದ ಬ್ರಾಹ್ಮಣನೇ ಬರುತ್ತಿರಬಹುದೆಂದು ಊಹಿಸಿದರು. ಆದರೆ ಅವನಿಗೆ ಬದುಲು, ಭಯಂಕರ ವೇಷವನ್ನು ಧರಿಸಿದ್ದ ಇಬ್ಬರು ಗಂಡಸರು ಅಲ್ಲಿಗೆ ಬಂದರು. ಅವರನ್ನು ಕಂಡು, ಭಯೋದ್ರೇಕದಿಂದ ಅನಂಗಸೇನೆಯು ಮೂರ್ಛೆ ಹೋದಳು. ಇದೇ ಸಮಯವೆಂದು ತೋಫಲ್

ಖಾನನು ಆಕೆಯ ಸೌಂದರ್ಯವನ್ನು ನೋಡುತ್ತಿದ್ದನು. ಈ ಘಟನೆಗಳನ್ನು ಕಂಡು, ಮಾಲತಿಯು ಮೊದಲು ಭಯಪಟ್ಟಿದ್ದರೂ, ಸಮಯಸ್ಫೂರ್ತಿಯು ಳ್ಳವಳಾದುದರಿಂದ ಅನಂಗಸೇನೆಯ ಬಳಿಗೆ ಬಂದು, ಮೇಲೆ ಮುಸುಕನ್ನು ಹಾಕಿ, ತಾನೂ ಒಂದು ಮುಸುಕನ್ನು ಮುಖದಮೇಲೆ ಧರಿಸಿಕೊಂಡಳು. ತನ್ನ ಆನಂದಕ್ಕೆ ಅಂತರಾಯವು ಒದಗಿತೆಂದು ತೋಫಲ್‌ಖಾನನು ದುರುದು ರನೆ ಮಾಲತಿಯನ್ನು ನೋಡುತ್ತಿದ್ದನು. ಆಕೆಯು ಧೈರ್ಯದಿಂದ, "ಅಯ್ಯಾ! ನೀವು ಯಾರು? ಇಂತಹ ರಾತ್ರಿಯಲ್ಲಿ, ಅಸಹಾಯರಾಗಿರುವ ಅಬಲೆಯರು ಇಳಿದುಕೊಂಡಿರುವಸ್ಥಳಕ್ಕೆ, ನಿಸ್ಸಂಕೋಚದಿಂದ ಬರು ವುದು, ತಮ್ಮಂತಹ ಉದಾರಪುರುಷರಿಗೆ ಅಯುಕ್ತವೆಂದು ತಿಳಿದೇ ಇರುವು ದಲ್ಲವೇ? ನಿಮ್ಮ ವೇಷಗಳನ್ನು ನೋಡಿದರೆ ದೊಡ್ಡಮನುಷ್ಯರೆಂದು ತೋ ರುವುದು, ಆದರೆ ತಮ್ಮ ವರ್ತನವುಮಾತ್ರ ವೇಷಕ್ಕೆ ಅನುಗುಣವಾಗಿಲ್ಲ. ನಿಮ್ಮ ಈ ನಡತೆಯನ್ನುಕಂಡು ನಮ್ಮ ಸ್ವಾಮಿನಿಯು ಭಯೋದ್ರೇಕದಿಂದ ಮೂರ್ಛೆ ಹೋಗಿರುವಳು. ಇನ್ನಾದರೂ ದೀನಳಾದ ನನ್ನ ಪ್ರಾರ್ಥನೆ ಯನ್ನು ಲಾಲಿಸಿ, ದಯವಿಟ್ಟು ಹೊರಟುಹೋಗಿರಿ." ಎಂದು ಹೇಳಿದಳು

ಈ ಮಾತುಗಳನ್ನುಕೇಳಿ ತೋಫಲ್‌ಖಾನನು ಪಕಪಕನೆ ನಗುತ್ತಾ, "ನಾನು ಈ ದುರ್ಗಾಧಿಪತಿಯಾದ ತೋಫಲ್‌ಖಾನನು. ನೀನು ನನ್ನ ದುರ್ಗ ದಲ್ಲೇ, ನನ್ನಮಂದಿರದಲ್ಲೇ ವಾಸಿಸುತ್ತಿದ್ದರೂ, ನನ್ನನ್ನು ಗೌರವಿಸದೆ ಹೀಗೆ ಮಾತನಾಡುವುದನ್ನು ನೋಡಿ ಆಶ್ಚರ್ಯವಾಗುತ್ತಿದೆ ಈ ಠಕ್ಕುಮಾತುಗ ಳಿಂದ ನನ್ನನ್ನು ಮರುಳುಗೊಳಿಸಬೇಕೆಂಸಿರುವೆಯಾ? ಎಲ್ಲಿ! ಆ ಮುಸು ಕನ್ನು ತೆಗೆದು ಎಸೆದುಬಿಡು ನಿನಗೆ ಬಹುಮಾನವನ್ನು ಕೊಡುವೆನು. ಎಂದುಹೇಳಿದನು.

ಈ ಮಾತುಗಳನ್ನು ಕೇಳಿ ಮಾಲತಿಗೆ ಕೋಪವು ಕಿಡಿಕಿಡಿಯಾಗು ತ್ತಿತ್ತು; ಮುಖವೂ ಕಣ್ಣುಗಳೂ ಕೆಂಪಾದುವು; ಮೈಯೆಲ್ಲಾ ನಡುನಡುಗು

ತ್ತಿತ್ತು. ಪ್ರಾಣ ಹೋದರೂ ಹೋಗಲಿ ಎಂದು ಧೈರ್ಯದಿಂದ ಖಾನನ ಮುಖಮುರಿಯುವಂತಹ ಉತ್ತರವನ್ನು ಕೊಡಬೇಕೆಂದು ನಿರ್ಧರಿಸಿದಳು. ಅಷ್ಟರಲ್ಲಿ ಒಬ್ಬ ಪುರುಷನು ಬಹಳ ತ್ವರೆಯಾಗಿ ಬಂದು, ಖಾನನ ಕೈಗೆ ಒಂದು ಪತ್ರವನ್ನು ಕೊಟ್ಟನು. ಅದನ್ನು ಓದಿಕೊಂಡು ತನ್ನ ಬಳಿಯ ಲ್ಲಿದ್ದ ಫಕೀರನನ್ನು ನೋಡಿ, "ನಮ್ಮ ಪ್ರಭುಗಳಾದ ಅದಿಲ್‌ಷಹಾ ಅವರು ಇಲ್ಲಿಗೆ ದಯೆಮಾಡಿಸುವರಂತೆ. ಅವರು ಇಷ್ಟು ಬೇಗ ಬರುವ ರೆಂದು ನಾನು ನಂಬಿರಲಿಲ್ಲ, ಕೂಡಲೇ ಅವರನ್ನು ಇದಿರುಗೊಂಡು ಕರೆ ತರಬೇಕು." ಎನ್ನಲು, ಆ ಫಕೀರನು ಆತನನ್ನು ಕುರಿತು, "ಓ! ಖಾನ್ ವರ್ಯರೆ! ಹಾಗಾದರೆ ತಡಮಾಡಬಾರದು, ನಡೆಯಿರಿ. ಇನ್ನೊಂದುದಿನ ಬಂದು ಈ ಸುಂದರಿಯೊಡನೆ ಮಾತನಾಡಿಕೊಂಡು ಹೋಗಬಹುದು. ಆಕೆಯ ಮುಖಲಕ್ಷಣಗಳನ್ನು ಪರಿಶೀಲಿಸಿರುವೆನು. ಎಲ್ಲಾ ವಿಧಗಳಲ್ಲಿಯೂ ಆಕೆಯು ತಮಗೆ ಅನುಕೂಲಳಾದ ಪತ್ನಿಯಾಗುವಳು!" ಎಂದು ಪ್ರತ್ಯುತ್ತರಕೊಟ್ಟನು. ಆ ಬಳಿಕ ಅವರಿಬ್ಬರೂ ಅಲ್ಲಿಂದ ಹೊರಟುಹೋದರು.

ಆಗ ಮಾಲತಿಯು "ಅಮ್ಮಾ! ಅವರು ಹೊರಟುಹೋದರು. ಅವರು ನಮಗೆ ಅಗೌರವವನ್ನು ಮಾಡಲಿಕ್ಕೆ ಬಂದಿರಲಿಲ್ಲ, ಏಳು" ಎಂದು ಸಮಾಧಾನ ಪಡಿಸಿದಳು. ಆದರೆ ವಾಸ್ತವವಾಗಿಯೂ ಅನಂಗಸೇನೆಗೆ ಮೂರ್ಛೆ ಉಂಟಾಗಿರಲಿಲ್ಲವಾದುದರಿಂದ ಅದಕ್ಕೆಮುಂಚೆ ನಡೆದಿದ್ದ ಸಂಭಾಷಣೆಯೆಲ್ಲವನ್ನೂ ಆದ್ಯಂತವಾಗಿ ಕೇಳಿದ್ದಳು. ಆದುದರಿಂದ "ಅಮ್ಮಾ! ಮಾಲತಿ ಏಕೆ ಸುಮ್ಮನೆ ಮರೆಮಾಚುತ್ತಿರುವೆ? ಆ ಕುಟಿಲ ವಿಪ್ರನು ನಮಗೆ ಎಂತಹ ಆಪತ್ತನ್ನು ತಂದಿರುವನು! ಇನ್ನು ಬದುಕಿರುವುದು ವ್ಯರ್ಥ. ನೀನು ನನಗಾಗಿ ಬಹಳ ಕಷ್ಟಗಳನ್ನು ಅನುಭವಿಸಿದೆ. ನಿನ್ನ ಬಂಧುಗಳನ್ನೆಲ್ಲರನ್ನೂ ಬಿಟ್ಟು ನನ್ನೊಡನೆ ಈ ವಿದೇಶಕ್ಕೆಬಂದೆ. ಆದರೂ ಸಾರ್ಥಕವಾಗಲಿಲ್ಲ. ಇಂದಿಗೆ ನನ್ನ ನಿನ್ನ ಋಣಾನುಬಂಧವು ಮುಗಿಯಿತು. ಈದಿನ ರಾತ್ರಿಯು

ಅಂತ್ಯವಾಗುವುದರೊಳಗಾಗಿ ನನ್ನ ಜೀವನವೂ ಕಡೆಗಾಣುವುದು. ಇನ್ನಾದರೂ ನೀನು ನಿಮ್ಮವರಬಳಿಗೆ ಹೊರಟುಹೋಗು '' ಎಂದು ಅಳುತ್ತಾ ಉತ್ತರ ಹೇಳಿದಳು.

ಈ ನಿರಾಶಾದ್ಯೋತಕವಚನಗಳನ್ನು ಕೇಳಿ ಮಾಲತಿಗೆ ಎದೆಯೊಡೆದಂತಾಯಿತು. ಆದರೂ ಅಂತಹ ವಿಷಮಸಮಯದಲ್ಲಿ ಧೃತಿಗೆಟ್ಟರೆ ಕೆಲಸಕೆಡುವುದೆಂದು ತಿಳಿದು '' ಅಮ್ಮಾ ! ನೀನು ಇಷ್ಟು ನಿರಾಶಳಾಗುವುದು ಏಕೆ? ಪ್ರಾಣಗಳನ್ನು ಕಳೆದುಕೊಳ್ಳುವಷ್ಟುಮಟ್ಟಿಗೆ ಕೆಲಸಕೆಟ್ಟಿರುವುದೇ ? ನಿನ್ನ ಈ ಸೇವಕಳು ಬದುಕಿರುವಾಗ ನಿನಗೆ ಅವಮಾನವಾಗುವುದುಂಟೆ? ಒಂದು ವೇಳೆ ಆ ದುರಾತ್ಮನು ಅಗೌರವಪಡಿಸಲು ಯತ್ನಿಸಿದರೂ, ಕರುಣಾಶಾಲಿಯೂ ಅನಾಥಸಂರಕ್ಷಕನೂ ಆದ, ಶ್ರೀ ಕೃಷ್ಣನು ನಮ್ಮನ್ನು ಈ ಕಷ್ಟಕಾಲದಲ್ಲಿ ಕೈಬಿಡುವನೆ? ಸರ್ವ ಪ್ರಯತ್ನಗಳನ್ನೂ ಮಾಡಿ ನಿಮ್ಮನ್ನು ಈ ಕಷ್ಟದಿಂದ ತಪ್ಪಿಸುವನು. '' ಎಂದು ಧೈರ್ಯಹೇಳಿದಳು.

ಅನಂಗ—'' ಮಿತ್ರಳೆ ! ನಿನ್ನ ಮಾತುಗಳು ನಿಷ್ಫಲವಾದುವೆಂದು ತಿಳಿದಿದ್ದೇನೆ. ನನ್ನ ದುಃಖಪ್ರವಾಹಕ್ಕೆ ಏನಾದರೂ ಒಂದು ಅಡ್ಡಕಟ್ಟೆಯನ್ನು ಹಾಕಬೇಕೆಂದು ಪ್ರಯತ್ನಿಸುತ್ತಿರುವೆ. ಆದರೆ ಅದರಿಂದ ಫಲವೇನೂ ಇಲ್ಲ." ಎಂದುಹೇಳಿ ಬಹಳವಾಗಿ ಅಳುತ್ತಿದ್ದಳು. ಮಾಲತಿಯೂ, ತನ್ನ ಶಕ್ತಿಯೆಲ್ಲವನ್ನೂ ಪ್ರಯೋಗಿಸಿ ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದಳು. ದುಃಖಾತಿರೇಕದಿಂದ ಅನಂಗಸೇನೆಗೆ ಬಹಳ ತೀವ್ರವಾದ ಜ್ವರವು ಬಂತು. ಆ ಜ್ವರಕ್ಕೆ ಔಷಧವನ್ನು ತಂದುಹಾಕಿದಹೊರತು ಅನಂಗಸೇನೆಯು ಉಳಿಯಲಾರಳೆಂದು ಮಾಲತಿಯು ಭಯಪಟ್ಟಳು. ಆದುದರಿಂದ ಸ್ವಲ್ಪ ಹಣವನ್ನು ತೆಗೆದುಕೊಂಡು, ದುರ್ಗದ ಹೊರಕ್ಕೆಹೋಗಿ ಔಷಧವನ್ನು ತರಬೇಕೆಂದು ಹೊರಟಳು. ದುರ್ಗಾಧ್ಯಕ್ಷನಿಗೆ ಹೇಳಿದ್ದರೆ ಔಷಧವು ಸುಲಭವಾಗಿ ಸಿಕ್ಕುವುದೆಂದು ತಿಳಿದಿದ್ದರೂ, ಆ ದುರಾತ್ಮನಿಂದ ಉಪಕೃತಳಾದರೆ ಕೇಡುಮಾಡದೆ

ತಪ್ಪದೆಂದು ಹೆದರಿ, ಹೊರಗಿನಿಂದ ಔಷಧವನ್ನು ತರಬೇಕೆಂದು ನಿರ್ಧರಿಸಿದ್ದಳು. ಆದರೆ ದುರ್ಗದ ಹೊರಕ್ಕೆಹೋಗುವುದು ಸುಲಭವಾಗಿರಲಿಲ್ಲ. ಹೊಸದಾಗಿ ಬಂದಿದ್ದ ಆ ಸ್ತ್ರೀಯರಲ್ಲಿ ಒಬ್ಬರನ್ನೂ ಹೊರಗೆ ಬಿಡಕೂಡದೆಂದು ಕಟ್ಟಪ್ಪಣೆಯಾಗಿತ್ತು. ಆದುದರಿಂದ ಮಾಲತಿಯನ್ನು ಹೊರಕ್ಕೆ ಹೋಗಕೂಡದೆಂದು ಕಾವಲುಗಾರರು ತಡೆದುಬಿಟ್ಟರು. ಚತುರಳಾದ ಮಾಲತಿಗೆ ಈ ತಡೆಯು ಲೆಕ್ಕವೆ? ನಯವಾದ ಮಾತುಗಳಿಂದಲೂ, ದೀನಾಲಾಪಗಳಿಂದಲೂ ಕರ್ಕಶಹೃದಯರಾದ ಆ ದುರ್ಗರಕ್ಷಕಭಟರ ಎದೆಯನ್ನು ಕರಗಿಸಿಬಿಟ್ಟಳು. ಇವರ ಜೊತೆಗೆ ಅವಳು ತಂದಿದ್ದ ಹಣವು ಅವರ ಕರ್ತವ್ಯಜ್ಞಾನವನ್ನು ಮರೆಮಾಡಿಬಿಟ್ಟಿತು. ಆದುದರಿಂದ, ಇದಕ್ಕೆ ಸ್ವಲ್ಪಮುಂಚೆ ಅಲ್ಲಿಗೆ ಬಂದಿದ್ದ ಒಬ್ಬ ವೈದ್ಯನ ಬಳಿಯಲ್ಲಿ ಔಷಧವನ್ನು ತೆಗೆದುಕೊಂಡು ಹೋಗಬಹುದೆಂದು ಆ ಭಟರು ಅವಕಾಶಕೊಟ್ಟರು. ಈ ವಿಷಯವನ್ನು ಬಹಳ ಗೋಪ್ಯವಾಗಿಟ್ಟಬೇಕೆಂದು ಬೆದರಿಸಿದರು. ಆದರೆ ಆ ವೈದ್ಯನು ಅಷ್ಟುಹೊತ್ತಿಗೆ ಹೊರಟುಹೋಗಿದ್ದುದರಿಂದ ಮಾಲತಿಗೆ ಆಶಾಭಂಗವಾಯಿತು. ಆದರೂ ಧೈರ್ಯಗೆಡದೆ ಅನಂಗಸೇನೆಯಬಳಿಗೆ ಆಗಾಗ ಹೋಗಿ ಶಿಶಿರೋಪಚಾರಮಾಡುತ್ತಲೂ, ಆ ವೈದ್ಯನು ಬಂದಿರುವನೋ ಇಲ್ಲವೋ ಎಂದು ಆಗಾಗ ದುರ್ಗದ ಬಾಗಿಲಿಗೆ ಹೋಗಿ ನೋಡುತ್ತಲೂ ಇದ್ದಳು. ಕಡೆಗೆ ಆ ವೈದ್ಯನು ಪುನಃ ಬಂದು ದುರ್ಗರಕ್ಷಕಭಟರಿಗೆ ಬೇಕಾದ ಕೆಲವು ಔಷಧಗಳನ್ನು ಉಚಿತವಾಗಿಯೂ, ಮತ್ತೆ ಕೆಲವನ್ನು ಸುಲಭಕ್ರಯಕ್ಕೂ, ಇನ್ನೂ ಕೆಲವನ್ನು ಕೊಸರಿಗಾಗಿಯೂ ಕೊಡುತ್ತ ನಿಂತಿದ್ದನು. ಇದನ್ನು ಮಾಲತಿಯು ತಿಳಿದು, ಬಹಳ ಸಂತೋಷದಿಂದ ಆ ವೈದ್ಯನಬಳಿಗೆ ಹೋಗಿ ಈ ಮೋರೆಗೆ ಹೇಳಿಕೊಂಡಳು:—

ಮಾಲತಿ—"ವೈದ್ಯಶ್ರೇಷ್ಠರೆ! ನನ್ನ ಸ್ನೇಹಿತೆಯರೊಬ್ಬರಿಗೆ ಬಹಳ ದಾರುಣವಾದ ಜ್ವರಬಂದಿದೆ. ತಕ್ಕ ಔಷಧವನ್ನುಕೊಟ್ಟು ಅವರನ್ನು ಬದುಕಿಸಿದರೆ ತಾವು ಕೋರಿದ ಬಹುಮಾನವನ್ನು ಕೊಡಿಸುವೆನು."

ವೈದ್ಯ—“ಓ ಸ್ತ್ರೀಯೆ! ರೋಗಿಯನ್ನು ನೋಡದೆ ಔಷಧ ಕೊಟ್ಟರೆ ಪ್ರಯೋಜನವೇನು ? ಆಕೆಯನ್ನು ಒಂದುಸಾರಿ ನೋಡಬೇಕಲ್ಲಾ ? ”

ಮಾಲತಿ—“ಸ್ವಾಮಿ ! ನಾವು ಅನಾಥರು. ಇವರಕೈಗೆ ಸಿಕ್ಕಿರುವೆವು. ಇವರು ನಿಮ್ಮನ್ನು ಒಳಕ್ಕೆ ಬಿಡಲಾರರು. ರೋಗಲಕ್ಷಣವನ್ನು ತಿಳಿಸುವೆನು. ದಯೆಯಿಟ್ಟು ತಕ್ಕ ಔಷಧವನ್ನು ಕೊಡಬೇಕು.” ಎಂದು ಹೇಳಿ ರೋಗದ ಚಿಹ್ನೆಗಳೆಲ್ಲವನ್ನೂ ವಿವರಿಸಿದಳು.

ವೈದ್ಯ—“ನೀನು ಹೇಳಿದ ಲಕ್ಷಣಗಳಿಂದ ಆ ರೋಗವು ಇಂತಹುದೆಂದು ತಿಳಿಯಿತು. ಆದರೆ ಔಷಧಕ್ಕಾಗಿ ಹಣ ಕೊಟ್ಟರೆ, ಅದನ್ನು ಕೊಡುವೆನು.”

ಮಾಲತಿ—“ಸ್ವಾಮಿ ! ದ್ರವ್ಯವನ್ನು ಈಗಲೇ ಕೊಟ್ಟುಬಿಟ್ಟರೆ, ರೋಗಿಯು ಚೆನ್ನಾಗಿ ಚೇತರಿಸಿಕೊಳ್ಳುವವರೆಗೂ ಕಾಲಕಾಲಕ್ಕೆ ತಕ್ಕ ಔಷಧವು ದೊರೆಯುತ್ತದೋ ಇಲ್ಲವೋ ಎಂದು ಸಂಶಯವಾಗುವುದರಿಂದ ದಯೆಯಿಟ್ಟು ಕ್ಷಮಿಸಿರಿ. ತಮ್ಮ ಹಣಕ್ಕೆ ಎಷ್ಟು ಮಾತ್ರವೂ ಲೋಪ ಬರುವುದೆಂದು ಭಾವಿಸಬೇಡಿರಿ. ಬೇಕಾದರೆ ಪ್ರಮಾಣ ಮಾಡಿಕೊಡುತ್ತೇನೆ. ಮುಂಚೆ ಹಣಕೊಟ್ಟುಬಿಟ್ಟರೆ ರೋಗಿಗಳ ವಿಷಯದಲ್ಲಿ ವೈದ್ಯರು ಅಷ್ಟು ಶ್ರದ್ಧೆಯನ್ನು ವಹಿಸದೇ ಇರುವುದು ಸಹಜ. ಆದುದರಿಂದ ನಾನು ಹೀಗೆ ಮಾತಾಡುವೆನೆಂದು ಕೋಪಿಸಬೇಡಿರಿ.”

ವೈದ್ಯ—“ಕೋಪವೇಕೆ ! ಹಣದ ಆಸೆಗಾಗಿ ವೈದ್ಯರಾಗಿರುವವರಿಗಾದರೆ ದುಡ್ಡು ಹೋದೀತೆಂದು ಸಂಶಯ. ನನ್ನ ಔಷಧದಿಂದ ರೋಗಿಗೆ ಗುಣವಾಗುವುದೆಂದು ನನಗೆ ಚೆನ್ನಾಗಿ ನಂಬಿಕೆಯಿದೆ. ನೀನು ಹೇಳಿದಂತೆಯೇ ಆಗಲಿ. ಗುಣವಾದಮೇಲೆ ಬಹುಮಾನ ಮಾಡಬಹುದು. ನಾನು ಪ್ರತಿದಿನವೂ ಪ್ರಾತಃಕಾಲ ಸಾಯಂಕಾಲಗಳಲ್ಲಿ ಇಲ್ಲಿಗೆ ಬರುತ್ತಿರುವೆನು.

ಔಷಧವನ್ನು ಮಾತ್ರ ಹೇಳಿದಂತೆ ಕೊಡುತ್ತಿರು" ಎಂದು ಹೇಳಿ ಬಂದು ಬಿಳಿಯ ಕಾಗದದಲ್ಲಿ ಸ್ವಲ್ಪ ಬಿಳಿಯ ಪುಡಿಯನ್ನು ಹಾಕಿಕೊಟ್ಟನು.

ಅದನ್ನು ಮಾಲತಿಯು ತೆಗೆದುಕೊಂಡು ಬೇಗಬೇಗನೆ ಅನಂಗಸೇನೆಯ ಬಳಿಗೆ ಬಂದು "ಅಮ್ಮಾ! ಔಷಧವನ್ನು ತಂದಿರುವೆನು. ತೆಗೆದುಕೊ" ಎಂದು ಆಕೆಯನ್ನು ಎಬ್ಬಿಸಿದಳು. ಆಕೆಯು ಸ್ವಲ್ಪ ಕಣ್ಣು ತೆರೆದು "ಮಾಲತಿ! ನನಗೆ ಇನ್ನು ಔಷಧವೇಕೆ? ಈ ಲೋಕವನ್ನು ಬಿಟ್ಟು ಹೊರಟುಹೋದರೆ ಸಾಕೆಂದು ಕಾದಿರುವೆನು" ಎಂದು ನಿರಾಶೆಯಿಂದ ಉತ್ತರಕೊಟ್ಟಳು.

ಆಗ ಮಾಲತಿಯು "ಅಮ್ಮಾ! ಅಧೈರ್ಯಪಡಬೇಡ. ಈ ಔಷಧವನ್ನು ಸೇವಿಸಿದರೆ, ನಿನ್ನ ರೋಗವು ಗುಣವಾಗುವುದು" ಎಂದು ನಯದಿಂದ ಒಪ್ಪಿಸಿ ಸ್ವಲ್ಪ ಶುದ್ಧಜಲದಲ್ಲಿ ಅದನ್ನು ಹಾಕಿಕೊಟ್ಟಳು. ಅದನ್ನು ತೆಗೆದುಕೊಂಡ ಬಳಿಕ ಅನಂಗಸೇನೆಗೆ ಬೆವರು ಹಿಡಿದು, ನಿದ್ದೆ ಬಂತು. ಸ್ವಲ್ಪಸ್ವಲ್ಪವಾಗಿ ಜ್ವರವು ಬಿಡುತ್ತ ಬಂತು. ಇಷ್ಟರಲ್ಲಿ ಔಷಧವನ್ನು ಕಟ್ಟಿದ್ದ ಕಾಗದದಲ್ಲಿದ್ದ "ಅನಂಗಸೇನೆ" ಎಂಬ ಪದವು ಗೋಚರವಾಗಲು ಮಾಲತಿಯು ಕುತೂಹಲದಿಂದ ಆ ಕಾಗದವನ್ನು ಆದ್ಯಂತವಾಗಿ ಓದಿನೋಡಿಕೊಂಡು, ಪರಮಾನಂದಭರಿತಳಾದಳು. ತನ್ನ ಸಂತೋಷವನ್ನು ತಿಳಿಸಲು ಯಾವಾಗ ಅನಂಗಸೇನೆಗೆ ಎಚ್ಚರವಾಗುವುದೋ ಎಂದು ಕಾದಿದ್ದಳು.

ಸ್ವಲ್ಪ ಹೊತ್ತಾದ ಬಳಿಕ ಆಕೆಗೆ ಎಚ್ಚರವಾಗಲು, ಮಾಲತಿಯು "ಅಮ್ಮಾ! ನಿಮ್ಮ ದೇಹಸ್ಥಿತಿಯು ಈಗ ಸ್ವಲ್ಪ ಗುಣಮುಖವಾಗಿರುವುದೆ?" ಎಂದು ಮಾತನಾಡಿಸಿದಳು. ಅನಂಗಸೇನೆಗೆ ವಾಸ್ತವವಾಗಿಯೂ ಜ್ವರನಿಂತಿದ್ದರೂ, ತನಗೆ ಮುಂದೇನಾಗುತ್ತದೋ ಎಂಬ ಭಯವು ಮಾತ್ರ ಬಲವಾಗಿ ಬಾಧಿಸುತ್ತಿತ್ತು. ಆದುದರಿಂದ ತನ್ನ ಆರೋಗ್ಯದ ವಿಷಯದಲ್ಲಿ ಕೇವಲ ಅಲಕ್ಷ್ಯದಿಂದಿದ್ದಳು. ರೋಗವು ಹೆಚ್ಚಾಗಿ ಪ್ರಾಣವು

ಹೋದರೆ ಒಳ್ಳೆಯದೆಂದು ಭಾವಿಸಿಕೊಂಡಿದ್ದ ಅನಂಗಸೇನೆಯು ಆ ಪ್ರಶ್ನೆಗೆ ಅಷ್ಟು ಗಮನ ಕೊಡಲಿಲ್ಲ. ಇಂಗಿತಜ್ಞಳಾದ ಮಾಲತಿಯು ಇನ್ನು ಉಪೇಕ್ಷಿಸಬಾರದೆಂದು ಭಾವಿಸಿ, "ಅಮ್ಮಾ! ಅಸಹಾಯರಾದ ನಮಗೆ ಅನಾಥರಕ್ಷಕನಾದ ದೇವರು ಒಳ್ಳೆಯದು ಮಾಡುವನೆಂದು ನಾನೂ ಹೇಳಿದ್ದೆನಲ್ಲವೆ? ನನ್ನ ಮಾತು ಈಗಲೇ ನಿದರ್ಶನಕ್ಕೆ ಬಂದಿದೆ" ಎಂದಳು.

ಈ ಮಾತನ್ನು ಕೇಳಿ ಅನಂಗಸೇನೆಗೆ ಸ್ವಲ್ಪ ಆಸೆಯು ಅಂಕುರಿಸಿತು. ಇದನ್ನು ಕಂಡು ಮಾಲತಿಯು "ಆ ವೈದ್ಯನು, ತನ್ನ ಔಷಧವೊಂದರಿಂದ ಮಾತ್ರವೇ ಅಲ್ಲದೆ, ಈ ಪತ್ರದ ಮೂಲಕವೂ ನಿನ್ನ ರೋಗವನ್ನು ಗುಣಪಡಿಸಿರುವನು. ಇದನ್ನು ಓದುತ್ತೇನೆ. ಶಾಂತಳಾಗಿ ಕೇಳು" ಎಂದು ಈ ಮೇರೆಗೆ ಓದಲಾರಂಭಿಸಿದಳು :—

"ಮಾತೃಶ್ರೀ ಸಮಾನರಾದ ಅನಂಗಸೇನೆಯವರಿಗೆ—

ನಿಷ್ಕಾರಣವಾಗಿ ತಮ್ಮ ಮೇಲೆ ನಿಂದೆಯನ್ನು ಹೊರಿಸಿದುದಕ್ಕಾಗಿ ಚಕ್ರವರ್ತಿಯವರು ವ್ಯಥೆಪಡುತ್ತಿರುವರು. ಅವರ ಆಜ್ಞೆಯನ್ನು ಶಿರಸಾವಹಿಸಿ ತಮ್ಮನ್ನು ಹುಡುಕುತ್ತಲಿದ್ದೆನು. ಇಷ್ಟರಲ್ಲೇ ಅವರು ತಮ್ಮ ಬಳಿಗೆ ಕರೆಯಿಸಿಕೊಳ್ಳುವರು. ಚಿಂತಿಸ ಕೆಲಸವಿಲ್ಲ. ಬುದ್ಧಿವಂತಳಾದ ಮಾಲತಿಯು ಸಮೀಪದಲ್ಲಿರುವುದರಿಂದ ಧೈರ್ಯದಿಂದಿರಬಹುದು.

ರಾಮರಾಜ."

ಆ ಕಾಗದವನ್ನು ಓದಿ ಮುಗಿದಕೂಡಲೆ ಅದನ್ನು ತೆಗೆದುಕೊಂಡು ತಾನೇ ಓದಿಕೊಂಡಳು. ಆ ಬಳಿಕ ಆಕೆಯ ಚಿಂತೆಯು ಕಡಿಮೆಯಾಯಿತು. ಮಾಲತಿಯು ಹೇಳಿದ್ದಂತೆ ಔಷಧದ ಜೊತೆಗೆ ಆ ಪತ್ರವೂ ಗುಣಕಾರಿಯಾಯಿತು.

ಇಪ್ಪತ್ತುನಾಲ್ಕನೆಯ ಪ್ರಕರಣ.

ರಾಯಭಾರಿ.

ರಾಯಚೂರು ದುರ್ಗದಲ್ಲಿ ಅರಮನೆಗೆ ಸೇರಿದಂತೆಯೇ ದೊಡ್ಡದಾದ ಒಂದು ಸಭಾಮಂದಿರವು ಇತ್ತು. ಅದರಲ್ಲಿ ಎರಡುಸಾವಿರ ಜನರು ಸಭೆ ಸೇರಬಹುದಾಗಿತ್ತು. ನುಣ್ಣಗಿದ್ದ ಕರಿಯಕಲ್ಲಿನ ಚಪ್ಪಡಿಗಳನ್ನು ನೆಲಕ್ಕೆ ಹಾಸಿದ್ದರು. ಆ ಮಂದಿರದಲ್ಲಿ ಬಹಳ ರಮಣೀಯವಾದ ಪೀಠಗಳು ಇದ್ದುವು. ತೋಫಲ್‌ಖಾನನು ಈ ಮಂದಿರದಲ್ಲೇ ತನ್ನ ಸಭೆಗಳನ್ನು ನಡೆಯಿಸುತ್ತಿದ್ದನು. ಈಗ ತನ್ನ ದಣಿಯು ಅಲ್ಲಿಗೆ ಬರುವನೆಂದು ವರ್ತಮಾನ ಬಂದಿದ್ದುದರಿಂದ, ಆ ಸುಂದರವಾದ ಸಭಾಮಂದಿರವನ್ನು ಮತ್ತಷ್ಟು ಚೆನ್ನಾಗಿ ಅಲಂಕರಿಸಿದ್ದನು. ರಾತ್ರಿ ಎಂಟು ಗಂಟೆಗೆ ದರ್ಬಾರು ನಡೆಯುವಂತೆ ಗೊತ್ತಾಗಿತ್ತು. ಕರೆದಿದ್ದವರುಮಾತ್ರ ಆ ಸಭೆಗೆ ಹೋಗಬಹುದಾಗಿತ್ತು.

ಗೊತ್ತಾಗಿದ್ದ ಕಾಲದಲ್ಲಿ ಸಭೆಯು ಪ್ರಾರಂಭವಾಯಿತು. ಸಭಾಸದರೆಲ್ಲರೂ ಅನರ್ಘ್ಯವಸ್ತ್ರಾಭರಣಗಳನ್ನು ಧರಿಸಿಕೊಂಡು ತಮ್ಮತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡಿದ್ದರು. ಆ ಸಮಯದಲ್ಲಿ ಮಂಗಳವಾದ್ಯ ಘೋಷವು ಭೋರ್ಗರೆಯಿತು. ಹೊಗಳುಬಟರು ಬಿರುದಾವಳಿಗಳನ್ನು ಉಗ್ಗಡಿಸುತ್ತಾ, ಸಭಾ ಮಂದಿರವನ್ನು ಪ್ರವೇಶಿಸಿದರು. ಇವರ ಹಿಂದೆ ಸ್ವಲ್ಪ ದೂರದಲ್ಲಿ ಬಾದಷಹ ಅದಿಲ್‌ಷಹನೂ, ಆತನಸಂಗಡ ತೋಫಲ್‌ಖಾನನೂ, ಇವರುಗಳ ಹಿಂದೆ ಅಂಗರಕ್ಷಕರೂ ಪ್ರವೇಶಿಸಿದರು. ಹೊಗಳುಬಟರ ಧ್ವನಿಯನ್ನು ಕೇಳಿದಕೂಡಲೇ ಸಭಾಸದರೆಲ್ಲರೂ ಜಗ್ಗನೆ ನಿಂತುಕೊಂಡು, ಭಯಭಕ್ತಿಗಳಿಂದ ಸಲಾಮು ಮಾಡಿದರು. ಅದಿಲ್‌ಷಹನಿಗೆ ವಯಸ್ಸು ಇಪ್ಪ

ತ್ತುವರ್ಷವಮಾತ್ರ ಆಗಿತ್ತು. ಈತನಿಗೆ ಯೌವನವೂ ಧನಸಂಪತ್ತಿಯೂ, ಪ್ರಭುತ್ವವೂ ಇದ್ದರೂ, ಅವಿವೇಕವುಮಾತ್ರ ಇರಲಿಲ್ಲ. ಜ್ಞಾನವೃದ್ಧರೂ, ವಯೋವೃದ್ಧರೂ, ಸ್ವಾಮಿಭಕ್ತರೂ, ರಾಜ್ಯಹಿತಾಭಿಲಾಷಿಗಳೂ ಆದ ಮಂತ್ರಿಗಳು ಹೇಳಿದ ಬುದ್ಧಿವಾದವನ್ನು, ಭಕ್ತಿಯಿಂದಕೇಳಿ, ಪೂರ್ವಾಪರಗಳನ್ನು ಸ್ವತಃ ವಿಚಾರಮಾಡಿ, ಧರ್ಮಪುರಸ್ಸರವಾಗಿ ರಾಜ್ಯಭಾರವನ್ನು ಮಾಡುತ್ತಿದ್ದನು. ಹೀಗಿದ್ದುದರಿಂದ ಅವನ ಆಳಿಕೆಯು ಪ್ರಜಾರಂಜಕವಾಗಿತ್ತೆಂದು ಬೇರೆ ಹೇಳಬೇಕೆ? ಆದುದರಿಂದಲೇ ಈತನು ಮಹಮ್ಮದೀಯ ಮತಸ್ಥನಾದರೂ, ಹಿಂದೂ ಮತಾನುಯಾಯಿಗಳಲ್ಲಿ ಇವನಿಗೆ ದ್ವೇಷವಿರಲಿಲ್ಲ. ಇಂದ್ರಿಯಾಧೀನನಾಗದೆ ವಿವೇಕಶಾಲಿಯಾಗಿ ಪ್ರತಿಯೊಂದುಕೆಲಸವನ್ನೂ ನೋಡಿಕೊಳ್ಳುತ್ತಿದ್ದನು. ಈತನು ಎತ್ತರನಾಗಿದ್ದುದೂ ಅಲ್ಲದೆ ಆಜಾನುಬಾಹುವಾಗಿಯೂ ವಿಶಾಲವಕ್ಷಸ್ಥಲನಾಗಿಯೂ, ಸುಂದರಾಕಾರನಾಗಿಯೂ ಇದ್ದನು. ಒಂದು ಸಲ ಈತನನ್ನು ನೋಡಿದ ಮಾತ್ರಕ್ಕೆ ಅಸಾಧಾರಣಪುರುಷನೆಂದು ಭಾವನೆ ಯುಂಟಾಗುತ್ತಿತ್ತು. ಆಕಾರಕ್ಕೆ ತಕ್ಕಂತೆ ಪ್ರಜ್ಞೆಯೂ ವಿಶೇಷವಾಗಿದ್ದುದರಿಂದ, ಶತ್ರುರಾಜರ ಆಟಗಳು ಈತನಮೇಲೆ ನಡೆಯುತ್ತಿರಲಿಲ್ಲ.

ಅಧಿಲ್‌ಷಹನು ಸಿಂಹಾಸನದಮೇಲೆ ಕುಳಿತುಕೊಂಡಕೂಡಲೆ ಸಭಾಸದರೆಲ್ಲರೂ ಆತನಿಗೆ ನಜರು ಮುಜರೆಗಳನ್ನು ಒಪ್ಪಿಸಿದರು. ತೋಫಲ್‌ಖಾನನೂ ಆಗ ಎದ್ದುನಿಂತು ಭಯಭಕ್ತಿಗಳಿಂದ ನಜರು ಮುಜರೆಗಳನ್ನು ಒಪ್ಪಿಸಿ, "ಮಹಾಸ್ವಾಮಿಗಳು ಈ ದೀನ ಸೇವಕನದುರ್ಗಕ್ಕೆ ದಯೆಮಾಡಿಸಿದುದರಿಂದ, ನನಗೂ ಈ ದುರ್ಗಕ್ಕೂ ಅತಿಶಯವಾದ ಗೌರವವು ಉಂಟಾಯಿತೆಂದು ಭಾವಿಸಿದೇನೆ. ಈ ಸಭೆಯಲ್ಲಿ ತಮಗೆ ಪರಿಚಿತರಲ್ಲದ ಕೆಲವು ಮಹಾಪುರುಷರು ಇರುವರು. ಅಪ್ಪಣೆಯಾದರೆ, ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಅವರ ಪರಿಚಯವನ್ನು ಉಂಟುಮಾಡುವೆನು. ಇಗೋ! ಇವರು ತಮ್ಮ ಬುದ್ಧಿಚಾತುರ್ಯದಿಂದ ಅನೇಕ ರಾಜಾಧಿರಾಜರನ್ನೂ ಅನೇಕ

ಮಹಾ ಮಂತ್ರಿಗಳನ್ನೂ ತಮ್ಮ ಬಲೆಗೆ ಸಿಕ್ಕಿಸಿಕೊಂಡು, ಸೂತ್ರದ ಬೊಂಬೆಗಳಂತೆ ಕುಣಿಸಲು ಸಾಮರ್ಥ್ಯವುಳ್ಳ ರಾಮಯಾಮಾತ್ಯರು. ಇವರು ಉದಯಗಿರಿ ರಾಜರ ಚಿಕ್ಕಪ್ಪಂದಿರೂ, ವಿಕ್ರಮಶಾಲಿಗಳೂ ಆದ ಪ್ರಹರೇಶ್ವರ ಪಾತ್ರರು; ಉದಯಗಿರಿ ದುರ್ಗಾಧ್ಯಕ್ಷರಾದ ವೀರಭದ್ರ ಪಾತ್ರರ ಪುತ್ರರೂ ಅತ್ಯಂತಪ್ರತಾಪಶಾಲಿಗಳೂ ಆದ ಸೋಮೇಶ್ವರಪಾತ್ರರೇ ಇವರು. ಇಗೋ! ಇವರು ಬೆಲ್ಲಮಕೊಂಡ ದುರ್ಗಾಧಿಪತಿಗಳ ಕುಮಾರರೂ, ವೈರಿವೀರ ಕಾಲರುದ್ರರೂ ಆದ ರುದ್ರದೇವರು. ಇಗೋ! ಇವರು ಗೋಲಕೊಂಡದ ಬಾದ್‌ಷಹರ ಸೇನಾನಾಯಕರಾದ ಮಲಮುಲಖಾನರು. ಈ ಮಹಾತ್ಮರು ಅಹಮ್ಮದ್ನಗರದ ಪ್ರಧಾನಮಂತ್ರಿಗಳಾದ ಕಂಬರಸೇನರು. ಈ ಮಹನೀಯರನ್ನು ಏಕಕಾಲದಲ್ಲಿ ಇಲ್ಲಿ ಬಂದು ಸೇರುವಂತೆ ಮಾಡಿದವರು ರಾಮಯ ಮಂತ್ರಿಗಳು. ಬಹಳಕಾಲದಿಂದಲೂ ಬೇರೆಬೇರೆ ಇರುತ್ತಿದ್ದ ಈ ಮೂರು ಮಹಮ್ಮದೀಯ ರಾಜ್ಯಗಳನ್ನೂ ಈಗ ಪರಸ್ಪರ ಪ್ರೀತಿಯಿಂದ ಒಟ್ಟುಗೂಡಿಸಿ, ನಮ್ಮ ರಾಜ್ಯಗಳ ಪುರೋಭಿವೃದ್ಧಿಯನ್ನು ಉಂಟುಮಾಡುವ ಸುಸಂಧಿಯನ್ನು ರಾಮಯ ಮಂತ್ರಿಯವರು ಕಲ್ಪಿಸಿಕೊಟ್ಟಿರುವರು. ರಾಜನೀತಿ ವಿಶಾರದರಾದ ಮಹಾಸ್ವಾಮಿಯವರು ಇಂತಹ ಸುಸಂಧಿಯು ಬಿಟ್ಟು ಹೋಗಲು ಅವಕಾಶಕೊಡುವುದಿಲ್ಲವೆಂದು ನಾನು ನಂಬಿರುವೆನು.” ಎಂದು ಹೇಳಿ ತನ್ನ ಪೀಠದಲ್ಲಿ ಕುಳಿತುಕೊಂಡನು. ಅತನ ಮಾತುಗಳನ್ನುಕೇಳಿ ಆದಿಲ್‌ಷಹನು ಬಹಳ ಸಂತೋಷಪಟ್ಟು, ರಾಮಯಮಂತ್ರಿಯಕಡೆಗೆ ತಿರುಗಿ ಹೀಗೆ ಸಂಭಾಷಿಸಿದನು:—

“ಓ ಮಂತ್ರಿಶ್ರೇಷ್ಠರೆ, ತಾವು ಮಾಡಿರುವ ಈ ಕೆಲಸಗಳಿಂದಲೇ ತಮ್ಮ ಅಸಮಾನಪ್ರತಿಭೆಯು ಸ್ಪಷ್ಟವಾಗುವುದು. ತಾವು ಇಷ್ಟು ಗಟ್ಟಿಗರೆಂದೂ ಮಹಮ್ಮದೀಯ ರಾಜ್ಯಗಳನ್ನು ಒಟ್ಟುಗೂಡಿಸುವ ಶಕ್ತಿಯು ತಮಗೆ ಇರುವುದೆಂದೂ ಮೊದಲು ನಾನು ನಂಬದೆ ಹೋದುದಕ್ಕಾಗಿ ಬಹಳ

ಪಶ್ಚಾತ್ತಾಪಪಡುತ್ತಿದ್ದೇನೆ. ಇದನ್ನು ಮನಸ್ಸಿನಲ್ಲಿ ಇಡಬೇಡಿ. ಇಂತಹ ಪ್ರಜ್ಞಾಶಾಲಿಗಳಾದ ತಮಗೆ, ಶತ್ರುಕೃತವಿಪತ್ಸಮುದ್ರದಲ್ಲಿ ಮುಳುಗಿರುವ ಉದಯಗಿರಿರಾಜ್ಯವನ್ನು ಮೇಲಕ್ಕೆತ್ತುವುದು ಸಾಧ್ಯವಾಗಲಿಲ್ಲವಲ್ಲಾ ಎಂದು ವ್ಯಸನಪಡುತ್ತಿದೇನೆ."

ರಾಮಯ್ಯ—ಬಾದ್‌ಷಹರೇ, ವಿಪತ್ಸಾಗರದಲ್ಲಿ ಮುಳುಗಿದ್ದ ಉದಯಗಿರಿರಾಜ್ಯವನ್ನು ಎತ್ತಲು ನಾನು ಅನೇಕವೇಳೆ ಪ್ರಯತ್ನಿಸಿದರೂ ಕಾರ್ಯಾಂತರಗಳೆಂಬ ಚಂಡಮಾರುತಗಳಿಂದ ನನ್ನ ಪ್ರಯತ್ನನೌಕವು ಭಿನ್ನಭಿನ್ನವಾಯಿತು. ನಮ್ಮ ಸೈನ್ಯಗಳೂ ಧನಧಾನ್ಯಸಂಪತ್ತಿಯೂ ನಾಶವಾದುವು ಅನೇಕ ರಾಜಪುತ್ರರು ಉದಯಗಿರಿ ಯುದ್ಧದಲ್ಲಿ ಕಾಲವಾದರು. ಉಳಿದ ರಾಜಪುತ್ರನೂ ಆತನ ಚಿಕ್ಕತಂದೆಯೂ ಶತ್ರುರಾಜರಿಗೆ ಸೆರೆ ಸಿಕ್ಕಿದರು. ಇಂತಹ ಕಷ್ಟಸಮಯದಲ್ಲಿ ಶೌರ್ಯಕ್ಕಿಂತಲೂ ಬುದ್ಧಿಯೇ ಹೆಚ್ಚು ಪ್ರಯೋಜನಕರವೆಂದು ಭಾವಿಸಿ ಶತ್ರುವಿಗೆ ಪ್ರತಿಕ್ರಿಯೆಯನ್ನು ಮಾಡಲು ನಾನು ಹಲವು ಸಾಹಸಗಳನ್ನು ಮಾಡಿರುವೆನು. ನಮ್ಮ ರಾಜ್ಯವನ್ನು ಪುನಃ ಸ್ವಾಧೀನಮಾಡಿಕೊಂಡು ನಮ್ಮ ರಾಜಪುತ್ರನಿಗೆ ಪಟ್ಟ ಕಟ್ಟಿ ನನ್ನ ಪ್ರಭುಭಕ್ತಿಯನ್ನು ಪ್ರಕಟಗೊಳಿಸಬೇಕೆಂದು ತಮ್ಮ ಸಹಾಯವನ್ನು ಪ್ರಾರ್ಥಿಸಿರುವೆನು. ತಮ್ಮ ಅನುಗ್ರಹಕ್ಕೆ ಪಾತ್ರರಾದರೆ ನಮ್ಮ ಕಷ್ಟಗಳು ಕಳೆದುವೆಂದೇ ನಂಬುವೆನು ಇದೇ ವಿಷಯವನ್ನು ಗೋಲುಕೊಂಡದ ಕುತುಬ್‌ಷಾಹಿ ದೊರೆಗಳಿಗೆ ವಿಜ್ಞಾಪಿಸಿಕೊಳ್ಳಲು, ಅವರೂ ತಮ್ಮೊಡನೆ ಸೇರಿ ವಿಜಯನಗರದ ಅರಸನೊಡನೆ ಯುದ್ಧಮಾಡಲು ಒಪ್ಪಿ, ತಮ್ಮ ಅಭಿಮತವನ್ನು ತಿಳಿಸುವುದಕ್ಕಾಗಿ ತಮ್ಮ ಮುಖ್ಯ ಸೇನಾನಿಯನ್ನು ಈ ಸಭೆಗೆ ಕಳುಹಿಸಿಕೊಟ್ಟಿರುವರು. ಅಹಮ್ಮದ್‌ನಗರದ ಬಾರಿದ್‌ಷಾಹಿ ದೊರೆಗಳ ಸಂದರ್ಶನವನ್ನು ಮಾಡಿ ಅವರೂ ಈ ಕಾರ್ಯದಲ್ಲಿ ಅನುಸರಿಸುವಂತೆ ಮಾಡಿರುವೆನು. ತಮ್ಮ ಸಮ್ಮತಿಯನ್ನು ತೋರಿಸುವುದಕ್ಕಾಗಿ

ತಮ್ಮ ಮುಖ್ಯಮಂತ್ರಿಯನ್ನು ಅವರು ಇಲ್ಲಿಗೆ ಕಳುಹಿಸಿರುವರು. ಇದರಿಂದ ತಮ್ಮಿಬ್ಬರಿಗೂ ಇದ್ದ ವೈಮನಸ್ಯವು ದೂರವಾಯಿತೆಂದು ವ್ಯಕ್ತವಾಯಿತು ಅಲ್ಲವೆ? ಇಷ್ಟು ರಾಜ್ಯಗಳೂ ಒಟ್ಟುಗೂಡಿದರೆ ವಿಜಯನಗರವನ್ನು ಧ್ವಂಸ ಮಾಡಬಹುದೆಂದು ನನಗೆ ಚೆನ್ನಾಗಿ ನಂಬಿಕೆ ಇದೆ. ಈ ಪ್ರಬಲರಾಜ್ಯವು ನಶಿಸಿದರೆ ಅದರಿಂದ ತಮಗೆ ಉಂಟಾಗುವ ಲಾಭಾಲಾಭಗಳನ್ನು ನಾನು ವಿವರಿಸಬೇಕಾದುದಿಲ್ಲ."

ಈ ಮಾತುಗಳನ್ನು ಕೇಳಿ ಅದಿಲ್‌ಷಹನು ಬಗೆಬಗೆಯಾಗಿ ಯೋಚಿಸಲಾರಂಭಿಸಿದನು. ವಿಮರ್ಶನಾಸಮರ್ಥನಾದ ಆತನು ರಾಮಯಮಂತ್ರಿಯ ಮಾತುಗಳು ಯುಕ್ತವೆಂದು ಭಾವಿಸಿದನು. ಮಹಮ್ಮದೀಯ ರಾಜ್ಯಗಳಲ್ಲಿ ಐಕಮತ್ಯವುಂಟಾದುದರಿಂದ ಬಹಳ ಸಂತೋಷಪಟ್ಟನು. ಮಹಮ್ಮದೀಯ ರಾಜ್ಯಗಳ ಪುರೋಭಿವೃದ್ಧಿಗೆ ಕಂಟಕಪ್ರಾಯವಾಗಿದ್ದ ವಿಜಯನಗರ ಸಾಮ್ರಾಜ್ಯವನ್ನು ಧ್ವಂಸಮಾಡಿದರೆ, ತನ್ನ ಪ್ರಖ್ಯಾತಿಯೂ ಅಭ್ಯುದಯವೂ ಹೆಚ್ಚುವುವು ಎಂದೂ, ಆ ಕಾಲದಲ್ಲಿ ವಿಜಯನಗರಕ್ಕೂ ಬಿಜಾಪುರಕ್ಕೂ ಸ್ನೇಹವಿದ್ದುದು ಬಂದು ಪ್ರಯೋಜನವೇ ಎಂದೂ ಭಾವಿಸಿದನು. ಇದ್ದುದಕ್ಕೆ ಇದ್ದಹಾಗೆಯೇ, ಇತರ ಮಹಮ್ಮದೀಯ ರಾಜ್ಯಗಳ ಸಹಾಯವನ್ನು ಪಡೆದು ವಿಜಯನಗರದಮೇಲೆ ಬಿದ್ದರೆ, ಆ ರಾಜ್ಯವು ನಾಶವಾಗದೇ ಇರಲಾರದೆಂದು ನಿರ್ಧರಿಸಿದನು. ಆಗ ರಾಮಯನನ್ನು ಕುರಿತು "ಮಂತ್ರಿಶ್ರೇಷ್ಠರೇ, ನಿಮ್ಮ ಸಾಹಸಗಳನ್ನು ನೋಡಿ ಬಹಳ ಸಂತೋಷವಾಯಿತು. ನಾವುಗಳೆಲ್ಲರೂ ಸೇರಿ ವಿಜಯನಗರದ ರಾಜ್ಯವನ್ನು ಮುತ್ತೋಣ. ನಮಗೆ ಜಯವಾದರೆ ಕೃಷ್ಣದೇವರಾಯರು ನಿಮ್ಮಿಂದ ತೆಗೆದುಕೊಂಡಿರುವ ರಾಜ್ಯವನ್ನು ನಿಮ್ಮ ರಾಜಪುತ್ರರಿಗೆ ಅಗತ್ಯವಾಗಿ ಕೊಡುವೆವು. ಮಿಕ್ಕ ಭಾಗಗಳನ್ನು ಉಳಿದವರು ಹಂಚಿಕೊಳ್ಳೋಣ. ಈ ವಿಷಯದಲ್ಲಿ ಮಿಕ್ಕ ರಾಜ್ಯಗಳ ಪ್ರತಿನಿಧಿಗಳ ಅಭಿಪ್ರಾಯವೇನು?" ಎಂದು ಹೇಳಿದನು.

ಆಗ ಮುಲಮುಲಖಾನನು ಎದ್ದು ಬಂದು, ಅದಿಲ್‌ಷಹನಿಗೆ ಬಗ್ಗಿ ಸಲಾಮುಮಾಡಿ "ಬಾದ್‌ಷಹರ ವಚನಗಳು ಯುಕ್ತವಾದುವು. ಸಮಯ ಸಿಕ್ಕಿದಾಗಲೇ ಪ್ರಬಲಶತ್ರುವನ್ನು ಧ್ವಂಸಮಾಡಬೇಕೆಂದು ನಮ್ಮ ಪ್ರಭುಗಳಿಗೂ ಮನಸ್ಸಿರುವುದು. ಇದಕ್ಕಾಗಿ ತಮ್ಮೊಡನೆ ಸೇರಿ ಮನಃಪೂರ್ವಕವಾಗಿ ಸಹಾಯಮಾಡಲು ಇಷ್ಟಪಟ್ಟಿರುವರು. ಶತ್ರುರಾಜ್ಯವಿಭಾಗದ ವಿಷಯದಲ್ಲಿ ತಮ್ಮ ಅಭಿಪ್ರಾಯವೇ ಅವರಿಗೂ ಸಮ್ಮತವಾಗಿರುವುದು" ಎಂದು ಹೇಳಿದನು. ಆ ಬಳಿಕ ಅಹಮ್ಮದ್ನಗರದ ಮುಖ್ಯಮಂತ್ರಿಯಾದ ಕಾಂಬರ್‌ಸೇನನು, ಎದ್ದು ಸಲಾಮುಮಾಡಿ, "ಬಾದ್‌ಷಹರೆ! ಈ ರಾಮಯ ಮಂತ್ರಿಪುಂಗವರು ಹೇಳಿದಮಾತುಗಳಿಗೆ ಒಪ್ಪಿ, ಆವಿಷಯದಲ್ಲಿ ತಮ್ಮ ಅಭಿಪ್ರಾಯವೇನು, ಎಬುದನ್ನು ತಿಳಿದುಕೊಂಡುಬರಲು ನಮ್ಮ ಪ್ರಭುಗಳು ನನ್ನನ್ನು ಇಲ್ಲಿಗೆ ಕಳುಹಿಸಿರುವರು. ಅಹಮ್ಮದ್ನಗರಕ್ಕೂ ಬಿಜಾಪುರಕ್ಕೂ ಇದುವರೆಗಿದ್ದ ವೈಮನಸ್ಯವನ್ನು ಈ ರಾಮಯಮಂತ್ರಿಯವರು ಹೋಗಲಾಡಿಸಿದುದರಿಂದ, ನಮ್ಮ ಪ್ರಭುಗಳು ಬಹಳ ಸಂತೋಷದಿಂದಿರುವರು. ಮುಹಮ್ಮದೀಯ ರಾಜ್ಯಗಳಿಗೆ ಪ್ರಬಲಶತ್ರುವಾಗಿರುವ ವಿಜಯನಗರಸಂಸ್ಥಾನವು ನಾಶವಾಗಬೇಕಾದರೆ, ನಮ್ಮ ಮೂರು ರಾಜ್ಯಗಳಲ್ಲೂ ಸಂಪೂರ್ಣವಾದ ಐಕಮತ್ಯವು ಇರಬೇಕೆಂಬುದನ್ನು ನಾನು ತಮಗೆ ಹೊಸದಾಗಿ ತಿಳಿಸಬೇಕಾಗಿಲ್ಲ. ಶತ್ರುರಾಜ್ಯವಿಭಾಗವಿಷಯದಲ್ಲಿ, ತಾವು ಈಗ ನ್ಯಾಯವಾಗಿ ಅಪ್ಪಣೆಕೊಡಿಸಿದುದಕ್ಕೆ ಒಪ್ಪದೆ ಇರವವರು ಯಾರು ?" ಎಂದು ಹೇಳಿದನು.

ಈ ಮಾತುಗಳನ್ನು ಕೇಳಿ ರಾಮಯಮಂತ್ರಿಯು "ದೈವಯೋಗದಿಂದ ತಮ್ಮ ಈ ರಾಜ್ಯತ್ರಯಗಳು ಒಟ್ಟಾಗಿರುವುವೇ ಹೊರತು ನನ್ನ ಸಾಹಸದಿಂದ ಹೀಗಾಯಿತೆಂದು ನಾನು ತಿಳಿದಿಲ್ಲ. ನಿಸ್ಸಹಾಯರಾದ ನಮಗೆ ಸಹಾಯಮಾಡಬೇಕೆಂದು ತಾವುಗಳೆಲ್ಲರೂ ದೊಡ್ಡಮನಸ್ಸು ಮಾಡಿರುವುದಕ್ಕಾಗಿ, ಬಹಳವಾಗಿ ಕೃತಜ್ಞನಾಗಿದ್ದೇನೆ. ಇಗೋ ಇವರೇ ನಮ್ಮ ದುರ್ಗಾ

ಧೀಶ್ವರರ ಪುತ್ರರು. ಎಷ್ಟೋ ಕಷ್ಟಪಟ್ಟು ಇವರನ್ನು ಬಂಧನದಿಂದ ತಪ್ಪಿಸಿ, ಇಲ್ಲಿಗೆ ಕರೆತಂದಿರುವೆನು.” ಎಂದು ಹೇಳಿದನು. ಆಗ ಸೋಮೇಶ್ವರ ಪಾತ್ರನು ಎದ್ದು ಬಾದ್‌ಷಹನಿಗೆ ಸಲಾಮ್‌ಮಾಡಿ “ಬಾದ್‌ಷಹರೆ! ನಮ್ಮ ವಂಶಸ್ಥರೆಲ್ಲರೂ ನಿರುಪಮಾನ ಪ್ರತಾಪಶಾಲಿಗಳಾಗಿ ಇದ್ದುಕೊಂಡು ಉದಯಗಿರಿ ದುರ್ಗವನ್ನು ಬಹುಕಾಲ ಸಂರಕ್ಷಿಸುತ್ತಾ ನಿಷ್ಕಳಂಕವಾದ ಕೀರ್ತಿಯನ್ನು ಸಂಪಾದಿಸಿದ್ದರು. ಆದರೆ ನನ್ನ ದುರ್ದೈವದಿಂದ ಆ ಕೀರ್ತಿಗೆ ಶತ್ರುಕೃತಪರಾಭವಕಳಂಕವು ಹತ್ತಿದೆ. ನಮ್ಮ ತಂದೆಯವರು ವೀರಮರಣವನ್ನು ಹೊಂದಿರುವದಕ್ಕಾಗಿ ನನಗೆ ಅಷ್ಟು ವ್ಯಸನವಿಲ್ಲ. ಆದರೆ ನಮಗೆ ಆದ ಈ ಪರಾಭವಕ್ಕೋಸ್ಕರ ಬಹಳವಾಗಿ ವ್ಯಥೆಪಡುತ್ತಿದ್ದೇನೆ. ಆ ಶತ್ರುರಾಜನಿಗೆ ಕೈ ಕಟ್ಟಿಕೊಂಡು ಕೇಳಿಕೊಂಡರೆ, ನಮ್ಮ ರಾಜ್ಯವು ನನಗೆ ಸಿಕ್ಕಬಹುದು. ಆದರೆ ಶೌರ್ಯೋಪಾರ್ಜಿತವಾದ ರಾಜ್ಯವನ್ನು ಯಾಚನೆಯಿಂದ ಸಂಪಾದಿಸುವುದು ನನಗೆ ಸ್ವಲ್ಪವೂ ಸಮ್ಮತವಿಲ್ಲ. ಈಗ ತಾವುಗಳು ನನ್ನ ಕೋರಿಕೆಯನ್ನು ಲಾಲಿಸಿ ನನಗೆ ಸಹಾಯಮಾಡಲು ಒಪ್ಪಿರುವುದರಿಂದ, ತಮಗೆಲ್ಲರಿಗೂ ಅತ್ಯಂತ ಕೃತಜ್ಞನಾಗಿದ್ದೇನೆ,” ಎಂದು ಹೇಳಿದನು.

ಈ ಮಾತುಗಳನ್ನು ಕೇಳಿ ಸಭೆಯವರೆಲ್ಲರೂ ಸಂತೋಷಪಟ್ಟರು. ಅಷ್ಟರಲ್ಲಿ ಒಬ್ಬ ದ್ವಾರಪಾಲಕನು ಭಯಭಕ್ತಿಗಳಿಂದ ಸಿಂಹಾಸನದ ಬಳಿಗೆ ಬಂದು ನೆಲಮುಟ್ಟಿ ಸಲಾಮುಮಾಡಿ, “ಯಾರೋ ಒಬ್ಬರು ತಮ್ಮ ಸಂದರ್ಶನವನ್ನು ಮಾಡಬೇಕೆಂದು ಪ್ರಾರ್ಥಿಸುತ್ತಾ, ಬಾಗಿಲಲ್ಲಿ ನಿಂತಿರುವರು. ಪ್ರಭುಗಳ ಅಪ್ಪಣೆಯಾಗಬೇಕು” ಎಂದನು. ಅಷ್ಟು ಹೊತ್ತಿಗೆ ಸಭೆಯ ಕಾರ್ಯಗಳೆಲ್ಲವೂ ಮುಗಿದಿದ್ದುದರಿಂದ, ಕಾದಿದ್ದವರನ್ನು ಕರೆತರಬಹುದೆಂದು ಅಪ್ಪಣೆಮಾಡಿದನು. ಅವನು ಸಭೆಯನ್ನು ಪ್ರವೇಶಿಸುವುದರೊಳಗಾಗಿ ಆದಿಲ್‌ಷಹನ ಇಷ್ಟಕ್ಕನುಸಾರವಾಗಿ ಮುಲ್ಲಾಖಾನನೂ ಕಂಬರ್

ಸೇನನೂ ಉಚಿತಮರ್ಯಾದೆಗಳನ್ನು ಪಡೆದು ತಮ್ಮ ತಮ್ಮ ನಿವಾಸಸ್ಥಾನ ಗಳಿಗೆ ಹೊರಟುಹೋಗಿದ್ದರು.

ನೂತನಪುರುಷನು ಉನ್ನತಶರೀರನಾಗಿಯೂ ಆಜಾನುಬಾಹುವಾಗಿಯೂ ಸುಂದರಾಕಾರನಾಗಿಯೂ ಇದ್ದನು. ಅವನು ಸಭೆಯನ್ನು ಪ್ರವೇಶಿಸಿದಕೂಡಲೆ ಸದಸ್ಯರು ಆತನು ಯಾರು ಎಂದು ತಮ್ಮತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಆ ನೂತನಪುರುಷನು ಬಾದ್‌ಷಹನಿಗೆ ಸಲಾಮು ಮಾಡಿ ನಿಂತುಕೊಂಡಿರಲು, ಬಾದುಷಹನಿಗೂ ಆತನಿಗೂ ಈ ಮೇರೆಗೆ ಸಂಭಾಷಣೆ ನಡೆಯಿತು :—

ಬಾದ್–"ನಿಮ್ಮದು ಯಾವದೇಶ? ಇಲ್ಲಿಗೆ ಬಂದುದು ಏಕೆ?"

ನೂತನಪುರುಷ—"ಯವನಾಧೀಶ್ವರರೇ, ನಾನು ಶತ್ರುರಾಜಭಯಂಕರರಾದ ಶ್ರೀಕೃಷ್ಣದೇವರಾಯರ ರಾಯಭಾರಿಯು. ನನ್ನ ಹೆಸರು ವಿಜಯಸಿಂಹ. ನಮ್ಮ ಸಾರ್ವಭೌಮರು ಕಳುಹಿಸಿರುವ ಸಂದೇಶವನ್ನು ಸಾವಧಾನವಾಗಿ ಲಾಲಿಸಬೇಕು."

ಬಾದ್—"ನಮ್ಮ ಮಿತ್ರಶ್ರೇಷ್ಠರಾದ ಕೃಷ್ಣದೇವರಾಯರ ಕಡೆಯವರೇ ನೀವು? ಹಾಗಾದರೆ, ನೀವು ನಮಗೆ ಬಹಳ ಸನ್ಮಾನ್ಯರು. 'ರಾಯಬಾರಿ' ಎಂದು ಹೇಳಿದರಲ್ಲವೆ? ನಮಗೂ ಶ್ರೀಕೃಷ್ಣದೇವರಾಯರಿಗೂ ಯಾವ ವಿವಾದವೂ ಇರುವುದಿಲ್ಲವಲ್ಲಾ! ಯೋಗಕ್ಷೇಮಗಳನ್ನು ವಿಚಾರಿಸಿಕೊಂಡು ಹೋಗಲು ಬಂದಿರುವಿರಲ್ಲವೆ? ಸಾರ್ವಭೌಮರು ಕುಶಲದಿಂದಿರುವರೆ?"

ವಿಜಯ—"ಬಾದ್‌ಷಹರೆ, ಪ್ರತಿಭಾಶಾಲಿಗಳೂ ಪರತಂತ್ರಭೇದನನಿಪುಣರೂ ಆದ ತಿಮ್ಮರಸರು ಮಂತ್ರಿಪದದಲ್ಲಿರುವಾಗ, ನಮ್ಮ ಮಹಾರಾಜರಿಗೆ ಕುಶಲವಿಲ್ಲದೆ ಇರುವುದೇ? ತಾವು ಭಾವಿಸಿರುವಂತೆ, ಕ್ಷೇಮಲಾಭಗಳನ್ನು ವಿಚಾರಿಸಿಕೊಂಡು ಹೋಗುವುದಕ್ಕೆ ನಾನು ಬಂದಿರುವುದಿಲ್ಲ. ಕೆಲವು ರಾಜಕೀಯವಿಚಾರಗಳನ್ನು ವ್ಯವಸ್ಥೆಮಾಡಿಕೊಳ್ಳುವುದ

ಕ್ಕಾಗಿಯೇ ಸಾರ್ವಭೌಮರು ನನ್ನನ್ನು ತಮ್ಮಲ್ಲಿಗೆ ಕಳುಹಿಸಿಕೊಟ್ಟಿರುವರು."

ಬಾದ್‌—"ಇತ್ಯರ್ಥಪಡಿಸಬೇಕಾಗಿರುವ ಅಂತಹ ರಾಜಕೀಯ ವಿಚಾರಗಳು ಯಾವುವು ? ತಿಳಿಸಬಹುದು."

ಆಗ ವಿಜಯಸಿಂಹನು ಸಿಂಹಾವಲೋಕನರೀತಿಯಲ್ಲಿ ಸಭೆಯವರನ್ನು ನೋಡಿದನು. ಕಠಿಣಹೃದಯರಾಗಿ ತನ್ನನ್ನು ಕೊಲ್ಲಬೇಕೆಂದು ಎರಡುಸಾರಿ ಪ್ರಯತ್ನಿಸಿದ್ದ ರುದ್ರದೇವ ಮೊದಲಾದವರು ಗೋಚರರಾದರು. ಇವರನ್ನು ಕಂಡಕೂಡಲೆ, ಈ ದುರಾತ್ಮರು ಅದಿಲ್‌ಷಹನಿಗೆ ದುರ್ಬೋಧನೆಯನ್ನು ಮಾಡಿರಬಹುದೆಂದು ಊಹಿಸಿದನು. ಆದರೆ ಸ್ವಲ್ಪವಾದರೂ ಭಯಪಡಲಿಲ್ಲ. "ಬಾದ್‌ಷಹರೆ, ವಂಚಕಸ್ವಭಾವವುಳ್ಳ ಕೆಲವು ಗುಳ್ಳೇನರಿಗಳು ಒಂದು ಜಿಂಕೆಯನ್ನು ಪುಸಲಾಯಿಸಿ ಮೃಗಸಾರ್ವಭೌಮನ ಮಂದಿರದಿಂದ ಇಲ್ಲಿಗೆ ಕರೆದುಕೊಂಡು ಬಂದಿರುವುವು. ಈ ವಿಷಯವನ್ನು ತಮಗೆ ವಿಶದಪಡಿಸಬೇಕೆಂದು ನನ್ನನ್ನು ಸಾರ್ವಭೌಮರವರು ಇಲ್ಲಿಗೆ ಕಳುಹಿಸಿಕೊಟ್ಟಿರುವರು."

ಅದಿಲ್‌ಷಹನು ಈ ಮಾತುಗಳನ್ನು ಕೇಳಿ ಆಶ್ಚರ್ಯಪಟ್ಟು, "ಅಂತಹ ಗುಳ್ಳೇನರಿಗಳಿಗೆ ಸಿಂಹರಾಜನು ತನ್ನ ಖರತರನಖರಗಳ ರುಚಿಯನ್ನು ತೋರಿಸದೇ ಇರುವುದೇ ? ಅವಕ್ಕೆ ತಕ್ಕ ಶಿಕ್ಷೆಯನ್ನು ಆಗಲೇ ಮಾಡಿರಬೇಕು ಅಲ್ಲವೆ ? ಈ ವಿಷಯವನ್ನು ನನ್ನೊಡನೆ ಹೇಳಬೇಕಾದ ಆವಶ್ಯಕತೆಯೇನು ?" ಎಂದನು.

ತನ್ನ ಮಾತುಗಳನ್ನು ಕೇಳಿ ಬಾದ್‌ಷಹನಿಗೆ ಕೋಪವುಂಟಾಗಿರಬೇಕೆಂದು ವಿಜಯಸಿಂಹನು ಭಾವಿಸಿದನು. ಆದರೆ ಅದಿಲ್‌ಷಹನ ಮುಖದಲ್ಲಿ ಸರ್ವದಾ ಕಿರುನಗೆಯು ಕಂಗೊಳಿಸುತ್ತಾ ಇದ್ದುದರಿಂದ, ನಿಜವಾಗಿಯೂ ಕೋಪಬಂದಿತ್ತೆಂದು ತಿಳಿಯಲಾಗುತ್ತಿದ್ದಿಲ್ಲ. ಸಭೆಯಲ್ಲಿದ್ದ ರಾಮಯ್ಯ

ಮಂತ್ರಿಯೇ ಮೊದಲಾದವರಿಗೆ ವಿಜಯಸಿಂಹನ ಮಾತುಗಳಿಂದ ಉಂಟಾ ಗಿದ್ದ ಕೋಪವನ್ನು ತಡೆಯಲಾಗಲಿಲ್ಲ. ಇಂಗಿತಜ್ಞನಾದ ವಿಜಯಸಿಂಹನು ಅದನ್ನು ತಿಳಿದಿದ್ದರೂ, ಸ್ವಲ್ಪವೂ ಲಕ್ಷ್ಯಮಾಡದೆ, "ಬಾದ್‌ಷಹರೆ, ಸಾರ್ವಭೌಮರ ಸಂದೇಶವು ಇನ್ನೂ ಮುಗಿದಿಲ್ಲ. ಗುಳ್ಳೇನರಿಗಳ ಕಪ ಟಕ್ಕೆ ಬಳಗಾಗದೆ ಜಿಂಕೆಯನ್ನು ತಮ್ಮ ವಶಪಡಿಸಬೇಕೆಂದೂ, ದ್ರೋಹಿಗ ಳಾದ ಗುಳ್ಳೇನರಿಗಳನ್ನೂ ಮೃಗರಾಜನಿಗೆ ಒಪ್ಪಿಸಬೇಕೆಂದೂ, ತಪ್ಪಿದರೆ ಪರಿಣಾಮವು ಕೆಡುವುದೆಂದೂ ಹೇಳಿ ಕಳುಹಿಸಿರುವರು" ಎಂದು ನಿರ್ಭ ಯವಾಗಿ ಹೇಳಿದನು.

ಈ ಮಾತುಗಳನ್ನು ಕೇಳಿದಕೂಡಲೆ, ಸಭಾಸದರೆಲ್ಲರೂ ರಾಯಭಾ ರಿಯ ಅವತಾರವು ಮುಗಿಯಿತೆಂದು ಯೋಚಿಸಿ, ತಮ್ಮ ಪ್ರಭುವಿನ ಮುಖ ವನ್ನೇ ನೋಡುತ್ತಿದ್ದರು. ಆತನ ಮುಖದಲ್ಲಾದರೋ ಕೋಪಲಕ್ಷಣವು ಸ್ವಲ್ಪವಾದರೂ ತೋರಿಬರಲಿಲ್ಲ. ಆಗ ಬಾದ್‌ಷಹನು "ನಿಮ್ಮ ಮಹಾರಾ ಜರವರು ಹೇಳಿ ಕಳುಹಿಸಿದ ಅರ್ಥಗಂಭೀರವಾದ ಸಂದೇಶವು ಅರ್ಥವಾ ಯಿತು. ಇದಕ್ಕಾಗಿ ಹೀಗೆ ಸಂದೇಶವನ್ನು ಕಳುಹಿಸಿದುದು ವಿವೇಕವೆಂದು ನನಗೆ ತೋರುವುದಿಲ್ಲ. ಜಿಂಕೆಯನ್ನು ತಮ್ಮ ಗುಹೆಯಲ್ಲಿ ಇಟ್ಟುಕೊಂಡಿ ರಲು ಇಷ್ಟವಿಲ್ಲದೆ, ಅದರ ಮೇಲೆ ಇಲ್ಲದ ಸಲ್ಲದ ತಪ್ಪುಗಳನ್ನು ಹೊರಿಸಿ ಆಚೆಗೆ ಅಟ್ಟಿದುದರಿಂದ ಜಿಂಕೆಯು ಬೇರೊಂದು ಆಶ್ರಯವನ್ನು ಹುಡು ಕಿಕೊಂಡು ಬಂದುದರಲ್ಲಿ ತಪ್ಪೇನು? ಅದು ಹೇಗಾದರೂ ಇರಲಿ, ಜಿಂಕೆ ಯಂತೂ ನನ್ನ ಬಳಿಗೆ ಬಂದೂ ಇಲ್ಲ; ಬಂದರೂ ನಾನು ಸೇರಗೊಡು ವುದೂ ಇಲ್ಲ. ತಮ್ಮ ವಸ್ತುವನ್ನು ತಾವು ಎಚ್ಚರಿಕೆಯಿಂದ ನೋಡಿ ಕೊಳ್ಳದೆ, ಇತರರು ತಸ್ಕರಿಸಿಕೊಂಡು ಹೋಗಲು ಅವಕಾಶ ಕೊಟ್ಟು ಕಳು ವನ್ನು ಮತ್ತೊಬ್ಬರ ಮೇಲೆ ಹೊರಿಸುವುದು ಅಯುಕ್ತವೆಂದು ನಿಮ್ಮ ಮಹಾರಾಜರಿಗೆ ತಿಳಿಸಬಹುದು" ಎಂದು ಗಂಭೀರವಾಗಿ ಉತ್ತರಕೊಟ್ಟನು.

ಈ ಮಾತುಗಳನ್ನು ಕೇಳಿ ವಿಜಯಸಿಂಹನು ಸುಮ್ಮನಾಗಲಿಲ್ಲ. "ಪ್ರಭುಗಳು ಈಗ ಅಪ್ಪಣೆಕೊಡಿಸಿದ ಉತ್ತರಕ್ಕೆ ಒಂದು ಸಮಾಧಾನವನ್ನು ಹೇಳಬೇಕಾಗಿದೆ; ಒಬ್ಬ ವಂಚಕನು ಅನೇಕ ವೇಷಗಳನ್ನು ಧರಿಸಿ, ತನ್ನ ಮಾಯೋಪಾಯಗಳಿಂದ ಮಹಾರಾಜರವರ ಮನಸ್ಸನ್ನು ಕಲುಷಪಡಿಸಿ, ಆ ಜೊತೆಯನ್ನು ವಿಜಯನಗರದಿಂದ ಹೊರಡಿಸಿಕೊಂಡು ಬಂದಿರುವನು. ಆ ದುರಾತ್ಮನೂ, ಅವನ ಸಹಚರರೂ ತಮ್ಮ ರಾಜ್ಯದಲ್ಲಿ, ತಮ್ಮ ಬಳಿಯಲ್ಲಿ, ಈ ಸಭೆಯಲ್ಲಿ, ತಮ್ಮ ಇದಿರಿನಲ್ಲಿಯೇ ನಿರ್ಭಯವಾಗಿ ಇರುವರು. ಅಂತಹ ದುರಾತ್ಮರಿಗೆ ಅವಕಾಶ ಕೊಡುವುದು ತಮ್ಮ ಕೀರ್ತಿಗೆ ಕಳಂಕವನ್ನು ಉಂಟುಮಾಡದೇ ಇರದು" ಎಂದನು.

ಈ ಮಾತುಗಳನ್ನು ಕೇಳಿದ ಕೂಡಲೆ ಸದಸ್ಯರಲ್ಲಿ ಕಲಕಲವು ಹುಟ್ಟಿತು. ಕೆಲವರು ತಮ್ಮ ಕತ್ತಿಗಳನ್ನು ಹೊರತೆಗೆಯಲು ಸಿದ್ಧರಾಗಿ ಪ್ರಭುಇಚ್ಛೆಯನ್ನು ನಿರೀಕ್ಷಿಸುತ್ತಿದ್ದರು. ಅಷ್ಟರಲ್ಲಿ ಆದಿಲ್‌ಷಹನು ತನ್ನ ಗಂಭೀರವಾದ ದೃಷ್ಟಿಯಿಂದ ಸದಸ್ಯರ ಮನೋವಿಕಾರವನ್ನು ಅಡಗಿಸಿ, "ಅಧಿಕಪ್ರಸಂಗವನ್ನು ಬಿಟ್ಟು ನಿಮ್ಮ ಸಂದೇಶವು ಎಷ್ಟಿರುವುದೋ ಅಷ್ಟು ಮಾತ್ರ ಹೇಳಿ. ನಿಮ್ಮ ಕೆಲಸವು ಸಂದೇಶವನ್ನು ತಿಳಿಸುವುದು ಮಾತ್ರವಾಗಿದೆಯೇ ಹೊರತು, ನೀತಿಯನ್ನು ಬೋಧಿಸುವುದಲ್ಲ. ಇನ್ನೊಂದು ಸಲ ನಮ್ಮ ಸದಸ್ಯರನ್ನು ನಿಂದಿಸಿದರೆ, ಒಳ್ಳೆಯದಾಗಲಾರದು" ಎಂದು ವಿಜಯಸಿಂಹನಿಗೆ ಗಂಭೀರವಾಗಿ ಹೇಳಿದನು.

"ಬಾದ್‌ಷಹರು ಲಾಲಿಸಬೇಕು ಆ ಸಾಧ್ವೀಶಿರೋಮಣಿಯು, ಈ ದುರ್ಗಕ್ಕೆ ಅಧಿಪತಿಯಾದ ತೋಫಲ್‌ಖಾನನ ಮಂದಿರದಲ್ಲಿರುವರು. ಖಾನರಿಗೆ ಸಂತೋಷವನ್ನುಂಟುಮಾಡುವುದಕ್ಕಾಗಿ ರಾಮರಾಯ ಮಂತ್ರಿಯು ಇಂತಹ ಕೆಲಸವನ್ನು ಮಾಡಿರುವರು. ತಮಗೆ ಪ್ರೀತಿಪಾತ್ರರಾದ ತೋಫಲ್ ಖಾನರು ಇಂತಹ ಕೆಲಸಕ್ಕೆ ಪ್ರವರ್ತಿಸಿ ಇರುವುದರಿಂದ ಇಷ್ಟು

ದೂರ ಹೇಳಬೇಕಾಗಿದೆಯೋ ಹೊರತು, ಇಲ್ಲದಿದ್ದರೆ ಅವಶ್ಯಕವಿರಲಿಲ್ಲ. ಆದುದರಿಂದ ಖಾನರಿಗೆ ಬುದ್ಧಿವಾದವನ್ನು ಹೇಳಿ ಆ ಯವನೀಲಲಾಮರನ್ನು ನನ್ನ ಸಂಗಡ ಕಳುಹಿಸಿ ಕೊಡಬೇಕೆಂದು ನಮ್ಮ ಮಹಾರಾಜರವರು ಹೇಳಿಕಳುಹಿಸಿರುವರು.'' ಎಂದು ವಿಜಯಸಿಂಹನು ಹೇಳಿದನು.

ಈ ಮಾತುಗಳು ಕಿವಿಗೆ ಬಿದ್ದಕೂಡಲೆ ತೊಘಲ್‌ಖಾನನು ಬಹಳವಾಗಿ ಬೆದರಿದನು. ಬಲಾತ್ಕಾರದಿಂದ ಅನ್ಯಸ್ತ್ರೀಯರನ್ನು ಅಪಹರಿಸುವುದು ಆದಿಲ್‌ಷಹನಿಗೆ ಸ್ವಲ್ಪವಾದರೂ ಇಷ್ಟವಿರಲಿಲ್ಲವೆಂದು ಚೆನ್ನಾಗಿ ತಿಳಿದಿದ್ದನು. ಆದುದರಿಂದ ಆತನು ಉಪಾಯವಾಗಿ ತನ್ನಮೇಲೆ ತಪ್ಪು ಹೊರದಂತೆ ಸಮಾಧಾನವನ್ನು ಹೇಳಿಬಿಟ್ಟನು. ಆದರೆ ಅನಂಗಸೇನೆಯು ತನ್ನ ಮಂದಿರದಲ್ಲಿ ಇದ್ದ ವಿಷಯವನ್ನು ತಿಳಿಸಲಿಲ್ಲ. ಬಹಳ ಹೊತ್ತಿನಿಂದ ತಡೆದುಕೊಂಡಿದ್ದ ಕೋಪವು ಆದಿಲ್‌ಷಹನಿಗೆ ಈಗ ಹೆಚ್ಚಿದುದರಿಂದ ಆತನು "ಇದೇನು, ನಿಮ್ಮ ಕೆಲಸ! ಇದುವರೆಗೆ ರಾಮರಾಜಾದಿಗಳನ್ನು ದೂಷಿಸಿದುದಾಯಿತು. ಈಗ ದುರ್ಗಾಧಿಪತಿಗಳನ್ನು ನಿಂದಿಸುತ್ತಿರುವಿರಿ. ಇನ್ನುಮುಂದೆ ನಮ್ಮ ಸರದಿ ಬರುವುದೇನೋ! ನಮ್ಮ ದುರ್ಗಾಧಿಪತಿಗಳು ಅಂತಹ ಕೆಲಸವನ್ನು ಎಂದಿಗೂ ಮಾಡಲಾರರು ಎಂದು ನನಗೆ ಚೆನ್ನಾಗಿ ನಂಬಿಕೆಇದೆ. ಇನ್ನಾದರೂ ಅಧಿಕಪ್ರಸಂಗವನ್ನು ನಿಲ್ಲಿಸದಿದ್ದರೆ ಕೆಲಸಕೆಟ್ಟೀತೆಂದು ಎಚ್ಚರಿಕೆಯಿಂದ ಇರಿ" ಎಂದು ಹೇಳಿದನು.

"ಬಾದಷಹರೆ! ಕಾರಾಗೃಹದಲ್ಲಿದ್ದ ಕೆಲವರು ಅಪರಾಧಿಗಳು ತಪ್ಪಿಸಿಕೊಂಡು ಬಂದು ಈ ದುರ್ಗದಲ್ಲಿ ಸೇರಿಕೊಂಡಿರುವರಂತೆ. ಉದಯಗಿರಿಯ ದುರ್ಗಾಧಿಪತಿಯ ಮಗಳನ್ನೂ ಪ್ರಹರೇಶ್ವರ ಪಂಕ್ತಿಯನ್ನೂ ರಾಮಯಮಂತ್ರಿಯು ಕರೆತಂದು ಇಲ್ಲಿ ಇಟ್ಟಿರುವರು. ಮತ್ತು ಸೈಯದ್ ಅಹಮದ್ ಎಂಬಾತನು 'ಕುದುರೆಗಳನ್ನು ತಂದುಕೊಡುವೆನು' ಎಂದು ಹಣ ತೆಗೆದುಕೊಂಡು ಅದೇಮೇರೆಗೆ ವಿಜಯನಗರಕ್ಕೆ ತೆಗೆದುಕೊಂಡು ಬರು

ತ್ತಿದ್ದಾಗ, ನಿಮ್ಮವರಲ್ಲಿ ಕೆಲವರು ಆತನಿಗೆ ಧೈರ್ಯಹೇಳಿ ಕುದುರೆಗಳನ್ನು ತಮ್ಮ ಸೈನ್ಯಕ್ಕೇ ಸೇರಿಸಿಕೊಂಡು ಸೈಯದ್ ಅಹಮದನನ್ನು ಎಲ್ಲೋ ಬಚ್ಚಿಟ್ಟಿರುವರು. ಇವರೆಲ್ಲರೂ ತಮ್ಮರಾಜ್ಯದಲ್ಲೇ ಇರುವರು. ಆದುದರಿಂದ ಅವರೆಲ್ಲರನ್ನೂ ಹಿಡಿಸಿ ನನ್ನೊಡನೆ ಕಳುಹಿಸಬೇಕೆಂದೂ ಇಲ್ಲದಿದ್ದರೆ ತಾವೇ ಸಸೈನ್ಯರಾಗಿ ಬರಬೇಕಾಗುತ್ತದೆಂದೂ ನಮ್ಮ ಚಕ್ರವರ್ತಿಯರು ಅಪ್ಪಣೆ ಕೊಟ್ಟಿರುವರು. ಇದೇ ನನ್ನ ಸಂದೇಶ. ಇದಕ್ಕೆ ತಾವು ಸಮಾಧಾನ ಹೇಳಿದರೆ ನಾನು ನಮ್ಮ ರಾಜ್ಯಕ್ಕೆ ಹಿಂದಿರುಗುವೆನು." ಎಂದು ಹೇಳಿ ಸುಮ್ಮನಾದನು.

ಈ ಮಾತುಗಳನ್ನು ಆದಿಲ್‌ಷಹನು ಕೇಳಿ—"ರಾಯಭಾರಿಗಳೇ ನಿಮ್ಮ ರಾಜರು ಹೇಳಿರುವವೆಲ್ಲಾ ಅಸಂಗತವಾಗಿಯೇ ಇರುವುವು. ಉದಯಗಿರಿಯ ದುರ್ಗಾಧೀಶ್ವರನಿಗೆ ಮಗಳಿದ್ದಳೆಂದು ನಾವು ಕೇಳಿಯೇ ಇಲ್ಲ. ಆ ಸೈಯದನು ಯಾರೋ, ಆ ಅಪರಾಧಿಗಳು ಯಾರೋ, ನಮಗೆ ಗೊತ್ತಿಲ್ಲ. ನಾವು ಇತರರ ಗೋಜಿಗೆ ಹೋಗದೆ ನಮ್ಮ ರಾಜ್ಯವನ್ನು ನಾವು ಪರಿಪಾಲಿಸಿಕೊಳ್ಳುತ್ತಿರುವಾಗ, ನಿಮ್ಮ ಚಕ್ರವರ್ತಿಗಳು ಹೀಗೆ ದೋಷಗಳನ್ನು ಹೊರಿಸುವುದು ಯೋಗ್ಯವಲ್ಲ. ಹೀಗೆ ಹೇಳಿ ಏನನ್ನೋ ಯೋಚಿಸುತ್ತಿದ್ದನು. ಸಭಾಸದರಾದರೋ ಬಹುನಿಂದಾವಚನಗಳನ್ನು ಧೈರ್ಯದಿಂದ ನುಡಿದಿದ್ದ ವಿಜಯಸಿಂಹನಿಗೆ ಕಾರಾಗೃಹವಾಸವೋ ಅಥವ ಮರಣವೋ ತಪ್ಪಲಾರದೆಂದು ನಿರ್ಧರಿಸಿ, ಮುಂದೆ ಆಗುವ ಕಾರ್ಯವನ್ನು ನಿರೀಕ್ಷಿಸುತ್ತಿದ್ದರು. ಅವರ ಅಭಿಪ್ರಾಯವು ಇಂಗಿತಜ್ಞನಾದ ಆದಿಲ್‌ಷಹನಿಗೆ ತಿಳಿಯದೇ ಇರಲಿಲ್ಲ. ಆದರೂ ತನ್ನ ಬಳಿಯಲ್ಲಿದ್ದ ಅಮೂಲ್ಯಾಭರಣವೊಂದನ್ನು ತೆಗೆದುಕೊಂಡು ಅದನ್ನು ವಿಜಯಸಿಂಹನಿಗೆ ಬಹುಮತಿಯಾಗಿ ಕೊಟ್ಟು, "ನೀವು ತಂದ ಸಂದೇಶಕ್ಕೆ ಪ್ರತಿಸಂದೇಶವನ್ನು ಹೇಳಿಕಳುಹಿಸುವೆನು. ಅಲ್ಲಿಯವರೆಗೂ ತಾವು ನಮ್ಮ ದುರ್ಗದಲ್ಲಿದ್ದು

ನಾವು ಮಾಡುವ ಸೇವೆಯನ್ನು ಅಂಗೀಕರಿಸುತ್ತಿರಬೇಕು." ಎಂದು ಹೇಳಿ ಆತನನ್ನು ಒಬ್ಬ ಸೇವಕನೊಡನೆ ಕಳುಹಿಸಿಕೊಟ್ಟು ಒಂದು ಸುಂದರಮಂದಿರದಲ್ಲಿ ಇಳಿದುಕೊಳ್ಳುವಂತೆ ಏರ್ಪಡಿಸಿದನು. ಈ ಮಾತು ಗಳನ್ನು ಕೇಳಿ ಸಭಾಸದರಿಗೆ ಅತ್ಯಾಶ್ಚರ್ಯವಾಗಿ ತಮ್ಮ ಮನಸ್ಸಿನಲ್ಲೇ ಆ ಅದಿಲ್‌ಷಹನನ್ನು ನಿಂದಿಸುತ್ತಿದ್ದರು. ಶತ್ರುರಾಜನು ತನ್ನನ್ನು ನಿಂದಿಸುತ್ತಿದ್ದರೂ ಅದೆಲ್ಲವನ್ನೂ ಕೇಳಿ ಸುಮ್ಮನಿದ್ದುದು ಬಾದ್‌ಷಹನ ಸ್ವಾಭಿಮಾನಶೂನ್ಯತೆಯನ್ನು ವ್ಯಕ್ತಪಡಿಸುವುದೆಂದು ತಿಳಿದುಕೊಂಡರು. ಬುದ್ಧಿವಂತನಾದ ರಾಮಯಮಂತ್ರಿಯೂ ಸಹಿತ ಅದಿಲ್‌ಷಹನ ಕಾರ್ಯವನ್ನು ಮೆಚ್ಚದೆ ಹೋದನು. ರುದ್ರದೇವ ಪ್ರಹರೇಶ್ವರರಾದರೋ ತಮ್ಮ ಶತ್ರುವಿಗೆ ಶಿಕ್ಷೆಯಾಗದೆ ಬಹುಮಾನಸಿಕ್ಕಿದುದಕ್ಕಾಗಿ ಬಹಳವಾಗಿ ಪರಿತಪಿಸುತ್ತಿದ್ದರು. ಆಗ ಆದಿಲ್‌ಷಹನು ಸಭೆಯ ಕಲಕಲವನ್ನು ನಿಲ್ಲಿಸಿ, ಸಭಾಸದರೇ! ನಿಮ್ಮ ಅಭಿಪ್ರಾಯವು ನಮಗೆ ತಿಳಿದಿದೆ. ಬೇಟೆಗಾರನು ದುಷ್ಟಮೃಗವನ್ನು ಬೇಟೆಯಾಡುವುದಕ್ಕಾಗಿ ಅದಕ್ಕೆಮುಂಚೆ ಮಾಂಸಾಹಾರವನ್ನು ಇಡುವುದು ಯುಕ್ತವೇತಾನೆ. ಹಾಗೆಯೇ ನನ್ನ ಬಹುಮಾನವೂ ಎಂದು ಭಾವಿಸಿರಿ. ವಿಜಯಸಿಂಹನು ಈಗಲೇ ವಿಜಯನಗರಕ್ಕೆ ಹೊರಟರೆ ರಾಯರಿಗೆ ನಮ್ಮ ಅಭಿಪ್ರಾಯವು ತಿಳಿದು ಹೋಗುವುದು; ಈಗ ನಾವುಮಾಡಬೇಕಾದ ಕೆಲಸವೇನು ರಾಯಭಾರಿಯೊಡನೆ ಏನುಹೇಳಿಕಳುಹಿಸೋಣ?" ಎಂದು ಕೇಳಿದನು.

ಇದನ್ನು ಕೇಳಿ ತೋಫಲ್‌ಖಾನನು ಎದ್ದು ಸಲಾಮುಮಾಡಿ, "ಮಹಾಪ್ರಭುಗಳೇ! ಈ ವಿಷಯದಲ್ಲಿ ಯೋಚಿಸುವುದೇನಿದೆ? ಯುದ್ಧಕ್ಕೆ ಬರಬಹುದೆಂದು ಹೇಳಿಕಳುಹಿಸುವುದೇ ಯುಕ್ತ. ಹೃದಯಶಲ್ಯದಂತಿರುವ ಶತ್ರುವನ್ನು ಉನ್ಮೂಲಿಸುವುದು ಯುಕ್ತವೇ!" ಎಂದು ಗರ್ವದಿಂದ ಹೇಳಿದನು.

ಆಗ ರಾಮಮಂತ್ರಿಯು ಎದ್ದು ಸಲಾಮುಮಾಡಿ, "ಬಾದ್‌ಷಹರೇ! ಇಂಗಿತಜ್ಞನೆಂದು ತಿಳಿದುಕೊಂಡಿದ್ದ ನಾನೂ ಸಹ ತಮ್ಮ ಅಭಿಪ್ರಾಯವನ್ನು ತಿಳಿದುಕೊಳ್ಳಲಾರದೆ ಹೋದೆನು. ಇನ್ನು ನಾವು ಆಲಸ್ಯಮಾಡದೆ ಯುದ್ಧಕ್ಕೆ ಹೊರಡುವುದು ಉಚಿತ. ಶತ್ರುಗಳು ಯುದ್ಧ ಸನ್ನಾಹ ಮಾಡಿಕೊಳ್ಳುತಿರುವಂತೆ ಕಾಣುವುದು. ನಾವು ಇನ್ನೂ ಏನನ್ನೂ ಮಾಡಿಕೊಂಡಿಲ್ಲ. ಈ ರಾಯಭಾರಿಯನ್ನು ಕಳುಹಿಸಿದ ಮಾರನೆಯ ದಿನವೇ ಅವರು ಯುದ್ಧಕ್ಕೆ ಬರುವರು. ಆದುದರಿಂದ ವಿಜಯಸಿಂಹನನ್ನು ಕಾರಾಗೃಹದಲ್ಲಿಡುವುದೇ ಒಳ್ಳೆಯದು." ಎಂದುಹೇಳಿದನು.

ರಾಮಯ ಮಂತ್ರಿಗಳೇ! ನನ್ನ ಮನಸ್ಸಿನಲ್ಲಿದ್ದಂತೆ ತಾವು ಹೇಳಿದಿರಿ. ಬಹಳ ಸಂತೋಷವಾಯಿತು." ಎಂದು ಹೇಳಿ ತೋಫಲ್‌ಖಾನನನ್ನು ನೋಡುತ್ತಾ, "ದುರ್ಗಾಧಿಪರೇ! ಇನ್ನು ನೀವು ತಕ್ಕ ಯುದ್ಧ ಸನ್ನಾಹಗಳನ್ನು ಮಾಡುತ್ತಿರಿ. ನಾವು ರಾಜಧಾನಿಗೆ ಹೊರಡುವೆವು. ರಾಯಭಾರಿಯನ್ನು ಕಾರಾಗೃಹದಲ್ಲಿಡಿ" ಎಂದು ಹೇಳಿ ಸಭೆಯನ್ನು ಮುಗಿಸಿದನು. ಸದಸ್ಯರೆಲ್ಲರೂ ಬಾದ್‌ಷಹನಿಗೆ ಸಲಾಮು ಮಾಡಿ, ವಿಜಯಸಿಂಹನಿಗೆ ಮರಣಶಿಕ್ಷೆಯಾಗದೇ ಹೋದರೂ, ಕಾರಾಗೃಹವಾಸವಾದರೂ ಪ್ರಾಪ್ತವಾಯಿತಲ್ಲಾ ಎಂದು ಸಂತೋಷಪಟ್ಟುಕೊಳ್ಳುತ್ತಾ ತಮ್ಮ ತಮ್ಮ ಬಿಡಾರಗಳಿಗೆ ಹೊರಟುಹೋದರು.

ತೋಫಲ್‌ಖಾನನು ವಿಜಯಸಿಂಹನ ಬಿಡದಿಗೆ ಹೋಗಿ "ವೀರಶ್ರೇಷ್ಠರೇ! ನೀವು ತಂದ ಸಂದೇಶವನ್ನು ಕೇಳಿ ನಮ್ಮ ಬಾದ್‌ಷಹರೂ ನಾವೂ ಬಹಳ ಸಂತೋಷಪಟ್ಟೆವು. ನಮ್ಮ ಪ್ರಭುಗಳು ತಮಗೆ ಪ್ರತ್ಯುತ್ತರ ಕೊಡುವವರೆಗೂ ದುರ್ಗಾಧ್ಯಕ್ಷನಾದ ನಾನು ತಮಗೆ ಸೇವೆ ಮಾಡುತ್ತಿರುವೆನು. ನಮ್ಮ ದುರ್ಗವನ್ನು ನೋಡುವುದಕ್ಕೆ ದಯೆಮಾಡಿಸಿ." ಎಂದು ಉಪಚಾರವಾಗಿ ಮಾತನಾಡುತ್ತಾ ದುರ್ಗದ ಕೆಲವು ಭಾಗಗಳನ್ನು

ತೋರಿಸಿ, ಕಡೆಗೆ, ಕರಿಯ ಕಲ್ಲುಗಳಿಂದ ಕಟ್ಟಿದ ಗಟ್ಟಿಯಾದ ಒಂದು ಕಟ್ಟಡದ ಒಳಗೆ ಕರೆತಂದನು. ಅದು ನೋಡುವುದಕ್ಕೆ ಅಸಹ್ಯಕರವಾಗಿತ್ತು. ಒಳಗೆ, ಹಗಲಿನಲ್ಲೇ ಕಣ್ಣು ಕಾಣಿಸದಷ್ಟು ಕತ್ತಲೆಯಾಗಿತ್ತು. ಖಾನನೂ ವಿಜಯ ಸಿಂಹನೂ ಆ ಕಟ್ಟಡದ ಒಳಗೆ ಬಂದಾಗ, ಹತ್ತು ಮಂದಿ ಸೇವಕರು ಬಂಧನಸಾಧನಗಳನ್ನು ತಂದು ತೋಫಲ್ ಖಾನನ ಇದಿರಿಗೆ ನಿಂತುಕೊಂಡರು. ಸ್ವಲ್ಪ ಹೊತ್ತಿನಲ್ಲೇ ಅವರು ತೋಫಲ್ ಖಾನನ ಕಣ್ಣು ಸನ್ನೆಯ ಮೇರೆಗೆ ವಿಜಯಸಿಂಹನನ್ನು ಆವರಿಸಿಕೊಂಡರು. ಆಗ ಆತನು, "ದುರ್ಗಾಧಿಪರೇ! ಇದೆಲ್ಲಿಯ ನ್ಯಾಯ? ಇವರೇಕೆ ನನ್ನ ಸುತ್ತಲೂ ಸುತ್ತಿಕೊಂಡಿರುವರು. ಇವರು ನನ್ನನ್ನು ಅವಮಾನಪಡಿಸಬೇಕೆಂದು ಹೀಗೆ ಮಾಡುತ್ತಿರುವಂತೆ ತೋರುವುದು. ಇದು ನಿಜವಾಗಿದ್ದರೆ ನನ್ನ ಈ ಕತ್ತಿಯು ಇವರಿಗೆ ಬುದ್ಧಿ ಕಲಿಸುವುದು." ಎಂದು ಧೈರ್ಯವಾಗಿ ಹೇಳಿದನು ಆಗ ದುರ್ಗಾಧಿಕಾರಿಯು ಆತನನ್ನು ನೋಡುತ್ತಾ, "ವಿಜಯಸಿಂಹರೇ! ತಾವು ತಂದ ಸಂದೇಶವನ್ನು ಕೇಳಿ ಬಹಳ ಸಂತೋಷಪಟ್ಟು ನಮ್ಮ ಬಾದ್‌ಷಹರು ತಮಗೆ ಬಹುಮಾನ ಮಾಡಿದರು. ಈಗ ನಾನು ತಮಗೆ ಬಹುಮಾನವನ್ನು ಸಮರ್ಪಿಸ ಬೇಕಾಗಿರುವುದು. ಹೀಗೆ ಮಾಡುವವರೆಗೂ ಈ ಮಂದಿರದಲ್ಲಿ ವಿಶ್ರಮಿಸಿಕೊಳ್ಳುತ್ತಾ, ಅತ್ತಿತ್ತ ಹಾರಾಡುವ ಕಪಟದ ಹಕ್ಕಿಗಳೊಡನೆ ಸ್ನೇಹಮಾಡಿಕೊಳ್ಳುತ್ತಾ, ಅವುಗಳ ಗೌರವವನ್ನು ಸಂಪಾದಿಸಿಕೊಳ್ಳುತ್ತಿರಿ" ಎಂದು ಮರ್ಮೋದ್ಘಾಟಕವಾಗಿ ಮಾತನಾಡಿದನು. ಇವನು ಮಾತನಾಡುವುದನ್ನು ನಿಲ್ಲಿಸಿದ ಕೂಡಲೆ ಸೇವಕರು ವಿಜಯಸಿಂಹನನ್ನು ಬಲಾತ್ಕಾರದಿಂದ ಬಂಧಿಸಿ ಕಾರಾಗೃಹಾಧಿಕಾರಿಗೆ ಒಪ್ಪಿಸಿದರು. ತೋಫಲ್ ಖಾನನು, "ನಾನಾಗಲಿ ಅಥವಾ ನಾನು ಕಳುಹಿಸುವ ಮುದ್ರೆಯಾಗಲಿ ಇಲ್ಲದೆ ಖೈದಿಯನ್ನು ಬಿಡಕೂಡದು." ಎಂದು ಅಪ್ಪಣೆಕೊಟ್ಟು ಹೊರಟುಹೋದನು

ಇಪ್ಪತ್ತೈದನೆಯ ಪ್ರಕರಣ.

ಕಂಬರ್ ಸೇನ್.

ಏಕಂ ನಿಹನ್ಯಾತ್ ಸಂದೇಹಃ ಕಾಂಡೋಮುಕ್ತೋ ಧನುಷ್ಮತಾ |
ಬುದ್ಧಿರ್ಬುದ್ಧಿಮತಾಂ ದೃಷ್ಟ್ವಾಹನ್ಯಾತ್ ರಾಷ್ಟ್ರಂ ಸರಾಜಕಂ ||

ರಾತ್ರಿಯಾಯಿತು. ಕಾರ್ಯಾರ್ಥವಾಗಿ ಸ್ಥಲಾಂತರಗಳಿಗೆ ಹೋಗಿದ್ದ ಜನರು ತಮ್ಮ ತಮ್ಮ ಕಾರ್ಯಗಳನ್ನು ಮುಗಿಸಿಕೊಂಡು ತಮ್ಮ ಮನೆಗಳನ್ನು ಸೇರಿದರು. ದಿವಾಸಂಚರಿಷ್ಣುಗಳಾದ ವಿಹಂಗಮಾದಿಗಳು ತಮ್ಮ ತಮ್ಮ ನಿವಾಸಸ್ಥಾನವನ್ನು ಸೇರಿದುವು. ನೀಲಾಕಾಶದಲ್ಲಿ ನಕ್ಷತ್ರಗಳು ವಜ್ರದಂತೆ ಪ್ರಕಾಶಿಸುತ್ತಿದ್ದುವು. ಕತ್ತಲೆಯು ದಟ್ಟವಾಗಿ ವ್ಯಾಪಿಸುತ್ತಿತ್ತು. ಆಗ ರಾಯಘೂರುದುರ್ಗದಲ್ಲಿ ಒಂದು ಮೂಲೆಯಲ್ಲಿದ್ದ ಒಂದು ಹಾಳುದೇವಸ್ಥಾನದ ಒಳಗೆ ಒಬ್ಬಮನುಷ್ಯನು ಹೋಗುತ್ತಿದ್ದನು. ರಾಯಘೂರು ದುರ್ಗವು ಹಿಂದೂ ರಾಜರ ಆಳಿಕೆಗೊಳಪಟ್ಟಿದ್ದಾಗ ಆ ದೇವಸ್ಥಾನವು ನಿರ್ಮಿತವಾಗಿತ್ತು. ರಾಯಘೂರು ಮಹಮ್ಮದೀಯರ ಕೈಗೆ ಸಿಕ್ಕಿದಮೇಲೆ ಆ ದೇವಸ್ಥಾನವು ಹಾಳುಬಿದ್ದು ಜನಸಂಚಾರವೂ ಸಹ ಇಲ್ಲದಿತ್ತು. ಏನಾದರೂ ಕೆಲಸವಿದ್ದ ಹೊರತು ಪೌರರಲ್ಲಿ ಯಾರೂ ಅಲ್ಲಿಗೆ ಹೋಗುತ್ತಿರಲಿಲ್ಲ. ಮೇಲೆಹೇಳಿದ ಮನುಷ್ಯನು ದೇವಸ್ಥಾನದ ಒಳಗೆ ಹೋದಾಗ, ಅಲ್ಲಿ ಇಬ್ಬರು ಕುಳಿತುಕೊಂಡು ಮಾತನಾಡಿಕೊಳ್ಳುತ್ತಿದ್ದರು. ಅವರಲ್ಲಿ ಒಬ್ಬನು ಹೊಸದಾಗಿ ಬಂದಾತನನ್ನು ನೋಡಿ, "ಶಂಕರರೆಡ್ಡಿ! ನಿನ್ನ ಕೆಲಸವು ಕೈಗೂಡಿತೆ? ಅನಂಗಸೇನೆಗೆ ರೋಗವು ಈಗ ಹೇಗಿದೆ? ಈಗ ಚೆನ್ನಾಗಿ ವಾಸಿಯಾಗಿದೆಯೆ? ಎಂದು ಕೇಳಿದನು.

ಶಂ—" ಅಯ್ಯಾ ! ರಾಮರಾಜ ! ನಾವು ತಂದಕಾಗದವನ್ನು ಅನಂಗಸೇನೆಗೆ ಹೇಗೆ ತಲುಪಿಸಬಹುದೆಂದು ಯೋಚಿಸುತ್ತಾ ಆ ಸೌಧದ ಪ್ರಾಕಾರದ ದ್ವಾರದ ಹತ್ತಿರದಲ್ಲೇ ಸಂಚರಿಸುತ್ತಿದ್ದೆನು. ಅಷ್ಟರಲ್ಲಿ ಮಾಲತಿಯು ಆ ದ್ವಾರದ ಬಳಿಗೆ ಬಂದು, "ನಮ್ಮ ಯಜಮಾನಿಗೆ ರೋಗವುಂಟಾಗಿದೆ. ಆಕೆಗೆ ಔಷಧವನ್ನು ತಂದುಕೊಡಬೇಕಾಗಿದೆ. ನನ್ನನ್ನು ಊರಿನೊಳಕ್ಕೆ ಹೋಗಗೊಡಿಸಿ." ಎಂದು ದ್ವಾರಪಾಲಕರನ್ನು ಬೇಡಿಕೊಳ್ಳುತ್ತಿದ್ದಳು. ಆದರೆ ನಿಷ್ಕರುಣಿಗಳಾದ ಅವರು ಆಕೆಯನ್ನು ಹೋಗಗೊಡಲಿಲ್ಲ. ಅದನ್ನು ಕಂಡು ನಾನು ಒಬ್ಬ ವೈದ್ಯನವೇಷವನ್ನು ಹಾಕಿಕೊಂಡು ಔಷಧಗಳ ಹೆಸರನ್ನೂ ರೋಗಗಳ ಹೆಸರನ್ನೂ ಹೇಳುತ್ತಾ ಅತ್ತಿತ್ತ ತಿರುಗಾಡುತ್ತಿದ್ದೆನು. ಆಗ ಮಾಲತಿಯು ಬಂದು, ಹಾಗೆ ಸುತ್ತುತ್ತಿದ್ದ ವೈದ್ಯನಬಳಿಯಲ್ಲಾದರೂ ಔಷಧವನ್ನು ತೆಗೆದುಕೊಳ್ಳಲು ಅಪ್ಪಣೆಯನ್ನು ಪಡೆದುಕೊಂಡಳು. ಔಷಧವನ್ನು ಕಟ್ಟಿಕೊಡುವ ನೆವದಿಂದ ಆ ಕಾಗದವನ್ನು ಆಕೆಗೆ ತಲುಪಿಸಿದೆನು. ದ್ವಾರಪಾಲಕರಿಗೆ ಅನುಮಾನವೇನೂ ಆಗಲಿಲ್ಲ. ಮರುದಿನವೂ ಮಾಲತಿಯು ದ್ವಾರದ ಬಳಿಯಲ್ಲಿ ಕಾದಿದ್ದು ನನ್ನನ್ನು ಕಂಡು, "ಅಯ್ಯಾ ವೈದ್ಯರೇ ! ನೀವು ಕೊಟ್ಟ ಔಷಧವು ಒಳ್ಳೆಯದಲ್ಲ. ರೋಗವು ಗುಣವಾಗಲಿಲ್ಲ. ಒಳ್ಳೆಯ ಔಷಧವನ್ನು ಕೊಡಿ ಇಗೋ ನೆನ್ನೆ ನೀವು ಕೊಟ್ಟ ಔಷಧ. ಇದನ್ನು ನೀವೇ ತೆಗೆದುಕೊಳ್ಳಿ" ಎಂದು ಹೇಳಿ ಎರಡು ಕಾಗದಗಳಿದ್ದ ಒಂದು ಪೊಟ್ಟಣವನ್ನು ನನಗೆ ಕೊಟ್ಟಳು. ನಾವು ಪ್ರತಿದಿನವೂ ಹೀಗೆ ಆ ದ್ವಾರದ ಬಳಿಯಲ್ಲಿ ಒಬ್ಬರನ್ನೊಬ್ಬರು ನೋಡುತ್ತಿದ್ದೆವು.

ರಾಮರಾಜ—" ಮಿತ್ರನೇ ! ಬಹಳ ಒಳ್ಳೆಯ ಯುಕ್ತಿಮಾಡಿದೆ. ಮಾಲತಿಯು ಮಹಾಬುದ್ಧಿವಂತಳು. ಅನಂಗಸೇನೆಗೆ ಯಾವ ಅಪಾಯವೂ ಬಾರದಂತೆ ಕಾಪಾಡುವಳು. ಆಕೆ ಕೊಟ್ಟ ಕಾಗದಗಳಲ್ಲಿ ಏನು ಬರೆದಿತ್ತು ?"

ಶಂ—"ಆ ಮಾಲತಿಯು ನನಗೆ ಒಂದು ಕಾಗದವನ್ನು ಬರೆದಿದ್ದಳು. ಅನಂಗಸೇನೆಯು ಸಂತಾಪವು ಸಂಪೂರ್ಣವಾಗಿ ನಶಿಸಿತೆಂದು ನಿನ್ನೊಡನೆ ಮಾತನಾಡಿ ನಿನಗೆ ಈ ಕಾಗದವನ್ನು ತಲುಪಿಸುವುದಕ್ಕಾಗಿ ಹೀಗೆ ಸುಳ್ಳು ಹೇಳಬೇಕೆಂದು ಹೇಳಿದ್ದಳೆಂದು ಬರೆದಿದ್ದಳು. ಎರಡನೆಯ ಕಾಗದವನ್ನು ಅನಂಗಸೇನೆಯು, ಸಾರ್ವಭೌಮರ ಹೃದಯವನ್ನು ಕರಗಿಸುವುದಕ್ಕಾಗಿ ಬರೆದುಕೊಂಡಿದ್ದಳು.

ರಾಮರಾಜ—'ಅಯ್ಯಾ! ನೀನು ನಿನ್ನ ಕೆಲಸವನ್ನು ನೋಡಿಕೊಳ್ಳುತ್ತಾ ಇದೇ ಸಮಯದಲ್ಲಿ ಈ ದೇವಾಲಯದಲ್ಲೇ ನನ್ನನ್ನು ಕಾಣುತ್ತಿರು." ಎಂದು ಹೇಳಿ "ಸಹೋದರಾ! ತಿರುಮಲರಾಯ! ನೀನು ಹೋದ ಕೆಲಸವೇನಾಯಿತು?"

ತಿರು—"ಸಹೋದರನೇ! ಆ ಮರುದಿನವೇ ಪ್ರಹರೇಶ್ವರಪಾತ್ರಾದಿಗಳನ್ನು ಕಂಡುಹಿಡಿದು ಅವರ ಹಿಂದೆಹಿಂದೆಯೇ ಬರುತ್ತಿದ್ದೆನು. ನಮ್ಮ ಮಂತ್ರಿಪುಂಗವರು 'ಪ್ರಹರೇಶ್ವರಾದಿಗಳು ರಾಯರ್ಲ್ಲೂರಿಗೆ ಹೋಗುವುದಾದರೆ ಸುಮ್ಮನಿರು ಬೇರೊಂದು ಸ್ಥಳಕ್ಕೆ ಹೋಗುವುದಾದರೆ ಅವರನ್ನು ಬಂಧಿಸಿ ಕರೆದುಕೊಂಡು ಬಾ, ಎಂದು ಆಜ್ಞೆಮಾಡಿದ್ದುದರಿಂದ ನಾನು ಮಧ್ಯಮಾರ್ಗದಲ್ಲಿ ಏನನ್ನೂ ಮಾಡಲಾಗಲಿಲ್ಲ. ಈಗ ಇವರನ್ನು ಹಿಡಿದುಕೊಂಡು ಹೋಗಬೇಕಾದರೆ ಎಷ್ಟು ಕಷ್ಟಪಡಬೇಕು! ಬುದ್ಧಿಶಾಲಿಗಳಾದ ನಮ್ಮ ಮಂತ್ರಿಯವರು, ನನಗೆ ಹೀಗೆ ಆಜ್ಞಾಪಿಸುವುದರಲ್ಲಿ ಏನು ಅಭಿಪ್ರಾಯವಿರಬಹುದು?"

ರಾಮರಾಜ—"ತಿರುಮಲರಾಯ! ತಿಮ್ಮರಸರ ಬುದ್ಧಿಯು ಅದ್ವಿತೀಯವಾದುದು. ಮಹತ್ಫಲವಿಲ್ಲದಿದ್ದರೆ ಹೀಗೆಂದಿಗೂ ಆಜ್ಞಾಪಿಸುತ್ತಿರಲಿಲ್ಲ. ನಮ್ಮ ರಾಜಮಂತ್ರಿಗಳಿಬ್ಬರಿಗೂ ರಾಯರ್ಲ್ಲೂರನ್ನು ಹಿಡಿದುಕೊಳ್ಳಬೇಕೆಂದು ಬಹಳಕಾಲದಿಂದ ಯೋಚನೆಯಿರುವುದು. ಆದರೆ ಬಿಜಾಪುರದ ರಾಜನು

ಅವರಿಗೆ ಮಿತ್ರನಾಗಿರುವುದರಿಂದ ತಮ್ಮ ಮನೋರಥವನ್ನು ಸಫಲಮಾಡಿ ಕೊಳ್ಳಲಾರದೆ ಕಾರಣಕ್ಕಾಗಿ ಕಾದುಕೊಂಡಿದ್ದರು ಪ್ರಹರೇಶ್ವರಾದಿ ಗಳು ರಾಯಚೂರನ್ನು ಹೊಕ್ಕಕೂಡಲೇ ಅದನ್ನು ವಶಪಡಿಸಿಕೊಳ್ಳಬೇಕೆಂ ಬುದೇ ಅವರ ಅಭಿಪ್ರಾಯ."

ತಿರು—"ವಿಜಯಸಿಂಹನೂ ಬಂದಿರುವನಂತೆ. ಏಕೆ?"

ರಾಮ—"ರಾಯಭಾರಿಯಾಗಿ ಬಂದಿರುವನು. ಮುಕ್ತಾಂಬಾದಿ ಗಳನ್ನೂ, ಆಸಂಗಸೇನೆಯನ್ನೂ, ಧನಸಹಾಯಮಾದ ತುರುಕನನ್ನೂ ತಮಗೆ ಒಪ್ಪಿಸಬೇಕೆಂದೂ, ಇಲ್ಲದಿದ್ದರೆ ಯುದ್ಧಕ್ಕೆ ಸಿದ್ಧರಾಗಿರಬೇಕೆಂದೂ ವಿಜಾಪುರದ ರಾಜನಿಗೆ ತಿಳಿಸಬೇಕೆಂದೇ ವಿಜಯಸಿಂಹನು ಇಲ್ಲಿಗೆ ಬಂದಿರು ವನು."

ತಿರು—"ತುರುಕರಾಜನು ಇದಕ್ಕೇನು ಉತ್ತರಕೊಟ್ಟಿರುವನು?"

ರಾಮ—"ಯುದ್ಧವನ್ನೇ ಅಂಗೀಕರಿಸಿರುವನು"

ತಿರು—"ಹಾಗೋ! ಜೊತೆಯಮರಾಯಸಿಂಹನೊಡನೆ ಕಾದುವುದಕ್ಕೆ ಪ್ರಯತ್ನಿಸಿರುವುದಲ್ಲಾ! ಈ ವಾರ್ತೆಯನ್ನು ತಿಳಿಸುವುದಕ್ಕಾಗಿ ವಿಜಯ ಸಿಂಹನು ವಿಜಯನಗರಕ್ಕೆ ಹಿಂತಿರುಗಿದನೇ?"

ರಾಮ—"ಇಲ್ಲ. ಆತನನ್ನೂ ಕಾರಾಗೃಹಬದ್ಧನನ್ನಾಗಿ ಮಾಡಿ ರುವರು. ಪಾಪ! ಆ ವಿಜಯಸಿಂಹನಿಗೆ ಪುನಃ ಕಾರಾಗೃಹವಾಸವು ಬಂತಲ್ಲಾ!"

ತಿರು—"ವಿಜಯಸಿಂಹನನ್ನು ಬಂಧಿಸುವುದರಲ್ಲಿ ಅದಿಲ್‌ಷಹನ ಉದ್ದೇಶವೇನಿರಬಹುದು?"

ರಾಮ—"ತಾನು ಕಳುಹಿಸುವ ವರ್ತಮಾನವು ರಾಯರಿಗೆ ತಿಳಿದ ಕೂಡಲೆ ಅವರು ಯುದ್ಧಕ್ಕೆ ಬಂದುಬಿಡುವರೆಂದೂ ಅವನನ್ನು ಬಂಧಿಸಿಟ್ಟ

ದ್ದರೆ ಸಮರಸನ್ನಾಹಗಳನ್ನು ಮಾಡಿಕೊಳ್ಳುವುದಕ್ಕೆ ತನಗೆ ವಿರಾಮವು ಸಿಕ್ಕುವುದೆಂದೂ ಹೀಗೆ ಮಾಡಿರುವನು."

ತಿರು—"ಹಿಂದೆಯೇ ಪರಾಭೂತನಾಗಿರುವ ಈ ರಾಜನಿಗೆ ಇಷ್ಟು ಧೈರ್ಯವುಂಟಾದುದು ಆಶ್ಚರ್ಯ!"

ರಾಮ—"ಆಶ್ಚರ್ಯವೇನು? ಮೂರು ಮಹಮ್ಮದೀಯ ರಾಜ್ಯಗಳೂ ಒಟ್ಟಾಗಿ ವಿಜಯನಗರದಮೇಲೆ ಯುದ್ಧಮಾಡಬೇಕೆಂದು ಇರುವುವೆಂಬುದನ್ನು ನಮ್ಮ ಮಂತ್ರಿಪುಂಗವರು ತಿಳಿದೇ ಇರುವರು."

ತಿರು—"ಹಾಗಾದರೆ ರಾಯರು ಈಸಲ ಯುದ್ಧಕ್ಕೆ ಅಸಾಧಾರಣ ಪ್ರಯತ್ನಗಳನ್ನು ಮಾಡಬೇಕು. ಇಲ್ಲದಿದ್ದರೆ ಕಷ್ಟ."

ರಾಮ—"ಹಾಗೆಮಾಡುವುದು ಯುಕ್ತವೇ, ಆದರೆ ಇದಕ್ಕಾಗಿ ಸ್ವಲ್ಪವೂ ಭಯಪಡಬೇಕಾಗಿಲ್ಲ ಈ ರಾಜ್ಯತ್ರಯದವರಿಗೂ ಭೇದವನ್ನು ಹುಟ್ಟಿಸುವುದಕ್ಕೆ ಭೇದೋಪಾಯಗಳನ್ನು ನನಗೆ ಉಪದೇಶಿಸಿರುವರು. ಮಹಮ್ಮದೀಯರಾಜ್ಯಮೇಘಗಳನ್ನು ನಮ್ಮ ಮಂತ್ರಿಪುಂಗವರ ಯುಕ್ತಿಮಾರುತದಿಂದ ಚದುರಿಸುವ ಧೈರ್ಯವು ನನಗಿರುವುದು."

ತಿರು—"ಹಾಗಾದರೆ ಸಂತೋಷ. ಈಗ ಸದ್ಯದಲ್ಲಿ ನಾವು ಮಾಡಬೇಕಾಗಿರುವುದೇನು? ವಿಜಯಸಿಂಹನನ್ನು ತಪ್ಪಿಸುವುದಕ್ಕೆ ಯಾವುದಾದರೂ ಉಪಾಯವಿರುವುದೇ?

ರಾಮ—"ಸೋದರಾ! ನಾವು ಇಲ್ಲಿ ಮಾಡಬೇಕಾಗಿರುವ ಕೆಲಸಗಳು ಅನೇಕವಾಗಿವೆ. ಅನಂಗಸೇನೆಯನ್ನು ಬಿಡಿಸಿಕೊಳ್ಳಬೇಕು; ಪ್ರಹರೇಶ್ವರ ರಾಮಯಮಂತ್ರಿಗಳನ್ನು ಹಿಡಿದುಕೊಂಡು ಹೋಗಬೇಕು; ಮುಕ್ತಾಂಬೆಯನ್ನು ವಿಜಯನಗರಕ್ಕೆ ಸೇರಿಸಬೇಕು. ರುದ್ರದೇವನಿಗೂ ತೋಘಲಖಾನನಿಗೂ ತಕ್ಕ ಶಿಕ್ಷೆಯನ್ನು ಮಾಡಬೇಕು. ಈ ಕಾರ್ಯಗಳನ್ನು ಸಾಧಿಸುವುದಕ್ಕಾಗಿ ತಕ್ಕ ಉಪಾಯಗಳನ್ನು ಮಂತ್ರಿಪುಂಗವರೇ

ಉಪದೇಶಿಸಿರುವರು. ನಾವು ಜಾಗರೂಕರಾಗಿ ನಡೆದುಕೊಂಡರೆ ಇವುಗಳೆಲ್ಲಾ ನೆರವೇರುವುವು ಯಾವುದಾದರೂ ಉಪಾಯಮಾಡಿ ವಿಜಯಸಿಂಹನನ್ನು ಮುಂಚೆ ಬಿಡಿಸಿಕೊಳ್ಳೋಣ. ನಿನ್ನ ಕಾಗದವನ್ನು ಬೇಗನೆ ತೆಗೆದುಕೊಂಡು ಹೋಗಿ ಕೊಟ್ಟು ಬಾ ಈಗ ಮಹಮ್ಮದೀಯ ಸೈನ್ಯಗಳು ಸನ್ನದ್ಧವಾಗಿಲ್ಲ. ಆದುದರಿಂದ ಕೂಡಲೆ ರಾಯಚೂರನ್ನು ಮುತ್ತಿದರೆ ದುರ್ಗವು ನಮ್ಮ ಕೈಗೆ ಸಿಕ್ಕಿಹೋಗುವುದು ಎಂದು ತಿಳಿಸು. ವಿಜಯಸಿಂಹನಿಗೆ ಬದಗಿರುವ ಆಪತ್ತನ್ನು ತಿಳಿಸು. ನೀನು ಬರುವುದರೊಳಗಾಗಿ ನಾನೂ ಶಂಕರರೆಡ್ಡಿಯೂ ಇಲ್ಲಿಯ ಕಾರ್ಯಗಳನ್ನು ನೋಡಿಕೊಳ್ಳುತ್ತಿರುವೆವು." ಎಂದು ಹೇಳಿ ಕಳುಹಿಸಿದನು. ಅನಂತರ ರಾಮರಾಜನು ಶಂಕರರೆಡ್ಡಿಗೆ ಒಂದು ಕಾಗದವನ್ನು ಕೊಟ್ಟು ಆತನೊಡನೆ ಏನೋ ಹೇಳಿಕಳುಹಿಸಿ ತಾನು ತನ್ನ ಸ್ಥಾನಕ್ಕೆ ಹೊರಟುಹೋದನು.

ಮರುದಿನ ರಾಮರಾಜನು ಒಬ್ಬ ಉದ್ಯೋಗಸ್ಥನ ವೇಷವನ್ನು ಧರಿಸಿ ಅಹಮ್ಮದ್‌ನಗರದ ಮಂತ್ರಿಯಾದ ಕಂಬರ್‌ಸೇನನ ಮನೆಗೆ ಹೋಗಿ ಆತನಿಗೆ ಸಲಾಮುಮಾಡಿ ಆತನಿಂದ ಸತ್ಕೃತನಾಗಿ ಉಚಿತಾಸನದಲ್ಲಿ ಕುಳಿತುಕೊಂಡನು. ಆಗ ಅವರಿಬ್ಬರಿಗೂ ಈಮೇರೆಗೆ ಸಂಭಾಷಣೆ ನಡೆಯಿತು :—

ಕಂಬರ್ -"ನೀವು ಯಾರು ? ನಿಮ್ಮ ನಿವಾಸಸ್ಥಾನವು ಯಾವುದು? ಏಕೆ ಬಂದಿರುವಿರಿ ?"

ರಾಮ—"ಮಂತ್ರಿಶ್ರೇಷ್ಠರೇ ! ನಮ್ಮ ಸ್ಥಳವು ಈ ದುರ್ಗವೇ. ನಾನು ತೋಘಲ್‌ಖಾನನ ಸ್ನೇಹಿತನು. ಈ ದುರ್ಗದಲ್ಲಿ ನನಗೆ ರಕ್ಷಕಭಟಾಧ್ಯಕ್ಷನ ಉದ್ಯೋಗವಿರುತ್ತಿದು. ನನಗೆ ಇಲ್ಲಿ ಉದ್ಯೋಗಮಾಡಲು ಮನಸ್ಸಿಲ್ಲ. ತಮ್ಮ ನಗರಕ್ಕೆ ಬಂದರೆ ನನಗೆ ಯಾವುದಾದರೂ ಉದ್ಯೋ

ಗವನ್ನು ಕೊಡಿಸಿಕೊಡಲು ಸಾಧ್ಯವೇ ಎಂಬುದನ್ನು ವಿಚಾರಿಸುವುದಕ್ಕಾಗಿ ತಮ್ಮಲ್ಲಿಗೆ ಬಂದಿದ್ದೇನೆ.''

ಕಂಬರ್—ಇಲ್ಲಿಯ ಕೆಲಸವನ್ನೇಕೆ ಬಿಡುವಿರಿ ? ತೋಫಲ್‌ಖಾನರು ಬಹಳ ಒಳ್ಳೆಯವರಲ್ಲಾ ? "

ರಾಮು—" ಮೊದಮೊದಲು ಅವರು ಒಳ್ಳೆಯವರೇ ಆಗಿದ್ದರು. ಆದರೆ ಈಗ ರಾಮಯಮಂತ್ರಿಗಳ ಮಾತನ್ನು ಕೇಳಿಕೊಂಡು ಬದಲಾಯಿಸುತ್ತಿರುವರು. ಮೊದಲು ಅವರಿಗಿದ್ದ ಯುಕ್ತಾಯುಕ್ತವಿವೇಚನೆಯು ಈಗ ಇಲ್ಲ. ನಮ್ಮಂತಹ ಆಪ್ತರು ಹಿತವಚನಗಳನ್ನು ಹೇಳಿದರೂ, ಕೇಳದೆ ರಾಮಯಮಂತ್ರಿಯ ಮಾತುಗಳನ್ನು ಕೇಳಿಕೊಂಡು ಬಿಜಾಪುರದ ರಾಜ್ಯವನ್ನು ಧ್ವಂಸಮಾಡುವ ಕೆಲಸಗಳನ್ನು ಮಾಡುತ್ತಿರುವರು. ಆ ರಾಮಯಮಂತ್ರಿ ಬಹು ಕುಟಿಲನು ; ಬಿಜಾಪುರ ರಾಜ್ಯಕ್ಕೆ ಪರಮ ಶತ್ರುವಿನಂತೆ ತೋರುವನು. ಅವನನ್ನು ಹೊರಕ್ಕೆ ಕಳುಹಿಸಿ ಬಿಡಬೇಕೆಂದು ನಾನು ಎಷ್ಟು ಹಿತವಚನಗಳನ್ನು ಹೇಳಿದರೂ, ಕಿವಿಗೆ ಹಾಕಿಕೊಳ್ಳದೆ ನನಗೆ ದುಸ್ಸಹವಾದ ಅವಮಾನವನ್ನು ಮಾಡಿರುವರು. ಆದುದರಿಂದ ನನಗೆ ಇಲ್ಲಿರಲು ಮನಸ್ಸಿಲ್ಲ."

ಕಂಬರ್—" ಇದೇನು ? ಈ ಹೊತ್ತು ಹೊಸ ಸಮಾಚಾರ ! ರಾಮಯಮಂತ್ರಿಯು ಬಿಜಾಪುರರಾಜ್ಯವನ್ನು ಅಭಿವೃದ್ಧಿಗೊಳಿಸುತ್ತಿರುವನು ಎಂದು ನಾನು ಕೇಳಿದ್ದೆನಲ್ಲಾ. ಆತನು ಈ ರಾಜ್ಯವನ್ನು ಧ್ವಂಸಮಾಡುತ್ತಿರುವನೆಂದು ಹೇಗೆ ಹೇಳುವಿರಿ ? ಇಂತಹ ಅಹಿತವಾಕ್ಯಗಳನ್ನು ನೀವು ಮಾತನಾಡುತ್ತಿದ್ದರೆ ತೋಫಲ್‌ಖಾನರು, ಹೇಗೆ ಸಹಿಸುವರು ? "

ರಾಮು—" ಮಂತ್ರಿಶ್ರೇಷ್ಠರೇ ! ನಮ್ಮ ದುರ್ಗಾಧೀಶ್ವರರೂ ಹೀಗೆಯೇ ಹೇಳುತ್ತಿದ್ದರು. ನಾನೂ ಮೊದಮೊದಲು ಹಾಗೆಯೇ ನಂಬಿಕೊಂ

ಡಿದ್ದೆನು. ಆದರೆ ವಿಜಯನಗರದಿಂದ ಬಂದ ನನ್ನ ಒಬ್ಬ ಸ್ನೇಹಿತನ ಮೂಲಕ ರಾಮಯನ ತಂತ್ರವೆಲ್ಲವೂ ಗೊತ್ತಾಯಿತು. ಈ ರಾಮಯ ಮಂತ್ರಿಯು ಬಿಜಾಪುರರಾಜ್ಯಧ್ವಂಸಕ್ಕೆ ಧೂಮಕೇತುವಂತಿರುವನು. ಬಿಜಾಪುರರಾಜ್ಯಕ್ಕೆ ಮಾತ್ರವೇ ಅಲ್ಲ. ಉಳಿದ ಮಹಮ್ಮದೀಯ ರಾಜ್ಯಗಳಿಗೂ ಅಪಮೃತ್ಯುವೆಂದು ನಂಬಿ; ತಿಮ್ಮರಸನ ಪ್ರೇರಣೆಯಿಂದಲೇ ಇಲ್ಲಿಗೆ ಬಂದಿರುವನಂತೆ!"

ಕಂಬರ್—"ನಿಮ್ಮ ಮಾತುಗಳನ್ನು ಕೇಳಿ ಬಹಳ ಆಶ್ಚರ್ಯವಾಗುತ್ತಿದೆ. ರಾಮಯಮಂತ್ರಿಗೂ ತಿಮ್ಮರಸನಿಗೂ ಎಣ್ಣೆ ಸೀಗೆಯಕಾಯಿಗಿರುವಷ್ಟು ವೈತ್ರಿಯಿರುವುದೆಂದು ಜನಜನಿತವಾಗಿದೆ. ಹೀಗಿರುವಲ್ಲಿ ನಿಮ್ಮ ಮಾತುಗಳನ್ನು ನಂಬುವುದು ಹೇಗೆ?"

ರಾಮ—"ಮಹನೀಯರೇ! ತಾವು ಕೇಳಿರುವುದು ಸತ್ಯವಲ್ಲ. ತಿಮ್ಮರಸನಿಗೆ ರಾಮಯಮಂತ್ರಿಯು ಆರನೆಯ ಪ್ರಾಣವಂತೆ! ಮುಂದೆ ರಾಮಯನನ್ನೇ ತನ್ನ ಸಹಾಯಕ್ಕಾಗಿ ಉಪಮಂತ್ರಿಯಾಗಿ ಮಾಡಿಕೊಳ್ಳಬೇಕೆಂದಿರುವನಂತೆ! ರಾಮಯನು ತನ್ನ ಮಾಯಾಜಾಲವನ್ನು ತಮ್ಮೆಲ್ಲರ ಮೇಲೂ ಬೀಸಿಬಿಟ್ಟಿರುವನು ನನ್ನ ಹಿತವಚನಗಳನ್ನು ಕೇಳುವುದಿಲ್ಲ. ನಾನೇನುಮಾಡಲಿ!"

ಕಂಬರ್—"ಅಸತ್ಯವನ್ನು ಹೇಳುತ್ತಿದ್ದರೆ ನಂಬುವವರು ಯಾರು? ನಿಮ್ಮ ಮಾತುಗಳು ನಿಜವೆಂದು ನಾನೂ ನಂಬಲಾರೆ. ರಾಮಯಮಂತ್ರಿಯು ತಿಮ್ಮರಸನಿಗೆ ಶತ್ರುವಲ್ಲದಿದ್ದರೆ ವಿಜಯನಗರಕ್ಕೆ ಮಹಾಪಾಯಕರವಾದ ಕೆಲಸಗಳನ್ನು ಏಕೆಮಾಡುತ್ತಿದ್ದನು?"

ರಾಮ—"ವಿಜಯನಗರದವರೊಡನೆ ವಿರೋಧವಿರುವಂತೆ ನಟಿಸದ ಹೊರತು ಮಹಮ್ಮದೀಯರು ಹತ್ತಿರ ಸೇರಿಸರು, ಎಂದು ಉಪದೇಶಿಸಿದುದರಿಂದ ರಾಮಯಮಂತ್ರಿಯು ಹಾಗೆ ಮಾಡಿರುವನು. ಮೇಲೆಮೇಲೆ ನೋಡಿ

ದರೆ ಆತನ ಕೆಲಸಗಳು ಮಹಾಪಾಯಕರಗಳೆಂದು ಕಾಣಿಸುವುವೇ ಹೊರತು ಅವುಗಳಲ್ಲಿ ಒಂದಾದರೂ ಅಪಾಯಕರವಾದುದಲ್ಲ."

ಕಂಬರ್—"ಅಯ್ಯಾ! ನಿಮ್ಮ ಮಾತುಗಳನ್ನು ನಂಬುವುದಕ್ಕೆ ಆಗುವುದಿಲ್ಲ. ರುದ್ರದೇವಾದಿಗಳ ಸಹಾಯದಿಂದ ತಿಮ್ಮರಸನನ್ನು ಕೊಲ್ಲಬೇಕೆಂದು ರಾಮಯನು ಪ್ರಯತ್ನಿಸಿದುದು ಉಂಟೋ ಇಲ್ಲವೋ? ಆ ದಿನ ವಿಜಯಸಿಂಹನು ಬಾರದಿದ್ದರೆ ತಿಮ್ಮರಸನ ಅವತಾರ ಪೂರ್ತಿಯಾಗುತ್ತಿತ್ತೋ ಇಲ್ಲವೋ?"

ರಾಮ—"ತಿಮ್ಮರಸನ ಮೇಲಿನ ಹಗೆಯಿಂದ ಅವನನ್ನು ಕೊಲ್ಲಬೇಕೆಂದು ರುದ್ರದೇವನೇ ಕೆಲವರ ಸಹಾಯವನ್ನು ಪಡೆದುಕೊಂಡು ಪ್ರಯತ್ನಿಸಿದನು. ಅಷ್ಟೇ ಹೊರತು, ರಾಮಯಮಂತ್ರಿಯು ಪ್ರಯತ್ನಿಸಲಿಲ್ಲ. ತಿಮ್ಮರಸನನ್ನು ರಕ್ಷಿಸಬೇಕೆಂದು ರಾಮಯನೇ ವಿಜಯಸಿಂಹನನ್ನು ಕಳುಹಿಸಿದನು."

ಕಂಬರ್—"ಈಗ ತಮ್ಮ ಮಾತುಗಳು ಮತ್ತೂ ವಿಚಿತ್ರವಾದುವು. ರಾಮಯಮಂತ್ರಿಗೆ ಮಿತ್ರನಾದ ರುದ್ರದೇವನು ಶತ್ರುವೆಂದೂ ಆತನಿಗೆ ಶತ್ರುವಾದ ವಿಜಯಸಿಂಹನು ಮಿತ್ರನೆಂದೂ ಹೇಳುತ್ತಿರುವಿರಿ!"

ರಾಮ—"ರಾಮಯ ತಿಮ್ಮರಸರ ಬುದ್ಧಿಮಹಿಮೆಯನ್ನು ತಿಳಿಯದವರಿಗೆ ನನ್ನ ಮಾತುಗಳು ವಿಚಿತ್ರವಾಗಿ ತೋರುವುದು ಸಹಜ. ನನ್ನ ವೃತ್ತಾಂತವನ್ನು ಸಂಪೂರ್ಣವಾಗಿ ತಿಳಿಸಿದ ಹೊರತು ಶತ್ರುಗಳು ಯಾರು ಮಿತ್ರರು ಯಾರು ಎಂಬುದನ್ನು ತಿಳಿದುಕೊಳ್ಳಲು ಕಷ್ಟ. ಉದಯಗಿರಿ ದುರ್ಗಾಧೀಶ್ವರನಿಗೆ ಮುಕ್ತಾಂಬೆಯೆಂಬ ಮಗಳೊಬ್ಬಳಿರುವಳು ಆಕೆಯ ಹೆಸರನ್ನಾದರೂ ಕೇಳಿದ್ದೀರೋ ಇಲ್ಲವೋ?"

ಕಂಬರ್—"ಉದಯಗಿರಿರಾಜನಿಗೆ ಸೋಮೇಶ್ವರಪಾತ್ರನೆಂಬ ಕುಮಾರನು ಮಾತ್ರ ಇರುವನೆಂದು ಕೇಳಿರುವೆನು. ಕೇಳಿರುವುದು ಮಾತ್ರ

ವಲ್ಲ. ಮೊನ್ನೆ ನಡೆದ ಸಭೆಯಲ್ಲಿ ಪ್ರತ್ಯಕ್ಷವಾಗಿಯೂ ನೋಡಿಯೂ ಇರುವೆನು.

ರಾಮ—" ಆ ಸೋಮೇಶ್ವರ ಪಾತ್ರನೆ ಮುಕ್ತಾಂಬೆ. ಮಹಮ್ಮದೀಯರು ಆಕೆಗೆ ಅವಮಾನವನ್ನು ಮಾಡಾರು ಎಂದು ಯೋಚಿಸಿ ರಾಮಯನು ಆ ತಂತ್ರವನ್ನು ಮಾಡಿದನು. ಆತನು ಮಾಡುವ ಪ್ರತಿಯೊಂದು ಕೆಲಸವೂ ಜನರನ್ನು ಮರುಳುಗೊಳಸುವುದೇ."

ಕಂಬರ್—(ಆಶ್ಚರ್ಯದಿಂದ) " ಇದೊಂದು ಹೊಸ ಸಂಗತಿ. ಇದನ್ನು ಆಮೇಲೆ ಯೋಚಿಸೋಣ. ಮೊದಲಿನ ವೃತ್ತಾಂತವನ್ನು ಪೂರ್ತಿಗೊಳಿಸಿ."

ರಾಮ—" ಮುಕ್ತಾಂಬೆಯು ವಿಜಯಸಿಂಹನನ್ನು ಮದುವೆಯಾಗಬೇಕೆಂದಿರುವಳು. ಆದರೆ ರುದ್ರದೇವನು ಆಕೆಯನ್ನು ಮದುವೆಯಾಗಬೇಕೆಂದು ಪ್ರಯತ್ನಿಸುತ್ತಿರುವನು. ಮುಕ್ತಾಂಬೆಗೆ ರುದ್ರದೇವನ ನಡತೆಗಳು ಸರಿಬಿದ್ದಿಲ್ಲ. ಆದುದರಿಂದ ಆತನನ್ನು ಉಪಾಯಾಂತರದಿಂದ ಕೊಲ್ಲಿಸಬೇಕೆಂದು ತನ್ನ ಮಂತ್ರಿಯಾದ ರಾಮಯಾಮಾತ್ಯನಿಗೆ ಆಜ್ಞಾಪಿಸಿದ್ದಳು. ಆತನೂ ಸಮಯವನ್ನು ಕಾಯುತ್ತಿದ್ದು ತಿಮ್ಮರಸನನ್ನು ಕೊಲ್ಲಲು ರುದ್ರದೇವಾದಿಗಳು ಹೋಗಿದ್ದಾಗ, ರುದ್ರದೇವನನ್ನು ಕೊಂದು ಮಂತ್ರಿಯನ್ನು ಬಿಡಿಸುವುದಕ್ಕಾಗಿ ವಿಜಯಸಿಂಹನನ್ನು ಕಳುಹಿಸಿಕೊಟ್ಟನು. ರುದ್ರದೇವನಿಗೆ ತನ್ನಲ್ಲಿ ನಂಬಿಕೆಯನ್ನುಂಟುಮಾಡಿಕೊಳ್ಳುವುದಕ್ಕೋಸ್ಕರ ವಿಜಯಸಿಂಹನೊಡನೆ ಪರಮಶತ್ರುತ್ವವನ್ನು ವಹಿಸಿಕೊಂಡಿರುವಂತೆ ಕಾಣಿಸಿಕೊಳ್ಳುತ್ತಿರುವನು. ನಿಜವಾಗಿಯೂ ರಾಮಯಮಂತ್ರಿಯು ವಿಜಯಸಿಂಹನನ್ನು ತನ್ನ ಪ್ರಾಣದಂತೆ ಪ್ರೀತಿಸುತ್ತಿರುವನು. ಇದಕ್ಕೆ ನಿಮಗೆ ಒಂದು ದೃಷ್ಟಾಂತವನ್ನು ತೋರಿಸಿಕೊಡುವೆನು. ಆ ದಿನ ಹುಚ್ಚನವೇಷದಿಂದ ವಿಜಯನಗರದ ಬೀದಿಯಲ್ಲಿ ಸಂಚರಿಸುತ್ತಿದ್ದ ರಾಮಯಮಂತ್ರಿಯನ್ನು ಒಂದು [illegible]ಳಯು ಹಾಯ್ದು ಕೊಲ್ಲುತ್ತಿದ್ದಾಗ ಆತನನ್ನು ಕಾಪಾಡಿದವರು ವಿಜಯ

ಸಿಂಹನೋ ರುದ್ರದೇವನೋ ತಾವೇ ಯೋಚಿಸಿ. ಈಗಲಾದರೂ ರಾಮಯ ತಿಮ್ಮರಸರು ಅಂತರ್ಯದಲ್ಲಿ ಮಿತ್ರರೇ ಎಂಬುದು ಗೊತ್ತಾಯಿತೆ ?

ಕಂಬರ್—"ಇದೂ ಇರಲಿ. ವಿಜಯಸಿಂಹನಿಗೂ ಅನಂಗಸೇನೆಗೂ ಸಂಬಂಧವನ್ನು ಕಲ್ಪಿಸಿದವನು ರಾಮಯಮಂತ್ರಿಯೇ ಎಂದು ಕೇಳಿರುವೆನು. ಇದಕ್ಕೂ ಏನಾದರೂ ಸಮಾಧಾನವನ್ನು ಹೇಳುವಿರೋ ?

ರಾಮ—"ಮಂತ್ರಿಶ್ರೇಷ್ಠರೇ ನಿಮ್ಮನ್ನು ಮೋಹಸಮುದ್ರದಲ್ಲಿ ಮುಳುಗಿಸುವುದರಿಂದ ನನಗೆ ಆಗುವ ಲಾಭವೇನು ? ನಂಬಿ, ನಂಬದಿರಿ ನಾನು ಹೇಳುವುದನ್ನು ಹೇಳಿಬಿಡುವೆನು. ಉಂಗುರಗಳನ್ನು ವಿನಿಮಯಮಾಡಿದುದೂ, ಸುಳ್ಳುಕಾಗದವನ್ನು ಸೃಷ್ಟಿಸಿ ಅನಂಗಸೇನೆಯನ್ನು ಹೊರಡಿಸಿದುದೂ, ಕಾರಾಗೃಹದಲ್ಲಿದ್ದ ಮುಕ್ತಾಂಬಾದಿಗಳನ್ನು ಬಿಡಿಸಿಕೊಂಡು ಬಂದುದೂ, ಇವೆಲ್ಲಾ ತಿಮ್ಮರಸನೇ ರಾಮಯನಿಂದ ಮಾಡಿಸಿದ ಕೆಲಸಗಳು. ಹೀಗೆ ಮಾಡಿಸಿದರೆ ಮಹಮ್ಮದೀಯರು ರಾಮಯನನ್ನು ವಿಜಯನಗರದ ವಿರೋಧಿಯೆಂದು ಭಾವಿಸುವರೆಂದೇ ಹೀಗೆಲ್ಲಾ ಮಾಡಿಸಿದುದು."

ಕಂಬರ್—"ಅಯ್ಯೋ ! ಬೆಟ್ಟವನ್ನಗೆದು ಇಲಿಯನ್ನು ಹಿಡಿದಹಾಗೆ ಮಹಮ್ಮದೀಯರನ್ನು ಅಣಗಿಸಲು ಇಷ್ಟೊಂದು ಪ್ರಯಾಸವೇಕೆ ?"

ರಾಮಯ—"ಈ ಪ್ರಯಾಸಕ್ಕೆ ತಕ್ಕಫಲವಿಲ್ಲದೇ ಇಲ್ಲ. ಈವರೆಗೂ ಬಿಜಾಪುರ ವಿಜಯನಗರಗಳಿಗೆ ಅತ್ಯಂತ ಮೈತ್ರಿಯಿದ್ದುದರಿಂದ ಬಿಜಾಪುರಕ್ಕೆ ಸೇರಿರುವ ರಾಯಚೂರುದುರ್ಗವನ್ನು ಹಿಡಿದುಕೊಳ್ಳಬೇಕೆಂದು ಆಸೆಪಡುತ್ತಿದ್ದ ರಾಯರಿಗೆ ಸಮಯಸಿಕ್ಕದೇ ಇತ್ತು. ಅದಕ್ಕಾಗಿ ಒಂದು ಕಾರಣವನ್ನು ಕಲ್ಪಿಸಬೇಕೆಂದೇ ತಿಮ್ಮರಸನು ರಾಮಯಮಂತ್ರಿಯೊಡನೆ ಮುಕ್ತಾಂಬೆ, ಅನಂಗಸೇನೆ,—ಇವರನ್ನು ಇಲ್ಲಿಗೆ ಕಳುಹಿಸಿರುವನು, ಮೊದಲು ಈ ದುರ್ಗವನ್ನು ಆಕ್ರಮಿಸಿಕೊಂಡು ಬಳಿಕ ಇತರ ಮಹಮ್ಮದೀಯ ರಾಜ್ಯವನ್ನು ವಿಜಯನಗರಕ್ಕೆ ಸಂಪಾದಿಸಿಕೊಡಬೇಕೆಂದು

ಸನು ಇಷ್ಟು ಉಪಾಯಗಳನ್ನೂ ಮಾಡಿರುವನು. ರಾಮಯಮಂತ್ರಿಯು ಮಹಮ್ಮದೀಯರನ್ನು ವಂಚಿಸಬೇಕೆಂದಿರುವನೊ ಇಲ್ಲವೋ ಎಂಬುದನ್ನು ನಿಶ್ಚಯಿಸಬೇಕಾದರೆ ಸ್ತ್ರೀಗೆ ಪುರುಷವೇಷವನ್ನು ಹಾಕಿಸಿದುದೇ ಪ್ರಬಲ ನಿದರ್ಶನ; ಈ ಸಂದೇಹವನ್ನು ಮನಸ್ಸಿನಲ್ಲಿಟ್ಟುಕೊಂಡು ಪರೀಕ್ಷಿಸುತ್ತಿರಿ; ಆಗ ನಿಮಗೇ ಗೊತ್ತಾಗುವುದು. ನಾನು ಬೇರೊಂದುಸಲ ಬಂದು ತಮ್ಮ ದರ್ಶನವನ್ನು ತೆಗೆದುಕೊಳ್ಳುವೆನು " ಹೀಗೆ ಹೇಳಿ ರಾಮರಾಜನು ಹೊರಟು ಹೋದನು.

ಕಂಬರಸೇನನು ಈ ವಿಷಯವನ್ನು ಕುರಿತು ತನ್ನಲ್ಲಿ ತಾನೇ ಆಲೋಚಿಸಿಕೊಳ್ಳುತ್ತಿದ್ದನು. ಈ ಸಂಭಾಷಣೆಯು ನಡೆದ ಮಾರನೇದಿನ ಬೀದಿಯಲ್ಲಿ ಹೋಗುತ್ತಿದ್ದ ಒಬ್ಬ ಮನುಷ್ಯನು ಮನೆಯಬಾಗಿಲಲ್ಲಿ (ನಿಂತುಕೊಂಡು) ಆತನನ್ನು ಕುರಿತು "ಸಾಹೇಬರೇ, ನಿಮ್ಮ ಊರು ಇದೇಯೋ?" ಎಂದು ಕೇಳಿದನು.

ಕಂಬರ್—" ನಿನ್ನ ಪ್ರಶ್ನೆಯಿಂದ ನೀನು ಪರಸ್ಥಳದವನೆಂದು ತೋರುವುದು. ನಿನ್ನ ಊರು ಯಾವದು ? "

ಆಗಂತುಕ—" ನಮ್ಮ ಸ್ಥಳ ವಿಜಯನಗರ. ಈ ದುರ್ಗದಲ್ಲಿ ನನಗೊಂದು ಕೆಲಸವಿರುವುದು. ನಿಮ್ಮ ಸ್ಥಳವು ಇದೇ ಆದರೆ, ನನಗೆ ಒಂದು ವೃತ್ತಾಂತವನ್ನು ತಿಳಿಸುವಿರಾ ? "

ಕಂಬರ್—" ಅದೇನು ? ಕೇಳು. ನನಗೆ ತಿಳಿದಿದ್ದರೆ ಹೇಳುವೆನು."

ಆಗಂತುಕ—" ಈ ದುರ್ಗದಲ್ಲಿ ರಾಮಯ ಮಂತ್ರಿಯೆಂಬ ಒಬ್ಬರು ದೊಡ್ಡಮನುಷ್ಯರಿರುವಂತೆ. ಅವರಮನೆಗೆ ದಾರಿ ಯಾವುದು ? "

ಕಂಬರ್—" ಏನು ! ನಿನ್ನನ್ನು ಕಳುಹಿಸಿದುದು ತಿಮ್ಮರಸರು ತಾನೇ ? ರಾಮಯಮಂತ್ರಿಯು ನಾನೇ. ಈ ಅಂಶವು ಯಾರಿಗಾದರೂ ತಿಳಿ

ದರೆ ಕೆಲಸಕೆಟ್ಟೀತು. ಒಳಕ್ಕೆ ಬಾ, ಬೇಗ ಬಾ," ಎಂದು ಹೇಳುತ್ತಾ ಅವನನ್ನು ಒಳಕ್ಕೆ ಕರೆದುಕೊಂಡು ಹೋದನು.

ಆ ಆಗಂತುಕನು, ಕಾರಣಾಂತರದಿಂದ ರಾಮಯಾಮಾತ್ಯನೇ ಕಂಬರಸೇನನೆಂದು ಹೆಸರಿಟ್ಟುಕೊಂಡಿದ್ದನೆಂದು ಭಾವಿಸಿದನು. ಆತನು ಒಳಕ್ಕೆ ಹೋಗಿ ಒಂದು ಕಾಗದವನ್ನು ಆತನಕೈಗೆ ಕೊಟ್ಟು "ಮಂತ್ರಿಶ್ರೇಷ್ಠರೇ ರಾಮಯಾಮಾತ್ಯರು ತಾವೇ ಎಂದು ಮೊದಲು ತಿಳಿಯದೇ ಹೋದೆ ಕ್ಷಮಿಸಿ. ನಾನು ಬಂದವೇಳೆ ಬಹಳ ಒಳ್ಳೆಯದು; ನನಗೆ ಬೇಗ ಪ್ರತ್ಯುತ್ತರವನ್ನು ಕೊಟ್ಟುಕಳುಹಿಸಿ" ಎಂದು ಬೇಡಿಕೊಂಡನು.

ಆಗ ಕಂಬರಸೇನನು ಬಹಳ ಸಂತೋಷಭರಿತನಾಗಿ ಅಷ್ಟು ಸುಲಭವಾಗಿ ತನ್ನಕೈಗೆ ಸಿಕ್ಕಿದ ಕಾಗದವನ್ನು ತೆರೆದು ಓದಿಕೊಂಡನು ಅದರಲ್ಲಿ ಹೀಗೆ ಬರೆದಿತ್ತು :—

"ಮಿತ್ರಸತ್ತಮರಾದ ರಾಮಯಾಮಾತ್ಯರಲ್ಲಿ ತಿಮ್ಮರಸನ ವಿಜ್ಞಾಪನೆ.

ನಮ್ಮ ಸಂಕೇತದ ಮೇರೆಗೆ ಅನಂಗಸೇನೆ, ಮುಕ್ತಾಂಬೆ ಮುಂತಾದವರನ್ನು ರಾಯ್ಘೂರಿಗೆ ಸೇರಿಸಿ ಮೊದಲನೆಯಾಕೆಯನ್ನು ತೋಫಲ್‌ಖಾನಸಿಗೆ ಕೊಡುವೆನೆಂದು ನಂಬಿಕೆ ಹುಟ್ಟಿಸಿ ಅವನೊಡನೆ ಸ್ನೇಹವನ್ನು ಬಳೆಯಿಸುತ್ತಿರುವರೆಂದು ಕೇಳಿ ಬಹಳ ಸಂತೋಷವಾಯಿತು. ಆದಿಲ್‌ಷಹನೂ ಕೂಡ ನಿಮ್ಮ ಬಲೆಗೆ ಬಿದ್ದನೆಂದು ಕೇಳಿ ಮತ್ತೂ ಸಂತೋಷವಾಯಿತು. ಮೂರು ರಾಜ್ಯಗಳವರೂ ತಮ್ಮತಮ್ಮ ಸೈನ್ಯಗಳನ್ನು ಒಟ್ಟುಗೂಡಿಸಿದ ಕೂಡಲೇ ರಹಸ್ಯವಾಗಿ ಇಲ್ಲಿಗೆ ಸಮಾಚಾರ ತಿಳಿಸಿದರೆ, ನಾನೇ ಸ್ವಲ್ಪಸೈನ್ಯವನ್ನು ತೆಗೆದುಕೊಂಡು ಅಹಮುದ್‌ನಗರವನ್ನು ಮುತ್ತುವೆನು. ಸಾರ್ವಭೌಮರು ಗೋಲ್ಕೊಂಡವನ್ನು ಆಕ್ರಮಿಸುವರು. ಇವೆರಡೂ ವಶವಾದರೆ ಈಗ ಮಧ್ಯಸ್ಥವಾಗಿರುವ ಬಿಜಾಪುರರಾಜ್ಯವು ನಮ್ಮ ಕೈಗೆ ಸಿಕ್ಕಿದಂತೆಯೇ

ಸರಿ. ಹಿಂದೂರಾಜ್ಯಕ್ಕೆ ವಿರೋಧಿಗಳಾಗಿರುವ ಈ ನೀಚರನ್ನು ಜಯಿಸಿದ ಹೊರತು ಹಿಂದುಗಳಿಗೆ ಮನಸ್ಸು ತೃಪ್ತಿಯಾಗದು. ಸರ್ವಪ್ರಯತ್ನವನ್ನೂ ಮಾಡಿ ರಹಸ್ಯವನ್ನು ಕಾಪಾಡಿಕೊಳ್ಳುತ್ತಿರಬೇಕೆಂದು ಪ್ರಾಜ್ಞರಿಗೆ ಸೂಚಿಸುವ ಆವಶ್ಯಕವೇನಿದೆ ?

ಇಂತೀ ವಿಜ್ಞಾಪನೆಗಳು."

ಈ ಕಾಗದವನ್ನು ಓದಿಕೊಂಡು ಆ ಆಗಂತುಕನನ್ನು ನೋಡಿ "ನಾನು ಇದಕ್ಕೆ ಪ್ರತ್ಯುತ್ತರವನ್ನು ಬರೆದು ಒಬ್ಬ ಸೇವಕನೊಡನೆ ಕಳುಹಿಸುವೆನು. ನೀನು ಈಗಹೋಗು" ಎಂದು ಹೇಳಿ ಅವನನ್ನು ಕಳುಹಿಸಿಬಿಟ್ಟು ತನ್ನಲ್ಲಿ ತಾನೇ "ಆಹಾ ! ನೆನ್ನೆ ಆ ಉದ್ಯೋಗಿಯು ಹೇಳಿದ ಮಾತು ನಿಜವೆಂದು ತೋರುವುದು ರಾಮಯಮಂತ್ರಿಯು ಮಹಾಪಾಪಿ ಎಂದು ಸ್ಥಾಪಿಸುವುದಕ್ಕೆ ಸ್ತ್ರೀಗೆ ಪುರುಷವೇಷವನ್ನುಹಾಕಿ ನಮ್ಮೆಲ್ಲರನ್ನೂ ಮರುಳುಗೊಳಿಸುವುದೇ ಸಾಕು. ಈ ಕಾಗದದಲ್ಲಿಯೂ ಸೋಮೇಶ್ವರಪಾತ್ರನ ಸುದ್ದಿಯೇ ಇಲ್ಲ. ಒಂದುವೇಳೆ ನಾವು ಸೈನ್ಯವನ್ನು ತೆಗೆದುಕೊಂಡು ಹೊರಟರೆ, ನಮ್ಮ ರಾಜ್ಯವು ಶತ್ರುಗಳಿಗೆ ವಶವಾಗುವುದು. ಅತೀ ಆಸೆಪಟ್ಟರೆ ಈಗ ಯಿರುವುದೂ ಹೋಗುವುದು ನಿಜ" ಎಂದು ಯೋಚಿಸುತ್ತಾ ಬರೆವಣಿಗೆಯು ತಿಮ್ಮರಸನದೇ ಹೌದೋ ಅಲ್ಲವೋ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ತನ್ನ ಪೆಟ್ಟಿಗೆಯಲ್ಲಿದ್ದ ತಿಮ್ಮರಸನ ಮತ್ತೊಂದು ಕಾಗದವನ್ನು ತೆಗೆದು ಅವೆರಡು ಬರೆವಣಿಗೆಗಳನ್ನೂ ಹೋಲಿಸಿನೋಡಿದನು. ಅವುಗಳಿಗೆ ಎಳ್ಳಷ್ಟಾದರೂ ಭೇದವಿರಲಿಲ್ಲವಾದುದರಿಂದ ಕಂಬರಸೇನನು ಹಿಂದಿನ ವೃತ್ತಾಂತವನ್ನು ದೃಢವಾಗಿ ನಂಬಿದನು.

ಇಪ್ಪತ್ತೆರಡನೆಯ ಪ್ರಕರಣ.

ಮಲಮಲಖಾನ್.

ಭಿನತ್ತಿಸಮ್ಯಕ್ ಪ್ರಹಿತೋ ಭೇದೋಪಾಯಸ್ಥಿರಾಂಮತಿಂ |
ಚಾಧರಾನ್ ಕರ್ಕಶ ಶಿಲಾನ್ ಮಹಾಶನಿರಿವೋದಕಂ ||

ಮಲಮಲಖಾನನು ಗೋಲ್‍ಕೊಂಡರಾಜ್ಯದ ಸೈನ್ಯಾಧಿಪತಿ. ಈತನಿಗೆ ಹಿಂದೆ ಸದರುದ್ದೀನ್ ಎಂಬ ಸೈನ್ಯಾಧಿಪತಿಯು ಗೋಲ್‍ಕೊಂಡದ ರಾಜ್ಯವನ್ನು ತನ್ನಪ್ರಾಣಗಳಂತೆ ಕಾಪಾಡುತ್ತಿದ್ದನು. ಕ್ರಿ. ಶ. ೧೫೧೫ನೆಯ ವರ್ಷದಲ್ಲಿ ತಿಮ್ಮರಸನು ಮಹಾಸೈನ್ಯಸಮೇತನಾಗಿ ಪಾನಗಲ್ಲು ಎಂಬ ಸ್ಥಳದ ಮೂಲಕ ಕೊಂಡವೀಡಿಗೆ ಹಾದುಹೋಗುತ್ತಿರುವಾಗ ಸದರುದ್ದೀನನು ಆತನನ್ನು ಇದಿರಿಸಿದನು. ಆಗ ತಿಮ್ಮರಸನು ನಿರುಪಮಾನ ಪೌರುಷವನ್ನು ತೋರಿಸಿ ಅವನನ್ನು ಸೋಲಿಸಿ ಸದರುದ್ದೀನನನ್ನೂ ಅವನ ಹೆಂಡತಿ ಮಕ್ಕಳನ್ನೂ ಸೆರೆಹಿಡಿದು ವಿಜಯನಗರಕ್ಕೆ ಕರೆದುಕೊಂಡು ಹೋದನು. ಆಗ ಕುತುಬ್‍ಷಾಹಿ ದೊರೆಯು ತನ್ನ ಬಲಭುಜದಂತಹ ಸೇನಾಪತಿಯು ಶತ್ರುಹಸ್ತಗತನಾದುದರಿಂದ ಬಹಳವಾಗಿ ವ್ಯಸನಪಟ್ಟು ಮಲಮಲಖಾನನಿಗೆ ಆ ಅಧಿಕಾರವನ್ನು ಕೊಟ್ಟು ವಿಜಯನಗರದಮೇಲೆ ಮುಯ್ಯಿತೀರಿಸಿಕೊಳ್ಳಬೇಕೆಂದು ಸಮಯನೋಡುತ್ತಿದ್ದನು ರಾಮಯನು ಈ ಸಂಧಿಯನ್ನು ತಿಳಿದು ಗೋಲಕೊಂಡಕ್ಕೆ ಹೋಗಿ ಮಹಮ್ಮದೀಯ ರಾಜ್ಯಗಳು ಏಕೀಭವಿಸಿ ವಿಜಯನಗರವನ್ನು ನಾಶಪಡಿಸುವುದು ಬಹಳ ಒಳ್ಳೆಯದೆಂದು ಅನೇಕವಿಧವಾಗಿ ಬೋಧಿಸಿದನು. ಕುತುಬ್‍ಷಾಹಿಯು ಈ ಬೋಧನೆಗೆ ಒಳಗಾಗಿ ಶಾಯಸ್ಥೋರುದುರ್ಗದಲ್ಲಿ ನಡೆಯುತ್ತಿದ್ದ ಸಭೆಗೆ ಮಲಮಲಖಾನನನ್ನು ಕಳುಹಿಸಿದ್ದನು. ಈತನು ತಿಮ್ಮರಸನ ವಿಷಯವಾಗಿಯೂ ಕೃಷ್ಣದೇವ

ರಾಯರ ವಿಷಯವಾಗಿಯೂ ಬಹಳ ವಿರೋಧವನ್ನು ವಹಿಸಿ ಮಾತನಾಡಿದ್ದ ವಚನಗಳನ್ನು ವಾಚಕರು ಕೇಳಿಯೇ ಇರುವಿರಲ್ಲವೇ? ದರ್ಬಾರು ಮುಗಿದಮೇಲೆ ಕೆಲವು ದಿವಸಗಳು ಆದುರ್ಗದಲ್ಲಿದ್ದು ಮಲಮಲಖಾನನು ಅಲ್ಲಿಯ ವಿಶೇಷಗಳನ್ನು ನೋಡುತ್ತಿದ್ದನು. ಅವನು ಪಾರಸೀದೇಶಸ್ಥನು. ಸ್ವಚ್ಛ ಮುಹಮ್ಮದೀಯ ವಂಶಸ್ಥನೆಂದು ಆತನಿಗೆ ಬಹಳ ಗರ್ವವಿತ್ತು. ತನ್ನ ಮತದಲ್ಲಿಯೂ ಈತನಿಗೆ ಅಭಿಮಾನ ಹೆಚ್ಚಾಗಿತ್ತು. ಒಂದು ದಿನ ಈತನು ವಿಹಾರಾರ್ಥವಾಗಿ ಸಂಚರಿಸುತ್ತಿದ್ದಾಗ ಸಭಾಸ್ಥಳಕ್ಕೆ ಬಂದಿದ್ದ ಫಕೀರನು ಇವನ ಇದಿರಿಗೆ ಕಾಣಿಸಿಕೊಂಡನು. ಆಗ ಮಲಮಲಖಾನನು ಆತನಿಗೆ ಸಲಾಮುಮಾಡಿ ಆತನನ್ನು ತನ್ನಮನೆಗೆ ಕರೆದುಕೊಂಡು ಹೋಗಿ ಉಚಿತಾ ಸನದಲ್ಲಿ ಕುಳ್ಳಿರಿಸಿ ಮುಹಮ್ಮದೀಯ ಮತರಹಸ್ಯಗಳನ್ನೂ ಮತಾಭಿವೃದ್ಧಿ ಯನ್ನೂ ಕುರಿತು ಉತ್ಸಾಹದಿಂದ ಮಾತನಾಡುತ್ತಿದ್ದನು. ಫಕೀರನು ಹೆಚ್ಚು ಮಾತನಾಡದೆ ಮಲಮಲಖಾನನ ಮಾತುಗಳನ್ನು ಕೇಳಿ ಸಂತೋಷಿಸಿ ಅವ ನನ್ನು ಸ್ತುತಿಸಲಾರಂಭಿಸಿದನು. ಫಕೀರನ ಸ್ತುತಿಯು ಹೆಚ್ಚಿದಂತೆಲ್ಲಾ ಖಾನನ ಉತ್ಸಾಹವು ಬಳೆಯುತ್ತಿತ್ತು. ಹೀಗೆ ಸ್ವಲ್ಪಹೊತ್ತು ಕಳೆದ ಬಳಿಕ ಫಕೀರನು ಮಲಮಲಖಾನನೊಡನೆ ಈ ಮೇರೆಗೆ ಪ್ರಸಂಗಿಸಿದನು :—

ಫಕೀರನು—“ಓ ಮುಹಮ್ಮದೀಯ ಶ್ರೇಷ್ಠರೇ! ನಮ್ಮ ಮತದಲ್ಲಿ ತಮಗೆ ಇಷ್ಟು ಆಸಕ್ತಿಯಿರುವುದೆಂದು ತಿಳಿದಿರಲಿಲ್ಲ. ತಮ್ಮಂತಹವರು ಪ್ರಭುಗಳಾದರೆ ನಮ್ಮ ಮತವು ತಡೆಯಿಲ್ಲದೆ ಹರಡುವುದಲ್ಲವೇ?”

ಖಾನನು—“ಮಹನೀಯರೇ! ತಾವು ಅಪ್ಪಣೆಕೊಡಿಸಿದಂತೆ ನನಗೆ ಪ್ರಭುತ್ವವು ದೊರಕಿದರೆ ಹಿಂದುಗಳೆಲ್ಲರನ್ನೂ ಮುಹಮ್ಮದೀಯರನ್ನಾಗಿ ಮಾಡದೆ ಇರುವೆನೇ? ಆದರೆ ನನಗೆ ಅಂತಹ ಅದೃಷ್ಟ ಎಲ್ಲಿಂದ ಬರ ಬೇಕು?”

ಫಕೀರ—"ಅದೃಷ್ಟವಿಲ್ಲದೆ ಏನು ? ಮೊತ್ತಮೊದಲು ಈ ಮಹಮ್ಮದೀಯ ಪ್ರಭುಗಳ ಹಿರಿಯರು ಬಹಮನೀರಾಜ್ಯಕ್ಕೆ ಅಧೀನರಾಗಿದ್ದವರೇ ಅಲ್ಲವೇ ? ಅವರು ಕ್ರಮವಾಗಿ ದುರ್ಗಾಧಿಪತಿಗಳಾಗಿ ಪ್ರತ್ಯೇಕರಾಜ್ಯಗಳನ್ನು ಸ್ಥಾಪಿಸಿದರು. ಹಾಗೆಯೇ ತಾವೂ ಒಂದು ರಾಜ್ಯವನ್ನು ಏಕೆ ಸ್ಥಾಪಿಸಕೂಡದು ?"

ಖಾನ—"ಓ ಮಹಾತ್ಮರೇ ! ತಮ್ಮಂತಹ ಮಹಾಪುರುಷರಿಗೆ ಭವಿಷ್ಯತ್ಕಾಲವೃತ್ತಾಂತಗಳು ತಿಳಿಯುವುವು ಎಂದು ಕೇಳಿದೇನೆ. ನನ್ನ ಭವಿಷ್ಯತ್ತು ಹೇಗಿದೆಯೋ ತಿಳಿಸುವಿರಾ ?"

ಫಕೀರ—(ಆತನ ಮುಖವನ್ನು ಪರಿಶೀಲಿಸಿ) "ಓ ಯವನಾಗ್ರಣಿಗಳೇ ! ತಮ್ಮ ಮುಖಲಕ್ಷಣಾದಿಗಳನ್ನು ನೋಡಲಾಗಿ, ತಾವು ರಾಜ್ಯಾಧಿಪತ್ಯವನ್ನು ವಹಿಸಿ ಅಪಾರಸುಖವನ್ನೂ, ಕೀರ್ತಿಯನ್ನೂ, ಪಡೆಯುವಿರಿ ಎಂದು ತೋರುವುದು. ನನ್ನ ಈ ಮಾತು ಹುಸಿಯಾಗಲಾರದು"

ಖಾನ--"ನನಗೆ ರಾಜ್ಯಾಧಿಪತ್ಯವುಂಟಾಗುವುದೇ ? ಅದು ಹೇಗೆ ಬರುವುದು ? ನನಗೇನೋ ನಂಬಿಕೆಯಿಲ್ಲ."

ಫಕೀರ—"ಓ ತುರುಷ್ಕಶ್ರೇಷ್ಠರೇ ! ತಾವು ಹಾಗೆ ಸಂಶಯಿಸಬೇಕಾಗಿಲ್ಲ. ನಮ್ಮಂತಹವರ ಮಾತುಗಳಲ್ಲಿ ನಂಬಿಕೆಯಿಟ್ಟು ಕೈಯಲ್ಲಾಗುವವುಟ್ಟಿಗೂ ಪುರುಷಪ್ರಯತ್ನಗಳನ್ನು ನಡೆಯಿಸಿದರೆ ತಪ್ಪದೆ ತಾವು ರಾಜ್ಯಾಧಿಪತಿಗಳಾಗುವಿರಿ ಈ ವಿಷಯದಲ್ಲಿ ಎಳ್ಳಷ್ಟಾದರೂ ಸಂಶಯಪಡಬೇಕಾದುದಿಲ್ಲ."

ಖಾನ—"ಮಹಾತ್ಮರೇ ! ತಮ್ಮಂತಹವರ ಮಾತು ವ್ಯರ್ಥವಾಗಲಾರದೆಂದು ನನಗೆ ದೃಢವಿಶ್ವಾಸವಿರುವುದು. ತಾವು ಏನುಮಾಡಬೇಕೆಂದು ಹೇಳಿದರೂ ಅದನ್ನು ಮಾಡುವೆನು. ತಾವು ನನ್ನಲ್ಲಿದಯೆಯಿಟ್ಟು ಕಾಲಕಾ

ಲಕ್ಕೆ ಬುದ್ಧಿವಾದವನ್ನು ಹೇಳುತ್ತಾ ಸಹಾಯಮಾಡುತ್ತಾಬಂದರೆ ಒಂದು ವೇಳೆ ಕಾರ್ಯಸಾಧನೆಯಾದರೂ ಆಗಬಹುದು.''

ಘ—"ಯವನಶ್ರೇಷ್ಠರೇ! ನಿಮ್ಮೆಲ್ಲರನ್ನು ರಾಮಯಮಂತ್ರಿಯು ಏಕೀಭವಿಸಿ ವಿಜಯನಗರವನ್ನು ಹಾಳುಮಾಡಬೇಕೆಂದು ಯೋಚಿಸಿರುವುದು, ಪೂರ್ವದಲ್ಲಿ ಕೃಷ್ಣರಾಯರು ಸ್ವಾಧೀನಮಾಡಿಕೊಂಡ ಉದಯಗಿರಿಯನ್ನು ವಶಪಡಿಸಿಕೊಳ್ಳಬೇಕೆಂದೇ ಅಲ್ಲವೇ?"

ಶಾ—"ಹೌದು, ಅದರಿಂದ ನಮಗೆ ಪ್ರಯೋಜನವೇನು?"

ಘ—"ನಿಮ್ಮ ಮೂರು ರಾಜ್ಯಗಳೂ ಏಕೀಭವಿಸಿದರೆ ವಿಜಯನಗರವನ್ನು ಜಯಿಸುವುದು ನಿಜ. ಆಗ ಉದಯಗಿರಿ ರಾಜ್ಯವು ಸ್ವತಂತ್ರವಾಗುವುದು. ಆ ಉದಯಗಿರಿಯ ರಾಜನು ಹಿಂದೆಯೇ ಸತ್ತುಹೋಗಿರುವನು. ಆತನಿಗೆ ಮುಕ್ತಾಂಬೆ ಎಂಬ ಒಬ್ಬ ಮಗಳು ಮಾತ್ರ ಇರುವಳು. ಆಕೆಯು ಅದ್ವಿತೀಯ ಸೌಂದರ್ಯವತಿ. ಉದಯಗಿರಿಯು ಆಕೆಗೆ ಲಭಿಸುವುದು. ತಾವು ರಾಮಯಮಂತ್ರಿಯನ್ನು ತಮ್ಮವನನ್ನಾಗಿ ಮಾಡಿಕೊಂಡರೆ ಆತನು ಮುಕ್ತಾಂಬೆಯನ್ನು ತಮಗೆ ಮದುವೆ ಮಾಡಿಸಿಕೊಡುವನು. ಆಗ ತಮಗೆ ಆ ಯುವತಿಯೂ, ಆ ರಾಜ್ಯವೂ, ಕೈವಶವಾಗುವುವು. ಆ ರಾಜ್ಯವು ಈಗ ಸಣ್ಣದಾಗಿದ್ದರೂ ತಮ್ಮ ಪರಾಕ್ರಮದಿಂದ ಪರರಾಜ್ಯಗಳನ್ನು ಜಯಿಸಿ ಅದನ್ನು ವೃದ್ಧಿಪಡಿಸಿಕೊಳ್ಳಬಹುದು."

ಶಾ—"ತಾವು ಹೇಳಿದುದು ಯುಕ್ತವಾಗಿಯೇ ತೋರುವುದು. ಆದರೆ ಉದಯಗಿರಿಯ ರಾಜನಿಗೆ ಇರುವುದು ಸೋಮೇಶ್ವರಪಾತ್ರನೆಂಬ ಕುಮಾರನಲ್ಲವೆ? ಮುಕ್ತಾಂಬೆ ಎಂಬ ಕುಮಾರಿಕೆ ಇರುವಳೆಂದು ಹೇಳುತ್ತಿರುವಿರಲ್ಲಾ!"

ಘ—"ತುರುಷ್ಕಾಗ್ರಣೀ! ತಮ್ಮೆಲ್ಲರಿಗೂ ರಾಮಯಮಂತ್ರಿಯು ತನ್ನ ಮಾಯಾಜಾಲವನ್ನು ಬೀಸಿರುವನು. ಆನೆಗೊಂದಿಯಲ್ಲಿ ಮುಕ್ತಾಂಬೆ

ಯಾಗಿದ್ದ ವ್ಯಕ್ತಿಯನ್ನು ಈಗ ಸೋಮೇಶ್ವರಪಾತ್ರನನ್ನಾಗಿ ಮಾಡಿಕೊಂಡಿರುವನು. ರಾಮಯಮಂತ್ರಿಯು ಬುದ್ಧಿಚಾತುರ್ಯವು ಸ್ತ್ರೀಯರನ್ನು ಪುರುಷರನ್ನಾಗಿ ಮಾಡಬಲ್ಲುದು! ಉದಯಗಿರಿಯ ರಾಜನಿಗೆ ಒಬ್ಬಳು ಮಗಳು ಇರುವಳೆಂದು ಹೇಳಿದರೆ ಯಾರಿಂದ ಏನು ಅಪಾಯ ಸಂಭವಿಸುವುದೋ ಎಂದು ಹೆದರಿ ಈ ಉಪಾಯವನ್ನು ಮಾಡಿರುವನು. ಆದುದರಿಂದ ನಾನು ಹೇಳಿದಂತೆ ತಾವು ಪ್ರಯತ್ನಿಸುವುದಾದರೆ ಕಾರ್ಯಸಿದ್ಧಿಯಾಗುವುದರಲ್ಲಿ ಏನೇನೂ ಸಂಶಯವಿಲ್ಲ."

ಯಾ—"ಮಹಾತ್ಮರೇ! ಇದು ಸತ್ಯವೇ? ನನಗೆ ಆಶ್ಚರ್ಯವಾಗುತ್ತದೆ! ಆದಿನ ಸಭೆಯಲ್ಲಿ ನೋಡಿ ರಾಜಕುಮಾರನೆಂದೇ ಭಾವಿಸಿದ್ದೆನಲ್ಲಾ!"

ಘ—"ನನ್ನ ಮಾತಿನಲ್ಲಿ ಇನ್ನೂ ನಂಬಿಕೆ ಹುಟ್ಟದಿದ್ದರೆ ರಾಮಯಮಂತ್ರಿಯನ್ನೇ ಕರೆದು ಕೇಳಬಹುದು. ಆಗ ವಾಸ್ತವಾಂಶವು ತನಗೆ ತಾನೇ ಗೊತ್ತಾಗುವುದು. ಮೊದಲು ತಮ್ಮಂತೆಯೇ ನಾನೂ ಮೋಸಹೋಗಿದ್ದೆನು. ಆದರೆ ನನಗೆ ಒಬ್ಬ ಸ್ನೇಹಿತನಿಂದ ಈ ಗುಟ್ಟು ಗೊತ್ತಾಯಿತು."

ಯಾ—"ನನಗೆ ಆಕೆಯನ್ನು ಕೊಟ್ಟು ಮದುವೆಮಾಡಲು ರಾಮಯಮಂತ್ರಿಯು ಒಪ್ಪುವನೇ? ಒಂದುವೇಳೆ ಆತನು ಒಪ್ಪಿದರೂ ಆಕೆಯು ಸಮ್ಮತಿಸಬೇಕಲ್ಲಾ? ನನಗೇನೋ ಈ ಕಾರ್ಯವು ಸಂಭವವೆಂದು ಕಾಣುವುದಿಲ್ಲ."

ಘ—"ಓ ಯುವನಾಥ... ...ತಿ! ತಾವೇಕೆ ಹೀಗೆ ನಿರಾಶರಾಗಿರುವಿರಿ. ಈ ಕಾರ್ಯವು ಸಿದ್ಧಿಸಬೇಕಾಗಿದ್ದರೆ ಒಂದುಪಾಯ... ...ಗೆ ನಿಮ್ಮಿಂದ ಉಪಕಾರವನ್ನು ಪಡೆಯಬೇಕೆಂದಿರುವ ರಾಮಯಮಂತ್ರಿಯು ನಿಮಗ... ...ಇಷ್ಟು ಪ್ರತ್ಯುಪಕಾರವಮಾಡಲಾರನೇ? ಆತನು ಸಮ್ಮತಿಸಿದರೆ ಮುಕ್ತಾಂಬೆಯು...

ತಾನಾಗಿಯೇ ಒಪ್ಪುವಳು. ತಾವೂ ರಾಮಯಮಂತ್ರಿಯೂ ಕಲೆತು ಈ ವಿಷಯದಲ್ಲಿ ಮಾತನಾಡಿ ಪರಸ್ಪರವಾಗ್ದಾನಮಾಡಿಕೊಳ್ಳುವುದು ಒಳ್ಳೆಯದು. ಮೊದಲು ಹೀಗೆ ಮಾತು ನಡೆದಿದ್ದುದರಿಂದಲೇ ಅಲ್ಲವೇ ? ರಾಮಯಮಂತ್ರಿಯು ಕೃಷ್ಣದೇವರಾಯರ ಪ್ರಿಯೆಯಾದ ಅನಂಗಸೇನೆಯನ್ನು ತೋಫಲಖಾನನಿಗೆ ವಶಪಡಿಸಿರುವನು ? ತಮ್ಮ ಕೆಲಸವೂ ಹೀಗೆಯೇ ಕೈಗೂಡುವುದು."

ಖಾ—" ಏನು ! ತೋಫಲಖಾನರಿಗೆ ಅನಂಗಸೇನೆಯನ್ನು ವಶಪಡಿಸಿರುವನೇ ? ಇದು ಸತ್ಯವೇ ? "

ಫ—" ತಮ್ಮಲ್ಲಿ ಅಸತ್ಯವನ್ನು ಹೇಳಬೇಕೇ ? ನಾನು ಒಂದುಸಾರಿ ತೋಫಲಖಾನರೊಡನೆ ಹೋಗಿ ಪ್ರತ್ಯಕ್ಷವಾಗಿ ಆಕೆಯನ್ನು ನೋಡಿದೆನು. ಆಕೆಯು ಆತನನ್ನು ವರಿಸುವುದಕ್ಕೆ ಇಷ್ಟಪಟ್ಟಂತೆಯೇ ತೋರುವುದು."

ಖಾ—" ಮಹಾತ್ಮರೇ ! ತಾವು ಅಪ್ಪಣೆ ಕೊಡಿಸುವ ಮಾತುಗಳು ಸತ್ಯವೇ ಆಗಿದ್ದರೆ, ರಾಮಯಮಂತ್ರಿಯು ನನ್ನ ಮಾತಿಗೆ ಒಪ್ಪಲೇಬೇಕಾಗಿದೆ. ಇಲ್ಲದಿದ್ದರೆ ನಾನು ಅವನಿಗೆ ಏಕೆ ಸಹಾಯಮಾಡಬೇಕು ? ಇಷ್ಟೇ ಅಲ್ಲ ನಮ್ಮ ಪ್ರಭುವಿನ ಮನಸ್ಸನ್ನೂ ಸಹ ತಿರುಗಿಸಿಬಿಡುವೆನು. ನನ್ನ ಮಹಿಮೆಯನ್ನಾದರೂ ನೋಡಿ !"

ಫ—" ಯವನಶ್ರೇಷ್ಠರೇ ! ತಾವು ಹೀಗೆ ಕರಾರುಮಾಡಿಕೊಳ್ಳುವುದಾದರೆ ತಮ್ಮ ಆಸೆ ಕೈಗೂಡಿತೆಂದು ತಿಳಿಯಿರಿ ರಾಮಯಮಂತ್ರಿಯನ್ನು ಕರೆಯಿಸಿ ಈ ವಿಷಯವನ್ನು ಇತ್ಯರ್ಥಪಡಿಸಿಕೊಳ್ಳಿರಿ. ಆದರೆ ಈ ವೃತ್ತಾಂತವನ್ನು ನಾನು ಹೇಳಿದೆನೆಂದು ಮಾತ್ರ ಹೇಳಬೇಡಿರಿ ನಾನು ಮತ್ತೊಂದು ಸಲ ಬಂದು ತಮ್ಮನ್ನು ಕಾಣಿಸಿಕೊಳ್ಳುವೆನು."

ಹೀಗೆ ಹೇಳಿ ಆತನು ಹೊರಟುಹೋದನು.

ಅನಂತರ ಖಾನನು ಆತ್ಯಾನಂದಭರಿತನಾಗಿ ರಾಮಯಮಂತ್ರಿಯನ್ನು ಕರೆದುಕೊಂಡುಬರುವುದಕ್ಕೆ ಒಬ್ಬ ಆಳನ್ನು ಕಳುಹಿಸಿದನು. ರಾಮಯ ಮಂತ್ರಿಯು ಜಾಗ್ರತೆಯಾಗಿಯೇ ಅಲ್ಲಿಗೆ ಬಂದು ಉಚಿತಾಸನದಲ್ಲಿ ಕುಳಿತು ಕೊಂಡನು. ಆಗ ಖಾನನು ಆತನನ್ನು ನೋಡಿ, "ಓ ಅಮಾತ್ಯಶ್ರೇಷ್ಠರೇ! ನಾನು ಬಂದಕೆಲಸ ಮುಗಿಯಿತು. ನಾನು ನಮ್ಮ ಊರಿಗೆ ಹೊರಡುವೆನು. ತಕ್ಕಸಮಯದಲ್ಲಿ ನಮಗೆ ಹೇಳಿ ಕಳುಹಿಸಿದರೆ, ಸೈನ್ಯಸಮೇತನಾಗಿ ಬಂದು ಸಹಾಯಮಾಡುವೆನು. ಮೊನ್ನೆಯ ಸಭೆಯಲ್ಲಿ ನಿಮ್ಮ ರಾಜಕುಮಾರನು ಮಾತನಾಡಿದ ವಚನಗಳನ್ನು ಕೇಳಿ ಬಹಳ ಸಂತೋಷವಾಯಿತು. ಆಗಿ ನಿಂದಲೂ ಆತನೊಡನೆ ಸ್ನೇಹವನ್ನು ಮಾಡಬೇಕೆಂದು ನನಗೆ ಆಸೆ ಇರುವುದು. ಆತನನ್ನು ಒಂದುಸಾರಿ ಇಲ್ಲಿಗೆ ಕರೆದುಕೊಂಡು ಬರಬೇಕು. ಇಲ್ಲದಿದ್ದರೆ ನನ್ನನ್ನೇ ನಿಮ್ಮ ಮನೆಗೆ ಬರಹೇಳಿದರೆ ಬರುವೆನು" ಎಂದನು.

ರಾಮಯಮಂತ್ರಿಯು ಈ ಮಾತಿನ ಸರಣಿಯನ್ನು ಕಂಡು ಸಂದೇಹಚಿತ್ತನಾಗಿ ಆತನನ್ನು ಕುರಿತು, "ತುರುಷ್ಕಶ್ರೇಷ್ಠರೇ ತಮ್ಮ ಅಭೀಷ್ಟವನ್ನು ನೆರವೇರಿಸುವುದಕ್ಕೆ ಅಡ್ಡಿಯೇನು? ಆದರೆ ನಮ್ಮ ರಾಜಕುಮಾರನಿಗೆ ಈ ದಿನ ಬಹಳ ತಲೆನೋವು ಉಂಟಾಗಿದೆ. ಮತ್ತೊಂದುದಿನ ಕರೆದುಕೊಂಡು ಬರುವೆನು" ಎಂದು ಹೇಳಿದನು.

"ಮಂತ್ರಿವರ್ಯರೇ! ತಮ್ಮ ರಹಸ್ಯವು ನನಗೆ ಗೊತ್ತಾಗಿದೆ. ಬಚ್ಚಿಟ್ಟುಕೊಂಡರೂ ಪ್ರಯೋಜನವಿಲ್ಲ. ತಮ್ಮ ಸ್ನೇಹಿತರಾದ ನಮ್ಮನ್ನೂ ಹೀಗೆ ವಂಚಿಸಬಹುದೇ? ಹೋಗಲಿ; ತಮ್ಮ ರಾಜಕುಮಾರಿಕೆಯನ್ನು ಇತರರ ಕಣ್ಣಿಗೆ ಬೀಳದಂತೆ ಉಪಾಯಮಾಡಿದುದು ಯುಕ್ತವಾಗಿಯೇ ಇರುವುದು. ನಾನು ತಮಗೆ ಪರಮಾಪ್ತನೆಂದು ತಿಳಿಯಿರಿ. ನನ್ನಿಂದ ತಮಗೆ ಬಹಳ ಸಹಾಯವಾಗುವುದು. ಉತ್ತಮರು ಮಿತ್ರರ ಕಾರ್ಯಗಳನ್ನು ಸಫಲ ಮಾಡುವರು. ಉತ್ತಮೋತ್ತಮರೂ ಮಿತ್ರಸತ್ತಮರೂ ಆದ ತಾವು

ನಮ್ಮ ಕೆಲಸವನ್ನು ಮಾಡಿಕೊಡಲಾರಿರಾ ? ತಮ್ಮ ಸ್ನೇಹಿತರಾದ ತೋಘಲಖಾನನ ಕೋರಿಕೆಯನ್ನು ನೆರವೇರಿಸಲು ಎಷ್ಟೋ ಕಷ್ಟಪಟ್ಟು ಅನಂಗಸೇನೆಯನ್ನು ತಂದುಕೊಟ್ಟಿರುವಿರಿ ಅಲ್ಲವೇ ? ಹಾಗೆಯೇ ತಮ್ಮ ಮಿತ್ರನಾದ ನನ್ನಮೇಲೂ ದಯವಿಟ್ಟು ರಾಜಕುಮಾರಿಕೆಯನ್ನು ನನಗೆ ಕೊಟ್ಟು ವಿವಾಹಮಾಡಿಕೊಡುತ್ತೀರೆಂದು ಮಾತುಕೊಡಿರಿ ಅದಿಲ್ಲದಪಕ್ಷದಲ್ಲಿ ನಿಮ್ಮ ಮೈತ್ರಿಯನ್ನು ತ್ಯಜಿಸಿ ಈಗಲೇ ಗೋಲ್‌ಕೊಂಡಕ್ಕೆ ಹೊರಟುಹೋಗುವೆನು" ಎಂದು ನಿಸ್ಸಂದೇಹವಾಗಿ ಹೇಳಿದನು

ಈ ವಾಕ್ಯಗಳನ್ನು ಕೇಳಿ ರಾಮಯಮಂತ್ರಿಗೆ ಬಹಳ ವ್ಯಸನವಾಯಿತು. ಮೂರ್ಖರಾದ ಆ ಮಹಮ್ಮದೀಯರು ಹೀಗೆ ಮೊಂಡುತನವನ್ನು ತೋರಿಸುವರೆಂದೇ, ಅನಂಗಸೇನೆಯನ್ನು ತೋಘಲಖಾನನಿಗೆ ತಂದು ಕೊಟ್ಟುದನ್ನೂ ಉದಯಗಿರಿಯ ರಾಜನಿಗೆ ಮುಕ್ತಾಂಬೆಯೆಂಬ ಮಗಳಿರುವುದನ್ನೂ ಯಾರಿಗೂ ತಿಳಿಸಿರಲಿಲ್ಲ. ತಾನು ಅಷ್ಟು ಗೋಪ್ಯವಾಗಿಟ್ಟುಕೊಂಡಿದ್ದ ಈ ಎರಡು ವಿಷಯಗಳೂ ಹೀಗೆ ಬಯಲಾದುದರಿಂದ ರಾಮಯನಿಗೆ ಬಹಳವಾಗಿ ಆಶ್ಚರ್ಯವಿಷಾದಗಳುಂಟಾದುವು ಖಾನನ ಮಾತುಗಳನ್ನು ಕೇಳಿದ ಕೂಡಲೆ ದುರ್ಧರವಾದ ಕೋಪವು ಉದ್ಭವಿಸಿದರೂ, ವಿವೇಕದಿಂದ ಅದನ್ನು ಅಣಗಿಸಿಕೊಂಡು ಖಾನನನ್ನು ನೋಡುತ್ತಾ "ಓ ತುರುಷ್ಕಶ್ರೇಷ್ಠರೇ ! ತಮ್ಮ ಕೋರಿಕೆಯು ಬಹಳ ಕಷ್ಟಸಾಧ್ಯವಾದುದು. ಕಷ್ಟಪಟ್ಟರೂ ಸಫಲವಾಗುವುದೋ ಇಲ್ಲವೋ ? ಆ ಮುಕ್ತಾಂಬೆಯು ಪೂರ್ವಾಚಾರಪರಾಯಣಳು. ಆದುದರಿಂದ ಅನ್ಯಕುಲೋದ್ಭವರಾದ ತಮ್ಮನ್ನು ಮದುವೆಯಾಗುವಳೋ ಇಲ್ಲವೋ ತಿಳಿಯದು. ಮತ್ತೆ ಯಾವ ಯುವತಿಯನ್ನಾದರೂ ತಾವು ಅಪೇಕ್ಷಿಸಿದರೆ ತಮ್ಮ ಅಭೀಷ್ಟವು ಕೈಗೂಡುವುದು."

"ಮಂತ್ರಿವರ್ಯರೇ ! ನನಗೆ ಮತ್ತೆ ಯಾರೂ ಬೇಕಾಗಿಲ್ಲ. ನನ್ನ ಮೇಲೆ ತಮಗೆ ದಯೆಯಿದ್ದರೆ ತಮ್ಮ ರಾಜಕುಮಾರಿಕೆಯನ್ನೇ ಮದುವೆ

ಮಾಡಿಕೊಡಿ. ತಾವು ಹೇಳದರೆ ಮುಕ್ತಾಂಬೆಯು ತಮ್ಮ ಮಾತನ್ನು ಮೀರಲಾರಳು." ಎಂದು ಖಾನನು ಹೇಳಿದನು.

ಈ ಮಾತುಗಳನ್ನು ಕೇಳಿ ಖಂಡಿತವಾಗಿ ಉತ್ತರ ಕೊಡುವುದು ಸರಿಯಲ್ಲವೆಂದು ಭಾವಿಸಿ ರಾಮಯಮಂತ್ರಿಯು, "ಮುಕ್ತಾಂಬೆಯೊಡನೆ ಯೋಚಿಸಿ ಹೇಳುವೆನು" ಎಂದನು. ಮಲಮಲಖಾನನು ತನ್ನ ಕೆಲಸವು ಕೈಗೂಡುವುದೆಂದು ಸಂತೋಷಿಸುತ್ತಿದ್ದನು.

ರಾಮಯಮಂತ್ರಿಯು ಖಾನನ ಅಪ್ಪಣೆಯನ್ನು ಪಡೆದು ತನ್ನ ಮಂದಿರಕ್ಕೆ ಹಿಂದಿರುಗಿದನು. ದಾರಿಯಲ್ಲಿ ಬರುತ್ತಾ ಆ ವೃತ್ತಾಂತವನ್ನು ಮುಕ್ತಾಂಬೆಗೆ ತಿಳಿಸಬೇಕೆಂದು ಮೊದಲು ಯೋಚಿಸಿದನು. ಆದರೆ ಎಂತಹ ಪಾಪಕಾರ್ಯಗಳಿಗಾದರೂ ಹಿಂದೆಗೆಯದಿದ್ದ ರಾಮಯಮಂತ್ರಿಗೆ, ನಿರ್ಮಲವಾದ ಉದಯಗಿರಿಯ ರಾಜವಂಶಕ್ಕೆ ಮ್ಲೇಚ್ಛಸಂಬಂಧಕಳಂಕವನ್ನು ಉಂಟುಮಾಡಲು ಮನಸ್ಸು ಬರಲಿಲ್ಲ. ಇದೂ ಅಲ್ಲದೆ ಇನ್ನೂ ಕೆಲವು ಕಾಲ ಕೃಷ್ಣದೇವರಾಯರನ್ನೇ ಅನುಸರಿಸಿಕೊಂಡಿದ್ದರೆ ಅವರಿಗೇ ಕನಿಕರ ಹುಟ್ಟಿ ಮುಕ್ತಾಂಬೆಗೆ ಉದಯಗಿರಿರಾಜ್ಯವನ್ನು ಕೊಡುತ್ತಿದ್ದುದೂ, ನಿರಪಾಯಸ್ಥಳದಲ್ಲಿ ಸುರಕ್ಷಿತಳಾಗಿದ್ದ ಆಕೆಯನ್ನು ತನ್ನ ಮಾಯಾವಚನಗಳಿಂದ ಅನ್ಯರಾಜ್ಯಕ್ಕೆ ಎಳೆತಂದು ದುಷ್ಟರಮಧ್ಯದಲ್ಲಿ ಸಿಕ್ಕಿಸಿ ಅಂತಹ ಆಪಾಯಕ್ಕೆ ಒಳಪಡಿಸಿದ್ದುದೂ ರಾಮಯನಿಗೆ ಬಹಳವಾಗಿ ಪಶ್ಚಾತ್ತಾಪವನ್ನುಂಟುಮಾಡಿದ್ದುವು. ಆದುದರಿಂದ ಮನೆಯನ್ನು ಪ್ರವೇಶಿಸಿದಾಗ ರಾಮಯನ ಮುಖದಲ್ಲಿ ಗೆಲುವು ಇರಲಿಲ್ಲ. ಸೂಕ್ಷ್ಮಬುದ್ಧಿಯುಳ್ಳ ಮುಕ್ತಾಂಬೆಯು ರಾಮಯಮಂತ್ರಿಯನ್ನು ನೋಡಿದಕೂಡಲೇ, "ಓ ರಾಮಯಮಂತ್ರಿ! ಮಹಾಪಾಯಸಾಗರಗಳನ್ನೂ ಲೀಲಾಜಾಲವಾಗಿ ದಾಟುತ್ತಿದ್ದ ನಿನ್ನ ಬುದ್ಧಿಗೆ ಈಗ ಏನು ಅಡ್ಡಿ ಸಂಭವಿಸಿರುವುದು? ಶತ್ರುಗಳಿಂದ ನಮಗೆ ಅವಮಾನವು ಸಂಭವಿಸಿರುವುದೇ? ನಿನ್ನ ಯೋಚನೆಗೆ ಏನು ಕಾರಣ?

ನನಗೂ ತಿಳಿಸು" ಎಂದು ತಾನಾಗಿ ಸಂಭಾಷಣೆಯನ್ನು ಪ್ರಾರಂಭಿಸಿದಳು.

ರಾಮಯಾಮಾತ್ಯನು ಆ ಮಾತುಗಳನ್ನು ಕೇಳಿ ಸ್ವಲ್ಪ ಧೈರ್ಯವನ್ನು ತಂದುಕೊಂಡು, "ತಾಯಿ, ನಾನು ಮೊದಲಿನ ರಾಮಯಮಂತ್ರಿಯಲ್ಲ. ಸುಖವಾಗಿ ಇದ್ದ ನಿನ್ನನ್ನು ಆನೆಗೊಂದಿಯಿಂದ ಇಲ್ಲಿಗೆ ಕರೆತಂದು ಕಷ್ಟಕ್ಕೆ ಗುರಿಮಾಡಿರುವುದರಿಂದ ನನಗೆ ಬಹಳ ವ್ಯಸನವಾಗಿದೆ. ಅಪಾಯಕ್ಕೆ ಒಳಗಾಗಬಾರದೆಂದು ನಿನಗೆ ಪುರುಷವೇಷವನ್ನು ಹಾಕಿಸಿ ಮೊನ್ನೆಯ ಸಭೆಯಲ್ಲಿ ಎಲ್ಲರಿಗೂ ಭ್ರಾಂತಿಯನ್ನುಂಟುಮಾಡಿದೆ. ಆದರೆ ಗೋಲ್ಕೊಂಡದ ಸೇನಾನಾಯಕನಾದ ಮಲಮಲಖಾನನು ನಮ್ಮ ಗುಟ್ಟನ್ನು ಕಂಡುಹಿಡಿದುಬಿಟ್ಟಿರುವನು" ಎಂದು ಹೇಳಿ ಮುಂದಕ್ಕೆ ಮಾತನಾಡಲಾರದೆ ನಿಲ್ಲಿಸಿದನು. ಸ್ವಲ್ಪಹೊತ್ತು ಸುಮ್ಮನಿದ್ದು ಬಳಿಕ ಪುನಃ ಹೀಗೆ ಹೇಳಿದನು :—

"ಅಮ್ಮ ಮುಕ್ತಾಂಬೆ! ಆ ದುರ್ಜನನು ನುಡಿದ ಮಾತುಗಳನ್ನು ನಾನು ಹೇಳಲಾರೆ ಆ ತುಚ್ಛಾತ್ಮನು ಸಹಾಯಮಾಡದಿದ್ದರೆ ಅವನ ತಾತನಂತಹ ಮತ್ತೊಬ್ಬನನ್ನು ಸಂಪಾದಿಸುವೆನು ಆ ನೀಚನಿಗೆ ನಿನ್ನನ್ನು ಮದುವೆಯಾಗಬೇಕೆಂದು ಆಸೆಯಿರುವುದಂತೆ. ಸತ್ಕುಲಪ್ರಸೂತೆಯೂ ನಿರುಪಮಾನಪ್ರತಿಭಾಶಾಲಿನಿಯೂ ಅತ್ಯಂತಸೌಂದರ್ಯವತಿಯೂ ಆದ ನಿನ್ನನ್ನು ಆ ಕರಿಯ ಟೊಣೆಯನಿಗೆ ಕೊಟ್ಟು ಮದುವೆಮಾಡಬೇಕಂತೆ!"

"ಮಂತ್ರಿವರ್ಯ! ಈ ಸ್ವಲ್ಪಕಾರ್ಯಕ್ಕೆ ಇಷ್ಟುಏಕೆ ವ್ಯಸನಪಡುತ್ತಿರುವೆ? ಆತನಬಳಿಗೆಹೋಗಿ, "ನಿನ್ನಭಿಪ್ರಾಯದಂತೆಯೇ ಆಗಲಿ," ಎಂದು ಹೇಳಬಹುದು ನೀತಿವಿಶಾರದನಾದ ನೀನು ಧೈರ್ಯವನ್ನುತಾಳಿ ನನ್ನಸೂಚನೆಯನ್ನು ಅಂಗೀಕರಿಸು ನಿನಗೆನಾನು ರಾಜನೀತಿಯನ್ನು ಹೇಳಬೇಕಾಗಿದೆಯೇ?" ಎಂದು ದೃಢಮನಸ್ಸಿನಿಂದ ಹೇಳಿದಳು.

ರಾಮಯಮಂತ್ರಿಯು ಮೊದಲು ಬಹಳ ಸಂದೇಹಪಟ್ಟನು. ಆದರೆ ಮುಕ್ತಾಂಬೆಯು ಬಹಳ ಪ್ರಜ್ಞಾವಂತಳಾಗಿದ್ದುದರಿಂದ ಧೈರ್ಯತಾಳಿದು ಕೊಂಡು ಆಕೆಯು ತಿಳಿಸಿದ್ದಂತೆ ಖಾನನಿಗೆ, "ಖಾನ್ ಸಾಹೇಬರೇ ! ತಾವು ಹೇಳಿದಮಾತಿಗೆ ಮುಕ್ತಾಂಬೆಯು ಒಪ್ಪಿರುವಳು. ತಮ್ಮ ಸದ್ಗುಣಗಣ ಗಳನ್ನೂ ಅತಿಶಯ ಸೌಂದರ್ಯವನ್ನೂ ನಾನು ವರ್ಣಿಸಿದಾಗಿನಿಂದಲೂ ತಮ್ಮಲ್ಲಿ ಆಕೆಗೆ ಅನುರಾಗವು ಬಲವಾಗಿ ಬೇರೂರಿರುವುದು" ಎಂದು ಹೇಳಿದನು.

ಈ ಮಾತುಗಳನ್ನು ಖಾನನು ಕೇಳಿ ಅತ್ಯಂತಆನಂದವನ್ನುಹೊಂದಿ, "ಮಂತ್ರಿಶ್ರೇಷ್ಠರೇ ! ತಮ್ಮದಯೆ ಒಂದಿದ್ದರೆ ನಮ್ಮಂತಹವರ ಕಾರ್ಯವು ಕೈಗೂಡದಿರುವುದೇ ? ತಮಗೆ ಯುದ್ಧದಲ್ಲಿ ತಪ್ಪದೆ ಸಹಾಯಮಾಡುವೆನು. ಈ ಕಾರ್ಯವನ್ನು ತಾವು ಮಾಡಿಕೊಟ್ಟುದರಿಂದ ತಮಗೆ ಈಗ ಕೊಡುವ ಬಹುಮಾನವನ್ನು ಸ್ವೀಕರಿಸಬೇಕು" ಎಂದುಹೇಳಿ ಅದನ್ನು ಕೊಟ್ಟು ರಾಮಯನನ್ನು ಕಳುಹಿಸಿದನು. ಬಳಿಕ ತನಗೆ ಮುಕ್ತಾಂಬೆಯು ಸಮಾಚಾರ ವನ್ನು ತಿಳಿಸಿದ ಫಕೀರನಿಗೆ ಆ ಶುಭಸಮಾಚಾರವನ್ನು ತಿಳಿಸದೆ ಇರುವುದು ಯುಕ್ತವಲ್ಲವೆಂದು ಭಾವಿಸಿ ಆತನನ್ನು ಒಬ್ಬ ಸೇವಕನಮೂಲಕ ಕರೆಯಿಸಿ ಕೊಂಡನು ಆತನುಬಂದು ಉಚಿತಾಸನದಲ್ಲಿ ಕುಳಿತುಕೊಂಡಮೇಲೆ, "ಓ ಮಹಮ್ಮದೀಯ ಕುಲಪಾವನರೇ ! ತಮ್ಮ ಕೋರಿಕೆಯು ಸಫಲವಾದುದರಿಂದ ಈಗ ನನಗೆ ಬಹಳ ಸಂತೋಷವಾಯಿತು. ನಾನು ಹಿಂದೆಯೇ ಹೇಳಿದಂತೆ ತಾವುರಾಜ್ಯಾಧಿಪತಿಗಳಾಗುವಿರಿ. ಆದರೆ ತಮಗೆ ಒಂದುಮಾತು ಹೇಳಬೇಕಾ ಗಿದೆ. ಸದ್ಯದಲ್ಲಿ ತಾವು ಪ್ರಯಾಣವನ್ನು ನಿಲ್ಲಿಸಿ, ಆ ಯುವತಿಯನ್ನು ಸಂದರ್ಶಿಸಿ ಆಕೆಯೊಡನೆ, ಮಾತನಾಡಿ ಏನಾದರೂ ಬಹುಮಾನಗಳನ್ನು ಮಾಡಿ ಆಕೆಗೆ ಸಂತೋಷವನ್ನುಂಟುಮಾಡಿರಿ ಹಾಗಿಲ್ಲದಿದ್ದರೆ ಮುಕ್ತಾಂ ಬೆಯು ತಮ್ಮನ್ನು ಒರಟರೆಂದು ಭಾವಿಸಬಹುದು" ಎಂದು ಫಕೀರನು ಹೇಳಿದನು.

ಈ ಮಾತುಗಳನ್ನು ಕೇಳಿ ಖಾನನಿಗೆ ಬಹಳಸಂತೋಷವಾಯಿತು. ಫಕೀರನು ಹೇಳಿದಂತೆ ಮಾಡುವುದು ಆವಶ್ಯಕವೆಂದು ಭಾವಿಸಿ ಆತನನ್ನು ಮರ್ಯಾದೆಯಿಂದ ಕಳುಹಿಸಿಕೊಟ್ಟು ಮುಕ್ತಾಂಬೆಯೊಡನೆ ಹೇಗೆ ಮಾತನಾಡ ಬೇಕೆಂಬುದನ್ನು ತನ್ನಮನಸ್ಸಿನಲ್ಲಿಯೇ ಗುಣಿಸಿಕೊಳ್ಳುತ್ತಿದ್ದನು.

ಇಪ್ಪತ್ತೇಳನೆಯ ಪ್ರಕರಣ.

ಕುತೋರ್ಥಂ ಹೃದಯಂ ಕರ್ಣಃ | ಕಾಮಾಂಧಸ್ಯ ಮೃಗಾಧಿಪಾ ||
ಕದ್ದ್ವಾರ ಪರಿನಷ್ಟೋಽಪಿ ಯೋಯಂ ಗೌರ್ಯಾದಿಹಾಗತಃ ||

ರಾಜಕೀಯ ವ್ಯವಹಾರವು ಬಹಳವಾಗಿದ್ದುದರಿಂದಲೂ ಅನಂಗಸೇನೆಗೆ ಅಸ್ವಸ್ಥತೆಯಾಗಿ ಇದ್ದುದರಿಂದಲೂ ತೋಘಲಖಾನನು ಆಕೆಯ ಮನೆಗೆ ಕೆಲವುದಿನಗಳವರೆಗೆ ಹೋಗಲಿಲ್ಲ. ಒಂದುದಿನ ಆಕೆಯ ನೆನಪು ಉಂಟಾಗಿ ಆಕೆಯನ್ನು ನೋಡಬೇಕೆಂದು ತಾನೊಬ್ಬನೇ ಹೊರಟನು. ಅನಂಗಸೇನೆಯು ಇದ್ದ ಕೊಟಡಿಯ ಬಳಗೆ ಬಂದು ಅಲ್ಲಿದ್ದ ದ್ವಾರಪಾಲಕರನ್ನು ಕುರಿತು, 'ನೀವು ಜಾಗರೂಕರಾಗಿ ನೋಡಿಕೊಳ್ಳುತ್ತಿರುವಿರಷ್ಟೆ?' ಎಂದು ಎಚ್ಚರಿಸಿ ಕೊಟಡಿಯೊಳಕ್ಕೆ ಪ್ರವೇಶಿಸಿದನು. ಆಗ ಅನಂಗಸೇನೆಯು ನಿದ್ದೆ ಹೋಗುತ್ತಿದ್ದಳು. ಮಾಲತಿಯು ಸಮೀಪದಲ್ಲಿ ಕಾದುಕೊಂಡು ಕುಳಿತಿದ್ದಳು. ಆ ಖಾನನನ್ನು ನೋಡಿದಕೂಡಲೆ ಮಾಲತಿಯು ಮೇಲುಮುಸುಕನ್ನು ಹಾಕಿಕೊಂಡುನಿಂತಳು. ಖಾನನು ದ್ವಾರಬಂಧದ ಎರಡುಪಕ್ಕಗಳಲ್ಲೂ ಎರಡು ಕೈಗಳನ್ನು ಇಟ್ಟುಕೊಂಡು ಹೊರಗೆನಿಂತು ನೋಡುತ್ತಿ

ದ್ದನು. ಇದನ್ನುನೋಡಿ ಮಾಲತಿಯು "ದಯೆಮಾಡಿಸಿ, ಈಪೀಠವನ್ನು ಅಲಂಕರಿಸಿ" ಎಂದು ಅತ್ಯಾದರದಿಂದ ಹೇಳಿದಳು.

ಹಿಂದಿನಂತೆ ವಿರಸವಾಗಿ ಮಾತನಾಡದೆ ಹೀಗೆ ಆದರದಿಂದ ತನ್ನನ್ನು ಬರಮಾಡಿಕೊಂಡಕಾರಣ ತನ್ನಕಾರ್ಯವು ಕೈಗೂಡಿತೆಂದು ಭಾವಿಸಿ "ಓ ಯುವತಿಶ್ರೇಷ್ಠಳೇ! ನೀನೂ ಕುಳಿತುಕೊ; ನಿಂತಿದ್ದರೆ ಕೋಮಲೆಯಾದ ನಿನಗೆ ಆಯಾಸವಾಗುವುದು. ನೀವು ಕ್ಷೇಮವಾಗಿರುವಿರಾ? ನಮ್ಮ ದಾಸಿಗಳು ಆಹಾರವನ್ನು ಹೊತ್ತುಹೊತ್ತಿಗೆ ತಂದುಕೊಡುತ್ತಿರುವರಲ್ಲವೆ? ಇಲ್ಲದಿದ್ದರೆ ನನಗೆತಿಳಿಸು ಅವರನ್ನು ಈಗಲೇ ಶಿಕ್ಷಿಸುವೆನು. ನಿನ್ನಸ್ನೇಹಿತರು ನಿದ್ರಿಸುತ್ತಿರುವರೋ?" ಎಂದು ಸರಸವಾಗಿ ಸಂಭಾಷಿಸತೊಡಗಿದನು.

"ಖಾನವರ್ಯರೇ! ಆಹಾರವಿಷಯದಲ್ಲಿ ನಮಗೆ ಸ್ವಲ್ಪವೂ ಲೋಪವಿಲ್ಲ. ತಮ್ಮ ಪರಿಪೂರ್ಣದಯವು ನಮ್ಮಮೇಲಿರುವಾಗ ನಮಗೆ ಯಾವುದಕ್ಕೇನುಕಡಿಮೆ? ಆದರೆ ಈಕೆಗೆ ಬಹಳದಿವಸಗಳಿಂದ ರೋಗವು ಬಾಧಿಸುತ್ತಿರುವುದು. ಅದು ಚೆನ್ನಾಗಿ ವಾಸಿಯಾಗುವಂತೆಯೂ, ಮರುಕೊಳಿಸದಂತೆಯೂ ಈಕೆಗೆ ಔಷಧವನ್ನು ತರಬೇಕೆಂದು ಪ್ರಯತ್ನಿಸಿದರೆ ತಮ್ಮಭಟರು ನನ್ನನ್ನು ಹೊರಕ್ಕೇಬಿಡುವುದಿಲ್ಲ. ಈಗಲಾದರೂ ಸರಿಯಾದ ಔಷಧವನ್ನು ಕೊಡಿಸದಿದ್ದರೆ ಈಕೆಯು ಉಳಿದುಕೊಳ್ಳುವುದುಕಷ್ಟ. ನಮ್ಮ ಈ ದುರವಸ್ಥೆಯನ್ನು ತಮಗೆ ತಿಳಿಸಬೇಕೆಂದು ಎಷ್ಟೆಷ್ಟು ಕೇಳಿಕೊಂಡರೂ ಅವರು ನಮ್ಮಪ್ರಾರ್ಥನೆಯನ್ನು ನಿರಾಕರಿಸಿದರು ಚಕ್ರವರ್ತಿಗೆ ಪ್ರಿಯಳಾಗಿದ್ದ ಈಕೆಯು ಔಷಧವಿಲ್ಲದೆ ಸಾಯಬೇಕಾಗಿ ಬಂದಿರುವುದಲ್ಲಾ! ಎಂದು ವ್ಯಸನಪಡುತ್ತಿರುವೆನು. ಈಗ ತಾವೇಬಂದುದರಿಂದ ಈ ಔಷಧವನ್ನು ತರುವುದಕ್ಕೆ ಹೊರಕ್ಕೆಹೋಗಿ ಬರಲು ನನಗೆ ಅಪ್ಪಣೆಯಾಗಬೇಕು" ಎಂದು ಮಾಲತಿಯು ಕಣ್ಣೀರು ಸುರಿಸಿದಳು. ಪ್ರಿಯಬಾಂಧವರು ಸತ್ತರೂ ಶೋಕಿಸದ, ಯುದ್ಧರಂಗದಲ್ಲಿ ವೈರಿವೀರರಿಗೆ ಸಿಕ್ಕಿ ಪ್ರಾಣಬಿಡುವುದಕ್ಕೆ ಸಿದ್ಧವಾಗಿ ಇದ್ದ ಕಠಿನಹೃದಯನಾದ

ಖಾನನಿಗೆ ಮಾಲತಿಯ ಗೋಳಾಟವನ್ನು ಕೇಳಿ ಮನಸ್ಸು ಕರಗಿದಂತಾಯಿತು. ಆಗ ಖಾನನು, "ನಾನು ನಿಮ್ಮ ಯೋಗಕ್ಷೇಮವನ್ನು ಇದುವರೆಗೂ ವಿಚಾರಿಸಿಕೊಳ್ಳದೆ ಇದ್ದುದರಿಂದ ಕ್ಷಮಿಸಬೇಕು. ಕಾರ್ಯಭಾರವು ಬಹಳವಾಗಿದ್ದುದರಿಂದ ಇತ್ತ ಕಡೆ ಬರಲು ಬಿಡುವೇ ಸಿಕ್ಕಲಿಲ್ಲ. ಇದಕ್ಕಾಗಿ ಬಹಳ ವ್ಯಸನಪಡುತ್ತಿದ್ದೇನೆ. ಕಳೆದುಹೋದ ಮಾತಿಗಾಗಿ ವ್ಯಸನಪಟ್ಟು ಏನು ಫಲ? ಈಗ ನಿನ್ನ ಸ್ನೇಹಿತರಿಗೆ ಹೇಗಿದೆ? ತಿಳಿಸು. ಆಕೆಗೆ ಔಷಧವನ್ನು ಕೊಡುವುದಕ್ಕೆ ವೈದ್ಯಶ್ರೇಷ್ಠನನ್ನು ಕರೆಯಿಸುವೆನು. ವ್ಯಸನಪಡಬೇಡ." ಎಂದು ಸಮಾಧಾನ ಪಡಿಸಿದನು.

"ಖಾನ್ ಸಾಹೇಬರೇ! ವೈದ್ಯರು ಇಲ್ಲಿಗೆ ಬರಬೇಕಾದುದಿಲ್ಲ. ನಮ್ಮ ಮಿತ್ರಳ ದಿವ್ಯಶರೀರವನ್ನು ನೋಡುವುದಕ್ಕೆ ಪ್ರತಿಯೊಬ್ಬನೂ ಅರ್ಹಸಲ್ಲ. ತಾವು ಅಪ್ಪಣೆಕೊಡುವುದಾದರೆ ನಾನೇ ವೈದ್ಯನ ಬಳಿಗೆ ಹೋಗಿ ಔಷಧವನ್ನು ತಂದುಕೊಡುವೆನು." ಎಂದು ಬಹಳ ವಿನಯದಿಂದ ಮಾಲತಿಯು ಕೇಳಿಕೊಂಡಳು.

ಖಾನನಿಗೆ ಮನಸ್ಸು ಕರಗಿ ಹೋಗಿದ್ದುದರಿಂದ ಅವನು "ಹಾಗಾದರೆ ನಾನು ಒಂದು ಕಾಗದವನ್ನು ಬರೆದುಕೊಡುವೆನು. ಅದನ್ನು ನನ್ನ ವೈದ್ಯನಿಗೆ ಕೊಡು. ನಿನ್ನನ್ನು ದ್ವಾರಪಾಲಕರು ತಡೆಯದಂತೆ ಏರ್ಪಾಡು ಮಾಡುವೆನು." ಎಂದು ಹೇಳಿದನು.

ಆತನು ಹೀಗೆ ಮಾತನಾಡುತ್ತಿದ್ದಾಗಲೇ ದುಃಖಿಸುತ್ತಾ ಮಾಲತಿಯು ಅನಂಗಸೇನೆಯ ಬಳಿಗೆ ಹೋಗಿ ಆಕೆಯ ಕೈನಾಡಿಯನ್ನು ಪರಿಶೀಲಿಸಿ ಮತ್ತೂ ಗೋಳಾಡುತ್ತಾ ಖಾನನನ್ನು ನೋಡಿ, "ಖಾನ್ ಶ್ರೇಷ್ಠರೇ! ರೋಗವು ಬಲಿಯುತ್ತಿದೆ. ನಮ್ಮ ಸ್ನೇಹಿತಳು ಆರಿಹೋಗುತ್ತಿರುವ ದೀಪದಂತಿರುವಳು. ಇನ್ನು ಒಂದೆರಡು ದಿನಗಳಿಗಿಂತ ಹೆಚ್ಚಾಗಿ ಬದುಕಲಾರಳು. ತಾವು ಹೇಳಿದ ವೈದ್ಯರು ಅನುಭವಶಾಲಿಗಳಷ್ಟೆ? ಆದರೂ ತಮ್ಮ ದ್ವಾರಪಾಲಕರ ಕಾಟವು

ಬಹಳ ಬಲವಾಗಿದೆ. ಎರಡು ಗಂಟೆಗೆ ಒಂದುಸಲ ಅವರು ಬದಲಾಯಿಸಿ ಕೊಳ್ಳುತ್ತಿರುವುದರಿಂದ ತಾವು ಒಬ್ಬರಿಬ್ಬರಿಗೆ ಆಜ್ಞೆಕೊಟ್ಟರೆ ಮಿಕ್ಕವರು ಅದೇ ಆಜ್ಞೆಯಂತೆ ನಡೆದುಕೊಳ್ಳುವರೋ ಇಲ್ಲವೋ? ಇಂತಹ ಅಸ್ಥಿರತೆಯೇನಾದರೂ ಉಂಟಾದರೆ ಕೆಲಸವೇ ಕೆಡುವುದು. ಆದುದರಿಂದ ತಮ್ಮ ಹೆಸರಿನ ಮುದ್ರೆಯೊಂದನ್ನು ನನಗೆ ದಯಪಾಲಿಸುವುದಾದರೆ ಅದನ್ನು ಅವರಿಗೆ ತೋರಿಸಿ ನಿರಾತಂಕವಾಗಿ ಹೋಗಿ ಔಷಧವನ್ನು ತಂದುಕೊಡಲು ಸುಲಭವಾಗುವುದು. ತಮಗೇನೋ ಅನಂಗಸೇನೆಯಂತಹವರು ನೂರಾರು ಮಂದಿ ಸಿಕ್ಕುವರು. ಆದುದರಿಂದ ತಮಗೆ ಅಷ್ಟು ವಿಚಾರವಿರಲಾರದು. ನನಗಾದರೋ ಬಹಳ ವ್ಯಸನವಾಗಿದೆ" ಎಂದು ಗೋಳಾಡುತ್ತಾ ಹೇಳಿದಳು.

ಖಾನನು ಈ ಮಾತುಗಳನ್ನು ಕೇಳಿ ಮರುಳಾಗಿ, "ಸುಂದರಿ! ಏನುಮಾತನಾಡಿದೆ? ನಿನಗೂ ಅನಂಗಸೇನೆಗೂ ಇರುವ ಪ್ರೀತಿಗಿಂತಲೂ ನನ್ನ ಪ್ರೀತಿಯು ಎಷ್ಟೋ ಹೆಚ್ಚಾಗಿದೆ. ಆದುದರಿಂದಲೇ ಈ ಮುದ್ರೆಯುಂಗುರವನ್ನು ನಿನಗೆ ಕೊಡುತ್ತೇನೆ. ಇದನ್ನು ತೋರಿಸಿದರೆ ಯಾವ ಭಟನೂ ನಿನ್ನನ್ನು ತಡೆಯಲಾರನು. ನಿನ್ನ ಸ್ನೇಹಿತರಿಗೆ ಗುಣವಾದ ಕೂಡಲೇ ಇದನ್ನು ನನಗೆ ಕೊಡು. ನೀನು ಕಷ್ಟಪಟ್ಟು ಆಕೆಯನ್ನು ಬದುಕಿಸಿ ಆಕೆಗೆ ನನ್ನಲ್ಲಿ ಅನುರಾಗವನ್ನುಂಟುಮಾಡಿದರೆ ಅತ್ಯಂತ ಬಹುಮಾನವನ್ನು ಮಾಡುವೆನು." ಎಂದು ಹೇಳಿ ರಕ್ಷಕಭಟರ ಯಜಮಾನನನ್ನು ಕರೆಯಿಸಿ, ಮುದ್ರೆಯುಂಗುರವನ್ನು ತೋರಿಸಿದ ಕೂಡಲೆ ಮಾಲತಿಯನ್ನು ಮಾತ್ರ ಹೊರಕ್ಕೆ ಬಿಡಬಹುದೆಂದು ಆಜ್ಞೆಮಾಡಿ ತನ್ನ ಸೌಧಕ್ಕೆ ಹೊರಟುಹೋದನು.

ಬಳಿಕ ಮಾಲತಿಯು ಅತ್ಯಂತ ಸಂತೋಷಭರಿತಳಾಗಿ "ಅಮ್ಮಾ! ಅನಂಗಸೇನೆ! ಖಾನನು ತೊಲಗಿಹೋದನು. ನೀನು ಈಗ ಏಳಬಹುದು." ಎಂದು ಹೇಳಿದಳು. ಇದನ್ನು ಕೇಳಿ ಸಂತೋಷಿಸುತ್ತಾ ಅನಂಗಸೇನೆಯು

ತನ್ನ ಮುಸುಕನ್ನು ತೆಗೆದುಹಾಕಿ ಎದ್ದು ಕುಳಿತುಕೊಂಡು " ಎಲೇ ಮಾಲತೀ ! ಏನು ಚಮತ್ಕಾರಮಾಡಿದೆ ? ಬೆಪ್ಪನೂ ಪಾಷಾಣಹೃದಯನೂ ಆದ ಖಾನನನ್ನೂ ಹಳ್ಳಕ್ಕೆ ಕೆಡವಿದೆ. ಉಪಾಯವೆಂದರೆ ನಿನ್ನದೇ ಸರಿ ! ಇಷ್ಟು ಸಾಹಸಿಯಾದ ನಿನ್ನ ಸಹಾಯವನ್ನು ನನಗೆ ಭಗವಂತನು ಒದಗಿಸಿಕೊಟ್ಟಿರುವುದರಿಂದ ಎಷ್ಟು ಕೃತಜ್ಞತಳಾಗಿದ್ದರೂ ಕಡಿಮೆಯೇ. ಈ ಉಂಗುರದ ಸಹಾಯದಿಂದ ರೋಗವು ಬಿಟ್ಟುಹೋಗುವುದು ಹಾಗಿರಲಿ. ನಾವೇ ಬಿಟ್ಟುಹೋಗುವುದಕ್ಕೆ ಇದನ್ನು ಉಪಯೋಗಿಸಿಕೊಳ್ಳೋಣ. ಇನ್ನು ನೀನು ದುರಾತ್ಮನಾದ ಯಾವ ಭಟನ ತಂಟೆಯೂ ಇಲ್ಲದೆ ಬೇಕಾದಾಗ ಪುರಕ್ಕೆ ಹೋಗಿ ನಿನ್ನ ಕೆಲಸವನ್ನು ಮಾಡಿಕೊಳ್ಳಬಹುದು. ಈಗೇನು ಖಾನ್‌ಸಾಹೇಬರು ಅಪ್ಪಣೆಕೊಡಿಸಿದ ವೈದ್ಯಶ್ರೇಷ್ಠರ ಬಳಿಗೆ ಹೋಗುವೆಯುಷ್ಟೆ ? " ಎಂದು ಪರಿಹಾಸವಾಗಿ ಹೇಳಿದಳು.

ಅನಂಗಸೇನೆಯು ಈ ಮಾತುಗಳನ್ನು ಕೇಳಿ ನಗುತ್ತಾ ಮಾಲತಿಯು " ಅದಕ್ಕೇನು ? ಆದರೂ ಆಗಬಹುದು. ಆ ದಿನ ನೀನು ಅಪಾಯದಲ್ಲಿದ್ದಾಗ ತಕ್ಕ ಔಷಧವನ್ನು ಕೊಟ್ಟ ವೈದ್ಯನಿಗೆ ಏನು ಬಹುಮಾನವನ್ನು ಕೊಟ್ಟರೂ ಸಾಲದು. ಆತನಿಗೆ ಯಾವ ಬಹುಮಾನವನ್ನೂ ಇದುವರೆಗೂ ಕೊಡದೆ ಇರುವುದರಿಂದ ಆತನನ್ನು ನೋಡುವುದಕ್ಕೂ ನನಗೆ ಮುಖವಿಲ್ಲ. ಆತನಿಗೆ ಏನು ಬಹುಮಾನವನ್ನು ಕೊಟ್ಟು ಕಳುಹಿಸುವೆ. ಹೇಳು " ಎಂದು ಪ್ರತ್ಯುತ್ತರಕೊಟ್ಟಳು.

" ಸ್ನೇಹಿತಳೇ ! ನೀನು ಹೇಳಿದ ಮಾತು ಸತ್ಯ. ಆತನಿಗೆ ಯಾವ ಪದಾರ್ಥವನ್ನು ಕೊಟ್ಟರೂ ಋಣ ತೀರುವುದಿಲ್ಲ. ನೀನು ನನ್ನವಳೇ ಆದುದರಿಂದ ನಿನ್ನನ್ನೇ ಆ ವೈದ್ಯನಿಗೆ ಬಹುಮಾನವನ್ನಾಗಿ ಕಳುಹಿಸಿಕೊಡುವೆನು. ಇದಕ್ಕೆ ಒಪ್ಪುವೆಯುಷ್ಟೆ ? " ಎಂದು ಅನಂಗಸೇನೆಯು ನಗುತ್ತಾ ಹೇಳಿದಳು.

"ಅದಕ್ಕೇನು? ಖಾನ್‌ಸಾಹೇಬರು ಔಷಧವನ್ನು ತರುವುದಕ್ಕಾಗಿ ಈ ಉಂಗುರವನ್ನು ಕೊಟ್ಟಿರುವರು. ಈಗಲೇ ಹೋಗಿ ಔಷಧವನ್ನು ತಂದುಕೊಡುವೆನು. ರೋಗವನ್ನು ವಾಸಿಮಾಡಿಕೊಂಡು ಸಿದ್ಧವಾಗಿರು. ನಾನು ನಿನ್ನ ಕೈಯಿಂದ ಆತನೊಡನೆ ಮಾತನಾಡಿಸಿದರೆ ನನಗೆ ಬಹಳ ದೊಡ್ಡ ಬಹುಮಾನವು ಸಿಕ್ಕುವುದು. ನೀನು ಆತನೊಡನೆ ಮಾತಾಡಿ ಆ ಬಹುಮಾನವನ್ನು ಕೊಡಿಸಿಕೊಡಬೇಕು. ಮರೆತುಬಿಟ್ಟರೆ ಆಗದು." ಎಂದು ಮಾಲತಿಯು ಹೇಳಿದಳು.

"ಮಿತ್ರಳೇ! ನಿನಗೆ ಬರುತ್ತಿರುವ ಬಹುಮಾನವನ್ನು ನಿಷ್ಕಾರಣವಾಗಿ ನಾನೇಕೆತಪ್ಪಿಸಲಿ? ಆತನಲ್ಲಿ ಅನುರಾಗವುಂಟಾಗುವಂತೆ ನನಗೆ ನೀನು ಮಾಡಿದರೆ, ಈ ಉಪಕಾರಕ್ಕಾಗಿ ನಿನಗೆ ಬಹುಮಾನವನ್ನು ಕೊಡುವನು. ಆ ಮಹಾನುಭಾವನಲ್ಲಿ ನನಗೆ ಅನುರಾಗವನ್ನುಂಟುಮಾಡುವುದರಿಂದ ನಾನೂ ನಿನಗೆ ಒಂದು ಬಹುಮಾನವನ್ನು ಸಮರ್ಪಿಸಿ ಕೃತಾರ್ಥಳಾದೆನೆಂದು ಹೇಳಿಕೊಳ್ಳಬೇಡವೇ? ನೀನು ಬರುವಾಗ ಒಂದು ಹರಿತವಾದ ಖಡ್ಗವನ್ನು ತೆಗೆದುಕೊಂಡು ಬಾ. ನನಗಾಗಿ ಇಷ್ಟು ಕಷ್ಟಪಟ್ಟಿರುವ ನಿನಗೆ ಖಾನನ ಪ್ರಾಣವನ್ನು ಬಹುಮಾನಮಾಡುವೆನು. ಆಗ ಖಾನನ ಬಹುಮಾನವು ಶ್ರೇಷ್ಠವಾದುದೋ ನನ್ನದು ಶ್ರೇಷ್ಠವಾದುದೋ ತಿಳಿಯುವುದು." ಎಂದು ಕೋಪಪರಿಹಾಸಗಳಿಂದ ಅನಂಗಸೇನೆಯು ನುಡಿದಳು.

"ಅಮ್ಮಾ! ನಿನಗೆ ಇಷ್ಟು ಕೋಪವೇಕೆ? ನಾನಿರುವಾಗ ನಿನಗೆ ಇಷ್ಟು ಶ್ರಮವನ್ನು ಕೊಡುವೆನೇ?" ಎಂದು ಮಾಲತಿಯು ಹೇಳಿ ಸಮಾಧಾನಪಡಿಸಿದಳು.

ಬಳಿಕ ರಾತ್ರಿ ಒಂದು ಜಾವ ಕಳೆದಮೇಲೆ ಅನಂಗಸೇನೆಯು ಅನುಮತಿಯನ್ನು ಪಡೆದು, ಉಂಗುರದ ಸಹಾಯದಿಂದ ದುರ್ಗದ ಹೊರಕ್ಕೆ ಬಂದಳು. ತನಗಿದ್ದ ನಿರ್ಬಂಧವು ತಪ್ಪಿದುದಕ್ಕಾಗಿ ಸಂತೋಷವಾಗಿದ್ದರೂ

ಎಲ್ಲೆಲ್ಲಿಯೂ ಕತ್ತಲೆಯು ಕವಿದುಕೊಂಡಿದ್ದುದರಿಂದ ಆಕೆಗೆ ಬಹಳ ಭಯವಾಯಿತು. ಆಕೆಯು ಹೋಗುತ್ತಿದ್ದ ಮಾರ್ಗದಲ್ಲಿ ಗಿಡಗಳು ದಟ್ಟವಾಗಿ ಬೆಳೆದುಕೊಂಡಿದ್ದುದರಿಂದ ಆಕೆಯ ಭಯವು ಮತ್ತೂ ಹೆಚ್ಚಿತು. ಆದರೂ ಧೈರ್ಯ ತಂದುಕೊಂಡು ಮುಂದುಮುಂದಕ್ಕೆ ಹೆಜ್ಜೆಯಿಡುತ್ತಿದ್ದಳು. ಆಗ ಗಿಡಗಳ ಮಧ್ಯದಿಂದ ಒಬ್ಬ ಪುರುಷನು ಬಂದು ಮಾಲತಿಯ ಭುಜದಮೇಲೆ ಕೈಯಿಟ್ಟನು. ಈ ಕಾಲದಲ್ಲಿ ಮಾಲತಿಗೆ ಆದ ಭಯವನ್ನು ವರ್ಣಿಸುವುದು ಸಾಧ್ಯವಲ್ಲ. ಆಗ ಆ ಪುರುಷನು "ಸುಂದರಿ! ಭಯಪಡಬೇಡ: ನಾನು, ನಿನ್ನ ಪ್ರಿಯನಾದ ಶಂಕರರೆಡ್ಡಿ" ಎಂದನು. ಆ ಧ್ವನಿಯನ್ನು ಗುರುತುಕಂಡು ಹಿಡಿದಕೂಡಲೇ ಮಾಲತಿಗೆ ಭಯವು ಹೋಗಿ ಬಹಳ ಸಂತೋಷವುಂಟಾಯಿತು. ಆಗ ಶಂಕರರೆಡ್ಡಿಯು ಆಕೆಯನ್ನು ಒಂದು ದೇವಾಲಯಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕುಳಿತುಕೊಂಡನು. ಆಗ ಮಾಲತಿಯು ತನ್ನ ಹೃದಯವಲ್ಲಭನ ಹಸ್ತವನ್ನು ತನ್ನ ಕೈಯಿಂದ ಹಿಡಿದುಕೊಂಡು, "ಪ್ರಿಯರೇ! ನಮ್ಮ ಬಂಧುಗಳಲ್ಲಿ ಒಬ್ಬರೊಡನೆಯಾದರೂ ಹೇಳದೆ ನಾನು ಬಂದು ಬಿಟ್ಟದು ಅಪರಾಧವೆಂದು ಈಗ ತಿಳಿಯಿತು. ನನ್ನ ತಪ್ಪನ್ನು ಕ್ಷಮಿಸಬೇಕು. ನನ್ನನ್ನು ತನ್ನ ಪ್ರಾಣವೆಂದು ಎಣಿಸಿರುವ ಅನಂಗಸೇನೆಯು ದುಃಖವನ್ನು ನೋಡಿ ಸಹಿಸಲಾರದೆ ಹಾಗೆ ಮಾಡಿಬಿಟ್ಟೆನು. ಆಕೆಯ ಅಪಾರ ದುಃಖವನ್ನು ನೋಡಿ ನನ್ನ ಯುಕ್ತಾಯುಕ್ತಜ್ಞಾನವು ನಶಿಸಿಹೋಯಿತು. ಏನುಮಾಡಲಿ? ಅಂತಹ ಆಪತ್ತಿನಲ್ಲಿ ಆಕೆಗೆ ಸಹಾಯುಮಾಡದಿದ್ದರೆ ದುಃಖಾತಿಶಯದಿಂದ ಆಕೆಯು ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಳು. ರಾಯರು ಆಕೆಯ ಮೇಲೆ ದೋಷವನ್ನು ಆರೋಪಣಮಾಡಿದ ರಾತ್ರಿ ಅನಂಗಸೇನೆಯ ಪ್ರಾಣವನ್ನು ಉಳಿಸುವುದಕ್ಕಾಗಿ ನಾನು ಪಟ್ಟ ಕಷ್ಟವು ದೇವರಿಗೇ ಗೊತ್ತು. ಆ ರಾತ್ರಿ ನಾನು ಒಂದು ಕ್ಷಣಕಾಲ ಆಕೆಯನ್ನು ಬಿಟ್ಟಿದ್ದರೂ ಪ್ರಾಣವನ್ನು

ತೋರೆದುಕೊಳ್ಳುತ್ತಿದ್ದಳು. ಆಕೆಗೆ ಸಮಾಧಾನಮಾಡುವುದಕ್ಕಾಗಿ ಆಕೆಯು ತೌರುಮನೆಗೆ ಹೋಗುವುದು ಒಳ್ಳೆಯದೆಂದು ಬೋಧಿಸಿ, ಆತ್ಮಹತ್ಯಮಾಡಿಕೊಳ್ಳದಂತೆ ತಪ್ಪಿಸಿದೆನು. ಆ ರಾತ್ರಿಯೇ ಅರಮನೆಯನ್ನು ಬಿಟ್ಟು ಆಕೆಯನ್ನು ಕರೆದುಕೊಂಡು ಬಂದೆನು. ಪೂಜ್ಯರಾದ ಅತ್ತೆಮಾವಂದಿರಿಗೂ ತಿಳಿಸುವುದಕ್ಕೆ ನನಗೆ ಅವಕಾಶ ಸಿಕ್ಕಲಿಲ್ಲ. ಆದುದರಿಂದ ನನ್ನ ಈ ಮಹಾಪರಾಧವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುವೆನು. ನಾನು ನಿರ್ದೋಷಿಯೆಂದು ದೇವರ ಇದಿರಿಗೆ ನನ್ನ ಆತ್ಮಸಾಕ್ಷಿಯಾಗಿ ಪ್ರಮಾಣಮಾಡುವೆನು. ಆದುದರಿಂದ ನನ್ನನ್ನು ಅನುಗ್ರಹಿಸಿ ಪೂರ್ವದಂತೆ ದಯೆಯನ್ನು ತೋರಿಸಿ" ಎಂದು ಅಳುತ್ತಾ ಗದ್ಗದ ಸ್ವರದಿಂದ ಕೇಳಿಕೊಂಡಳು.

ಶಂಕರರೆಡ್ಡಿಯು ವಿಜಯನಗರದ ನಿವಾಸಿ ಈತನು ರಾಯರ ಊಳಿಗದಲ್ಲಿದ್ದನು. ಹಿಂದೆ ವಿಜಯನಗರದಲ್ಲಿ ನಡೆದ ಮಲ್ಲಯುದ್ಧದಲ್ಲಿ ರುದ್ರದೇವನನ್ನು ಇದಿರಿಸಿದವನು ಈತನೇ ಎಂದು ವಾಚಕಮಹಾಶಯರು ತಿಳಿದಿರುವಿರಲ್ಲವೇ ? ಅದು ನಡೆದ ದಿನವೇ ಸಾರ್ವಭೌಮರ ಆಜ್ಞೆಯಂತೆ ಮೈಸೂರು ರಾಜರ ಪ್ರತಿನಿಧಿಯ ಬಳಿಗೆ ಒಂದು ಕಾರ್ಯಕ್ಕಾಗಿ ಹೋಗಬೇಕಾಯಿತು. ಆ ಕೆಲಸವನ್ನು ಆಗುಮಾಡಿಸಿಕೊಂಡು ವಿಜಯನಗರಕ್ಕೆ ಬಂದನು. ತನ್ನ ಮನೆಗೆ ಹೋಗಿ ನೋಡಲು ಆತನ ತಾಯಿಯು ಗೋಳಾಡುತ್ತಿದ್ದಳು. ಕಾರಣವನ್ನು ವಿಚಾರಿಸಲು ಸೊಸೆಯಾದ ಮಾಲತಿಯು ತಪ್ಪಿಸಿಕೊಂಡು ಹೋಗಿರುವಳೆಂದು ಹೇಳಿದುದು ಮಾತ್ರವಲ್ಲದೆ ಅತ್ತೆಗಳಿಗೆ ಸ್ವಾಭಾವಿಕವಾದ ದೋಷೈಕದೃಷ್ಟಿಯಿಂದ, ದುಶ್ಚರಿತ್ರಳಾದ ಅಸಂಗ್ಯನೆಯ ಸಹವಾಸದಲ್ಲಿದ್ದು ಮಾಲತಿಯೂ ದುರಾತ್ಮಳಾಗಿರುವಳೆಂದು ಯೋಗ್ಯತಾಪತ್ರವನ್ನು ಕೊಟ್ಟಳು. ಶಂಕರರೆಡ್ಡಿಯು ವಿವೇಕಶಾಲಿಯಾದುದರಿಂದ ಆಗಲೇ ಯಾವಮಾತನ್ನೂ ಆಡದೆ ಮನಸ್ಸಿನಲ್ಲಿಯೇ ಕೊರಗಿಕೊಳ್ಳುತ್ತಿದ್ದನು. ಇಷ್ಟರಲ್ಲಿ ತಿಮ್ಮರಸನ ಅಪ್ಪಣೆಯಂತೆ ರಾಮರಾಜನ ಸಹಾಯ

ಕ್ಕಾಗಿ ರಾಯಚೂರಿಗೆ ಬರುವ ಸಂಭವವುಂಟಾಯಿತು. ಇಲ್ಲಿಗೆ ಬಂದ ಬಳಿಕ ಮಾಲತಿಗೆ ಒಂದು ಕಠಿನಪತ್ರವನ್ನು ಬರೆದು ಪಂಡಿತನ ವೇಷದಿಂದ ಆಕೆಗೆ ತಲುಪಿಸಿದನು. ಮಾಲತಿಯು ಅದನ್ನು ನೋಡಿಕೊಂಡು ಬಹಳವಾಗಿ ವ್ಯಸನಪಟ್ಟು, ಅತ್ಯಂತಸವಿನಯದಿಂದ ತನ್ನ ನಿರ್ದೋಷತ್ವವನ್ನು ಸ್ಥಾಪಿಸಿಕೊಳ್ಳುವಂತೆ ಪ್ರತ್ಯುತ್ತರವನ್ನು ಬರೆದುಕೊಟ್ಟಳು. ಶಂಕರರೆಡ್ಡಿಯು ತನ್ನ ಮನಸ್ಸನ್ನು ಮಾತ್ರ ನಂಬಿಕೊಂಡಿದ್ದರೆ ಸಾಲದೆಂದು ಭಾವಿಸಿ, ಆ ಕಾಗದವನ್ನು ರಾಮರಾಜನಿಗೂ ತೋರಿಸಿದನು. ಆತನು ಚೆನ್ನಾಗಿ ಆಲೋಚಿಸಿ ಮಾಲತಿಯು ಬಹಳ ಬುದ್ಧಿವಂತಳೆಂದೂ, ಧೈರ್ಯಸಾಹಸಶಾಲಿನಿಯೆಂದೂ, ಸದ್ಗುಣೋಪೇತಳೆಂದೂ, ಸಚ್ಚರಿತ್ರಳೆಂದೂ ಚೆನ್ನಾಗಿ ಬೋಧಿಸಿದನು. ಶಂಕರರೆಡ್ಡಿಯು ಒಂದೆರಡು ದಿನ ಚೆನ್ನಾಗಿ ಆಲೋಚಿಸಿ, ಕಡೆಗೆ ಮಾಲತಿಯು ದುಶ್ಚರಿತ್ರಳಲ್ಲವೆಂದು ನಿರ್ಧರಿಸಿದನು. ಆ ಬಳಿಕ ಅವನ ಮನಸ್ಸಿನಲ್ಲಿದ್ದ ಕಿಸುರೆಲ್ಲವೂ ತಗ್ಗುತ್ತ ಬಂತು. ಹೀಗಿರುವಲ್ಲಿ ಆಕೆಯು ಈಗ ದೇವರ ಸನ್ನಿಧಿಯಲ್ಲಿ, ಅಷ್ಟು ಸ್ವಾಭಾವಿಕವಾಗಿ ಪ್ರಮಾಣ ಮಾಡಿದುದನ್ನು ಕಂಡ ಮೇಲೆ ಶಂಕರರೆಡ್ಡಿಯ ಮನಸ್ಸು ಪ್ರಸನ್ನವಾಯಿತು. ಆಗ ಆತನು ತನ್ನ ಕಾಲಿಗೆ ಬಿದ್ದಿದ್ದ ಮಾಲತಿಯನ್ನು ಎಬ್ಬಿಸಿ, “ನಿನ್ನ ಪತಿಭಕ್ತಿಗೂ ಸ್ವಾಮಿಭಕ್ತಿಗೂ ಮೆಚ್ಚಿದೆ. ವಿಜಯನಗರದಲ್ಲಿ ಕೆಲವರು ಹೇಳುವ ಮಾತುಗಳಿಂದ ಮನಸ್ಸು ಕಲಕಿ ಹೋಗಿ ನಿನಗೆ ಅಷ್ಟು ಕಠಿನವಾದ ಕಾಗದವನ್ನು ಬರೆದೆನು. ಅದಕ್ಕಾಗಿ ಕೋಪಮಾಡಿಕೊಳ್ಳಬೇಡ. ನೀನು ಸದ್ಗುಣೆಯೆಂದೂ ಸಚ್ಚರಿತ್ರಳೆಂದೂ ರಾಮರಾಜಾದಿಗಳು ದೃಢಪಡಿಸಿಕೊಟ್ಟುದರಿಂದ, ನನ್ನ ಮನಸ್ಸಿನ ಕಲ್ಮಷವೆಲ್ಲವೂ ಹೋಯಿತು.” ಎಂದು ಪರಸ್ಪರಾನುರಾಗದಿಂದ ಕುಳಿತುಕೊಂಡು ಮಾತನಾಡುತ್ತಿದ್ದ ಸಮಯದಲ್ಲಿ, ಅಲ್ಲಿಗೆ ರಾಮರಾಜನು ಬಂದನು. ಶಂಕರರೆಡ್ಡಿಯು ಆತನನ್ನು ಕಂಡು “ಮಿತ್ರನೇ! ಮಾಲತಿಯು ಬಂದಳು. ನಾವು ಯೋಚಿಸಿಕೊಂಡಂತೆಯೇ ಕೆಲಸವನ್ನು ಮಾಡಿಕೊಂಡು

ಬಂದಿರುವಳು" ಎಂದು ಹೇಳಿದನು. ರಾಜರಾಜನು ಈ ಮಾತನ್ನು ಕೇಳಿ ಬಹಳ ಸಂತೋಷಿಸಿ, "ಈಗ ನಮ್ಮ ಕೆಲಸವು ಸುಲಭವಾಯಿತು. ನನಗೆ ಈದಿನ ಬಹಳ ಬಳಲಿಕೆಯಾಗಿದೆ. ಆದುದರಿಂದ ನೀನು ಹೋಗಿ, ನಿನ್ನ ಕೆಲಸವನ್ನು ಮುಗಿಸಿಕೊಂಡು ಬಾ" ಎಂದು ಹೇಳಿ ಶುಕನನ್ನೂ ಮಾಲತಿಯನ್ನೂ ಕಳುಹಿಸಿ, ತಾನು ಅಲ್ಲಿಯೇ ವಿಶ್ರಮಿಸಿಕೊಳ್ಳುತ್ತಿದ್ದನು.

ಇಪ್ಪತ್ತೊಂಬತ್ತನೆಯ ಪ್ರಕರಣ.

ಬಂಧನವಿಮೋಚನ.

"ಶುಕಶಾರಿಕಾದಿಪಕ್ಷಿಗಳನ್ನು ಪಂಜರದಲ್ಲಿಟ್ಟು ಅವುಗಳಿಗೆ ಫಲಾದಿಗಳನ್ನೂ, ಕ್ಷೀರಾನ್ನವನ್ನೂ ಕಾಲಕಾಲಕ್ಕೆ ಕೊಡುತ್ತಾ, ಮಾರ್ಜಾಲಾದಿಗಳಿಂದ ಅಪಾಯಗಳು ಬಾರದಂತೆ ನೋಡಿಕೊಳ್ಳುತ್ತಾ, ಕೆಲವರು ಸಂತೋಷಪಡುತ್ತಿರುವರು. ತಮಗೆ ಆಗುವಂತೆ ಆ ಪಕ್ಷಿಗಳಿಗೂ ಆನಂದವಾಗುತ್ತಿದೆ ಎಂದು ಅವರಿಗೆ ಭಾವನೆಯುಂಟಪ್ಪುದು. ವಾಸ್ತವವಾಗಿಯೂ ಆ ಪಕ್ಷಿಗಳು ಸ್ವೇಚ್ಛೆಯಾಗಿ ಸಂಚರಿಸುತ್ತಾ ಕಾಡಿನಲ್ಲಿ ಸಿಕ್ಕಿದ ಕಾಳುಕಡ್ಡಿಗಳನ್ನೂ ಕಸುಗಾಯಿ ದೋರೆಗಾಯಿಗಳನ್ನೂ ಕಷ್ಟಪಟ್ಟು ಸಂಪಾದಿಸಿ ಅಹನ್ಯಹನಿ ಕಾಲಕ್ಷೇಪಮಾಡುವುದಕ್ಕೇ ಹೆಚ್ಚಾಗಿ ಪ್ರೀತಿಸುತ್ತವೆ ಎಂಬುದನ್ನು ಸುಲಭವಾಗಿ ಕಂಡುಕೊಳ್ಳಬಹುದು. ಪ್ರಮಾದವಶದಿಂದ ಪಂಜರದ ಬಾಗಿಲು ಸ್ವಲ್ಪ ತೆರೆದಿದ್ದರೂ ಆ ಪಕ್ಷಿಗಳು ತಮ್ಮ ರಾಜಭೋಗಗಳನ್ನೂ ಕೂಡ ತೃಣೀಕರಿಸಿ

ಕ್ಷಣಮಾತ್ರದಲ್ಲೇ ಹಾರಿಹೋಗಿ ಕಾಡನ್ನು ಸೇರಿಕೊಳ್ಳುವುವು. ಪ್ರಪಂಚದಲ್ಲಿ ಸ್ವಾತಂತ್ರ್ಯಕ್ಕಿಂತ ಶ್ರೇಷ್ಠವಾದುದು ಮತ್ತೆ ಯಾವುದೂ ಇಲ್ಲ. ಕಾರಾಗೃಹವಾಸಿಗಳಲ್ಲಿರುವ ಶೌರ್ಯಧೈರ್ಯಾದಿ ಸುಗುಣಗಳು ವ್ಯರ್ಥವಲ್ಲವೇ ? ಘೋರಸಂಗ್ರಾಮಗಳಲ್ಲಿ ಧೈರ್ಯಸಾಹಸಾದಿಗಳನ್ನು ಪ್ರದರ್ಶಿಸಿ ಪ್ರೇಕ್ಷಕರಿಂದ ಪ್ರಶಸ್ತಿಯನ್ನು ಪಡೆಯಬೇಕೆಂದು ಇರುವವರಿಗೆ ಕಾರಾಗೃಹವಾಸಕ್ಕಿಂತಲೂ ದುರ್ಭರವಾದ ಕಷ್ಟವು ಮತ್ತೆ ಯಾವುದಿರುವುದು ? ಅಯ್ಯೋ ! ನನಗೆ ಈ ಸೆರೆಯು ಯಾವಾಗ ತಪ್ಪುವುದೋ!" ಎಂದು ವಿಜಯಸಿಂಹನು ನರಕಕೂಪದಂತಿದ್ದ ಆ ಕಾರಾಗೃಹದಲ್ಲಿ ಚಿಂತಿಸುತ್ತಿದ್ದನು. ಹಿಂದೆ ಅದೇ ಕಾರಾಗೃಹದಲ್ಲಿ ಬಿದ್ದಿದ್ದ ಒಬ್ಬ [illegible] ದುಃಖಾತಿಶಯದಿಂದ ಅದರ ಗೋಡೆಗೆ ತನ್ನ ತಲೆಯನ್ನು [illegible]ಕೊಂಡು ಸತ್ತುಹೋಗಿದ್ದನು. ಆಗ ಅವನ ತಲೆಯಿಂದ ಸುರಿದ ರಕ್ತವು ಗೋಡೆಯಮೇಲೆ ಕರೆಕಟ್ಟಿಕೊಂಡಿತ್ತು. ಇದನ್ನೂ ಇದರಂತಿದ್ದ ಇತರ ಸಂಗತಿಗಳನ್ನೂ ಆ ಕಾರಾಗೃಹದ ರಕ್ಷಕಭಟರು, ಬಹಳ ಉತ್ಸಾಹದಿಂದ ಕಾರಾಗೃಹವಾಸಿಗಳಿಗೆ ಆಗಾಗ ತಿಳಿಸಿ, ತಪ್ಪಿಸಿಕೊಂಡುಹೋಗಲು ಮನುಷ್ಯಮಾತ್ರನಿಗೆ ಸಾಧ್ಯವಲ್ಲವೆಂದು ಬೋಧಿಸುತ್ತಿದ್ದರು. ವಿಜಯಸಿಂಹನು ಈ ಬೋಧನೆಗಳಿಂದ ಹೆದರದೆ ಇದ್ದರೂ, ಹಿಂದೆ ವಿಜಯನಗರದಲ್ಲಿ ಕಾರಾಗೃಹಬದ್ಧನಾಗಿದ್ದಾಗಲೂ ವಧ್ಯಸ್ಥಾನಕ್ಕೆ ಹೋಗಿ ಮರಣಮುಖದಲ್ಲಿ ಬಿದ್ದಿದ್ದಾಗಲೂ ಮುಕ್ತಾಂಬೆಯ ಸಹಾಯದಿಂದ ಬದುಕಿಕೊಂಡುದನ್ನೂ ಈಗ ತನಗೆ ಸಹಾಯಮಾಡುವವರು ಯಾರೂ ಇಲ್ಲದಿದ್ದುದನ್ನೂ ಕುರಿತು ಬಹಳ ವ್ಯಸನಾಕ್ರಾಂತನಾಗಿದ್ದನು.

ವಿಜಯಸಿಂಹನು ರಾಯಚೂರಿನಲ್ಲಿ ಮುಕ್ತಾಂಬೆಯು ಇದ್ದ ವಿಷಯವನ್ನು ತಿಳಿದು ತನಗೆ ಪರಮಶತ್ರುಗಳಾದ ರಾಮರಾಯಾದಿಗಳೂ ಅಲ್ಲೇ ಇದ್ದರೂ ಲಕ್ಷಿಸದೆ ಸಂತೋಷದಿಂದ ರಾಯಬಾರಕ್ಕೊಪ್ಪಿ ರಾಯಚೂರಿಗೆ ಬಂದಿದ್ದನು. ಒಂದುಬಾರಿ ಮುಕ್ತಾಂಬೆಯನ್ನು ನೋಡಿದರೆ ತನಗೆ

ಬರಗಬಹುದಾದ ಕಷ್ಟಗಳನ್ನು ಆಕೆಯು ನಿವಾರಿಸುವಳೆಂದು ನಂಬಿದ್ದನು. ಆದರೆ ಮುಕ್ತಾಂಬೆಯ ಸಂದರ್ಶನವುಮಾತ್ರ ಲಭಿಸಲಿಲ್ಲ. ಕಷ್ಟವಾದರೋ ಸುಲಭವಾಗಿ ಬಂದುಬಿಟ್ಟಿತು. ಆದಿಲ್‍ಷಹನು ತನ್ನ ಸಂದೇಶವನ್ನು ಕೇಳ ಬಹುಮಾನವನ್ನು ಮಾಡಿದ್ದನು. ರಾಮಮಂತ್ರಿಯು ದುರ್ಬೋಧನೆಯಿಂದ ತೋಫಲ್‍ಖಾನನು ತನಗೆ ಉಂಟು ಮಾಡಿದ್ದ ದೌರ್ಭಾಗ್ಯನಾಶಕ್ಕಾಗಿ ಆಶ್ಚರ್ಯವನ್ನೂ ವ್ಯಸನವನ್ನೂ ಪಟ್ಟುಕೊಳ್ಳುತ್ತಿರುವಾಗ, ಒಬ್ಬ ಪುರುಷನು ಅಲ್ಲಿಗೆ ಬಂದನು. ಕಾರಾಗೃಹಪಾಲಕರು, ತಮಗೆ ಇದುವರೆಗೂ ವಿಜಯಸಿಂಹನನ್ನು ಕೊಂದುಬಿಡಬೇಕೆಂದು ಬೋಧಿಸುತ್ತಿದ್ದ ರುದ್ರದೇವನೆಂದು ಭಾವಿಸಿದ್ದರು. ಆದರೆ ಇವನು ಹೊಸಬನಾಗಿದ್ದುದರಿಂದ ಆ ರಕ್ಷಕಭಟರಿಗೆ ಅಂತಹ ಸಂದರ್ಭದಲ್ಲಿ ಸಹಜವಾದ ದುರ್ಭರವಾದ ಕೋಪವು ಹುಟ್ಟಿ ಈ ಮೇರೆಗೆ ಅವರು ಗರ್ಜಿಸಿದರು. —

ರ. ಭ— “ಅಯ್ಯಾ! ಯಾರು ನೀನು? ಈ ಅವೇಳೆಯಲ್ಲಿ ಇಲ್ಲಿಗೇಕೆ ಬಂದೆ?”

ಪುರುಷ—“ನಾನು ತೋಫಲ್‍ಖಾನನ ಅಂತರಂಗಿಕಭೃತ್ಯ ಸಾಹೇಬರ ಅಪ್ಪಣೆಯಾದುದರಿಂದ ಇಲ್ಲಿಗೆ ಬಂದೆ”

ರ. ಭ—“ನೀನು ಯಾರೋ ಹೊಸಬನಂತೆ ಕಾಣುತ್ತಿರುವೆ? ಹಳಬನಾದ ಅಂತರಂಗಿಕಸೇವಕನನ್ನು ಕಳುಹಿಸದೆ ನೂತನಾಗಂತುಕನಾದ ನಿನ್ನನ್ನು ಕಳುಹಿಸಿರುವುದು ಆಶ್ಚರ್ಯ!”

ಪುರುಷ—“ನಿಮಗೆ ಕಾರಾಗೃಹವಿನಾ ಮತ್ತೆ ಯಾವ ಸಂಗತಿಯೂ ತಿಳಿಯದು. ನಿಮಗೆ ತಿಳಿದಿರುವುದೆಲ್ಲಾ ನಿಮ್ಮ ಈ ಸೆರೆಮನೆ, ನಿಮ್ಮ ಸೆರೆಯಾಳುಗಳು. ಈ ಸೆರೆಮನೆಯ ಆಚೆ ಏನಿದೆ ಎಂಬುದನ್ನೂ ಸಹ ಪ್ರಾಯಶಃ ಮರೆತುಬಿಟ್ಟಿರುವಿರಿ. ನಿಮಗೆ ತಿಳಿಯದ ಮಾತ್ರಕ್ಕೇ ನಾನು ಹೊಸಬನಾದೇನೆ? ಎಷ್ಟೋಕಾಲದಿಂದ ಖಾನರ ಸನ್ನಿಧಾನದಲ್ಲಿದೇನೆ.

ಅಧಿಕಪ್ರಸಂಗವನ್ನು ಬಿಟ್ಟು ಪ್ರಭು ಶಾಸನದಂತೆ ನಡೆದುಕೊಳ್ಳುವಿರೋ ಇಲ್ಲವೋ ?"

ರ. ಭ—" ಆ ಶಾಸನವೇನು ತಿಳಿಸು

ಪುರುಷ—" ವಿಜಯ ಸಿಂಹನನ್ನು ನನ್ನೊಡನೆ ಬೇಗ ಕಳುಹಿಸಬೇಕು ಎಂಬುದೇ ಆ ಶಾಸನ "

ರ. ಭ—" ನಾವು ಈ ಮಾತುಗಳನ್ನು ನಂಬುವುದಿಲ್ಲ. ಖಾನರು ತಾವೇ ಬಂದು ಕೇಳಿದಾಗಲಾಗಲಿ, ಅಥವಾ ಅವರಿಂದ ಮುದ್ರೆಯನ್ನು ತಂದು ತೋರಿಸಿದಾಗ ಆಗಲೀ ಇವನನ್ನು ಬಿಡಬೇಕೆಂದು ಅಪ್ಪಣೆ ಮಾಡಿರುವುದರಿಂದ, ಮತ್ತು ಯಾವ ಸಂದರ್ಭದಲ್ಲೂ ಇವನನ್ನು ಬಿಟ್ಟುಕೊಡಲಾಗುವುದಿಲ್ಲ."

ಪುರುಷ—" ಹಾಗೋ ? ನೀವು ಇಷ್ಟು ನಂಬಿಕೆವಂತರಾಗಿರುವುದರಿಂದಲೇ ಇಂತಹ ಮುಖ್ಯವಾದ ಕಾರ್ಯದಲ್ಲಿ ಖಾನರು ನಿಮ್ಮನ್ನು ನೇಮಿಸಿರುವರು ಇಲ್ಲಿ ನೋಡಿ ಈ ಮುದ್ರೆಯುಂಗುರವನ್ನು ಗುರುತಿಗಾಗಿ ಕಳುಹಿಸಿಕೊಟ್ಟಿರುವರು " ಹೀಗೆ ಹೇಳಿ ಒಂದು ಮುದ್ರೆಯುಂಗುರವನ್ನು ಅವರ ಕೈಗೆ ಕೊಟ್ಟನು.

ರ. ಭ—(ನೋಡಿ) " ಇಂತಹ ಅವೇಳೆಯಲ್ಲಿ ವಿಜಯಸಿಂಹನಿಂದ ಆಗಬೇಕಾಗಿರುವುದೇನು ? ನಮ್ಮ ಪ್ರಭುಗಳು ಈಗ ಎಲ್ಲಿರುವರು.

ಪುರುಷ—" ಪ್ರಭುಗಳು ಅರಮನೆಯ ಮಂದಿರದಲ್ಲಿ ಅಸಂಗಸೇನೆಯ ಬಳಿಯಲ್ಲಿರುವರು ಅವರಿಬ್ಬರಿಗೂ ಒಂದು ಸಂವಾದವು ನಡೆಯುತ್ತಿರುವುದು. ಆ ಸಂವಾದದಲ್ಲಿ ನಮ್ಮ ಪ್ರಭುಗಳ ಪಕ್ಷವಾಗಿ ಈತನು ಸಾಕ್ಷ್ಯವನ್ನು ಕೊಡಬೇಕಾಗಿದೆ "

ರ. ಭ—ಆ ಸಂವಾದವೇನು ?

ಪುರುಷ—"ನಮ್ಮ ಪ್ರಭುಗಳು ಅನಂಗಸೇನೆಯನ್ನು, ತಮ್ಮನ್ನು ಮದುವೆಯಾಗಬೇಕೆಂದು ಕೇಳಿದರು. ಆದರೆ ಆಕೆಯು ಕೃಷ್ಣದೇವರಾಯರನ್ನು ವಿನಾ ಮತ್ತ್ಯಾರನ್ನೂ ಪ್ರೀತಿಸಲಾರೆನೆಂದು ಹೇಳಿದಳು. ಇದನ್ನು ಕೇಳಿ ಖಾನರು "ವಿಜಯಸಿಂಹನನ್ನು ಹೇಗೆ ಪ್ರೀತಿಸಿದೆ?" ಎಂದು ಕೇಳಿದರು. ಆಗ ಆಕೆಯು ಅದು ಶುದ್ಧಸುಳ್ಳು ಎಂದು ಪ್ರತಿಭಟಿಸಿದಳು. ಆ ಸಮಯದಲ್ಲಿ ಅಲ್ಲಿಯೇ ಇದ್ದ ಫಕೀರನು "ಈ ವಿವಾದವೇಕೆ? ವಿಜಯಸಿಂಹನು ಇಲ್ಲಿಯೇ ಇರುವನಲ್ಲಾ ? ಅವನನ್ನು ಕರೆಸಿಸಿ ಇದಿರಿಗೆ ನಿಲ್ಲಿಸಿಕೊಂಡು ವಿಚಾರಣೆ ಮಾಡಿದರೆ ನಿಜಾಂಶವು ತಿಳಿದು ಬರುವುದು." ಎಂದು ಹೇಳಿದನು. ಖಾನನು ಇದನ್ನು ಕೇಳಿ "ಒಳ್ಳೆ ಮಾತು! ವಿಜಯಸಿಂಹನು ಆತನನ್ನು ನೀನು ಪ್ರೀತಿಸಿದುದು ಉಂಟೆಂದು ಒಪ್ಪಿಕೊಂಡರೆ ಆಗ ನೀನು ನನ್ನನ್ನು ಮದುವೆಯಾಗುವೆಯಷ್ಟೆ?" ಎಂದು ಕೇಳಲು ಆಕೆಯು ಸಮ್ಮತಿಸಿರುವಳು. ಈ ವಿವಾದವನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ವಿಜಯಸಿಂಹನನ್ನು ಕರೆದುಕೊಂಡು ಬರಬೇಕೆಂದು ನನಗೆ ಅಪ್ಪಣೆಮಾಡಿರುವರು."

ರ. ಭ—"ಅಪರಾಧಿಯಾದ ಈ ವಿಜಯಸಿಂಹನಿಂದ ನಮ್ಮ ಪ್ರಭುಗಳಿಗೆ ಯಾವ ಉಪಕಾರವಾಗುವುದು ?"

ಪುರುಷ—"ಹಾಗಂದರೇನು ! ಈಗ ಸದ್ಯದಲ್ಲಿ ಖಾನರ ವಿಷಯದಲ್ಲಿ ಇವನು ಅಪರಾಧಿಯಾಗಿದ್ದರೂ, ಖಾನನಿಗೆ ಅನುಕೂಲವಾಗಿ ಸಾಕ್ಷಿ ನುಡಿದು ಬಂಧನವಿಮೋಚನವನ್ನು ಪಡೆದುಕೊಳ್ಳದೇ ಇರುವನೇ ?"

ರ. ಭ—(ಈ ಮಾತುಗಳನ್ನು ಕೇಳಿ ತಮ್ಮತಮ್ಮಲ್ಲೇ 'ಇವನು ಹೇಳುವ ಮಾತುಗಳು ಯುಕ್ತವಾಗಿ ತೋರುತ್ತವೆ. ಆದರೆ ವಿಜಯಸಿಂಹನು ಈ ವಿಷಯದಲ್ಲಿ ಏನು ಹೇಳುವನೋ ನೋಡೋಣ' ಎಂದು ತಮ್ಮಲ್ಲಿ ಯೋಚಿಸಿಕೊಂಡು, ಅವನ ಬಳಿಗೆ ಹೋಗಿ) "ವಿಜಯಸಿಂಹ ! ನಿನಗೆ

ಶುಭಕಾಲವು ಒದಗಿತು. ಈ ಸೀನು ಖಾನರಿಗೆ ಅನುಕೂಲವಾಗಿಸಾಕ್ಷಿ ಹೇಳಿದರೆ, ಇಗೋ! ಕಾರಾಗೃಹವಾಸವು ತಪ್ಪುವುದು."

ವಿಜಯ—"ಅದೇನು ಹೇಳಿ. ನನ್ನಮನಸ್ಸು ಒಪ್ಪಿದರೆ ಹೇಳುವೆನು."

ರ. ಭ—" ನಿನಗೂ ಆನಂಗಸೇನೆಗೂ ಸಂಬಂಧವಿರುವುದೋ ಇಲ್ಲವೋ? ಜನಗಳು ಹೇಳಿಕೊಳ್ಳುವುದರಲ್ಲಿ ಎಷ್ಟುಮಟ್ಟಿಗೆ ಸತ್ಯವಿರುವುದು."

ವಿಜಯ—" ಛೀ! ದುರಾತ್ಮರಾ! ಬಾಯಿ ಮುಚ್ಚಿ. ಪತಿವ್ರತೆಯಾದ ಆಕೆಯ ಮೇಲೆ ದೋಷವನ್ನು ಆರೋಪಿಸಿದರೆ ನಿಮಗೆಬೇರೆ ಒಳ್ಳೆಯದಾಗದು. ಹುಳುಕುಗಳನ್ನು ಹುಡುಕಿಕೊಂಡು ಹೋಗುವುದೇ ಮನುಷ್ಯರ ಸ್ವಭಾವ. ಸತ್ಯವಾಗಲಿ ಅಸತ್ಯವಾಗಿರಲಿ ಒಬ್ಬರ ವಿಷಯದಲ್ಲಿ ಏನಾದರೂ ಒಂದು ದೋಷವನ್ನು ಕಲ್ಪಿಸಿಕೊಂಡು ಸಿಕ್ಕಿದಂತೆಲ್ಲಾ ಹರಟಿಕೊಳ್ಳುವುದು ಮನುಷ್ಯರಿಗೆ ಬಂದ ಚಾಳಿ. ನನ್ನ ಮನೋಭಾವವು ಆ ಭಗವಂತನಿಗೇ ಗೊತ್ತು."

ರ. ಭ—" ಹೋಗಲಿ! ಒಂದು ಮಾತ್ ನಿಜವಾಗಿಯೂ ನಿಮ್ಮಿಬ್ಬರಿಗೂ ಸಂಬಂಧವಿಲ್ಲದೆ ಇರಬಹುದು ಆದರೂ ನೀನು ಈಗ ಒಪ್ಪಿಕೊಂಡು ಬಿಟ್ಟರೆ ಸುಲಭವಾಗಿ ನಿನಗೆ ಈ ಸೆರೆಯು ತಪ್ಪುವುದು ಇಂತಹ ಸುಸಮಯವನ್ನು ಕಳೆದುಕೊಳ್ಳಬೇಡ."

ವಿಜಯ—" ಛೀ! ತುಚ್ಛರೇ! ಪ್ರಾಣ ಹೋದರೂ ಹೆದರುವುದಿಲ್ಲ. ಅಸತ್ಯವನ್ನು ಎಂದಿಗೂ ನುಡಿಯಲಾರೆನು. ಇನ್ನು ಈ ಸಂಗತಿಯನ್ನು ಕುರಿತು ಉಸಿರೆತ್ತಬೇಡಿ."

ರ. ಭ—" ಅಯ್ಯಾ! ಬುದ್ಧಿಹೀನನಂತೆ ಮಾತನಾಡಬೇಡ. ನಿನ್ನ ಮನಸ್ಸಿಗೆ ಬಂದಂತೆ ಮಾತನಾಡಿ ನಮ್ಮ ಪ್ರಭುಗಳಿಗೂ ಕೋಪವನ್ನುಂಟು ಮಾಡಿ ನಿನಗೂ ಕೇಡುಕನ್ನುಂಟುಮಾಡಿಕೊಳ್ಳಬೇಡ. ಈ ಸೆರೆಮನೆಯ

ವಾಸವು ನಿನಗೆ ಬಹಳ ಹಿತಕರವಾಗಿದ್ದರೆ, ನೀನು ಈಗ ಹೇಳಿದಂತೆಯೇ ಮಾಡಬಹುದು.”

ಸೆರೆಮನೆಯ ವಿಚಾರವು ಜ್ಞಾಪಕಕ್ಕೆ ಬಂದಕೂಡಲೇ—“ಆಹಾ! ಸಮಯವೇನೋ ಒಳ್ಳೆಯದೇ; ಆತ್ಮರಕ್ಷಣೆಗಾಗಿ ಅನೃತವನ್ನು ಹೇಳಬಹುದೆಂದು ಹಿರಿಯರೂ ಹೇಳಿರುವರು. ನನ್ನ ಶೌರ್ಯಸಾಮರ್ಥ್ಯಾದಿಗಳನ್ನು ವ್ಯರ್ಥಪಡಿಸಿಕೊಂಡು ಈ ತುಚ್ಛವಾದ ಸೆರೆಮನೆಯಲ್ಲಿ ಬಿದ್ದು ಸಾಯುವುದಕ್ಕಿಂತಲೂ, ಈ ಒಂದು—ಒಂದೇ ಒಂದು—ಸುಳ್ಳು ಹೇಳಿ ನನ್ನನ್ನು ನಾನು ಕಾಪಾಡಿಕೊಳ್ಳುವುದು ಯುಕ್ತವಲ್ಲವೇ” ಎಂದು ವಿಜಯಸಿಂಹನು ಆಲೋಚಿಸಿದನು. ಆದರೆ ಉತ್ತರ ಕ್ಷಣದಲ್ಲಿಯೇ ಅಸತ್ಯವನ್ನಾದರೂ ನುಡಿದು ತನ್ನ ತುಚ್ಛಪ್ರಾಣಗಳನ್ನು ಉಳಿಸಿಕೊಳ್ಳಬೇಕೆಂಬ ದುರ್ಬುದ್ಧಿಯು ಹುಟ್ಟಿದುದಕ್ಕಾಗಿ ಪಶ್ಚಾತ್ತಾಪಸಂತಪ್ತನಾಗಿ ತನ್ನನ್ನೇ ದೂಷಿಸಿಕೊಳ್ಳುತ್ತಾ ಆ ರಕ್ಷಕಭಟರನ್ನು ನೋಡಿ, “ಅಯ್ಯಾ! ದುರ್ಬುದ್ಧಿಗಳಿರಾ! ನಿಮ್ಮ ಮಾತುಗಳನ್ನು ಕೇಳಿ ಎಂದಿಗೂ ಸುಳ್ಳು ಹೇಳಲಾರೆನು. ಖಾನರಿಗೆ ಕೋಪ ಬಂದರೆ ಬರಲಿ. ಬೇಕಾಗಿದ್ದರೆ ಚಿತ್ರವಧೆಯನ್ನು ಮಾಡಿಸಲಿ. ಅಸತ್ಯವನ್ನು ಎಂದಿಗೂ ನುಡಿಯಲಾರೆನು,” ಎಂದು ಹೇಳಿದನು.

ಆಗ ರಕ್ಷಕಭಟರೆಲ್ಲರೂ ವಿಜಯಸಿಂಹನ ಸತ್ಯಪ್ರತಿಜ್ಞತೆಗೆ ಆಶ್ಚರ್ಯಪಟ್ಟರು. ಕಾರಾಗೃಹಾಧಿಕಾರಿಯು ಮುದ್ರೆಯ ಉಂಗುರವನ್ನು ತಂದಿದ್ದ ಪುರುಷನನ್ನು ನೋಡಿ, ಇಂತಹ ಸಾಕ್ಷಿಯಿಂದ ನಮ್ಮ ಪ್ರಭುಗಳಿಗೆ ಏನು ಉಪಯೋಗ? ಆದುದರಿಂದ ನೀನು ಖಾನರ ಬಳಿಗೆ ಹೋಗಿ ಈಗ ನಡೆದ ಸಂಭಾಷಣೆಯನ್ನು ತಿಳಿಸು.” ಎಂದು ಹೇಳಿದನು.

ಪುರುಷ.—“ಹಾಗಲ್ಲ ಅಲ್ಲಿ ಮಹಾಪ್ರಭಾವಶಾಲಿಯಾದ ಫಕೀರನು ಇರುವನೆಂದು ಆಗಲೇ ಹೇಳಿದೆನಲ್ಲವೇ? ಆತನು ಇದೇ ವಿಜಯಸಿಂಹನಿಂದ ಖಾನರಿಗೆ ಹಿತಕರವಾಗುವಂತೆ ಸಾಕ್ಷ್ಯವನ್ನು ನುಡಿಸುವನು.

ಆದುದರಿಂದ ಇವನನ್ನು ನನ್ನೊಡನೆ ಕಳುಹಿಸಿಕೊಡು. ನನ್ನಲ್ಲಿ ನಿನಗೆ ನಂಬಿಕೆ ಇಲ್ಲದಿದ್ದರೆ ನೀನೂ ನನ್ನೊಡನೆ ಬಾ. ಅಥವಾ ನಿನಗೆ ವಿಶ್ವಾಸ ಪಾತ್ರನಾದ ಒಬ್ಬ ಸೇವಕನನ್ನು ಕಳುಹಿಸು. ಪ್ರಭುಗಳ ಅಪ್ಪಣೆಯನ್ನು ಮೀರುವುದು ನಮ್ಮಂತಹವರಿಗೆ ಸರಿಯಲ್ಲ ”

ಈ ಮಾತುಗಳನ್ನು ಕೇಳಿ ಆ ಅಧಿಕಾರಿಯು ಮತ್ತೊಂದು ಬಾರಿ ಮುದ್ರೆಯ ಉಂಗುರವನ್ನು ಪರೀಕ್ಷಿಸಿ, ತನಗೆ ನಂಬಿಕೆಯಾದ ಒಬ್ಬ ಭೃತ್ಯ ನನ್ನೂ ಜೊತೆಗೆ ಕೊಟ್ಟು ವಿಜಯಸಿಂಹನನ್ನು ಆ ಪುರುಷನೊಡನೆ ಕಳು ಹಿಸಿದನು. ಅವರಿಬ್ಬರೂ ಖಡ್ಗಪಾಣಿಗಳಾಗಿ ವಿಜಯಸಿಂಹನನ್ನು ಮಧ್ಯ ದಲ್ಲಿ ನಡೆಯಿಸಿಕೊಂಡು ಸ್ವಲ್ಪದೂರ ಹೋದರು. ಆಗ ಕಾರಾಗೃಹದ ಭಟನು ಆ ಪುರುಷನನ್ನು ನೋಡಿ “ ಇದೇಕೆ ಈ ಮಾರ್ಗವನ್ನು ಹಿಡಿದೆ? ಅರಮನೆಮಂದಿರಕ್ಕೆ ಈ ದಾರಿಯೇ ಹತ್ತಿರವಲ್ಲವೇ ? ” ಎಂದು ಕೇಳಿದನು.

ಅದಕ್ಕೆ ಆ ಪುರುಷನು “ಅಯ್ಯಾ ! ನನಗೆ ಆ ಮಾರ್ಗವು ತಿಳಿಯದು ಎಂದು ಭಾವಿಸಿರುವೆಯೋ ? ‘ ಮಸೀದಿಯಿಂದ ಬರುವಾಗ್ಗೆ ಫಕೀರನನ್ನೂ ಕರೆತರಬೇಕು ’ ಎಂದು ಪ್ರಭುಗಳು ನನಗೆ ಆಜ್ಞೆಮಾಡಿರುವರು. ಆದು ದರಿಂದ ಈ ಕಡೆ ಹೋಗಬೇಕಾಗಿದೆ ”—ಎಂದು ಗರ್ಜಿಸಿದನು. ರಕ್ಷಕಭಟ ನು ಆ ಗರ್ಜನೆಯನ್ನು ಕೇಳಿ, ಸ್ವಲ್ಪ ಮಟ್ಟಿಗೆ ಸಂಶಯವು ಉಂಟಾಗಿದ್ದರೂ ಮರುಮಾತನಾಡಲಾರದೆ ತಾನೂ ಅವನು ಹೋಗುತ್ತಿದ್ದ ಮಾರ್ಗವನ್ನೇ ಹಿಡಿದನು. ಇನ್ನು ಸ್ವಲ್ಪ ದೂರ ಹೋಗುವುದರೊಳಗಾಗಿ ಆ ಪುರುಷನು ಹಿಂದೂ ದೇವಾಲಯದ ಬಳಿಗೆ ಅವನನ್ನು ಕರೆತಂದಿದ್ದನು. ಆ ರಕ್ಷಕಭಟ ನಿಗೆ ಸಂಶಯವು ಅಧಿಕವಾಗಿ, “ ಇದೇನಯ್ಯಾ ! ಮಸೀದಿಗೆ ಎಂದು ಹೇಳಿ ಈ ಹಿಂದೂ ದೇವಸ್ಥಾನದ ಬಳಿಗೆ ಕರೆತಂದೆ ! ಎಂದು ಕೇಳಿದನು. ಇಷ್ಟು ಹೊತ್ತಿಗೆ ದೇವಾಲಯದಿಂದ ರಾಮರಾಜನು ಅವರಿದ್ದಸ್ಥಳಕ್ಕೆ ಬಂದು ರಕ್ಷಕಭಟನ ತಲೆಯಮೇಲೆ ಬಲವಾಗಿ ಬಂದು ಪೆಟ್ಟನ್ನು ಕೊಟ್ಟನು.

ಅವನಿಗೆ ಸ್ಮೃತಿ ತಪ್ಪಿ ಹೋಯಿತು. ಈ ಘಟನೆಗಳನ್ನು ಕಂಡು ವಿಜಯಸಿಂಹನಿಗೆ ಅತ್ಯಾಶ್ಚರ್ಯವುಂಟಾಯಿತು. ಇದು ಸ್ವಪ್ನವೋ ಇಂದ್ರಜಾಲವೋ ಎಂದು ಯೋಚಿಸಿಕೊಳ್ಳುತ್ತಿದ್ದನು. ಕಾರಾಗೃಹದಲ್ಲಿ ಮುದ್ರೆಯ ಉಂಗುರವನ್ನು ತೆಗೆದುಕೊಂಡು ಹೋಗಿದ್ದವನು ಶಂಕರರೆಡ್ಡಿ. ಅವನಿಗೂ ವಿಜಯಸಿಂಹನಿಗೂ ಪರಿಚಯವಿರಲಿಲ್ಲ. ಅವನು [illegible] ವೇಷವನ್ನು ಮರೆಯಿಸಿಕೊಂಡಿದ್ದುದರಿಂದ ಅವನ ಗುರುತು ವಿಜಯಸಿಂಹನಿಗೆ ಸಿಕ್ಕಲಿಲ್ಲ. ಆದುದರಿಂದ ನಿಜಾಂಶವು [illegible] ತಿಳಿಯಲಿಲ್ಲ. ಮೊತ್ತಮೊದಲು ದಿಗ್ಭ್ರಮೆಯಿಂದ ಕೆಲವು ನಿಮಿಷಗಳ ವರೆಗೆ ಸುಮ್ಮನಿದ್ದನು. ಆಗ ರಾಮರಾಜನು ಅವನನ್ನು ನೋಡಿ, "ವಿಜಯಸಿಂಹ! ಏನು ಯೋಚಿಸುತ್ತಿರುವೆ? ಚಿಕ್ಕಂದಿನಿಂದಲೂ [illegible] ಪ್ರತಿದಿನ ಸುಖವಾ[illegible]! ಎಂದು ಆಲೋಚಿಸುತ್ತಿರುವೆ [illegible] ಈ ಧ್ವನಿಯನ್ನು ಕೇಳಿದ [illegible] ರಾಮರಾಜನ [illegible] ನೋಡಿದ [illegible] ರಾಮರಾಜ! ಇದೇನು ನೀನು ಇಲ್ಲಿಗೆ ಬಂದಿರುವೆ? [illegible]" ಎಂದು ಆಶ್ಚರ್ಯದಿಂದ ಕೇಳಿದನು.

ರಾಮ—"ವಿಜಯಸಿಂಹ! ನಿನಗೋಸ್ಕರವಾಗಿಯೇ ನಾವುಗಳು ಈ ನಗರಕ್ಕೆ ಬಂದೆವು. ಈತನು ನನ್ನ ಮಿತ್ರನಾದ ಶಂಕರರೆಡ್ಡಿ. ಅನಂಗಸೇನೆಯು ಸೇವಕಿಯಾದ ಕಮಲೆಯೂ ಈತನ ಸಹಾಯದಿಂದ ನಿನ್ನನ್ನು ಬಿಡಿಸಿಕೊಳ್ಳುವುದಕ್ಕಾಗಿ ನಾವೆಲ್ಲರೂ ಇಲ್ಲಿ ಸೇರಿದೆವು" ಎಂದು ಉತ್ತರ ಕೊಟ್ಟನು.

ವಿಜಯಸಿಂಹನು ಅತ್ಯಾಶ್ಚರ್ಯಪಡುತ್ತಾ ಶಂಕರರೆಡ್ಡಿಯನ್ನು ಅಪ್ಪಿಕೊಂಡು, "ಮಿತ್ರರುಗಳಿರಾ! ಈ ಹೊತ್ತು ಎಂತಹ ಸಾಹಸಕಾರ್ಯವನ್ನು ಮಾಡಿರುವಿರಿ! ಇನ್ನು ಪ್ರಿಯಮಿತ್ರರ ಮಂಜುಲಾಲಾಪಗಳನ್ನು ಕೇಳಿ

ಸಂತೋಷಿಸುವ ಭಾಗ್ಯವು ನನಗೆ ಇಲ್ಲವೆಂದು ನಿರ್ಧರಮಾಡಿಕೊಂಡಿದ್ದೆನು. ಆ ಅಪಾರ ಕರುಣಾಸಾಗರನ ದಯೆಯಿಂದಲೂ ನಿನ್ನಂತಹ ಸನ್ಮಿತ್ರರ ಸಹಾಯದಿಂದಲೂ ನನಗೆ ಬಂದಿದ್ದ ದುರವಸ್ಥೆಯು ತಪ್ಪಿತು."

" ವಿಜಯಸಿಂಹ! ಪ್ರಿಯತಮೆಯ ವೃತ್ತಾಂತಗಳನ್ನು ಕೇಳಿಯೇ ಇಷ್ಟು ಸಂತೋಷಿಸುವ ನೀನು ನಿನ್ನ ಪ್ರಿಯಕಾಂತೆಯ ಮಂಜುಳಭಾಷಣಗಳನ್ನು ಕೇಳಿದರೆ ಎಷ್ಟು ಸಂತೋಷಪಡುವೆಯೋ?" ಎಂದು ತಿರುಗಿ ರಾಜಕುಮಾರನು ನುಡಿದನು.

" ನನಗೆ ಅಂತಹ ಅದೃಷ್ಟವು ಇರುವುದೇ? ನನ್ನಂತಹ ನಿರ್ಭಾಗ್ಯನಿಗೆ ಇಲ್ಲದ ಸಲ್ಲದ ಬಯಕೆಗಳನ್ನು ಏಕೆ ಉಂಟುಮಾಡುವೆ?" ಎಂದು ವಿಜಯಸಿಂಹನು ನಿಟ್ಟುಸಿರುಬಿಟ್ಟನು.

" ವಿಜಯಸಿಂಹ! ಈಗಾಗಲೇ ಪ್ರಿಯಳಾದವಳನ್ನು ಕೇಳುವಷ್ಟು ಮಟ್ಟಿಗೆ ನಿನ್ನ ಅದೃಷ್ಟವು ಕುಂದಿಲ್ಲ. ನಿನಗೆ ಬಾಹುಬಲವೂ ಧೈರ್ಯಸಾಹಸಗಳೂ ಇದ್ದರೆ ಆಕೆಯ ಆ ಮಧುರವಚನಗಳನ್ನು ಕೇಳುವ ಸಮಯವು ಜಾಗ್ರತೆಯಾಗಿಯೇ ಒದಗುವುದು. ನೀನು ಸ್ವಲ್ಪಮಾತ್ರ ಹಿಂತೆಗೆದರೂ ಕೆಲಸಕೆಡುವುದು" ಎಂದು ರಾಜಕುಮಾರನು ಹೇಳಿದನು.

" ಏನು! ಧೈರ್ಯಸಾಹಸಾದಿ ವಿಷಯಗಳನ್ನು ಕುರಿತು ನನಗೆ ಹೇಳಬೇಕೆ? ಅದರಲ್ಲೂ ನನ್ನ ಪ್ರಿಯಳಾದ ಮುಕ್ತಾಂಬೆಯ ವಿಷಯದಲ್ಲಿ ನನ್ನ ಧೈರ್ಯಸಾಹಸಾದಿಗಳಿಗೆ ಏನು ಕಡಮೆ? ಆಕೆಯು ಈಗ ಎಲ್ಲಿರುವಳು? ಹೇಳುವೆಯಾ?" ಎಂದು ವಿಜಯಸಿಂಹನು ಕೇಳಿದನು.

" ಮಿತ್ರಾ! ಮುಕ್ತಾಂಬೆಗೆ ಒಂದು ಆಪತ್ತು ಸಂಭವಿಸಿರುವುದು. ಆಕೆಯನ್ನು ಒಬ್ಬ ತುರುಕನು ಮೋಹಿಸಿರುವನು. ಆದುದರಿಂದ ಆಕೆಯನ್ನು ಅವನು ನೋಡಬೇಕೆಂದಿರುವನಂತೆ. ಮುಕ್ತಾಂಬೆಯೂ ತನ್ನ ಕೆಲಸವನ್ನು ಸರಿಪಡಿಸಿಕೊಳ್ಳುವುದಕ್ಕೆ ಸಮ್ಮತಿಸಿರುವಳಂತೆ—" ಎಂದು

ಹೇಳುತ್ತಿರುವಷ್ಟರಲ್ಲಿ ವಿಜಯಸಿಂಹನು ಅಡ್ಡಬಂದು, "ಸಾರ್ಥಕವಾಯಿತು! ಮುಕ್ತಾಂಬೆಗೆ ಮಹಮ್ಮದೀಯಸಂದರ್ಶನವೇ! ಹಾಗಾದರೆ ನನಗೆ ಈ ಜೀವವೇತಕ್ಕೆ?" ಎಂದು ಬಹಳ ವ್ಯಸನಪಟ್ಟುಕೊಳ್ಳುತ್ತಿದ್ದಾಗ ರಾಮ ರಾಜನು ಅವನನ್ನು ತಡೆದು, "ಮಿತ್ರನೇ! ಅಷ್ಟು ತ್ವರೆಪಡಬೇಡ. ಮುಕ್ತಾಂ ಬೆಯು ಇಂತಹ ಕುಟಿಲಮಾರ್ಗಕ್ಕೆ ಎಂದಾದರೂ ಸಮ್ಮತಿಸುವಳೇ? ತನ್ನ ಕಾರ್ಯವು ಕೈಗೂಡುವವರೆಗೂ ಆ ತುರುಕನಿಗೆ ಸಂಶಯವುಂಟು ಮಾಡದೆ ಕಡೆಗೆ ಅವನಿಗೆ ತಕ್ಕ ಬುದ್ಧಿಯನ್ನು ಕಲಿಸಿ ತೊಲಗಿಸಬೇಕೆಂದು ಅಷ್ಟುದೂರ ಸಮ್ಮತಿಸಿರುವಳೆಂದು ದೃಢವಾಗಿ ನಂಬು. ಆಕೆಯು ನಮ್ಮೆಲ್ಲ ರಿಗಿಂತಲೂ ಬುದ್ಧಿವಂತಳು, ಯುಕ್ತಿಪರಳು ಆ ಮಹಮ್ಮದೀಯನು ಮಹಾ ಬಲಿಷ್ಠನು. ಅವನಿಗೆ ತಕ್ಕವನು ನೀನೇ ಸರಿ ಎಂದು ನಿರ್ಧರಿಸಿ ಉಪಾಯಗಳನ್ನು ಮಾಡಿ ನಿನ್ನನ್ನು ಕಾರಾಗೃಹದಿಂದ ಬಿಡಿಸಿರುವೆವು. ಈಗ ನೀನು ನಿನ್ನ ಧೈರ್ಯಸಾಹಸಾದಿಗಳನ್ನು ತೋರಿಸಿ ಮುಕ್ತಾಂಬೆಯ ಗೌರವವನ್ನು ಕಾಪಾಡಿಕೊಳ್ಳಬೇಕಾಗಿದೆ" ಎಂದು ಹೇಳಿದನು.

"ಅಯ್ಯೋ ಆಕೆಗೆ ಎಷ್ಟು ಕಷ್ಟ ಸಂಭವಿಸಿತು! ಒಂದುವೇಳೆ ಆ ದುಷ್ಟತುರುಷ್ಕನಿಂದ ಆಕೆಗೆ ಅವಮಾನವು ಸಂಭವಿಸಿದರೂ ಸಂಭವಿಸೀತು. ಆದುದರಿಂದ ತ್ವರೆಪಡುವುದು ಒಳ್ಳೆಯದು."

"ವಿಜಯಸಿಂಹ! ನಾನು ಹೇಳಿದ ಬೇಟಿಯು ಇನ್ನೂ ನಾಳೆ ಉಂ ಟಾಗಬೇಕಾಗಿರುವುದು. ಆದುದರಿಂದ ಅಂತಹ ಅವಸರವೇನೂ ಇಲ್ಲ. ನೀನು ಆದಿಲ್‌ಷಹನ ಸಭೆಯಲ್ಲಿ ಮಾತನಾಡಿದ ವಾಕ್ಯಗಳನ್ನು ಕೇಳಿ ಮುಕ್ತಾಂ ಬೆಗೆ ಬಹಳ ಸಂತೋಷವಾಯಿತು. ಒಳಕ ನಿನಗೆ ಸಂಭವಿಸಿದ ಕಾರಾ ಗೃಹವಾಸದ ವೃತ್ತಾಂತವನ್ನು ಕೇಳಿ ಬಹಳ ವ್ಯಸನಪಟ್ಟಳು. ಹೀಗೆ ನಿನಗೆ ಸಂತೋಷವಾದಾಗ ಸುಖಿಸುತ್ತಲೂ ಕಷ್ಟಬದಗಿದಾಗ ದುಃಖಿಸುತ್ತಲೂ ನಿನ್ನ ಸಂದರ್ಶನಕ್ಕಾಗಿ ಬಹಳ ಕುತೂಹಲ ಪಡುತ್ತಿರುವಳು. ನಾನು

ಆಕೆಗೆ ಒಂದು ಕಾಗದವನ್ನು ಬರೆದಿದ್ದೆನು ಆಕೆಯು ನನಗೆ ಪ್ರತ್ಯುತ್ತರವನ್ನು ಬರೆದಳು. ಈಗಲೇ ಆಕೆಯಿರುವಸ್ಥಳಕ್ಕೆ ಕರೆದುಕೊಂಡು ಹೋಗುವೆನು ಬಾ !'' ಎಂದು ರಾಮರಾಜನು ಹೇಳಿದನು. ಈ ವಾಕ್ಯಗಳನ್ನು ಕೇಳಿ ವಿಜಯಸಿಂಹನಿಗೆ ಬಹಳಸಂತೋಷವಾಯಿತು. ಸ್ವಲ್ಪ ಹೊತ್ತಿಗೆಮುಂಚೆ ಆ ದುರ್ಗಂಧಮಯವಾದ ಕಾರಾಗೃಹದಲ್ಲಿ ನಿರಾಶೆಯಿಂದ ನರಳುತ್ತಿದ್ದ ಅದೇ ವಿಜಯಸಿಂಹನೇ ಅದೇ ಶತ್ರುದುರ್ಗದಲ್ಲಿದ್ದ ತನ್ನ ಪ್ರಿಯಳಬಳಿಗೆ ಸಂತೋಷದಿಂದ ಈಗ ಹೋಗುತ್ತಿರುವನು ! ಕಾಲಗತಿಯು ಅತರ್ಕ್ಯವಲ್ಲವೇ !

ಇಪ್ಪತ್ತೊಂಬತ್ತನೆಯ ಪ್ರಕರಣ.

ಸಂದರ್ಶನ

ಮುಕ್ತಾಂಬೆಯು ವಾಸಿಸುತ್ತಿದ್ದ ಮಂದಿರವು ಒಂದು ಪ್ರಾಕಾರದ ಮಧ್ಯದಲ್ಲಿತ್ತು. ಉನ್ನತವಾದ ಆ ಪ್ರಾಕಾರದ ಗೋಡೆಗಳ ಉತ್ತರದಕ್ಷಿಣ ಭಾಗಗಳಲ್ಲಿ ಎರಡುಬಾಗಿಲುಗಳು ಇದ್ದುವು. ಉತ್ತರದ್ವಾರದಲ್ಲಿ ಹೊರಟರೆ ದೊಡ್ಡಮನೆಗಳು ಕಾಣುತ್ತಿದ್ದುವು. ಆ ಮಂದಿರಗಳಲ್ಲೇ ಪ್ರಹರೇಶ್ವರ ರುದ್ರದೇವಾದಿಗಳು ವಾಸಿಸುತ್ತಿದ್ದರು ಆ ಮಂದಿರಗಳಿಗೆ ದಕ್ಷಿಣದಲ್ಲಿ ಮತ್ತೊಂದು ಉನ್ನತಪ್ರಾಸಾದವಿತ್ತು. ಅದಕ್ಕೆ ಆಚೆ ಹೂತೋಟಗಳೂ ಒಂದು ದಿವ್ಯಮಂದಿರವೂ ಕಂಡುಬರುತ್ತಿದ್ದುವು. ದಕ್ಷಿಣದ್ವಾರದಿಂದ ಪ್ರವೇಶಿಸಿದರೆ, ಈ ಮಂದಿರದೊಳಕ್ಕೆ ಹೋಗುವಂತಿತ್ತು. ಅದನ್ನುದಾಟಿ ಸೋಪಾನಪಜ್ಕ್ತಿಯನ್ನು ಹತ್ತಿ ಮಹಡಿಯ ಮೇಲಕ್ಕೆ ಹೋಗಬಹುದಾಗಿತ್ತು. ಆ ದಿಕ್ಕಿನಲ್ಲಿ ಏನು ನಡೆದರೂ ಉತ್ತರದಿಕ್ಕಿನ ಮಂದಿರದಲ್ಲಿದ್ದವರಿಗೆ ಗೊತ್ತಾಗು

ತ್ತಿರಲಿಲ್ಲ. ಆ ದಕ್ಷಿಣದ್ವಾರವನ್ನು ಬೇಕಾದಾಗ ತೆರೆಯುವುದಕ್ಕೂ ಬೇಡದಾಗ ಮುಚ್ಚುವುದಕ್ಕೂ ಮುಕ್ತಾಂಬೆಗೆ ಸ್ವಾತಂತ್ರ್ಯವಿತ್ತು. ವರ್ತಕವೇಷದಿಂದ ಶಂಕರರೆಡ್ಡಿಯು ಬಂದು, ಬಂದು ಕಾರಣವನ್ನು ಕೊಟ್ಟಂದಿನಿಂದಲೂ ಸಾಧಾರಣವಾಗಿ ಕ್ಲಪ್ತಸಮಯಗಳಲ್ಲಿ ಮುಕ್ತಾಂಬೆಯು ದಕ್ಷಿಣದ್ವಾರದ ಬಳಿಯಲ್ಲಿರುತ್ತಿದ್ದಳು. ಒಂದುದಿನ ರಾತ್ರಿ ಎರಡುಜಾವಗಳು ಕಳೆದರೂ ನಿದ್ದೆ ಬರಲಿಲ್ಲ. ಕಾರಣವೇನೆಂದರೆ ಆಗಿನ ರಾಮರಾಜನು ಮುಕ್ತಾಂಬೆಯನ್ನು ಕಾಣುವುದಕ್ಕೆ ಬರುತ್ತಿದ್ದನು ಕಂಬಂಸೇನನೊಡನೆ ಮಾಡಬೇಕಾದರೆ ಪ್ರಹರೇಶ್ವರನಾಗಲೀ ಬುದ್ಧಿಶೇಖರನಾಗಲಿ ಸರಿಯಲ್ಲವೆಂದೂ ರಾಮರಾಜನೇ ಆ ಕೆಲಸಕ್ಕೆ ಶಕ್ತನೆಂದೂ ನಿರ್ಧರಿಸಿ ಅತನಿಗೆ ಒಂದು ಪತ್ರಿಕೆಯನ್ನು ಬರೆದು ಅವನಿಂದ ಉತ್ತರವನ್ನು ತರಿಸಿಕೊಂಡಿದ್ದಳು. ಆದರೆ ಆ ತುರುಷ್ಕನು ಬರುವಹೊತ್ತಿಗೆ ಬರುವನೋ ಇಲ್ಲವೋ ಎಂದು ಮನಸ್ಸಿನಲ್ಲಿ ಬಹಳವಾಗಿ ಕೊರೆಯುತ್ತಿತ್ತು. ಆ ತುರುಷ್ಕನು ಬರುವುದಕ್ಕೆಮುಂಚೆ ರಾಮರಾಜನನ್ನು ಒಂದುಸಾರಿ ನೋಡಬೇಕೆಂದು ಸಂಕೇತಮಾಡಿಕೊಂಡಿದ್ದಳು. ಕಾಲ ಕಳೆದಂತೆಲ್ಲಾ ಮುಕ್ತಾಂಬೆಯ ಕಾತರವೂ ಹೆಚ್ಚುತ್ತಿತ್ತು. ಕಡೆಗೆ ತನ್ನ ಹಾಸಿಗೆಯನ್ನುಬಿಟ್ಟು ಕೈಯಲ್ಲಿ ಒಂದುಕತ್ತಿಯನ್ನು ಹಿಡಿದು ಮೆಲ್ಲಗೆ ಮೆಟ್ಟಲುಗಳನ್ನು ಇಳಿದು ದಕ್ಷಿಣದ್ವಾರದ ಬಳಿಗೆಬಂದು ಏನಾದರೂ ಶಬ್ದವು ಕೇಳಬರುವುದೋ ಇಲ್ಲವೋ ಎಂದು ಹೊಂಚುಹಾಕಿ ಕೇಳುತ್ತಿದ್ದಳು. ಆಗ ಆ ಬಾಗಿಲಬಳಿ ಆದ ಒಂದುಸದ್ದನ್ನು ಕೇಳಿ "ಅದುಯಾರು?" ಎಂದು ಪಿಸುಮಾತಿನಿಂದ ಕೇಳಿದಳು. ಈ ಪ್ರಶ್ನೆಗೆ "ಸೋದರಿ! ನಾನು ರಾಮರಾಜ; ಬಾಗಿಲು ತೆಗೆ" ಎಂದು ಪ್ರತ್ಯುತ್ತರಬಂತು. ಇದನ್ನು ಕೇಳದ ಕೂಡಲೆ ತನ್ನ ಮಾತಿನಂತೆ ರಾಮರಾಜನು ಬಂದನೆಂದು ಸಂತೋಷಿಸಿ ಬಾಗಿಲು ತೆರೆದಳು. ಮುಕ್ತಾಂಬೆಯು ರಾಮರಾಜನೊಡನೆ ಮತ್ತೊಬ್ಬನು ಇದ್ದುದನ್ನು ಕಂಡಳು. ಆದರೆ ಕತ್ತಲೆಯಾಗಿದ್ದುದರಿಂದ ಆ ವ್ಯಕ್ತಿಯ ಪರಿ

ಚಯವು ಸಿಕ್ಕಲಿಲ್ಲ. ಆಗ ಮುಕ್ತಾಂಬೆಯು "ರಾಮರಾಜ! ಈತನು ಯಾರು? ಇಷ್ಟು ಜನಕ್ಕೆ ತಿಳಿದಗುಟ್ಟು ರಟ್ಟಾಗದಿರುವುದು ಕಷ್ಟವಲ್ಲವೇ?" ಎಂದು ಸಂಶಯದಿಂದ ಕೇಳಿದಳು.

"ಸೋದರಿ! ನೀನು ಹಾಗೆ ಶಂಕಿಸಬೇಡ. ಇವನು ನಮಗೆ ಪರಮಾಪ್ತನು; ಮಹಾ ಬಲಿಷ್ಠನು. ತಕ್ಕ ಸಮಯವು ಬಂದಕೂಡಲೆ ಆ ತುರುಕನನ್ನು ನಿರ್ಬಂಧಿಸುವ ಶಕ್ತಿಯು ಈತನಿಗಿರುವುದೆಂದು ಕರೆತಂದೆನು. ಈತನು ನಮ್ಮ ರಹಸ್ಯವನ್ನು ಬಯಲುಪಡಿಸಲಾರನು" ಎಂದು ರಾಮರಾಜನು ಹೇಳಿದನು.

ಮುಕ್ತಾಂಬೆಯು ಬೇರೆ ಮಾತನ್ನಾಡದೆ ಬಾಗಿಲನ್ನು ಮುಚ್ಚಿ ಅವರೊಡನೆ ಮಂದಿರದೊಳಕ್ಕೆ ಹೋದಳು. ಆಗ ಮುಕ್ತಾಂಬೆಯು "ರಾಮರಾಜ! ಬೋನಿನಲ್ಲಿ ಸಿಕ್ಕಿದ ಸಿಂಹವು ಇನ್ನು ತಪ್ಪಿಸಿಕೊಳ್ಳುವುದು ಕಷ್ಟ. ಆತನನ್ನು ತಪ್ಪಿಸಲು ನನಗೆ ಯಾವ ಉಪಾಯವೂ ತೋರದು. ಕ್ರೂರ ಮನಸ್ಕನಾದ ಆ ಮಹಮ್ಮದೀಯನ ಕೈಗೆ ಸಿಕ್ಕಿದುದಕ್ಕೆ ಬಹಳ ವ್ಯಸನಪಡುತ್ತಿದ್ದೇನೆ. ಈ ಕೆಲಸವನ್ನು ಮಾಡಿದವನು ತೋಫಲ್‌ಖಾನನೇ ಎಂದು ಭಾವಿಸುತ್ತೇನೆ. ಆದಿಲ್‌ಷಹನು ಇಂತಹ ಅಕ್ರಮಕಾರ್ಯಗಳನ್ನು ಮಾಡುವನೇ?" ಎಂದು ಕೇಳಿದಳು.

"ಸೋದರಿ! ಆದಿಲ್‌ಷಹನು ಸಾಮಾನ್ಯನೆಂದು ತಿಳಿದುಕೊಂಡಿರುವೆಯೋ? ಆತನೂ ರಾಮಯ್ಯಮಂತ್ರಿಯೂ ಈ ಕೃತ್ಯವನ್ನು ನಡೆಯಿಸಿರುವರು. ಆದಿನ ಸಭೆಯಲ್ಲಿ ನೀನೇ ಇದ್ದೆಯಲ್ಲಾ! ತೋಫಲ್ ಖಾನನಿಗೆ ಇಂತಹ ಅಭಿಪ್ರಾಯವಿರಲಿಲ್ಲ."

"ಸೋದರ! ವಿಚಾರಾತಿಶಯದಿಂದ ನಾನು ಮರೆತಿದ್ದೆ. ಆದಿನ ಸಭೆಯಲ್ಲಿ ಆದಿಲ್‌ಷಹನು ಆಡಿದ ಮಾತುಗಳು ಈಗ ಜ್ಞಾಪಕಕ್ಕೆ

ಬಂದುವು ಆದರೆ ವಿಜಯಸಿಂಹನಿಗೆ ಪ್ರಾಣಭಯವು ಇರಲಾರದಷ್ಟೆ ? ” ಎಂದು ಮುಕ್ತಾಂಬೆಯು ಕೇಳಿದಳು.

“ ಆದಿಲ್‌ಷಹನಿಗೆ ವಿಜಯಸಿಂಹನನ್ನು ಕೊಲ್ಲಿಸಬೇಕೆಂಬ ಯೋಚನೆಯೇನೋ ಇಲ್ಲ. ಆದರೆ ವಿಜಯಸಿಂಹನೊಡನೆ ಬದ್ಧಶತ್ರುತ್ವವನ್ನು ವಹಿಸಿದ ರಾಮಯಾದಿಗಳು ಖಾನನಿಗೆ ಮಿತ್ರರು ಖಾನನೂ ಮಿತ್ರರ ಮಾತನ್ನು ಮೀರಲಾರನು. ಆದುದರಿಂದ ವಿಜಯಸಿಂಹನ ವಿಷಯದಲ್ಲಿ ಏನಾಗುವುದೋ ಹೇಳತೀರದು ” ಎಂದು ವಿಚಾರಪೂರ್ವಕವಾಗಿ ರಾಮರಾಜನು ಹೇಳಿದನು.

“ ಹಾಗಾದರೆ ದೊಡ್ಡ ಕಷ್ಟವೇ ಬಂತಲ್ಲಾ ! ರಾಮಯನು ನನ್ನ ಹಿತಕ್ಕಾಗಿ ಎಷ್ಟೋ ಕಷ್ಟಪಡುತ್ತಿರುವನು. ಆದರೆ ಈ ಕಾರ್ಯದಲ್ಲಿ ಮಾತ್ರ ನನಗೆ ವಿರೋಧಿಯಾಗಿರುವನು. ನಾನು ವಿಜಯಸಿಂಹನನ್ನು ಮನಃಪೂರ್ವಕ ವರಿಸಿದ್ದರೂ ನನ್ನನ್ನು ರುದ್ರದೇವನಿಗೆ ಮದುವೆ ಮಾಡಿಕೊಡಬೇಕೆಂದಿರುವನು. ರುದ್ರದೇವನನ್ನು ಕಂಡರೆ ನನಗೆ ಸ್ವಲ್ಪವೂ ಸರಿಬೀಳುವುದಿಲ್ಲ. ಈ ವಿಷಯವನ್ನು ರಾಮಯ ಮಂತ್ರಿಯೊಡನೆ ಸ್ಪಷ್ಟವಾಗಿ ಹೇಳಬಿಟ್ಟರೆ ನನ್ನ ಕೆಲಸದಲ್ಲಿ ಉದಾಸೀನನಾಗುವನು. ಅಂತು ಆ ವಿಜಯಸಿಂಹನಿಗೆ ಎಷ್ಟು ಕಷ್ಟಗಳು ಸಂಭವಿಸುತ್ತಿವೆ. ಆತನು ಬಹಳ ದುರದೃಷ್ಟವಂತನು. ” ಎಂದು ಬಹಳ ವಿಚಾರದಿಂದ ಹೇಳಿದಳು.

ತನ್ನಲ್ಲಿ ದೃಢಾನುರಾಗಿಯಾಗಿದ್ದ ಮುಕ್ತಾಂಬೆಯ ಮಾತುಗಳನ್ನು ಕೇಳಿ ವಿಜಯಸಿಂಹನು ಬಹಳ ಸಂತೋಷಪಟ್ಟು “ ಯಾವ ಸುಂದರಿಯ ಅಸಾಧಾರಣವಾದ ಪ್ರತಿಭೆಯು ಮಹಾಮತಿವಂತರಾದ ಮಂತ್ರಿಶ್ರೇಷ್ಠರ ಬುದ್ಧಿಯನ್ನು ಮೀರಿಸುತ್ತಿದೆಯೋ ಅಂತಹ ನಿನ್ನ ದೃಢಾನುರಾಗಕ್ಕೆ ಪಾತ್ರನಾದ ನಾನು ಹೇಗೆ ದುರದೃಷ್ಟವಂತನು ! ನಾನೇ ಬಹಳ ಭಾಗ್ಯಶಾಲಿ ” ಎಂದು ವಿಜಯಸಿಂಹನು ಹೇಳಿದನು.

ವಿಜಯಸಿಂಹನ ಕಂಠಧ್ವನಿಯು ಗುರುತುಸಿಕ್ಕಿದಕೂಡಲೆ ಮುಕ್ತಾಂಬೆಯು ಆನಂದಾಶ್ಚರ್ಯ ಭಯಸಂಭ್ರಮಾದಿಗಳಿಂದ ನಿಶ್ಚೇಷ್ಟಳಾದಳು. ಆಗ ರಾಮರಾಜನು ಆಕೆಯನ್ನು ನೋಡಿ "ಅಮ್ಮಾ! ತಿಮ್ಮರಸನು ಹೇಳಿಕೊಟ್ಟ ಉಪಾಯದಿಂದ ವಿಜಯಸಿಂಹನನ್ನು ಸೆರೆಯಿಂದ ಬಿಡಿಸಿದೆವು." ಎಂದು ತಾವು ಮಾಡಿದ ಉಪಾಯವನ್ನು ವಿವರಿಸಲು ಮುಕ್ತಾಂಬೆಯು ಅದನ್ನು ಕೇಳಿ ಬಹಳ ಸಂತೋಷಪಟ್ಟಳು. ಆಗ ವಿಜಯಸಿಂಹನು ಮುಕ್ತಾಂಬೆಯನ್ನು ನೋಡಿ "ಸುಂದರಿ ಆದಿನ ನೀನುಮಾಡಿದ ಪ್ರಾಣದಾನಕ್ಕೆ ಬಹಳ ಕೃತಜ್ಞನಾಗಿರುವೆನು. ಆದಿನದ ಋಣವನ್ನು ತೀರಿಸಿಕೊಳ್ಳುವುದು ಸಾಧ್ಯವಲ್ಲ. ನನ್ನ ಕೃತಜ್ಞತೆಯನ್ನು ನಿನಗೆ ತಿಳಿಸಬೇಕೆಂದು ಎಷ್ಟು ಪ್ರಯತ್ನಿಸಿದರೂ ಅವಕಾಶದೊರೆಯದೆ ತಡವಾದುದಕ್ಕಾಗಿ ಕ್ಷಮಿಸು" ಎಂದು ಹೇಳಿದನು.

"ಪ್ರಿಯರೆ! ನಾನುಮಾಡಿದ ಉಪಕಾರವು ಬಹಳ ದೊಡ್ಡದೆಂದು ನೀವೇ ಹೇಳಬೇಕು. ಆ ಅತ್ಯಲ್ಪವಾದ ಉಪಕಾರಕ್ಕೆ ಎಷ್ಟೋಪಾಲು ಹೆಚ್ಚಾದ ಪ್ರತ್ಯುಪಕಾರವನ್ನು ಮಾಡಲು ತಮಗೆ ಅವಕಾಶವನ್ನು ದೊರಕಿಸಿಕೊಟ್ಟುದಕ್ಕಾಗಿ ಭಗವಂತನಿಗೆ ಬಹಳ ಕೃತಜ್ಞಳಾಗಿದ್ದೇನೆ" ಎಂದು ಮುಕ್ತಾಂಬೆಯು ಹೇಳಿದಳು.

ರಾಮರಾಜನು ಮುಕ್ತಾಂಬೆಯಕಡೆಗೆ ತಿರುಗಿ "ಸೋದರಿ! ನೀನು ಈಗ ಕೈಕೊಂಡಿರುವ ಕೆಲಸವು ಕೇವಲ ಸಾಹಸಸಾಧ್ಯವಾಗಿರುವುದು. ನೀನು ಬರೆದ ಪ್ರಕಾರವಾಗಿ ಎಲ್ಲವನ್ನು ನೆರವೇರಿಸುವುದಕ್ಕೆ ನಾವು ಸಿದ್ಧರಾಗಿರುವೆವು. ಆ ಮಹಮ್ಮದೀಯನಿಗೆ ಸಂತೋಷವನ್ನುಂಟುಮಾಡಿ ಅವನ ಸಹಾಯವನ್ನು ಪಡೆದು ವಿಜಯನಗರದಮೇಲೆ ದಂಡನ್ನು ತೆಗೆದುಕೊಂಡು ಹೋಗಬೇಕೆಂದಲ್ಲವೇ ನೀನು ಹೀಗೆ ಮಾಡಿದುದು? ಒಂದುವೇಳೆ ಆ ಮಹಮ್ಮದೀಯನಿಗೆ ಸಂತೋಷವಾದರೂ ಅವನು ನಿಮಗೆ ಸಹಾಯಮಾಡು

ವನೇ ? ರಾಮಯಮಂತ್ರಿಗೂ ಆತನಿಗೂ ವೈರ ಹುಟ್ಟುವಂತೆ ತಿಮ್ಮರಸನು ಆಗಲೆ ಉಪಾಯಗಳನ್ನು ನಡೆಸಿರುವನು. ಮುಹಮ್ಮದೀಯರೆಲ್ಲರೂ ಒಟ್ಟುಗೂಡಿದರೂ ವಿಜಯನಗರವನ್ನು ಜಯಿಸಲಾದೀತೇ ? ಮುಹಮ್ಮದೀಯರಾಜ್ಯಗಳು ಒಟ್ಟುಗೂಡದಂತೆ ಅವರಲ್ಲಿಯೇ ಒಳಜಗಳಗಳು ಹುಟ್ಟುವುದಕ್ಕೋಸ್ಕರ ಅನೇಕ ಉಪಾಯಗಳು ನಡೆದಿವೆ. ಆದುದರಿಂದ ಈ ಮಾರ್ಗವನ್ನವಲಂಬಿಸಿ ನಿನ್ನ ರಾಜ್ಯವನ್ನು ವಶಪಡಿಸಿಕೊಳ್ಳುವೆನೆಂಬ ಭ್ರಾಂತಿಯನ್ನು ಬಿಟ್ಟುಬಿಡು. ಈ ಮಾತು ಹಾಗಿರಲಿ ; ಈಗ ನೀನು ಮಾಡಿರುವ ಸಾಹಸ ಕಾರ್ಯವು ಸಾಂಗವಾಗಿ ನಡೆಯಲಿ; ಕಂಬರಸೇನನನ್ನು ಕರೆಯಿಸು ” ಎಂದು ರಾಮರಾಜನು ಹೇಳಿದನು.

ಈ ಮಾತುಗಳನ್ನು ಕೇಳಿ ಮುಕ್ತಾಂಬೆಯು ಸ್ವಲ್ಪಕಾಲ ತನ್ನ ಮನಸ್ಸಿನಲ್ಲಿಯೇ ಆಲೋಚಿಸಿಕೊಂಡು ತನಗೆ ಮೋಸಮಾಡುವುದಕ್ಕಾಗಿ ರಾಮರಾಜನು ಹಾಗೆ ಹೇಳುತ್ತಿರಲಾರನೆಂದು ನಿರ್ಧರಿಸಿದಳು. ಆಕೆಯು ಸುಮ್ಮನಿದ್ದುದನ್ನು ಕಂಡು ರಾಮರಾಜನು ಪುನಃ ಹೇಳಲಾರಂಭಿಸಿದನು.

“ ಸೋದರಿ ! ಬೇರೆ ಮಾರ್ಗವನ್ನು ಹಿಡಿಯಬೇಡ. ನಾನು ಯಾವಾಗಲೂ ನಿನ್ನ ಹಿತವನ್ನೇ ಕೋರುತ್ತಿರುವುದರಿಂದ ನನ್ನ ಬುದ್ಧಿವಾದವನ್ನು ಕೇಳು. ನಿನ್ನ ಕೆಲಸವು ಕೈಗೂಡಬೇಕಾದರೆ ಸಾಮೋಪಾಯವೇ ಮೇಲು. ನಮ್ಮ ಕೆಲಸವನ್ನು ಮುಗಿಸಿಕೊಂಡು ಇನ್ನು ಸ್ವಲ್ಪ ದಿವಸಗಳಲ್ಲೇ ನಾವು ವಿಜಯನಗರಕ್ಕೆ ಹೊರಟುಹೋಗುವೆವು. ಈಗಲಾದರೂ ಚೆನ್ನಾಗಿ ಯೋಚಿಸಿ, ನಮ್ಮೊಡನೆ ಬಂದುಬಿಡು. ಯಾವುದಾದರೂ ನಿರಪಾಯವಾದ ಸ್ಥಳವನ್ನು ಸೇರಿಸುವೆವು. ” ಎಂದು ರಾಮರಾಜನು ಹೇಳಿದನು.

“ ರಾಮರಾಜ ! ರಾಮಯಮಂತ್ರಿಯು ನನಗಾಗಿಯೇ ಇಷ್ಟು ಶ್ರಮವನ್ನೂ ಅನುಭವಿಸುತ್ತಾ ಇರುವುದರಿಂದ ಆತನನ್ನು ಬಿಟ್ಟು ನಾನು ಮಾತ್ರ ಬಂದುಬಿಡುವುದಕೆ. ನನಗೆ ಇಷ.ಬರುವುದಿಲ . ಇದಕೆ. ನಿಮ. ಅಬಿಪಾ ಯ

ವೇನು ?" ಎನ್ನಲು ರಾಮರಾಜನು ಈ ಮಾತುಗಳನ್ನು ಕೇಳಿ ಸ್ವಲ್ಪಹೊತ್ತು ಆಲೋಚಿಸುತ್ತಿದ್ದನು. ಆಗ ವಿಜಯಸಿಂಹನು, "ಯುವತೀಮಣಿಯೇ! ನಿನ್ನ ಮಂತ್ರಿಯ ವಿಷಯದಲ್ಲಿ ನೀನು ತೋರಿಸುತ್ತಿರುವ ಕೃತಜ್ಞತೆಗಾಗಿ ಬಹಳ ಸಂತೋಷವಾಗುವುದು. ನೀನು ಆತನೊಡನೆಯೇ ಇರಬಹುದು. ಆದರೆ ತಿಮ್ಮರಸನಿಗೆ ಒಂದು ಪತ್ರವನ್ನು ಬರೆದು ಕಳುಹಿಸು. ಮಿಕ್ಕ ಕಾರ್ಯಗಳನ್ನು ನಾನು ನೋಡಿಕೊಳ್ಳುವೆನು. ಎಂದು ಹೇಳಿದನು.

ರಾಮರಾಜನು ಈಮಾತುಗಳನ್ನು ಕೇಳಿ ಒಪ್ಪಿ, "ಅಮ್ಮಾ! ಬಹಳ ಕಷ್ಟಪಟ್ಟು ವಿಜಯಸಿಂಹನನ್ನು ಕಾರಾಗೃಹದಿಂದ ಬಿಡಿಸಿದೆವು. ಈ ವೃತ್ತಾಂತವನ್ನು ಯಾರೂ ತಿಳಿಯಕೂಡದು. ಸಮಯಬರುವವರೆಗೂ ಈತನನ್ನು ಇಲ್ಲಿಯೇ ಬಚ್ಚಿಡು. ಈತನನ್ನು ಈ ದುರ್ಗದಿಂದ ಕಳುಹಿಸಿಬಿಟ್ಟರೆ, ಕೂಡಲೇ ಹಿಂತಿರುಗಿ ಬರಲಾರನು. ಆದುದರಿಂದ ಇವನನ್ನು ಬಚ್ಚಿಡುವ ಭಾರ ನಿನ್ನದೇ." ಎಂದು ಹೇಳಿದನು.

"ಅಣ್ಣಾ! ಹೇಗೆ ಬಚ್ಚಿಡಲಿ? ಆ ಮಂದಿರದಲ್ಲಿರುವ ಪ್ರಹರೀಶ್ವರಾದಿಗಳಿಗೆ ಇದು ತಿಳಿಯದೇಹೋಗುವುದೇ? ತಿಳಿದರೆ ಈತನನ್ನು ಕೊಲ್ಲದೆ ಅವರು ಸುಮ್ಮನೆ ಬಿಡುವರೇ? ಏನುಮಾಡಲಿ!" ಎಂದು ಮುಕ್ತಾಂಬೆಯು ಬಹಳ ವ್ಯಸನದಿಂದ ಹೇಳಿದಳು.

"ಹಾಗಲ್ಲ, ಇವನಿಗೆ ಕಾರಾಗೃಹವಾಸವೆಂದರೆ ಬಹಳ ಇಷ್ಟ. ಆದುದರಿಂದ ಈ ಮಂದಿರದಲ್ಲಿ ಒಂದು ಕಡೆ ಈತನನ್ನು ಬಂಧಿಸಿ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರು. ನಾಳೆಯದಿನ ಶಂಕರರೆಡ್ಡಿಯನ್ನು ಇಲ್ಲಿಗೆ ಕಳುಹಿಸುವೆನು. ನಿಮ್ಮ ಕಾರ್ಯದಲ್ಲಿ ಆತನೂ ಸಹಾಯಮಾಡುವನು." ಎಂದು ಹೇಳಿ ರಾಮರಾಜನು ಹೊರಟುಹೋದನು.

ಅನಂತರ ಮುಕ್ತಾಂಬಾವಿಜಯಸಿಂಹರು ತಮ್ಮತಮ್ಮ ಸಮಾಚಾರಗಳನ್ನು ಮಾತನಾಡಿಕೊಳ್ಳುತ್ತಾ ಕಾಲವನ್ನು ಕಳೆದರು. ಮರುದಿನ

ಸಾಯಂಕಾಲದವರೆಗೂ ಮುಕ್ತಾಂಬೆಯು ಆತನನ್ನು ದಿವಾನ್‌ಖಾನೆಯಲ್ಲಿ ಛಂದುಕಡೆ ಬಚ್ಚಿಟ್ಟಿದ್ದಳು.

ಆ ಮರುದಿನ ರಾತ್ರಿ ಒಂದು ಜಾವ ಕಳೆದಮೇಲೆ ಮುಲಮುಲಖಾನನೂ ಫಕೀರನೂ ಆ ದಕ್ಷಿಣದ್ವಾರದ ಬಳಿಗೆ ಬಂದರು. ಅಂತಹ ಕಾರ್ಯಗಳಲ್ಲಿ ತಲೆಹಾಕಲು ಫಕೀರನಿಗೆ ಇಷ್ಟವಿರಲಿಲ್ಲ. ಆದರೆ ಖಾನನ ಬಲಾತ್ಕಾರದಿಂದ ಅವನೊಡನೆ ಬಂದಿದ್ದನು. ಅವರಿಬ್ಬರಿಗೂ ಈ ಮೇರೆಗೆ ಸಂಭಾಷಣೆಯು ನಡೆಯುತ್ತಿತ್ತು :—

ಖಾನ್—"ಆ ಯುವತಿಯು ಸರಳಹೃದಯಳು. ಆಕೆಗೆ ತಿಳಸುವುದು ಹೇಗೆ ? ನಾವು ಇಲ್ಲಿ ಬಹಳಹೊತ್ತಿರುವುದು ಯುಕ್ತವಲ್ಲ. ತಾವು ಆಕೆಯೊಡನೆ ಮಾತನಾಡಿರುವೆನೆಂದು ಹೇಳಿದಿರಲ್ಲವೇ ? ಆಕೆಯ ಮನಸ್ಸು ನನ್ನ ವಿಷಯದಲ್ಲಿ ವಿಪರೀತವಾಗಿಲ್ಲವಷ್ಟೆ ?"

ಫಕೀರ—"ಆ ಯುವತಿಯು ಸರಳಹೃದಯಳು. ಆಕೆಗೆ ನಿಮ್ಮಲ್ಲಿ ಬಹಳ ಅನುರಾಗವಿರುವಂತಿದೆ. ಹಾಗಲ್ಲದಿದ್ದರೆ ಈ ವಿವಾಹವಾಗುವುದಕ್ಕೆ ಮುಂಚೆ ನಿಮ್ಮೊಡನೆ ಮಾತನಾಡಲು ಒಪ್ಪುತ್ತಿದ್ದಳೇ"

ಖಾನ್—"ರಾಮಯಮಂತ್ರಿಯು ಕಪಟರಾಜನೀತಿವಿಶಾರದನು. ನನ್ನ ಕೋರಿಕೆಯನ್ನು ಆತನು ಕೇಳಿದಾಗಲೇ ಸಂಶಯಪಡುತ್ತಾ ಮನಸ್ಸಿಲ್ಲದೆ ಒಪ್ಪಿಕೊಂಡಂತೆ ತೋರಿತು. ಆದುದರಿಂದ ನನಗೆ ಅವಮಾನವೇನಾದರೂ ಆದೀತೆಂದು ಸಂದೇಹಪಡುತ್ತಿದೇನೆ."

ಫಕೀರ—"ತಾವು ಇದಕ್ಕೆ ಸಂದೇಹಪಡತಕ್ಕ ಆವಶ್ಯಕವಿಲ್ಲ. ತಮ್ಮಿಂದ ಉಪಕಾರ ಪಡೆಯಬೇಕೆಂದಿರುವ ರಾಮಯಮಂತ್ರಿಯು ಅಷ್ಟಕ್ಕೆ ಅವಕಾಶಕೊಟ್ಟು ತನ್ನ ಕಾರ್ಯವನ್ನೇ ಹಾಳುಮಾಡಿಕೊಳ್ಳುವನೆ ? ಅವನು ಎಂದಿಗೂ ಅಂತಹ ಬುದ್ಧಿಹೀನನಲ್ಲ."

ಖಾನನು ಈ ಮಾತುಗಳನ್ನು ಕೇಳಿ ಧೈರ್ಯವನ್ನು ತಂದುಕೊಂಡನು. ಮುಕ್ತಾಂಬೆಯನ್ನು ನೋಡಿ ಆಕೆಯೊಡನೆ ಮಾತನಾಡಿ ಸಂತೋಷವನ್ನು ಪಡೆಯಬೇಕೆಂಬ ಆಸೆಯು ಅವನಿಗೆ ಹೆಚ್ಚುತ್ತ ಬಂತು. ಆಗ ಮುಕ್ತಾಂಬೆಯು ಮುಂಚೆ ಹೇಳಿದ್ದ ರೀತಿಯಲ್ಲಿ ಫಕೀರನು ಬಾಗಿಲನ್ನು ತಟ್ಟಿದನು. ಸ್ವಲ್ಪಹೊತ್ತಿನವರೆಗೂ ಬಾಗಿಲು ತೆರೆಯಲಿಲ್ಲ. ಕೆಲವು ನಿಮಿಷಗಳು ಕಳೆದ ಬಳಿಕ ಫಕೀರನು ಪುನಃ ಹಾಗೆಯೇ ತಟ್ಟಿದನು. ಆಗ, 'ಬಂದೆ' ಎಂದು ಉತ್ತರಬಂತು. ಆ ಬಳಿಕ ಬಾಗಿಲನ್ನು ಮುಕ್ತಾಂಬೆಯು ತೆರೆದಳು. ಆಗ ಫಕೀರನು ಖಾನನೊಡನೆ "ನಾನೂ ತಮ್ಮೊಡನೆ ಬಂದರೆ ಸಂಕೋಚದಿಂದ ಮುಕ್ತಾಂಬೆಯು ಮಾತನಾಡಳು. ಆದುದರಿಂದ ತಾವು ಒಬ್ಬರೇ ಒಳಕ್ಕೆ ದಯಮಾಡಿಸಿ. ನಾನು ಈ ಬಾಗಿಲ ಬಳಿಯಲ್ಲೇ ಕಾದಿರುವೆನು" ಎಂದು ಒಪ್ಪಿಸಿ ಖಾನನನ್ನು ಒಳಕ್ಕೆ ಕಳುಹಿಸಿದನು. ದಿವಾನ್ ಖಾನೆಯನ್ನು ಪ್ರವೇಶಿಸಿದಮೇಲೆ ಒಂದು ಯುಕ್ತವಾದ ಪೀಠದಲ್ಲಿ ಕುಳಿತುಕೊಂಡು ತನ್ನ ಇದಿರಿಗೆ ಸ್ವಲ್ಪದೂರದಲ್ಲಿ ಮೇಲ್ಮುಸುಕನ್ನು ಹಾಕಿಕೊಂಡು ನಿಂತಿದ್ದ ಮುಕ್ತಾಂಬೆಯನ್ನು ಕುರಿತು ಈ ಮುಂದೆ ಹೇಳುವ ರೀತಿಯಲ್ಲಿ ಮಾತನಾಡಲಾರಂಭಿಸಿದನು :—

ಖಾನ—"ಯುವತೀಮಣಿ! ನಿನ್ನ ಅನುಗ್ರಹವನ್ನು ಸಂಪಾದಿಸಬೇಕೆಂದು ಸರ್ವಕಾಲದಲ್ಲಿಯೂ ಪ್ರಯತ್ನಿಸುತ್ತಿರುವ ನನ್ನಮೇಲೆ ನಿನ್ನ ದಯೆಯು ಬಂದುದಕ್ಕಾಗಿ ಬಹಳ ಕೃತಜ್ಞನಾಗಿರುವೆನು."

ಯುವತಿ—"ಅಬಲೆಯರಾದ ನಮ್ಮಂತಹವರ ದಯೆಯಿಂದ ತಮ್ಮಂತಹವರಿಗೆ ಆಗುವ ಲಾಭವೇನು? ಸಬಲರಾದ ತಮ್ಮಂತಹವರ ಸಹಾಯವೇ ನಮ್ಮಂತಹವರಿಗೆ ಅಭ್ಯರ್ಥನೀಯವು. ತಮ್ಮ ದಯೆಯನ್ನು ಎಷ್ಟೋಕಾಲದಿಂದ ಕೋರುತ್ತಿರುವೆವು ಈಗಲಾದರೂ ಸಂಪೂರ್ಣವಾಗಿ ದಯೆಯುಂಟಾಗಿರುವುದೋ ಇಲ್ಲವೋ ತಿಳಿಯದು."

ಖಾನ—" ಲಲನಾಮಣಿ! ಎಂತಹ ಮಾತನಾಡಿದೆ! ಈ ನಿನ್ನ ಸೇವಕನ ಇದಿರಿಗೆ ಹೀಗೆ ಮಾತನಾಡಬಾರದು. ರಾಮಯಮಂತ್ರಿಯು ಮೊದಲೇ ನಿನ್ನನ್ನು ಸೋಮೇಶ್ವರಪಾತ್ರನನ್ನಾಗಿ ಮಾಡದೆ ಮುಕ್ತಾಂಬೆಯೆಂದು ತಿಳಿಸಿದ್ದರೆ ಇಷ್ಟುಹೊತ್ತಿಗೆ ನಿನ್ನ ಕಾರ್ಯವನ್ನು ಮಾಡಿಕೊಡುತ್ತಿದ್ದೆನು. ಈಗಲೂ ಕಾರ್ಯವು ಕೆಟ್ಟುಹೋಗಿಲ್ಲ. ನಾನು ನಮ್ಮ ರಾಜರವರನ್ನು ಪ್ರೋತ್ಸಾಹಿಸಿ ನಿನ್ನ ಶತ್ರುವನ್ನು ಜಯಿಸಿ ನಿನ್ನ ಮನೋರಥವನ್ನು ಈಡೇರಿಸುವೆನು. ಆಗ ನೀನು ಈತನಿಗೆ ಏನು ಬಹುಮಾನಮಾಡುವೆಯೋ ? "

ಯುವತಿ—" ಯುವನಶ್ರೇಷ್ಠರೇ ! ನೀವು ಸತ್ಯಸಂಧರಾಗಿ ಈ ಪ್ರತಿಜ್ಞೆಯನ್ನು ನೆರವೇರಿಸಿದರೆ ನೀವು ಕೋರಿದ ಬಹುಮಾನವನ್ನು ಕೊಡುವೆನು. ಅಥವಾ-ಮುಚ್ಚುಮರೆಯೇಕೆ ? ತಪ್ಪದೇ ನಿಮ್ಮನ್ನು ವರಿಸುವೆನು. "

ಖಾನ—" ಮುಕ್ತಾಂಬೆ ! ನನಗೆ ಬಹಳ ಸಂತೋಷವಾಯಿತು. ನಿನ್ನ ಮೃದುಮಧುರವಚನಾಮೃತವನ್ನು ಪಾನಮಾಡಿ ನನ್ನ ಶ್ರವಣೇಂದ್ರಿಯವು ಧನ್ಯವಾಯಿತು. ಇನ್ನು ನಿನ್ನ ದಿವ್ಯಸುಂದರವದನಾರವಿಂದವನ್ನು ಒಂದು ಸಾರಿ ತೋರಿಸಿ ನನ್ನ ನೇತ್ರೇಂದ್ರಿಯಕ್ಕೆ ಆನಂದವನ್ನುಂಟುಮಾಡು. "

ಯುವತಿ—" ನಮ್ಮವರಲ್ಲಿ ವಿವಾಹಕ್ಕೆ ಮುಂಚೆ ವರನನ್ನು ಪ್ರತ್ಯಕ್ಷವಾಗಿ ನೋಡುವುದು ನಿಷಿದ್ಧವಲ್ಲಾ ! ನಮ್ಮ ಕುಲಾಚಾರವನ್ನು ಮೀರುವುದಕ್ಕೆ ನನ್ನ ಮನಸ್ಸು ಒಡಂಬಡದಿರುವುದು. "

ಖಾನ—" ಮುಹಮ್ಮದೀಯನನ್ನು ಮದುವೆಯಾಗಬೇಕೆಂದಿರುವ ನಿನಗೆ ನಿನ್ನ ಕುಲಾಚಾರದ ಗೋಜೇಕೆ ? ಆದರೂ ಈ ವಿಷಯದಲ್ಲಿ ಬಲಾತ್ಕಾರ ಮಾಡಲಾರೆನು. ನಿನ್ನ ಹಸ್ತಕಮಲವನ್ನಾದರೂ ಒಂದುಸಲ ಮುತ್ತಿಟ್ಟುಕೊಳ್ಳಲು ಅವಕಾಶಕೊಡು. ಇದು ನಿನ್ನ ಕುಲಾಚಾರಕ್ಕೆ ವಿರುದ್ಧವಲ್ಲವಷ್ಟೆ ? "

ಯುವತಿ—"ಅಲ್ಲದೆ ಮತ್ತೇನು ? ವಿವಾಹಕ್ಕೆ ಪೂರ್ವದಲ್ಲಿ ವಧುವಿನ ಹಸ್ತವನ್ನು ವರನು ಗ್ರಹಿಸಬಾರದು. ಹಾಗೆ ವಧೂವರರು ಒಬ್ಬರೊಬ್ಬರ ಕೈಯನ್ನು ಹಿಡಿದುಕೊಳ್ಳುವುದರಿಂದಲೇ ನಮ್ಮವರಲ್ಲಿ ಮದುವೆಗೆ ಪಾಣಿಗ್ರಹಣವೆಂಬ ಹೆಸರುಬಂದಿದೆ. ಆದರೂ ಬಾರಿಬಾರಿಗೂ ನಿಷೇಧಿಸುತ್ತಿದ್ದರೆ ನಿಮ್ಮ ಮನಸ್ಸು ಚಿಕ್ಕದಾಗುವುದಲ್ಲಾ ಎಂದು ವ್ಯಸನಪಟ್ಟು ಒಪ್ಪಿಕೊಳ್ಳುವೆನು. ನಿನ್ನ ಅಭಿಲಾಷೆಯನ್ನು ತೀರಿಸಿಕೊಳ್ಳಬಹುದು. ಎಂದು ತನ್ನ ಅವಕುಂಠನವನ್ನು ಹಾಕಿಕೊಂಡೇ ಕೈಯನ್ನು ಮುಂದಕ್ಕೆ ನೀಡಿದಳು.

ಆಗ ಖಾನನು ಪರಮಾನಂದಭರಿತನಾಗಿ ವಿನಯದಿಂದ ಮುಂದಕ್ಕೆ ಬಂದು ತನ್ನಹಸ್ತದಿಂದ ಆಕೆಯ ಹಸ್ತವನ್ನು ಹಿಡಿದುಕೊಂಡನು. ಆದರೆ ಆ ಕೈಯು ಮೃದುವಾಗಿರದೆ ಅತಿ ಕಠಿನವಾಗಿತ್ತು. ಆಯುಧವಿದ್ಯಾ ಪರಿಶ್ರಮದಿಂದ ಆ ಕಠಿನತೆಯುಂಟಾಗಿತ್ತೆಂದು ಭಾವಿಸಿಕೊಂಡನು. ಅವನು ಆ ಕೈಯನ್ನು ಮುತ್ತಿಡಲು ಬಗ್ಗಿದಾಗ ಬಹಳ ಉದ್ದವಾಗಿ ಬೆಳೆದಿದ್ದ ಖಾನನ ಗಡ್ಡವು ಆ ವ್ಯಕ್ತಿಯ ಕಾಲಿನಬಳಿಗೆ ಬಂತು. ಆಗ ಖಾನನು ಅನುರಾಗಪೂರಿತವಾದ ಏನೋ ಮಾತನ್ನು ಆಡುತ್ತಿದ್ದನು. ಆ ಗಡ್ಡವನ್ನು ಆವ್ಯಕ್ತಿಯು ಎಡಗಾಲಿಂದ ಮೆಟ್ಟಿಕೊಂಡಳು. ಅಷ್ಟರಲ್ಲಿ ಒಳಗಿನಿಂದ ವಿಜಯಸಿಂಹನು ಬಂದು ತನ್ನ ಕೈಯಲ್ಲಿದ್ದ ಕತ್ತಿಯಿಂದ ಖಾನನ ಗಡ್ಡವನ್ನು ಕತ್ತರಿಸಿಬಿಟ್ಟು ಖಾನನಿಗೆ ತನ್ನ ಎಡಗಾಲಿನ ಸ್ಪರ್ಶಸುಖವನ್ನೂ ನಾಲ್ಕೈದು ಸಾರಿ ಉಂಟುಮಾಡಿಕೊಟ್ಟನು. ಆಗ ಖಾನನಿಗೆ ಬಹಳ ಅವಮಾನವಾದರೂ, ತನ್ನ ಪ್ರಾಣವಾದರೂ ಉಳಿದಿತಲ್ಲಾ ಎಂದು ಬಹಳವಾಗಿ ಆನಂದಿಸುತ್ತಾ, ಬಂದ ದಾರಿಯನ್ನು ಹಿಡಿದು ಬೇಗನೆ ಹೊರಕ್ಕೆ ಹೊರಟನು. ಆಗ ಅಲ್ಲಿ ಕಾದಿದ್ದ ಫಕೀರನು ಆನಂದದಿಂದ ಖಾನನನ್ನು ಸಮೀಪಿಸಿ, "ತಮ್ಮ ಅಭಿಲಾಷೆಯು ನೆರವೇರಿತೆ ?" ಎಂದು ಕೇಳಿದನು. ಖಾನನ ಕಥೆಯನ್ನು ಕೇಳಿ ಫಕೀರನು, "ಆಹಾ ! ಎಂತಹ ಪ್ರಮಾದವಾಯಿತು. ಮುಕ್ತಾಂಬೆ

ಯು ಹೇಳಿದ ಮಾತುಗಳನ್ನು ನಿಜವೆಂದು ನಂಬಿದ್ದೆನಲ್ಲಾ! ಹೀಗೆ ಎಲ್ಲಾದರೂ ಉಂಟೆ! ಸದ್ಯಕ್ಕೆ ಅಲ್ಲಾ ದಯೆಯಿಂದ ತಮ್ಮ ಪ್ರಾಣಗಳು ಉಳಿದುಕೊಂಡುವಲ್ಲಾ ಆದಕ್ಕಾಗಿ ಸಂತೋಷಪಡಬೇಕಾಗಿದೆ.” ಎಂದನು.

ಖಾನ—“ಮಹಾತ್ಮರೇ! ನಿಮ್ಮಲ್ಲಿ ಸ್ವಲ್ಪವಾದರೂ ಲೋಪವಿಲ್ಲ. ಮುಕ್ತಾಂಬೆಯು ಒಬ್ಬ ಪುರುಷನಿಗೆ ತನ್ನ ವೇಷವನ್ನು ಹಾಕಿ ಹೀಗೆ ಮೋಸಮಾಡಿದಳು. ಅಯ್ಯೋ! ಈ ಅವಮಾನವನ್ನು ಸಹಿಸುವುದು ಹೇಗೆ?”

ಫಕೀರ—“ಮುಕ್ತಾಂಬೆಯನ್ನು ರುದ್ರದೇವನು ಪ್ರೀತಿಸುತ್ತಿದ್ದನೆಂದು ಕೇಳಿದ್ದೆ. ಆ ದುರಾತ್ಮನೇ ವೇಷವನ್ನು ಹಾಕಿಕೊಂಡು ನಿಮಗೆ ಈ ಅವಮಾನವನ್ನು ಉಂಟುಮಾಡಿರಬೇಕು. ನಿಮ್ಮ ಸಹಾಯವನ್ನೇ ಬೇಡುತ್ತಾ ನಿಮಗೇ ಹೀಗೆ ಅವಮಾನವನ್ನುಂಟುಮಾಡಿದುದು ಆಶ್ಚರ್ಯ. ಇಂತಹವರಿಗೆ ತಾವು ಹೇಗೆ ಸಹಾಯಮಾಡಲು ಒಪ್ಪಿದಿರೋ? ನನಗೆ ಬೇರೆ ತಿಳಿಯದು.”

ಖಾನ—“ನಾನು ಅಂತಹ ಹುಚ್ಚನೋ! ನನ್ನ ಶರೀರದಲ್ಲಿ ಸ್ವಲ್ಪವಾದರೂ ಉಸಿರಿರುವವರೆಗೂ ಈ ನೀಚನಿಗೆ ಸಹಾಯವನ್ನು ಮಾಡುವುದಿಲ್ಲ. ಸಹಾಯವನ್ನು ಮಾಡಗೊಡಿಸುವುದೂ ಇಲ್ಲ. ಈ ಹೊತ್ತಿನ ಸಂಗತಿಯನ್ನು ಯಾರೊಡನೆಯೂ ಹೇಳತಕ್ಕ ಆವಶ್ಯಕವಿಲ್ಲ. ತಾವು ನನ್ನ ವಿಷಯದಲ್ಲಿ ಪಟ್ಟ ಶ್ರಮಕ್ಕಾಗಿ ತಮಗೆ ಬಹಳ ಕೃತಜ್ಞನಾಗಿರುವೆನು. ನನಗೆ ಅಪ್ಪಣೆಯನ್ನು ಕೊಡಿ. ನಾನು ಗೋಲ್‌ಕೊಂಡಕ್ಕೆ ಹೋಗುವೆನು.” ಎಂದುಹೇಳಿ ಖಾನನು ಹೊರಟುಹೋದನು.

ಆಗ ಮುಕ್ತಾಂಬೆಯು ಒಳಗಿನಿಂದ ಬಂದು ನಾಚಿಕೆಯಿಂದ ತನ್ನವೇಷವನ್ನು ತೆಗೆದು ಹಾಕುತ್ತಿದ್ದ ಶಂಕರರೆಡ್ಡಿಯನ್ನು ನೋಡಿ “ಅಯ್ಯಾ ನೀನು ಖಾನನೊಡನೆ ನಡೆಯಿಸಿದ ಸಂಭಾಷಣೆಯು ಅತಿ ವಿಚಿತ್ರವಾಗಿತ್ತು. ನನಗಾಗಿ ನಿಮ್ಮಿಬ್ಬರಿಗೂ ಬಹಳ ಶ್ರಮವಾಯಿತು.” ಎಂದು ಶಂಕರರೆಡ್ಡಿಯನ್ನು

ವಿಜಯಸಿಂಹನನ್ನು ಸತ್ಕರಿಸಿ, ವಿಜಯಸಿಂಹನನ್ನು ಕುರಿತು, "ಹೃದಯೇಶ್ವರರೇ! ನೀವು ದೂರದಲ್ಲಿದ್ದರೂ ನನ್ನನ್ನು ರಕ್ಷಿಸುವ ಭಾರ ತಮ್ಮದೇ. ನನ್ನನ್ನು ಮರೆಯಬೇಡಿ." ಎಂದು ಹೇಳಿ ಅವರಿಬ್ಬರನ್ನೂ ಕಳುಹಿಸಿ, ಆದಿನ ಮಲಮಲ್‌ಖಾನನಿಗೆ ಸಂಭವಿಸಿದ್ದ ಸಂಗತಿಯನ್ನು ಕೇಳಿ ರಾವು ಯಾವಮಾತ್ಯನು ಏನೆಂದುಕೊಳ್ಳುವನೋ ಎಂದು ಹೆದರುತ್ತಾ ಆ ಸಂಗತಿಯನ್ನು ಮರೆಮಾಚುವುದಕ್ಕಾಗಿ ಯೋಚಿಸಿಕೊಳ್ಳುತ್ತಾ ತನ್ನ ಮಂದಿರಕ್ಕೆ ಹೋದಳು.

ಮೂವತ್ತನೆಯ ಪ್ರಕರಣ.

ಯುದ್ಧ

ಒಂದು ದಿನ ತೋಫಲ್‌ಖಾನನು ತನ್ನ ಮಂದಿರದಲ್ಲಿ ಕುಳಿತುಕೊಂಡು ಏನನ್ನೋ ಯೋಚಿಸಿಕೊಳ್ಳುತ್ತಿದ್ದನು. ಆಗ ಫಕೀರನು ಅಲ್ಲಿಗೆ ಬಂದು ಸತ್ಕೃತನಾಗಿ ಉಚಿತಾಸನದಲ್ಲಿ ಕುಳಿತುಕೊಂಡು ಖಾನನನ್ನು ಕುರಿತು, "ಯವನಶ್ರೇಷ್ಠರೇ! ಕಾರ್ಯಾಲೋಚನಾಭಾರದಿಂದ ತಾವು ಬಳಲಿರುವಂತೆ ಕಾಣುವುದು. ಈ ಭಾಗದಲ್ಲಿ ನನ್ನಿಂದ ಏನಾದರೂ ಸಹಾಯವಾಗುವಂತಿದ್ದರೆ ತಮ್ಮ ಬಳಲಿಕೆಯಲ್ಲಿ ಸ್ವಲ್ಪಭಾಗವನ್ನು ನಾನೂ ವಹಿಸಬೇಕೆಂದಿರುವೆನು" ಎಂದು ಹೇಳಿದನು.

ಅದನ್ನು ಕೇಳಿ ಖಾನನು ಸಂತೋಷಪಟ್ಟು, "ಮಹಾತ್ಮರೇ! ರಾಜಕೀಯ ವ್ಯವಹಾರಗಳು ಸ್ವಲ್ಪ ತೊಡಕಾಗುತ್ತಿವೆ. ಇನ್ನು ಕೆಲವು

ದಿವಸಗಳಲ್ಲೇ ವಿಜಯನಗರದಮೇಲೆ ದಂಡಯಾತ್ರೆ ಮಾಡಬೇಕೆಂದು ಯೋಚಿಸಿದ್ದೇನೆ. ಇಂತಹ ಸಮಯದಲ್ಲಿ ನಮ್ಮ ರಹಸ್ಯಗಳನ್ನು ಇತರರಿಗೆ ತಿಳಿಯದಂತೆ ಇಟ್ಟುಕೊಂಡಿರುವುದು ಅತ್ಯಾವಶ್ಯಕ. ಇದಕ್ಕಾಗಿ ನಾನು ಬಹಳ ಪ್ರಯತ್ನಿಸುತ್ತಿರುವೆನು. ವಿಜಯಸಿಂಹನನ್ನು ಕಾರಾಗೃಹಕ್ಕೆ ಸೇರಿಸಿದ ವೃತ್ತಾಂತವು ತಿಳಿಯಬಾರದೆಂದು ಎಷ್ಟೋ ಕಷ್ಟಪಟ್ಟೆನು; ಆದರೆ ಅದೆಲ್ಲವೂ ವ್ಯರ್ಥವಾಯಿತು. ಹೇಗೋ ಈ ಸಂಗತಿಯು ಶತ್ರುಗಳಿಗೆ ತಿಳಿದು ಅವರು ಇಲ್ಲಿಗೆ ಬಂದು ಕಾರಾಗೃಹಾಧಿಕಾರಿಗೆ ಮೋಸಮಾಡಿ ವಿಜಯಸಿಂಹನನ್ನು ಬಿಡಿಸಿಕೊಂಡು ಹೋದರು. ಕಾರಾಗೃಹಾಧಿಕಾರಿಯಾದರೋ ಸತ್ಯವಂತನು; ಸ್ವಾಮಿ ಭಕ್ತನು. ಆದುದರಿಂದ ಅವನಲ್ಲಿ ಸಂಶಯಪಡಲು ಕಾರಣವಿಲ್ಲ. ಯಾರೋ ಒಬ್ಬನು ನನ್ನ ಮುದ್ರೆಯ ಉಂಗುರವನ್ನು ಅವನಿಗೆ ತೋರಿಸಿ, ನಾನು ವಿಜಯಸಿಂಹನನ್ನು ನೋಡಬೇಕೆಂದಿರುವೆನೆಂದೂ, ತನ್ನ ಸಹಾಯಕ್ಕಾಗಿ ಕಾರಾಗೃಹಾಧಿಕಾರಿಯು ಒಬ್ಬ ಬಂಟನನ್ನು ಕಳುಹಿಸಿ ಕೊಡಬೇಕೆಂದೂ, ಹೇಳಿ ವಿಜಯಸಿಂಹನನ್ನು ಕರೆದುಕೊಂಡು ಹೋದನಂತೆ. ಆ ಮನುಷ್ಯನು, ಉಪಾಯದಿಂದ ವಿಜಯಸಿಂಹನನ್ನೂ ಆ ಬಂಟನನ್ನೂ ದೇವಾಲಯದ ಬಳಿಗೆ ಕರೆದುಕೊಂಡುಹೋಗಿ ಆ ಬಂಟನನ್ನು ಚೆನ್ನಾಗಿ ಹೊಡೆದು ಕಳುಹಿಸಿದನಂತೆ. ನನ್ನ ಉಂಗುರವು ಶತ್ರುಗಳಿಗೆ ಹೇಗೆ ಸಿಕ್ಕಿತು? ಅದನ್ನು ಮಾಲತಿಗೆ ಕೊಟ್ಟಿದ್ದೆ. ಅವಳೇ ಅದನ್ನು ಶತ್ರುಗಳಿಗೆ ಕೊಟ್ಟಿರಬೇಕು. ಈಗ ಅವಳಿಗೆ ಚೆನ್ನಾಗಿ ಬಾಧಿಸಿದರೆ ರಾಜದ್ರೋಹಿಗಳ ಸುಳಿವು ಸಿಕ್ಕಿಹೋಗುವುದು. ಹೀಗೆ ಮಾಡುವುದು ಒಳ್ಳೆಯದಲ್ಲವೆ?" ಎಂದು ಫಕೀರನನ್ನು ಕೇಳಿದನು.

"ದುರ್ಗಾಧೀಶ್ವರರೇ! ಇದನ್ನು ಎಚ್ಚರಿಕೆಯಿಂದ ಆಲೋಚಿಸಬೇಕಾಗಿದೆ. ರಾಜದ್ರೋಹಿಗಳು ಇಂತಹ ಕಾರ್ಯಗಳನ್ನು ಮಾಡುತ್ತಿರುವಾಗ ಅವರನ್ನು ಹಿಡಿದು ಶಿಕ್ಷಿಸುವುದು ಆವಶ್ಯಕ. ಇಲ್ಲದಿದ್ದರೆ ಅವರು ನಿರಂ

ಕುಶಲರಾಗಿ, ತಮ್ಮ ಪ್ರಭುತ್ವವನ್ನೇ ನಡೆಯುಗೊಡಿಸರು. ಕಾರಾಗೃಹಗಳಲ್ಲಿರುವವರು ತಪ್ಪಿಸಿಕೊಂಡರೆ, ರಾಜ್ಯದ ಬಿಗಿಯು ತಪ್ಪಿತೆಂದು ಸುಲಭವಾಗಿ ಎಲ್ಲರಿಗೂ ತಿಳಿಯುವುದು. ಆದುದರಿಂದ ಅಂತಹ ದುಷ್ಟರನ್ನು ಹಿಡಿದು ಈಗಲೇ ಶಿಕ್ಷಿಸಬೇಕು. ಮಾಲತಿಯು ಬಹಳ ಚತುರಳು. ಅವಳು ಉಂಗುರವನ್ನು ಶತ್ರುಗಳಿಗೆ ಕೊಟ್ಟಿದ್ದರೂ ಕೊಟ್ಟಿರಬಹುದು. ಆದರೆ ನಾವು ಈಗ ಅವಳನ್ನು ಬಾಧಿಸುವುದು ಒಳ್ಳೆಯದಲ್ಲವೆಂದು ತೋರುವುದು. ಹಾಗೆ ಬಾಧಿಸಿದರೆ ಈ ಕೋಪವನ್ನು ಮನಸ್ಸಿನಲ್ಲಿಟ್ಟುಕೊಂಡು ತಮ್ಮನ್ನು ವರಿಸಬೇಕೆಂದಿರುವ ಅನಂಗಸೇನೆಯು ಮನಸ್ಸನ್ನು ಮುರಿಯಬಹುದು. ಫಲೋನ್ಮುಖವಾಗಿರುವ ಕಾರ್ಯವು ನಿಷ್ಫಲವಾಗುವುದಲ್ಲಾ ಎಂದು ವ್ಯಸನವಾಗುತ್ತಿದೆ. ಆದುದರಿಂದ ರಾಜದ್ರೋಹಿಗಳನ್ನು ಹಿಡಿಯಲು ಮತ್ತೊಂದು ಉಪಾಯವನ್ನು ಆಲೋಚಿಸುವುದು ಒಳ್ಳೆಯದಲ್ಲವೇ ?" ಎಂದು ಫಕೀರನು ಕೇಳಿದನು.

"ಪೂಜ್ಯರೇ ! ತಮ್ಮ ವಚನಗಳು ಯುಕ್ತವೇಸರಿ. ರಾಜಕಾರ್ಯಾಧೀನಚಿತ್ತನಾಗಿ ಈ ವಿಷಯವನ್ನು ಮರೆತಿದ್ದೆ. ಮಾಲತಿಯನ್ನು ಬಾಧಿಸಿದರೆ ನಮ್ಮ ಕೆಲಸವು ಕೆಡುವುದು." ಎಂದು ಖಾನನು ಮಾತನಾಡುತ್ತಿದ್ದಾಗ ಒಬ್ಬ ದ್ವಾರಪಾಲಕನು ಅಲ್ಲಿಗೆಬಂದು, "ಅಹಮ್ಮದ್ ನಗರದಿಂದ ಬಂದಿರುವ ಒಬ್ಬ ಸೇವಕನು ತಮ್ಮ ದರ್ಶನವನ್ನು ಮಾಡಬೇಕೆಂದು ಕಾದಿರುವನು. ಅಪ್ಪಣೆಯಾದರೆ ಇಲ್ಲಿಗೆ ಕರೆತರುವೆನು" ಎಂದು ವಿಜ್ಞಾಪಿಸಿದನು. ಖಾನನು ಸಮ್ಮತಿಸಲಾಗಿ ಆ ಸೇವಕನು ಅಹಮ್ಮದ್‌ನಗರದಿಂದ ಬಂದಿದ್ದವನನ್ನು ಕರೆತಂದು ಬಿಟ್ಟನು. ಅವನು ತಾನು ತಂದಿದ್ದ ಎರಡು ಪತ್ರಗಳನ್ನು ಭಕ್ತಿಪೂರ್ವಕವಾಗಿ ಖಾನನಿಗೆ ಸಮರ್ಪಿಸಿದನು. ಅವುಗಳಲ್ಲಿ ಒಂದರ ಒಕ್ಕಣೆಯು ಈರೀತಿಯಲ್ಲಿತ್ತು:—

"ರಾಯಚೂರು ದುರ್ಗಾಧೀಶ್ವರರ ಸನ್ನಿಧಾನದಲ್ಲಿ ಕಂಬರ್‌ಸೇನನ ವಿಜ್ಞಾಪನೆ.

ಪಯೋಮುಖವಿಷಕುಂಭದಂತಹ ಆ ಬ್ರಾಹ್ಮಣನ ಮಾತುಗಳನ್ನು ತಾವು ಹೇಗೆ ನಂಬಿರುವಿರೋ ನನಗೆ ತಿಳಿಯದು. ಅವನು ಶತ್ರುಪಕ್ಷದವನು. ಮಹಮ್ಮದೀಯ ರಾಜ್ಯಗಳನ್ನು ಬಟ್ಟಿಗೆ ಧ್ವಂಸಮಾಡಬೇಕೆಂದೇ ನಿರ್ಧರಮಾಡಿಕೊಂಡು ಆ ನಾಟಕವನ್ನು ಅಭಿನಯಿಸುತ್ತಿರುವನು. ಅದೃಷ್ಟವಶದಿಂದ ನನಗೆ ಸಕಾಲದಲ್ಲಿ ವರ್ತಮಾನವು ತಿಳಿದು ಅಲ್ಲಿಂದ ತಪ್ಪಿಸಿಕೊಂಡುಬಂದೆನು. ನಾನು ಹೇಳುವುದಕ್ಕೆ ನಿದರ್ಶನವಾಗಿ ಇದರೊಡನೆ, ತಿಮ್ಮರಸನು ರಾಮಯಮಂತ್ರಿಗೆ ಬರೆದಿರುವ ಕಾಗದವನ್ನು ಇಟ್ಟಿರುವೆನು. ಇದೇ ವಿಷಯವನ್ನೇ ಅನೇಕ ಮುಖದಿಂದ ಕೇಳಿ ಪರೀಕ್ಷಿಸಿ ನಾನು ಹೀಗೆ ನಿರ್ಧರಿಸಿಕೊಂಡಿರುವೆನು. ಸಧರ್ಮಿಗಳಾದ ನೀವುಗಳು ಎಚ್ಚತ್ತುಕೊಳ್ಳಬೇಕೆಂದು ಈ ಕಾಗದವನ್ನು ಬರೆದಿರುವೆನು ತಮ್ಮ ಮಿತ್ರ ಕಂಬರ್‌ಸೇ಼" ಹೀಗೆಂದು ಬರೆದಿದ್ದ ಕಂಬರ್‌ಸೇನನ ಪತ್ರವನ್ನೂ ತಿಮ್ಮರಸನ ಪತ್ರವನ್ನೂ ಓದಿಕೊಂಡನು. ಆ ಪತ್ರಗಳನ್ನು ಗಟ್ಟಿಯಾಗಿ ಓದಿದಾಗ ಫಕೀರನು "ದುರ್ಗಾಧೀಶ್ವರರೇ ಈ ಸಂಗತಿಯು ನಿಶ್ಚಯವೆಂದೇ ತೋರುವುದು. ಈಚೆಗೆ ಈ ವಿಷಯವನ್ನು ಕುರಿತು ನಾನೂ ಕೇಳಿರುವೆನು. ಆದರೆ ಚೆನ್ನಾಗಿ ಪರೀಕ್ಷಿಸದೆ ರಾಮಯನಲ್ಲಿರುವ ನಿಮ್ಮ ಮೈತ್ರಿಯನ್ನು ಕೆಡಿಸಿದ ಪಕ್ಷದಲ್ಲಿ ಒಂದುವೇಳೆ ಪಶ್ಚಾತ್ತಾಪಪಡಬೇಕಾದೀತೆಂದು ಸದ್ಯಕ್ಕೆ ಸುಮ್ಮನಿದ್ದೆನು. ರಾಮಯನ ಕೆಲವು ಚರ್ಯಗಳನ್ನು ಪರೀಕ್ಷಿಸಿದರೆ ವಿಪರೀತವಾಗಿ ಕಾಣುವುದು" ಎಂದು ಹೇಳಿದನು.

"ಮಹನೀಯರೇ! ಹಾಗಾದರೆ ರಾಮಯನು ಅಂತಹ ಕಪಟಿಯೇ? ಹಾಗಾದಪಕ್ಷದಲ್ಲಿ ಪರಪುರುಷನು ಬರಕೂಡದ ಅಂತಃಪುರದಲ್ಲಿದ್ದ ಆನೆಗೆ

ಸೇನೆಯನ್ನು ಬಹು ಪ್ರಯಾಸದಿಂದ ಇಲ್ಲಿಗೆ ಕರತಂದುದು ಏಕೆ? ಈ ಪತ್ರವು ಕೃತಕವಾಗಿದ್ದರೂ ಇರಬಹುದು" ಎಂದು ಖಾನನು ಹೇಳಿದನು.

"ದುರ್ಗಾಧಿಪತೀ! ತಾವು ನಂಬಿ, ನಂಬದಿರಿ. ಈ ಸಂದರ್ಭದಲ್ಲಿ ನಾನು ಕೆಲವು ಮಾತುಗಳನ್ನು ಆಡಬೇಕಾಗಿದೆ. ಗಮನವಿಟ್ಟು ಕೇಳಿರಿ. ನೀತಿವಿಶಾರದನೂ ಬುದ್ಧಿವಂತನೂ ಆದ ರಾಮಯಮಂತ್ರಿಯು ಸ್ವಜಾತಿಯವರಲ್ಲಿ ವಿರೋಧವನ್ನುಂಟುಮಾಡಿಕೊಂಡು ಹಿಂದುಗಳ ಕುಲಕ್ಕೆ ಶತ್ರುಗಳಾಗಿರುವ ನಮ್ಮ ಮರೆಯನ್ನು ಹೊಗುತ್ತಿದ್ದಾನೆಯೇ?" ಎಂದು ಫಕೀರನು ಕೇಳಿದನು.

ಹೀಗೆ ಇವರಿಗೆ ಸಂಭಾಷಣೆ ನಡೆಯುತ್ತಿದ್ದಾಗ ಒಬ್ಬ ದ್ವಾರಪಾಲಕನು ತ್ವರೆಯಿಂದ ಬಂದು "ಮಹಾಪ್ರಭುಗಳೇ! ಗೋಲಕೊಂಡದ ಸೇನಾಪತಿಯ ಕಡೆಯಿಂದ ಒಬ್ಬ ಚಾರನು ಬಂದಿರುವನು. ಅಪ್ಪಣೆಯಾದರೆ ಒಳಕ್ಕೆ ಬಿಡುವೆನು ಎಂದು ಹೇಳಿ ಆತನ ಅನುಜ್ಞೆಯನ್ನು ಪಡೆದು ಆ ಚಾರನನ್ನು ಒಳಕ್ಕೆ ಬಿಟ್ಟನು. ಅವನು ತಾನು ತಂದಿದ್ದ ಒಂದು ಕಾಗದವನ್ನು ಖಾನನಿಗೆ ಸಮರ್ಪಿಸಿದನು. ಅದರಲ್ಲಿ ಹೀಗೆ ಬರೆದಿತ್ತು:—

"ರಾಯದುರ್ಗದುರ್ಗಾಧೀಶ್ವರರಾದ ತೋಫಲ್‌ಖಾನರ ಸನ್ನಿಧಾನಕ್ಕೆ. ವಿಜ್ಞಾಪನೆಗಳು.

ಗೋಮುಖವ್ಯಾಘ್ರದಂತಿರುವ ಆ ಬ್ರಾಹ್ಮಣನು ಹೇಗೆ ತಮಗೆ ವಿಶ್ವಾಸಪಾತ್ರನಾದನೋ ನನಗೆ ತಿಳಿಯದು. ಆ ದುರಾತ್ಮನು ನನಗೆ ಬಬ್ಬಾಕೆಯನ್ನು ಮದುವೆಮಾಡಿಕೊಡುವೆನೆಂದು ಒಪ್ಪಿಸಿ, ನನಗೆ ಸಹಿಸಲಾರದಷ್ಟು ಅವಮಾನವನ್ನುಂಟುಮಾಡಿ ಕಳುಹಿಸಿದನು. ಹಾಗೆ ಪರಾಭೂತನಾದ ನಾನು ತಮ್ಮನ್ನು ನೋಡುವುದಕ್ಕೆ ಮುಖವಿಲ್ಲದೆ, ಹಾಗೆಯೇ ಹೊರಟುಬಂದೆನು. ತಮಗೂ ಇಂತಹ ಅಪಾಯವು ಬಾರದಿರಲಿ ಎಂದು

ಈ ಪತ್ರವನ್ನು ಬರೆದಿರುವೆನು. ರಾಮಯನಿಗೆ ಸಹಾಯಮಾಡುವುದಾದರೆ ನಾನು ತಮ್ಮೊಡನೆ ಏಕೀಭವಿಸಲಾರೆನೆಂದು ಖಿನ್ನನಾಗಿರುವ,

ತಮ್ಮ ಮಿತ್ರ,

ಮಲಮಲಖಾನ್."

ಮೊದಲೇ ಅಂಕುರಿಸಿದ್ದ ಸಂಶಯದ ಬೀಜವು ಈಗ ಮತ್ತೂ ಚೆನ್ನಾಗಿ ಅಭಿವೃದ್ಧಿಯಾಯಿತು. "ರಾಮಯನು ಮಲಮಲಖಾನನಿಗೆ ತೋರಿಸಿದ ಸ್ತ್ರೀ ಯಾರು? ಅದರಿಂದ ಆವನಿಗೆ ಏನು ಪರಾಭವವಾಗಿರಬಹುದು?" ಎಂದು ಕೇಳಿದನು.

"ತುರುಷ್ಕಶ್ರೇಷ್ಠರೇ! ಆಕೆಯು ಅನಂಗಸೇನೆಯೇ ಆಗಿರಬೇಕು; ಬೇಟೆಗಾರನು ದುಷ್ಟಮೃಗಗಳನ್ನು ಹಿಡಿಯುವುದಕ್ಕಾಗಿ ಬೇರೇ ಮೃಗಗಳನ್ನು ಉಪಯೋಗಿಸುವಹಾಗೆ ಮುಹಮ್ಮದೀಯರನ್ನು ನಾಶಪಡಿಸುವುದಕ್ಕಾಗಿ ಅನಂಗಸೇನೆಯ ಸಹಾಯವನ್ನು ರಾಮಯನು ಸಂಪಾದಿಸಿಕೊಂಡಿರುವಂತಿದೆ. ರಾಮಯನು, ಈಕೆಯನ್ನು ಮಲಮಲಖಾನನಿಗೆ ಮದುವೆ ಮಾಡಿಸುವುದಾಗಿ ಆಸೆಹುಟ್ಟಿಸಿ ಕರೆದುಕೊಂಡು ಹೋಗಿರಬಹುದು. ಅಲ್ಲಿ ಮಲಮಲಖಾನನಿಗೆ ಪರಾಭವ ಉಂಟಾಗಲು, ಆತನು ಈಗ ತಮ್ಮನ್ನು ಎಚ್ಚರಿಸಿರುವನು" ಎಂದು ಫಕೀರನು ವಿವರಿಸಿದನು.

"ಮಹನೀಯರೆ! ಇದರಿಂದ ರಾಮಯಮಂತ್ರಿಯು ಮೋಸಗಾರನೆಂದು ಭಾವಿಸುವುದು ಹೇಗೆ? ನನ್ನ ನಿಮಿತ್ತವಾಗಿಯೇ ಈ ಕಾಂತೆಯನ್ನು ಪರಸ್ಥಳದಿಂದ ತಂದುಕೊಟ್ಟಿರುವನು. ರಾಮಯಮಂತ್ರಿಯು ಮಾಡಿದ ದಂಡನೆಯು ಯುಕ್ತವಾದುದೇ. ರಾಮಯಮಂತ್ರಿಯು ದಯದಿಂದ ಆತನನ್ನು ಪ್ರಾಣಸಹಿತವಾಗಿ ಹೋಗಗೊಡಿಸಿದನೆಂದು ತೋರುವುದು. ನಾನೇ ಆಗಿದ್ದರೆ ಅವನನ್ನು ಕೊಂದುಬಿಡುತ್ತಿದ್ದೆನು" ಎಂದು ಖಾನನು ಹೇಳಿದನು.

ಅದಕ್ಕೆ—“ ದುರ್ಗಾಧೀಶ್ವರರೇ ! ನಾವು ಒಂದು ವಿಷಯವನ್ನು ಯೋಚಿಸಬೇಕಾಗಿದೆ. ತಿಮ್ಮರಸನು ಬರೆದಿರುವ ಕಾಗದದಲ್ಲಿ ಅನಂಗಸೇನೆಯನ್ನು ಎಚ್ಚರಿಕೆಯಿಂದ ಕಾಪಾಡುತ್ತಿರಬೇಕೆಂದು ಬರೆದಿರುವನು. ಇದನ್ನು ಜ್ಞಾಪಕದಲ್ಲಿಟ್ಟುಕೊಂಡೇ ರಾಮಯನು ಖಾನನಿಗೆ ಪರಾಭವವನ್ನುಂಟುಮಾಡಿರುವನು. ತಮಗೂ ಹಾಗೆಯೇ ಆಗುವುದರಲ್ಲಿ ಅಡ್ಡಿಯೇನಿರುವುದು? ” ಎಂದು ಫಕೀರನು ಹೇಳಿದನು.

ಈ ಮಾತುಗಳನ್ನು ಕೇಳಿ ಖಾನನಿಗೆ ಕೋಪಬಂತು. “ ರಾಮಯಮಂತ್ರಿಯು ನನಗೆ ಪರಾಭವವನ್ನುಂಟುಮಾಡಿ ಎಲ್ಲಿಗೆ ಹೋಗುವನು? ನನ್ನನ್ನು ವರಿಸದೆ ಅನಂಗಸೇನೆಯು ಎಲ್ಲಿಗೆ ಹೋಗುವಳು ನೋಡೋಣ. ಈಗಲೇ ಅವರಿಬ್ಬರನ್ನೂ ಕರೆಯಿಸಿ ಮುಖತಃ ವಿಚಾರಮಾಡುವೆನು. ಸಂಶಯವೇನಾದರೂ ತೋರಿಬಂದರೆ ಈಗಲೇ ಅವರಿಬ್ಬರು ನೀಚರನ್ನೂ ಕೊಂದುಬಿಡುವೆನು ” ಎಂದು ಕೋಫಲಖಾನನು ಗರ್ಜಿಸಿದನು.

“ ಯವನಶ್ರೇಷ್ಠರೇ ! ಹೀಗೆ ಕೋಪಮಾಡಿದರೆ ಫಲವೇನು ? ಈಗಾಗಲೇ ತಾವು ತಮ್ಮ ಕೋಪವನ್ನು ರಾಮಯನಿಗೆ ತೋರ್ಪಡಿಸಿದರೆ ಮಾಯಾವಿಯಾದ ಅವನು ಏನಾದರೂ ಕುತಂತ್ರಗಳನ್ನುಮಾಡಿ ತಪ್ಪಿಸಿಕೊಂಡು ಅನಂಗಸೇನೆಯೊಡನೆ ಹೊರಟುಹೋಗುವನು. ಆದುದರಿಂದ ಪೂರ್ವದಂತೆಯೇ ಅವನೊಡನೆ ಸ್ನೇಹದಿಂದಿರುತ್ತಾ ಅನಂಗಸೇನೆಯ ಸ್ನೇಹವನ್ನು ದೃಢಪಡಿಸಿಕೊಂಡರೆ ಒಳ್ಳೆಯದು. ಆಕೆಯನ್ನು ವಶಪಡಿಸಿಕೊಂಡ ಮೇಲೆ ರಾಮಯಮಂತ್ರಿಗೆ ಏನನ್ನು ಬೇಕಾದರೂ ಮಾಡಬಹುದು. ಈಗಲಾದರೂ ರಾಮಯನು ಮಾಯಾವಿ ಎಂದು ತಿಳಿಯಿತಲ್ಲಾ ! ” ಎಂದು ಫಕೀರನು ಹೇಳಿದನು.

“ಪೂಜ್ಯರೇ ! ಆ ರಾಮಯನು ಪರಮಶತ್ರುವೆಂದು ಈಗ ತಿಳಿಯಿತು. ಅವನು ಪ್ರಯತ್ನಿಸಿದ ಒಂದು ಕೆಲಸವಾದರೂ ಕೊನೆಗಾಣಲಿಲ್ಲ.

ಮಹಮ್ಮದೀಯ ರಾಜ್ಯಗಳು ಪುನಃ ಬೇರ್ಪಟ್ಟುಹೋದುವು. ಅದು ಹೇಗಾದರೂ ಆಗಲಿ. ಅನಂಗಸೇನೆಯು ನನಗೆ ದಕ್ಕಿದಂತೆಯೇ ಸರಿ. ಅವಳು ಸಂಪೂರ್ಣವಾಗಿ ನನಗೆ ವಶವಾದ ಮೇಲೆ ಆ ನೀಚನನ್ನು ಸೆರೆಯಲ್ಲಿಟ್ಟು ಕೊಲ್ಲಿಸುವೆನು" ಎಂದು ಖಾನನು ಹೇಳಿದನು.

ಇವರು ಹೀಗೆ ಮಾತನಾಡುತ್ತಿದ್ದಾಗ ಝುಂಝಾಮಾರುತದಂತೆಯೂ ಬಿರುಗಾಳಿಯಿಂದ ಉಲ್ಲೋಲ ಕಲ್ಲೋಲವಾದ ಸಮುದ್ರದ ಘೋಷದಂತೆಯೂ ರಭಸವಾಗಿದ್ದ ಒಂದು ಧ್ವನಿಯು ಕೇಳಿಸಿತು. ಹಾಗೆಯೇ ಅದನ್ನು ಆಲಿಸಿ ಕೇಳುತ್ತಿರಲು ಆ ಧ್ವನಿಯು ಹತ್ತಿರಹತ್ತಿರಕ್ಕೆ ಬರುವಂತಿತ್ತು. ಅದನ್ನು ಕೇಳಿ ಪುರಜನರು ಭೀತರಾದರು. ದುರ್ಗರಕ್ಷಕ ಭಟರಲ್ಲಿ ಕೆಲವರು ದುರ್ಗದ್ವಾರವನ್ನು ಬಂಧಿಸಿ ತಮ್ಮ ತಮ್ಮ ಆಯುಧಗಳನ್ನು ಉಪಯೋಗಿಸುವುದಕ್ಕೆ ಸಿದ್ಧಪಡಿಸಿಕೊಳ್ಳುತ್ತಿದ್ದರು. ಒಬ್ಬರಿಬ್ಬರು ಭಟರು ಖಾನರ ಬಳಿಗೆ ಓಡುತ್ತಾ ಹೋಗಿ, "ನಮ್ಮ ದುರ್ಗವನ್ನು ಮುತ್ತುವುದಕ್ಕೆ ಒಂದು ದೊಡ್ಡ ಸೈನ್ಯವು ಬರುತ್ತಿದೆ" ಎಂದು ಹೇಳಿದರು. ಆಗ ಖಾನನು ಜಗ್ಗನೆ ಎದ್ದು ದುರ್ಗದ ಗೋಪುರವನ್ನು ತಾನೇ ಹತ್ತಿ ನೋಡಲು, ಸೈನ್ಯವು ಕಂಡುಬಂತು. ಮೊದಲು ಅದು ತನ್ನ ಪ್ರಭುವಾದ ಆದಿಲ್‌ಷಹನ ಸೈನ್ಯವೆಂದು ಭಾವಿಸಿದನು. ಆದರೆ ಆಸೈನ್ಯದಲ್ಲಿ ಬಹಳ ಎತ್ತರವಾದ ಧ್ವಜವು ಕಾಣುತ್ತಿದ್ದಕಾರಣ ಆ ಸೈನ್ಯವು ವಿಜಯನಗರದಿಂದ ಬಂದಿರಬೇಕೆಂದು ನಿರ್ಧರಿಸಿದನು. ತನ್ನ ದುರ್ಗವನು ಶತ್ರುಗಳು ಮುತ್ತಿದ ಸಂಗತಿಯನ್ನು ತನ್ನ ಪ್ರಭುವಿಗೆ ತಿಳಿಸುವುದು ಒಳ್ಳೆಯದೆಂದು ಭಾವಿಸಿ, ಇಬ್ಬರು ಭಟರನ್ನು ಕರೆದು ಅವರ ಕೈಯಲ್ಲಿ ಎರಡು ಕಾಗದಗಳನ್ನು ಕೊಟ್ಟು ಬಿಜಾಪುರಕ್ಕೆ ಕಳುಸಿದನು. ಬಳಿಕ ಅವನು ಬಹಳ ಎಚ್ಚರಿಕೆಯಿಂದ ದುರ್ಗದಲ್ಲಿ ಎಲ್ಲೆಲ್ಲೂ ಸಂಚರಿಸುತ್ತಾ ಭಟರನ್ನು ಪ್ರೋತ್ಸಾಹಿಸುತ್ತಾ ಸುತ್ತುತ್ತಿದ್ದನು. ಎಂತಹ ಸೈನ್ಯ ಬಂದರೂ ದುರ್ಗವನ್ನು ಹಿಡಿದುಕೊಳ್ಳ

ಲಾರದೆಂದು ಭಾವಿಸಿದನು. ಆದರೆ ಮೇರೆದಪ್ಪಿದ ಸಮುದ್ರದಂತೆ ಇದ್ದ ಸೈನ್ಯವನ್ನು ನೋಡಿ ಖಾನನ ಮನಸ್ಸು ಸಂಶಯಗ್ರಸ್ತವಾಯಿತು. ದೊಡ್ಡ ದೊಡ್ಡ ಮರಗಳಿಂದ ದಪ್ಪ ಕೊಂಬೆಗಳನ್ನು ಅವಲೀಲೆಯಿಂದ ಮುರಿದು ತಿನ್ನುತ್ತಿದ್ದ ಮದಿಸಿದ ಆನೆಗಳನ್ನೂ, ಕೊಬ್ಬಿ ಕುಣಿಯುತ್ತಿದ್ದ ಅಸಂಖ್ಯಾತವಾದ ಕುದುರೆಗಳನ್ನೂ ಮದೋದ್ಧತರಾದ ಕಾಲುಬಲದವರನ್ನೂ ನೋಡಿದ್ದರೆ ಎಂತಹ ಶೂರನಿಗಾದರೂ ಮನಸ್ಸು ಕುಗ್ಗದೆ ಇರುತ್ತಲಿರಲಿಲ್ಲ. ಆ ಸೈನ್ಯದಲ್ಲಿ ಒಂದೊಂದು ಭಾಗವನ್ನು ಒಬ್ಬೊಬ್ಬ ವೀರಾಗ್ರೇಸರನು ನೋಡಿಕೊಳ್ಳುತ್ತಾ ಬಹಳ ಓರಣದಿಂದ ನಡೆಯಿಸಿಕೊಂಡು ಬರುತ್ತಿದ್ದನು. ಕಾಮನಾಯಕ ಎಂಬಾತನು ಬಗೆಬಗೆಯ ಆಯುಧಗಳನ್ನು ಧರಿಸಿದ್ದ ಮೂವತ್ತು ಸಾವಿರ ಕಾಲುಬಲದವರಿಗೂ ಒಂದು ಸಾವಿರ ಕುದುರೆಯ ಸವಾರರಿಗೂ ಹದಿನಾರು ಮದದ ಆನೆಗಳ ತುಕ್ಕಡಿಗೂ ಅಧಿಪತಿಯಾಗಿದ್ದನು. ಇವನು ಸೈನ್ಯದ ಮುಂಭಾಗದಲ್ಲಿದ್ದನು. ಈತನಿಗೆ ಸ್ವಲ್ಪ ಹಿಂದೆ ತ್ರಿಯಂಬಕ ರಾವ್ ಎಂಬ ದಳಪತಿಯು ಐವತ್ತು ಸಾವಿರ ಕಾಲು ಬಲ ಎರಡು ಸಾವಿರ ಕುದುರೆಗಳು, ಇಪ್ಪತ್ತು ಆನೆಗಳು ಇಷ್ಟು ಸೈನ್ಯವನ್ನು ತನ್ನ ಅಧೀನದಲ್ಲಿಟ್ಟುಕೊಂಡು ಬಹಳ ಅಚ್ಚುಕಟ್ಟಾಗಿ ಕರೆತರುತ್ತಿದ್ದನು. ಆಬಳಿಕ ಅರವತ್ತು ಸಾವಿರ ಕಾಲುಬಲ, ಮೂರು ಸಾವಿರದ ಐನೂರು ಕುದುರೆಗಳು ಮೂವತ್ತು ಆನೆಗಳು—ಇಷ್ಟು ಸೈನ್ಯಕ್ಕೆ ಅಧಿಪತಿಯಾಗಿದ್ದ ತಿಮ್ಮಪ್ಪ ನಾಯಕನೆಂಬಾತನು ಬಹಳ ವಿಜೃಂಭಣೆಯಿಂದ ತ್ರಿಯಂಬಕ ರಾಯನನ್ನು ಹಿಂಬಾಲಿಸುತ್ತಿದ್ದನು. ಈ ತಿಮ್ಮಪ್ಪನಾಯಕನ ಹಿಂದೆ ಬರುತ್ತಿದ್ದ ಆದಪ್ಪನಾಯಕನೆಂಬ ಮಹಾವೀರನು ಬಹಳ ಕ್ರಮದಿಂದಲೂ ವೈಭವದಿಂದಲೂ ನಡೆಯಿಸಿಕೊಂಡು ಬರುತ್ತಿದ್ದ ಒಂದು ಲಕ್ಷ ಪದಾತಿ ಬಲವೂ, ಐದುಸಾವಿರ ಕುದುರೆಸೈನ್ಯವೂ ಐವತ್ತು ಆನೆಗಳೂ ನೋಡುವವರಿಗೆ ಭಯಂಕರವಾಗಿ ತೋರುತ್ತಿದ್ದುವು. ಆತನ ಹಿಂದೆ ಇದಕ್ಕೂ ದೊಡ್ಡದಾದ ಸೈನ್ಯವನ್ನು

ಬಹಳ ವಿತರಣೆಯಿಂದ ನಡೆಯಿಸಿಕೊಂಡು ಕೊಂಡಾರೆಡ್ಡಿಯ ಮಗನು ಬರುತ್ತಿದ್ದನು. ಆ ತುಕ್ಕಡಿಯ ಹಿಂದೆ ತಿಮ್ಮರಸನ ತಮ್ಮನಾದ ಸಾಳುವಗೋವಿಂದರಾಜನು ಮೂವತ್ತು ಸಾವಿರ ಕಾಲುಬಲವನ್ನೂ ಒಂದುಸಾವಿರ ಕುದುರೆಗಳನ್ನೂ ಹತ್ತು ಮತ್ತೇಭಗಳನ್ನೂ ಸ್ವಲ್ಪವೂ ಕ್ರಮತಪ್ಪದಂತೆ ನಡೆಯಿಸಿಕೊಂಡು ಬರುತ್ತಿದ್ದನು. ಹೀಗೆಯೇ ಇವರ ಹಿಂದೆ ಮಧುರೆಯ ನಾಯಕನೂ ಮೈಸೂರಿನ ರಾಯಭಾರಿಯ ಕುಮಾರನೂ, ವ್ಯಂಗಾಪುರಾಧ್ಯಕ್ಷನೂ, ಅನೇಕ ಕ್ಷತ್ರಿಯವೀರರೂ ತಮ್ಮ ತಮ್ಮ ಸೈನ್ಯಗಳನ್ನು ವೈಭವದಿಂದ ಕರೆದುಕೊಂಡು ಬರುತ್ತಿದ್ದರು. ಬಳಿಕ ವಿಜಯನಗರ ಸಾಮ್ರಾಜ್ಯ ಲಕ್ಷ್ಮೀಧುರಂಧರರಾದ . ಕೃಷ್ಣದೇವರಾಯರು ತಮ್ಮ ರಾಜಚಿಹ್ನಸಮೇತರಾಗಿ ಸ್ವತಃ ಒಂದು ಸೈನ್ಯವಿಭಾಗವನ್ನು ನೋಡಿಕೊಳ್ಳುತ್ತ ಬರುತ್ತಿದ್ದರು. ವಿಜಯನಗರವು ಶತ್ರುರಾಜರೊಡನೆ ಹಿಂದೆ ನಡೆಯಿಸಿದ್ದ ಯಾವಯುದ್ಧದಲ್ಲೂ ಇಷ್ಟು ಸೈನ್ಯವು ಒಟ್ಟುಗೂಡಿರಲಿಲ್ಲ. ಮಹಮದೀಯ ರಾಜ್ಯಗಳು ಮೂರೂ ಒಟ್ಟು ಗೂಡಿ ಬರುವೆಂದು ಇಷ್ಟು ಸೈನ್ಯವನ್ನು ತಂದಿದ್ದರು. ರಾಯರ ಸೈನದವರಲ್ಲಿ ಅನೇಕರಿಗೆ, ಯುದ್ಧಗಳಲ್ಲಿ ತಮ್ಮ ಶಕ್ತಿಸಾಹಸಗಳನ್ನು ತೋರಿಸುವುದಕ್ಕೆ ಅವಕಾಶವೇ ಇಲ್ಲದೆ ಇಂತಹ ಸಂದರ್ಭವು ಸಿಕ್ಕೀತೇ ಎಂದು ಅವರು ಹಾರೈಸುತ್ತಿದ್ದರು. ಆದುದರಿಂದ ಅವರ ಉತ್ಸಾಹವು ತುಂಬಿತುಳುಕುತ್ತಿತ್ತು.

ಮೂವತ್ತೊಂದನೆಯ ಪ್ರಕರಣ.

ಪರಾಜಯ.

ದಕ್ಷಿಣ ಹಿಂದೂಸ್ಥಾನದ ರಾಜ್ಯಗಳಲ್ಲಿ ವಿಜಯನಗರವನ್ನು ಬಿಟ್ಟರೆ, ಬಿಜಾಪುರವೇ ಅನೇಕವಿಧವಾದ ಸಹಾಯಸಂಪತ್ತುಗಳನ್ನು ಪಡೆದಿದ್ದ ರಾಜ್ಯ ವೆನ್ನಬಹುದು. ಬಿಜಾಪುರ ರಾಜ್ಯಕ್ಕೆ ಮೂಲಪುರುಷನು ಯೂಸೆಫ್‌ಆದಿಲ್‌ಷಹನು. ಈತನು ಉತ್ಕೃಷ್ಟವಾದ ಮಹಮ್ಮದೀಯಕುಲವೊಂದರಲ್ಲಿ ಹುಟ್ಟಿದವನು. ಕ್ರಿ. ಶ. ೧೪೬೯ ನೆಯ ವರುಷದಲ್ಲಿ ಈತನು ಹಿಂದೂಸ್ಥಾನಕ್ಕೆ ಬಂದು ಆಗ ದಕ್ಷಿಣದೇಶದಲ್ಲಿ ಸುಪ್ರಸಿದ್ಧನಾಗಿದ್ದ ಮಹಮುದ್‌ಗವಾನನ ದಯೆಯನ್ನು ಸಂಪಾದಿಸಿ ಬಿಜಾಪುರಕ್ಕೆ ಅಧಿಕಾರಿಯಾದನು. ಬಹಮನಿ ವಂಶದ ದೊರೆಯಾದ ಮಹಮ್ಮದ್‌ಷಹನು ಕಾಲವಾದಬಳಿಕ ಬಿಜಾಪುರದಲ್ಲಿ ಆದಿಲ್‌ಷಹನೇ ಸ್ವತಂತ್ರನಾದನು. ಆ ಬಳಿಕ ಬಿಜಾಪುರದಲ್ಲಿ ಈತನು ಅನೇಕ ಸುಂದರಮಂದಿರಗಳನ್ನು ಕಟ್ಟಿಸಿ ರಾಜಧಾನಿಯನ್ನು ಸಿಂಗರಿಸಿದನು. ಈತನು ಬದುಕಿದ್ದಷ್ಟುಕಾಲವೂ ಯುದ್ಧಗಳನ್ನು ಮಾಡುತ್ತಾ ರಾಜ್ಯವನ್ನು ವೃದ್ಧಿಪಡಿಸಿಕೊಳ್ಳುತ್ತಿದ್ದನು. ಪಾಶ್ಚಾತ್ಯದೇಶದಿಂದ ಬಂದು ಗೋವಾಪಟ್ಟಣದಲ್ಲಿ ನೆಲೆಸಿದ್ದ ಪೋರ್ಚುಗೀಸರನ್ನೂ ಸೋಲಿಸಿ ಗೋವಾಪಟ್ಟಣವನ್ನು ಸ್ವಾಧೀನಪಡಿಸಿಕೊಂಡಿದ್ದನು. ಹೀಗೆಯೇ ಅನೇಕ ರಾಜ್ಯಗಳನ್ನುಜಯಿಸಿ ಬಹಳ ಪ್ರಸಿದ್ಧನಾಗಿ ಕ್ರಿ.ಶ. ೧೫೧೦ರಲ್ಲಿ ಈದೊರೆಯು ಕಾಲವಶನಾದನು. ಈತನ ಕುಮಾರನೇ ಪಾಠಕರಿಗೆ ಪರಿಚಿತನಾಗಿರುವ ಇಸ್ಮಾಯಿಲ್ ಆದಿಲ್‌ಷಹನು. ಈತನು ಪಟ್ಟಕ್ಕೆ ಬಂದಾಗ ಇನ್ನೂ ಒಂಬತ್ತು ವರುಷದ ಹುಡುಗನಾಗಿದ್ದನು. ಕಮಾಲ್‌ಖಾನ್ ಎಂಬ ಸರದಾರನು ಈ ಬಾಲಕನನ್ನು ಕೊಂದು

ತಾನೇ ದೊರೆಯಾಗಬೇಕೆಂದು ಪ್ರಯತ್ನಿಸಿದನು. ಆದರೆ ರಾಜಮಾತೆಯು ಈ ಸುಳಿವನ್ನು ತಿಳಿದು ಕಮಾಲ್‌ಖಾನನನ್ನು ಕೊಲ್ಲಿಸಿದಳು. ಬಂದಾನೊಂದು ಕಾಲದಲ್ಲಿ ವರಾಡದ ದೊರೆಯೂ ಬೀದರ್ ಅಹಮ್ಮದ್ ನಗರದ ದೊರೆಗಳೂ ಬಹಮನಿ ರಾಜನೊಡನೆ ಕಲೆತು ತನ್ನಮೇಲೆ ಯುದ್ಧಕ್ಕೆ ಬರಲು ಇಸ್ಮಾಯಿಲ್ ಆದಿಲ್‌ಷಹನು ತನ್ನ ಯುಕ್ತಿಬಲದಿಂದ ಅವರುಗಳಲ್ಲಿ ಮಿತ್ರಭೇದವನ್ನುಂಟುಮಾಡಿ ಅವರನ್ನು ಚದರಿಸಿದನು. ಈ ಕಥೆಯ ಕಾಲದಲ್ಲಿ ಆದಿಲ್‌ಷಹನಿಗೆ ಸುಮಾರು ಇಪ್ಪತ್ತುವರುಷಗಳ ವಯಸ್ಸು ಎಂದು ಹಿಂದೆಯೇ ಹೇಳಿದೆ. ವಯಸ್ಸು ಸಣ್ಣದಾಗಿದ್ದರೂ ಈತನು ರಾಜಭೋಗಗಳಿಗೂ ನೀಚರ ದುರ್ಬೋಧನೆಗೂ ಒಳಗಾಗದೆ, ರಾಜ್ಯವನ್ನು ಬಹಳ ವಿತರಣೆಯಿಂದ ಆಳುತ್ತಿದ್ದನು. ಬೇರೆ ಬೇರೆ ಇರುತ್ತಿದ್ದ ಮಹಮ್ಮದೀಯ ರಾಜ್ಯಗಳು ರಾಮರಾಯಮಂತ್ರಿಯ ಸಹಾಯದಿಂದ ಒಟ್ಟಾದುದಕ್ಕಾಗಿ ಸಂತೋಷಿಸುತ್ತಾ ಮುಂದೆ ನಡೆಯುವುದಕ್ಕಿದ್ದ ಯುದ್ಧಕ್ಕೆ ಸಿದ್ಧಪಡಿಸಿಕೊಳ್ಳುತ್ತಿದ್ದನು.

ಒಂದುದಿನ ಆದಿಲ್‌ಷಹನು ಸಭೆಯಲ್ಲಿ ಕುಳಿತಿದ್ದಾಗ ರಾಯಚೂರಿನಿಂದ ಬಂದಿದ್ದ ಒಬ್ಬ ಸೇವಕನು ಕೆಲವು ಕಾಗದಗಳನ್ನು ತಂದು ಒಪ್ಪಿಸಿದನು. ಅವುಗಳಲ್ಲಿ ಒಂದರೊಳಗೆ ರಾಮರಾಯಮಂತ್ರಿಯು ಶತ್ರುಪಕ್ಷದವನೆಂದೂ, ಅವನು ತನ್ನಕಡೆಯ ದಳಪತಿಗಳಿಗೆ ಮಾಡಿಸಿದ ಅವಮಾನಕ್ಕಾಗಿ ಗೋಲ್‌ಕೊಂಡ ಅಹಮ್ಮದ್ ನಗರಗಳ ಅಧಿಪತಿಗಳು ಯುದ್ಧದಲ್ಲಿ ಸಹಾಯಕ್ಕೆ ಬಾರಲಾರರೆಂದೂ ರಾಯರ ಸೈನ್ಯಗಳು ಬಂದು ರಾಯಚೂರನ್ನು ಮುತ್ತಿರುವುವೆಂದೂ, ತನ್ನ ಸಹಾಯಕ್ಕಾಗಿ ಸೈನ್ಯಗಳನ್ನು ಕಳುಹಿಸಿ ಕಾಪಾಡಬೇಕೆಂದೂ ತೋಫಲ್‌ಖಾನನು ಬರೆದುಕೊಂಡಿದ್ದನು. ಇನ್ನೆರಡು ಕಾಗದಗಳು ತೋಫಲ್‌ಖಾನನಿಗೆ ಕಂಬರ್‌ಸೇನನೂ ಮಲಮಲಖಾನನೂ ಬರೆದು ಇದ್ದುವು. ಮತ್ತೊಂದು, ತಿಮ್ಮರಸನು ರಾಮರಾಯಮಂತ್ರಿಗೆ ಬರೆದಿದ್ದುದಾ

ಗಿತ್ತು. ಫಕೀರನ ಅಭಿಪ್ರಾಯದ ಮೇರೆಗೆ ರಾಮಯಮಂತ್ರಿಯು ಶತ್ರು ವೆಂದು, ನಂಬಿ ತನ್ನ ಪ್ರಭುವನ್ನು ನಂಬಿಸುವುದಕ್ಕಾಗಿ ತೋಫಲ್‌ಖಾನನು ಆ ವಿಷಯದಲ್ಲಿ ಒಂದು ಕಾಗದವನ್ನು ಬರೆದು ತನ್ನ ಪತ್ರಕ್ಕೆ ಉಪಬಲವಾಗಿ ಉಳಿದ ಕಾಗದಗಳನ್ನು ಕಳುಹಿಸಿಕೊಟ್ಟನು. ಆದಿಲ್‌ಷಹನು ಆ ಪತ್ರಗ ಳನ್ನು ಓದಿಕೊಂಡು ಒಟ್ಟುಗೂಡುತ್ತಿದ್ದ ಮಹಮ್ಮದೀಯ ರಾಜ್ಯಗಳನ್ನು ಚದರಿಸುವುದಕ್ಕಾಗಿಯೇ ತಿಮ್ಮರಸನು ಮಾಡಿದ್ದ ಮಾಟಗಳೆಂದೂ, ತೋಫಲ್‌ಖಾನನು ಬುದ್ಧಿಹೀನತೆಯಿಂದ ಕೆಲಸವನ್ನು ಕೆಡಿಸಿಬಿಟ್ಟನೆಂದೂ ವ್ಯಥೆಪಟ್ಟನು. ರಾಮಯಮಂತ್ರಿಯಂತಹ ಬುದ್ಧಿಶಾಲಿಯು ಮತ್ತೊಬ್ಬನಿಲ್ಲ ವೆಂದು ನಿರ್ಧರಿಸಿ, ಆತುರಪಟ್ಟು ಆತನಿಗೆ ಯಾವ ಬಗೆಯ ತೊಂದರೆಯನ್ನೂ ಮಾಡಕೂಡದೆಂದೂ ಹಿಂದಿನಂತೆಯೇ ಆತನನ್ನು ಗೌರವಿಸುತ್ತಿರಬೇಕೆಂದೂ, ದುರ್ಗರಕ್ಷಣೆಗಾಗಿ ತಾನೇ ಸೈನ್ಯವನ್ನು ತೆಗೆದುಕೊಂಡು ಬರುವೆನೆಂದೂ ಒಂದು ಪತ್ರವನ್ನು ಬರೆದು ತೋಫಲ್‌ಖಾನನಿಗೆ ಕಳುಹಿಸಿದನು ತಿಮ್ಮ ರಸನಿಗೆ ಸರಿತೂಗುವ ಮಂತ್ರಿಯು ರಾಮಯನೇ ಎಂದು ನಿರ್ಧರಿಸಿ ಆತನನ್ನು ತನ್ನ ವಶಪಡಿಸಿಕೊಳ್ಳಬೇಕೆಂದು ಹೀಗೆ ಬರೆದಿದ್ದನು. ಅಷ್ಟುಹೊತ್ತಿಗೆ ಸೈನ್ಯಗಳನ್ನು ಯುದ್ಧಕ್ಕೆ ಸಿದ್ಧಪಡಿಸಿದ್ದುದರಿಂದ ರಾಯರಸೈನ್ಯವನ್ನು ಸುಲ ಭವಾಗಿ ಜಯಿಸಬಹುದೆಂದು ಆದಿಲ್‌ಷಹನು ಭಾವಿಸಿದ್ದನು. ಆದುದರಿಂದ ಸರ್ವಸೈನ್ಯಾಧಿಪತ್ಯವನ್ನು ತಾನೇ ವಹಿಸಿ ತನ್ನ ಸೈನ್ಯವನ್ನೂ ನಡೆಯಿಸಿ ಕೊಂಡು ರಾಯಚೂರಿಗೆ ಹೊರಟನು. ಆತನು ಉತ್ಸಾಹದಿಂದ ಸೈನ್ಯದ ಮುಂಭಾಗದದಲ್ಲಿಯೇ ಹೋಗುತ್ತಿದ್ದುದನ್ನು ಕಂಡು ಸೈನ್ಯದವರೆಲ್ಲರೂ ಪರಮೋತ್ಸಾಹದಿಂದ ನುಗ್ಗಿ ಬರುತ್ತಿದ್ದರು. ಆದಿಲ್‌ಷಹನು ತನ್ನ ಸೈನ್ಯ ದಲ್ಲಿ ಕುದುರೆಯ ದಳವನ್ನು ಮುಂದೆಯೂ ಆನೆಗಳ ಬಲವನ್ನು ಹಿಂದೆಯೂ ಆ ಬಳಿಕ ಪದಾತಿವರ್ಗವೂ ಬರುವಂತೆ ಏರ್ಪಡಿಸಿ ಕೃಷ್ಣಾನದಿಯನ್ನು ದಾಟಿ ರಾಯಚೂರಿನ ಸಮೀಪಕ್ಕೆ ಬರುತ್ತಿದ್ದನು.

ಹೀಗೆ ಹೋಗುತ್ತಿರುವಾಗ ಕೆಲವುಜನ ಕುದುರೆ ಸವಾರರು ಆತನ ಇದಿರಿಗೆ ಬಂದರು. ವಿಷಯವನ್ನು ವಿಚಾರಮಾಡಿ ಬಳಿಕ ಮುಂದಕ್ಕೆ ಹೊರಡುವುದು ಒಳ್ಳೆಯದೆಂದು ಭಾವಿಸಿ ತನ್ನ ಸೈನ್ಯವು ನಿಲ್ಲುವಂತೆ ಆಜ್ಞಾಪಿಸಿದನು. ಹೀಗೆ ನಿಂತು ಕೆಲವು ನಿಮಿಷಗಳಾಗುವುದರೊಳಗಾಗಿ ಮುಂದೆ ಕಾಣಿಸಿಕೊಂಡಿದ್ದ ಕೆಲವರು ಸವಾರರನ್ನು ಅನುಸರಿಸಿಕೊಂಡು ಬರುತ್ತಿದ್ದ ದೊಡ್ಡ ಸೈನ್ಯವೇ ಕಂಡುಬಂತು. ಆಗ ಆದಿಲ್‌ಷಹನು ಶತ್ರುಗಳಮೇಲೆ ಬೀಳಬೇಕೆಂದು ತನ್ನ ಕಡೆಯ ಸೈನಿಕರಿಗೆ ಆಜ್ಞಾಪಿಸಿದನು. ಆದಿಲ್‌ಷಹನೇ ದುರ್ಗರಕ್ಷಣೆಗಾಗಿ ಸೈನ್ಯವನ್ನು ತೆಗೆದುಕೊಂಡು ಬರುವನೆಂದು ಕೇಳಿ ಅವನ ಗರ್ವವನ್ನು ಮುರಿಯಬೇಕೆಂದು ನಿರ್ಧರಿಸಿ ಕೃಷ್ಣದೇವರಾಯರು ತಮ್ಮ ಸೈನ್ಯವನ್ನು ಸ್ವತಃ ನಡೆಯಿಸಿಕೊಂಡು ಬರುತ್ತಾ, ದಾರಿಯಲ್ಲಿ ಆ ಸೈನ್ಯವನ್ನು ಗೃಧ್ರವ್ಯೂಹವಾಗಿ ರಚಿಸಿಕೊಂಡು ಮುಂದೆ ಮುಂದೆ ನುಗ್ಗಿಬರುತ್ತಿದ್ದರು. ಈ ವ್ಯೂಹದಲ್ಲಿ ನಾಲ್ಕುಸಾವಿರ ಅಶ್ವಿಕರೂ ಕೆಲವು ಆನೆಗಳೂ, ಕೆಲವು ಪದಾತಿವರ್ಗವೂ ಮುಖಭಾಗವಾಗುವಂತೆ ಏರ್ಪಡಿಸಿದ್ದರು. ಕೊಕ್ಕಿನಬಳಿ ಶೂರಾಗ್ರೇಸರನಾದ ಕಾಮಾನಾಯಕನಿದ್ದನು. ಕಣ್ಣುಗಳ ಬಳಿ ಪರಾಕ್ರಮಶಾಲಿಗಳಾದ ತ್ರಿಯಂಬಕರಾಯ ತಿಮ್ಮಪ್ಪನಾಯಕರಿದ್ದರು. ಆದೆಪ್ಪನಾಯಕನೂ ಕೊಂಡಾರೆಡ್ಡಿಯೂ ಒಂದು ರೆಕ್ಕೆಯಾಗಿಯೂ, ಗೋವಿಂದರಾಜನೂ ಮಧುರೆಯ ನಾಯಕನೂ ತಮ್ಮ ಸೈನ್ಯಗಳೊಡನೆ ಎರಡನೆಯ ರೆಕ್ಕೆಯಾಗಿಯೂ ಆಗಿದ್ದರು. ಕೃಷ್ಣದೇವರಾಯರು ಕುಕ್ಷಿಭಾಗದಲ್ಲಿದ್ದರು. ವ್ಯಂಗಾಪುರಾಧ್ಯಕ್ಷನೂ ಇನ್ನೂ ಕೆಲವರು ಕ್ಷತ್ರಿಯರೂ ಪುಚ್ಛಭಾಗದಲ್ಲಿದ್ದರು. ರಾಯರು ಯೋಚಿಸಿದಂತೆಯೇ ಶತ್ರುಗಳು ವ್ಯೂಹದ ಮುಖಭಾಗದಲ್ಲಿ ಇದ್ದ ಕೆಲವರನ್ನು ನೋಡಿ ಮೋಸಹೋದರು. ಮುಖದಲ್ಲಿ ಕೆಲವರೇ ಇದ್ದರೂ ಅವರು ಅಪ್ರತಿಹತ ಪರಾಕ್ರಮಶಾಲಿಗಳಾದುದರಿಂದ ಶತ್ರುಗಳಿಗೆ

ಜಗ್ಗದೆ ಹೋರಾಡುತ್ತಿದ್ದರು. ಅಷ್ಟರಲ್ಲಿ ರಾಯರ ಅಪ್ಪಣೆಯ ಮೇರೆಗೆ ರೆಕ್ಕೆಯ ಭಾಗದಲ್ಲಿದ್ದ ಸೈನ್ಯವು ಮುಂದಕ್ಕೆ ನುಗ್ಗಿ, ಶತ್ರುಗಳಮೇಲೆ ಬಿದ್ದರು. ಇದನ್ನು ಕಂಡೇ ಶತ್ರುಸೈನ್ಯವು ಹೆಚ್ಚಾಗಿದೆಯೆಂದು ಮುಹಮ್ಮ ದೀಯರು ನಿರ್ಧರಿಸಿದರು. ಹೀಗೆ ಮೂರು ದಿಕ್ಕುಗಳಲ್ಲಿ ಗೋಡೆಯ ಹಾಗೆ ಇದ್ದ ಸೈನ್ಯವನ್ನು ದಾಟಿಹೋಗುವುದಕ್ಕೆ ಆದಿಲ್‌ಷಹನ ಆಶ್ರಿತ ಸೈನ್ಯಕ್ಕೆ ಅವಕಾಶ ಸಿಕ್ಕಲಿಲ್ಲ. ರಾಯರ ಸೈನ್ಯದಲ್ಲಿದ್ದ ಆನೆಗಳ ಸಾಲು ಅಶ್ವಿಕ ಸೈನಿಕರ ಕಾಲಾಟವನ್ನು ನಿಲ್ಲಿಸಿಬಿಟ್ಟಿತು. ಆದುದರಿಂದ, ತನ್ನ ಮುಖ್ಯ ಬಲವಾದ ಅಶ್ವಿಕರ ಆಟವು ನಿಂತುಹೋದುದನ್ನು ಬಿಜಾಪು ರದ ದೊರೆಯು ನೋಡಿ, ತನ್ನ ಪದಾತಿವರ್ಗವನ್ನೂ ಹಸ್ತಿಬಲವನ್ನೂ, ಹಿಂದಕ್ಕೆ ಕರೆಯಿಸಿಕೊಂಡು ರಾಯರ ಸೈನ್ಯದ ಹಿಂಭಾಗದ ಮೇಲೆ ಬೀಳು ವಂತೆ ಆಜ್ಞಾಪಿಸಿದನು. ಸಾಧಾರಣವಾಗಿ ಹಿಂಭಾಗದಲ್ಲಿ ಅಶಕ್ತರಿರುವ ರೆಂದು ಭಾವಿಸಿ ಅವರನ್ನು ಸುಲಭವಾಗಿ ಜಯಿಸಿಬಿಟ್ಟರೆ ತನ್ನ ಸೈನ್ಯದವ ರಿಗೆ ಆ ಜಯದಿಂದ ಉತ್ಸಾಹ ಹೆಚ್ಚುವುದೆಂದೂ ಶತ್ರುಗಳು ಧೈರ್ಯಗುಂದುವ ರೆಂದೂ ಊಹಿಸಿ ಆದಿಲ್‌ಷಹನು ಹಾಗೆ ಅಪ್ಪಣೆ ಮಾಡಿದ್ದನು. ಆದರೆ ಆ ಭಾಗದಲ್ಲಿದ್ದ ವೀರರ ಹೊಡೆತವನ್ನು ತಾಳಲಾರದೆ ಮುಹಮ್ಮದೀಯ ಸೈನ್ಯವು ಹಿಂದಕ್ಕೆ ಬರುತ್ತಿತ್ತು. ಆದಿಲ್‌ಷಹನ ಪ್ರೋತ್ಸಾಹಗಳು ಈ ಸಮಯದಲ್ಲಿ ಪ್ರಯೋಜನಕರವಾಗಲಿಲ್ಲ. ಸ್ವಲ್ಪಹೊತ್ತಿನಲ್ಲೇ ಮುಹಮ್ಮ ದೀಯ ಸೈನಿಕರಲ್ಲಿ ತುಳದಾಟವು ಹೆಚ್ಚಿತು. ಆದರೂ ಮುಹಮ್ಮದೀಯರ ಅಶ್ವಿಕ ಸೈನ್ಯವೆಲ್ಲಾ ಒಂದುಕಡೆ ಇದ್ದುದರಿಂದ, ಆ ಸೈನ್ಯವು ರಾಯರ ಸೇನೆ ಯನ್ನು ಹಿಂದಕ್ಕೆ ನೂಕಿತು. ಹೀಗೆ ಹಿಂದಕ್ಕೆ ಬರುತ್ತಿದ್ದ ತಮ್ಮ ಸೈನ್ಯದವ ರನ್ನು ನೋಡಿ ರಾಯರು, ಹಿಮ್ಮೆಟ್ಟುವವರನ್ನು ಕೊಲ್ಲಿಸಿಬಿಡುವೆವೆಂದು ಸಾರಿಸಲು, ಅವರು ಧೈರ್ಯದಿಂದ ಮುಹಮ್ಮದೀಯರ ಮೇಲೆಬಿದ್ದರು. ಇದೇ ಕಾಲದಲ್ಲೇ ಅವರನ್ನು ಪ್ರೋತ್ಸಾಹಿಸುವುದಕ್ಕಾಗಿ ರಾಯರು ತಮ್ಮ

ಅಂಗರಕ್ಷಕ ಭಟರನ್ನೇ ಕಳುಹಿಸಿ ಅವರಿಂದ ಸಹಾಯಮಾಡಿಸುತ್ತಾ ತಾವೂ ಪ್ರೋತ್ಸಾಹಪಡಿಸುತ್ತಾ ಬಂದುದರಿಂದ ವಿಜಯನಗರದ ಸೈನಿಕರು ರಭಸದಿಂದ ಯುದ್ಧಮಾಡಿ ಶತ್ರುಗಳಲ್ಲಿ ಕೆಲವರನ್ನು ಸೆರೆಹಿಡಿದರು. ಮತ್ತೆ ಕೆಲವರನ್ನು ಕೃಷ್ಣಾನದಿಯೊಳಕ್ಕೆ ಅಟ್ಟಬಿಟ್ಟರು. ಇದನ್ನು ಕಂಡು ಮಹಮ್ಮದೀಯ ದಳಪತಿಗಳೂ ಆದಿಲ್‌ಷಹನೂ ತಮ್ಮ ಕಡೆಯವರನ್ನು ಬಹಳವಾಗಿ ಪ್ರೋತ್ಸಾಹಿಸುತ್ತಾ ಮಹಮ್ಮದೀಯ ಸೈನ್ಯವನ್ನು ಒಟ್ಟುಗೂಡಿಸುವುದಕ್ಕೆ ಪ್ರಯತ್ನಿಸುತ್ತಿದ್ದರು. ಆದರೆ ರಣಮತ್ತರಾಗಿದ್ದ ವಿಜಯನಗರದ ಸೈನಿಕರ ಇದಿರಿಗೆ ಬಿಜಾಪುರದ ಸೈನ್ಯವು ನಿಲ್ಲಲು ಯತ್ನಿಸಲಿಲ್ಲ. ಇಷ್ಟರಲ್ಲಿ ಕೃಷ್ಣದೇವರಾಯರ ಸೈನ್ಯವು ಆದಿಲ್‌ಷಹನನ್ನು ಮುತ್ತಿಕೊಂಡುಬಿಟ್ಟಿತು. ಇದನ್ನು ಕಂಡುಕೊಂಡು ಪ್ರಭುಭಕ್ತಿಪರಾಯಣರಾದ ಕೆಲವರು ಮಹಮ್ಮದೀಯ ಸರದಾರರು ತಮ್ಮ ಜೀವದ ಹಂಗನ್ನು ತೊರೆದು ಅತಿ ರಭಸದಿಂದ ಹೋರಾಡುತ್ತಾ, ಆದಿಲ್‌ಷಹನನ್ನು ಸುತ್ತಿಕೊಂಡಿದ್ದ ಸೈನ್ಯವನ್ನು ಚದರಿಸಿದರು. ಇದೇ ಸಮಯವೆಂದು ಆದಿಲ್‌ಷಹನು ಒಂದು ಆನೆಯನ್ನು ಹತ್ತಿ ತಲೆತಪ್ಪಿಸಿಕೊಂಡು ಕೃಷ್ಣಾನದಿಯನ್ನು ದಾಟಿ ಹಿಂದಕ್ಕೆ ಹೋದನು. ಶೂರರಾದ ಆ ಮಹಮ್ಮದೀಯ ಸರದಾರರು ತಮ್ಮ ಕಡೆಯವರಿಗೆ ಪ್ರೋತ್ಸಾಹಿಸುತ್ತಾ ಯುದ್ಧಮಾಡುತ್ತಲೇ ಇದ್ದರು. ಆದರೆ ಹೀಗೆ ಬಹಳ ಕಾಲ ನಡೆಯಲು ಸಾಧ್ಯವಾಗಲಿಲ್ಲ. ಆದಿಲ್‌ಷಹನು ಹಿಂದಕ್ಕೆ ಹೋದುದನ್ನು ಕಂಡು ಸಾಧಾರಣಸೈನಿಕರು ತಾವೂ ಹಾಗೆಯೇ ಮಾಡುವುದು ಒಳ್ಳೆಯದೆಂದು ಸಮಯ ನೋಡುತ್ತಿದ್ದರು. ಮತ್ತೆ ಕೆಲವರು ಶೂರರು ಅತ್ತಿತ್ತ ಅಲುಗುವುದಕ್ಕೆ ಸಾಧ್ಯವಿಲ್ಲದೆ ನಿರಾಶೆಯಿಂದ ತಮ್ಮ ಶಕ್ತಿಯನ್ನೆಲ್ಲಾ ವಿನಿಯೋಗಿಸಿ ಯುದ್ಧಮಾಡುತ್ತಲೇ ಇದ್ದರು. ಹಲವರು ಹೇಡಿಗಳು ತಮ್ಮ ದೊರೆಯೇ ಓಡಿಹೋಗಿರುವಾಗ ತಾವು ಮಾತ್ರ ಹಿಂದೆ ನಿಂತು ಶತ್ರುಗಳ ಕೈಗೆ ಸಿಕ್ಕಬೇಕಾಯಿತಲ್ಲಾ ಎಂದು ಬಗೆಬಗೆಯಾಗಿ

ಹಲುಬಿ ಗೋಳಾಡುತ್ತಿದ್ದರು. ಇವರನ್ನು ಕಂಡು ಮನಸ್ಸುಕರಗಿ ಕೃಷ್ಣದೇವರಾಯರು ಅಂತಹವರ ಬಳಿಯಲ್ಲಿದ್ದ ಆಯುಧಗಳನ್ನು ಕಿತ್ತುಕೊಂಡು ಅವರಿಗೆ ಯಾವಬಗೆಯ ಬಾಧೆಯನ್ನೂ ಮಾಡದೆ ಕಳುಹಿಸಿಬಿಡಬೇಕೆಂದು ಆಜ್ಞಾಪಿಸಿದರು. ಇದನ್ನು ಕಂಡು ಅನೇಕ ಮಹಮ್ಮದೀಯ ಸೈನಿಕರು ತಮ್ಮತಮ್ಮ ಆಯುಧಗಳನ್ನು ಎಸೆದುಬಿಟ್ಟು ತಮ್ಮ ಕಾಲಿಗೆಬುದ್ಧಿಹೇಳಿದರು. ರಾಯರಿಗೆ ಬೇಕಾಗಿದ್ದುದು ಶತ್ರುಗಳಿಗೆ ಭಯವನ್ನುಂಟುಮಾಡಿ ಅವರು ರಾಯ್ಚೂರಿನ ರಕ್ಷಣೆಗೆ ಬಾರದೆ ಇರುವಂತೆ ಆಗಬೇಕೆಂಬುದೇ. ಈ ಯುದ್ಧದಲ್ಲಿ ಶತ್ರುಗಳ ಸಮರಸಾಧನಗಳು ಕೃಷ್ಣದೇವರಾಯರಿಗೆ ಅಸಂಖ್ಯಾತವಾಗಿ ಸಿಕ್ಕಿಹೋದುವು. ಹೀಗೆ ಜಯವಾದುದಕ್ಕಾಗಿ ತಮ್ಮ ಸೈನಿಕರಿಗೆ ಅವರವರ ಯೋಗ್ಯತಾನುಸಾರವಾಗಿ ಅನೇಕ ಬಹುಮಾನಗಳನ್ನು ಕೊಟ್ಟು ರಾಯ್ಚೂರನ್ನು ಸಾಧಿಸುವುದಕ್ಕೆ ಮುಂಚೆ ಸೈನಿಕರು ದಣಿವಾರಿಸಿಕೊಳ್ಳಲು, ಕೃಷ್ಣಾನದಿಯ ತೀರದಲ್ಲಿ ತಮ್ಮ ಪಾಳೆಯವನ್ನು ಬಿಟ್ಟು ವಿಶ್ರಮಿಸಿಕೊಳ್ಳುತ್ತಿದ್ದರು.

ಮೂವತ್ತೆರಡನೆಯ ಪ್ರಕರಣ.

ಪರಾಭವ.

ಮಹಾವಾಹಿನೀ ಸಮೇತರಾದ ಕೃಷ್ಣದೇವರಾಯರು ತಟ್ಟನೆ ಬಂದು ರಾಯಚೂರನ್ನು ಮುತ್ತಿದಾಗ, ಆ ದುರ್ಗನಿವಾಸಿಗಳು ಎಷ್ಟು ತತ್ತರಿಸುತ್ತಿದ್ದರೋ, ಅವರು ರಾಯಚೂರನ್ನು ತಟ್ಟನೆ ಬಿಟ್ಟುಹೊರಟ ದಿನ ಅವರು ಅಷ್ಟು ಸಂತೋಷಪಡುತ್ತಿದ್ದರು. ರಾಯರು ಹೊರಟುಹೋದುದಕ್ಕಾಗಿ ಹಲವರು ಹಲವು ವಿಧವಾಗಿ ಊಹಿಸಿಕೊಳ್ಳುತ್ತಿದ್ದರು. ಮಹಮ್ಮದೀಯರು ಒಟ್ಟುಗೂಡಿ ತಿರುಗಿ ಯುದ್ಧಕ್ಕೆ ಬರುವರೆಂದು ಹೆದರಿ ಓಡಿಹೋದರೆಂದು ಕೆಲವರೂ ದುರ್ಗವು ಅಸಾಧ್ಯವೆಂದು ತಿಳಿದು ನಿರಾಶೆಯಿಂದ ಹಿಂತಿರುಗಿದರೆಂದು, ಕೆಲವರೂ, ಆದಿಲ್‍ಷಹನೊಡನೆ ವೈರವನ್ನು ಕಟ್ಟಿಕೊಳ್ಳಬಾರದೆಂದು ಯೋಚಿಸಿ ಹೊರಟುಹೋದರೆಂದು ಮತ್ತೆ ಕೆಲವರೂ ಯೋಚಿಸಿಕೊಂಡರು. ಅಷ್ಟೇ ಹೊರತು ತಮ್ಮ ದುರ್ಗದ ಸಹಾಯಕ್ಕೆ ಬರುತ್ತಿದ್ದ ಆದಿಲ್‍ಷಹನನ್ನು ಓಡಿಸುವುದಕ್ಕೆ ರಾಯರು ಹೋಗಿರುವರೆಂದು ಯಾರೂ ಯೋಚಿಸಲಿಲ್ಲ. ಜನರಂತೂ, ಚಕ್ರವರ್ತಿ ಕೃಷ್ಣದೇವರಾಯರು ಹೊರಟೇಹೋದರೆಂದು ಸಂತೋಷಪಟ್ಟರು. ತೋಫಲ್‍ಖಾನನೂ ಸಹ ರಾಯರ ಕಾಟವು ಸದ್ಯಕ್ಕೆ ತಪ್ಪಿತೆಂದು ಸಂತೋಷಪಟ್ಟುಕೊಳ್ಳುತ್ತಿದ್ದನು. ಆದರೂ ಅವನು ಯುದ್ಧಸನ್ನದ್ಧತೆಯಲ್ಲಿ ಅಜಾಗರೂಕನಾಗಲಿಲ್ಲ. ರಾಯರಿಗೂ ಆದಿಲ್‍ಷಹನಿಗೂ ನಡೆದ ಯುದ್ಧದ ಮತ್ತು ಅದರ ಫಲಿತಾಂಶದ ವೃತ್ತಾಂತವು ಸ್ವಲ್ಪ ಕಾಲದಲ್ಲೇ ದುರ್ಗಕ್ಕೆ ಮುಟ್ಟಿತು. ಮಹಾಸೇನಾಸಮೇತನಾದ ಆದಿಲ್‍ಷಹನಂತಹ ಪರಾಕ್ರಮ

ಕಾಲಿಗೆ ಅಪಜಯವಾದುದರಿಂದ, ತೋಫಲ್‌ಖಾನನಿಗೆ ಇದ್ದ ಧೈರ್ಯವೂ ತಗ್ಗಿಹೋಯಿತು. ಆದರೂ ತನ್ನ ದುರ್ಗವು ದಕ್ಷಿಣ ಹಿಂದುಸ್ಥಾನದಲ್ಲೆಲ್ಲಾ ಅತಿ ಬಲಿಷ್ಠವಾದುದರಿಂದ ಶತ್ರುವಿಗೆ ಅದು ದುರ್ಭೇದ್ಯವಾಗಿರುವುದೆಂದು ಧೈರ್ಯತಂದುಕೊಂಡನು. ಆದುದರಿಂದ ತನ್ನ ದುರ್ಗದಲ್ಲಿ ಕೆಲವರೇ ಸೈನಿಕರಿದ್ದರೂ ಸ್ಥಳದ ಮಾಹಾತ್ಮ್ಯದಿಂದ ರಾಯರ ಸೈನ್ಯವನ್ನೂ ಇದಿರಿಸುವುದು ಕಷ್ಟವಲ್ಲವೆಂದು ಮನಸ್ಸಿನಲ್ಲಿ ದೃಢಮಾಡಿಕೊಂಡಿದ್ದನು. ಯುದ್ಧಕ್ಕೆ ಅನುಕೂಲಿಸದ ಪುರುಷರನ್ನೂ ಮಕ್ಕಳನ್ನೂ ಉನ್ನತವಂಶಸಂಭೂತರಾದ ಸ್ತ್ರೀಯರನ್ನೂ ಸಹ ದುರ್ಗದಿಂದ ಕಳುಹಿಸಿ; ಪಕ್ಕದ ಗ್ರಾಮಗಳಲ್ಲಿ ವಾಸಮಾಡಿಕೊಂಡಿರಬೇಕೆಂದು ಆಜ್ಞಾಪಿಸಿದನು. ಹೀಗೆಮಾಡುವುದರಿಂದ ದುರ್ಗದಲ್ಲಿದ್ದ ಆಹಾರವಸ್ತುಗಳು ಹೆಚ್ಚುಕಾಲ ಬರುವುವೆಂದೂ ಒಂದುವೇಳೆ ದುರ್ಗವು ಶತ್ರುವಶವಾದರೆ ಆ ಸ್ತ್ರೀಯರ ಗೌರವವನ್ನು ಉಳಿಸಿದಂತಾಗುವುದೆಂದೂ ಖಾನನು ಯೋಚಿಸಿ ಹಾಗೆ ಆಜ್ಞಾಪಿಸಿದನು. ಆ ಸಂದರ್ಭದಲ್ಲಿ ಆ ದುರ್ಗದ ನಿವಾಸಿಗಳಲ್ಲಿ ಬಗೆಬಗೆಯ ಭಾವಗಳೂ ಕ್ರಿಯೆಗಳೂ ಕಾಣಿಸಿಕೊಳ್ಳುತ್ತಿದ್ದುವು. ಭೇರಿಯ ಶಬ್ದವನ್ನು ಕೇಳದಮಾತ್ರಕ್ಕೆ ಹೆದರುತ್ತಿದ್ದ ಅಂಜುಕುಳಿಗಳು ಸಿಕ್ಕಿದವರೊಡನೆಲ್ಲಾ ಹಲುಬಿಗೋಳಾಡುತ್ತಾ ತಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಿದ್ದರು. ಮೊದಲು ಧೈರ್ಯದಿಂದಿದ್ದ ಕೆಲವರು ಈ ಗೋಳಾಟವನ್ನು ಕೇಳಿ ವ್ಯಾಕುಲರಾಗುತ್ತಿದ್ದರು. ಮತ್ತೆ ಕೆಲವರು ಮನಸ್ಸನ್ನು ದೃಢಮಾಡಿಕೊಂಡು ಅಂತಹವರನ್ನು ಸಮಾಧಾನಪಡಿಸುತ್ತಿದ್ದರು.

ಅದೇ ಸಮಯದಲ್ಲಿ ಉಪಾಯದಿಂದ ತಾನು ಸಂಗ್ರಹಿಸಿದ್ದ ವರ್ತಮಾನವನ್ನು ಮಾಲತಿಯು ಅನಂಗಸೇನೆಗೆ ತಿಳಿಸಿ ದುರ್ಗದ ಹೊರಕ್ಕೆ ಹೊರಡಲು ಸಿದ್ಧಳಾಗಬೇಕೆಂದು ಸೂಚಿಸಿದಳು. ಅನಂಗಸೇನೆಯು ಮಾಲತಿಯ ಮಾತುಗಳನ್ನು ಕೇಳಿ ಆಶ್ಚರ್ಯಪಡುತ್ತಿದ್ದಳು. ಆಗ ಮಾಲತಿಯು

ದುರ್ಗದಲ್ಲಿದ್ದ ಉತ್ತಮಸ್ತ್ರೀಯರನ್ನು ದುರ್ಗದ ಹೊರಕ್ಕೆ ಹೋಗುವಂತೆ ಖಾನನೇ ಆಜ್ಞಾಪಿಸಿದ್ದುದನ್ನು ತಿಳಿಸಿ, ತಾವು ಹೋಗುವಾಗ ತಮಗೆ ಬಾಧೆ ಯುಂಟಾಗದಂತೆ ಔಷಧವನ್ನು ಕೊಟ್ಟು ಉಪಕಾರಮಾಡಿದ್ದ ವೈದ್ಯನನ್ನು ಸಹಾಯಕ್ಕೆ ಕರೆತರುವುದಾಗಿಯೂ ತಿಳಿಸಿದಳು

ಹೊರಡುವುದಕ್ಕೆ ಎಲ್ಲವೂ ಸಿದ್ಧವಾದಾಗ ಮಾಲತಿಯು " ಅಮ್ಮಾ, ಕಾಲಕಾಲಕ್ಕೆ ನಮಗೆ ಅನ್ನವನ್ನು ತಂದುಕೊಡುತ್ತಿರುವ ಸೇವಕಳಿಗೆ ಏನಾದರೂ ಬಹುಮಾನ ಕೊಡಬೇಕಲ್ಲವೆ ? " ಎಂದು ಕೇಳಿದಳು.

ಅನಂಗ—" ಆಹಾ ! ಏನನ್ನಾದರೂ ಕೊಡಲೇಬೇಕು. ಇಲ್ಲದಿದ್ದರೆ ನಾನು ನೀಚಳಾದ ಕೃತಘ್ನಳಾಗುವೆನು. ಏನುಬೇಕಾಗಿದ್ದರೂ ಕೊಡಲು ಸಿದ್ಧಳಾಗಿರುವೆನು.''

ಮಾಲತಿ—" ಹಾಗಾದರೆ ನೀನು ಧರಿಸುತ್ತಿರುವ ಒಳ್ಳೆಯ ಸೀರೆ ಯನ್ನು ಕೊಟ್ಟರೆ ಚೆನ್ನಾಗಿರುವುದು."

ಅನಂಗ—" ಇದು ಬಹಳ ಬೆಲೆಯುಳ್ಳ ಸೀರೆ. ಆದರೂ ಇದನ್ನು ಈಕೆಗೆ ಸಂತೋಷದಿಂದ ಕೊಡುವೆನು " ಎಂದು ಹೇಳಿ ಆಗತಾನೆ ಅಲ್ಲಿಗೆ ಅನ್ನವನ್ನು ತಂದಿದ್ದ ಸೇವಕಿಗೆ ಕೊಟ್ಟುಬಿಟ್ಟಳು.

ಮಾಲತಿ—(ಪರಿಚಾರಿಕೆಯನ್ನು ನೋಡಿ) "ಎಲೇ ! ನೀನು ಎಷ್ಟು ಅದೃಷ್ಟಶಾಲಿನಿ ! ನಾನು ಎಷ್ಟೋ ವರ್ಷಗಳಿಂದ ಈಕೆಯ ಸೇವೆಯನ್ನು ಮಾಡುತ್ತಿದ್ದರೂ ನನಗೆ ಸಹ ಇಂತಹ ಸೀರೆಯನ್ನು ಕೊಟ್ಟಿಲ್ಲ " ಎಂದು ಹೇಳಿದಳು.

ಪರಿಚಾರಿಕೆಯು ಆ ಮಾತುಗಳನ್ನು ಕೇಳಿ ಬಹಳ ಸಂತೋಷಪಟ್ಟು " ತಾಯಿ ! ನನಗೆ ಅಪ್ಪಣೆಯಾದರೆ ಹೋಗಿಬರುವೆನು '' ಎಂದಳು. ಅನಂಗಸೇನೆಯು ಆ ಮಾತನ್ನು ಕೇಳಿ ಆ ಸೀರೆಯನ್ನು ಅವಳು ಅಲ್ಲಿಯೇ ಉಟ್ಟುಕೊಳ್ಳುವಂತೆ ನಿರ್ಬಂಧಿಸಿದಳು. ಆ ಪರಿಚಾರಿಕೆಯು ಹಾಗೆಯೇ

ಮಾಡಿ, ಪಾತ್ರೆಗಳನ್ನು ಹಿಡಿದುಕೊಂಡು ಪುನಃ ಹೊರಡಲು ಪ್ರಯತ್ನಿಸಿದಾಗ, ಮಾಲತಿಯು ಅವಳನ್ನು ತಡೆದು "ಸ್ವಲ್ಪ ತಾಳು. ಅಂತಹ ಅವಸರವೇನು? ಕುಳಿತುಕೋ. ಈ ದುರ್ಗದ ಸಮಾಚಾರವೇನು ? ಹೇಳಿ ನಮಗೆ ಸಂತೋಷಪಡಿಸುವೆಯಾ" ಎಂದು ಕೇಳಿದಳು.

ತನಗೆ ಅಂತಹ ಒಳ್ಳೆಯ ಸೀರೆಯನ್ನು ಕೊಡಿಸಿದ್ದ ಮಾಲತಿಯ ಮಾತನ್ನು ಮೀರಲಾರದೆ, ಆ ಪರಿಚಾರಿಕೆಯು ಅಲ್ಲಿಯೇ ಕುಳಿತುಕೊಂಡು ದುರ್ಗಾಧ್ಯಕ್ಷನ ಅಂತಃಪುರರಹಸ್ಯವನ್ನೂ ಆ ದುರ್ಗದಲ್ಲಿದ್ದ ಧನಿಕಸ್ತ್ರೀಯರ ರಹಸ್ಯಗಳನ್ನೂ ಸರಸವಾಗಿ ವರ್ಣಿಸಿ ಅವರನ್ನು ನಗಿಸುತ್ತಿದ್ದಳು. ಇಷ್ಟುಹೊತ್ತಿಗೆ ರಾತ್ರಿ ಬಹಳ ಹೊತ್ತಾಯಿತು.

ಆಗ ಅನಂಗಸೇನೆಯು ತನ್ನ ಹಾಸಿಗೆಯ ಮೇಲೆ ಕುಳಿತುಕೊಂಡು, ಆ ಸೇವಕಿಯ ವರ್ಣನೆಯು ಬಹಳ ಚಮತ್ಕಾರವಾಗಿದೆಯೆಂದೂ ಆಕೆಯ ಮಾತಿನ ಬುದ್ಧಿವಂತಿಕೆಯನ್ನು ಮೊದಲೇ ತಿಳಿಯದೇಹೋದುದು ತನ್ನ ದುರದೃಷ್ಟವೆಂದೂ ಅವಳನ್ನು ಹೊಗಳಿ, ಇನ್ನೂ ಆಕೆಯ ವರ್ಣನೆಯನ್ನು ಕೇಳಬೇಕೆಂದಿದ್ದುದರಿಂದ ಆ ಪರಿಚಾರಿಕೆಯು ಆರಾತ್ರಿ ಅಲ್ಲಿಯೇ ನಿದ್ರಿಸಬೇಕೆಂದೂ ಒತ್ತಾಯಮಾಡಿದಳು. ಆದುದರಿಂದ ಆ ಸೇವಕಿಯು ದಾಕ್ಷಿಣ್ಯಕ್ಕೆ ಸಿಕ್ಕಿ ಆರಾತ್ರಿ ಆಕೆಯ ಕೊಟಡಿಯಲ್ಲೇ ಮಲಗಿಕೊಳ್ಳಲು ಒಪ್ಪಿದಳು. ಅರ್ಧರಾತ್ರಿಯವರೆಗೂ ಆ ಸೇವಕಿಯ ವರ್ಣನೆಯು ನಡೆಯುತ್ತಲೇ ಇತ್ತು. ಆಬಳಿಕ ನಿದ್ರಾಭರದಿಂದ ಮೂವರೂ ಮಲಗಿಕೊಂಡರು ಪರಿಚಾರಿಕೆಯು ಬೆಳಗಿನಿಂದ ಕಷ್ಟಪಟ್ಟು ದುಡಿದಿದ್ದಕಾರಣ ಅವಳಿಗೆ ಗಾಢವಾದ ನಿದ್ರೆಯು ಬಂತು. ಇನ್ನು ಸ್ವಲ್ಪಹೊತ್ತು ಕಳೆದ ಬಳಿಕ ಒಬ್ಬ ಸ್ತ್ರೀಯು ಕೆಲವು ವಸ್ತುಗಳನ್ನು ಗಂಟುಕಟ್ಟಿಕೊಂಡು ಹೊರಟು ದುರ್ಗದ್ವಾರದ ಬಳಿಗೆ ಬಂದಳು. ಅಲ್ಲಿ ಆಯುಧಹಸ್ತನಾಗಿ ತಿರುಗುತ್ತಿದ್ದ

ದ್ವಾರಪಾಲಕನು "ಯಾರು ಅಲ್ಲಿ ಹೋಗುವವರು ? ಮುಂದಕ್ಕೆ ಹೋಗ ಕೂಡದು. ಅಲ್ಲಿಯೇ ನಿಲ್ಲು" ಎಂದು ಘುರ್ಜಿಸಿದನು.

ಸ್ತ್ರೀ-"ಅಯ್ಯಾ! ದ್ವಾರಪಾಲಕನೇ! ನೀನು ಹೊಸಬನೋ?ಇದೇಕೆ ಹೀಗೆ ಕೇಳುವೆ ?"

ದ್ವಾರಪಾಲಕ—"ಹೌದು. ಹಿಂದೆ ಇಲ್ಲಿದ್ದ ಭಟರು, ಈಗ ದುರ್ಗ ರಕ್ಷಣಕ್ಕೆ ನೇಮಕವಾಗಿರುವರು."

ಸ್ತ್ರೀ—"ಅಹಾ! ತಿಳಿಯಿತು. ಅದಕ್ಕೇ ಹೀಗೆ ಕೇಳುತ್ತಿರುವೆ."

ಮಾಲತಿ—"ಹೊರಕ್ಕೂ ಒಳಕ್ಕೂ ಸುತ್ತಾಡಲು ತೋಘಲ್ ಖಾನರೇ ಅಪ್ಪಣೆಕೊಟ್ಟಿರುವರು. ಇಗೋ ಉಂಗುರವನ್ನು ನೋಡು." ಎಂದು ತೋರಿಸಿದಳು.

ದ್ವಾರ—"(ನೋಡಿ) ನೀನು ಮಾಲತಿಯೋ ? ಹಾಗಾದರೆ ಹೋಗ ಬಹುದು ; ಹೋಗು." ಎಂದು ಹೇಳಿ ಆಕೆಯನ್ನು ಬಿಟ್ಟನು.

ಇನ್ನು ಸ್ವಲ್ಪಹೊತ್ತಿನಲ್ಲಿ ಮತ್ತೊಬ್ಬ ಸ್ತ್ರೀಯು ಕೆಲವು ಪಾತ್ರೆಗಳಿದ್ದ ಗಂಟನ್ನು ಕೈಯಲ್ಲಿ ಹಿಡಿದುಕೊಂಡು ಆ ದ್ವಾರದ ಬಳಿಗೆ ಬಂದಳು. ಪುನಃ ದ್ವಾರಪಾಲಕನು "ಯಾರು, ಅಲ್ಲಿಹೋಗುವವರು ; ನಿಲ್ಲು" ಎಂದನು.

ಎರಡನೆಯ ಸ್ತ್ರೀ—"ಇದೇನು ಹೀಗೆ ಕೇಳುತ್ತಿರುವಿರಿ. ನಾನು ಈ ಮಂದಿರದಲ್ಲಿರುವ ಸ್ತ್ರೀಯರಿಗೆ ಪ್ರತಿದಿನವೂ ಆಹಾರವನ್ನು ತಂದುಕೊಡುತ್ತಿರುವವಳು."

ದ್ವಾರ—"ಓ ಸ್ತ್ರೀಯೆ, ಮಾಲತಿಯು ಈಗತಾನೆ ಈ ಮಾರ್ಗವಾಗಿ ಹೋದಳು. ನಿನ್ನನ್ನು ನೋಡಿ ಅನಂಗಸೇನೆಯೆಂದು ತಿಳಿದು ನಿಲ್ಲಿಸಿದೆನು. ಈಗ ನೀನು ಹೋಗಬಹುದು."

ಎರಡನೆಯ ಸ್ತ್ರೀ—“ ನನ್ನವೇಷವನ್ನೂ ಈ ಪಾತ್ರೆಯನ್ನೂ ನೋಡಿಯಾದರೂ ತಿಳಿಯಬಾರದಾಗಿತ್ತೆ ! ”

ದ್ವಾರ—“ ಅನಂಗಸೇನೆಯು ಒಳಗೆ ಇರುವಳೋ? ”

ಎರಡನೆಯ ಸ್ತ್ರೀ—“ ಹೌದು ; ನಿದ್ರಿಸುತ್ತಿರುವಳು.”

ದ್ವಾರ—“ ಇಷ್ಟುಹೊತ್ತೂ ಇಲ್ಲಿ ನೀನು ಏನುಮಾಡುತ್ತಿದ್ದೆ? ”

ಎರಡನೆಯ ಸ್ತ್ರೀ—“ಅನಂಗಸೇನೆಯು ನನ್ನೊಡನೆ ಮಾತನಾಡುತ್ತಿದ್ದ ಹಾಗೆಯೇ ಬಹಳ ಕಷ್ಟದ ಕೆಲಸಗಳನ್ನು ಮಾಡಿದ್ದ ನನಗೆ ನಿದ್ರೆಯು ಬಂತು. ಈಗ ಎಚ್ಚರವಾಗಲು ಹೊರಟುಬಂದೆನು. ಒಳಗೆ ಅನಂಗಸೇನೆಯು ಒಬ್ಬಳೇ ಇರುವಳು. ಎಚ್ಚರಿಕೆಯಿಂದ ನೋಡಿಕೋ ” ಎಂದು ಹೇಳಿ ಹೊರಟುಹೋದಳು.

ಇನ್ನು ಸ್ವಲ್ಪಹೊತ್ತು ಕಳೆದ ಬಳಿಕ ನಿದ್ರಾದೇವಿಯ ಪ್ರಭಾವವು ಸ್ವಲ್ಪಸ್ವಲ್ಪವಾಗಿ ಆ ದ್ವಾರಪಾಲಕನನ್ನೂ ಆಕ್ರಮಿಸುತ್ತಿತ್ತು. ಮೊದಮೊದಲು ನಿದ್ದೆಗೆ ಒಳಗಾಗಬಾರದೆಂದು ದೃಢಮಾಡಿಕೊಂಡು ಅತ್ತಿತ್ತ ಸುತ್ತಾಡುತ್ತಿದ್ದನು. ಹೀಗೆ ಸ್ವಲ್ಪಹೊತ್ತು ಕಳೆದ ಬಳಿಕ ಒಂದೊಂದು ಕಣ್ಣನ್ನು ಮುಚ್ಚಿಕೊಂಡು ಒಂದೊಂದು ಕ್ಷಣ ನಿದ್ರಿಸಲು ಪ್ರಾರಂಭಮಾಡಿದನು. ಇನ್ನೂ ಸ್ವಲ್ಪಹೊತ್ತಿನಲ್ಲೇ ಎರಡು ಕಣ್ಣುಗಳಿಂದಲೂ ಒಂದೊಂದು ಕ್ಷಣ ನಿದ್ದೆಮಾಡಿದರೆ ಬಾಧಕವೇನೂ ಇಲ್ಲವೆಂದು ಭಾವಿಸಿ ಸ್ವಲ್ಪಸ್ವಲ್ಪಹೊತ್ತು ನಿದ್ರೆಮಾಡುತ್ತಾ ಬಂದನು. ಹೀಗೆ ಒಂದುಸಲ ಕಣ್ಣುಮುಚ್ಚಿಕೊಂಡು ಪುನಃ ಬಿಟ್ಟಾಗ, ಈ ದ್ವಾರಪಾಲಕನ ಇದಿರಿಗೆ ಖರತರಖಡ್ಗಪಾಣಿಯಾದ ಒಬ್ಬ ಭಟನು ದುರ್ಗದ್ವಾರದ ಕಡೆಗೆ ಬರುತ್ತಿದ್ದುದನ್ನು ಕಂಡನು. ಪುನಃ “ ಯಾರು ಅಲ್ಲಿ ಬರುವವರು ? ಅಲ್ಲೇ ನಿಂತು ಸರಿಯಾದ ಸಮಾಧಾನವನ್ನು ಹೇಳಿದರೆ ಸರಿ ; ಇಲ್ಲದಿದ್ದರೆ ನಿನಗೆ

ನನ್ನ ಕತ್ತಿಯ ರುಚಿಯನ್ನು ತೋರಿಸುವೆನು." ಎಂದು ಮುಂದಕ್ಕೆ ನುಗ್ಗಿ ತಡೆದನು.

"ಅಯ್ಯಾ, ಹೊಸಬರು ಯಾರೂ ಅಲ್ಲ—ನಾನು ದುರ್ಗಾಧ್ಯಕ್ಷನು" ಎಂದು ಆ ಪುರುಷನು ಹೇಳಿದನು.

ವಾಸ್ತವವಾಗಿಯೂ ದುರ್ಗವನ್ನು ಯಾರು ಯಾರು ಹೇಗೆಹೇಗೆ ರಕ್ಷಿಸುತ್ತಿರುವರೆಂದು ಪರೀಕ್ಷಿಸಲು ತೋಫಲ್‌ಖಾನನೇ ಪರೀಕ್ಷಿಸುತ್ತಾ ಆ ಸ್ಥಳಕ್ಕೂ ಬಂದಿದ್ದನು.

ಈ ಮಾತುಗಳನ್ನು ಕೇಳಿ ಆ ದ್ವಾರಪಾಲಕನು ಭಯಾತಿಶಯದಿಂದ ಗಡಗಡನೆ ನಡುಗುತ್ತಾ ಆತನ ಕಾಲಿಗೆಬಿದ್ದು, ಅಪರಾಧವನ್ನು ಕ್ಷಮಿಸಬೇಕೆಂದು ಕೇಳಿಕೊಂಡನು. ಆಗ ಖಾನನು "ಅಯ್ಯಾ! ಯಾಕೆ ಹೀಗೆ ಕೇಳಿಕೊಳ್ಳುವೆ. ನಿನ್ನ ಕರ್ತವ್ಯವನ್ನು ನೀನುಮಾಡಿದೆ ಅದಕ್ಕೆ ಕೋಪವೇಕೆ? ಈ ದುರ್ಗದಲ್ಲಿರುವ ಸ್ತ್ರೀಯರು ಸುರಕ್ಷಿತರಾಗಿರುವರಷ್ಟೆ. ಇಲ್ಲಿಗೆ ಕೆಲವರು ರಾಜದ್ರೋಹಿಗಳು ಬಂದಿರುವರಂತೆ. ಎಚ್ಚರದಿಂದಿರು" ಎಂದು ಹೇಳಿದನು.

"ಮಹಾಪ್ರಭು, ನಾನು ಬಹಳ ಜಾಗರೂಕನಾಗಿರುವೆನು. ಈಗ ಸ್ವಲ್ಪ ಹೊತ್ತಿಗೆ ಹಿಂದೆ ಮಾಲತಿಯು ನನಗೆ ತನ್ನ ಉಂಗುರವನ್ನು ತೋರಿಸಿ ಹೊರಕ್ಕೆ ಹೋದಳು. ಅವಳು ಇನ್ನೂ ಬಂದಿಲ್ಲ. ತಮ್ಮ ಪರಿಚಾರಿಕೆಯು ಎಂದಿನಂತೆ ಆಹಾರಪದಾರ್ಥಗಳನ್ನು ಕೊಟ್ಟು ಈಗತಾನೆ ಇತ್ತ ಕಡೆ ಹೋದಳು."

ತೋಫಲ್‌ಖಾನನು ಅನಂಗಸೇನೆಯನ್ನು ನೋಡುವುದಕ್ಕೆ ಹೋದಾಗೆಲ್ಲಾ ಮಾಲತಿಯು ಇದಿರಿಗೆ ಇರುತ್ತಿದ್ದುದರಿಂದ ಅನಂಗಸೇನೆಯನ್ನು ಚೆನ್ನಾಗಿ ನೋಡುವುದಕ್ಕಾಗಲಿ ಆಕೆಯೊಡನೆ ಒಂದು ಮಾತನ್ನಾದರೂ ಆಡುವುದಕ್ಕಾಗಲಿ ಅವಕಾಶವೇ ಇರುತ್ತಿರಲಿಲ್ಲ. ಆದುದರಿಂದ ಮಾಲತಿಯು

ಇಲ್ಲದೇ ಇದ್ದ ಆ ಸಮಯದಲ್ಲಿ ಒಂದುಸಾರಿ ಅನಂಗಸೇನೆಯನ್ನು ನೋಡಿ ಮಾತನಾಡಿಕೊಂಡು ಬರೋಣವೆಂದು ಆ ಮಂದಿರದೊಳಕ್ಕೆ ಹೋದನು. ಅಲ್ಲಿ ಮಲಗಿದ್ದ ಸ್ತ್ರೀಯು, ಅನಂಗಸೇನೆಯು ಧರಿಸುತ್ತಿದ್ದ ಸೀರೆಯನ್ನು ಉಟ್ಟುಕೊಂಡು ಇದ್ದುದರಿಂದ, ಆಕೆಯನ್ನು ಅನಂಗಸೇನೆಯೆಂದೇ ಭ್ರಮಿಸಿದನು. ಆಕೆಯೊಡನೆ ಮಾತನಾಡಬಹುದೋ ಕೂಡದೋ ಎಂದು ಸ್ವಲ್ಪ ಹೊತ್ತು ಅನುಮಾನಿಸಿ, ಕಡೆಗೆ ಆಕೆಯು ಮಲಗಿದ್ದ ಸ್ಥಳಕ್ಕೆ ಸ್ವಲ್ಪ ದೂರದಲ್ಲಿ ನಿಂತುಕೊಂಡು "ಸುಂದರಿ! ಅನಂಗಸೇನೆ!" ಎಂದು ಎರಡುಮೂರು ಸಾರಿ ಕೂಗಿದನು. ಆಕೆಯಿಂದ ಉತ್ತರ ಯಾವುದೂ ಬಾರದೇ ಇದ್ದುದರಿಂದ ಮತ್ತೂ ಸಮೀಪಕ್ಕೆ ಹೋಗಿ ನೋಡಿದಕೂಡಲೆ, ಖಾನನಿಗೆ ದಿಗ್ಭ್ರಮೆಯಾಯಿತು. ಅವನು "ಎಲೇ! ದಾಸಿ! ನೀಚಳೆ! ಅನಂಗಸೇನೆಯ ವಸ್ತ್ರಗಳನ್ನು ಧರಿಸಿ ಇಲ್ಲೇಕೆ ಬಿದ್ದಿರುವೆ? ನಿಜಹೇಳು; ಇಲ್ಲದಿದ್ದರೆ ಕತ್ತರಿಸಿ ಹಾಕುವೆನು" ಎಂದು ಗರ್ಜಿಸಿದನು.

ಈ ಮಾತುಗಳನ್ನುಕೇಳಿ ಎಚ್ಚರವಾದ ಆ ದಾಸಿಯು ಇದಿರಿಗೆ ನಿಂತಿದ್ದ ದುರ್ಗಾಧ್ಯಕ್ಷನನ್ನು ನೋಡಿ ಬಹಳ ಹೆದರಿ ಗದ್ಗದಸ್ವರದಿಂದ "ಮಹಾ ಪ್ರಭುಗಳೇ! ಅಭಯವನ್ನು ದಯಪಾಲಿಸುವುದಾದರೆ ನಡೆದ ಸಂಗತಿಯನ್ನು ಹೇಳುವೆನು." ಎಂದು ಬೇಡಿಕೊಂಡಳು. ಖಾನನು ಅಭಯದಾನವನ್ನು ಮಾಡಲು ಅದುವರೆಗೆ ನಡೆದಿದ್ದ ಸಮಾಚಾರವೆಲ್ಲವನ್ನೂ ಸಾಂಗವಾಗಿ ವಿವರಿಸಿದಳು. ಕೈಗೆ ಸಿಕ್ಕಿದ್ದ ಹಕ್ಕಿಯು ಹಾರಿಹೋಯಿತಲ್ಲಾ! ಎಂದು ಖಾನನು ಬಹಳವಾಗಿ ವ್ಯಥೆಪಡುತ್ತಾ ತನ್ನ ಸೌಧಕ್ಕೆ ಹಿಂತಿರುಗಿದನು.

*

ಮೂವತ್ತುಮೂರನೆಯ ಪ್ರಕರಣ.

ರುದ್ರದೇವ

ತಿಮ್ಮರಸನು ಮಾಡಿದ ಉಪಾಯಗಳನ್ನು ರಾಮರಾಜನು ಹೇಳಿದ ಕೂಡಲೆ, ರಾಮಯನ ಪ್ರಯತ್ನಗಳು ನಡೆಯಲಾರವೆಂದು ಮುಕ್ತಾಂಬೆಯು ನಿರ್ಧರಿಸಿದಳು. ಈಗ, ರಾಯರು ಅದಿಲ್‌ಷಹನನ್ನು ಓಡಿಸಿದುದನ್ನು ಕೇಳಿ ಸಂಪೂರ್ಣವಾಗಿ ನಿರಾಶಳಾದಳು. ರಾಮಯನನ್ನು ಕರೆಯಕಳುಹಿಸಿ ಇನ್ನಾದರೂ ಆತನು ತನ್ನ ಪ್ರಯತ್ನವನ್ನು ನಿಲ್ಲಿಸಬೇಕೆಂದು ತಿಳಿಸುವೆನು ಎಂದು ಭಾವಿಸಿದಳು; ಆದರೆ ರಾಮಯನು ತನ್ನ ಮಾತನ್ನು ಕೇಳದೆ ಹೋಗಬಹುದೆಂದು ಸುಮ್ಮನಾದಳು. ಆಗ ಮುಕ್ತಾಂಬೆಯು ಒಂದು ಪತ್ರವನ್ನು ಬರೆದು ಒಂದು ಲಕೋಟೆಯೊಳಕ್ಕೆ ಹಾಕಿ ಅದನ್ನು ವಿಶ್ವಾಸಪಾತ್ರನಾದ ಬಬ್ಬನಕ್ಕೆಯಲ್ಲಿ ಕಳುಹಿಸಬೇಕೆಂದೂ, ರುದ್ರದೇವನೇ ಅದಕ್ಕೆ ತಕ್ಕವನೆಂದೂ ನಿರ್ಧರಿಸಿದಳು. ಹೀಗಿರುವಲ್ಲಿ ಆಕೆಯನ್ನು ನೋಡಬೇಕೆಂದು ರುದ್ರದೇವನು ಬಂದಾಗ, "ಓ ವೀರಶ್ರೇಷ್ಠ! ಎಷ್ಟು ದಿನಗಳಮೇಲೆ ನಿನ್ನ ಸಂದರ್ಶನವಾಯಿತು! ಏನು! ನನ್ನ ವಿಷಯವೇ ಮರೆತು ಹೋಗಿತ್ತೆ? ಅಥವಾ ನನ್ನನ್ನು ನೋಡಬೇಡವೆಂದು ರಾಮಯಮಂತ್ರಿಯು ಅಪ್ಪಣೆ ಮಾಡಿದ್ದನೋ?" ಎಂದು ಮುಕ್ತಾಂಬೆಯು ಕೇಳಿದಳು.

"ಸುಂದರಿ! ನಿನ್ನ ಮನೋಹರಾಕಾರವು ನನ್ನ ಮನೋದರ್ಪಣದಲ್ಲಿ ಸ್ಥಿರವಾಗಿ ನೆಲಸಿರುವಾಗ ನಿನ್ನನ್ನು ಮರೆಯುವುದು ಹೇಗೆ? ನಾನು ಪ್ರತಿದಿವಸವೂ ಇಲ್ಲಿಗೆ ಬರುತ್ತಿದ್ದೆನು; ನಿನ್ನನ್ನು ನೋಡಲು ಅವಕಾಶ ಸಿಕ್ಕದೆ ಪ್ರತಿದಿವಸವೂ ಹಿಂದಕ್ಕೆ ಹೋಗುತ್ತಿದ್ದೆನು" ಎಂದು ರುದ್ರದೇವನು ಹೇಳಿದನು.

ರುದ್ರದೇವನು ಹೇಳಿದಮಾತು ನಿಜ, ಆತನು ಬಂದಾಗೆಲ್ಲಾ ಏನಾದರೂ ಒಂದು ಕಾರಣವನ್ನು ಹೇಳಿ ರುದ್ರದೇವನಿಗೆ ಸಂದರ್ಶನವನ್ನು ಕೊಡದೆ ಆಕೆಯು ಕಳುಹಿಸಿ ಬಿಡುತ್ತಿದ್ದಳು. ಆದರೂ ಈಗ ಅವನಿಂದ ಕೆಲಸವಾಗಬೇಕಾಗಿದ್ದ ಕಾರಣ, ಅವನನ್ನು ವಶಪಡಿಸಿಕೊಳ್ಳುವುದಕ್ಕಾಗಿ ಹೀಗೆ ಮಾತನಾಡುತ್ತಿದ್ದಳು. ರುದ್ರದೇವನ ಮಾತುಗಳನ್ನು ಕೇಳಿ ಬಹಳ ಸಂತೋಷಪಟ್ಟವಳಂತೆ, "ರುದ್ರದೇವ! ಪರಿಹಾಸಾರ್ಥವಾಗಿ ಹೇಳಿದ ಮಾತುಗಳನ್ನು ನಿಜವೆಂದು ನಂಬಬೇಡ. ನನ್ನಲ್ಲಿ ನಿನಗೆ ಎಷ್ಟು ಅನುರಾಗವಿದೆ ಎಂಬುದನ್ನು ನೀನು ಪ್ರತಿದಿನವೂ ಇಲ್ಲಿಗೆ ಬರುತ್ತಿದ್ದುದರಿಂದಲೇ ತಿಳಿದುಕೊಂಡೆನು. ಆದರೆ ನಿನ್ನನ್ನು ಮತ್ತೆಮತ್ತೆ ಪರೀಕ್ಷಿಸಬೇಕೆಂದು ಹಾಗೆ ಮಾಡುತ್ತಿದ್ದೆನು. ರಾಮಯಾಮಂತ್ರಿಯ ಪ್ರಯತ್ನಗಳು ಹೇಗಿವೆ? ನಮ್ಮ ಕಷ್ಟಗಳು ಎಂದಾದರೂ ತೊಲಗಿ ನಮಗೆ ಸುಖವುಂಟಾದೀತೆ?" ಎಂದು ಬಹಳ ವ್ಯಸನದಿಂದ ಕೇಳಿದಳು.

"ರಮಣೀಮಣಿ! ರಾಮಯಾಮಂತ್ರಿಯು ಬುದ್ಧಿವಂತನೇ! ಆತನ ಕಾರ್ಯಗಳಲ್ಲಿ ಪುರುಷಪ್ರಯತ್ನಕ್ಕೆ ಸ್ವಲ್ಪವಾದರೂ ಲೋಪವಿಲ್ಲ. ಆದರೆ ದೈವಸಹಾಯವಿಲ್ಲದಿರುವುದರಿಂದ ಆತನ ಪ್ರಯತ್ನಗಳು ವ್ಯರ್ಥವಾಗುತ್ತಿವೆ. ಎಷ್ಟೋ ಕಷ್ಟದಿಂದ ಒಟ್ಟುಗೂಡಿಸಿದ್ದ ಮಹಮ್ಮದೀಯ ರಾಜ್ಯಗಳು ಪುನಃ ಚದರಿಹೋದುವು. ಈ ದುರ್ಗದಲ್ಲಿ ಸೆರೆಬಿದ್ದಿದ್ದ ವಿಜಯಸಿಂಹನೂ ತಪ್ಪಿಸಿಕೊಂಡನು. ಇಷ್ಟೆಲ್ಲಾ ಆದರೂ ರಾಮಯನು ಎದೆಗುಂದಲಾರನು," ಎಂದು ರುದ್ರದೇವನು ಧೈರ್ಯಹೇಳಿದನು.

"ವೀರಶ್ರೇಷ್ಠನೇ! ನೀನು ಹೇಳಿದುದು ನಿಜ. ರಾಮಯಾಮಂತ್ರಿಯು ಸ್ಥಿರಪ್ರತಿಜ್ಞನೂ, ಅಧ್ಯವಸಾಯಿಯೂ ಹೌದು. ಆದರೆ ಕಾರ್ಯವು ನೆರವೇರದೆ ಹೋದುದರಿಂದ ನಾನು ಉಭಯಭ್ರಷ್ಟಳಾದೆನು. ಯುದ್ಧಪ್ರಯತ್ನವೂ ಕೆಟ್ಟಿತು. ಅದಿಲ್‌ಷಹನಿಗೆ ತನ್ನ ರಾಜ್ಯವನ್ನೇ ಉಳಿಸಿಕೊಳ್ಳುವ

ಶಕ್ತಿಯಿರುವುದೋ ಇಲ್ಲವೋ ಸಂದೇಹವಾಗಿದೆ. ಇಂತಹುದರಲ್ಲಿ ಅವನು ನಮಗೆ ಹೇಗೆ ಸಹಾಯಮಾಡುವನು ? ಇಷ್ಟೇ ಅಲ್ಲದೆ ಅವನಿಗೂ ರಾಯರಿಗೂ ಮೈತ್ರಿ ಇರುವುದರಿಂದ, ನಮಗೇ ಏನಾದರೂ ಕೇಡನ್ನು ಮಾಡಬಹುದು ಎಂದು ನನಗೆ ಹೆದರಿಕೆಯುಂಟಾಗಿದೆ ಆದುದರಿಂದ ಈ ಸ್ಥಳವನ್ನು ಬಿಟ್ಟು ಮತ್ತೆಲ್ಲಾದರೂ ಹೋಗಬೇಕೆಂದಿರುವೆನು. ಇದಕ್ಕೆ ನಿನ್ನಭಿಪ್ರಾಯವೇನು ?" ಎಂದು ಕೇಳಿದಳು.

"ಲಲನಾಮಣಿ ! ಕಾರ್ಯಾಕಾರ್ಯವಿವೇಚನಾಶೀಲೆಯಾದ ನಿನಗೆ ನಾನು ಆಲೋಚನೆಯನ್ನು ಹೇಳಬೇಕೆ ? ಆದರೂ ನಾವು ಈ ಸ್ಥಳವನ್ನು ಬಿಟ್ಟರೆ ಮತ್ತೆಲ್ಲಿಗೆ ಹೋಗುವುದಕ್ಕಾದೀತು ! ನಮ್ಮನ್ನು ರಾಯರ ಸೆರೆಮನೆಯಿಂದ ರಾಮಯನು ತಪ್ಪಿಸಿಕೊಂಡು ಬಂದಿರುವನು. ಇದಕ್ಕಾಗಿ ಕೋಪದಿಂದ ನಮ್ಮನ್ನು ಕಳುಹಿಸಿಕೊಡಬೇಕೆಂದು ಅದಿಲ್‌ಷಹನಿಗೆ ಹೇಳಿ ಕಳುಹಿಸಿದ್ದುದು ನಿನಗೇ ಗೊತ್ತು. ಹೀಗಿರುವಲ್ಲಿ ನಾವೇ ಅವರಲ್ಲಿಗೆ ಹೋದರೆ ಕಟುಕನ ಅಡಿಗೆಯಮನೆಗೆ ಮೊಲವು ಹೋದಂತಾಗುವುದಿಲ್ಲವೇ ? ವಿಜಯನಗರಕ್ಕೆ ನಾವಾಗಿ ಹೋದರೂ ನಮಗೆ ದಂಡನೆಯು ತಪ್ಪಲಾರದು. ಆದುದರಿಂದ ಬಿಜಾಪುರದ ದೊರೆಯ ಸಹಾಯದಿಂದ ರಾಯರೊಡನೆ ಯುದ್ಧಮಾಡುವುದೇ ಒಳ್ಳೆಯದು" ಎಂದು ಹೇಳಿದನು.

"ರುದ್ರದೇವ ! ನೀನು ಹೇಳುವುದು ಸರಿಯಲ್ಲವೆನ್ನಲು ಹೇಗಾದೀತು ? ಆದರೆ ವಿಜಯನಗರದೊಡನೆ ಪ್ರತಿಭಟಿಸಿ ಜಯಶೀಲರಾಗುವುದು ಸಾಧ್ಯವೇ ? ಈಗಲೇ ಶರಣಾಗತರಾಗಿ ಕ್ಷಮಿಸಬೇಕೆಂದು ಕೇಳಿಕೊಳ್ಳುವುದು ಒಳ್ಳೆಯದು. ಅದನ್ನು ಬಿಟ್ಟು ಇನ್ನೂ ಕೆಲವು ಅಪರಾಧಗಳನ್ನು ಮಾಡಿ ಅವರ ಕೋಪಾಗ್ನಿಯು ಉಜ್ವಲಿಸುವಂತೆ ಮಾಡುವುದು ಸರಿಯಲ್ಲ. ಈ ಸಮಯದಲ್ಲಿ ನಿನ್ನಿಂದ ಒಂದು ಉಪಕಾರವಾಗಬೇಕಾಗಿದೆ. ನಿನ್ನಿಂದ ಆದೀತೆ ?" ಎಂದು ಮುಕ್ತಾಂಬೆಯು ಕೇಳಿದಳು.

ರುದ್ರ—“ಸಂದೇಹವೇಕೆ? ಹೇಳು. ಸಾಧ್ಯವಾದರೆ, ತಪ್ಪದೆ ಕೆಲಸ ಮಾಡುವೆನು ಎಂದು ನಂಬು.”

ಮುಕ್ತಾಂಬೆ—“ರುದ್ರದೇವ! ನೀನು ಮಾಡಬೇಕಾದ ಕೆಲಸವು ಅಸಾಧ್ಯವಾದುದೇನೂ ಅಲ್ಲ. ನಾನು ಒಂದು ಕಾಗದವನ್ನು ಬರೆದಿಟ್ಟಿರುವೆನು. ಅದನ್ನು ನೀನು ತೆಗೆದುಕೊಂಡು ಹೋಗಿ ರಾಯರಿಗೆ ತಲುಪಿಸಬೇಕು. ಇದಕ್ಕಿಂತಲೂ ನೀನು ಮಾಡಬೇಕಾದ ದೊಡ್ಡ ಕೆಲಸವೇನೂ ಇಲ್ಲ.”

ರುದ್ರ—“ರಮಣೀಮಣಿ! ಇದು ಕಷ್ಟಸಾಧ್ಯವೆಂದೇ ಭಾವಿಸಬೇಕಾಗಿದೆ. ಇದುವರೆಗೆ ರಾಯರಿಗೂ ಅವರ ವಿಶ್ವಾಸಪಾತ್ರರಿಗೂ ಎಷ್ಟೋ ಅಪಕಾರಗಳನ್ನು ಮಾಡಿರುವೆವು. ಈಗ ಅವರಬಳಿಗೆ ಹೋದರೆ ನನ್ನನ್ನು ಜೀವಸಹಿತವಾಗಿ ಬಿಡುವರೇ?”

ಮುಕ್ತಾಂಬೆ—“ವೀರಶ್ರೇಷ್ಠನೇ! ನಿನಗೆ ಇಂತಹ ಸಂದೇಹವಿದ್ದರೆ, ನೀನು ಹೋಗಬೇಕಾಗಿಲ್ಲ. ಮೊದಲು ನೀನು ಧೈರ್ಯವಂತರಾಡುವ ಮಾತುಗಳನ್ನು ಹೇಳುತ್ತಿದ್ದುದರಿಂದ ನಿನ್ನ ಸಹಾಯವನ್ನು ಕೋರಿದೆನು. ಧೈರ್ಯಶಾಲಿಗಳಿಗೆ ಅತ್ಯಂತ ಸುಲಭವಾಗಿರುವ ಈ ಕಾರ್ಯವು ನಿನ್ನಂತಹ ಸಾಮಾನ್ಯರಿಗೆ ಕಷ್ಟಸಾಧ್ಯವು ತಾನೆ. ಈ ಕಾರ್ಯವನ್ನು ಮಾಡುವವರು ಯಾರಾದರೂ ಸಿಕ್ಕುವರು. ಇಂತಹ ಸಾಹಸವು ವಿಜಯಸಿಂಹನಿಗೇ ಸರಿ. ಪರಮಶತ್ರುಗಳು ಕಿಕ್ಕಿರಿದು ತುಂಬಿಕೊಂಡಿದ್ದ ಆ ಸಭೆಯಲ್ಲಿ ಅವನು ಎಷ್ಟು ನಿರ್ಭಯವಾಗಿ ಮಾತನಾಡಿದನು! ನೋಡು!”

ರುದ್ರದೇವನಿಗೆ ಈ ಮಾತುಗಳನ್ನು ಕೇಳಿ ಅತ್ಯಂತ ವ್ಯಸನವೂ ನಾಚಿಕೆಯೂ ಉಂಟಾಯಿತು. ತನ್ನ ಶತ್ರುವಾದ ವಿಜಯಸಿಂಹನು ತನಗಿಂತಲೂ ಧೈರ್ಯಶಾಲಿಯೆಂದು ಭಾವಿಸಿರುವಳಲ್ಲಾ! ಎಂಬ ಯೋಚನೆಯು ಅವನಿಗೆ ಕಠಾಪ್ರಹಾರದಂತೆ ಬಾಧಿಸುತ್ತಿತ್ತು. ಅಂತಹ ಕಾರ್ಯಕ್ಕೆ ಹಿಂತೆಗೆದರೆ

ತನ್ನಲ್ಲಿ ಮುಕ್ತಾಂಬೆಗೆ ಅನುರಾಗವು ನಿಲ್ಲಲಾರದೆಂದು ಯೋಚಿಸಿ " ಓ ಯುವತಿಶ್ರೇಷ್ಠಳೇ ! ಇನ್ನು ನನಗೆ ಹೆಚ್ಚಾಗಿ ಹೇಳಬೇಡ. ಎಷ್ಟು ಕಷ್ಟವಾದರೂ ಈ ಕೆಲಸವನ್ನು ಮಾಡುವೆನು. ನಾನು ಶತ್ರುಗಳಕೈಗೆ ಸಿಕ್ಕಿಬಿದ್ದರೆ ನಿಮಗೆಲ್ಲಾ ವ್ಯಸನವುಂಟಾಗುವುದೆಂದು ಸಂದೇಹಿಸಿ ಹಾಗೆ ಹೇಳಿದೆನೇ ಹೊರತು, ನನ್ನ ಪ್ರಾಣದಮೇಲಿನ ಆಸೆಯಿಂದಲ್ಲ " ಎಂದು ರುದ್ರದೇವನು ಹೇಳಿದನು.

" ರುದ್ರದೇವ ! ಇನ್ನೆಷ್ಟೇ ಅಪಕಾರಗಳನ್ನು ಮಾಡಿದ್ದರೂ, ಈಗ ನೀನು ದೂತನಾಗಿ ಹೋಗುವುದರಿಂದ, ರಾಜಧರ್ಮವಿದರಾದ ರಾಯರು ನಿನಗೆ ಯಾವ ಕೇಡನ್ನೂ ಮಾಡಲಾರರು. ಆದುದರಿಂದ ಈ ಕಾಗದವನ್ನು ಧೈರ್ಯದಿಂದ ತೆಗೆದುಕೊಂಡು ಹೋಗು. ಆದರೆ ರಾಮಯಮಂತ್ರಿಗೆ ಮಾತ್ರ ತಿಳಿಸಕೂಡದು " ಎಂದು ಮುಕ್ತಾಂಬೆಯು ಹೇಳಿ ಕಳುಹಿಸಿದಳು.

ರುದ್ರದೇವನು ಕಾಗದವನ್ನು ತೆಗೆದುಕೊಂಡು ದುರ್ಗದಿಂದ ಹೊರಕ್ಕೆ ಹೋಗುತ್ತಿರಲು ದ್ವಾರಪಾಲಕನು ಅವನನ್ನು ತಡೆದನು. ಆದರೆ ದುರ್ಗಾಧ್ಯಕ್ಷನ ಅಪ್ಪಣೆಯಮೇರೆಗೆ ಬಿಜಾಪುರಕ್ಕೆ ಹೋಗುತ್ತಿರುವುದಾಗಿ ತಿಳಿಸಲು, ರುದ್ರದೇವನ ಪರಿಚಯವು ಅವರಿಗಿದ್ದುದರಿಂದ ನಂಬಿ ಅವನನ್ನು ಮುಂದಕ್ಕೆ ಹೋಗಗೊಟ್ಟರು. ಇನ್ನುಮುಂದಕ್ಕೆ ನಿರಾಶಂಕವಾಗಿ ಪ್ರಯಾಣಮಾಡುತ್ತಾ ಕೃಷ್ಣಾನದೀ ತೀರದಲ್ಲಿ ಪಾಳೆಯವನ್ನು ಬಿಟ್ಟುಕೊಂಡಿದ್ದ ರಾಯರಬಳಿಗೆ ಹೋಗುತ್ತಿದ್ದನು. ಹೀಗೆ ಒಂದುಕ್ರೋಶ ಹೋಗಲಾಗಿ ಕತ್ತಲೆಯು ದಟ್ಟವಾಗುತ್ತ ಬಂತು. ಅಂತಹ ರಾತ್ರಿಯಲ್ಲಿ ಶತ್ರುಗಳ ಪಾಳೆಯಕ್ಕೆ ಪ್ರಯಾಣಮಾಡುವುದು ಸರಿಯಲ್ಲವೆಂದು ಭಾವಿಸಿ ಸಮೀಪದಲ್ಲಿದ್ದ ಒಂದು ಹಳ್ಳಿಯಲ್ಲಿ ರಾತ್ರಿಯನ್ನು ಕಳೆದು ಬೆಳಗ್ಗೆ ರಾಯರಬಳಿಗೆ ಹೋಗಬೇಕೆಂದು ಯೋಚಿಸಿಕೊಳ್ಳುತ್ತಿದ್ದನು. ಆಗ ಹಿಂದೆ ಯಾನೋಬ್ಬ ಮಾರ್ಗಸ್ಥನು ಬರುತ್ತಿದ್ದಂತೆ ಕಂಡುಬಂತು. ಅವನ ಕೈಯಲ್ಲಿ ಯಾವ ಆಯುಧವೂ ಇರಲಿಲ್ಲವಾ

ದುದರಿಂದ ಅವನೂ ಒಬ್ಬ ಪ್ರಯಾಣಿಕನೆಂದು ನಿರ್ಧರಿಸಿ ಈ ರೀತಿಯಲ್ಲಿ ಸಂಭಾಷಣೆಯನ್ನು ಆರಂಭಿಸಿದನು :—

ರುದ್ರ—“ ಅಯ್ಯಾ, ನೀವು ಯಾರು ? ಎಲ್ಲಿಗೆ ಹೋಗುವಿರಿ ? ”

ಮಾರ್ಗಸ್ಥ—“ ನಮ್ಮದು ಅಗೋ ಅಲ್ಲಿ ಕಾಣುತ್ತಿರುವ ಹಳ್ಳಿ ; ಕಾರ್ಯಾರ್ಥವಾಗಿ ರಾಯಚೂರಿಗೆ ಹೋಗಿ ಹಿಂತಿರುಗುತ್ತಿದೇನೆ. ನೀವು ಯಾರು ? ಎಲ್ಲಿಗೆ ಹೋಗುತ್ತಿರುವಿರಿ. ? ”

ರುದ್ರ—“ ನಾನು ರಾಯಚೂರಿನ ನಿವಾಸಿ. ಒಂದು ಕಾರ್ಯಕ್ಕಾಗಿ ರಾಯರ ಬಳಿಗೆ ಹೋಗುತ್ತಿರುವೆನು. ಈ ರಾತ್ರಿ ಹಳ್ಳಿಯಲ್ಲಿ ತಂಗಿದ್ದು, ನಾಳೆ ಬೆಳಗ್ಗೆ ನನ್ನ ಕೆಲಸದಮೇಲೆ ಹೊರಡಬೇಕೆಂದಿರುವೆನು. ಇಳಿದು ಕೊಳ್ಳಲು ಅಲ್ಲಿ ಸ್ಥಳವು ಸಿಕ್ಕುವುದೇ ? ”

ಮಾರ್ಗಸ್ಥ—“ ಸಿಕ್ಕುವುದು ; ನಿಮ್ಮದು ಯಾವ ಜಾತಿ ? ಹೇಳಿದರೆ ನಿಮಗೆ ಸ್ಥಳವು ಯಾವಕಡೆ ಸಿಕ್ಕುವುದೆಂದು ಹೇಳುವೆನು.”

ರುದ್ರ—“ ನಾನು ರೆಡ್ಡಿ ವಂಶದವನು. ಈಗ ನಾನು ಈ ಸ್ಥಿತಿಯ ಲ್ಲಿದ್ದರೂ ನಮ್ಮ ಪೂರ್ವಿಕರು ದುರ್ಗಾಧಿಪತ್ಯವನ್ನು ನಡೆಸುತ್ತಿದ್ದರು.”

ಮಾರ್ಗಸ್ಥ—“ ರೆಡ್ಡಿಗಳ ಪ್ರಖ್ಯಾತಿಯನ್ನು ನಾನು ಕೇಳಿರುವೆನು. ನಮ್ಮ ಊರಲ್ಲಿ ರೆಡ್ಡಿ ಕುಲದವರು ಇರುವರು. ಯಾವುದೋ ಕೆಲಸ ಕ್ಕಾಗಿ ಕೆಲವು ದಿನಗಳ ಹಿಂದೆ ಅವರು ನಮ್ಮ ಊರಿಗೆ ಬಂದಿರುವರು. ನೀವು ಈ ರಾತ್ರಿ ಅಲ್ಲಿ ಆತಿಥ್ಯವನ್ನು ಹೊಂದಿ ಮುಂದಕ್ಕೆ ಪ್ರಯಾಣ ಮಾಡುವುದು ಉಚಿತವೆಂದು ತೋರುವುದು.”

ರುದ್ರ—“ ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗಿ ಬಿಡು ವಿರಾ ? ”

ಮಾರ್ಗಸ್ಥ—“ ಓಹೋ ! ಅದಕ್ಕೇನು ? ಆಗಲಿ ”

ಹೀಗೆ ಮಾತನಾಡುತ್ತಾ ಅವರಿಬ್ಬರೂ ಮುಂದಕ್ಕೆ ಹೊರಟು ಗ್ರಾಮವನ್ನು ಸೇರಿದರು. ಅವರು ಹೊಕ್ಕ ಬೀದಿಯಲ್ಲಿ ನಾಲ್ಕೈದು ಮನೆಗಳನ್ನು ದಾಟಿದ ಕೂಡಲೆ ಅಲ್ಲಿ ಒಂದು ಮನೆಯ ಮುಂದೆ ನಿಂತು ರುದ್ರದೇವನನ್ನು ಕುರಿತು, “ ಅಯ್ಯಾ! ನಾನು ಹೇಳಿದುದು ಈ ಮನೆಯೇ. ಈ ಮನೆಯವರು ಬಹಳ ಒಳ್ಳೆಯವರು ; ಶ್ರೀಮಂತರು ; ಚೆನ್ನಾಗಿ ಆದರಿಸುವರು” ಎಂದು ಹೇಳಿ ಆ ಮಾರ್ಗಸ್ಥನು ತನ್ನ ದಾರಿಯನ್ನು ಹಿಡಿದನು. ಆ ಮನೆಯ ಬಾಗಿಲಲ್ಲಿ ಸುಮಾರು ಇಪ್ಪತ್ತು ವರ್ಷ ವಯಸ್ಸಿನ ಸ್ತ್ರೀಯು ಹಿಮ್ಮೊಗವಾಗಿ ನಿಂತು ಯಾರೊಡನೆಯೋ ಮಾತನಾಡುತ್ತಿದ್ದಳು. ರುದ್ರದೇವನು ಸಮೀಪಕ್ಕೆ ಹೋಗಲು ನಾಚಿ ದೂರದಲ್ಲೇ ನಿಂತು, “ ಅಮ್ಮಾ ! ನಾನು ರೆಡ್ಡಿ ಕುಲದವನು. ನನ್ನ ಹೆಸರು ರುದ್ರದೇವ. ಈ ರಾತ್ರಿ ಇಲ್ಲಿ ವಿಶ್ರಮಿಸಿಕೊಳ್ಳಲು ನನಗೆ ಅನುಕೂಲವು ಸಿಕ್ಕೀತೇ?” ಎಂದು ಸಂಕೋಚದಿಂದ ಕೇಳಿದನು.

ಆಗ ಆ ಯುವತಿಯು ಅವನ ಕಡೆಗೆ ತಿರುಗಿ, “ ಓಹೋ ! ಸೋದರ, ರುದ್ರದೇವ! ಇದೇನು ? ಇಷ್ಟು ಹೊತ್ತಿನಲ್ಲಿ ಎಲ್ಲಿಂದ ಬರುತ್ತಿರುವೆ ? ಎಲ್ಲಿಗೆ ಹೋಗುತ್ತಿರುವೆ ? ನಾವು ಇಲ್ಲಿರುವೆವೆಂದು ನಿನಗೆ ಯಾರು ಹೇಳಿದರು ? ಕುಳಿತುಕೊ. ನಿಮ್ಮ ಭಾವನವರು ಇಲ್ಲೇ ಒಂದು ಹಳ್ಳಿಗೆ ಹೋಗಿರುವರು. ಇನ್ನೇನು ಬಂದುಬಿಡುವರು. ಅವರು ಬಂದು ನಿನ್ನನ್ನು ಚೆನ್ನಾಗಿ ಆದರಿಸುವರು,” ಎಂದು ಆ ಯುವತಿಯು ಬಹಳ ವಿನಯದಿಂದ ಹೇಳಿದಳು.

ರುದ್ರದೇವನು ಆಕೆಯ ಮಾತುಗಳನ್ನು ಕೇಳಿ ಆಶ್ಚರ್ಯಗೊಂಡನು. ಆಕೆಯು ಅವಕುಂಠನವನ್ನು ಧರಿಸಿದ್ದುದರಿಂದ ಆಕೆ ಯಾರೆಂಬುದನ್ನು ಗುರುತಿಸಲಾಗಲಿಲ್ಲ. ಕಂಠಧ್ವನಿಯಾದರೋ ಹಿಂದೆ ಎಲ್ಲಿಯೋ ಕೇಳಿದ್ದಂತಿತ್ತು. ಆಗ, “ ಅಮ್ಮಾ ! ನೀವು ಯಾರು ? ಹಿಂದೆ ಎಲ್ಲಿಯೋ

ನೋಡಿರುವಂತಿದೆ. ಅಂತಹ ಧ್ವನಿಯನ್ನೂ ನಾನು ಹಿಂದೆ ಎಲ್ಲಿಯೋ ಕೇಳಿದಂತಿದೆ" ಎಂದು ರುದ್ರದೇವನು ಹೇಳಿದನು.

"ಅಣ್ಣಾ! ನೀನು ಮರೆತುಬಿಟ್ಟಿರುವೆ, ಆದರೆ ನಾನು ನಿನ್ನನ್ನು ಮರೆತುಬಿಡುವೆನೇ? ನನ್ನ ತೌರೂರು ಬೆಲ್ಲಮುಕೊಂಡದುರ್ಗ. ನಾನು ರಾಮಾಚಾರ್ಯರವರ ಮಗಳು. ಕಾರ್ಯಾರ್ಥವಾಗಿ ಈ ಗ್ರಾಮಕ್ಕೆ ನನ್ನ ಯಜಮಾನರೊಡನೆ ಬಂದಿರುವೆನು. ಕೆಲಸವು ಮುಗಿದ ಕೂಡಲೆ ನಮ್ಮ ಅತ್ತೆಯ ಮನೆಯಿರುವ ಚನ್ನಗಿರಿಗೆ ಹಿಂತಿರುಗುವೆವು" ಎಂದು ಆಕೆಯು ಹೇಳಿದಳು.

ರುದ್ರದೇವನಿಗೆ ರಾಮಾಚಾರ್ಯರು ಗೊತ್ತಿದ್ದಿತು. ಅವನ ಮಗಳನ್ನು ಚಂದ್ರಗಿರಿಯಲ್ಲಿದ್ದ ಒಬ್ಬ ಗೃಹಸ್ಥನಿಗೆ ಮದುವೆ ಮಾಡಿಕೊಟ್ಟಿದ್ದನೆಂದೂ ತಿಳಿದಿತ್ತು. ಅದರಿಂದ ಆಕೆಯ ಮಾತನ್ನು ಕೇಳಿ ಸಂತೋಷಿಸಿ, "ಸಹೋದರಿ! ಈಗ ಗುರುತು ತಿಳಿಯಿತು. ನಾನು ಬೆಲ್ಲಮುಕೊಂಡಕ್ಕೆ ಹೋಗಿ ಎಷ್ಟೂ ವರ್ಷಗಳಾದುವು. ಆದದರಿಂದ ಅಲ್ಲಿಯ ವೃತ್ತಾಂತವೇನೊಂದೂ ನನಗೆ ತಿಳಿಯದು. ಅಲ್ಲಿ ಎಲ್ಲರೂ ಕ್ಷೇಮವಾಗಿರುವರಷ್ಟೆ?" ಎಂದು ಕೇಳಿದನು.

"ಸಹೋದರಾ! ಎಲ್ಲರೂ ಕ್ಷೇಮದಿಂದಿರುವರು. ಈಗ ನಿನ್ನ ಪ್ರಯಾಣವು ಎಲ್ಲಿಗೋ?"

"ಸಹೋದರಿ! ರಾಯಚೂರಿನಿಂದ ಬಂದೆನು. ಕೃಷ್ಣಾತೀರದಲ್ಲಿ ಪಾಳೆಯವನ್ನು ಬಿಟ್ಟಿರುವ ರಾಯರ ಬಳಿಗೆ ಒಂದು ಕೆಲಸಕ್ಕಾಗಿ ಹೋಗುತ್ತಿದ್ದೇನೆ."

"ಅಣ್ಣಾ! ನಿನಗೆ ಮದುವೆಯಾಯಿತಲ್ಲವೆ? ಅತ್ತಿಗೆಮ್ಮನವರು ಎಲ್ಲಿಯುವರೋ! ಈ ವಿಷಯದಲ್ಲಿ ನನಗೇನೂ ತಿಳಿಯದು."

“ ವಿವಾಹವು ವ್ಯವಸ್ಥೆಯಾದಂತೆಯೇ, ಉದಯಗಿರಿ ದುರ್ಗಾಧೀಶನ ಕುಮಾರಿಯನ್ನು ಮದುವೆಯಾಗುವೆನು.”

“ ಆಕೆಯು ವಿಜಯಸಿಂಹನನ್ನು ಮದುವೆಯಾಗುವಳೆಂದು ಕೇಳಿದ್ದೆವಲ್ಲಾ! ”

“ ಆಕೆಗೆ ವಿಜಯಸಿಂಹನ ಹೆಸರನ್ನು ಕೇಳಿದರೂ ಆಗದು. ಹೀಗಿರುವಲ್ಲಿ ಅವನನ್ನು ಮದುವೆಯಾಗುವುದು ಹೇಗೆ ? ”

“ ಆ ಯುವತಿಯು ನಿನಗೆ ಲಭಿಸಿದರೆ ನೀನೇ ಬಹಳ ಅದೃಷ್ಟಶಾಲಿ. ಬಹಳ ಹೊತ್ತಾಯಿತು: ಏಳು; ಊಟಮಾಡು.” ಎಂದು ಅವನನ್ನು ಎಬ್ಬಿಸಿ ಬಡಿಸಿದಳು. ಊಟವಾದಮೇಲೆ ಆಕೆಯು ತೋರಿಸಿದ ಒಂದು ಕೊಠಡಿಯಲ್ಲಿ ಸುಖವಾಗಿ ನಿದ್ದೆಮಾಡುತ್ತಿದ್ದನು. ಸ್ವಲ್ಪ ಹೊತ್ತು ಕಳೆದ ಬಳಿಕ ಆ ಗೃಹಾಧಿಪತಿಯು ಅಲ್ಲಿಗೆ ಬಂದನು. ಅವನಿಗೂ ಆ ಸ್ತ್ರೀಗೂ ಈ ಮುಂದೆ ಹೇಳುವಂತೆ ಸಂಭಾಷಣೆ ನಡೆಯಿತು:—

ಶಂಕರರೆಡ್ಡಿ—“ ಪ್ರಿಯೇ! ಇದೇನು ಇಷ್ಟು ಸಂತೋಷದಿಂದಿರುವೆ? ಏನಾದರೂ ಶುಭವರ್ತಮಾನವಿದ್ದರೆ ಬೇಗ ತಿಳಿಸು.”

ಮಾಲತಿ—“ ಪ್ರಿಯರೇ! ಅದನ್ನೇ ಹೇಳುವುದಕ್ಕೆ ಬರುತ್ತಿದ್ದೇನೆ. ಪಕ್ಷಿಯು ಸಿಕ್ಕಿಹೋಯಿತು. ಯಾವುದನ್ನು ಹಿಡಿಯಬೇಕೆಂದು ಯೋಚಿಸುತ್ತಿದ್ದೆವೋ ಆ ಪಕ್ಷಿಯು ತಾನಾಗಿಯೇ ಬಂದು ಪಂಜರವನ್ನು ಸೇರಿಕೊಂಡಿದೆ.”

ಶಂ—“ ಮತ್ತೂ ಒಳ್ಳೆಯದೇ ಆಯಿತು.”

ಈ ಸಂಭಾಷಣೆಯು ನಡೆಯುತ್ತಿದ್ದಾಗ ಅಲ್ಲಿಗೆ ರಾಮರಾಜನು ಬಂದನು. ಅವನನ್ನು ಶಂಕರರೆಡ್ಡಿಯು, ನೋಡಿ “ ವಿಶೇಷವೇನಾದರೂ ಉಂಟೆ ? ” ಎಂದು ಕೇಳಿದನು.

ರಾಮು—" ವಿಶೇಷವೇನು ? ರುದ್ರದೇವನನ್ನು ಇಲ್ಲಿಗೆ ಕರೆತಂದೆನು. ಅವನು ಜೋಪಾನವಾಗಿರುವನಷ್ಟೆ ? "

ಶಂ—" ಭದ್ರವಾಗಿರುವನು "

ರಾಮು—" ವಿಜಯಸಿಂಹನ ಕೋರಿಕೆಯು ಸಫಲವಾಯಿತು. ಅವನ ಬೋಧನೆಯ ಮೇರೆಗೆ ಮುಕ್ತಾಂಬೆಯು ಒಂದು ಕಾಗದವನ್ನು ಬರೆದು ಅದನ್ನು ರುದ್ರದೇವನ ಕೈಗೆ ಕೊಟ್ಟು ಕಳುಹಿಸಿದಳು. ಹೀಗೆ ಮಾಡಿದುದು ರುದ್ರದೇವನನ್ನು ಹಿಡಿಯುವುದಕ್ಕಾಗಿಯೆ? ಅವನನ್ನು ಬಂಧಿಸಿದುದಾಯಿತೆ?"

ಮು—" ಇಲ್ಲ. ಪರಪುರುಷನನ್ನು ನಾನು ಹೇಗೆ ಮುಟ್ಟಲಿ. ನೀವು ಆ ಕೆಲಸವನ್ನು ಮಾಡಿ "

ಈ ಮಾತುಗಳನ್ನು ಕೇಳಿ ರಾಮರಾಜನೂ ಶಂಕರರೆಡ್ಡಿಯೂ ಸೇರಿ ರುದ್ರದೇವನನ್ನು ಹಿಡಿದು ಗಟ್ಟಿಯಾಗಿ ಕಟ್ಟಿ ಉರುಳಿಸಿದರು. ಈ ವೃತ್ತಾಂತವನ್ನು ಅನಂಗಸೇನೆಯು ಕೇಳಿದಾಗ ಆಕೆಯು ಬಹಳ ಸಂತೋಷಿಸಿದಳು.

ಮೂವತ್ತುನಾಲ್ಕನೆಯ ಪ್ರಕರಣ.

ರಾಮಯಮಂತ್ರಿ,

ತಿರುಮಲರಾಯನಿಗೆ [illegible] ಬಹಳ ನಂಬಿಕೆಹುಟ್ಟಿತ್ತು. ರಾಮರಾಯನು ನಿಜವಾಗಿಯೂ ತನ್ನ ರಾಜ್ಯವನ್ನು ಹಾಳುಮಾಡುವುದಕ್ಕೇ ಬಂದಿದ್ದನೆಂದು ನಂಬಿದ್ದನು. [illegible] ತಪ್ಪಿಸಿಕೊಂಡು ಹೋದ ದುರ್ಗವನ್ನು [illegible] ಬಲಾತ್ಕಾರದಿಂದ ಅವಮಾನಪಡಿಸಬೇಕೆಂದು [illegible] ಅವಳನ್ನು ತಪ್ಪಿಸಿ ಕರೆದುಕೊಂಡು [illegible] ವಿಷಕುಂಭದಂತೆ ಮೊದಲು [illegible] ಬೇಕಾಗಿದ್ದ ಸ್ತ್ರೀಯರ [illegible] ರಾಮರಾಯನಿಗೆ [illegible] ಬಹು ಸೇವಕನನ್ನು [illegible].

“ಎಲೈ [illegible]! [illegible] ಬಹಳ ನಂಬಿಕೆವಂತನು ಈ ದಿನ [illegible] ನಿನ್ನ ಶಕ್ತಿಗೆ ಬಹು [illegible] ನೀನು ಈ ಕೆಲಸದಲ್ಲಿ [illegible] ಸಂತೋಷ.”

“ಆ [illegible] ಯುದ್ಧವೆಂದರೆ ಅವನಿಗೆ ಬಹಳ ಪ್ರೀತಿ. [illegible] ಪ್ರೀತಿ. ಆದುದರಿಂದ ಅವನು [illegible] ಮಹಾ ಪ್ರಭುಗಳೇ ನನ್ನ [illegible] ಬಹಳ [illegible]. ವೈದ್ಯನ ಹೆಸರನ್ನು ತಿಳಿಸಿದರೆ ಅವನ

ರಕ್ತದಿಂದ ನನ್ನ ಕೃಪಾಣಕ್ಕೆ ಪಾನಮಾಡಿಸುವೆನು. ಬೇಗ ತಿಳಿಸೋಣಾಗಲಿ " ಎಂದನು.

" ಅಯ್ಯಾ, ನಿನ್ನ ಮಾತುಗಳನ್ನು ಕೇಳಿ ಬಹಳ ಸಂತೋಷವಾಯಿತು. ಆದರೆ ಈ ಕೆಲಸವು ಬಹಳ ರಹಸ್ಯವಾಗಿ ನಡೆಯಬೇಕು. ನಮ್ಮ ದುರ್ಗದಲ್ಲಿರುವ ಆ [illegible]ನನ್ನು [illegible]ಸಿಕೊಳ್ಳಬೇಕಾಗಿದೆ. ಅವನು ನಮ್ಮ ರಾಜ್ಯವನ್ನು ಸ್ವಾಧೀನಮಾಡಿಕೊಂಡವನ ಗೂಢಚರನು. ಅವನು ತನ್ನ [illegible] ಇಲ್ಲಿನ ಪ್ರಜೆಗಳ ಅನುರಾಗವನ್ನು ಸಂಪಾದಿಸಿಕೊಂಡಿರುವ ಕಾರಣ, ನಾವು ಅವನನ್ನು ಬಹಿರಂಗವಾಗಿ ಕೊಲ್ಲಲು ಸಾಧ್ಯವಿಲ್ಲ. ಆದುದರಿಂದ ನಾನು ಅವನನ್ನು ಇಲ್ಲಿಗೆ ಕರೆಯಿಸಿ ಮಾತನಾಡುತ್ತಿರುವಾಗ ನಾನು "ಅಲ್ಲಾ!" ಎಂದು ದೇವರ ಸ್ಮರಣೆಯನ್ನು ಮಾಡಿದಾಗ ನೀನು ನಿನ್ನ [illegible] ಅವನ ತಲೆಯನ್ನು ತೆಗೆದುಬಿಡು. ಆ ಬಳಿಕ ಅವನ ದೇಹವನ್ನು ಗುಟ್ಟಾಗಿ ಭೂಮಿಯಲ್ಲಿ ಹೂತುಬಿಡಬಹುದು. ಈ ಕೆಲಸವು ಈ ರಾತ್ರಿಯೇ ನಡೆಯಬೇಕು. ಹೊತ್ತಿಗೆ ಮುಂಚೆ ಇಲ್ಲಿಗೆ ಬಂದು ಕಾದಿರು. " ಎಂದು ಹೇಳಿ ಕಳುಹಿಸಿದನು. ರಾತ್ರಿಯು [illegible] ಖಾನನು ರಾಮಯ್ಯನನ್ನು ಬರಹೇಳಿ ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡನು. ಖಾನನು ತನ್ನ ಮೇಲೆ ಕೋಪವಾಗಿರುವನೆಂದು ರಾಮಯ್ಯನಿಗೆ ತಿಳಿಯದು. ಆದುದರಿಂದ ಅವನ ಹಿತಚಿಂತಕರು ಖಾನನ ಮನಸ್ಸು ಸರಿಯಾಗಿಲ್ಲವೆಂದೂ, ಅವನ ಬಳಿಗೆ ಹೋದರೆ ಒಳ್ಳೆಯದಾಗವೆಂದೂ ಬೇಡಿದರೂ ಅವರ ಮಾತನ್ನು ಕೇಳದೆ ಖಾನನನ್ನು ನೋಡಲು ಹೊರಟನು. ಅವರೆಲ್ಲರೂ ರಾಮಯ್ಯನು ಹಿಂತಿರುಗಿ ಬರಲಾರನೆಂದು ನಿಶ್ಚಯಿಸಿಕೊಂಡರು. ರಾಮಯ್ಯನು ಸಭೆಯೊಳಗೆ ಖಾನನ ಮುಂದೆ ಕಾಣಿಸಿಕೊಳ್ಳಲು, ಖಾನನು ಅವನನ್ನು ಆದರದಿಂದ [illegible]ಮಾಡಿಕೊಂಡು ಉಚಿತಾಸನದಲ್ಲಿ ಕುಳ್ಳಿರಿಸಿ ಮಾತನಾಡುತ್ತಿದ್ದನು. ರಾಮಯ್ಯಮಂತ್ರಿಯು

ಖಾನನಿಗೆ ವಿಮುಖವಾಗಿ ಕುಳಿತಿದ್ದನು. ಅವನು ನಿಯಮಿಸಿದ್ದ ಆ ಮಹಮ್ಮದೀಯನು ಕೈಯಲ್ಲಿ ಒಂದು ಹರಿತವಾದ ಕತ್ತಿಯನ್ನು ಹಿಡಿದು ರಾಮಯನ ಹಿಂದೆ ಮರೆಯಾಗಿ ಸಿದ್ಧನಾಗಿ ನಿಂತಿದ್ದನು. ಪರಸ್ಪರ ಕುಶಲವಾರ್ತೆಯು ನಡೆದಮೇಲೆ ಖಾನನು ಅವನನ್ನು ನೋಡಿ “ರಾಮಯಾಮಾತ್ಯರೇ! ನಿಮ್ಮ ಕೆಲಸ ಎಲ್ಲಿಯವರೆಗೆ ಆಯಿತು? ಮಹಮ್ಮದೀಯ ರಾಜ್ಯಗಳು ಸಹಾಯಮಾಡುವುವೆಂದು ನಂಬಿಕೊಂಡು ನಮ್ಮ ಯಜಮಾನರು ವಿಜಯನಗರದೊಡನೆ ವೈರವನ್ನು ಕಟ್ಟಿಕೊಂಡರು. ನಿಮ್ಮ ವಿಪರೀತಪ್ರವರ್ತನದಿಂದಲೇ ಕಂಬರ್‌ಸೇರ್ ಮುಲಮುಲಖಾನರು ಕೋಪವಾಗಿ ತಮ್ಮ ದೇಶಗಳಿಗೆ ಹೊರಟುಹೋದರು. ನನಗೆ ಎಂದು ನಂಬಿಸಿ ಅನಂಗಸೇನೆಯನ್ನು ಇಲ್ಲಿಗೆ ಕರೆತಂದು, ಅಕಸ್ಮಾತ್ತಾಗಿ ಆಕೆಯನ್ನು ಕಳುಹಿಸಿಬಿಟ್ಟಿರಿ. ನಿಮಗೆ ಆಶ್ರಯವನ್ನು ಕೊಟ್ಟುದರಿಂದ ನಮ್ಮ ಮತೀಯರಿಗೆ ಹಲವು ಕೆಡಕುಗಳೇ ಉಂಟಾಗಿವೆ. ಈ ಹೊತ್ತೋ ನಾಳೆಯೋ ನಿಮ್ಮ ರಾಯರು ಬಂದು ಈ ದುರ್ಗವನ್ನೂ ಮುತ್ತುವರು. ಇದಕ್ಕೆ ನೀವು ಏನು ಉತ್ತರವನ್ನು ಕೊಡುವಿರಿ?” ಎಂದು ಕೇಳಿದನು.

ಈ ವಾಕ್ಯಗಳನ್ನು ಕೇಳಿ ರಾಮಯನು ಬಹಳ ಆಶ್ಚರ್ಯಪಟ್ಟನು. ಮೊದಲು ಅವನ ಬಾಯಿಂದ ಯಾವಮಾತೂ ಹೊರಡಲಿಲ್ಲ. ಕಡೆಗೆ ಧೈರ್ಯವನ್ನು ತಂದುಕೊಂಡು “ಯವನಶ್ರೇಷ್ಠರೇ! ಇದೇನು ಈದಿನ ನಿಮ್ಮ ಬಾಯಿಂದ ಹೊಸ ಮಾತುಗಳನ್ನು ಕೇಳುತ್ತಿರುವೆನು! ತಮ್ಮ ಬಳಿಯಲ್ಲಿ ನನಗೆ ಆಗದವರು ಯಾರೋ ಸೇರಿಕೊಂಡು ತಮ್ಮ ಮನಸ್ಸನ್ನು ಕೆಡಿಸುತ್ತಿರುವರು. ನಾನು ಎಷ್ಟೋ ಕಷ್ಟಪಟ್ಟು ಅನಂಗಸೇನೆಯನ್ನು ಚಕ್ರವರ್ತಿಯವರ ಅಂತಃಪುರದಿಂದ ಹಾರಿಸಿಕೊಂಡು ಬಂದು ತಮಗೆ ವಶಪಡಿಸಿರುವುದನ್ನು ಮರೆತಿರಾ! ನನ್ನ ಶಕ್ತಿಯನ್ನೆಲ್ಲಾ ವಿನಿಯೋಗಿಸಿ ಮಹಮ್ಮದೀಯ ರಾಜ್ಯಗಳನ್ನೆಲ್ಲಾ ಒಟ್ಟುಗೂಡಿಸಿದೆನಲ್ಲವೇ? ಇಷ್ಟು

ಉಪಕಾರಗಳನ್ನು ಮಾಡಿದರೂ ಈಗಲಾದರೂ ನನ್ನ ಮಾತನ್ನು ಕೇಳಿ ಇನ್ನು ಕೆಲವು ಕಾಲ ಸುಮ್ಮನಿದ್ದರೆ, ನಾನು ಈಗ ಮಾಡುತ್ತಿರುವ ಕೆಲಸಗಳೆಲ್ಲಾ ಕೈಗೂಡುವುವು. ಹಾಗೆ ನಡೆಯದೇಹೋದರೆ ನನಗೆ ಬೇಕಾದ ಶಿಕ್ಷೆಯನ್ನು ಕೊಡಬಹುದು" ಎಂದು ಹೇಳಿದನು.

ಈ ಮಾತುಗಳಿಂದ ರೌದ್ರಾಗ್ರಹಾವಿಷ್ಟನಾಗಿದ್ದ ಖಾನನಿಗೆ ಸ್ವಲ್ಪವೂ ತೃಪ್ತಿಯಾಗಲಿಲ್ಲ. ಆದುದರಿಂದ "ಅಯ್ಯಾ! ಇನ್ನು ನಿನ್ನ ಬೇರು ಮಾತುಗಳನ್ನು ನಿಲ್ಲಿಸು. ನೀನು ತಿಮ್ಮರಸನೊಡನೆ ಸೇರಿಕೊಂಡು ನಮ್ಮೆಲ್ಲರನ್ನೂ ಸೆರೆಹಿಡಿಯಬೇಕೆಂದು ಯೋಚಿಸಿದ್ದೀಯೆ. ನಮ್ಮ ಅದೃಷ್ಟ ಚೆನ್ನಾಗಿರುವುದರಿಂದ ನಿನ್ನ ಕೆಲಸವು ಇನ್ನೂ ಕೈಗೂಡಿಲ್ಲ. ಈ ಸಂಗತಿಯು ಶತ್ರುಗಳಿಗೆ ತಿಳಿದರೆ ಬಹಳ ಕೆಡುಕಾಗುವುದು;" ಹೀಗೆ ಹೇಳಿ, "ತಿಮ್ಮರಸನೊಡನೆ ಸ್ನೇಹವನ್ನು ಮಾಡಿ ಮೇಲೆಮೇಲೆ ಅವನೊಡನೆ ವಿರೋಧವನ್ನು ನಟಿಸುತ್ತಾ, ನಮ್ಮನ್ನೂ ನಮ್ಮ ರಾಜ್ಯವನ್ನೂ ಕೃಷ್ಣದೇವರಾಯರ ಪ್ರತಾಪಾಗ್ನಿಗೆ ಬಲಿ ಮಾಡಬೇಕೆಂದು ನೀನು ಇಲ್ಲಿವೆ. ನಿನ್ನನ್ನು ಇಂತಹ ವಿಶ್ವಾಸಘಾತಕನೆಂದು ತಿಳಿದಿರಲಿಲ್ಲ. ಆದುದರಿಂದಲೇ ನಮ್ಮವರಲ್ಲಿ ನಿನಗೆ ಅವಕಾಶ ದೊರೆಯಿತು. ನೀನು ತಿಮ್ಮರಸನ ಮಿತ್ರನೋ ಅಲ್ಲವೋ ಬೇಗಹೇಳು. ಇಲ್ಲದಿದ್ದಾಗ ಕೊಂದುಬಿಡುವೆನು." ಎಂದು ಹೇಳಿದನು.

"ಮಹಮ್ಮದೀಯ ಶ್ರೇಷ್ಠರೆ! ನಿಮಗೆ ತೋರಿದಂತೆ ಮಾಡಿರಿ. ನನ್ನ ಮೇಲೆ ನಿಮಗೆ ಇಷ್ಟು ಸಂಶಯವೇಕೋ ತಿಳಿಯದು. ತಿಮ್ಮರಸನೊಡನೆ ಬದ್ಧವೈರವನ್ನು ತಾಳಿರುವಾಗ ಅವನಿಗೂ ನನಗೂ ಮೈತ್ರಿ ಹೇಗಿರಬಹುದೋ ನೀವೇ ಯೋಚಿಸಿ ನನಗೆ ಆಗದವನನ್ನು ತಮ್ಮ ಬಳಿಯಲ್ಲಿ ಸೇರಿಸಿಕೊಂಡು ಇರುವುದರಿಂದ ಈಗಲಾದರೂ ದಯೆಯಿಟ್ಟು ಆ ದುರಾತ್ಮನನ್ನು ಕಳುಹಿಸಿಬಿಡಿ. ಆಗ ನಾನು ಈ ಕಾರ್ಯಗಳನ್ನೆಲ್ಲಾ ಮಾಡುವೆನೋ ಇಲ್ಲವೋ ತಿಳಿಯುವುದು" ಎಂದು ನಿರ್ಭಯವಾಗಿ ಹೇಳಿದನು.

ಈ ಮಾತುಗಳನ್ನು ಕೇಳಿ ಖಾನನಿಗೆ ಕೋಪವು ಹೆಚ್ಚುತ್ತಾ ಬಂತು ಇವನು ನೇಮಿಸಿದ್ದ ಭಟನು ಸಿದ್ಧನಾಗಿರುವನೋ ಇಲ್ಲವೋ ಎಂದು ಒಂದು ಬಾರಿ ಆ ಭಟನಕಡೆಗೆ ನೋಡಿದನು . ಅವನು ತನ್ನ ಕಾರ್ಯವನ್ನು ಮಾಡಲು ಸಿದ್ಧನಾಗಿದ್ದನು. ಆಗ ಒಬ್ಬ ಸೇವಕನು ಅಲ್ಲಿಗೆಬಂದು ಒಂದು ಕಾಗದವನ್ನು ತಂದುಕೊಟ್ಟನು. ಖಾನನು ಅದನ್ನು ದೀಪದಬೆಳಕಿನಲ್ಲಿ ಹಿಡಿದುಕೊಂಡು ಓದಲು, ಖಾನನ ಕೋಪವೆಲ್ಲವೂ ಕರಗಿಹೋಯಿತು. ಅವನಿಗೆ ಸ್ವಲ್ಪ ಅಪಕಾರಮಾಡಿದರೂ, ತನ್ನ ಪ್ರಭುವಾದ ಅದಿಲ್‌ಷಹನು ತನ್ನನ್ನು ಮನ್ನಿಸಲಾರನೆಂದು ಭಾವಿಸಿ "ರಾಮಮಹಾರಾಜರೇ ! ಹೋಗಲಿ ; ಆಗಿ ಹೋದುದಕ್ಕೆ ಆಡಿ ಫಲವೇನು ? ಈಗ ನೀವು ಮಾಡಬೇಕೋ ಯೋಚಿಸಿ, ಅನಂಗಸೇನೆಯು ಹೇಗೆ ತಪ್ಪಿಸಿಕೊಂಡಳು ? ಎಲ್ಲಿಗೆ ಹೋದಳು ? ನಿಮಗೆ ತಿಳಿಯುವುದೇ ? ಹೇಗಾದರೂ ಅವಳನ್ನು ಹಿಡಿದುಕೊಂಡು ಬಂದು ಒಪ್ಪಿಸಿದರೆ, ನಿಮಗೆ ನಮ್ಮಲ್ಲಿ ಪ್ರೀತಿ ಇರುವುದೆಂದು ಭಾವಿಸುವೆನು" ಎಂದು ಖಾನನು ಹೇಳಿದನು

"ದುರ್ಗಾಧೀಶ್ವರೇ ! ನೀವು ಅನಂಗಸೇನೆಯನ್ನು ಪ್ರತಿದಿನವೂ ನೋಡುತ್ತಿರುವಿರೆಂದೂ ನಿಮ್ಮಿಬ್ಬರಲ್ಲಿಯೂ ಪರಸ್ಪರಾನುರಾಗವು ಅಭಿವೃದ್ಧಿಯಾಗುತ್ತದೆಯೆಂದೂ ನಂಬಿಕೊಂಡಿದ್ದರೆ, ಅನಂಗಸೇನೆಯು ತಪ್ಪಿಸಿಕೊಂಡು ಹೊರಟುಹೋಗಿರುವಳೆಂದು ಹೇಳುತ್ತಿರುವಿರಿ. ಇದಕ್ಕಾಗಿ ಬಹಳ ವ್ಯಸನಪಡುತ್ತಿರುವೆನು. ನಮ್ಮ ಶತ್ರುಗಳು ಯಾರೋ ಅವಳನ್ನು ಬಿಡಿಸಿಕೊಂಡು ಹೋಗಿರಬೇಕು. ಆಕೆಯು ಎಲ್ಲೇ ಇರಲಿ ಹುಡುಕಿ ಹಿಡಿದುಕೊಂಡು ಬಂದು ಕೊಟ್ಟು ನಿಮಗೆ ಸಂತೋಷಮಾಡುವೆನು" ಎಂದು ಹೇಳಿದ್ದಾಗ ಅಲ್ಲಿಗೆ ಫಕೀರನು ಬಂದು ಸತ್ಕೃತನಾಗಿ ಉಚಿತಾಸನದಲ್ಲಿ ಕುಳಿತುಕೊಂಡನು. ಫಕೀರನು ಖಾನನನ್ನು ನೋಡಿ "ದುರ್ಗಾಧೀಶ್ವರರೇ ! ಇನ್ನು, ರಾಯರು ಈ ದುರ್ಗವನ್ನು ಮುತ್ತುವರು. ಅವರನ್ನು

ಜಯಿಸಿದರೆ ನಿಮ್ಮ ಕೀರ್ತಿಯು ಶಾಶ್ವತವಾಗಿರುವುದು. ಹೀಗಿರುವಾಗ ತಾವು ಇಂತಹ ಸಮಯದಲ್ಲಿ ಉತ್ಸಾಹಶಾಲಿಗಳಾಗಿ ಇಲ್ಲದೆ, ಹೀಗೆ ವಿಷಣ್ಣವದನರಾಗಿರುವುದಕ್ಕೆ ಕಾರಣವೇನು ?" ಎಂದು ಕೇಳಿದನು.

"ಮಹಾತ್ಮರೇ ! ನನ್ನ ಮನಸ್ಸನ್ನು ಅಪಹರಿಸಿದ್ದ ಆ ಸುಂದರಿಯು ಎಲ್ಲೋ ಮಾಯವಾದಳು. ನನ್ನ ಸುಖಸಂತೋಷಗಳೂ ಮನಸ್ಸಿನ ಧೈರ್ಯವೂ ಆಕೆಯ ಹಿಂದೆಯೇ ಹೋದುವು. ಆಕೆಯು ಪುನಃ ಹಿಂತಿರುಗಿದರೆ, ನನ್ನ ಮನಸ್ಸು ನನ್ನ ವಶದಲ್ಲಿರುವುದು" ಎಂದು ಯವನ ಸುಲ್ತಾನನು ನುಡಿದನು.

"ಯವನಶ್ರೇಷ್ಠರೆ ! ಆಕೆಯೆಲ್ಲಿ ಹೋಗುವಳೆ ? ನಾನು ದುರ್ಗಕ್ಕೆ ಬರುತ್ತಿದ್ದಾಗ ಒಂದು ಹಳ್ಳಿಯಲ್ಲಿ ಅವಳನ್ನು ನೋಡಿದೆ. ಆದರೆ ನೀವೆ ಆಕೆಯನ್ನು ಹಿಡಿದುಕೊಂಡು ಬರಬೇಕು. ಇಲ್ಲದಿದ್ದರೆ ಆಕೆಯು ಮತ್ತೆಲ್ಲಾದರೂ ಹೊರಟುಹೋಗಬಹುದು" ಎಂದು ಹೇಳಿದನು.

ಖಾನನು ಆ ಮಾತುಗಳನ್ನು ಕೇಳಿ ಸಂತೋಷಪಟ್ಟು, "ಮಹಾತ್ಮರೇ ! ನೀವು ನಿಜವಾಗಿಯೂ ಅನಂಗಸೇನೆಯನ್ನು ನೋಡಿದ್ದಿರಾ ? ಆಕೆಯು ಎಲ್ಲಿಗೂ ಹೋಗಿರಲಾರಳಲ್ಲವೇ ? ನಾವು ಬೇಗ ಹೋದರೆ, ಅವಳನ್ನು ಹಿಡಿದುಕೊಂಡು ಬರಲು ಆಗುವುದೇ ?" ಎಂದು ಕೇಳಿ ಮಂತ್ರಿಯನ್ನು ನೋಡಿ ನೀವು ಬಹಳ ಚತುರರು ಹೇಗಾದರೂ ಈ ಕಾರ್ಯವನ್ನು ಸಾಧಿಸಿಕೊಡಿ" ಎಂದು ಹೇಳಿದನು.

"ಓ ತುರುಷ್ಕಾಗ್ರಣಿ ! ಹಾಗಾದರೆ, ನೀವು ಅವಳ ಚಿಂತೆಯನ್ನು ಇನ್ನು ಬಿಡಿ. ನಮ್ಮ ಬುದ್ಧಿಬಲದಿಂದ ಅವಳನ್ನು ಹೊಂಚುಪಡಿಸಿ ತಿರುಗಿ ಕರೆತರುವೆನು. ನನ್ನ ಮಹಿಮೆಯನ್ನು ತಾವೇ ನೋಡುತ್ತಿರಿ" ಎಂದು ರಾಮಯಾಮಾತ್ಯನು ಹೇಳಿದನು.

"ಓ ಅಮಾತ್ಯಪುಂಗವರೆ! ನೀವು ಮನಸ್ಸಿಟ್ಟರೆ ಯಾವ ಕೆಲಸ ತಾನೇ ದೊಡ್ಡದು. ತಮ್ಮ ಸಹಾಯಕ್ಕಾಗಿ ಈ ಫಕೀರನನ್ನು ಕಳುಹಿಸಿ ಕೊಡುವೆನು. ಎಂದು ಹೇಳಲು ಅವನನ್ನು ಕಳುಹಿಸಿಕೊಟ್ಟನು. ಆಗ ಫಕೀರನು ಖಾನನನ್ನು ಏಕಾಂತವಾಗಿ ನೋಡಿ ಖಾನಶ್ರೇಷ್ಠರೆ! ಈ ಬ್ರಾಹ್ಮಣನೊಡನೆ ನಾನೊಬ್ಬನು ಹೋದರೆ ಪ್ರಯೋಜನವೇನು? ಈತನು ಮಾಯಾವಿ. ದುರ್ಗವನ್ನು ದಾಟಿದ ಕೂಡಲೆ ನನ್ನನ್ನು ವಂಚಿಸಿ ಕಾಲಿಗೆ ಬುದ್ಧಿ ಹೇಳುವನು. ಅದೂ ಅಲ್ಲದೆ ನಾವು ಒಂದು ವೇಳೆ ಅನಂಗಸೇನೆಯನ್ನು ಹಿಡಿದು ತರುತ್ತಿರುವಾಗ ಶತ್ರುಗಳು ಅಡ್ಡಬಂದರೆ ಗತಿ ಏನು! ಆದುದರಿಂದ ಖಡ್ಗಪಾಣಿಯಾಗಿ ತಾವು ನಮ್ಮೊಡನೆ ಬಂದು, ಕಾರ್ಯವನ್ನು ನೆರವೇರಿಸಿ" ಎಂದು ಫಕೀರನು ಹೇಳಿದನು.

ಖಾನನಿಗೆ ಈ ಮಾತುಗಳು ಬಹಳ ಹಿತಕರವಾಗಿ ಕಂಡುವು. ಆದುದರಿಂದ ಅವನೂ ಪ್ರಯಾಣಾಭಿಮುಖನಾದನು.

ರಾಮಯಾಮಾತ್ಯನು ತನ್ನ ಮನೆಗೆ ಹೋಗಿ ನೋಡಲು, ತನಗೆ ಅಂತಹ ಸಾಹಸಕೃತ್ಯಗಳಲ್ಲಿ ಸಹಾಯಮಾಡುತ್ತಿದ್ದ ರುದ್ರದೇವನು ಅಲ್ಲಿ ಇಲ್ಲದಿದ್ದುದರಿಂದ ಬಹಳ ವ್ಯಸನಪಟ್ಟನು. ಆದುದರಿಂದ ತನ್ನ ಜೊತೆಗೆ ಪ್ರಹರೇಶ್ವರನನ್ನೇ ಸಹಾಯಮಾಡಿಕೊಂಡು ಹೊರಟನು. ಆಗ ಅವನು "ಓ ದುರ್ಗಾಧೀಶರೇ! ಮುಂಚೆ ನಾನು ವಿಜಯನಗರದಲ್ಲಿ ಮಾಡಿದ ಸಾಹಸಕಾರ್ಯಗಳನ್ನು ಕೇಳಿದರೆ ತಮಗೆ ಆನಂದ ಉಂಟಾಗಲಾರದೇ ಇರದು. ಆದರೆ ಈಗ ತಮ್ಮ ಕಣ್ಣೆದುರಿಗೇ ಮಾಡುವ ಕಾರ್ಯಗಳನ್ನು ನೋಡಿ ತಾವೇ ಸಂತೋಷಪಡಲಾರದೇ ಇರಲಾರಿರಿ" ಎಂದು ಹೇಳುತ್ತಾ ಅವನನ್ನು ಸಂತೋಷಪಡಿಸುತ್ತಿದ್ದನು. ಹೀಗೆ ಮಾತನಾಡುತ್ತಾ ಅವರು ಆ ಹಳ್ಳಿಯನ್ನು ಸಮೀಪಿಸಿದರು.

ಅಷ್ಟರಲ್ಲಿ ರಾಮರಾಯನು ಒಬ್ಬ ವೈದಿಕಬ್ರಾಹ್ಮಣನ ವೇಷವನ್ನು ಧರಿಸಿ ತನ್ನ ಜೊತೆಯಲ್ಲಿದ್ದವರನ್ನು ಹಿಂದೆ ಬಿಟ್ಟು ತಾನೊಬ್ಬನೇ ಅನಂಗಸೇನೆಯು ಇದ್ದ ಮನೆಗೆ ಹೋದನು. ಆಗತಾನೆ ಮನೆಯೊಳಗಿನಿಂದ ಮಾಲತಿಯು ಹೊರಕ್ಕೆ ಬಂದಳು. ಆಕೆಯು -"ಸ್ವಾಮಿ! ತಾವು ಯಾರು?" ಎಂದು ಕೇಳಲು ಆ ಬ್ರಾಹ್ಮಣನು— "ಅಮ್ಮಾ ನಾನು ಕೊಂಡಪಲ್ಲಿಯಿಂದ ಬಂದಿರುವೆನು. ನನ್ನ ಸ್ನೇಹಿತನ ಕುಮಾರಿಯಾದ ಅನಂಗಸೇನೆಯನ್ನು ಕೃಷ್ಣದೇವರಾಯನು ಮನೆಯಿಂದ ಹೊರಡಿಸಿದನೆಂದೂ, ಅವಳು ಕೊಂಡಪಲ್ಲಿಗೆ ಬರುತ್ತಿದ್ದಾಗ ರಾಮರಾಯಮಂತ್ರಿಯು ಮೋಸದಿಂದ ಅವಳನ್ನು ರಾಯಚೂರಿಗೆ ಕರೆತಂದು ತುರುಕನ ವಶಕ್ಕೆ ಒಪ್ಪಿಸಿದನೆಂದೂ, ಅವರ ಆಕೆಯ ಸೇವಕಿಯಾದ ಮಾಲತಿಯು ತನ್ನ ಚಾತುರ್ಯದಿಂದ ಅವಳನ್ನು ತಪ್ಪಿಸಿ ದುರ್ಗದಿಂದ ಹೊರಕ್ಕೆ ಕರೆತಂದಳೆಂದೂ ವರ್ತಮಾನವು ಬಂತು. ಅದರಿಂದ ಆಕೆಯನ್ನು ಸುರಕ್ಷಿತವಾಗಿ ಕರೆತರಬೇಕೆಂದು ಆಕೆಯ ಜನಕನು ನನ್ನನ್ನೂ, ನಮಗೆ ಯಾರಾದರೂ ದುಷ್ಟರು ತೊಂದರೆ ಮಾಡಿದರೆ, ಅವರನ್ನು ಶಿಕ್ಷಿಸಿ ನಮಗೆ ಸಹಾಯಮಾಡುವುದಕ್ಕಾಗಿ, ಕೆಲವು ಬಂಟರನ್ನೂ ಕಳುಹಿಸಿಕೊಟ್ಟಿರುವನು. ನೀನು ಮಾಲತಿಯಲ್ಲವೆ?" ಎಂದು ಕೇಳಿದನು. "ಹೌದು. ನಾನೇ ಮಾಲತೀ. ಅನಂಗಸೇನೆಯು ಒಳಗಿರುವಳು. ದಯಮಾಡಿಸಿ ಎಂದು ಒಳಕ್ಕೆ ಕರೆದುಕೊಂಡು ಹೋಗಿ ಉಚಿತಾಸನದಲ್ಲಿ ಕುಳ್ಳಿರಿಸಿದಳು. ಅನಂಗಸೇನೆಯು ಆ ವಿಪ್ರನನ್ನು ನೋಡಿ "ಸ್ವಾಮಿ! ನಿಮ್ಮನ್ನು ನೋಡಿ ಬಹಳ ಸಂತೋಷವಾಯಿತು. ನಮ್ಮ ಮನೆಯಲ್ಲಿ ಎಲ್ಲರೂ ಚೆನ್ನಾಗಿರುವರೆ? ಈಗಲೇ ನಾವು ಹೊರಟು ಬಿಟ್ಟರೆ, ಆ ಮಾಯಾವಿಯಾದ ರಾಮರಾಯ ಮಂತ್ರಿಯು ಹೇಗಾದರೂ ನನ್ನನ್ನು ಹಿಡಿದುಬಿಡುವನು. ಅದರಿಂದ ಸ್ವಲ್ಪ ಕಾಲ ಆ ಚಿಕ್ಕ ಮನೆಯಲ್ಲಿ ವಿಶ್ರಮಿಸಿಕೊಳ್ಳುತ್ತಿರಿ," ಎಂದು, ಆದರದಿಂದ ಹೇಳಿದಳು.

ತನ್ನ ಗುರುತು ಆ ಸ್ತ್ರೀಯರಿಗೆ ಸಿಕ್ಕದೆಹೋಯಿತೆಂದೂ, ಅವರು ಇನ್ನು ತನ್ನ ಕೈಗೆ ಸಿಕ್ಕಿಬಿದ್ದರೆಂದೂ ರಾಮಯ್ಯನಿಗೆ ಬಹಳ ಸಂತೋಷ ವಾಯಿತು. ಆಗ ರಾಮಯ್ಯನು ಹೊರಗೆ ನಿಂತಿದ್ದ ವ್ರಹದೇಶ್ವರ ತೋಫಲ್ ಖಾನ, ಫಕೀರರಿಗೆ ಸೂಚನೆಯನ್ನು ತಿಳಿಸಿ ಅವರನ್ನೂ ಒಳಕ್ಕೆ ಬರ ಹೇಳಿ ಬೇಗಬೇಗನೆ ಸ್ಥಳದಲ್ಲಿ ಹಾಸಿಗೆಯನ್ನು ಹಾಸಿಕೊಂಡು ಮಲಗಿದರು. ಆಗ ಫಕೀರನು ಸದ್ದಿಲ್ಲದೆ ಎದ್ದು ಹೊರಕ್ಕೆ ಹೋದಕೂಡಲೆ ಶಂಕರರೆಡ್ಡಿಯೂ, ತಿರುಮಲರಾಯನೂ ಅವನ ಹಿಂದೆ ಬಂದರು. ಅವರವರಿಗೆ ಕೆಲವು ಮಾತು ಗಳು ಗುಟ್ಟಾಗಿ ನಡೆದ ಬಳಿಕ ಫಕೀರನು ತನ್ನ ಸ್ಥಳಕ್ಕೆ ಬಂದು ಮಲಗಿ ಕೊಂಡನು. ಇನ್ನು ಸ್ವಲ್ಪ ಹೊತ್ತು ಕಳೆದ ಬಳಿಕ ಶಂಕರರೆಡ್ಡಿಯೂ ತಿರುಮಲರಾಯನೂ [illegible] ಸದ್ದಿಲ್ಲದೆ ಹೋಗಿ, ನಿದ್ದೆಮಾಡು ತ್ತಿದ್ದ ರಾಮಯ್ಯನನ್ನೂ ರುದ್ರದೇಶ್ವರನನ್ನೂ ಕ್ಷಣಮಾತ್ರದಲ್ಲಿ ಕಟ್ಟಿ ಬಂದು ಕೊಠಡಿಗೆ [illegible] ತಂದರು. ಅಲ್ಲಿ ಅವರು ತಮ್ಮಂತೆಯೇ ದುರವಸ್ಥೆಗೆ ಸಿಕ್ಕಿ ಪರಿತಪಿಸುತ್ತಿದ್ದ ರುದ್ರದೇವನನ್ನು ನೋಡಿ, “ರುದ್ರ ದೇವ! [illegible] ಪ್ರಸ್ತುತವೇ? ನಮ್ಮನ್ನು ಹೀಗೆ ಬಂಧಿಸಿರು ವವರು [illegible] ನಿನಗೆ [illegible]?” ಎಂದು ಕೇಳಿದನು.

“ಅಣ್ಣ [illegible]! ನಾನು ಒಂದು ಕೆಲಸದ ಮೇಲೆ ಹೋಗುತ್ತಿ ದ್ದಾಗ ನನ್ನನ್ನು [illegible] ಹಿಡಿದು ಕಟ್ಟಿದರು. ಈ ಕೆಲಸವನ್ನು ಮಾ ಡಿದವರು [illegible] ಎಂದು ತೋರುವುದು. ‘ತಾವಾದರೂ ಹೊ ರಗೆ ಇರುವಿರಿ, ನನ್ನನ್ನು ಹೇಗಾದರೂ ಬಿಡಿಸಿಕೊಳ್ಳುವಿರಿ’ ಎಂದು ಧೈರ್ಯದಿಂದ ಇದ್ದೆನು. [illegible] ನನ್ನ ಆಸೆಯನ್ನು ಬಿಟ್ಟಂತೆಯೇ! ಆಷ್ಟು ಬುದ್ಧಿಶಾಲಿಗಳಾದ ನೀವೂ ಹೀಗೆ ಮೋಸಹೋದಿರಲ್ಲಾ! ಇನ್ನು ಮುಕ್ತಾಂ ಬೆಯ ಗತಿ ಏನು? ಅಯ್ಯೋ!” ಎಂದು ವ್ಯಸನಪಡುತ್ತಿದ್ದನು.

ಇಷ್ಟರಲ್ಲಿ ಫಕೀರನು ಎದ್ದು ತೋಫಲ್ ಖಾನನ ಬಳಿಗೆ ಹೋಗಿ—

"ಮಹಮ್ಮದೀಯಶ್ರೇಷ್ಠರೆ! ಏಳಿ. ಇಲ್ಲಿ ತಮ್ಮಂತಹ ಯೋಗ್ಯರು ಇರುವುದು ಸರಿಯಿಲ್ಲ" ಎಂದು ಹೇಳಿ ಬಲವಾಗಿ ಒದೆದನು. ಶಂಕರರೆಡ್ಡಿಯೂ ತಿರುಮಲರಾಯನೂ ಖಾನನಿಗೆ ಎಂದೆಂದಿಗೂ ಜ್ಞಾಪಕವಿರುವಂತೆ ಅವಮಾನ ಮಾಡಿ ಅವನನ್ನು ಓಡಿಸಿಬಿಟ್ಟರು. ಆಗ ಫಕೀರನು ಅವನ ವೇಷವನ್ನು ಎಸೆದು ಬಿಟ್ಟು ಅವರಿಬ್ಬರೊಡನೆ ರಾಮರಾಯನಿದ್ದ ಕೊಠಡಿಗೆ ಹೋಗಿ ಹೀಗೆ ಹೇಳಿದನು :—

"ರಾಮರಾಯ! ನಾನು ಇದುವರೆಗೂ ಫಕೀರನಾಗಿದ್ದೆನು. ನಮ್ಮೊಡನೆ ಬಂದಿದ್ದ ರಾಕ್ಷಸನನ್ನು ಕರುಣೆಯಿಂದ ಬಿಟ್ಟುಬಿಟ್ಟೆವು. ಆದರೆ ಅವನಿಗೆ ಚೆನ್ನಾಗಿ ಅವಮಾನಪಡಿಸಿ ಓಡಿಸಿದ್ದೇವೆ. ಅವನು ಏಳುವುದನ್ನೂ ಬೀಳುವುದನ್ನೂ ನೋಡದೆ ಓಡಿಹೋಗುತ್ತಿದ್ದಾಗ ಅನಂಗಸೇನೆಯಲ್ಲಿ ನಾಟಿದ್ದ ಅವನ ತುಚ್ಛ ಮನಸ್ಸನ್ನು ಕಿತ್ತುತೆಗೆದುಕೊಂಡು ಹೋದನೆಂದು ಚೆನ್ನಾಗಿ ನಂಬಬಹುದು. ನಾನು ರಾಮರಾಜನು. ನನ್ನ ಮಿತ್ರರಾದ ತಿಮ್ಮರಸರ ಅಪ್ಪಣೆಯಂತೆ ಫಕೀರನಾಗಿದ್ದೆನು. ಅವರ ಅಪ್ಪಣೆಯ ಮೇರೆಗೆ ನಿಮ್ಮನ್ನು ಹಿಡಿದು ಕಟ್ಟಿಹಾಕಿದೆವು. ಮಹಾಮಂತ್ರಿಗಳಾದ ತಿಮ್ಮರಸರನ್ನು ಕೊಲ್ಲಲೆಣಿಸಿ ಮಹಾಪರಾಕ್ರಮಶಾಲಿಯಾದ ವಿಜಯಸಿಂಹನನನ್ನು ಸಂಹರಿಸಲು ಯತ್ನಿಸಿ, ಮಹಾಪತಿವ್ರತೆಯಾದ ಆ ನಿರಪರಾಧಿ ಅನಂಗಸೇನೆಗೆ ದುಸ್ಸಹವಾದ ದುಃಖಗಳನ್ನು ಉಂಟುಮಾಡಿ—ಹೀಗೆ ಅನೇಕ ಪಾಪಕಾರ್ಯಗಳನ್ನಾಚರಿಸಿರುವ ನಿಮ್ಮಂಥವರಿಗೆ ಯಾವ ಶಿಕ್ಷೆಯನ್ನು ಮಾಡಿದರೂ ಸ್ವಲ್ಪವೇ! ಎಂದು ಹೇಳಿ ಬಾಗಿಲನ್ನು ಹಾಕಿಕೊಂಡು ಹೊರಟುಹೋದನು. ರಾಮರಾಯನು ಹಲ್ಲು ಉಗುರುಗಳನ್ನು ಕಳೆದುಕೊಂಡ ಸಿಂಹದಂತೆ ಮನಸ್ಸಿನಲ್ಲಿಯೇ ತನ್ನ ಬುದ್ಧಿಶಕ್ತಿಗೆ ಬಂದಿದ್ದ ಅನಿವಾರ್ಯವಾದ ನಿರ್ಬಂಧವನ್ನು ಕುರಿತು ವ್ಯಸನಪಟ್ಟುಕೊಳ್ಳುತ್ತಿದ್ದನು.

ಮೂವತ್ತೆರಡನೆಯ ಪ್ರಕರಣ.

ರಾಯಚ್ಚೂರು ವಿಜಯ.

"ತನಗೆ ಮೋಸಮಾಡಿ ಅವಮಾನಪಡಿಸಿದ್ದ ಫಕೀರನ ಕಪಟವನ್ನು ಕುರಿತೂ ತನಗೆ ಆದ ಅವಮಾನವನ್ನು ಕುರಿತೂ ವ್ಯಸನಪಟ್ಟುಕೊಳ್ಳುತ್ತಾ ತೋಫಲ್‌ಖಾನನು ದುರ್ಗವನ್ನು ಸೇರಿದನು. ತನ್ನ ಪ್ರಭುವು ಕಾಗದದ ಮೂಲಕ ತಿಳಿಸಿದ್ದಂತೆ ರಾಮರಾಯಾಮಾತ್ಯನು ನಿಜವಾಗಿಯೂ ಬಹಳ ಸಮರ್ಥನೆಂದೂ ರಾಜ್ಯತಂತ್ರಜ್ಞನೆಂದೂ ಯೋಚಿಸಲಾರಂಭಿಸಿದನು. ಆದುದರಿಂದ ಅವನಿಗೆ ಸಂಭವಿಸಿದ್ದ ಅಪಾಯವನ್ನು ಹೇಗಾದರೂ ತಪ್ಪಿಸಬೇಕೆಂದು ನಿರ್ಧರಿಸಿ ಒಬ್ಬ ವೀರಭಟನನ್ನು ಕರೆದು, ಈಗಲೇ ನೀನು ಐವತ್ತು ಮಂದಿ ರಾಹುತರನ್ನು ಕರೆದುಕೊಂಡು ಇಲ್ಲೇ ಹತ್ತಿರದಲ್ಲಿರುವ ಆ ಹಳ್ಳಿಗೆಹೋಗಿ ರಾಮರಾಯಾಮಾತ್ಯಾದಿಗಳನ್ನು ಬಿಡಿಸಿಕೊಂಡು ಕರೆತರಬೇಕು. ಅನಂಗಸೇನೆಯನ್ನೂ ಅವಳ ಸೇವಕಳನ್ನೂ ಕಟ್ಟಿತೆಗೆದುಕೊಂಡುಬಾ. ಸೋಮೇಶ್ವರಪಾತ್ರನಿಗೆ ಈ ವೃತ್ತಾಂತವನ್ನು ಹೇಳಿ ಆತನನ್ನು ಜೊತೆಗೆ ಕರೆದುಕೊಂಡುಹೋಗು. ನಿನಗೆ ಯಾರುಪ್ರತಿಭಟಿಸಿದರೂ ಅಂತಹವರನ್ನು ಕೊಂದುಬಿಡು" ಎಂದು ಆಜ್ಞಾಪಿಸಿದನು.

ಆ ವೀರನು ಸ್ವಲ್ಪ ಹೊತ್ತಾದಮೇಲೆ ಸುಸನ್ನದ್ಧನಾಗಿ ತನ್ನ ಸಹಾಯಕರೊಡನೆ ಖಾನನಬಳಿಗೆ ಬಂದು "ಮಹಾಪ್ರಭು ! ಸೋಮೇಶ್ವರಪಾತ್ರನು ದುರ್ಗದಲ್ಲಿಲ್ಲ. ನೆನ್ನೆಸಾಯಂಕಾಲವೇ ಎಲ್ಲಿಗೋ ಹೋದನಂತೆ. ಶತ್ರುಗಳ ಸೊಲ್ಲಡಗಿಸುವುದಕ್ಕೆ ನಾವು ಹೋದರೆ ಸಾಲದೆ ? ಸೋಮೇಶ್ವರಪಾತ್ರನು ಬಾರದಿದ್ದರೆ ನಷ್ಟವೇನು ?" ಎಂದು ಹೇಳಿದನು.

"ಸರಿ ಹಾಗೇ ಆಗಲಿ. ಏನಾದರೂಮಾಡಿ ನಾನು ಹೇಳಿರುವ ಕೆಲಸಗಳನ್ನು ಮಾಡಿಕೊಂಡುಬರಬೇಕು. ನಿನಗೆ ಪ್ರತಿಭಟಿಸುವವರು ನಾಲ್ಕೈ

ದು ಮಂದಿಗಿಂತಲೂ ಹೆಚ್ಚಿಲ್ಲ. ಇಷ್ಟು ಸ್ವಲ್ಪಮಂದಿ ಇರುವರೆಂದು ಅಲಕ್ಷ್ಯದಿಂದಿರಕೂಡದು. ನಿಮ್ಮ ಪ್ರತಿದ್ವಂದ್ವಿಗಳು ಬಲಿಷ್ಠರಂತೆ ತೋರುವುದು. ಬೇಗ ಹೊರಡಿ," ಎಂದು ಅವರೆಲ್ಲರನ್ನೂ ತೋಫಲ್‌ಖಾನನು ಕಳುಹಿಸಿಕೊಟ್ಟನು.

ಇತ್ತಕಡೆ ಆ ಹಳ್ಳಿಯಲ್ಲಿ ರಾಮರಾಜಾದಿಗಳು ಹೀಗೆ ಮಾತನಾಡಿಕೊಳ್ಳುತ್ತಿದ್ದರು. "ತಿಮ್ಮರಸರು ಬೋಧಿಸಿದಂತೆ ಕೆಲಸಗಳೆಲ್ಲವನ್ನೂ ಮಾಡಿರುವೆವು; ತೋಫಲ್‌ಖಾನನಿಗೆ ತಕ್ಕ ಪ್ರಾಯಶ್ಚಿತ್ತವಾಯಿತು; ರಾಮಯಾದಿಗಳನ್ನು ಕಟ್ಟಿಹಾಕಿದೆವು; ಅನಂಗಸೇನೆಯನ್ನು ಸುರಕ್ಷಿತವಾಗಿ ಬಿಡಿಸಿದೆವು; ಮಹಮದೀಯರಲ್ಲಿ ಭೇದವನ್ನುಂಟುಮಾಡಿದೆವು. ಇನ್ನೇನು ಉಳಿದಿರುವುದು ? ಇವರೆಲ್ಲರನ್ನೂ ಕರೆದುಕೊಂಡುಹೋಗಿ ಸಾರ್ವಭೌಮರಿಗೆ ಒಪ್ಪಿಸೋಣವೆ ?" ಎಂದು ರಾಮರಾಜನು ಹೇಳಿದನು.

"ಸಹೋದರನೇ ! ನಾಳೆಬೆಳಗ್ಗೆ ಚಕ್ರವರ್ತಿಗಳು ದುರ್ಗವನ್ನು ಮುತ್ತುವರಲ್ಲವೆ ? ಆದುದರಿಂದ ನಾವು ಈ ಸ್ಥಳವನ್ನು ಬಿಟ್ಟು ಕದಲಬೇಕಾಗಿಲ್ಲ. ನಾವು ಇರುವವರು ಮೂರುಮಂದಿ. ಶತ್ರುದುರ್ಗಕ್ಕೆ ಇಷ್ಟು ಹತ್ತಿರದಲ್ಲಿರುವಾಗ ಮೂವರು ಖೈದಿಗಳನ್ನೂ ಸುರಕ್ಷಿತವಾಗಿ ತೆಗೆದುಕೊಂಡು ಹೋಗುವುದು ಸುಲಭವಲ್ಲ. ಆದುದರಿಂದ ದುರ್ಗವು ರಾಯರ ವಶವಾಗುವವರೆಗೂ ಇಲ್ಲಿಯೇ ಇರುವುದು ಕ್ಷೇಮವೆಂದು ತೋರುವುದು," ಎಂದು ತಿರುಮಲರಾಯನು ಹೇಳಿದನು.

"ತಮ್ಮಾ ! ನೀನು ಹೇಳುವುದು ದಿಟ. ಆದರೂ ಈ ಸ್ಥಳದಲ್ಲಿರುವುದು ಅಷ್ಟು ಸುರಕ್ಷಿತವಾಗಿಲ್ಲ. ಏಕೆಂದರೆ ತೋಫಲ್‌ಖಾನನಿಗೆ ಎಂದೆಂದೂ ಮರೆಯದಂತಹ ಅವಮಾನವನ್ನು ಮಾಡಿ ಅವನನ್ನು ಕಳುಹಿಸಿದೇವೆ. ಅವನು ಮುಯ್ಯಿತೀರಿಸಿಕೊಳ್ಳುವುದಕ್ಕೆ ಸ್ವಲ್ಪ ಸೈನ್ಯವನ್ನು ಇಲ್ಲಿಗೆ ಕಳುಹಿಸದೆ ಇರಲಾರನು. ನಾವು ಎಷ್ಟೇ ಬಲಿಷ್ಠರಾದರೂ

ಒಂದು ಸೈನ್ಯದೊಡನೆ ಯುದ್ಧಮಾಡಿ ಜಯಿಸಲಾದೀತೆ ? ಒಂದುವೇಳೆ ಜಯವಾದರೂ ಸಂಶಯಾಸ್ಪದವಾದ ಜಯವನ್ನಪೇಕ್ಷಿಸುವುದಕ್ಕಿಂತ ಈ ಸ್ಥಳವನ್ನು ಬಿಡುವುದೇ ಒಳ್ಳೆಯದು" ಎಂದು ರಾಮರಾಜನು ಹೇಳಿದನು.

"ಅಣ್ಣಾ ! ಈ ವಿಷಯವನ್ನು ಚೆನ್ನಾಗಿ ಯೋಚಿಸಬೇಕಾಗಿದೆ. ನಾವು ಇಲ್ಲಿಯೇ ಇದ್ದರೂ ಲಾಭವಿರುವುದು. ಇಲ್ಲಿಯೇ ಇದ್ದರೆ ಶತ್ರುಗಳನ್ನು ಇದಿರಿಸುವ ಕೆಲಸಮಾತ್ರ ನಮಗಿರುವುದು. ಸ್ತ್ರೀಯಾದಿಗಳನ್ನೂ ಅನಂಗಸೇನಾದಿಗಳನ್ನೂ ಕಾಪಾಡಿಕೊಳ್ಳುವ ಅಗತ್ಯವಿರುವುದಿಲ್ಲ. ನಾವು ಮಧ್ಯಮಾರ್ಗದಲ್ಲಿ ಇದ್ದರೆ ಶತ್ರುಗಳೊಡನೆ ಹೋರಾಡಲೂ ಬೇಕಾಗುವುದು; ಇವರನ್ನು ರಕ್ಷಿಸಿಕೊಳ್ಳಲೂ ಬೇಕಾಗುವುದು. ನೀನು ಇನ್ನೂ ಚೆನ್ನಾಗಿ ಯೋಚಿಸಿನೋಡು" ರಾಮ- ಸಹೋದರಾ ! ನೀನು ಹೇಳುವುದು ಸರಿ ಎಷ್ಟು ಕಷ್ಟವಾದರೂ ಆಗಲಿ; ರಮಾಬಾದಿಗಳು ನಮ್ಮ ಕೈ ಬಿಟ್ಟುಹೋಗದಂತೆ ರಕ್ಷಿಸಿಕೊಳ್ಳಬೇಕು. ನಾವು ಒಂದು ದಪ್ಪ ಕೆಲಸವನ್ನು ಮಾಡಿದೆವು. ಖಾಸನನ್ನು ಬಿಟ್ಟುಬಿಡಬಾರದಾಗಿತ್ತು."

ಹೀಗೆ ಮಾತನಾಡುತ್ತಿದ್ದಾಗ ಕುದುರೆಗಳು ಓಡಿಬರುತ್ತಿದ್ದ ಶಬ್ದವು ಕೇಳಿಸಿತು. ಬರುತ್ತಿದ್ದವರು ಶತ್ರುಗಳೇ ಎಂದು ನಿರ್ಧರಿಸಿಕೊಂಡು ಆ ದಿನ ತಾವು ತಮ್ಮ ಸರ್ವಶಕ್ತಿಯನ್ನು ಬಿಟ್ಟು ಯುದ್ಧಮಾಡದ ಹೊರತು, ಅವರು ಅದುವರೆಗೆ ಪಟ್ಟಿದ್ದ ಕಷ್ಟವೆಲ್ಲಾ ವ್ಯರ್ಥವಾಗುವುದೆಂದು ನಿಶ್ಚಯಿಸಿಕೊಂಡರು. ಆಗ ಆ ಮನೆಯ ಬಳಿಗೆ ಹತ್ತು ಜನ ಸವಾರರು ಬಂದರು. ಇನ್ನು ಹೆಚ್ಚು ಮಂದಿ ಅಲ್ಲಿಗೆ ಬರಲು ಅವಕಾಶವಿರಲಿಲ್ಲ. ಹೀಗಿದ್ದುದರಿಂದ ರಾಮರಾಜಾದಿಗಳಿಗೆ ದೊಡ್ಡ ಉಪಕಾರವಾಯಿತು. ವೀರಾಗ್ರೇಸರರಾದ ರಾಮರಾಜಾದಿಗಳು ತಮ್ಮ ವಿಕ್ರಮಾತಿಶಯದಿಂದ ತಮ್ಮ ಮೇಲೆ ನುಗ್ಗಿ ಬರುತ್ತಿದ್ದ ಶತ್ರುಗಳನ್ನು ಹಿಂದಕ್ಕೆ ಅಟ್ಟುತ್ತಿದ್ದರು. ಹೀಗೆ ಬಹಳ ಹೊತ್ತು

ಯುದ್ಧ ನಡೆವಮೇಲೆ [illegible] ಹು ಪ್ರದು ಪ್ರಯೋಜನಕರವಲ್ಲವೆಂದು ತಿಳಿ[illegible] ವಾತ್ಮ ಮಂಪಿ[illegible] ಬಸ್ಸಿಗೆ [illegible] ಬಂದರು. [illegible] ಪರಾ ಕ್ರಮಾತಿಶಯದಿಂದ [illegible] ಗಾ[illegible]ಪಡಿಸಿ ಕೆಲವರನ್ನು [illegible] ರು. ತನ್ನ [illegible] ಭಾವನೆಯು [illegible] ಅವರು ಪ್ರಾಣದ [illegible]ವಾದುದರಿಂದ ಶುತ್ರಸೈನ್ಯವನ್ನು [illegible] ಇವ್ವರಲ್ಲಿ ಆ ಶತ್ರುಗಳ [illegible] ವಾ ನು ತನ್ನ [illegible] ಬಡಿಸಿ[illegible] ವಹ ವ್ಯ[illegible] ಕೆಲವರು ಯು[illegible] ದುರಯ [illegible] ಬಂದ [illegible] ಯುರಮೇಲೆ [illegible] ದಿಗಳಿಗೆ [illegible] ಸಿತು. [illegible] ಬಹಳ ವಾಗಿ [illegible] ಬಡಿ ಹೋದವು. [illegible] ದಿಗಳು ಬಂದ [illegible] ಬಹಳ ಸಂತೋಷ[illegible] ಕಾ[illegible] ಬಹಳವಾಗಿ [illegible] ಮಾಡಿದರು.

"ರಾಮಚಂದ್ರ ! ನೀನು ಹೇಳಿದ್ದಂತೆ ನನ್ನ [illegible] ಕಾಂಬೆಯನ್ನು ಬಿಡಿಸಿಕೊಂಡು ಮಾರ್ಗದಿಂದ [illegible] ನಾವು

ಗಳು ಮೊದಲು ಬೇರೊಂದು ಹಳ್ಳಿಗೆ ಹೋಗಿ ನೀವು ಅಲ್ಲಿ ಇಲ್ಲದೇ ಇರುವುದನ್ನು ತಿಳಿದು ಇಲ್ಲಿಗೆ ಬರುತ್ತಿದ್ದೆನು. ಇಲ್ಲಿ ನಡೆಯುತ್ತಿದ್ದ ಯುದ್ಧವನ್ನು ಕಂಡು ಮುಕ್ತಾಂಬೆಯನ್ನು ಕೆಳಕ್ಕಿಳಿಸಿ ಒಂದು ಮನೆಯ ಬಾಗಿಲಲ್ಲಿ ಕುಳ್ಳಿರಿಸಿ ನಾನು ಇತ್ತಕಡೆ ಬಂದೆನು. ಯುದ್ಧಮಾಡುತ್ತಿದ್ದವರಲ್ಲಿ ಅನೇಕರು ಮಹಮ್ಮದೀಯರೆಂಬುದನ್ನು ತಿಳಿದು ನಾನು ಯುದ್ಧಕ್ಕೆ ಮೊದಲುಮಾಡಿದೆನು" ಎಂದು ಹೇಳುತ್ತಿದ್ದಾಗ, ಮುಕ್ತಾಂಬೆಯು ಅಲ್ಲಿಗೆ ಬಂದಳು. ಆಕೆಯನ್ನು ನೋಡಿ ರಾಮರಾಜಾದಿಗಳು ಬಹಳ ಸಂತೋಷಪಟ್ಟರು.

ಇತ್ತಕಡೆ ಹತಶೇಷರಾಗಿ ಓಡಿಹೋಗಿದ್ದ ತುರುಕರು ತಮಗೆ ಆದ ಪರಾಭವವನ್ನು ಖಾನನಿಗೆ ತಿಳಿಸಲು, ಅವನು ರೇಗಿ ಮತ್ತೊಂದು ದಳವನ್ನು ಕಳುಹಿಸಬೇಕೆಂದು ಏರ್ಪಾಡುಮಾಡುತ್ತಿದನು. ಇಷ್ಟರಲ್ಲಿ ಚಕ್ರವರ್ತಿಗಳ ಸೈನ್ಯವು ಅತಿರಭಸದಿಂದ ದುರ್ಗವನ್ನು ಮುತ್ತಿಕೊಂಡಿತು. ಆದುದರಿಂದ ಖಾನನು ಆ ಪ್ರಯತ್ನವನ್ನು ಅಲ್ಲಿಗೆ ನಿಲ್ಲಿಸಿ ದುರ್ಗರಕ್ಷಣೆಗಾಗಿ ಏರ್ಪಾಡುಗಳನ್ನು ನೋಡಿಕೊಳ್ಳಲಾರಂಭಿಸಿದನು. ಅವನು ನಿಂತಲ್ಲಿ ನಿಲ್ಲದೆ ದುರ್ಗದ ಎಲ್ಲಾ ಭಾಗಗಳಿಗೂ ತಾನೇ ಹೋಗುತ್ತಾ ಎಲ್ಲರನ್ನೂ ಪ್ರೋತ್ಸಾಹಿಸುತ್ತಾ ಇದ್ದನು.

ಇಷ್ಟುಹೊತ್ತಿಗೆ ಸೂರ್ಯನು ಏಟ್ಟುತ್ತಿದ್ದನು. ರಾಯರ ಸೈನ್ಯವು ಮಿಡಿತೆಗಳ ತಂಡದಂತೆ ದುರ್ಗದ ಎಲ್ಲಾ ಭಾಗಗಳನ್ನೂ ಮುತ್ತಿಕೊಂಡಿತು. ಚಕ್ರವರ್ತಿಗಳು ತಾವೇ ತಮ್ಮ ಸೈನಿಕರಿಗೆ ಪ್ರೋತ್ಸಾಹಿಸುತ್ತ ಅಲ್ಲಲ್ಲಿ ಸುತ್ತುತ್ತಿದ್ದರು. ವಿಜಯನಗರದ ಸೈನಿಕರು ತಮ್ಮ ಮೇಲೆ ಬೀಳುತ್ತಿದ್ದ ಕೆಂಡಗಳನ್ನೂ, ಹುರಿದ ಕಲ್ಲುಮರಳುಗಳನ್ನೂ, ಕಾದು ಸುರಿಯುತ್ತಿದ್ದ ಎಣ್ಣೆಯ ಪ್ರವಾಹಗಳನ್ನೂ ಲಕ್ಷಿಸದೆ ಯುದ್ಧಮಾಡುತ್ತಿದ್ದರು. ಆದರೂ ದುರ್ಗದಲ್ಲಿದ್ದವರು ಬಹಳ ಗಟ್ಟಿಮನದಿಂದ ಯುದ್ಧಮಾಡುತ್ತಿದ್ದುದರಿಂದ

ಬಹಳ ಕಾಲದವರೆಗೂ ಆದಿನ ಪ್ರಯೋಜನವೇನೂ ಆದಂತೆ ತೋರಲಿಲ್ಲ. ಆಗ ರಾಯರು ಮದಿಸಿದ ಆನೆಗಳ ಮೂಲಕ ದುರ್ಗದ್ವಾರವನ್ನು ಒಡೆಯಿಸುವಂತೆ ಆಜ್ಞಾಪಿಸಿದರು. ಆ ಆನೆಗಳು ತಮ್ಮ ಕುಂಭಗಳಿಂದ ಆ ದ್ವಾರಗಳನ್ನು ರಭಸವಾಗಿ ಬಡಿಯುತ್ತಿದ್ದುವು. ಆ ಬಾಗಿಲುಗಳಿಗೆ ಚೂಪಾದ ಮೊಳೆಗಳನ್ನು ಹೊಡಿಸಿದ್ದುದರಿಂದ ಒಂದುಸಾರಿ ಪ್ರಯತ್ನಿಸಿದ ಆನೆಗಳು ಎಷ್ಟು ಪ್ರೋತ್ಸಾಹಿಸಿದರೂ ಇನ್ನೊಂದುಸಾರಿ ಪ್ರಯತ್ನಿಸುತ್ತಿರಲಿಲ್ಲ. ಆದುದರಿಂದ ಆನೆಗಳಿಂದಲೂ ದುರ್ಗದ ಬಾಗಿಲನ್ನು ಒಡೆಯುವುದಕ್ಕೆ ಆಗಲಿಲ್ಲ. ಈ ಮೇರೆಗೆ ಇಪ್ಪತ್ತು ದಿನಗಳವರೆಗೆ ಮುತ್ತಿಗೆಯು ನಡೆಯಿತು. ಆದರೂ ಪ್ರಯೋಜನವಾಗಲಿಲ್ಲ. (ಆಗ ಪೋರ್ಚುಗೀಸರ ಕಡೆಯವನಾದ ಕ್ರಿಸ್ಟೊವಿಡಿಫಿಗರೀಡೋ ಎಂಬಾತನು ರಾಯರ ಅಪ್ಪಣೆಯನ್ನು ಪಡೆದು ದುರ್ಗದ ಗೋಡೆಯಲ್ಲಿ ಕನ್ನಹಾಕಿಸಬೇಕೆಂದು ನುಗ್ಗಿದನು.) ಸೈನಿಕರು ಪರಮೋತ್ಸಾಹದಿಂದ ಕನ್ನವನ್ನು ಕೊರೆಯಲಾರಂಭಿಸಿದರು. ಆದರೆ ಕೋಟೆಯೊಳಗಿದ್ದವರು ಆ ಸೈನಿಕರ ಮೇಲೆ ಅಗ್ನಿವೃಷ್ಟಿಯನ್ನು ಎಡೆಬಿಡದೆ ಉಂಟುಮಾಡಿದರು. ಮೈಸುಟ್ಟವರು ಹಿಂದಕ್ಕೆ ಹೋದರೆ ಅವರ ಸ್ಥಾನವನ್ನು ಆಕ್ರಮಿಸಿಕೊಳ್ಳಲು ಮತ್ತೆ ಕೆಲವರು ಹಿಂದಿನಿಂದ ನುಗ್ಗಿ ಬರುತ್ತಿದ್ದರು. ರಾಯರ ಸೈನಿಕರಲ್ಲಿ ಕೆಲವರು ಬಿಲ್ಲು ಬಾಣಗಳನ್ನು ಧರಿಸಿ ಗೋಡೆಯ ಮೇಲಕ್ಕೆ ಬಂದವರನ್ನು ಬಾಣಗಳಿಂದ ನೋಯಿಸುತ್ತಾ ತಮ್ಮ ಕಡೆಯವರಿಗೆ ಸಹಾಯ ಮಾಡುತ್ತಿದ್ದರು. ಆದುದರಿಂದ ದುರ್ಗದ ಇತರ ಭಾಗಗಳಲ್ಲಿದ್ದವರೂ ಕನ್ನ ಕೊರೆಯುತ್ತಿದ್ದವರನ್ನು ಅಡ್ಡಿಪಡಿಸಬೇಕೆಂದು ಬರುತ್ತಿದ್ದರು.

ಈ ಸಮಯದಲ್ಲಿ ವಿಜಯಸಿಂಹನು ರಾಮರಾಜಾದಿಗಳ ಸಹಾಯದಿಂದ ಉನ್ನತವಾದ ಏಣಿಯೊಂದನ್ನು ತರಿಸಿ ಬೇರೊಂದು ಪಕ್ಕದಲ್ಲಿ ಹಾಕಿಕೊಂಡು ಮೇಲೆ ಶತ್ರುಯೋಧರು ಪ್ರತಿಭಟಿಸುತ್ತಿದ್ದರೂ ಲಕ್ಷಿಸದೆ ಉದ್ದವಾದ ಒಂದು ಬಲ್ಲೆಯದಿಂದ ಮೇಲಿದ್ದವರನ್ನು ಚುಚ್ಚಿ ಕೆಡವುತ್ತಾ

ಅಲ್ಲಿದ್ದ ರಕ್ಷಾಭಟರನ್ನು ಓಡಿಸಲಾರಂಭಿಸಿದನು. ಶತ್ರುಗಳಾದರೋ ಸ್ವಲ್ಪವೂ ಹಿಂತೆಗೆಯದೆ ಸತ್ತುಬಿದ್ದವರ ಸ್ಥಾನದಲ್ಲಿ ಮುಂದೆಮುಂದೆ ಬಂದು ಯುದ್ಧಮಾಡುತ್ತಿದ್ದರು. ಇಷ್ಟರಲ್ಲಿ ರಾಮರಾಜನೂ ತಿರುಮಲರಾಜನೂ [illegible] ಹತ್ತಿ ವಿಜಯನಗರದ [illegible] ಈ ಸುದ್ದಿಯು [illegible] ಸೈನ್ಯವನ್ನು ತರುವಷ್ಟರಲ್ಲಿ ರಾಯರ [illegible] ಯನ್ನು ಹತ್ತಿದರು. ಆದು ದರಿಂದ [illegible] ಳದಲ್ಲಿದ್ದ ಸೈನಿಕರು [illegible] ರಿಂದ ಸ್ವಲ್ಪ ಹೊತ್ತಿನಲ್ಲೇ [illegible] ಆದರೆ [illegible] ನ್ನು [illegible] ಹೊಡೆಯಲು [illegible] ಸೈನ್ಯ [illegible] ಒಳಗೆ ನುಗ್ಗಿ ದ [illegible] ದ ಬಳಿಕ [illegible] ಇಷ್ಟು [illegible] ದ ಸೈನ್ಯ ದಲ್ಲಿ [illegible] ಆರಂಭಿಸಲು ಅಂತಹವನ್ನು ಶಿಕ್ಷಿಸಿ ಸಿಪಾಯಿಗಳ [illegible] ನ್ನು ಅವರವರಿಗೆ ಕೊಡಿಸಿದರು. ಹೀಗೆ ರಾಯರು ತಮ್ಮಲ್ಲಿ [illegible] ನ್ನು [illegible] ದ ನಿವಾಸಿಗಳು [illegible] ರಿಗೆ ಬಹಳ [illegible] ಹೀಗೆ ತಮ್ಮ [illegible] ದಲ್ಲಿದ್ದ [illegible] ಯು ದೊರೆಯದೆ ಹೋದುದರಿಂದ ರಾಯರಿಗೆ ವ್ಯಸನವುಂಟಾಗಿತ್ತು. ಆ ರಾತ್ರಿ ರಾಯರ ಸೈನಿಕರು [illegible] ವಾಗಿ ನಿದ್ರೆ ಮಾಡಿದರು. ಆ ನಿಶೀಥಸಮಯದಲ್ಲಿ [illegible] ಹೋಗುತ್ತಿದ್ದನು. ಅವನನ್ನು ಯಾರೂ [illegible] ಅವನಲ್ಲ [illegible] ವ್ಯಕ್ತಿಯು ರಾಯರ ಬಳಿಗೆ ಹೋಗಿ ರಾಯರ

ಕಾಲಿಗೆ ಬಿದ್ದಳು. ಆಗ ರಾಯರು ಆಕೆಯನ್ನು ಎಬ್ಬಿಸಿ ನಿಲ್ಲಿಸಿ—"ಪ್ರಿಯೆ ಅನಂಗಸೇನೆ! ನಿರಪರಾಧಿನಿಯಾದ ನಿನ್ನನ್ನು ನಾನು ದೂಷಿಸಿ ಇಷ್ಟು ಕಷ್ಟವನ್ನು ಕೊಟ್ಟೆ. ಕ್ಷಮಿಸು" ಎಂದು ಹೇಳಿದರು.

"ಸಾರ್ವಭೌಮರೇ! ನನ್ನಂತಹವರಿಗೆ ಚಕ್ರವರ್ತಿಗಳಾದ ತಾವು ಹೀಗೆ ಕೇಳಿಕೊಳ್ಳಬಾರದು; ತಮ್ಮ ಮಹನೀಯರ ನಿಗ್ರಹಾನುಗ್ರಹಗಳಿಂದ ಲಕ್ಷಾಧಿಕಾರಿಗಳು ಭಿಕ್ಷಾಧಿಕಾರಿಗಳಾಗುವರು, ದರಿದ್ರರು ಕುಬೇರರಾಗಿಯೂ ಆಗುವರು. ಅಂತಹ ತಾವು ತಮ್ಮ ದಾಸಳಾದ ನನ್ನ ತಪ್ಪನ್ನು ಮನ್ನಿಸಿ ಪೂರ್ವದಂತೆಯೇ [illegible]ಯಿಂದ ನೋಡಿಕೊಂಡಿರಬೇಕು" ಎಂದು ವಿನಯದಿಂದ ಕೇಳಿಕೊಂಡಳು.

"ಪ್ರಿಯೆ! ರಾಜಮಹಾರಾಜರುಗಳು [illegible] ನಿನ್ನ ನಿಷ್ಕಲ್ಮಷವಾದ ನಡತೆಯನ್ನು [illegible]ಸುತ್ತಿದ್ದೇನೆ" ಎಂದು ಆಕೆಯನ್ನು ಸ್ತೋತ್ರ ಮಾಡಿ [illegible] ಕೇಳುತ್ತಾ ಸಂತೋಷಪಡುತ್ತಿದ್ದರು. ರಾಯಚೂರು ದುರ್ಗದಲ್ಲಿ ಮೂರು ದಿನಗಳ ಕಾಲ ವಿಜಯೋತ್ಸವಗಳನ್ನು ನಡೆಯಿಸಿ ಅದರ [illegible] ಬೇಕಾದ ಏರ್ಪಾಡುಗಳನ್ನು ಮಾಡಿ ರಾಯರು ವಿಜಯನಗರಕ್ಕೆ ಹಿಂತಿರುಗಿದರು.

ಮೂವತ್ತಾರನೆಯ ಪ್ರಕರಣ

ಸಂತೋಷ

" ಜಠರಂ ಪೂರಯಿತುಂ ಗುಣಾನ್ ಪ್ರಕಟಿತುಂ ಮಾನೋನ್ನತಿಂ ರಕ್ಷಿತುಂ |
ಕಾರ್ಯಂ ಸಾಧಯಿತುಂ ಖಲಾನ್ ಸ್ಖಲಯಿತುಂ ಲಕ್ಷ್ಮೀಂ ಸಮಾಸೇವಿತುಂ ||
ಸ್ವಪ್ರಶ್ನೈಃ ಪರಿಕಲ್ಪಿತಾಂಜಲಿಜಲ್ಪೈಃ ವಿಕ್ರೀಯದೇಹಸ್ಥಿತಿಂ |
ಸಂತೋಷೀ ಭೂಪತಿಮಾಶ್ರಯಂತಿ ನ ಪುನರ್ದೈನ್ಯಾಯ ದುಃಖಾಯ ಚ || "

ಕೃಷ್ಣದೇವರಾಯರು ವಿಜಯನಗರವನ್ನು ಸೇರಿದ ಮೂರನೆಯ ದಿವಸ ರಾಜಧಾನಿಯಲ್ಲಿ ವಿಜಯೋತ್ಸವಗಳನ್ನು ನಡೆಯಿಸಲು ಆಜ್ಞಾಪಿಸಿದರು. ತಿಮ್ಮರಸಮಂತ್ರಿಯು ಇದರ ಏರ್ಪಾಡುಗಳನ್ನು ಸ್ವತಃ ನೋಡಿಕೊಳ್ಳುತ್ತಿದ್ದನು. ಉತ್ಸವದಲ್ಲಿ ಮಧ್ಯಾಹ್ನ ನಾಲ್ಕು ಗಂಟೆಗೆ ದರ್ಬಾರು ನಡೆಯುವಂತೆ ನಿರ್ಣಯವಾಗಿತ್ತು. ಅದಕ್ಕೆ ಅನೇಕ ದೇಶಾಧೀಶ್ವರರೂ ದುರ್ಗಾಧೀಶ್ವರರೂ ಸೇನಾನಾಯಕರೂ ಇತರ ಪ್ರಭುಗಳೂ ಬಂದಿದ್ದರು. ಆಸಭೆಯಲ್ಲಿ ಎರಡು ಸಾವಿರಕ್ಕಿಂತ ಹೆಚ್ಚು ಜನರು ಸೇರಿದ್ದರು. ಆಗ ಕೃಷ್ಣದೇವರಾಯರು ಮುಖ್ಯ ಮಂತ್ರಿಯಾದ ತಿಮ್ಮರಸನೊಡನೆ ವಿನೋದ ಮಾತಾಡುತ್ತಾ ಪರಿಜನ ಪರಿವೃತರಾಗಿ ಮಹಾವೈಭವದಿಂದ ಸಭಾಮಂದಿರವನ್ನು ಪ್ರವೇಶಿಸಿದ ಕೂಡಲೆ ಸಭೆಯಲ್ಲಿದ್ದವರೆಲ್ಲರೂ ಜಗ್ಗನೆ ಎದ್ದು ಮರ್ಯಾದೆಮಾಡಿದರು. ರಾಯರು ಅವರ ವಂದನೆಗಳನ್ನು ಸ್ವೀಕರಿಸುತ್ತಾ ರತ್ನಸಿಂಹಾಸನವನ್ನು ಹತ್ತಿ ಕುಳಿತುಕೊಂಡ ಬಳಿಕ ಸಭಾಸದರು ತಮ್ಮತಮ್ಮ ಸ್ಥಾನದಲ್ಲಿ ಕುಳಿತುಕೊಂಡರು. ಆಗ ತಿಮ್ಮರಸನು ತನ್ನ ಪೀಠದಿಂದೆದ್ದು ಸಭಾಸದರನ್ನು ಕುರಿತು "ಸಭಾಸದರೇ! ಬಹಳ ದಿನದಿಂದಲೂ ಹಿಡಿದುಕೊಳ್ಳಬೇಕೆಂದಿದ್ದ ರಾಯಚೂರುದುರ್ಗವನ್ನು ಸಾಧಿಸುವುದರಲ್ಲಿ ತಮ್ಮ ಜೀವದ ಮೇಲಿನ ಹಂಗನ್ನು ತೊರೆದು ಯುದ್ಧಮಾಡಿದ ವೀರಾಗ್ರೇಸರರಿಗೆ ತಕ್ಕ ಬಹುಮಾನವನ್ನು ಮಾಡಬೇಕೆಂದು ಈ ಸಭೆಯು ಸೇರುವಂತೆ ಸಾರ್ವಭೌಮರು ಅಪ್ಪಣೆಮಾಡಿರುವರು." ಹೀಗೆ

ಹೇಳುವಷ್ಟರಲ್ಲಿ ಕೆಲವರು ಖೈದಿಗಳನ್ನು ಕರೆದುಕೊಂಡು ನಾಲ್ವರು ವೀರರು ಸಭೆಯನ್ನು ಪ್ರವೇಶಿಸಿದರು. ಅವರನ್ನು ಕಂಡು ತಿಮ್ಮರಸನು ಅವರನ್ನು ಗೌರವಿಸಿ ಶ್ರೇಷ್ಠವಾದ ಪೀಠಗಳಲ್ಲಿ ಕುಳಿತುಕೊಳ್ಳುವಂತೆ ನಿಯಮಿಸಲು ವಿಜಯಸಿಂಹನೂ ರಾಮರಾಜನೂ ತಿರುಮಲರಾಯನೂ ಶಂಕರಶೆಟ್ಟಿಯೂ ಕುಳಿತುಕೊಂಡರು. ಆಬಳಿಕ ತಿಮ್ಮರಸನು ಸಭೆಯವರನ್ನು ಕುರಿತು ತಾನು ಹೇಳಿದ್ದರೀತಿಯಲ್ಲಿ ಎಲ್ಲಾಕಾರ್ಯಗಳನ್ನೂ ನಡೆಯಿಸಿದ್ದ ಆ ನಾಲ್ವರನ್ನೂ ಬಹಳವಾಗಿ ಸ್ತುತಿಸಿದನು. ದುರ್ಗಸಾಧನಕಾಲದಲ್ಲಿ ವಿಜಯಸಿಂಹನು ತೋರಿಸಿದ್ದ ಅಸಾಧಾರಣವಾದ ಧೈರ್ಯವನ್ನು ಸದಸ್ಯರಿಗೆ ವಿವರಿಸಿದನು. ಬದ್ಧರಾಗಿದ್ದವರು ರಾಮಯ್ಯಮಂತ್ರಿ ಪ್ರಹರೇಶ್ವರ ರುದ್ರಗೋಪ ಎಂಬ ಪಾತಕರಿಗೆ ಹೇಳಲು ಆವಶ್ಯಕವೇನಿದೆ? ಅವರು ತಲೆಯನ್ನು ತಗ್ಗಿಸಿಕೊಂಡು ಪರಿತಾಪ ಪಡುತ್ತಿದ್ದರು. ಆಗ ತಿಮ್ಮರಸನು ಸಾರ್ವಭೌಮರನ್ನು ನೋಡುತ್ತ "ಮಹಾಸ್ವಾಮಿಗಳೇ! ಸಭಾಸದರೇ! ಬದ್ಧರಾಗಿ ಇಲ್ಲಿ ನಿಂತಿರುವವರನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇವರು ಉದಯಗಿರಿ ದುರ್ಗಾಧೀಶ್ವರನ ಸಚಿವರಾದ ರಾಮಯ್ಯಮಂತ್ರಿಗಳು ಇವರೇ. ನಮ್ಮ ಪಟ್ಟಣದಲ್ಲಿ ಹುಚ್ಚನವೇಷವನ್ನು ಹಾಕಿಕೊಂಡು ಅನೇಕ ಕಾರ್ಯಗಳನ್ನು ನಡೆಯಿಸಿದವರು. ತಮ್ಮ ದುರ್ಗವು ನಮ್ಮ ವಶವಾಯಿತೆಂಬ ಕೋಪದಿಂದ ನಮಗೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂದು ಮಹಮ್ಮದೀಯರನ್ನು ಒಟ್ಟುಗೂಡಿಸುವುದಕ್ಕಾಗಿ ವಿಶೇಷ ಸಾಹಸಗಳನ್ನು ನಡೆಯಿಸುತ್ತಿದ್ದರು. ಅದನ್ನು ತಿಳಿದು ನಾನು ರಾಮರಾಜಾದಿಗಳನ್ನು ಕಳುಹಿಸಲು, ಅವರು ನಾನು ಹೇಳಿದ ರೀತಿಯಲ್ಲಿ ಕೆಲಸ ಮಾಡಿ, ಮಹಮ್ಮದೀಯರಲ್ಲಿ ಭೇದವನ್ನು ಕಲ್ಪಿಸಿ, ಅನಂಗಸೇನೆಯ ಮಾನವನ್ನು ಉಳಿಸಿ, ಈ ರಾಮಯಮಾತ್ಯಾದಿಗಳನ್ನು ಹಿಡಿದುಕೊಂಡು ಬಂದರು. ರಾಮಯಮಂತ್ರಿಯು ಮಾಡಿದ ಅಪಾಯಕರವಾದ ಕೃತ್ಯಗಳನ್ನು ವಿಫಲಪಡಿಸಿ ನನ್ನ ಪ್ರಯತ್ನಗಳನ್ನು ಸಫಲಪಡಿಸಿದುದಕ್ಕಾಗಿ ಆ ಭಗವಂತನಿಗೆ

ಎಷ್ಟು ಕೃತಜ್ಞನಾಗಿದ್ದರೂ ಕಡಿಮೆಯೇ. [illegible] ಅನೇಕವಾಗಿ ಆಚರಿಸಿದ ಇವರನ್ನು [illegible] ಬೇಕು" ಎಂದು ಸಾರ್ವಭೌಮನನ್ನು ಕುರಿತು ಹೇಳಿ ಬಿಮ್ಮನೆ ನಿಂತುಕೊಂಡಿದ್ದನು.

ಸಭಾಸದರು ಅವನಿಗೆ ಏನು ಶಿಕ್ಷೆಯನ್ನು ರಾಯನು ವಿಧಿಸುವನೋ ಎಂದು ಕುತೂಹಲರಾಗಿದ್ದರು. ಆ ಚಕ್ರವರ್ತಿಯು ಮಂತ್ರಿಯ ಬಂಧನವನ್ನು ತಪ್ಪಿಸಿ ಅವನನ್ನು ಪೀಠದ ಮೇಲೆ ಕುಳ್ಳಿರುವಂತೆ ಆಜ್ಞಾಪಿಸಿ, ರಾಮಯಮಂತ್ರಿಯನ್ನು ಕುರಿತು "ಇದಕ್ಕೆ ನೀವೇನು ಹೇಳುವಿರಿ?" ಎಂದು ಕೇಳಿದರು.

ಆಗ ರಾಮಯಮಂತ್ರಿಯು ಎದ್ದು ಸಾರ್ವಭೌಮರಿಗೆ ಇದಿರಾಗಿ ನಿಂತು "ಜಯಜಯ! ಚಕ್ರವರ್ತಿಯಾದವರೇ! ರಾಜದ್ರೋಹಿಯೆನಿಸಿ [illegible] ಅದಕ್ಕೆ ಪ್ರತಿಕೂಲರಾಗಿರುವವನು [illegible] ಪ್ರಯತ್ನಿಸುತ್ತಿದ್ದೆನು. ಸಮಯದಲ್ಲಿ [illegible] ತಪ್ಪದೆ ಸಾಧಿಸಬೇಕೆಂದಿದ್ದೆನು. ಹಾಗೆಯೇ ಪ್ರಯತ್ನಿಸಿ [illegible] ವುದರಿಂದ ಈಗ ನನ್ನ ಪ್ರಾಣಗಳನ್ನು [illegible] ನವೇ ಇಲ್ಲ. ನಾನು ಇಲ್ಲದವರೆಗೆ [illegible] ತೆಗೆದುಕೊಂಡಿರಿ. ಚಿರಕಾಲದಿಂದ [illegible] ನಾನು ಈ ಆಪತ್ಕಾಲದಲ್ಲಿ ದುರ್ಗವನ್ನು [illegible] ಬೇಕೆಂದು ಸರ್ವಪ್ರಯತ್ನಗಳನ್ನು ಮಾಡಿ [illegible] ಕೊಂದರೆ ತಮ್ಮನ್ನು ಜಯಿಸುವುದು [illegible] ಕೊಲ್ಲಬೇಕೆಂದು ಯತ್ನಿಸಿದೆನು. [illegible] ವನ್ನು ಪಡೆದುಕೊಳ್ಳುವುದಕ್ಕೋಸ್ಕರ [illegible] ಕೋಪವು ಬರುವಂತೆ ಮಾಡಿ ಆಕೆಯನ್ನು [illegible] ದುರ್ಗಕ್ಕೆ ಹಿಡಿದುಕೊಂಡು ಹೋದೆನು. ತಮ್ಮನ್ನು [illegible] ಕೊಲ್ಲಬೇಕೆಂದು ಪ್ರಯತ್ನಿಸಿ

ದಾಗ ನನ್ನ ಅನುಚರರಿಗೆ ಅಗ್ನಿಯನ್ನು ಮಾಡಿದುದರಿಂದಲೂ, ನನ್ನ ಹಿತನಾದ ರುದ್ರದೇವನಿಗೆ ಮುಕ್ತಾಂಬೆಯನ್ನು ಕೊಡಿಸಿ ಮದುವೆಮಾಡಿಸಬೇಕೆಂದಿದ್ದುದರಿಂದಲೂ ವಿಜಯಸಿಂಹನನ್ನು ಕೊಲ್ಲಿಸಲು ಅತ್ಯಂತ ಸನ್ನಾಹಗಳನ್ನು ಮಾಡಿದೆನು. ಈ ಕಾರ್ಯಗಳಲ್ಲಿ ಯಾವುದನ್ನೂ ಬ್ರಾಹ್ಮಣನಾದ ನಾನು ಮಾಡಬಾರದು. ಆದರೂ ನನ್ನನ್ನು ರಾಜಭಕ್ತಿಯು ಆವೇಶಿಸಿದ್ದುದರಿಂದ, ಈ ಕಾರ್ಯಗಳಿಗೆ ಕೈಹಾಕಿದೆನು. ಇವೆಲ್ಲವೂ ದುಷ್ಟಕಾರ್ಯಗಳೇ ಆಗಿದ್ದರೂ ರಾಜಭಕ್ತಿಯ ಆವೇಶವನ್ನು ಹೊಂದಿದ್ದ ನಾನು ಮದೋನ್ಮತ್ತನಾಗಿ ಮಾಡಿದೆನು. ಇದಕ್ಕೆ ಮುಖ್ಯಕಾರಣವು ರಾಜಭಕ್ತಿಯೇ ಎಂದು ಭಾವಿಸಿ. ತಮ್ಮನ್ನು ಯಾಚಿಸಿದ್ದರೆ ರಾಜ್ಯಕ್ಕೆ ನನಗೇನೂ ಕಡಿಮೆ ಇರುತ್ತಿರಲಿಲ್ಲ. ವೇದಶಾಸ್ತ್ರ ಪುರಾಣಾದಿಗಳನ್ನು ರಕ್ಷಿಸುವ ಸತ್ಕ್ಷತ್ರಿಯರಾದ ತಮ್ಮನ್ನುಆಶ್ರಯಿಸಿದ್ದರೆ, ನಮ್ಮ ರಾಜ್ಯವೇನೋ ನಮಗೆ ಉಳಿಯುತ್ತಿತ್ತು. ಆದರೆ ಪ್ರಾರ್ಥನಾಲಭ್ಯವಾದ ರಾಜ್ಯಕ್ಕಿಂತಲೂ ಪೌರುಷಲಭ್ಯವಾದುದೇ ಒಳ್ಳೆಯದೆಂದು ಯೋಚಿಸಿದೆನು. ತಮ್ಮನ್ನು ಆಶ್ರಯಿಸುವುದಕ್ಕಿಂತಲೂ ವಿಮತಸ್ಥರಾದ ಮ್ಲೇಚ್ಛರನ್ನು ಆಶ್ರಯಿಸುವುದು ಒಳ್ಳೆಯದೆಂದೇ ನನಗೆ ತೋರುತ್ತಿತ್ತು. ಇಷ್ಟು ಅಸತ್ಕಾರ್ಯಗಳನ್ನೂ ನಮ್ಮ ರಾಜಕುಟುಂಬದ ರಕ್ಷಣೆಕ್ಕಾಗಿ ಮಾಡಿದುದರಿಂದ ನನಗೆ ಸ್ವಲ್ಪವಾದರೂ ವ್ಯಸನವಿಲ್ಲ" ಎಂದು ಗಂಭೀರವಾದ ಧ್ವನಿಯಿಂದ ಹೇಳಿದನು.

ಈ ಮಾತುಗಳನ್ನು ಕೇಳಿ ಸಭಾಸದರೆಲ್ಲರೂ ಆಶ್ಚರ್ಯಪಡುತ್ತಿದ್ದರು. ಚಕ್ರವರ್ತಿಯವರೂ ತಿಮ್ಮರಸನೂ ರಾಮರಾಯನ ರಾಜಭಕ್ತಿಯನ್ನೂ ಅಧ್ಯವಸಾಯವನ್ನೂ ಮಾರ್ಗೋದ್ಧರಣೆಯನ್ನೂ ಕಂಡು ಬಹಳ ಸಂತೋಷಪಟ್ಟರು. ಆಗ ತಿಮ್ಮರಸನು ಎದ್ದುನಿಂತು "ರಾಮರಾಯಾಮಾತ್ಯರೇ! ನೀವು ನನ್ನ ವಿಷಯದಲ್ಲಿ ಶತ್ರುತ್ವವನ್ನು ಆಚರಿಸಿದರೂ ನಿಮ್ಮ ವಿಷಯದಲ್ಲಿ ನನಗೆ ಒಂದು ಬಗೆಯ ಸಂತೋಷವೇ ಇರುವುದು. ಅನೇಕ ವರ್ಷಗಳಿಂದಲೂ ಮಂತ್ರಿಸ್ಥಾನದಲ್ಲಿದ್ದು ಬಹಳ ಅನುಭವವನ್ನು ಸಂಪಾದಿಸಿಕೊಂಡಿದ್ದ

ನನ್ನನ್ನೂ ಕೂಡ ನಡುಗಿಸಿದ ನಿಮ್ಮ ಮೇಧಾಶಕ್ತಿಯು ಬಹಳ ಸ್ತೋತ್ರಾರ್ಹವಾಗಿರುವುದು. ನಿಮಗೆ ಮುಕ್ತಾಂಬೆಯು ಸಹಾಯಕಳಾಗಿದ್ದರೆ ಜಯವು ಸುಲಭವಾಗಿ ದೊರೆಯುತ್ತಿತ್ತು. ನೀವು ಅಸಾಧಾರಣಪ್ರಜ್ಞಾವಂತರು" ಎಂದು ಹೇಳಿ ಸಾರ್ವಭೌಮರ ಕಡೆಗೆ ತಿರುಗಿ "ಮಹಾಸ್ವಾಮಿ! ಇವರ ವಿಷಯದಲ್ಲಿ ಪ್ರಭುಗಳ ಚಿತ್ತವನ್ನು ಅಪ್ಪಣೆಕೊಡಿಸಬೇಕು" ಎಂದು ಹೇಳಿದನು. ಅದಕ್ಕೆ ರಾಯರು ಆಲೋಚಿಸಿ ವಿಜಯಸಿಂಹನ ಕಡೆಗೆ ನೋಡಿದರು. ಬಹಳ ಅಪಕಾರವನ್ನುಮಾಡಿದ್ದ ರಾಮಯಾಮಾತ್ಯನ ವಿಷಯದಲ್ಲಿ ವಿಜಯಸಿಂಹನ ಅಭಿಪ್ರಾಯ ಹೇಗಿರುವುದೋ ತಿಳಿದುಕೊಳ್ಳಬೇಕೆಂಬುದೇ ರಾಯರ ಉದ್ದೇಶ. ಆಗ ವಿಜಯಸಿಂಹನು ಎದ್ದು 'ಮಹಾಸ್ವಾಮಿಯವರೇ! ಕಾರ್ಯವಶದಿಂದ ಈತನು ನನಗೆ ಆಪತ್ತನ್ನು ಉಂಟುಮಾಡಿದರೂ, ಈತನು ವಂದ್ಯನೆಂದೇ ನನ್ನ ಅಭಿಪ್ರಾಯ. ಇಂತಹ ಅಪ್ರತಿಮ ಪ್ರತಿಭಾಶಾಲಿಯ ಪ್ರಾಣವನ್ನು ತೆಗೆಯಿಸಿದರೆ ಈ ದೇಶಕ್ಕೆ ಒಂದು ಲೋಪವಾದಂತಾಗುವುದು" ಎಂದು ಹೇಳಿದನು.

ಆ ಮಾತುಗಳನ್ನು ಕೇಳಿ ರಾಮಯಮಂತ್ರಿಯು ಮನಸ್ಸಿನಲ್ಲಿ ಆತನ ಉದಾರಗುಣವನ್ನು ಶ್ಲಾಘಿಸಿದನು. ತಿಮ್ಮರಸನು ರಾಯರ ಅನುಮತಿಯಿಂದ ತಿರುಗಿಯೆದ್ದು "ರಾಮಯ ಮಂತ್ರಿಯವರೇ! ನೀವು ಶಿಕ್ಷಾರ್ಹರಾಗಿದ್ದರೂ ರಾಜನೀತಿ ವಿಶಾರದರಾದ ಚಕ್ರವರ್ತಿಯವರು ನಿಮ್ಮನ್ನು ಶಿಕ್ಷಿಸಬೇಕೆಂದು ಇರುವುದಿಲ್ಲ. ನೀವು ನಮಗೆ ಈಗ ವಶರಾಗಿರುವಿರಿ. ನಮ್ಮ ಇಷ್ಟಾನುಸಾರವಾಗಿ ನಿಮ್ಮನ್ನು ಏನುಬೇಕಾದರೂ ಮಾಡಬಹುದು. ಆದುದರಿಂದ ನಿಮ್ಮನ್ನು ಮಂತ್ರಿಸ್ಥಾನದಲ್ಲಿ ಕಟ್ಟಹಾಕಿರುವರು" ಎಂದು ಹೇಳಿದನು.

ಈ ಮಾತುಗಳನ್ನು ಕೇಳಿ ಸಭೆಯಲ್ಲಿದ್ದವರೆಲ್ಲವರೂ ಬಹಳ ಆಶ್ಚರ್ಯಪಟ್ಟರು. ಮಹಾಪಕಾರಮಾಡಿದವನಿಗೆ ಮಹೋದ್ಯೋಗವನ್ನು ಕೊಟ್ಟುದು ಅಯುಕ್ತವೆಂದೂ ಇನ್ನುಮುಂದೆ ಇತರರೂ ಹೀಗೆಯೇ ರಾಜಾಪಾಯ

ಕಾರ್ಯಗಳಲ್ಲಿ ಪ್ರವೃತ್ತರಾಗುವರೆಂದೂ ಕೆಲವರು ತಮ್ಮತಮ್ಮಲ್ಲೇ ಪಿಸು ಗುಟ್ಟಿಕೊಂಡರು.

ಆಗ ರಾಮಯಮಂತ್ರಿಯು ಎದ್ದು "ಮಂತ್ರಿಶ್ರೇಷ್ಠರೇ ! ನಿಮ್ಮ ಪ್ರತಿಭಾಸೂರ್ಯತೇಜಸ್ಸಿನ ಮುಂದೆ ನಮ್ಮಂತಹವರ ಬುದ್ಧಿಯು ಮಿಣುಕು ಹುಳದ ಬೆಳಕಿನಂತೆ ಇರುವುದು. ಈ ಲೋಕದಲ್ಲಿ ನಿಮ್ಮ ಸಮಾನ ರಾದ ಬುದ್ಧಿಶಾಲಿಗಳಾಗಲಿ ನಿಮ್ಮ ಸದ್ಗುಣಗಳನ್ನು ಚೆನ್ನಾಗಿ ತಿಳದುಕೊಂಡಿ ರುವರಾಗಲಿ ಇಲ್ಲವೆಂದು ಧೈರ್ಯದಿಂದ ಹೇಳಬಲ್ಲೆನು. ನಿಮ್ಮನ್ನು ಕೊಲ್ಲ ಬೇಕೆಂದೆಣಿಸಿ ಕೊಲ್ಲಲಾರದೇ ಹೋದೆನು. ಆದರೆ ನನ್ನನ್ನು ನೀವು ನಿಶ್ಚಯ ವಾಗಿಯೂ ಕೊಂದಿರುವಿರಿ. ನನ್ನ ಮನಸ್ಸಿನಲ್ಲಿ ನಾಟಿದ್ದ ಶತ್ರುತ್ವವನ್ನು ಬೇರು ಸಹಿತ ಕಿತ್ತು ನನ್ನನ್ನು ಬೇರೊಬ್ಬ ರಾಮಯಮಂತ್ರಿಯನ್ನಾಗಿ ಮಾಡಿರುವಿರಿ. ನನ್ನ ಶರೀರವು ನಿಮ್ಮ ವಶವಾದರೂ ನನ್ನ ಮನಸ್ಸು ನಿಮಗೆ ಅಧೀನವಾಗಲಾರದು. ಆದುದರಿಂದ ನಿಮ್ಮ ಆಜ್ಞೆಯನ್ನು ಮೀರಬೇಕಾ ಗಿರುವುದು. ಮಂತ್ರಿತ್ವವನ್ನು ಮಾಡಬೇಕಾದರೆ ನಮ್ಮ ಪ್ರಭುಕುಟುಂಬದ ಸಮೀಪದಲ್ಲೇ ಮಾಡಬೇಕಾಗಿತ್ತು. ನನ್ನ ಪ್ರಭುರಾಜ್ಯವನ್ನು ಪುನರುಜ್ಜೀ ವನ ಮಾಡಲಾರದೇ ಹೋದುದರಿಂದ ನನ್ನಂತಹವನಿಗೆ ವಾನಪ್ರಸ್ಥಾಶ್ರಮವೇ ಯೋಗ್ಯವಾದುದು" ಎಂದು ಹೇಳಿದನು. ಈ ಮಾತುಗಳನ್ನು ತಿಮ್ಮರಸನು ಕೇಳಿ ಸಂತೋಷಿಸಿ ಅಲ್ಲಿದ್ದ ವಿಜಯಸಿಂಹನನ್ನು ನೋಡಿ "ವೀರಶ್ರೇಷ್ಠನೇ ನೀನು ದೃಢತರರಾಜಭಕ್ತಿಯುತನಾಗಿ ನಮಗೆ ಅನೇಕ ಉಪಕಾರಗಳನ್ನು ಮಾಡಿ ರಣರಂಗದಲ್ಲಿ ಹಲವುವಿಧವಾಗಿ ಸಹಾಯಮಾಡಿರುವ ನಿನಗೆ ನಮ್ಮ ವಶ ವಾಗಿರುವ ಮುಕ್ತಾಂಬೆಯನ್ನು ಬಹುಮತಿಯಾಗಿ ರಾಯರು ಕೊಟ್ಟಿರುವರು. ಇನ್ನೊಂದು ವರವನ್ನು ಕೊಡುವೆವೆಂದು ಮಹಾಸ್ವಾಮಿಯವರ ಅಪ್ಪಣೆ ಯಾಗಿರುವುದು. ಬೇಕಾದುದನ್ನು ಕೇಳಿಕೊಳ್ಳಬಹುದು" ಎಂದು ಹೇಳಿದನು.

ಆಗ ವಿಜಯಸಿಂಹನು ತಿಮ್ಮರಸರನ್ನು ಕುರಿತು "ಮಂತ್ರಿ ಶ್ರೇಷ್ಠರೇ! ತಾವುಮಾಡಿದ ಉಪಕಾರಕ್ಕಾಗಿ ಬಹಳ ಕೃತಜ್ಞನಾಗಿರುವೆನು.

ನಿಮಗೆ ಉದಯಗಿರಿಯೂ ರಾಮಯಮಂತ್ರಿಯೂ ಅಧೀನರಾಗಿರುವರು. ರಾಮಯಮಂತ್ರಿ ಸಹಿತವಾಗಿ ಉದಯಗಿರಿರಾಜ್ಯವನ್ನು ಕೊಡಿಸಿ ಸಂತೋಷ ಪಡಿಸಬೇಕು. ಇದೇ ನನ್ನಪ್ರಾರ್ಥನೆ." ಎಂದು ವಿಜಯಸಿಂಹನು ಕೇಳಿಕೊಂಡನು. ಇದನ್ನುಕೇಳಿ ಸಭಾಸದರೆಲ್ಲರೂ ಸಂತೋಷಪಟ್ಟರು. ರಾಯರ ಅಪ್ಪಣೆಯನ್ನು ಪಡೆದುತಿಮ್ಮರಸನು ಎದ್ದುನಿಂತು "ನಿನ್ನ ಪ್ರಾರ್ಥನೆಯನ್ನು ಮಹಾಸ್ವಾಮಿಯವರು ನಡೆಯಿಸಿಕೊಟ್ಟಿರುವರು." ರಾಮರಾಜನನ್ನು ಕುರಿತು "ರಾಮರಾಜ ! ನಿನಗೆ ಚಕ್ರವರ್ತಿಯವರ ಪುತ್ರಿಯಾದ ತಿರುಮಲಾಂಬೆಯನ್ನು ಕೊಟ್ಟಿರುವರು" "ತಿರುಮಲರಾಯ ! ನಿನಗೆ ರಾಜಪುತ್ರಿಯಾದ ವೆಂಗಳಾಂಬೆಯನ್ನು ಕೊಟ್ಟು ಮದುವೆ ಮಾಡುವರು" "ಶಂಕರ ರೆಡ್ಡಿ ! ನಿನಗೆ ಸೇನಾಧಿಪತ್ಯವನ್ನುಕೊಟ್ಟಿರುವರು." ಎಂದು ಹೇಳಿ ಅವರನ್ನು ಸಂತೋಷಪಡಿಸಿದನು. ಆಬಳಿಕ ತಿಮ್ಮರಸನು ಸೇನಾನಾಯಕರಿಗೆ ಅವರವರಿಗೆ ತಕ್ಕ ಬಹುಮಾನಗಳನ್ನು ಮಾಡಿದನು. ರುದ್ರದೇವನಿಗೆ ಸೈನ್ಯದಲ್ಲಿ ಒಂದು ಅಧಿಕಾರವನ್ನು ಕೊಟ್ಟನು. ಹೀಗೆ ಹಲವರಿಗೆ ಬಹುಮಾನಗಳು ದೊರೆಯಲು ಸಭೆಯವರೆಲ್ಲರೂ ಸಂತೋಷಪಟ್ಟರು. ಕೆಲವು ದಿನಗಳಲ್ಲಿಯೇ ಒಂದು ಶುಭಮುಹೂರ್ತದಲ್ಲಿ ಮಹಾವೈಭವದಿಂದ ಆ ಮೂರು ಮದುವೆಗಳೂ ನಡೆದುವು. ರಾಮರಾಜತಿರುಮಲರಾಜರೂ ಕೃಷ್ಣರಾಯರಿಗೆ ಭುಜಗಳಂತಿದ್ದು ಕೃಷ್ಣದೇವರಾಯರಿಗೆ ಸಹಾಯಮಾಡುತ್ತ ಚರಿತ್ರೆಯಲ್ಲಿ ಬಹು ಪ್ರಸಿದ್ಧರಾದರು. ವಿಜಯಸಿಂಹನು ಮುಂಕ್ತಾಬೆ ರಾಮಯಮಂತ್ರಿ ಪ್ರಹರೇಶ್ವರರೊಡನೆ ಉದಯಗಿರಿಗೆ ಹೋಗಿ ಆರಾಜ್ಯವನ್ನು ಪ್ರಜಾರಂಜಕವಾಗಿ ಬಹುಕಾಲ ಪಾಲಿಸುತ್ತ ಸುಖವಾಗಿದ್ದನು.

ಭದ್ರಂ, ಶುಭಂ, ಮಂಗಳಂ.

ಶೋಧನಪತ್ರ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೨	೧೩	ಗಾಂಡಾಂಧಕಾರ	ಗಾಢಾಂಧಕಾರ
೧೨	೧೯	ತುಂಬಿದ್ಧುವು	ತುಂಬಿದ್ದುವು. [ಹೀಗೆಯೇ ಕೆಲವೆಡೆ]
೧೭	೨೫	ವಾಗ್ಸ್ರಿ	ವಾಗ್ಸ್ಫುರಿ
೨೦	೬-೭	ಅಸದೃಶಂಾದ	ಅಸದೃಶರಾದ
,,	೧೫	ಅನಂದ	ಆನಂದ
೩೧	೧೩	ಜೀವದಾನ	ಜೀವನದಾನ
೩೬	೧೮	ನಲಸೀಂ	ನಲಿಸೀಂ
೪೨	೨೭	ಒಪ್ಪಿರುವರು	ಒಪ್ಪಿರುವರು [ಹೀಗೆಯೇ ಇನ್ನು ಕೆಲವೆಡೆ]
೪೪	೨	ಅಷ್ಟ	ಅಷ್ಟು [,, ,,]
೪೭	೯	ಕೊಲ್ಲುವುದು	ಕೊಲ್ಲುವುದು [,, ,,]
,,	೨೭	ಪತಿ ು ಮಗಳಾದವ	ಪತಿಯು ಮಗಳಾದ [,, ,,]
೫೩	೧೧	ಕೊಟ್ಟೇತೀರು	ಕೊಟ್ಟೇಕೊಡು
೬೪	೧೮	ಸಾಯಹಸ	ಸಾಹಸ
,,	೨೧	ಆವನನ್ನು	ಅವನನ್ನು
೬೮	೧೧	ಕ್ಷೆಮ	ಕ್ಷೇಮ
೭೦	೧೪	ಪಾಲವ್ನಾದರೂ	ಪಾಲನ್ನಾದರೂ
೭೨	೨೮	ವಿಸ್ವಾಸ	ವಿಶ್ವಾಸ
೮೬	೧೪	ಹುಚ	ಹುಚ್ಚ
		ಎರಡನೆಯಭಾಗ	
೬	೧೫	ಹೆಚ್ಚುತ್ತಿತ್ತು	ಹೆಚ್ಚುತ್ತಿದ್ದಿತು [ಹೀಗೆಯೇ ಮಿಕ್ಕೆಡೆಗಳಲ್ಲೂ]
೧೧	೧೮	ಬಂತು	ಬಂದಿತು [,, ,,]
,,	೨೦	ತಿಮ್ಮರಸನ	ತಿಮ್ಮರಸ
೧೩	೪	ಆನೆಗೊಂದಿಯ	ಆನೆಗೊಂದಿಯಲ್ಲಿ
,,	೧೫	ಕೋರಿಯಂತೆ	ಕೋರಿಕೆಯಂತೆ
೧೪	೨	ಬಹಳವಾಗಿ	ಬಹಳ
೧೮	೧೩-೧೪	ಪ್ರೊತ್ಸಾಹಿಸುತ್ತಾ	ಪ್ರೋತ್ಸಾಹಿಸುತ್ತಾ
೨೮	೯	ತಿಳಿಯದ್ದೆ	ಸ್ವೈರಿಸದ
,,	೧೮	ಪುರಾ ೃತ	ಪುರಾಕೃತ
೨೯	೨೨	ಗಲೂ......ನಿನ್ನ ಆ	ಆಗಲೂ......ನಿನ್ನ
೩೯	೮	ಅಪ್ಪಣೆಯೊದರೆ	ಅಪ್ಪಣೆಯಾದರೆ
,,	೧೭	ಉಪಾಯಂಗಳೆಲ್ಲಪ್ರೊ	ಉಪಾಯಗಳೆಲ್ಲವೂ
೪೯	೫	ಪೂರ್ವ	ಪೂರ್ವ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೫೨	೧	ನಿನಂತೆಯೇ	ನಿನ್ನಂತೆಯೇ
೫೩	೧೫	ಆದುದರಿಂದ...ತಳ ಮಳಗೊಳ್ಳುತ್ತಿತ್ತು	......
೬೫	೧೯	ಬೇಕೆಂನಿರುವಿಯಾ	ಬೇಕೆಂದಿರುವೆಯಾ
೭೩	೬	ಪ್ರಜಾರಂಕವಾಗಿ	ಪ್ರಜಾರಂಜಕವಾಗಿ
೭೬	೮	ವಿಮರ್ಶನಾಸಮರ್ಥ	ವಿಮರ್ಶನಸಮರ್ಥ
೭೭	೧೦	ಎಬುದನ್ನು	ಎಂಬುದನ್ನು
,,	೧೪	ಇರವವರು	ಇರುವವರು
೮೬	೭	ಆದುದ ರಿದ	ಆದುದರಿಂದ
೯೮	೧೬	ರಾವುಯ	ರಾವು—
೯೯	೯	ಮಾರನೇ	ಮಾರನೆಯ
೧೦೦	೧೦	ಬಳೆಯಿಸುತ್ತಿರುವರೆಂದು	ಬಳೆಯಿಸುತ್ತಿರುವಿರೆಂದು
೧೦೨	೩	ಭಿನಕ್ತಿ	ಭಿನತ್ತಿ
,,	೪	ಬಾಧರಾಟ್	ಭೂಧರಾಟ್
೧೦೬	೨	ಮಂತ್ರಿಯುು	ಮಂತ್ರಿಯು
೧೧೨	೧೮	ರಾಜ್ಯಧಿಪತಿ	ರಾಜ್ಯಾಧಿಪತಿ
೧೧೩	೭-೮	ಕುತೋರ್ಥಂ...ಗತಃ	...
೧೧೭	೫	ಕೃಜ್ಞತ	ಕೃತಜ್ಞ
,,	೧೨	ಅನಂಗಶೇನೆಯುು	ಅನಂಗಸೇನೆಯು
೧೨೪	೨೨	ಬಿಟ್ಟರುವರಿ	ಬಿಟ್ಟಿರುವಿರಿ
೧೪೩	೭	ಈತನಿಗೆ	ಈ ನನಗೆ
೧೪೫	೧	ವಿಜಯಸಿಂಹನನ್ನು	ವಿಜಯಸಿಂಹನನ್ನೂ
೧೪೬	೧-೨	ಯೋಚಿಸಿದ್ದೇವೆ	ಯೋಚಿಸಿದೇವೆ
೧೫೦	೨೦	ಮಂತ್ರಿಯು	ಮಂತ್ರಿಯುು
೧೫೨	೧೮	ದುರ್ಗವನು ೩	ದುರ್ಗವನ್ನು
,,	೨೧	ಕಳುಸಿದನು	ಕಳುಹಿಸಿದನು.
೧೫೪	೧೩	ಬರುವೆಂದು	ಬರುವುವೆಂದು
೧೫೬	೧೭	ತನ್ನ	ತಮ್ಮ
೧೫೭	೨೧	ದಳವನ್ನು...ಬಲವನ್ನು	ದಳವು...ಬಲವು
೧೬೧	೧೭	ದಣುವಾರಿಸಿ...	ದಣಿವಾರಿಸಿ...
೧೬೭	೭	ಘರ್ಜಿಸಿದನು	ಗರ್ಜಿಸಿದನು
೧೬೮	೪	ಪುರಷನು	ಪುರುಷನು
೧೭೨	೧೧	ನಮ್ಮನ್ನು	ರಾಯರು, ನಮ್ಮನ್ನು
೧೮೦	೨	ಮಂತಿ	ಮಂತ್ರಿ
೧೯೨	೧೫	ಮಾತಾನಾಡು...	ಮಾತನಾಡು...